START

MICRO FILMED
BY

KARNATAKA STATE
ARCHIVES

1991

ILRS. 15. APP. 90

ಜೀವನ ಶಿಕ್ಷಣ - ಕನ್ನಡ ಶಾಲಾಪುನರ್ಸಂ-

ಸೆಪ್ಟೆಂಬರ್ ೬ 1911 - ಮಾರ್ಚ್- ಏಪ್ರಿಲ್- ಪುಟ

60 ರಿಂದ ಮುಂದುವರಿಸಲಾಗಿದೆ.

ವರೆಗೆ ಹೋಗಿದೆ. ಇದಕ್ಕೆ ವರದೆಯ ಮೇಲೆಯೂ, ಮಿಕ್ಕ ಕಡೆಗಳಲ್ಲಿಯೂ ಪೂಲುಗಳು ಇರುವವು. ಇದರ ಮೇಲೆ ೧೨ ತಿಂಗಳೂ ಗಾಡಿಗಳು ನಡಾಡುತ್ತವೆ. ಇದು ದಕ್ಷಿಣಮಹಾರಾಷ್ಟ್ರದಲ್ಲಿಯ ಅತಿ ಮಹತ್ವವುಳ್ಳ ಮಾರ್ಗವು.

(೨) ಬಾಗಲಕೋಟೆಯಿಂದ ಕಾರವಾರಕ್ಕೆ:— ಈ ಮಾರ್ಗವು ಧಾರವಾಡಜಿಲ್ಲೆಯ ಈಶಾನ್ಯದಲ್ಲಿ ಸಿರೇಹಾಳ ಎಂಬಲ್ಲಿ ಈ ಜಿಲ್ಲೆಯನ್ನು ಸೇರಿ, ರೋಣ, ನವಲಗುಂದ, ಹೆಬಸೂರ, ಹುಬ್ಬಳ್ಳಿ, ಕಲಘಟಗಿಗಳ ಮೇಲಿಂದ ಕಾರವಾರಕ್ಕೆ ಹೋಗಿದೆ. ಇದರಲ್ಲಿ ಕೆಲವು ಕಡೆಯಲ್ಲಿ ಕಚ್ಚಾ ರಸ್ತೆಯಿರುವದರಿಂದ ಮಳೆಗಾಲದಲ್ಲಿ ಕೆಸರಾಗುವದು. ಮಧ್ಯದಲ್ಲಿ ಹಾಯ್ದು ಹೊಳೆಗಳನ್ನು ನಾವೆಗಳಲ್ಲಿ ದಾಟಬೇಕಾಗುತ್ತದೆ.

(೩) ಕಾರವಾರದಿಂದ ಬಳ್ಳಾರಿಗೆ:—ಇದು ಕಾರವಾರ, ಬಾಗಲಕೋಟೆ ಮಾರ್ಗದಲ್ಲಿ ಹುಬ್ಬಳ್ಳಿಯಿಂದ ಹೊರಟು ಪೂರ್ವಕ್ಕೆ ಗದಗಿನವರೆಗೆ ಹೋಗಿ ಆಗ್ನೇಯಕ್ಕೆ ತಿರುಗಿ, ಡಂಬಳ, ಮುಂಡರಗಿ, ಹೆಸರೂರಿನ ಮೇಲಿಂದ ಬಳ್ಳಾರಿಯ ಕಡೆಗೆ ಹೋಗುವದು.

(೪) ಹುಬ್ಬಳ್ಳಿಯಿಂದ ಕುಮಟೆಗೆ:—ಇದು ತಡಸದ ನೆರೆಯಲ್ಲಿ ಪುಣೆ, ಹರಿಹರ ಮಾರ್ಗವನ್ನು ಬಿಟ್ಟು ಕಾರವಾರಜಿಲ್ಲೆಯೊಳಗೆ ಸಿರಸಿ ಕುಮಟೆಗಳಿಗೆ ಹೋಗುತ್ತದೆ.

(೫) ಧಾರವಾಡದಿಂದ ತಿನೈಘಾಟ್ಟದವರೆಗೆ:—ಇದು ಅಳ್ಳಾವರದ ಮಾರ್ಗವಾಗಿ ತಿನೈಘಾಟ್ಟಕ್ಕೆ ಹೋಗಿ, ಮುಂದೆ ಗೋವೆಗೆ ಹೋಗುತ್ತದೆ.

(೬) ಧಾರವಾಡದಿಂದ ಸುಪೆಗೆ:—ಇದು ಧಾರವಾಡದಿಂದ ಹಳ್ಳಿಯೊಳಗಿನ ಮಾರ್ಗವಾಗಿ ಮುಂದೆ ಸುಪೆಗೆ ಹೋಗುವದು.

ಇವಲ್ಲದೆ ಇನ್ನು ಕೆಲವು ದೊಡ್ಡ ರಸ್ತೆಗಳು ನಕಾಶದಲ್ಲಿ ದೃಷ್ಟಿಗೆ ಬೀಳುವವು. ಅವು ಬಹುತರವಾಗಿ ಲೋಕಲ್‌ಫಂಡ ಮಾರ್ಗಗಳು.

(೧) ಗೊಂದಿಯಿಂದ ಗಜೇಂದ್ರಗಡದವರೆಗೆ:— ಇದು ಗೊಂದಿಯಿಂದ ಹಾನಗಲ್ಲ, ಸವಣೂರ, ಯಲವಿಗಿ, ಲಕ್ಷ್ಮೇಶ್ವರ ಮುಳಗುಂದ, ಗದಗ ನರೇಗಲ್ಲುಗಳ ಮೇಲಿಂದ ಗಜೇಂದ್ರಗಡದವರೆಗೆ ಹೋಗಿರುವದು. ಯಲವಿ

ಗಿಯಿಂದ ಮುಂದೆ ಕಚ್ಚಾ ರಸ್ತೆ ಇದ್ದು, ಕಾರವಾರದಿಂದ ಬಾಗಲಕೋ
ಟೆಗೆ ಹೋಗುವ ಮಾರ್ಗಕ್ಕೆ ಬಹುತರ ಸಮಾಂತರವಾಗಿ ಜಿಲ್ಲೆಯ ಮಧ್ಯ
ನಲ್ಲಿ ಹಾಯ್ದು ನೈಋತ್ಯದಿಂದ ಈಶಾನ್ಯಕ್ಕೆ ಹೋಗಿದೆ.

(೨) ಕುಮಟೆಯಿಂದ ಹಾವನೂರಿಗೆ:—ಇದು ಸಮುಸಗಿಯಿಂದ
ಪ್ರಾರಂಭವಾಗಿ ಅಲೂರ, ಅಡೂರ, ಹಾವೇರಿ, ಗುತ್ತಲಗಳ ಮೇಲಿಂದ
ಹಾವನೂರಿಗೆ ಹೋಗಿದೆ.

(೩) ಕುಮಟೆ ಕರೂರ ರಸ್ತೆ:—ಇದು ಸಮುಸಗಿಯಿಂದ ತಿಳವಳ್ಳಿ
ಸೋಪ, ಹಲಗೇರಿಗಳ ಮೇಲಿಂದ ಕರೂರದವರೆಗೆ ಹೋಗಿದೆ.

ಇದಲ್ಲದೆ ಧಾರವಾಡದಿಂದ ಸವಣೂರಿಗೂ, ನವಲಗುಂದದಿಂದ ಗೋ
ಕಾವಿಗೂ, ನರಗುಂದದಿಂದ ಸೊಲ್ಲಾಪುರಕ್ಕೂ, ರಸ್ತೆಗಳು ಹೋಗಿವೆ.

ಇವಲ್ಲದೆ ಬಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಹೋಗಲಿಕ್ಕೆ
ಹುತರ ಲೈನಮಾರ್ಗವಿರುತ್ತದೆ. ಧಾರವಾಡ ಜಿಲ್ಲೆಗೂ ಕಾರವಾರ
ಲ್ಲೆಗೂ ನಡುವೆ ಪಲವು ಮಾರ್ಗಗಳಿವೆ. ಬೆಳಗಾವಿಗೂ ೩–೪ ಮಾರ್ಗ
ಳಿವೆ; ವಿಜಾಪೂರಕ್ಕೆ ೨; ಪೂರ್ವದಲ್ಲಿದುವ ನಿಜಾಮನ ರಾಜ್ಯ,
ದ್ರಾಸ ಇಲಾಖೆ, ಮೈಸೂರ ಪ್ರಾಂತಗಳಿಗೆ ಹೋಗಲಿಕ್ಕೂ ಐದಾರು
ಮುಖ್ಯ ಮಾರ್ಗಗಳಿವೆ. ಇವೆಲ್ಲ ಮಾರ್ಗಗಳಿಗೆ ಮತ್ತೆ ಸಣ್ಣ ಮಾರ್ಗಗಳು
ಇತಿ ಜಿಲ್ಲೆಯ ತುಂಬ ಹಬ್ಬಿರುವವೆಂಬ ಸಂಗತಿಯನ್ನು ಲಕ್ಷದಲ್ಲಿಡುವಂ
ೆ ಅದರಿಂದ, ಈ ಜಿಲ್ಲೆಯಲ್ಲಿ ಲೈನಮಾರ್ಗದ ಮೇಲೆ ಇರದಂಥ ಹಳ್ಳಿ
ಗಳು ಹತ್ತರಲ್ಲಿ ಎರಡು-ಮೂರಕ್ಕಿಂತ ಜಾಸ್ತಿ ದೊರೆಯಲಿಕ್ಕಿಲ್ಲ.
ಟ್ಟಿಗೆ ಧಾರವಾಡ ಜಿಲ್ಲೆಯಲ್ಲಿ ಇತ್ತಲಾಗಿ ಉತ್ತಮ-ವಾದ ಮಾರ್ಗಗಳನ್ನು
ಮಾಡಿರುವಷ್ಟು ಬಹುಶಃ ಮುಂಬಯಿ ಇಲಾಖೆಯ ಬೇರೆ ಯಾವ ಭಾಗದ
ಲ್ಲಿಯೂ ಮಾಡಿರುವದಿಲ್ಲವೆಂದು ಹೇಳಬಹುದು. ೫೦ ವರ್ಷಗಳ ಅಚೆ
ಯಲ್ಲಿ ಈ ಜಿಲ್ಲೆಯಲ್ಲಿ ಒಂದೂ ಲೈನಮಾರ್ಗವಿರಲಿಲ್ಲ. ಗಾಡಿಗಳೂ ಇರ
ಲಿಲ್ಲ. ಆದರೆ ೧೯೧೩–೪ ರ ವರೆಗೆ ಖಡೀ ಮುರವು ಹಾಕಿದ ೩೩೭ ಮೈಲು
ಪಕ್ಕಾ ಮಾರ್ಗಗಳೂ, ೯೯೫ ಮೈಲು ಕಚ್ಚಾ ಮಾರ್ಗಗಳೂ ಮಾಡಲ್ಪ
ಟ್ಟಿದ್ದವು.

ಇದರಿಂದ ಈ ಜಿಲ್ಲೆಯಲ್ಲಿ ಕಳೆದ ೫೦ ವರ್ಷಗಳಲ್ಲಿ ಮಾರ್ಗ
ಸುಧಾರಣೆ ಎಷ್ಟು ಆಗಿರುವದೆಂಬದು ಲಕ್ಷದಲ್ಲಿ ಬರುವದು.

ಧಾರವಾಡ ಜಿಲ್ಲೆಯ ವರ್ಣನೆ.

ಇವುಗಳಲ್ಲಿ ಧಾರವಾಡ, ಹುಬ್ಬಳ್ಳಿ, ಗದಗ, ಹಾವೇರಿ, ರಾಣೇಬಿ
ನ್ನೂರ ಇವು, ಮೂರು ನಾಲ್ಕು ಮುಖ್ಯ ಮಾರ್ಗಗಳು ಕೂಡುವ ಸ್ಥಳದಲ್ಲಿ
ರುವವೆಂಬದನ್ನು ನೆನಪಿನಲ್ಲಿಡುವಂತಿದೆ.

ಸದ್ಯದಲ್ಲಿ ಬಹುತರವಾಗಿ ಜನರೂ ವ್ಯಾಪಾರದ ಸರಕುಗಳೂ ರೇಲ್ವೆ
ಮಾರ್ಗದಿಂದಲೇ ಒಂದು ಊರಿಂದ ಮತ್ತೊಂದು ದೂರದ ಊರಿಗೆ ಹೋಗು
ವವು. ಉಗೆಬಂಡಿಯು ಬಹು ತ್ವರೆಯಿಂದ ಹೋಗುತ್ತದೆ. ಇದರ ಹಾಸಲೂ
ಬಹು ಕಡಿಮೆ. ಇವೆರಡು ಕಾರಣಗಳಿಂದ ವ್ಯಾಪಾರಕ್ಕೆ ಇದರ ಅನುಕೂ
ಲವು ಬಹಳಾಗಿದೆ. ಧಾರವಾಡ ಜಿಲ್ಹೆಯಲ್ಲಿ ರೇಲ್ವೆ ಮಾರ್ಗಗಳು ತಕ್ಕಮ
ಟ್ಟಿಗೆ ಇವೆ. ಒಂದು ಮಾರ್ಗವು ವಾಯವ್ಯದಿಂದ ಆಗ್ನೇಯಕ್ಕೂ ಮತ್ತೊಂ
ದು ಪಶ್ಚಿಮದಿಂದ ಪೂರ್ವಕ್ಕೂ ಹೋಗಿದೆ. ಪುಣೆಯಿಂದ ಬರುವ ಮಾರ್ಗ
ವು ಅಳಣಾವರದ ಸಮೀಪದಲ್ಲಿ ಧಾರವಾಡ ಜಿಲ್ಹೆಯನ್ನು ಸೇರಿ, ಧಾರ
ವಾಡ, ಹುಬ್ಬಳ್ಳಿ, ಯಲವಿಗಿ, ಹಾವೇರಿ, ರಾಣೇಬಿನ್ನೂರಗಳ ಮಾರ್ಗ
ವಾಗಿ ಹರಿಹರದಿಂದ ಮೈಸೂರಿನ ಕಡೆಗೆ ಹೋಗಿದೆ. ಇದು ಪುಣೆ ಹರಿ
ಹರ ಲೈನ ಮಾರ್ಗದ ಗುಂಟ ಹೋಗಿರುವದೆಂದು ಲಕ್ಷದಲ್ಲಿಡಬಹುದು.
ರೇಲ್ವೆ ಮಾರ್ಗವು ದೂರದಲ್ಲಿರುವ ಪಟ್ಟಣಗಳ ವ್ಯಾಪಾರಕ್ಕೂ ಅವಸರದ
ಕೆಲಸಕ್ಕೂ ಅಗ್ಗವಾದಾಗ್ಯೂ, ಸಮೀಪದಲ್ಲಿರುವ ವ್ಯಾಪಾರದ ಸ್ಥಳಗಳ
ವ್ಯಾಪಾರವು ಇದರ ಮಾರ್ಗವಾಗಿ ನಡೆಯುವದಿಲ್ಲ. ಆದ್ದರಿಂದ, ಧಾರ
ವಾಡ ಹುಬ್ಬಳ್ಳಿ, ಹಾವೇರಿ, ಬ್ಯಾಡಿಗಿ, ರಾಣೇಬಿನ್ನೂರುಗಳ ನಡು
ನಡಿಯುವ ವ್ಯಾಪಾರದ ಸರಕುಗಳು ಲೈನಮಾರ್ಗದಿಂದಲೇ ಹೋ
ವವು.

ಹುಬ್ಬಳ್ಳಿಯಿಂದ ರೇಲಮಾರ್ಗದ ಒಂದು ಶಾಖೆಯು ಪೂರ್ವದ ಕಡೆ
ಗದಗಿಗೆ ಹೋಗಿ ಮುಂದೆ ಬಳ್ಳಾರಿಯ ಕಡೆಗೆ ಸಾಗಿದೆ. ಗದಗಿನಿಂ
ದ ಒಂದು ಮಾರ್ಗವು ಉತ್ತರದ ಕಡೆಗೆ ಸಾಗಿ ವಿಜಾಪುರ ಜಿಲ್ಹೆಯೊಳಗಿಂ
ದ ಹುಟಗಿಗೆ ಹೋಗಿದೆ.

ಧಾರವಾಡ ಜಿಲ್ಲೆಯಲ್ಲಿ ಗದಗ, ನವಲಗುಂದ, ರೋಣ ತಾಲೂ
ಕುಗಳಲ್ಲಿ ಮಳೆ ಬಹಳ ಕಡಿಮೆ ಬೀಳುತ್ತದೆ. ಆದ್ದರಿಂದ ಈ ಜಿಲ್ಹೆಯ
ಒಳಗೆ ಬರ ಬೀಳಬಹುದಾದ ತಾಲೂಕುಗಳು ಇವೇ ಎಂದು ಹೇಳಬಹುದು.
ರೇಲ್ವೆಮಾರ್ಗವು ಈ ಮೂರು ತಾಲೂಕುಗಳಲ್ಲಿಯೂ ಹಾಯ್ದಿರುವದರಿಂ
ದ ಇವುಗಳಿಗೆ ಬರದ ತಾಪತ್ರಯವು ಈಗ ಕಡಿಮೆಯಾಗಿದೆ.

ಈ ಜಿಲ್ಲೆಯಲ್ಲಿ ಹಾಯುವ ಮುಖ್ಯ ಮುಖ್ಯ ಮಾರ್ಗಗಳಲ್ಲಿ ಹತ್ತುವ ದೊಡ್ಡ ಊರುಗಳಲ್ಲಿ ಪ್ರಯಾಣಸ್ಥರೂ, ಸರ್ಕಾರೀ ಅಧಿಕಾರಸ್ಥರೂ, ಇಳಕೊಳ್ಳಲಿಕ್ಕೆ ಮನೆಗಳಿವೆ. ಬಹುಶಃ ಈ ಊರುಗಳಲ್ಲಿ ಟಪಾಲ ಆಫೀಸುಗಳು ಇರುತ್ತವೆ. ಇಲ್ಲಿಂದ ನೆರೆಹಳ್ಳಿಗಳಿಗೆ ಟಪಾಲುಗಳನ್ನು ವಾರಕ್ಕೆ ಒಮ್ಮೆಯಾಗಲಿ ಕೆಲವೆಡೆಯಲ್ಲಿ ಎರಡು ಸಾರೆಯಾಗಲಿ ಆ ಪಾತೆಯ ಸಿಪಾಯರು ಒಯ್ದು ಜನರಿಗೆ ಮುಟ್ಟಿಸುವರು.

ರೇಲ್ವೆಯ ಸ್ಟೇಷನುಗಳಲ್ಲಿಯೂ, ದೊಡ್ಡ ಊರುಗಳಲ್ಲಿಯೂ, ತಂತೀ ಟಪಾಲಿನ ಆಫೀಸುಗಳು ಇರುತ್ತವೆ.

೯ನೇ ಪ್ರಕರಣ.

ವ್ಯಾಪಾರ.

ಧಾರವಾಡಜಿಲ್ಲೆಯೊಳಗಿನ ಜನರ ಮುಖ್ಯ ಉದ್ಯೋಗವು ಕೃಷಿಯೆಂದು ಹಿಂದೆ ಹೇಳಿರುವೆವಷ್ಟೇ. ಹುಬ್ಬಳ್ಳಿ, ಗದಗು, ಬೆಟಗೇರಿ, ಮೊದಲಾದ ಸ್ಥಳದಲ್ಲಿ ಅರಿವೆ, ಹಿತ್ತಾಳೆ, ತಾಮ್ರದ ಪಾತ್ರೆಗಳ ಕೈಗಾರಿಕೆಗಳು ನಡೆಯುತ್ತವೆಂದೂ ಹೇಳಿರುವೆವು. ಧಾರವಾಡಜಿಲ್ಲೆಯಲ್ಲಿ ಅನೇಕ ವ್ಯಾಪಾರಸ್ಥರು ವ್ಯಾಪಾರವನ್ನು ಮಾಡುವರು. ಅದ್ದರಿಂದ ಇದೊಂದು ಮಹತ್ವದ ಉದ್ಯೋಗವೆನ್ನಬಹುದು.

ಈ ಜಿಲ್ಲೆಯಲ್ಲಿ ವ್ಯಾಪಾರವು ಚೆನ್ನಾಗಿ ನಡೆದಾಗ್ಯೂ ವ್ಯಾಪಾರಸ್ಥರ ಸಂಖ್ಯೆಯು ಮಾತ್ರ, ಒಕ್ಕಲತನದಲ್ಲಿ ತೊಡಗಿದವರಷ್ಟು ಇಲ್ಲ. ಆದರೂ ಈ ಜಿಲ್ಲೆಯ ಸುತ್ತಲಿರುವ ಜಿಲ್ಲೆಗಳಿಗಿಂತ ಇಲ್ಲಿ ವ್ಯಾಪಾರವು ಹೆಚ್ಚಾಗಿ ನಡೆಯುವದರಿಂದಲೂ, ವಾಪಾರದಿಂದ ಈ ಸೀಮೆಯ ಸಂಪತ್ತು ಹೆಚ್ಚಾಗಿರುವದರಿಂದಲೂ, ಇದನ್ನು ಬೇರೆಯಾಗಿ ಹೇಳಿರುತ್ತೇವೆ.

ವ್ಯಾಪಾರವೆಂದರೇನು?:— ಒಂದು ಪ್ರಾಂತದವರು ತಮ್ಮಲ್ಲಿ ಹೆಚ್ಚಾಗಿ ಹುಟ್ಟುವ ಕಚ್ಚಾಮಾಲನ್ನೂ, ತಮ್ಮಲ್ಲಿ ತಯಾರಾಗುವ ಕೈಗಾರಿಕೆಯ ಸರುಕುಗಳನ್ನೂ, ಬೇರೆಯವರಿಗೆ ಕೊಟ್ಟು ತಮಗೆ ಅವಶ್ಯವಿದ್ದು ತಮ್ಮಲ್ಲಿ ಹುಟ್ಟದ ಇಲ್ಲವೆ ತಯಾರಾಗದ ಸರಕುಗಳನ್ನು ಅವರಿಂದ ತೆಗೆದುಕೊಳ್ಳುವದು ವ್ಯಾಪಾರವು. ತಾವು ಸರಕು ಹೆಚ್ಚಾಗಿ ಮಾರಿ, ಕಡಿಮೆ ತರಿಸಿದರೆ ಹಣವನ್ನು ಪ್ರತಿಯಾಗಿ ತೆಗೆದುಕೊಳ್ಳುವದು ಸ್ವಾಭಾವಿಕವಾದ

ದ್ದು. ಮನುಷ್ಯರಿಗೆ ಅವಶ್ಯವಾದ ಎಲ್ಲ ಪದಾರ್ಥಗಳು ಒಂದೇಕಡೆ ಗೆ ಹುಟ್ಟುವದಿಲ್ಲ; ಹಾಗೂ ತಯಾರಾಗುವದಿಲ್ಲ; ಹಾಗೂ ಕೆಲವು ಗಳನ್ನು ತಯಾರಿಸಲಿಕ್ಕೆ ಅನುಕೂಲವೂ ಇರುವದಿಲ್ಲ. ಆದ್ದರಿಂದ ನಮ್ಮ ಲ್ಲಿ ಬೆಳೆಯುವ ಇಲ್ಲವೆ ತಯಾರಾಗುವ ಸರಕುಗಳನ್ನು ಅವುಗಳ ಅವ ಶ್ಯವಿದ್ದವರಿಗೆ ಕಳಿಸಿ, ಅವರಲ್ಲಿ ಹುಟ್ಟುವ ಇಲ್ಲವೆ ತಯಾರಾಗುವ ಪದಾ ರ್ಥಗಳನ್ನು ನಾವು ತರಿಸಿಕೊಳ್ಳುವದು ಇಬ್ಬರಿಗೂ ಲಾಭಕರವು.

ಇನ್ನು, ಒಂದು ಸೀಮೆಯ ವ್ಯಾಪಾರವು ಹೆಚ್ಚಾಗಿ ನಡೆಯಬೇಕಾ ದರೆ, ಅದಕ್ಕೆ ಹಲವು ಅನುಕೂಲಗಳು ಇರಬೇಕಾಗುವವು. ಅವು ಯಾವ ವೆಂದರೆ:—

(೧) ದೇಶದಲ್ಲಿ ಹೆಚ್ಚಾಗಿ ಹುಟ್ಟುವ ಕಚ್ಚಾವಾಲಾಗಲಿ ತಯಾ ರಾಗುವ ಕೈಗಾರಿಕೆಯ ಸರಕುಗಳಾಗಲಿ, ಸುತ್ತಲಿರುವ ದೇಶದವರಿಗೆ ಬೇಕಾಗಿರಬೇಕು.

(೨) ದೇಶದಿಂದ ದೇಶಗಳಿಗೆ ಹೋಗಲಿಕ್ಕೆ ಮಾರ್ಗಗಳಿರಬೇಕು.

(೩) ದೇಶವು ಸುತ್ತಲಿರುವ ದೇಶಗಳ ಸರಕುಗಳನ್ನು ಖರೀದಿಮಾ ಡಿ, ನಾಲ್ಕೂ ಕಡೆಗೆ ಕಳಿಸುವಂಥ ಸ್ಥಳದಲ್ಲಿರಬೇಕು.

ಧಾರವಾಡಜಿಲ್ಲೆಯೊಳಗೆ ಈ ಅನುಕೂಲಗಳು ಎಷ್ಟರಮಟ್ಟಿಗೆ ಇರುವವೆಂಬದನ್ನು ನೋಡೋಣ:—

(೧) ಇಲ್ಲಿ ಯಾವ ಕಚ್ಚಾವಾಲು ಹುಟ್ಟುತ್ತದೆ? ಹಾಗೂ ಎಷ್ಟು ಹುಟ್ಟುತ್ತದೆ? ಎಂಬ ಪ್ರಶ್ನೆಗಳು ಮಹತ್ವದವಿರುತ್ತವೆ. ಎಲ್ಲ ಮನು ಷ್ಯರಿಗೆ ಅತ್ಯವಶ್ಯವಾದ ಪದಾರ್ಥಗಳೆಂದರೆ ತಿನ್ನಲಿಕ್ಕೆ ಕಾಳು, ಹೊತ್ತು ಕೊಳ್ಳಲಿಕ್ಕೆ ಅರಿವೆಅಂಚಡಿ, ಉಪಯೋಗಿಸಲಿಕ್ಕೆ ಪಾತ್ರೆಗಳು ಎಂಬ ದನ್ನು ಪೇಳುವ ಕಾರಣವಿಲ್ಲ. ಧಾರವಾಡಜಿಲ್ಲೆಯ ಮಲೆನಾಡಿನಲ್ಲಿ ಅಕ್ಕಿ, ಕಬ್ಬು ವಿಶೇಷವಾಗಿ ಬೆಳೆಯುತ್ತವೆ. ಬೈಲುಸೀಮೆಯ ಫಲ ವತ್ತಾದ ಕರೇಭೂಮಿಯಲ್ಲಿ ಹತ್ತಿ, ಜೋಳ, ಗೋದಿ, ಕಡ್ಲೆ, ಎಣ್ಣೆಯ ಕಾಳುಗಳು ಬೇಕಾದಷ್ಟು ಬೆಳೆಯುತ್ತವೆ. ಈ ಜಿಲ್ಲೆಯ ಜನರಿಗೆ ಹೆಚ್ಚಾದ ಈ ಕಾಳುಗಳನ್ನು ಸುತ್ತಲಿರುವ ದೇಶಗಳಿಗೆ ಕಳಿಸುವದಲ್ಲದೆ ದೂರದೂರ ದೇಶಗಳಿಗೂ ಕಳಿಸಲಿಕ್ಕೆ ಬರುವಂತಿದೆ. ಮಲ್ನಾಡಿನ ಅಕ್ಕಿಯೂ, ಕಬ್ಬೂ ಬಹುತರವಾಗಿ ಹೊರಗೆ ಹೋಗುವದಿಲ್ಲ. ಧಾರವಾಡ ಜಿಲ್ಲೆಯಲ್ಲಿಯೇ

ವಿಚ್ಚವಾಗುತ್ತವೆ. ಆದರೆ ಬೈಲು ಸೀಮೆಯ ಜೋಳ, ಕಡ್ಲೆ ಮೊದಲಾದ ವುಗಳು ಬಳ್ಳಾರಿ ಮೈಸೂರಗಳ ಕಡೆಗೆ ಹೋಗುತ್ತವೆ. ಗೋದಿ, ಎಣ್ಣೆ ಮು ಕಾಳುಗಳು, ಹತ್ತಿ ಇವು ಸುತ್ತಲಿನ ದೇಶಗಳಿಗೆ ಅಲ್ಪ ಸ್ವಲ್ಪ ಹೋಗು ತ್ತವೆಲ್ಲದೆ, ಮುಂಬಯಿಗೂ ಹೋಗುವದುಂಟು. ಮುಂಬಯಿಯಿಂದ ಕೆಲವು ಸರಕುಗಳು ವಿಲಾಯತಿಗೆ ಸಹ ಹೋಗುವವು. ಅಂತೂ ಇಲ್ಲಿ ಆಹಾರಕ್ಕೆ ಬೇಕಾಗುವ ಕಾಳೂ ಬಟ್ಟೆಗೆ ಬೇಕಾದ ಹತ್ತಿಯೂ ವಿಶೇಷವಾಗಿ ಬೆಳೆ ಯುತ್ತವೆ. ಇಲ್ಲಿಯ ಜೋಳ, ಗೋದಿ, ಹತ್ತಿ, ಎಣ್ಣೇ ಕಾಳುಗಳು ಮೇಲ್ತರದವಿರುವದರಿಂದ ಸುತ್ತಲಿನ ಪ್ರದೇಶಗಳಿಗೆ ಇವು ಹೋಗು ವವು. ಇಲ್ಲಿ ತಯಾರಾಗುವ ಕೈಗಾರಿಕೆಗಳಲ್ಲಿ ಹುಬ್ಬಳ್ಳಿಯ ಹಿತ್ತಾಳೆ ತಾಮ್ರದ ಪಾತ್ರೆಗಳು ದಕ್ಷಿಣ ಕರ್ನಾಟಕದಲ್ಲಿ ಹೆಸರಾದವಿರುತ್ತವೆ. ನಮ್ಮ ಜನರು ಈ ಪಾತ್ರೆಗಳನ್ನು ಬಹಳವಾಗಿ ಉಪಯೋಗಿಸುವದರಿಂದ ಇವು ಸುತ್ತಲಿರುವ ಪ್ರದೇಶದವರಿಗೂ ಬೇಕಾಗುವವು. ಹುಬ್ಬಳ್ಳಿಯ ಪಾತ್ರೆಗ ಳು ಬೆಳಗಾವಿ, ವಿಜಾಪುರ, ಧಾರವಾಡ ಜಿಲ್ಲೆಗಳಿಗೆ ಹೋಗುವವಲ್ಲದೆ, ಮೈಸೂರ ಪ್ರಾಂತಕ್ಕೂ, ನಿಜಾಮನ ಸೀಮೆಗೂ, ಬಳ್ಳಾರಿ, ಕಡಪೆ, ಮೊದಲಾದ ಆಗ್ನೇಯದ ಪ್ರದೇಶಗಳಿಗೂ ಹೋಗುತ್ತವೆ. ಈ ಮೇರೆಗೆ ಈ ಜಿಲ್ಲೆಯ ಸುತ್ತಲಿರುವ ಪ್ರದೇಶಗಳ ಜನರಿಗೆ ಅತ್ಯವಶ್ಯವಾದ ಸರಕುಗ ಳೇ ಇಲ್ಲಿ ಹೆಚ್ಚಾಗಿ ಬೆಳೆಯುವದರಿಂದ, ಇಲ್ಲಿಯ ವ್ಯಾಪಾರವು ಹೆಚ್ಚಾಗಿದೆ.

(೨) ನೂರುವರ್ಷಗಳ ಹಿಂದೆ ಧಾರವಾಡಜಿಲ್ಲೆಯ ವ್ಯಾಪಾರವು ಇಷ್ಟಿರಲಿಲ್ಲ. ಯಾಕಂದರೆ ಆಗ ದೇಶದಲ್ಲಿ ಹೆಚ್ಚಾಗಿ ಬೆಳೆಯುವ ಪದಾ ರ್ಥಗಳನ್ನು ಸುತ್ತಲಿರುವ ದೇಶಗಳಿಗೆ ಕಳಿಸಲಿಕ್ಕೆ ಬಳ್ಳೇಮಾರ್ಗಗಳಿರ ಲಿಲ್ಲ. ದೂರದೇಶಕ್ಕೆ ಸರಕುಗಳನ್ನು ಕಳಿಸುವದು ಬಹು ಪ್ರಯಾಸವಾ ಗಿತ್ತು. ಅಷ್ಟು ಸಾಹಸವಮಾಡಿ ಕಳಿಸಿದರೂ ತಕ್ಕಷ್ಟು ಲಾಭವಾಗುತ್ತಿದ್ದಿ ಲ್ಲ. ಆದ್ದರಿಂದ ಜನರು ತಮಗೆ ಅವಶ್ಯವಿದ್ದದ್ದಕ್ಕಿಂತ ಹೆಚ್ಚಾದ ಮಾಲ ನ್ನು ಬೆಳೆಯಿಸುತ್ತಿದ್ದಿಲ್ಲ. ಆದರೆ ಹಿಂದೆ ಹೇಳಿದಂತೆ ಇಂಗ್ಲಿಷರ ಅಮಲು ಪ್ರಾರಂಭವಾದಂದಿನಿಂದ ಮಾರ್ಗಗಳು ಹೆಚ್ಚಾಗುತ್ತ ನಡೆದವು. ವ್ಯಾಪಾರ ಕ್ಕೆ ಬಹಳ ಅನುಕೂಲವಾದ ರೇಲ್ವೆಮಾರ್ಗಗಳು ಜಿಲ್ಲೆಯ ನಾಲ್ಕೂ ಕಡೆಗೆ ಹಬ್ಬಿದವು. ಇದರಿಂದ ದೂರ ದೂರ ದೇಶಗಳ ಸಂಗಡ ಸಹ ವ್ಯಾಪಾರ ಮಾಡಲಿಕ್ಕೆ ಅನುಕೂಲವಾಯಿತು. ವರ್ಷದಲ್ಲೆಲ್ಲ ಚಕ್ಕಡಿಗಳೂ ಮನು

ಪ್ಯರೂ ಯಥೇಚ್ಛವಾಗಿ ಓಡಾಡಲಿಕ್ಕೆ ಅನುಕೂಲವಾದ ಮಾರ್ಗಗಳ
ಧಾರವಾಡ ಜಿಲ್ಹೆಯ ಸುತ್ತಲಿರುವ ಪ್ರದೇಶಗಳಿಗೆಲ್ಲ ಹೋಗಿವೆ. ರೇಲ್ವ
ಯಿಂದ ಮುಂಬಯಿ, ಬೆಳಗಾವಿ, ವಿಜಾಪುರ, ಬಳ್ಳಾರಿ, ಮೈಸೂರ ಸೀಮೆ
ಗಳಿಗೆ ಸರಕುಗಳನ್ನು ಕಳಿಸುವ ಅನುಕೂಲವುಂಟಾಗಿದೆ. ಈ ಜಿಲ್ಹೆ
ಯಿಂದ ಕಾರವಾರ ಜಿಲ್ಹೆಗೆ ರೇಲ್ವೆ ಮಾರ್ಗವಿಲ್ಲದಿದ್ದರೂ ಚಕ್ಕಡಿಯ
ಮಾರ್ಗಗಳು ಹಲವು ಇವೆ. ಬೆಳಗಾವಿಗೆ ಮೂರು, ವಿಜಾಪುರಕ
ಮೂರು, ನಿಜಾಮ ಇಲಾಖೆಗೆ ಎರಡು, ಮದ್ರಾಸ ಪ್ರಾಂತಕ್ಕೆ ಮೂರು
ಮೈಸೂರಿಗೆ ಮೂರು ಮಾರ್ಗಗಳಿದ್ದಾಗ್ಯೂ, ಕಾರವಾರಕ್ಕೊಂದಕ್ಕೆ
ಐದಾರು ಮಾರ್ಗಗಳಿರುವವು. ಈ ಮೇರೆಗೆ ಧಾರವಾಡ ಜಿಲ್ಹೆಗೂ ಸುತ್ತ
ಮಿರುವ ಸೀಮೆಗಳಿಗೂ, ವ್ಯಾಪಾರಕ್ಕೆ ಹಲವು ಮಾರ್ಗಗಳಿವೆ. ಇದಲ್ಲದೆ
ಬಳದೇಶದ ವ್ಯಾಪಾರಕ್ಕೂ ಅನುಕೂಲವಾಗುವಂತೆ ಅನೇಕ ಮಾರ್ಗಗಳ
ಜಿಲ್ಹೆಯ ತುಂಬ ಹಬ್ಬಿವೆ. ಒಂದು ದೊಡ್ಡ ಲೈನ ಮಾರ್ಗವೂ, ರೇಲ್ವ
ಮಾರ್ಗವೂ ಜಿಲ್ಹೆಯ ಮಧ್ಯದಲ್ಲಿ ವಾಯವ್ಯದಿಂದ ಆಗ್ನೇಯಕ್ಕೆ ಹೋಗಿರ
ವವು. ಈ ಮಾರ್ಗವನ್ನು ಈಶಾನ್ಯದಿಂದ ನೈಋತ್ಯದ ಕಡೆಗೆ ಹೋಗುವ
ಮಾರ್ಗಗಳು ಛೇದಿಸಿವೆ. ಇವಲ್ಲದೆ ಜಿಲ್ಹೆಯ ಪಡಮೂಲೆಗಳನ್ನೂ
ವ್ಯಾಪಾರದ ಮುಖ್ಯ ಸ್ಥಳಗಳನ್ನೂ ಕೂಡಿಸುವ ಹಲವು ಮಾರ್ಗಗಳ
ಅಲ್ಲಲ್ಲಿ ಇವೆ. ಈ ಮೇರೆಗೆ [illegible] ವ್ಯಾಪಾರಕ್ಕೆ ಅನುಕೂಲವಾಗ
ವೆಂತೆ ಮಾರ್ಗಗಳು ಜಾಳಿಗೆಯಂತೆ ಹಬ್ಬಿವೆ.

ಇನ್ನು, ಈ ಜಿಲ್ಹೆಯ ಸುತ್ತಲಿರುವ ಪ್ರದೇಶಗಳ ಸಂಬಂಧದಿಂದ ಈ
ಜಿಲ್ಹೆಯ ವ್ಯಾಪಾರಕ್ಕೆ ಅನುಕೂಲ ಪ್ರತಿಕೂಲ ಸಂಗತಿಗಳನ್ನು ವಿಚಾ
ರಿಸುವ:—

ಧಾರವಾಡ ಜಿಲ್ಹೆಯಲ್ಲಿ ಹುಟ್ಟುವ ಸರಕುಗಳೇ ಸ್ವಲ್ಪ ಪ್ರಮಾಣ
ದಿಂದ ಸುತ್ತಲಿರುವ ಪ್ರದೇಶಗಳಲ್ಲಿ ಹುಟ್ಟುವದಾದರೆ ಈ ಜಿಲ್ಹೆಯು ನಡುವ
ಇರುವದರಿಂದ ಇದಕ್ಕೆ ಏನೂ ಲಾಭವಾಗಲಾರದು. ಇದು ತನ್ನಲ್ಲಿದ್ದ
ಸರಕುಗಳನ್ನು ಕಳಿಸಿ ಕೈಮುಚ್ಚಿಕೊಂಡು, ಹಣ ಬರುವ ಮಾರ್ಗವನ್ನು
ನಿರೀಕ್ಷಿಸುತ್ತ, ಕೂಡ್ರಬೇಕಾಗುವದು. ಇದರೆ ಇದು ಬಂದು ಪ್ರದೇಶದ
ಮಾಲನ್ನು ಮತ್ತೊಂದು ಪ್ರದೇಶಕ್ಕೆ ಹಂಚುವಂತಿದ್ದರೆ, ಅಂದಾ
ಇದರ ಸುತ್ತಲಿರುವ ಪ್ರದೇಶಗಳಲ್ಲಿ ಬೇರೆ ಬೇರೆ ತರದ ಸರಕುಗಳು
ಹುಟ್ಟುವಂತಿದ್ದರೆ, ಇದು ತನ್ನ ಸರಕುಗಳ ವ್ಯಾಪಾರವನ್ನು ಮಾಡುವದ

ಲ್ಲದೆ, ಇತರ ಪ್ರದೇಶಗಳ ವ್ಯಾಪಾರವನ್ನೂ ತನ್ನ ಕೈಯ್ಯಲ್ಲಿ ತಕ್ಕೊಳ್ಳಬಹುದು. ಧಾರವಾಡ ಜಿಲ್ಲೆಗೆ ಈ ಅನುಕೂಲವು ಚನ್ನಾಗಿ ಇರುವದೆಂದು ಗೊತ್ತಾಗುವದು. ವಿಜಾಪುರ ಬೆಳಗಾವಿ ಜಿಲ್ಲೆಗಳನ್ನು ಬಿಟ್ಟರೆ ಇದರ ಸುತ್ತಲಿರುವ ಇತರ ಪ್ರದೇಶಗಳಲ್ಲಿ ಹುಟ್ಟುವ ಸರಕುಗಳು ಭಿನ್ನವಾದವಿರುತ್ತವೆ. ಧಾರವಾಡ ಜಿಲ್ಲೆಯೂ, ಮೈಸೂರ ಪ್ರಾಂತವೂ ಅಡಿಕೆ, ತೆಂಗು, ಯಾಲಕ್ಕಿ, ಮೆಣಸು, ಮೊದಲಾದ ಪದಾರ್ಥಗಳಿಗೆ ಹೆಸರಾದವಿರುತ್ತವೆ. ಈ ಸರಕುಗಳು ಮದ್ರಾಸ ಇಲಾಖೆಯಲ್ಲಿಯೂ, ನಿಜಾಮನ ರಾಜ್ಯದಲ್ಲಿಯೂ, ಉತ್ತರದಲ್ಲಿರುವ ಜಿಲ್ಲೆಗಳಲ್ಲಿಯೂ ಬೆಳೆಯುವದಿಲ್ಲ. ಧಾರವಾಡ ಜಿಲ್ಲೆಯಿಂದ ಈ ಸಾಮಾನುಗಳು ಎಲ್ಲ ದೇಶಗಳಿಗೆ ಹೋಗುತ್ತವೆ. ಈ ಮೇರೆಗೆ ಧಾರವಾಡ ಜಿಲ್ಲೆಯು ಸ್ಥಾನಮಾಹಾತ್ಮ್ಯದಿಂದ, ತನ್ನಲ್ಲಿ ಹುಟ್ಟುವ ಸರಕುಗಳನ್ನು ಸಹ ತಂದು ದೂರದೂರದ ದೇಶಗಳಿಗೆ ಕಳಿಸಿ ಲಾಭಮಾಡಿಕೊಳ್ಳುವದು.

ಧಾರವಾಡವು ಹೊರಗೆ ಕಳಿಸುವ ಸರಕುಗಳನ್ನು ಮಾತ್ರ ಇಲ್ಲಿಯವರೆಗೆ ಹೇಳಿದೆವು. ಇನ್ನು, ಇಲ್ಲಿ ಬೆಳೆಯುವಿರುವ ಹಾಗೂ ತಯಾರಾಗುವ ಸಾಮಾನುಗಳನ್ನು ಈ ಜಿಲ್ಲೆಯವರು ಹೊರಗಿನಿಂದ ತರಿಸಬೇಕಷ್ಟೇ. ಹೊರಗಿಂದ ಬರುವ ಸರುಕು[illegible]ದವೆಂದೂ ಹೊರಗೆ ಹೋಗುವ ಸರುಕುಗಳಿಗೆ ರಫ್ತವೆಂದೂ ಅನ್ನುತ್ತಾರೆ. ಆವುದಾಗುವ ಪದಾರ್ಥಗಳೆಲ್ಲ ಇಲ್ಲಿಯೇ ಹುಟ್ಟಿರಬೇಕೆಂಬದು ನಿಯಮವಲ್ಲವೆಂದು ಮೇಲೆ ಹೇಳಿದ ಸಂಗತಿಯಿಂದ ಸಿದ್ಧವಾಗುತ್ತದೆ. ಬಂದು ಸೀಮೆಯ ಹುಟ್ಟುವಳಿಯೂ ಕೈಗಾರಿಕೆಯೂ ಗೊತ್ತಿದ್ದರೆ, ಆ ದೇಶದ ಆಮದು-ರಫ್ತುಗಳನ್ನು ನಾವು ಹೇಳಬಹುದು. ಈ ಜಿಲ್ಲೆಯ ಹುಟ್ಟುವಳಿ ಕೈಗಾರಿಕೆಗಳ ಬಗ್ಗೆ ಹಿಂದೆ ಹೇಳಿದ್ದೇವೆ. ಇನ್ನು ಇಲ್ಲಿಯ ಆಮದ ರಫ್ತುಗಳಲ್ಲಿ ಮುಖ್ಯವಾದವುಗಳನ್ನು ಮಾತ್ರ ಹೇಳುವೆವು:—

ರಫ್ತಾಗುವ ಸರಕುಗಳಲ್ಲಿ ಹತ್ತಿಯು ಎಲ್ಲಕ್ಕೂ ಮಹತ್ವದ್ದು. ಇಲ್ಲಿಯ ಹತ್ತಿಯಲ್ಲಿ ಜವಾರಿ ಹತ್ತಿಯೆಂದೂ, ವಿಲಾಯತಿ ಹತ್ತಿಯೆಂದೂ ಎರಡು ಪ್ರಕಾರಗಳುಂಟು. ಜವಾರಿಹತ್ತಿಯ ಬಹಳ ಭಾಗವು ಹೊರಗೆ ಹೋಗುತ್ತದೆ. ಈ ಜಿಲ್ಲೆಯಲ್ಲಿ ನೂಲಿನ ಬಟ್ಟೆಗಳು ಹುಬ್ಬಳ್ಳಿ, ಗದಗು, ಸೆಟಗೇರಿ ಮುಂತಾದ ಊರುಗಳಲ್ಲಿ ತಯಾರಾಗುತ್ತಿದ್ದರೂ. ಇಲ್ಲಿಯ

ನೇಕಾರರು ಮುಂಬಯಿಯಿಂದ ತಯಾರಾಗಿ ಬಂದ ನೂಲನ್ನೇ ಉಪಯೋಗಿಸುವರು. ಇಲ್ಲಿಯು ಅರಳಿಯನ್ನೂ ಅಲ್ಪ ಸ್ವಲ್ಪ ನೂಲುವದುಂಟು.

ಮಗ್ಗದ ಅರಿವೆಗಳು ಕಾನಡಾಜಿಲ್ಲೆ, ಬಳ್ಳಾರಿ, ಕಡಪೆಗಳಿಗೆ ಹೋಗುತ್ತವೆ. ಗದಗ, ಹುಬ್ಬಳ್ಳಿಯ ಸೀರೆಗಳೂ, ಧೋತರಗಳೂ, ಬೆಳಗಾಂ ಬಳ್ಳಾರಿಗಳಿಗೆ ಹೋಗುತ್ತವೆ.

ಕಾಳುಗಳಲ್ಲಿ ಜೋಳ ಗೋದಿಗಳು, ಮೈಸೂರ ಪ್ರಾಂತಕ್ಕೂ ಬಳ್ಳಾರಿಗೂ ಸ್ವಲ್ಪ ಭಾಗವು ಕಾನಡಾ ಜಿಲ್ಲೆಗೂ ಹೋಗುವವು. ಎಣ್ಣೇ ಕಾಳುಗಳೂ, ಹತ್ತಿಯ ಬೀಜಗಳೂ, ಗೋದಿಯೂ ಮುಂಬಯಿಗೆ ಹೋಗಿ, ಮುಂದೆ ವಿಲಾಯತಿಗೆ ಸಹ ಹೋಗುವವು.

ಹಿತ್ತಾಳೆಯ ಹಾಗೂ, ತಾಮ್ರದ ಪಾತ್ರೆಗಳು ಹುಬ್ಬಳ್ಳಿಯಿಂದ, ಳ್ಳಾರಿ, ಬೆಂಗಳೂರ, ಬೆಳಗಾವಿಗಳಿಗೆ ಹೋಗುವವು.

ಯಾಲಕ್ಕಿ, ಮೆಣಸು, ಇವು ಮೈಸೂರಿನಿಂದಲೂ ಕಾನಡಾ ಜಿಲ್ಲೆಯಿಂದಲೂ ಬಂದು ಉತ್ತರದಲ್ಲಿ ಪುಣೆ ಮುಂಬಯಿ ಸಾತಾರೆಗಳಿಗೆ ಹೋಗವವು.

ಆಮದವಾಗುವ ಪದಾರ್ಥಗಳಲ್ಲಿ ಹೆಲವು ಹಿಂದುಸ್ತಾನದ ಹೊರಗಿನಿಂದ ಬರುವವೆಂದು ಸಾಮಾನ್ಯವಾಗಿ ಹೇಳಬಹುದು. ನಮ್ಮಲ್ಲಿ ಮುಖ್ಯವಾಗಿ ಧಾನ್ಯವು ಹುಟ್ಟುವದು. ಅರಿವೆಗಳಿಗೆ ಅವಶ್ಯವಾದ ಹತ್ತಿಯು ಹುಟ್ಟಿದರೂ, ನೂಲು ಮಾತ್ರ ಮುಂಬಯಿಯಿಂದ ಬರುವದು. ಆದ್ದರಿಂದ ಮನುಷ್ಯನಿಗೆ ಬೇಕಾಗುವ ಸಂಣಪುಟ್ಟ ಸರಕುಗಳೆಲ್ಲ ಹೊರಗಿನಿಂದಲೇ ಈ ಜಿಲ್ಲೆಗೆ ಬರುವದೆಂಬದನ್ನು ಲಕ್ಷದಲ್ಲಿಡುವಂತಿದೆ. ಈ ಜಿಲ್ಲೆಯಲ್ಲಿ ಮಧ್ಯಮ ಸ್ಥಿತಿಯಲ್ಲಿರುವ ಜನರ ಮನೆಗೆ ಹೋಗಿ, ಅವರು ಉಪಯೋಗಿಸುವ ಪದಾರ್ಥಗಳನ್ನು ಪರೀಕ್ಷಿಸಿದರೆ ಅವುಗಳಲ್ಲಿ ಅನೇಕ ಪದಾರ್ಥಗಳು ಹೊರಗಿಂದ ಬರುವವೆಂದು ಮನಗಾಣಬಹುದು. ಇತರ ದೇಶದವರಿಗೆ ಕೈಗಾರಿಕೆಯ ವಿಷಯದಲ್ಲಿರುವ ಅನುಕೂಲಗಳು ನಮ್ಮ ಜಿಲ್ಲೆಯಲ್ಲಿ ಇಲ್ಲದಿರುವದೇ ಇದಕ್ಕೆ ಕಾರಣವು. ನಮ್ಮಲ್ಲಿ ಹಳ್ಳಿಯವರಿಗೆ ಸಹ ಅತ್ಯವಶ್ಯವೆನಿಸುವ ಕೆಲವು ಪದಾರ್ಥಗಳು ಪರದೇಶಗಳಿಂದಲೇ ಬರುವವು.

ಕಬ್ಬಿಣವೂ ಕಬ್ಬಿಣದ ಬಹುತರ ಎಲ್ಲಬಗೆಯ ಸಾಮಾನುಗಳೂ ಅತಿದೊಡ್ಡ ಕಾರಖಾನೆಯ ಯಂತ್ರಗಳಿಂದ ಸಣ್ಣ ಸಣ್ಣ ಮೊಳೆಗಳ ವರೆಗೆ ವಿಲಾಯತಿಯಿಂದ ಬರುತ್ತವೆ. ಯಂತ್ರದಿಂದ ತಯಾರಾದ ಅರಿವೆಗಳೂ ನೂಲೂ ವಿಲಾಯತಿಯಿಂದಲೇ ಬರುತ್ತವೆ. ಕೆಲವು ಮುಂಬಯಿಯಿಂದಲೂ ಬರುತ್ತವೆ. ಚಿಮಣೀ ಎಣ್ಣೆಯು ರಸಿಯಾದಿಂದಲೂ ಸಂಯುಕ್ತಸಂಸ್ಥಾನ ಬ್ರಹ್ಮದೇಶಗಳಿಂದಲೂ ಮುಂಬಯಿಯ ಮಾರ್ಗವಾಗಿ ಬರುತ್ತದೆ. ಕಡ್ಡೀಪೆಟ್ಟಿಗೆಗಳು ನಾರ್ವೆ, ಸ್ವೀಡನ್, ಜಪಾನದಿಂದಲೂ ಮುಂಬಯಿಯಿಂದಲೂ ಬರುತ್ತವೆ. ಬೆಳ್ಳಿ, ಬಂಗಾರ, ಕಬ್ಬಿಣ, ತಾಮ್ರಗಳು ಪರದೇಶದಿಂದ ಮುಂಬಯಿ ಮಾರ್ಗವಾಗಿಯೇ ಬರುತ್ತವೆ.

ಅರಿವೆಗಳಲ್ಲಿ ಶಾಲುಗಳೂ ಸೀರೆಗಳೂ ಬೆಂಗಳೂರಿನಿಂದಲೂ, ಪೀತಾಂಬರಗಳು ಕಾಶಿಯಿಂದಲೂ, ಬರುತ್ತವೆ. ಹಿತ್ತಾಳೆ-ತಾಮ್ರದ ಪಾತ್ರೆಗಳು ನಾಶಿಕ, ಪುಣೆ ನಾಗಪೂರಗಳಿಂದ ಬರುತ್ತವೆ. ಸಕ್ಕರೆ, ಬೆಲ್ಲ, ಅರಿಸಿಣ ಮೊದಲಾದವುಗಳು ಬೆಂಗಳೂರಿಂದ ಬರುವವಲ್ಲದೆ ಮುಂಬಯಿಯಿಂದಲೂ ಬರುತ್ತವೆ. ಕೊಬ್ಬರಿಎಣ್ಣೆ, ಯಾಲಕ್ಕಿ, ತೆಂಗಿನ ಕಾಯಿ, ಮೆಣಸು, ಅಡಿಕೆ, ಕಾನಡಾದಿಂದಲೂ ಮೈಸೂರಿಂದಲೂ ಬರುತ್ತವೆ.

ಈ ಜಿಲ್ಲೆಯಲ್ಲಿ ವ್ಯಾಪಾರಕ್ಕೆ ಹೆಸರಾದ ಹತ್ತು ಊರುಗಳವೆ. ಅವುಗಳಲ್ಲಿ ಐದು ಪಡಮೊಲೆಗಳೂ, ಐದು ಕಿರುಕಳ ಹಾಗೂ ಠೋಕ ವ್ಯಾಪಾರಮಾಡುವ ಸ್ಥಳಗಳೂ ಇರುವವು. ಪಶ್ಚಿಮದಲ್ಲಿ ಹುಬ್ಬಳ್ಳಿ-ಧಾರವಾಡ ಪಟ್ಟಣಗಳಲ್ಲಿಯೂ, ಪೂರ್ವದಲ್ಲಿ ಗದಗಿನಲ್ಲಿಯೂ, ಉತ್ತರದಲ್ಲಿ ನವಲಗುಂದದಲ್ಲಿಯೂ, ದಕ್ಷಿಣದಲ್ಲಿ ರಾಣೆಬೆನ್ನೂರಲ್ಲಿಯೂ ಠೋಕ ಹಾಗು ಕಿರುಕಳ ವ್ಯಾಪಾರವು ನಡೆಯುತ್ತದೆ. ಇವು ವ್ಯಾಪಾರದಬಗ್ಗೆ ಇಷ್ಟು ಹೆಸರಾದ ಕಾರಣವನ್ನು ಇಲ್ಲಿ ವಿವರಿಸುತ್ತೇವೆ:—

ಹುಬ್ಬಳ್ಳಿ:— ಪಶ್ಚಿಮದಲ್ಲಿ ಮಲ್ಲಾಡವಿದೆ. ಪೂರ್ವದಲ್ಲಿ ಬೈಲುಸೀಮೆಯಿದೆ. ತಾಲೂಕು ಜೆಳೆಯುಳ್ಳದ್ದು. ಮಾರ್ಗಗಳ ದೃಷ್ಟಿಯಿಂದ ಅತಿ ಮಹತ್ವವುಳ್ಳದ್ದು. ಉತ್ತರ ದಕ್ಷಿಣ ಪೂರ್ವಗಳ ಕಡೆಗೆ ರೇಲ್ವೆ ಮಾರ್ಗ ಹಾಗು ಲೈನ ಮಾರ್ಗವಿದೆ. ಪಶ್ಚಿಮದಲ್ಲಿ ಕಾರವಾರದಿಂದಲೂ ಕುಮಟೆಯಿಂದಲೂ ರಾಜಮಾರ್ಗಗಳು ಉತ್ತರದಲ್ಲಿ ನವಲಗುಂದಕ್ಕೆ ಮಾರ್ಗ

ವು. ಜಿಲ್ಲೆಯಲ್ಲಿ ಅರಿವೆ, ಹತ್ತಿ, ಪಾತ್ರೆಗಳ ಕೈಗಾರಿಕೆಗಳ ಮುಖ್ಯ ಸ್ಥಳ. ಪ್ರಾಚೀನಕಾಲದಿಂದ ವ್ಯಾಪಾರದ ಬಗ್ಗೆ ಹೆಸರಾದ ಸ್ಥಳ. ಇವೆಲ್ಲ ಕಾರಣಗಳಿಂದ ಹುಬ್ಬಳ್ಳಿಯು ಇಡೀ ಜಿಲ್ಲೆಯಲ್ಲಿ, ಬಹುಶಃ ಕರ್ನಾಟಕದಲ್ಲಿ ವ್ಯಾಪಾರಕ್ಕೆ ಹೆಸರಾದ ಪಟ್ಟಣವಾಗಿದೆ.

ಧಾರವಾಡ:– ಪೂರ್ವದಲ್ಲಿ ಬೆಳೆಯುಳ್ಳ ಭೂಮಿಯು. ಹುಬ್ಬಳ್ಳಿ, ಸವದತ್ತಿ, ಹಳ್ಳಿಯಾಳ, ಬೆಳಗಾಂವಿ, ಮೊದಲಾದವುಗಳ ಮಾರ್ಗಗಳು ಈ ಊರಲ್ಲಿ ಕೂಡಿರುತ್ತವೆ. ಪಶ್ಚಿಮಕ್ಕೆ ಹತ್ತಿದ ಕಾರವಾರ ಜಿಲ್ಲೆಯ ಭಾಗವು ಬೆಳೆಯುಳ್ಳದ್ದಲ್ಲ. ಆದ್ದರಿಂದ ಕಾರವಾರದ ಸರಕು ಇಲ್ಲಿಗೆ ಬರುವದಿಲ್ಲ. ಬೆಳಗಾಂವಿ-ಮುಂಬಯಿಗಳಿಗೆ ಈ ಜಿಲ್ಲೆಯಲ್ಲಿ ಇದು ರೇಲ್ವೆ ಮಾರ್ಗದಿಂದ ತೀರ ಸವಿಾಪದ ಊರು. ಜಿಲ್ಲೆಯ ಮುಖ್ಯಸ್ಥಳ.

ಗದಗ:– ಪೂರ್ವಭಾಗದಲ್ಲಿಯ ದೊಡ್ಡ ಪಟ್ಟಣ. ಹತ್ತಿ, ಗೋದಿ ಬೆಳೆಯುವ ಪ್ರದೇಶದ ಮಧ್ಯದಲ್ಲಿರುವ ಊರು. ಗಜೇಂದ್ರಗಡ, ಮುಂಡರಗಿ, ಹಾನಗಲ್ಲ, ನವಲಗುಂದ, ಹುಬ್ಬಳ್ಳಿಗಳ ಮಾರ್ಗಗಳು ಕೂಡುವ ಸ್ಥಳ. ಹುಬ್ಬಳ್ಳಿಯಿಂದಲೂ ವಿಜಾಪುರ ಬಳ್ಳಾರಿಗೂ ರೇಲ್ವೆ ಮಾರ್ಗಗಳು. ನೂಲಿನ ಬಟ್ಟೆಗಳ ಕೈಗಾರಿಕೆಯ ಸ್ಥಳ.

ನವಲಗುಂದ:– ಬೈಲು ಸೀಮೆಯಿಂದ ತುಂಬಿದ ತಾಲೂಕು.

ನರಗುಂದ:– ರೋಣ, ಗದಗಗಳಿಗೆ ಮತ್ತು ಹುಬ್ಬಳ್ಳಿಗೆ ರಹದಾರಿಯು.

ರಾಣೆಬೆನ್ನೂರು:– ಜಿಲ್ಲೆಯ ಆಗ್ನೇಯದಲ್ಲಿ ಹುಬ್ಬಳ್ಳಿ, ಬೆಂಗಳೂರುಗಳಿಗೆ ರೇಲ್ವೆ ಮಾರ್ಗವು. ಇದರ ನಕ್ಷಿಣದಲ್ಲಿ ಮೈಸೂರು ಪ್ರಾಂತವೂ ಪೂರ್ವದಲ್ಲಿ ಕಾರವಾರ ಜಿಲ್ಲೆಯೂ ನೆರೆಯಲ್ಲಿರುವವು. ಈ ಪ್ರದೇಶಗಳ ವ್ಯಾಪಾರಸ್ಥರು ವಾರಕ್ಕೊಮ್ಮೆ ಇಲ್ಲಿ ಬಂದು, ತಮ್ಮ ಸರಕುಗಳನ್ನು ಕೊಂಡು ಮಾರುತ್ತಾರೆ. ಇದೇ ಮೇರೆಗೆ ಮುಂಡರಗಿಯು ನಿಜಾಮನ ರಾಜ್ಯಕ್ಕೂ ಬಳ್ಳಾರಿ ಸೀಮೆಗೂ ಸವಿಾಪದಲ್ಲಿದೆ.

ಹಾವೇರಿ:— ಮೈಸೂರು, ಕಾರವಾರಗಳಿಂದ ಬರುವ ಯಾಲಕ್ಕಿ, ಅಡಿಕೆ, ಮೆಣಸುಗಳ ಪದಮೂಲೆಯ ಸ್ಥಳ. ಕುಮಟೆಯಿಂದ ಸವಿಾಪದಲ್ಲಿರುವ ದೊಡ್ಡ ಪಟ್ಟಣ. ಕುಮಟೆಗೆ ಮಾರ್ಗವು. ಹುಬ್ಬಳ್ಳಿ, ಮೈಸೂರಗಳಿಗೆ ರೇಲ್ವೆ ಮಾರ್ಗ. ಹಾವೇರಿಯಲ್ಲಿ ಸೌಳು ನೀರಿನದೊಂದು ಬಾವಿ

ಯುಂಟು. ಅದರ ನೀರೊಳಗೆ ಸೀಗಿಕಾಯಿ, ಅಂಟಾಳಕಾಯಿಗಳನ್ನು ಹಾಕಿ, ಅದರಿಂದ ಯಾಲಕ್ಕಿಗಳನ್ನು ತೊಳೆದು, ಆ ಮೇಲೆ ಸ್ವಚ್ಛ ನೀರಿನಿಂದ ತೊಳೆದು ಒಣಗಿಸುತ್ತಾರೆ. ಅದರಿಂದ ಯಾಲಕ್ಕಿಗಳು ಉಬ್ಬಿ ಬೆಳ್ಳಗಾಗುತ್ತವೆ.

ದುಂಡಶಿ:—ಬಂಕಾಪುರ ತಾಲೂಕಿನಲ್ಲಿ ಜಿಲ್ಹೆಯಲ್ಲಿ ಕುಮಟೆಗೆ ಸವಿಾಪವಾದ ಪಟ್ಟಣ. ಹುಬ್ಬಳ್ಳಿಯಿಂದ ಕುಮಟೆಗೆ ಮಾರ್ಗವಾಗುವ ಮೊದಲು ವ್ಯಾಪಾರದ ಬಗ್ಗೆ ಹೆಸರಾಗಿತ್ತು. ಹುಬ್ಬಳ್ಳಿಯು ಬೆಳೆದಂತೆ ಇಲ್ಲಿಯ ವ್ಯಾಪಾರ ಕುಗ್ಗಿತು.

ನರಗುಂದ:— ವಿಜಾಪುರ ಬೆಳಗಾವಿಗಳಿಗೆ ಸವಿಾಪವಾದದ್ದು.

ಇದಲ್ಲದೆ, ತಾಲೂಕಿನ ಮುಖ್ಯ ಊರುಗಳಲ್ಲಿಯೂ, ಸಣ್ಣ ದೊಡ್ಡ ಊರುಗಳಲ್ಲಿಯೂ ವಾರವಾರಕ್ಕೆ ಸಂತೆಯಾಗುತ್ತದೆ. ಈ ಸಂತೆಗಳಲ್ಲಿ ಸುತ್ತಲಿನ ಊರುಗಳ ಇಲ್ಲವೆ ಹಳ್ಳಿಗಳ ಜನರು ತಮಗೆ ಬೇಕಾದ ಸಾಮಾನುಗಳನ್ನು ಮಯ್ಯುವರು.

ಇದಲ್ಲದೆ ಜಾತ್ರೆಗಳು ನೆರೆದಲ್ಲಿಯೂ ವ್ಯಾಪಾರವಾಗುವದುಂಟು. ಇಲ್ಲಿ ಸಹ ಕೊಳ್ಳುವವರು ಬಹುತರವಾಗಿ ಹಳ್ಳಿಯ ಜನರೇ ಇರುತ್ತಾರೆ. ಆದರೆ, ಇಲ್ಲಿ ಹೇಳತಕ್ಕಷ್ಟು ವ್ಯಾಪಾರವಾಗುವದಿಲ್ಲ. ಈ ಜಿಲ್ಹೆಯಲ್ಲಿ ನವಲಗುಂದ ತಾಲೂಕಿನಲ್ಲಿ ಯವನೂರ ಜಾತ್ರೆಯೂ, ರಾಣೆಬೆನ್ನೂರ ತಾಲೂಕಿನಲ್ಲಿ ದೇವರ ಗುಡ್ಡದ ಜಾತ್ರೆಯೂ, ಬಂಕಾಪೂರ ತಾಲೂಕಿನಲ್ಲಿ ಹುಲುಗೂರು ಜಾತ್ರೆಯೂ, ತಕ್ಕ ಮಟ್ಟಿಗೆ ದೊಡ್ಡವಾಗುತ್ತವೆ.

೧೦ನೇ ಪ್ರಕರಣ.

ಸರಕಾರ.

ಜನರನ್ನು ಕ್ಷೇಮದಿಂದಲೂ ಸುಖದಿಂದಲೂ ಇಡುವದು ಸರಕಾರದವರ ಕರ್ತವ್ಯವಿರುವದು. ಪ್ರಾಚೀನ ಕಾಲದಲ್ಲಿ ಈ ಜಿಲ್ಹೆಯಲ್ಲಿ ಅನೇಕ ರಾಜ್ಯಗಳಾಗಿ ಹೋದವು. ಆದರೆ ದೇಶದಲ್ಲಿ ಶಾಂತತೆಯನ್ನಿಟ್ಟು ಪ್ರಜೆಗಳಿಗೆ ಸೌಖ್ಯಸಮೃದ್ಧಿಗಳನ್ನುಂಟು ಮಾಡುತ್ತ ಬಹಳ ಕಾಲದ ವರೆಗೆ ಬಲಿಷ್ಠರಾಗಿ ಯಾರೂ ಆಳಲಿಲ್ಲ. ಮೇಲಿಂದ ಮೇಲೆ ನಾಡೆಲ್ಲ ರಣರಂಗವಾಗುತ್ತಿತ್ತು. ಇತ್ತಲಾಗಿ ಇಂಗ್ಲಿಷ ಸರಕಾರದವರ ಅಮಲು ಉಂಟಾದಂ

ದಿನಿಂದ ಜನರು ಕ್ರಮೇಣ ಉದ್ಯೋಗಿಗಳೂ ಸುಖಿಗಳೂ ಆಗುತ್ತ ನಡೆದಿರುವರು.

ಸುಧಾರಿಸಿದ ಸರಕಾರವು ಜನರ ಹಿತದ ಬಗ್ಗೆ ಕೆಲವು ಮುಖ್ಯ ಕೆಲಸಗಳನ್ನು ಮಾಡತಕ್ಕದ್ದಿರುತ್ತದೆ. ಅವು ಯಾವವೆಂದರೆ:—ದೇಶದಲ್ಲಿ ಶಾಂತತೆಯನ್ನು ನೆಲೆಗೊಳಿಸುವದು; ಜನರಿಗೆ ನ್ಯಾಯವನ್ನು ಕೊಡುವದು; ದೇಶದಲ್ಲಿ ವ್ಯಾಪಾರ, ಕಲಾಕೌಶಲ್ಯ, ಉದ್ಯೋಗಗಳು ಹೆಚ್ಚಲಿಕ್ಕೆ ಅನುಕೂಲಗಳನ್ನು ಮಾಡಿ ಕೊಡುವದು. ಜನರ ಬುದ್ಧಿಯನ್ನೂ ಜ್ಞಾನವನ್ನೂ ಬೆಳೆಯಿಸುವದು; ಅವರ ಆರೋಗ್ಯವನ್ನು ರಕ್ಷಿಸುವದು; ಹಾಗೂ ಅವರಿಗೆ ಸ್ವಂತವಾಗಿ ತಮ್ಮ ಕೊರತೆಗಳನ್ನು ದೂರ ಮಾಡಿಕೊಂಡು ತಮ್ಮ ಹಣದ ವ್ಯವಸ್ಥೆಯನ್ನು ಯೋಗ್ಯವಾಗಿ ಮಾಡಿಕೊಳ್ಳಲಿಕ್ಕೆ ಕಲಿಸುವದು. ಇವೆಲ್ಲ ಸರಕಾರದ ಕರ್ತವ್ಯಗಳೆಂದು ಹೇಳಬಹುದು. ಈ ಜಿಲ್ಹೆಯಲ್ಲಿ ಇಂಗ್ಲಿಷ ಸರಕಾರದವರು ಇವೆಲ್ಲ ಕಾರ್ಯಗಳನ್ನು ಜರುಗಿಸುವದಕ್ಕೆ ಮಾಡಿರುವ ವ್ಯವಸ್ಥೆಯನ್ನು ತಿಳಿದುಕೊಳ್ಳುವ:—

ಇನ್ನು, ಸರಕಾರವು ಇಷ್ಟು ಕೆಲಸಗಳನ್ನೆಲ್ಲ ಮಾಡಲಿಕ್ಕೆ ಅಧಿಕಾರಸ್ಥರನ್ನು ನೇಮಿಸಬೇಕಷ್ಟೇ. ಆ ಅಧಿಕಾರಿಗಳಿಗೆ ಸಂಬಳ ಕೊಡಬೇಕಷ್ಟೇ. ಆದ್ದರಿಂದ ಸರಕಾರಕ್ಕೆ ಹಣದ ಅವಶ್ಯಕತೆಯುಂಟಾಗುತ್ತದೆ. ಅದನ್ನು ಸರಕಾರವು ಜನರಿಂದ ಕರದ ರೂಪದಿಂದ ತೆಗೆದುಕೊಳ್ಳುವದು. ಈ ಮೇರೆಗೆ ಹಣವನ್ನು ವಸೂಲ ಮಾಡುವ ಕೆಲಸವು ಸರಕಾರದ ಅತಿ ಮಹತ್ವದ ಕೆಲಸವೆನ್ನಬಹುದು. ಯಾಕಂದರೆ ಈ ಹಣವೇ ಇಲ್ಲದಿದ್ದರೆ ಸರಕಾರದವರು ಮಾಡತಕ್ಕ ಮಹತ್ವದ ಕೆಲಸಗಳು ಸಾಗಲಾರವು.

ಒಂದು ರೀತಿಯಿಂದ ಕಲೆಕ್ಟರನು ಜಿಲ್ಹೆಯ ಅರಸನೆಂದು ಹೇಳಬಹುದು. ಇವನು ಬಹುತರವಾಗಿ ಯುರೋಪಿಯನ್‌ನಿರುವನು. ಇವನಿಗೆ ತಿಂಗಳಿಗೆ ೨೦೦೦–೨೫೦೦ ರೂಪಾಯಿ ಸಂಬಳವಿರುವದು. ಕಲೆಕ್ಟರನು ಜಿಲ್ಹೆಯ ವಸೂಲು ಶಿಲುಕು ಇವುಗಳ ಮುಖ್ಯಾಧಿಕಾರಿಯಾಗಿ ಇರುವದಲ್ಲದೆ ಜಿಲ್ಹೆಯ ಮುಖ್ಯ ಮಾಜಿಸ್ಟ್ರೇಟನಿರುತ್ತಾನೆ. ಅವನು ಬಹುತರ ಲೋಕಲ್‌ಬೋರ್ಡಿನ ಅಧ್ಯಕ್ಷನೂ ಇರುವನು. ಕೆಲವು ಕಡೆಯಲ್ಲಿ ಡಿಸ್ಟ್ರಿಕ್ಟ ಮ್ಯುನಸೀಪಾಲಿಟಿಯ ಅಧ್ಯಕ್ಷನೂ ಇವನೇ ಇರುತ್ತಾನೆ. ಇದಲ್ಲದೆ ಬಕ್ಕಲತನದ ಖಾತೆಯೂ ಇವನಿಗೇ ಅಧೀನವಿರುತ್ತದೆ. ಪೋಲೀಸ ಖಾತೆಯು ಬೇರೆ ಇದ್ದಾಗ್ಯೂ ಪೋಲೀಸ ಅಧಿಕಾರಿಗಳ ಮೇಲೆ ಇವನ ಅನುಶಾಸನ ನಡೆ

ಯುತ್ತದೆ. ಇವೆಲ್ಲ ಖಾತೆಗಳು ಮೇಲೆ ಹೇಳಿದ ಸರಕಾರದ ಕರ್ತವ್ಯಗಳನ್ನು ಜರಗಿಸುವ ಬೇರೆ ಬೇರೆ ಖಾತೆಗಳಾಗಿರುವದರಿಂದ ಕಲೆಕ್ಟರನು ಜಿಲ್ಹೆಯ ಪ್ರಜೆಗಳ ಸೌಖ್ಯಕ್ಕೆ ಬಹಳ ಮಟ್ಟಿಗೆ ಕಾರಣನಾಗಿರುತ್ತಾನೆಂಬದು ಸ್ಪಷ್ಟವಾದದ್ದದೆ. ಇಷ್ಟು ಜವಾಬುದಾರಿಯುಳ್ಳ ಅಧಿಕಾರಸ್ಥನಿಗೆ ದೊಡ್ಡ ಸಂಬಳವೂ ಅಧಿಕಾರವೂ ಇರಬೇಕೆಂದು ಹೇಳಲು ಅವಶ್ಯವಿರುವದಿಲ್ಲ.

ಕಲೆಕ್ಟರನ ಕೈಕೆಳಗೆ ಇಬ್ಬರಾಗಲಿ ಮೂವರಾಗಲಿ ಸೆನದೀ ಯು ರೋಪಿಯನ್ ಅಸಿಷ್ಟಂಟು ಕಲೆಕ್ಟರರೂ, ಡಿಸ್ಟ್ರಿಕ್ಟ ಡೆಪ್ಯೂಟಿ, ಹುಜೂರ ಡೆಪ್ಯೂಟಿ, ಎಂಬ ಇಬ್ಬರು ದೇಶೀಯ ಅಧಿಕಾರಸ್ಥರೂ ಇರುವರು. ಮೊದಲಿನ ಎರಡು ತರದ ಅಧಿಕಾರಸ್ಥರಿಗೆ ಮೂರು ನಾಲ್ಕು ತಾಲೂಕುಗಳ ಮೇಲ್ವಿಚಾರಣೆಯು ಒಪ್ಪಿಸಲ್ಪಟ್ಟಿರುತ್ತದೆ. ಇವರು ವರ್ಷದಲ್ಲಿ ಏಳು ತಿಂಗಳಗಳ ವರೆಗೆ ಫಿರತೀ ಮಾಡಬೇಕು; ಮುಲಕೀ ಕೆಲಸವು ಯೋಗ್ಯ ರೀತಿಯಿಂದ ನಡೆದಿರುವದೆಂಬದನ್ನು ಪ್ರತ್ಯಕ್ಷವಾಗಿ ನೋಡಬೇಕು. ಇದೇ ಮೇರೆಗೆ ಕಲೆಕ್ಟರನು ಸಹ ವರ್ಷದಲ್ಲಿ ನಾಲ್ಕು ತಿಂಗಳಗಳ ವರೆಗೆ ತನ್ನ ಜಿಲ್ಹೆಯಲ್ಲಿ ತಿರುಗಬೇಕು. ಈ ಏರ್ಪಾಡಿನಿಂದ ಹಳ್ಳಿಯ ಜನರಿಗೆ ಸರ ಕಾರದ ವರಿಷ್ಠ ಅಧಿಕಾರಿಗಳ ಭೆಟ್ಟಿಯು ಸುಲಭವಾಗಿ ಆಗುವದು. ಸರ ಕಾರಕ್ಕೂ ಜನರ ಕೋರಿಕೆಗಳು ಚನ್ನಾಗಿ ತಿಳಿಯುವವು. ಇವರು ತಮ್ಮ ಕೈಕೆಳಗಿನ ತಾಲೂಕುಗಳ ಮುಲಕೀ ಖಾತೆಯ ಮೇಲ್ವಿಚಾರಣೆಯನ್ನು ಮಾಡುವದಲ್ಲದೆ, ಗನೇ ತನೇ ವರ್ಗದ ಮಾಜಿಸ್ಟ್ರೇಟರಾಗಿ ಫೌಜದಾರಿ ಅಪ ರಾಧಿಗಳ ವಿಚಾರಣೆಯನ್ನು ಮಾಡುತ್ತಾರೆ. ಹುಜೂರ ಡೆಪ್ಯೂಟೀ ಕಲೆ ಕ್ಟರನು ಜಿಲ್ಹೆಯ ನಗದ ಜಮೆ, ಖರ್ಚು, ಶಿಲುಕು, ಲೆಕ್ಕ ಇವುಗಳಿಗೆ ಜವಾಬುದಾರನಿರುವನಲ್ಲದೆ, ಗನೇ ವರ್ಗದ ಮಾಜಿಸ್ಟ್ರೇಟನಾಗಿ ಫೌಜದಾ ರೀ ಗುನ್ಹೆಗಳ ಚೌಕಸಿಯನ್ನು ಮಾಡುತ್ತಾನೆ.

ಕಾರಭಾರದ ಅನುಕೂಲತೆಗಾಗಿ ಈ ಜಿಲ್ಹೆಯಲ್ಲಿ ೧೧ ತಾಲೂಕುಗ ಳನ್ನು ಮಾಡಿರುವರು. ತಾಲೂಕಿನ ಮುಖ್ಯಾಧಿಕಾರಿಯು ಮಾಮಲೇದಾರ ನು. ಮಾಮಲೇದಾರರು ತಮ್ಮ ತಾಲೂಕಿನ ಖಜೀನೆಯ ಕೆಲಸದಬಗ್ಗೆ ಜವಾ ಬದಾರರಿರುವರು. ಇವರು ತಮ್ಮ ತಾಲೂಕಿನ ಹಳ್ಳಿಯವರು ಕೊಡತಕ್ಕ ತೆರಿಗೆಗಳನ್ನು ಕಾಲಕಾಲಕ್ಕೆ ಮುಟ್ಟಿಸುವರೋ ಇಲ್ಲವೋ ಎಂಬದನ್ನು

ನೋಡಬೇಕು. ಗ್ರಾಮದ ಲೆಕ್ಕದ ಕಾಗದಪತ್ರಗಳು ಸರಿಯಾಗಿ ಇಡಲ್ಪಟ್ಟವೆ ಎಂಬದನ್ನು ಮೇಲಿಂದ ಮೇಲೆ ತಪಾಸು ಮಾಡಬೇಕು. ರೈತರು ಮುಟ್ಟಿಸುವ ಹಣಕ್ಕೆ ಅವರಿಗೆ ಪಾವತಿ ದೊರೆಯುತ್ತದೆಂಬದನ್ನು ಮನವರಿಕೆ ಮಾಡಿಕೊಳ್ಳಬೇಕು. ಹೊಲಗಳ ಮೇರೆಯ ಕಲ್ಲುಗಳೂ, ಬಡ್ಡಿಗಳೂ ಸರಿಯಾಗಿ ಇಡಲ್ಪಟ್ಟವೆಂಬದನ್ನು ನೋಡಬೇಕು. ಅಂತು ಗ್ರಾಮದ ಅಧಿಕಾರಸ್ಥರು ತನ್ನ ತಮ್ಮ ಕೆಲಸಗಳನ್ನು ತಪ್ಪದೆ ಮಾಡುವರೆಂಬದನ್ನು ನೋಡುತ್ತಿರಬೇಕು. ಇವರು ತಮ್ಮ ತಾಕೂಕಿನ ಲೋಕಲ್‌ಫಂಡಿನ ವ್ಯವಸ್ಥೆಯ ಮೇಲಧಿಕಾರಿಗಳಿರುವರು. ಇಷ್ಟಲ್ಲದೆ ಇವರು ತಮ್ಮ ತಾಲೂಕಿನಲ್ಲಿ ನಡೆಯುವ ಮುಲಕೀ ಫೌಜದಾರೀ ವ್ಯಾಜ್ಯಗಳ ನಿರ್ಣಯವನ್ನು ಮಾಡುವರು. ಇವರಿಗೆ ಬಹುತರವಾಗಿ ಎರಡನೇ ಮೂರನೇ ವರ್ಗದ ಮಾಜಿಸ್ಟ್ರೇಟರ ಅಧಿಕಾರವಿರುತ್ತದೆ. ಜಿಲ್ಲೆಯಲ್ಲಿ ಒಬ್ಬಿಬ್ಬರು ಮಾಮಲೇದಾರರಿಗೆ ಮಾತ್ರ ೧ ನೇ ವರ್ಗದ ಮಾಜಿಸ್ಟ್ರೇಟನ ಅಧಿಕಾರವಿರುತ್ತದೆ.

ಜಿಲ್ಲೆಯಲ್ಲಿ ತಾಲೂಕಗಳನ್ನು ಮಾಡಿದಂತೆ ತಾಲೂಕಿನಲ್ಲಿ ಕೆಲವು ಹಳ್ಳಿಗಳ ವಿಭಾಗಗಳನ್ನು ಮಾಡಿ ಅವುಗಳಿಗೆ ಮಾಮಲೇದಾರನಿಗೆ ಅಂಕಿತರಾದ ಸರಕಲ್ ಇನಸ್ಪೇಕ್ಟರರೆಂಬ ಅಧಿಕಾರಸ್ಥರನ್ನು ನೇಮಿಸುವರು. ಇವರಿಗೆ ಮಾಜಿಸ್ಟ್ರೇಟರ ಅಧಿಕಾರವಿರುವದಿಲ್ಲ.

ಹಳ್ಳಿಯಲ್ಲಿ ಮುಲಕೀ ಫೌಜದಾರೀ ಕೆಲಸಗಳ ಅಧಿಕಾರಸ್ಥನು ಗೌಡನು. ಕೆಲವು ಕಡೆಯಲ್ಲಿ ಇವೆರಡೂ ಕೆಲಸಗಳು ಒಬ್ಬ ಗೌಡನ ಕೈಯಲ್ಲಿಯೇ ಇರುತ್ತವೆ. ಕೆಲವು ಕಡೆಯಲ್ಲಿ ಮುಲಕೀಗೌಡ ಬೇರೆ, ಫೌಜದಾರೀ ಗೌಡ ಬೇರೆ ಇರುತ್ತಾರೆ. ಒಬ್ಬ ಗೌಡನು ಒಂದಕ್ಕಿಂತ ಹೆಚ್ಚು ಹಳ್ಳಿಗಳ ಕೆಲಸವನ್ನು ಮಾಡಬಹುದು. ಗೌಡನಿಗೆ ಅವನ ಭೂಮಿಯ ಮೇಲೆ ಸರಕಾರೀ ತೆರಿಗೆಯನ್ನು ಅಂಶತಃ ಅಥವಾ ಪೂರ್ಣವಾಗಿ ಮಾಫವಾಡಿರುತ್ತದೆ. ಗೌಡನ ಕೈಕೆಳಗೆ ಲೆಕ್ಕಬರೆಯುವ ಮನುಷ್ಯನು ಕುಲಕರಣಿ ಅಥವಾ ಶಾನಭೋಗನು. ಇವನು ಗೌಡನ ಕೈಕೆಳಗಿನ ಅಧಿಕಾರಸ್ಥನಾದಾಗ್ಯೂ ಯಾವತ್ತು ಸರಕಾರೀ ಕಾಗದಪತ್ರಗಳಿಗೆ ಗೌಡನ ಸಹಿಯಂತೆ ಕುಲಕರ್ಣಿಯ ಸಹಿಯಾದರೂ ಅವಶ್ಯವಿರುತ್ತದೆ. ವಿದ್ಯಾಕಲಿತ ಗೌಡನು ಅಪರೂಪ; ಕುಲಕರ್ಣಿಯು ಅಲ್ಪಸ್ವಲ್ಪ ಕಲಿತವನಿರುವನು. ಈ ಕಾರಣದಿಂದ ಊರೊಳಗೆ ಗೌಡನಿಗಿಂತ ಕುಲಕರ್ಣಿಯ ಅಮಲು ಬಹುತರ ಹೆಚ್ಚು ನಡೆಯು

ಿರುತ್ತದೆ. ಕುಲಕರ್ಣಿಗೂ ಸಹ ಸರಕಾರದ ತೆರಿಗೆಯು ಮಾಫಿ ಇರು
ತ್ತದೆ. ಇವರಲ್ಲದೆ ಇವರ ಕೈಕೆಳಗೆ ತಳವಾರ, ಪಟ್ಟಣಶೆಟ್ಟಿ, ಹಳಬ,
ುಂತಾದ ಕಿರುಕಳ ಕಾವುದಾರರೂ ಹಳ್ಳಿಹಳ್ಳಿಗೆ ಇರುವರು. ಇವರ
ಗೂಮಿಗೂ ಸರಕಾರದ ಪೂರ್ಣ ತೆರಿಗೆ ಇರುವದಿಲ್ಲ. ತಳವಾರನು
ಸೂಲ ಮುಂತಾದ ಕೆಲಸಗಳಲ್ಲಿ ಗೌಡಕುಲಕರ್ಣಿಯರಿಗೆ ಸಹಾಯ
ಮಾಡುತ್ತಾನೆ. ಪಟ್ಟಣಶೆಟ್ಟಿಯು ವರಿಷ್ಠಾಧಿಕಾರಿಗಳು ಬಂದಾಗ ಅವರ
ಿರಬರಾಯಿಯ ಕೆಲಸಕ್ಕೆ ಸಹಾಯಮಾಡುತ್ತಾನೆ. ಹಳಬನು ಊರಿನ
ಾವಲುಗಾರನಿರುವನು. ಇವರಲ್ಲದೆ, ಜೋಯಿಸ, ಸೊನ್ನಗಾರ, ನಾದಿಗ,
ಗಸ ಮುಂತಾದ ಬಲೂತೆದಾರರು ಊರತನದ ಕೆಲಸಕ್ಕೆ ಪೂರ್ವದಲ್ಲಿ
ಸಹಾಯ ಮಾಡುತ್ತಿದ್ದರು. ಆದರೆ ಅವರ ಚಾಕರಿಯು ಈಗ ಬೇಕಾಗ
ುದ್ದರಿಂದ ಇವರು ಸರಕಾರದ ನೌಕರಿಯಲ್ಲಿಲ್ಲ.

ದೇಶದಲ್ಲಿ ಶಾಂತತೆಯನ್ನು ರಕ್ಷಿಸುವ ಕೆಲಸವನ್ನು ಇಲಾಖೆಯ
ಧಿಕಾರಸ್ಥರು ನೋಡಿಕೊಳ್ಳುತ್ತಾರೆ. ಈ ಜಿಲ್ಹೆಯಲ್ಲಿ ದಂಡಿನ ಸ್ಥಳ
ಗಳು ಇಲ್ಲ. ಆದರೂ ಊರುಗಳಲ್ಲಿಯೂ ಪಟ್ಟಣಗಳಲ್ಲಿಯೂ ಕಳ್ಳ
ಾ ಹಾವಳಿಯೂ ಕೊಲೆಸುಲಿಗೆಗಳೂ ನಡೆಯದಂತೆ ಪೋಲೀಸಖಾತೆಯ
ರು ನೋಡಿಕೊಳ್ಳುತ್ತಾರೆ. ಜಿಲ್ಹೆಗೆ ಒಬ್ಬ ಪೋಲೀಸ ಸುಪರಿಂಟೆಂ
ಿಂಟ ಎಂಬ ಅಧಿಕಾರಸ್ಥನಿರುವನು. ಇವನ ಕೈಕೆಳಗೆ ಅಸಿಸ್ಟಂಟ
ಪೋಲೀಸ ಸುಪರಿಂಟೆಂಡೆಂಟನೂ ಡಿಪೂಟಿ ಪೋಲೀಸ ಸುಪರಿಂಟೆಂಡೆಂಟ
ರೂ ಇನಸ್ಪೇಕ್ಟರರೂ ಸಬ್ ಇನಸ್ಪೆಕ್ಟರರೂ ಇರುತ್ತಾರೆ.

ಜಿಲ್ಹೆಯ ಮುಖ್ಯ ನ್ಯಾಯಕೋರ್ಟಿನ ನ್ಯಾಯಾಧೀಶನು ಡಿಸ್ತ್ರಿಕ್ಟ
ಜಜ್ಜನು. ಇವನು ಮುಲಕೀ ಫೌಜದಾರೀ ವ್ಯಾಜ್ಯಗಳ ಅಪೀಲುಗಳನ್ನು
ವಿಚಾರಿಸುವನು. ಇವನ ಕೈಕೆಳಗೆ ಅಸಿಸ್ಟಂಟಜಜ್ಜರೆಂದೂ ಸಬ್‌ಜ
ಜ್ಜರೆಂದೂ ಅಧಿಕಾರಸ್ಥರಿರುವರು. ಸಬ್‌ಜಜ್ಜನು ೫೦೦೦ ರೂಪಾಯಿಯ
ಒಳಗಿದ್ದ ದಿವಾಣೀ ವ್ಯಾಜ್ಯಗಳನ್ನು ತೀರಿಸುವನು. ಅಸಿಸ್ಟಂಟಜಜ್ಜನೂ
ಡಿಸ್ತ್ರಿಕ್ಟಜಜ್ಜನೂ ಫೌಜದಾರೀ ಅಪೀಲುಗಳನ್ನು ಸಹ ತೀರಿಸುವರು.

ದೇಶದಲ್ಲಿ ಶಾಂತತೆಯೆನ್ನಿಡುವದು, ಜನರಿಗೆ ನ್ಯಾಯವನ್ನು ಕೊಡು
ವದು, ವಸೂಲಿಯ ಕೆಲಸವನ್ನು ಮಾಡುವದು ಇವುಗಳನ್ನು ಸರಕಾರದ
ಆ ಆ ಖಾತೆಯ ಅಧಿಕಾರಸ್ಥರು ಮಾಡುವರು. ವ್ಯಾಪಾರ, ಕಲಾಭಿವೃದ್ಧಿ

ಗಳಿಗೆ ಅನುಕೂಲಗಳನ್ನು ಮಾಡಿಕೊಟ್ಟು, ಜನರ ವಿದ್ಯೆ-ಆರೋಗ್ಯಗಳನ್ನು ಹೆಚ್ಚಿಸುವ ಕೆಲಸವನ್ನು ಕೆಲವಂಶದಲ್ಲಿ ಲೋಕಲ್ ಬೋರ್ಡ, ಮ್ಯುನಸಿಪಾಲಿಟಿ ಎಂಬ ಸ್ಥಾನಿಕಸಂಸ್ಥೆಗಳಿಗೆ ಒಪ್ಪಿಸಿ, ಸರಕಾರದವರು ಈ ಸಂಸ್ಥೆಗಳ ವ್ಯವಸ್ಥೆಯನ್ನು ಮೇಲ್ವಿಚಾರಿಸುತ್ತಾ, ಅವುಗಳಿಗೆ ತಮ್ಮ ಹದ್ದಿನೊಳಗಿನ ಜನರ ಆರೋಗ್ಯ-ವಿದ್ಯೆ ಮೊದಲಾದವುಗಳ ಬಗ್ಗೆ ತಾವೇ ಏರ್ಪಾಡುಗಳನ್ನು ಮಾಡುವದಕ್ಕೆ ಕಲಿಸುತ್ತ ಇದ್ದಾರೆ. ಈ ಸಂಸ್ಥೆಗಳು ಮಾಡುವ ಖರ್ಚಿನ ಕೆಲಭಾಗವನ್ನು ಸರಕಾರದವರು ಕೊಡುತ್ತಾರೆ. ಈ ಜಿಲ್ಲೆಯಲ್ಲಿ ಒಂದು ಡಿಸ್ಟ್ರಿಕ್ಟ, ಅಂದರೆ ಜಿಲ್ಲೆಯ ಲೋಕಲ್ ಬೋರ್ಡೂ, ಒಂದೊಂದು ತಾಲೂಕಿಗೆ ಒಂದರಂತೆ ೧೧ ತಾಲೂಕ ಲೋಕಲ್ ಬೋರ್ಡುಗಳೂ ಇವೆ. ಭೂಮಿಯ ಮೇಲೆ ಕೂಡ್ರಿಸಿದ ತೆರಿಗೆಯ ಮೇಲೆ ರೂಪಾಯಿಗೆ ಒಂದು ಆಣೆಯಂತೆ ಸರಕಾರದವರು ತಕ್ಕೊಳ್ಳುವ ಹಣವು ಲೋಕಲ್ ಫಂಡು, ಅಂದರೆ ಸ್ಥಾನಿಕ ಹಣವೆನಿಸುತ್ತದೆ. ಲೋಕಲ್ ಬೋರ್ಡಿನ ಉತ್ಪನ್ನದಲ್ಲಿ ಈ ಹಣವೂ, ಕೊಂಡವಾಡೆ, ಟೋಲ್‌ನಾಕೆಗಳ ಉತ್ಪನ್ನ, ಶಾಲೆಯ ಫೀ ಮುಂತಾದ ಆ ಆ ಜಿಲ್ಲೆಯ ಆದಾಯವೂ ಬರುತ್ತವೆ. ಈ ಒಟ್ಟು ಉತ್ಪನ್ನದಲ್ಲಿ ಲೋಕಲ್ ಬೋರ್ಡಿನವರು ಕನಿಷ್ಠ ಪಕ್ಷಕ್ಕೆ ೫ ಹಣವನ್ನು ಶಿಕ್ಷಣದ ಬಗ್ಗೆ ಖರ್ಚು ಮಾಡಲೇ ಬೇಕೆಂದು ನಿರ್ಬಂಧವಿರುವದು. ಉಳಿದ ಹಣವನ್ನು ಹೊಸ ಮಾರ್ಗಗಳು, ನೀರಿನ ಸೌಕರ್ಯಕೆ, ಧರ್ಮಶಾಲೆ, ವೈದ್ಯಶಾಲೆಗಳು ಮುಂತಾದ ಸಾರ್ವಜನಿಕ ಹಿತದ ಕೆಲಸಗಳ ಬಗ್ಗೆ ಖರ್ಚು ಮಾಡತಕ್ಕದ್ದಿರುತ್ತದೆ. ಡಿಸ್ಟ್ರಿಕ್ಟ ಬೋರ್ಡಿನವರು ತಮ್ಮ ಆದಾಯದ ಕೆಲವೊಂದು ಭಾಗವನ್ನು ಆ ಆ ತಾಲೂಕುಗಳಲ್ಲಿ ನಡೆಯುವ ಕೆಲಸಗಳಿಗೋಸ್ಕರ ತಾಲೂಕ ಲೋಕಲ್ ಬೋರ್ಡುಗಳ ವಶಕ್ಕೆ ಕೊಡುತ್ತಾರೆ.

ತಾಲೂಕ ಬೋರ್ಡಗಳಲ್ಲಿ ಜನರಿಂದ ಆರಿಸಿ ಬಂದ ಸಭಾಸದರ ಸಂಖ್ಯೆಯೂ ಸರಕಾರದವರು ನೇಮಿಸಿದ ಸಭಾಸದರ ಸಂಖ್ಯೆಯೂ ಸರಿ ಇರುವವು. ಜಿಲ್ಲೆಯ ಬೋರ್ಡಿನಲ್ಲಿಯೂ ಕೆಲವರನ್ನು ಸರಕಾರದವರು ನೇಮಿಸುವರು; ಕೆಲವರನ್ನು ತಾಲೂಕಿನ ಬೋರ್ಡಿನವರು ತಮ್ಮೊಳಗಿಂದ ಆರಿಸಿ ಕಳಿಸುವರು. ಕಲೆಕ್ಟರನು ಜಿಲ್ಲೆಯ ಬೋರ್ಡಿನ ಪ್ರೆಸಿಡೆಂಟನಿರುವನು. ಅವನ ಅಸಿಷ್ಟಂಟರು ತಮ್ಮ ಕೈಕೆಳಗಿರುವ ತಾಲೂಕ ಬೋರ್ಡುಗಳ ಪ್ರೆಸಿಡೆಂಟರಿರುವರು. ಹೈಸ ಪ್ರೆಸಿಡೆಂಟನನ್ನು ಬೋರ್ಡಿನ

ಕರೇ ಅರಿಸುವರು. ಜಿಲ್ಲೆಯಲ್ಲಿ ಬರ ಬಿದ್ದರೆ, ಇಲ್ಲವೆ ಸ್ಪರ್ಶಜನ್ಯ ರೋಗ ಗಳು ಆರಂಭವಾದರೆ, ಈ ಸಂಘದವರು ಸರಕಾರಕ್ಕೆ ಕೈಲಾದಷ್ಟು ಸಹಾ ಯವನ್ನು ಮಾಡಬೇಕಾಗುವದು.

ದೊಡ್ಡ ಊರುಗಳಲ್ಲಿ ಆ ಆ ಊರುಗಳ ಹಿತದ ಬಗ್ಗೆ ವ್ಯವಸ್ಥೆಯ ನ್ನು ಮಾಡುವ ಸಂಘಗಳಿರುವವು. ಅವುಗಳಿಗೆ ಮ್ಯುನಿಸಿಪಾಲಿಟಿಗಳೆಂಬ ಹೆಸರು. ಈ ಸಂಘದವರು ಊರವರ ಆರೋಗ್ಯ, ಬೀದಿಗಳ ಸ್ವಚ್ಛತೆ, ರಾತ್ರಿಯೆಲ್ಲ ದೀಪ ಮುಂತಾದ ಊರವರ ಹಿತದ ಕೆಲಸಗಳನ್ನು ಮಾಡು ವರು. ಇವರ ಆದಾಯದ ಸಾಧನಗಳು ಮನೆಪಟ್ಟಿ, ಗಾಡೀಪಟ್ಟಿ, ಹೊರ ಗಿಂದ ಬರುವ ಮಾಲಿನ ಮೇಲಿನ ಜಕಾತಿ ಮುಂತಾದವುಗಳು ಇರುತ್ತವೆ. ಊರಿನ ಪ್ರಾಥಮಿಕ ಶಿಕ್ಷಣದ ಜವಾಬುದಾರಿಯು ಈ ಸಂಘದವರ ಮೇಲಿ ರುವದು. ಈ ಜಿಲ್ಲೆಯಲ್ಲಿ ಇಂಥ ಮ್ಯುನಿಸಿಪಾಲಿಟಿಗಳಿರುವ ಊರುಗಳು ೧೦ ಇವೆ:– ಧಾರವಾಡ, ಹುಬ್ಬಳ್ಳಿ, ಗದಗ, ನವಲಗುಂದ, ಯಮನೂರ, ನರಗುಂದ, ರಾಣೇಬಿನ್ನೂರು, ಗುಡ್ಡಗುಡ್ಡಾಪುರ, ಬ್ಯಾಡಿಗಿ, ಹಾವೇರಿ. ಎಂ ಬವು.

ಸರಕಾರದವರು ಜನರಿಗೆ ಸಾರ್ವಜನಿಕ ಕೆಲಸಗಳಲ್ಲಿ ಶಿಕ್ಷಣ ಸೊರೆಯುವದಕ್ಕೋಸ್ಕರ ಇಂಥ ಸಂಘಗಳನ್ನು ನಿರ್ಮಿಸಿದಾಗ್ಯೂ ಜನರಲ್ಲಿ ಸ್ಥಾನಿಕ ವ್ಯವಸ್ಥೆಯನ್ನು ಸರಿಯಾಗಿ ಮಾಡಿಕೊಳ್ಳಲಿಕ್ಕೆ ಸಾಕಷ್ಟು ಉತ್ಸಾ ಹವು ಇನ್ನೂ ಉಂಟಾದಂತೆ ತೋರುವದಿಲ್ಲ. ಆದರೂ ಈ ಸಂಘಗಳನ್ನು ಸೇರುವ ಜನರು ತಾವು ವಹಿಸಿಕೊಂಡ ಕೆಲಸಗಳನ್ನು ಮನಃಪೂರ್ವಕವಾ ಗಿ ಮಾಡಿ, ಸಾರ್ವಜನಿಕ ಕೆಲಸಗಳನ್ನು ಮಾಡುವ ತಮ್ಮ ಯೋಗ್ಯತೆಯ ನ್ನು ಕ್ರಮೇಣ ಬೆಳೆಯಿಸಿಕೊಳ್ಳುವರೆಂದು ನಂಬಲಿಕ್ಕೆ ಆಧಾರವಿದೆ.

ಸರಕಾರದವರು ಇಂಗ್ಲಿಷ ಶಾಲೆಗಳನ್ನೂ ಕಾಲೇಜುಗ ಳನ್ನೂ ಇಟ್ಟು, ಪ್ರಾಥಮಿಕಶಾಲೆಗಳಿಗೂ ಇಂಗ್ಲಿಷ ಶಾಲೆಗಳಿಗೂ ಹಣದ ಸಹಾಯವನ್ನು ಮಾಡಿ, ಲೋಕಶಿಕ್ಷಣದ ಕೆಲಸವನ್ನು ಸಾಗಿ ಸುತ್ತಿರುವರು. ಸರಕಾರದ ಎಲ್ಲತರದ ಹೊಸ ಕಟ್ಟಡಗಳನ್ನು ಕಟ್ಟ ಲಿಕ್ಕೂ, ಇದ್ದ ಕಟ್ಟಡಗಳನ್ನು ದುರಸ್ತ ಮಾಡಲಿಕ್ಕೂ ಸಾರ್ವಜನಿಕ ಮಾರ್ಗಗಳನ್ನು ಮಾಡಲಿಕ್ಕೂ ಪಬ್ಲಿಕ್ ವರ್ಕ್ಸ ಖಾತೆ ಎಂಬ ಖಾತೆಯ ನ್ನು ಏರ್ಪಡಿಸಿ, ವ್ಯಾಪಾರಕ್ಕೂ ಜನರಿಗೂ ಅನುಕೂಲ ಮಾಡಿಕೊಟ್ಟ ರುತ್ತಾರೆ. ಇದಲ್ಲದೆ ಟಪಾಲ, ತಂತೀಟಪಾಲಗಳ ಖಾತೆಗಳನ್ನು ನಿರ್ಮಿ

ಸಿರುವರು. ಈ ಕಚೆಯು ಎರಡು ಖಾತೆಗಳಿಂದ ಜನರಿಗೆ ಬಹಳ ಉಪಯೋಗವಾಗುವದಲ್ಲದೆ ಸರಕಾರಕ್ಕೆ ಉತ್ಪನ್ನವೂ ಆಗುವದು. ಜನರಿಗೆ ರೋಗಗಳು ತಟ್ಟಿದರೆ ಯೋಗ್ಯ ಚಿಕಿತ್ಸೆಯೂ, ಔಷಧೋಪಚಾರಗಳೂ ಆಗುವಂತೆ ಜಿಲ್ಲೆಯ ಮುಖ್ಯಸ್ಥಳದಲ್ಲಿ ಒಂದು ಆಸ್ಪತ್ರೆಯನ್ನೂ ಮಿಕ್ಕ ದೊಡ್ಡ ಊರುಗಳಲ್ಲಿ ಒಂದೊಂದು ಔಷಧಾಲಯವನ್ನೂ ಇಟ್ಟಿರುವರು. ಈ ದೇಶದಲ್ಲಿ ಮೈಲಿಯು ಉಪದ್ರವು ಕಡಿಮೆಯಾಗಬೇಕೆಂದು ಮೈಲೀ ತೆಗೆಯುವ ಅಧಿಕಾರಸ್ಥರನ್ನು ನಿಯಮಿಸಿರುವರು. ಹುಚ್ಚರನ್ನು ಇಟ್ಟು ಅವರಿಗೆ ಔಷಧೋಪಚಾರಗಳನ್ನು ಮಾಡುವ ಒಂದು ಆಸ್ಪತ್ರೆಯೂ ಧಾರವಾಡದಲ್ಲಿ ಉಂಟು.

೧೧ನೇ ಪ್ರಕರಣ.

ರಾಜಕೀಯ ವಿಭಾಗಗಳು.

ಧಾರವಾಡ ಜಿಲ್ಲೆಯಲ್ಲಿ ೧೧ ತಾಲೂಕಗಳಿವೆ. ಮುಂದಿನ ಕೊಷ್ಟಕದಲ್ಲಿ ಅವುಗಳ ಹೆಸರು, ಕ್ಷೇತ್ರ, ಜನಸಂಖ್ಯೆ, ಆದಾಯ ಮೊದಲಾದ ಸಂಗತಿಗಳನ್ನು ಕೊಟ್ಟಿರುತ್ತೇವೆ. ಇವುಗಳಲ್ಲಿ ಗದಗ ನವಲಗುಂದ ತಾಲೂಕುಗಳು ವಿಸ್ತಾರದಿಂದ ಮಿಕ್ಕ ತಾಲೂಕುಗಳಿಗಿಂತ ಬಹಳ ದೊಡ್ಡವಿರುವವೆಂಬದು ಸ್ಪಷ್ಟವದೆ. ಆದ್ದರಿಂದ ಅವುಗಳಲ್ಲಿ ಮುಂಡರಗಿ ಪೇಠಾ, ನರಗುಂದ ಪೇಠಾ ಎಂಬ ಉಪಭಾಗಗಳನ್ನು ಮಾಡಿರುವರು. ತಾಲೂಕಗಳಿಗೆ ಮಾಮಲೇದಾರರಿರುವಂತೆ "ಪೇಠೆಗಳಿಗೆ" ಮಹಾಲಕರಿ ಎಂಬ ಅಧಿಕಾರಸ್ಥರು ಇರುವರು. ಇವರಿಗೆ ಖಜೀನೆಯ ಕೆಲಸವು ಬೀಳುವದಿಲ್ಲ. ಆದರೆ ಮಾಮಲೇದಾರರಂತೆ ಇವರಿಗಾದರೂ ಸಾಮಾನ್ಯವಾಗಿ ಮುಲಕೀ ಫೌಜದಾರೀ ಅಧಿಕಾರಗಳಿರುತ್ತವೆ.

ಧಾರವಾಡ ಜಿಲ್ಲೆಯಲ್ಲಿ ದೇಶೀಯ ಸಂಸ್ಥಾನಿಕರ ಸಂಸ್ಥಾನಗಳೂ ಕೆಲವಿರುತ್ತವೆ. ಇವುಗಳಲ್ಲಿ ಗದಗ, ಹುಬ್ಬಳ್ಳಿ, ಬಂಕಾಪುರ, ಕಲ್ಗಿ ತಾಲೂಕುಗಳ ಮಧ್ಯದಲ್ಲಿ ಹಬ್ಬಿರುವ ಪ್ರಾಂತವು ಜಮಖಂಡಿ ಸಂಸ್ಥಾನಕ್ಕೆ ಸೇರಿರುವದು. ಬಂಕಾಪುರದ ಸವಿಾಪದಲ್ಲಿ ಸವಣೂರ ಸಂಸ್ಥಾನವು ಇರುವದು. ಇದು ಬಹಳ ಸಣ್ಣದಿರುತ್ತದೆ. ಈ ಜಿಲ್ಲೆಯ ಕಲೆಕ್ಟರನು ಇದರ "ಪೋಲಿಟಿಕಲ್ ಏಜಂಟನಿರುವನು."

ಧಾರವಾಡ ಜಿಲ್ಲೆಯ ಭೂಗೋಲಕ್ಕೆ ಸೇರಿದ ಕೆಲವು ಸಂಗತಿಗಳ ಪಟ್ಟಿ

ತಾಲೂಕ ಪಾಗೂ ಅದರ ಕ್ಷೇತ್ರ ಚೌ. ಮೈಲು.	ಸಾಗಭೂಮಿಯ ಪ್ರಮಾಣ ಶೇಕಡಾ ಅಡವಿ.	ನೀರಿನ ಪೂರೈಕೆ ಇದ್ದ ಭೂಮಿ ಗೂ ನೀರು ಸಿಗದ ಭೂಮಿ ಗೂ ಪ್ರ.	ಜನಸಂಖ್ಯೆ.	ಚೌ. ಮೈಲಿಗೆ ಜನಸಂಖ್ಯೆ.	ಭೂಮಿಯ ಆದಾಯ ಮಾತ್ರ ರೂಪಾಯಿಗಳಲ್ಲಿ	ಎಲ್ಲ ಬಾಬುಗಳಿಂದ ಆದಾಯ ರೂಪಾಯಿಗಳಲ್ಲಿ
ಗದಗು. ೬೯೯	೮೮ + ೯	೬೭೦	೧೩೭೫೫೩	೧೯೯	೨೬೯೨೭೨	೪೭೬೭೩೨
ನವಲಗುಂದ. ೫೬೫	೯೬ + ೦	೬೦೦೦	೯೪೭೦೯	೧೬೮	೩೬೩೭೦೭	೪೨೭೦೧೮
ಕಲ್ಪಿಗಿ. ೪೪೧	೮೫ + ೩೦	೭೫	೧೦೪೩೪೪೭	೨೩೭	೨೦೬೮೭೮೮	೩೦೦೪೪೮
ರೋಣ. ೪೩೨	೮೨ + ೦	೪೦೦	೧೦೩೨೯೯೮	೨೩೯	೧೮೫೮೭೮೨	೭೫೧೦೩೧
ಧಾರವಾಡ. ೪೩೦	೮೨ + ೧೨	೪೦೦	೧೨೬೭೯೭	೨೯೫	೨೭೭೦೯೦	೧೦೯೦೬೭೭೦
ರಾಣೆಬೆನ್ನೂರು ೪೦೫	೭೬ + ೦	೧೭೫	೧೦೪೨೭೭೪	೨೫೭	೧೭೯೦೦೪	೨೬೧೦೫೭
ಕೋಡ. ೪೦೦	೭೮ + ೧೦	೯೮	೯೬೨೪೫೫	೭೪೧	೨೦೪೧೬೨	೨೬೮೯೪೨
ಬಂಕಾಪುರ. ೭೪೪	೮೫ + ೯	೬೦೦	೯೦೭೬೧	೨೬೭	೨೦೭೫೮೮೭	೨೫೭೭೮೨೦
ಹುಬ್ಬಳ್ಳಿ. ೭೧೧	೯೭ + ೧	೮೫೫	೧೨೪೨೫೮೮	೪೦೧	೨೬೨೬೨೨	೪೫೫೧೮೦
ಹಾನಗಲ್ಲ. ೭೦೦	೭೯ + ೯	೮೮	೭೭೭೮೪೪	೨೬೦	೧೯೮೪೭೪೧	೨೬೮೯೭೬
ಕಲಘಟಗಿ. ೨೭೫	೬೫ + ೩೦	೭೦೦	೫೭೬೫೭	೧೯೫	೧೨೬೭೯೪	೧೬೭೬೦೦

ಧಾರವಾಡಜಿಲ್ಲೆ:-೪೬೦೨ ಚೌ.ಮೈ. ಪಟ್ಟಣಗಳು ೧೬ ಹಳ್ಳಿಗಳು ೧೨೪೬. ಜನಸಂಖ್ಯೆ ೧೧,೧೭,೨೯೪ ಚೌ.ಮೈ. ಹಳ್ಳಿ. ೯೯೭

೧೨ನೇ ಪ್ರಕರಣ.

ಮಹತ್ವವುಳ್ಳ ಊರುಗಳು. *

ಅಣಿಗೇರಿ:—(೭೧೬೨) ಉ. ೧೫° ೨೫′ ಪೂ. ೯೫° ೨೬′. ಇದು ನವಲಗುಂದ ತಾಲೂಕಿನಲ್ಲಿ ಹುಬ್ಬಳ್ಳಿಯಿಂದ ಗದಗಿಗೆ ಹೋಗುವ ಲೈನವರ್ದಲ್ಲಿರುವದು. ಜೋಳ, ಗೋದಿ, ಎಣ್ಣೆಯಕಾಳುಗಳು, ಹತ್ತಿ ಮೊದಲಾದವುಗಳ ವ್ಯಾಪಾರಕ್ಕೆ ಹೆಸರಾದದ್ದು. ಇಲ್ಲಿ ಅಮೃತೇಶ್ವರನ ದೇವಾಲಯವಿರುವದು. ಊರ ನಡುವೆ ೭೬ ಕಂಬಗಳುಳ್ಳ ಭವ್ಯವಾದ ಕರೇಕಲ್ಲಿನ ಇದರ ಕಟ್ಟಡವು ಬಹು ಚಂದವಾಗಿರುವದು. ಇದನ್ನು ಜಕಣಾಚಾರ್ಯರು ಕಟ್ಟಿಸಿದರೆಂದು ಹೇಳುತ್ತಾರೆ. ಈ ದೇವಾಲಯದಲ್ಲಿದ್ದ ಆರು ಶಿಲಾಲೇಖಗಳು ೧೧೫೭ರಿಂದ ೧೨೦೬ರ ವರೆಗಿನ ಕಾಲಗಿವಿರುತ್ತವೆ. ಈ ಊರು ೧೧೮೧ರಲ್ಲಿ ಬಿಜ್ಜಳನ ರಾಜಧಾನಿಯಾಗಿತ್ತು.

ಬಂಕಾಪುರ:—(೭೩೭೦) ಉ. ೧೪° ೫೫′ ಪೂ. ೭೫° ೧೬′. ತಾಲೂಕಿನ ಮುಖ್ಯಸ್ಥಳ. ಇಲ್ಲಿ ಹಾಳುಬಿದ್ದ ಒಂದು ಕೋಟೆಯೂ ಎರಡು ದೇವಾಲಯಗಳೂ ಇರುವವು. ಇವುಗಳಲ್ಲಿ ಒಂದು ಜೈನಬಸ್ತಿಯೂ, ಮತ್ತೊಂದು ಶಿವನ ಆಲಯವೂ ಇವೆ. ಬಂಕಾಪುರದ ಕೋಟೆಯು ಪೂರ್ವದಲ್ಲಿ ಕರ್ನಾಟಕದಲ್ಲಿ ಬಹು ಭದ್ರವಾದದ್ದೆಂದೆನಿಸಿಕೊಂಡಿತ್ತು. ೮೯೫ನೇ ಇಸ್ವಿಯಲ್ಲಿ ಬರೆದಂಥ ಕೊಲ್ಲಾಪುರದಲ್ಲಿದ್ದಂಥ ಒಂದು ಜೈನ ಗ್ರಂಥದಲ್ಲಿ ಬಂಕಾಪುರದ ಉಲ್ಲೇಖವದೆ. ಅದರಿಂದ ರಾಷ್ಟ್ರಕೂಟ ಅರಸನಾದ ಅಮೋಘವರ್ಷ ಅರಸನ (೮೫೧-೯೭) ಮಾಂಡಲಿಕನಾದ ಚೆಲ್ಲಕೇತನ ಬಂಕೆಯ್ಯರಸನಿಂದ ಈ ಊರಿಗೆ ಬಂಕಾಪುರವೆಂಬ ಹೆಸರು ಉಂಟಾಯಿತೆಂದು ತಿಳಿಯುತ್ತದೆ. ೧೦೭೧ರಲ್ಲಿ ಗಂಗವಂಶದ ಉದಯಾದಿತ್ಯ

---

* ಈ ಪ್ರಕರಣದಲ್ಲಿ ಹೇಳಿದ ಊರುಗಳ ವಿವರಣೆಯಲ್ಲಿ ಕಂಸದಲ್ಲಿದ್ದ ಸಂಖ್ಯೆ ಆ ಆ ಊರ ಜನಸಂಖ್ಯೆಯೆಂದೂ, ಉ. ಎಂದರೆ ಉತ್ತರ ಅಕ್ಷಾಂಶವೆಂದೂ, ಪೂ. ಎಂದರೆ ಪೂರ್ವ ರೇಖಾಂಶವೆಂತಲೂ ತಿಳಿಯಬೇಕು. ಅಕ್ಷಾಂಶ ರೇಖಾಂಶಗಳನ್ನು ತೋರಿಸುವ ಅಂಕೆಗಳಲ್ಲಿ ಅಂಕೆಗಳ ಮೇಲ್ಗಡೆಯಲ್ಲಿದ್ದ ° ಎಂಬ ಗುರುತು ಅಂಶಗಳನ್ನೂ, ′ ಎಂಬ ಗುರುತು ಮಿನೀಟುಗಳನ್ನೂ ಅಂದರೆ ಅಂಶೆದ ೬೦ ನೆಯ ಭಾಗಗಳನ್ನೂ ತೋರಿಸುತ್ತದೆಂತಲೂ ತಿಳಿಯಬೇಕು.

ನೆಂಬ ಅರಸು ಈ ಊರಲ್ಲಿ ಆಳುತ್ತಿದ್ದನು. ೧೪೦೬ರಲ್ಲಿ ಈ ಊರಿಗೆ ಸವ ಣೂರ ನವಾಬನ ಪೂರ್ವಜನೂ ಬಾಹಮನಿ ಸುಲ್ತಾನನೂ ಆದ ಫಿರೋಜ ಶಹಾ ಎಂಬವನು ಮುತ್ತಿಗೆ ಹಾಕಿದನೆಂದು ತಿಳಿಯುತ್ತದೆ. ೧೬೨೬ರಲ್ಲಿ ಇದು ಹೈದರಲ್ಲಿಯ ವಶಕ್ಕೆ ಬಂತು. ಮಹಾರಾಷ್ಟ್ರರ ಕಾಗದಪತ್ರಗಳ ಮೇಲಿಂದ ಈ ಊರು ೧೭೯೦ರಲ್ಲಿ ೧೬ ಪರಗಣೆಗಳುಳ್ಳ ಸರಕಾರದ ಮುಖ್ಯಸ್ಥಳ ವಾಗಿತ್ತೆಂದು ಕಂಡುಬರುತ್ತದೆ. ೧೮೦೨ರಲ್ಲಿ ಈ ಊರು ಪೇಶ್ವೆಯವರಿಂದ ವಸಯಿಯ ಒಪ್ಪಂದದ ಮೇರೆಗೆ ಬ್ರಿಟಿಶ ರಾಜ್ಯಕ್ಕೆ ಸೇರಿಸಲ್ಪಟ್ಟಿತು. ಈ ಊರಲ್ಲಿ ರಂಗಸ್ವಾಮಿಯ ದೇವಾಲಯವೆಂಬದೊಂದು ಸುಂದರವಾದ ಜೈನ ದೇವಾಲಯವಿದ್ದು, ಅದರಲ್ಲಿ ಹಲವು ಶಿಲಾಲೇಖಗಳಿವೆ.

ಬ್ಯಾಡಿಗಿ:—(೧೪೫೯) ಉ. ೧೪° ೪೭' ಪೂ. ೭೫° ೫೦'. ಇದು ವ್ಯಾಪಾರದ ಬಗ್ಗೆ ಪ್ರಸಿದ್ಧವಾಗಿರುವದು. ಇದರ ಬಗ್ಗೆ ಹಿಂದೆ ಬರೆದಿದ್ದೇವೆ.

ಧಾರವಾಡ:—(೨೧೩೬೯) ಉ. ೧೫° ೨೭' ಪೂ. ೭೫° ೧'. ಸಮುದ್ರದ ಪಾತಳಿಯಿಂದ ಎತ್ತರ ೨೫೪೦ ಫೂಟು. ಇದರ ಸ್ಥಾನಮಹಾತ್ಮ್ಯದ ಬಗ್ಗೆಯೂ ವ್ಯಾಪಾರದ ಬಗ್ಗೆಯೂ ಮಾರ್ಗಗಳ ಅನುಕೂಲತೆಯ ಬಗ್ಗೆಯೂ ಹಿಂದೆ ಬರೆದದ್ದನ್ನು ನೋಡಿರಿ. ಇಲ್ಲಿಯ ತುರಂಗದಲ್ಲಿ ಮೇಲ್ಮರದ ಜಮಖಾನೆಗಳೂ, ಸೂಸಿಗಳೂ, ಕಟ್ಟಿಗೆಯ ಹಾಗು ಬೆತ್ತದ ಸಾಮಾನು ಗಳೂ ಆಗುತ್ತವೆ. ಇವುಗಳನ್ನು ಅಲ್ಲಿರುವ ಸೆರೆಯಾಳುಗಳೇ ಮಾಡು ವರು. ಈ ಪಟ್ಟಣವು ಜಿಲ್ಲೆಯ ಮುಖ್ಯಸ್ಥಳವಾಗಲಿಕ್ಕೆ ಇದರ ಹವೆಯು ಒಂದು ಕಾರಣವಾಗಿದೆ. ಬೇಸಿಗೆಯಲ್ಲಿ ಪರಮಾವಧಿ ಶಕೆಯು ೧೦೦° ಇರು ವದು. ಚಳಿಗಾಲದಲ್ಲಿ ಬಹುಕಡಿಮೆಯಾದರೆ ೬೪. ಆದ್ದರಿಂದ ಇಲ್ಲಿ ಬೇಸಿ ಗೆಯೂ ಚಳಿಗಾಲವೂ ದುಃಸಹವಾಗುವದಿಲ್ಲ. ಹವೆಯಲ್ಲಿ ತೈತ್ಯವು ತುಸುಹೆಚ್ಚು. ಒಟ್ಟಿಗೆ ಆರೋಗ್ಯವಾದದ್ದು; ಬೆಳಗಾವಿಯ ಹವೆಗಿಂತ ಲೇಸಾದದ್ದು. ಪಟಕೀಜ್ವರವು ಕ್ವಚಿತ್ತಾಗಿ ಬಂದರೂ ಉಗ್ರಸ್ವರೂಪ ವಿರುವದಿಲ್ಲ. ಮಳೆಯ ಆರಂಭದಲ್ಲಿ ಜ್ವರದ ಬಾಧೆಯು ಬಹಳ; ಆದರೂ ಇಲ್ಲಿಯ ಮರಣದ ಪ್ರಮಾಣವು ಬೆಳಗಾವಿ-ವಿಜಾಪೂರ-ಕಾರವಾರಗಳಿ ಗಿಂತ ಕಡಿಮೆ ಇರುತ್ತವೆ. ಹಿಂದಕ್ಕೆ ಈ ಊರು ಹೊಲಸಿನಿಂದ ತುಂಬಿ ತ್ತು. ಆದರೆ ೧೮೫೬ರಲ್ಲಿ ಮ್ಯುನಿಸಿಪಾಲಿಟಿಯಾದಂದಿನಿಂದ ಕೆಲಮಟ್ಟಿಗೆ

ಸ್ವಚ್ಛತೆಯುಂಟಾಗಿದೆ. ಬಾವಿಗಳು ಆಳ; ಸವಿ ನೀರು ಕಡಿಮೆ. ಇತ್ತ ಲಾಗಿ ಬಳಿಯಲ್ಲಿರುವ ಕೆಲಗೇರಿಯ ಕೆರೆಯನ್ನು ಕಡಿಸಿ ಊರೊಳಗೆ ನಳ ಗಳನ್ನು ಹಾಕಿರುವರು. ಇಲ್ಲಿ ೧ ಟ್ರೇನಿಂಗಕಾಲೇಜವೂ ೩ ಹೈಸ್ಕೂಲ ಗಳೂ, ೧ ಹೆಣ್ಣುಮಕ್ಕಳ ಕಾಲೇಜವೂ ಅನೇಕ ಪ್ರಾಥಮಿಕ ಶಾಲೆ ಗಳೂ ಇವೆ. ಊರಿನ ಪಶ್ಚಿಮ ಹಾಗು ವಾಯವ್ಯ ದಿಕ್ಕುಗಳ ಕಡೆಗ ಯುರೋಪಿಯನರು ವಾಸಿಸುವ ಬಂಗಲೆಗಳು ಇರುವವು. ಇಲ್ಲಿರುವ ಸದರ್ನ ಮರಾಠಾ ರೇಲ್ವೆ ಕಂಪನಿಯವರ ಹೆಡ್‌ಆಫೀಸಿನ ದೊಡ್ಡ ಕಟ್ಟಡವು ನೋಡತಕ್ಕದ್ದಾಗಿದೆ. ಇದನ್ನು ಕಟ್ಟಿಸಲಿಕ್ಕೆ ೭೫ ಲಕ್ಷ ರೂಪಾಯಿ ವೆಚ್ಚವಾಗಿರುವದು. ಆದರೆ ಇತ್ತಲಾಗಿ ರೇಲ್ವೆಯವರ ಮುಖ್ಯ ಆಫೀಸು ಗಳು ಇಲ್ಲಿಂದ ಮದ್ರಾಸಕ್ಕೆ ಹೋದ್ದರಿಂದ ಈ ಭವ್ಯವಾದ ಇಮಾರತು ಖಾಲಿಬಿಟ್ಟಿದೆ. ಊರಲ್ಲಿರುವ ಸಂಸ್ಕೃತ ಪಾಠಶಾಲೆಯ ಳ ಅಂತಸ್ತಿನ ಮಂದಿರವು ಚಂದವಾಗಿದೆ. ಊರಿಗೆ ಸಮೀಪವಾಗಿ ಕರ್ನಾಟಕ ವಿದ್ಯಾ ವರ್ಧಕ ಸಂಘದ ಜಗದ್ಗುರುರಾಜಮಂದಿರವೂ, ಲಿಂಗಾಯತರ ಸಂಸ್ಕೃತ ಶಾಲೆಯ ಚಂದವಾದ ಕಟ್ಟಡವೂ ಕಟ್ಟುತ್ತಲಿವೆ.

ಧಾರವಾಡದ ಊರಿಗೆ ಉತ್ತರದಲ್ಲಿ ಮಾರ್ಕೆಟಿಗೆ ನೆರೆಯಲ್ಲಿ ಒಂದು ಕೋಟೆಯುಂಟು. ಸದ್ಯಕ್ಕೆ ಇದು ಹಾಳು ಬಿದ್ದದೆ. ಇದರಿಂದ ಬಂಕಾಪುರ, ಅಣ್ಣಿಗೇರಿ, ಹಾನಗಲ್ಲ ಮೊದಲಾದ ಊರುಗಳಂತೆ ಧಾರವಾಡವಾದರೂ ಈ ಪ್ರಾಂತದ ಇತಿಹಾಸದಲ್ಲಿ ಹೆಸರಾದದ್ದೆಂದು ತೋರುವಂತಿದೆ. ಆದರೆ ಇದು ಅವುಗಳಷ್ಟು ಪೂರ್ವಕಾಲದ್ದಲ್ಲ. ಧಾರವಾಡದ ಕೋಟೆಯು ೧೪೦೩ ರಲ್ಲಿ ವಿಜಯನಗರದ ಅರಸರ ಕಾಲದಲ್ಲಿ ಜಂಗಲ ಖಾತೆಗೆ ಸೇರಿದ ಧಾರರಾವ ಎಂಬ ಅಧಿಕಾರಿಯಿಂದ ಕಟ್ಟಲ್ಪಟ್ಟಿತೆಂದು ಹೇಳುತ್ತಾರೆ. ಅದರ ಪೂರ್ವ ದಲ್ಲಿ ಧಾರವಾಡದ ಗ್ರಾಮವಿದ್ದಂತೆ ತೋರುವದಿಲ್ಲ. ವಿಜಾಪುರದ ಸುಲ್ತಾ ನನಾದ ಅಲ್ಲೀ ಅದೀಲಶಹನು ೧೫೭೩ ರಲ್ಲಿ ಈ ಊರ ಮೇಲೆ ದಂಡೆತ್ತಿ ಬಂದ ಬಗ್ಗೆ ಇದ್ದ ಲೇಖವೇ ಈ ಪಟ್ಟಣದ ಅತಿ ಪೂರ್ವದ ನಿಶ್ಚಿತಾತ್ಮಕ ವಾದ ಲೇಖವಾಗಿದೆ. ಆಗ ಈ ಊರಲ್ಲಿ ಹೆಸರಿಗೆ ವಿಜಯನಗರದ ಅರಸನ ಒಬ್ಬ ಅಧಿಕಾರಿಯು ಇದ್ದಾಗ್ಯೂ ಅವನು ಸ್ವತಂತ್ರನಾಗಿದ್ದನು. ಈ ಮುತ್ತಿ ಗೆಯು ಆರು ತಿಂಗಳು ನಡೆಯಿತು. ತರುವಾಯ ಈ ಊರೂ ಅದನ ನೆರೆ ಯ ಪ್ರದೇಶವೂ ವಿಜಾಪುರದ ರಾಜ್ಯಕ್ಕೆ ಸೇರಿದವು. ೧೬೮೫ ರಲ್ಲಿ ಈ ಊರ

ಕೋಟೆಯು ಅವರಂಗಜೇಬನಿಂದ ಹಿಡಿಯಲ್ಪಟ್ಟಿತು; ಮತ್ತು ಮುಂದೆ ೧೭೫೫ ರಲ್ಲಿ ಅದು ಮಹಾರಾಷ್ಟ್ರರ ಕೈಸೇರಿತು. ೧೭೭೮ ರಲ್ಲಿ ಧಾರವಾಡವನ್ನು ಮಹಾರಾಷ್ಟ್ರರಿಂದ ಹೈದರಲ್ಲಿಯು ತೆಗೆದುಕೊಂಡನು. ೧೭೯೧ ರಲ್ಲಿ ಇದನ್ನು ಮಹಾರಾಷ್ಟ್ರ ಸರದಾರನಾದ ಪರಶುರಾಮಬಾವ್ಗೂನ ಸಹಾಯಕ್ಕೋಸ್ಕರ ಬಂದ ಬ್ರಿಟಿಶ್ ಸೈನ್ಯದವರು ತಕ್ಕೊಂಡರು. ಕಡೆಗೆ ೧೮೧೮ ರಲ್ಲಿ ಪೇಶ್ವೆಯವರ ಪರಾಭವವಾಗಲು, ಅವರ ಬೇರೆ ರಾಜ್ಯದ ಕೂಡ ಧಾರವಾಡವೂ ಬ್ರಿಟಿಶರ ವಶಕ್ಕೆ ಬಂತು. ಧಾರವಾಡದ ಕೋಟೆಯು ಬಳ್ಳೇ ಭದ್ರವಾದ ಕೋಟೆಯೆಂದು ಎಣಿಸಲ್ಪಡುತ್ತದೆ. ಇದು ೧೮೫೭ ರ ವರೆಗೆ ಚಲೋ ಸ್ಥಿತಿಯಲ್ಲಿತ್ತು. ಆದರೆ ಇತ್ತಲಾಗಿ ಈ ಜಿಲ್ಲೆಯೊಳಗಿನ ಬೇರೆ ಕೋಟೆಗಳಂತೆ ಇದೂ ಕೆಡವಲ್ಪಟ್ಟು, ಈಗ ಹಾಳಾಗುತ್ತ ಇದೆ. ಅದು ಹೊರ್ತಾಗಿ ಇಲ್ಲಿ ಭವ್ಯವಾದ ಪುರಾತನಕಾಲದ ಇಮಾರತುಗಳಾಗಲಿ ಗುಡಿಗಳಾಗಲಿ ಶಿಲಾಲೇಖಗಳಾಗಲಿ ತಾಮ್ರಪಟಗಳಾಗಲಿ ಇರುವದಿಲ್ಲ. ಊರಿಂದ ೩೫ ಮೈಲಿನಲ್ಲಿರುವ ಸೋಮೇಶ್ವರನ ಗುಡಿಯ ಸ್ಥಲಪುರಾಣದಲ್ಲಿ ನವಲೂರ ಮೊದಲಾದ ಗ್ರಾಮಗಳ ಹೆಸರುಗಳಿವೆ; ಧಾರವಾಡದ್ದಿಲ್ಲ. ಸೋಮೇಶ್ವರದ ನೆರೆಯಲ್ಲಿ ತಾಲ್ಮಲಾ ನದಿಯು ಉಗಮವಿದೆ. ಇದು ಇಲ್ಲಿ ಗುಪ್ತಗಾಮಿನಿಯಾಗಿದೆಯಂತೆ. ಧಾರವಾಡದ ಆಗ್ನೇಯಕ್ಕೆ ೧೩ ಮೈಲಿನ ಮೇಲೆ ಮೈಲಾರಲಿಂಗನ ದೇವಾಲಯವೂ ಪಶ್ಚಿಮಕ್ಕೆ ಉಳವಿ ಬಸವಪ್ಪನ ದೇವಾಲಯವೂ ಗುಡ್ಡಗಳ ಮೇಲೆ ಇವೆ. ಮೈಲಾರಲಿಂಗನ ಗುಡಿಯು ಕಲ್ಲಿನಿಂದ ಜೈನ ಪದ್ಧತಿಯಂತೆ ಕಟ್ಟಿದ ಸಣ್ಣ ಗುಡಿ ಇದ್ದು, ಅದರ ಒಂದು ಕಂಬದ ಮೇಲೆ ಪರ್ಶಿಯನ್ ಭಾಷೆಯ ಲೇಖವುಂಟು. ಅದರಲ್ಲಿ ೧೬೨೦ ರಲ್ಲಿ ಈ ದೇವಾಲಯವನ್ನು ವಿಜಾಪುರದ ಸುಲ್ತಾನನ ಪ್ರತಿನಿಧಿಯು ಮಸೀದಿಯಾಗಿ ಮಾಡಿದನೆಂದು ಬರೆದಿದೆ. ಊರ ಉತ್ತರದಲ್ಲಿ ೧೮೨೪ ರಲ್ಲಿ ಕಿತ್ತೂರ ಬಂಡಾಯದಲ್ಲಿ ಕೊಲ್ಲಲ್ಪಟ್ಟ ಕಲೆಕ್ಟರರಾದ ಮಿಸ್ತರ ಥ್ಯಾಕರೆ ಇವರ, ಮತ್ತು ಸಬ್ ಕಲೆಕ್ಟರರಾದ ಮಿಸ್ತರ ಮುನ್ರೋ ಇವರ ಗೋರಿಯೂ ನೆನಪಿನ ಕಂಬವೂ ಉಂಟು.

ಗದಗ:—(೫೦೬೫೨) ಉ. ೧೫°-೨೫' ಪೂ. ೭೫°-೩೮'. ಇದು ತಾಲೂಕಿನ ಮುಖ್ಯ ಸ್ಥಳವಾಗಿದ್ದು, ಕರೇ ಭೂಮಿಯು ಬೆಳೆಯುಳ್ಳ ಪ್ರದೇಶದಲ್ಲಿದೆ. ಇದರ ಮಾರ್ಗಗಳ ಅನುಕೂಲತೆಯ ಬಗ್ಗೆಯೂ ವ್ಯಾಪಾರದ ಬಗ್ಗೆಯೂ ಕೈಗಾರಿಕೆಯ ಬಗ್ಗೆಯೂ ಆ ಆ ಪ್ರಕರಣಗಳಲ್ಲಿ ನೋಡಿರಿ. ಇಲ್ಲಿ ಒಂದು

ನೇಯ್ಯುವ ಯಂತ್ರವೂ, ಕಬ್ಬಿಣವನ್ನು ಬಡಿಸುವ ಯಂತ್ರಗಳೂ ಇವೆ
ಧಾರವಾಡ ಜಿಲ್ಲೆಯಲ್ಲಿ ಕೆತ್ತಿಗೆಯ ಕೆಲಸಕ್ಕೆ ಹೆಸರಾದ ದೇವಾಲಯಗಳ
ಗದಗಿನಲ್ಲಿವೆ. ಇವುಗಳಲ್ಲಿ ಸರಸ್ವತಿಯ ಗುಡಿಯ ಕೆತ್ತಿಗೆಯ ಕೆಲಸವ
ಸುಂದರವಿರುವದು. ಮಾರ್ಕೆಟಿನಲ್ಲಿರುವ ವೀರನಾರಾಯಣನ ಗುಡಿಯ
ಈ ದೇವರ ಭಕ್ತನಾದ ಕುಮಾರವ್ಯಾಸಕವಿಯ ಕಾವ್ಯದಿಂದ ಕನ್ನಡ
ವಾಙ್ಮಯದಲ್ಲಿ ಹೆಸರಾಗಿದೆ.

ಗುಡ್ಡಗುಡ್ಡಾಪುರ:—(೯೪೭) ಉ. ೧೪ ಳಂ ಪೂ. ೭೫ ೫೫. ಇಲ್ಲಿ
ಕ್ಕೆ ದೇವರಗುಡ್ಡವೆಂತಲೂ ಹೆಸರುಂಟು. ಇದು ರಾಣೇಬಿನ್ನೂರ ತಾಲೂ
ಕಿನಲ್ಲಿ ರಾಣೇಬಿನ್ನೂರ ಊರಿಗೆ ೮ ಮೈಲು ಉತ್ತರದಲ್ಲಿ, ಅದರ ಹೆ
ರಿನಿಂದ ಸೂಚಿತವಾಗುವಂಥ ಗುಡ್ಡದಮೇಲೆ ಕಟ್ಟಿದ ಒಂದು ಹಳ್ಳಿಯು
ಇಲ್ಲಿ ಅಕ್ಟೋಬರ ತಿಂಗಳಲ್ಲಿ ದೊಡ್ಡ ಜಾತ್ರೆಯಾಗುವದು. ಈ ಜಾತ್ರೆ
ಗೆ ಸುತ್ತಲಿನ ಪ್ರಾಂತಗಳಿಂದ ಸುಮಾರು ೧೦,೦೦೦ ಜನರು ಬರುವರು
ಇಲ್ಲಿ ಕರೇಕಲ್ಲಿನಿಂದ ಕಟ್ಟಿದ ಮೈಲಾರ, ಇಲ್ಲವೆ ಮಲ್ಲಾರಿಯ ಗುಡಿ
ಯುಂಟು. ಈ ಮಲ್ಲಾರಿಯ ಬಗ್ಗೆ ಜನರು ಹೇಳುವ ಕಥೆಯು ಏನೆ
ನರೆ:—ಪ್ರಾಚೀನಕಾಲದಲ್ಲಿ ಈ ಹಳ್ಳಿಯ ಪಟ್ಟನೆರೆಯಲ್ಲಿ ಮಲ್ಲನೆಂಬ ಒಬ್ಬ
ರಾಕ್ಷಸನು ಜನರನ್ನು ಪೀಡಿಸುತ್ತಿದ್ದನು. ಆಗ ಶಿವನು, ಅಥವ
ಮಲ್ಲಾರಿಯು ಭೈರವರೂಪವನ್ನು ತಾಳಿ, ೧೫ ಫೂಟು ಉದ್ದವಾದ
ಬಿಲ್ಲಿನಿಂದ ಆ ಮಲ್ಲನೆಂಬ ರಾಕ್ಷಸನನ್ನು ಕೊಂದನು. ಮಲ್ಲಾರಿಯ
ಬೇಟೆಯ ನಾಯಿಗಳೊಡನೆ ದಿನಾಲು ಬೇಟೆಯಾಡಲಿಕ್ಕೆ ಹೋಗುತ್ತಿ
ದ್ದನು. ಮಲ್ಲಾರಿಯ ಸ್ಥಾಪನೆಯು ದೇವರಗುಡ್ಡದ ಗುಡಿಯಲ್ಲಿ ಭೈರ
ವನರೂಪದಿಂದ ಆದಬಳಿಕ, ಆ ನಾಯಿಗಳು ಮನುಷ್ಯರ ರೂಪವನು
ತಾಳಿ ಗೊರವರು, ಅಥವಾ "ವಾಗ್ಯಾರು" ಎಂಬ ಹೆಸರಿನಿಂ
ಈ ದೇವರ ಸೇವೆಯನ್ನು ಮಾಡಲಾರಂಭಿಸಿದವು. ಇಲ್ಲಿ ಇವರ ೬೦
ಕುಲಗಳುಂಟು. ಜಾತ್ರೆಯು ದಸರೆಯ ಹಿಂದಿನ ದಿವಸ ಆರಂಭವಾಗಿ
ಎರಡು ದಿವಸಗಳವರೆಗೆ ನಡೆಯುತ್ತದೆ. ಆ ಕಾಲದಲ್ಲಿ "ವಾಗ್ಯಾರು"
ಕಂಬಳಿಗಳನ್ನೂ ವಿಚಿತ್ರಾಕಾರದ ರುಮಾಲಗಳನ್ನೂ ಹಾಕಿಕೊಂಡು
ನಾಯಿಗಳಂತೆ ಆಚರಿಸುವರು. ಇವರು ಕವಡೆಯ ಹಾರಗಳನ್ನು
ಹಾಕಿಕೊಂಡು, ಹುಲಿಕರಡಿಗಳ ಚರ್ಮವನ್ನು ಮೈಸುತ್ತು ಕಟ್ಟಿಕೊಂ

ಡು, ಸಣ್ಣ ಗಂಟೆಗಳನ್ನು ಹಾಕಿಕೊಂಡು, ಕೈಯಲ್ಲಿ ಒಂದು ಕಟ್ಟಿಗೆ ಯ ಪಾತ್ರೆಯನ್ನು ಹಿಡಿದುಕೊಂಡು, ಆಡಪ್ಪು ಕ್ರೂರವಾಗಿಯೂ ವಿಕ್ರಾಳವಾಗಿಯೂ ತೋರಲು ಯತ್ನಿಸುವರು. ಯಾತ್ರಿಕರನ್ನು ನೋಡಿದ ಕೂಡಲೆ ಇವರು ನಾಯಿಯಂತೆ ಬೊಗಳಿ ತಮ್ಮ ಭಿಕ್ಷಾಪಾತ್ರೆಯನ್ನು ಮುಂದಕ್ಕೆ ಚಾಚುವರು. ಯಾತ್ರಿಕರು ಅದರಲ್ಲಿ ಹಣ್ಣು ಹಂಪಲಗಳನ್ನೂ ಏನಾದರು ತಿನಿಸನ್ನೂ ಅರ್ಧಆಣೆ ರೊಕ್ಕವನ್ನೂ ಹಾಕುವದುಂಟು. ಕೂಡಲೆ ವಾಗ್ಯಾರು ತಮ್ಮ ಬಟ್ಟಲುಗಳನ್ನು ನೆಲದ ಮೇಲೆ ಇಟ್ಟು ದೂರಿಂದ ಓಡುತ್ತ ಬಂದು ನಾಯಿಗಳಂತೆ ಬೊಗಳುತ್ತ ತಮ್ಮೊಳಗೆ ಜಗಳಾಡುತ್ತ ನೆಲದಮೇಲೆ ಹೊರಳಾಡಿ ನಾಯಿಗಳಂತೆ ಆ ಪಾತ್ರೆಗಳೊಳಗೆ ಬಾಯಿ ಹಾಕಿ ಅದರಲ್ಲಿದ್ದದ್ದನ್ನು ತಿನ್ನುವರು. ತಿನ್ನುವದಾದ ಬಳಿಕ ಇವರು ಮಲ್ಲಾರಿದೇವರನ್ನು ಕುರಿತು ಒಂದು ಹಾಡನ್ನು ಹಾಡುವರು. ಇದರಿಂದ ಯಾತ್ರಿಕರಿಗೆ ಸಂತೋಷವೂ ಮನೋರಂಜನೆಯೂ ಆಗುವವು. ಈ ಜಾತ್ರೆಯಲ್ಲಿ ಹೇಳತಕ್ಕಂಥ ವ್ಯಾಪಾರವಾಗುವದಿಲ್ಲ.

ಹಾನಗೆಲ್ಲು:— (೬೮೫೩) ಉ. ೧೪ ೪೬ ಪೂ. ೭೫ ಂ೮. ತಾಲೂಕಿನ ಮುಖ್ಯಸ್ಥಳ. ಇಲ್ಲಿ ಪ್ರಾಚೀನಕಾಲದ ಅನೇಕ ದೇವಾಲಯಗಳಿವೆ. ಧಾರವಾಡಜಿಲ್ಲೆಯಲ್ಲಿ ಬಹುಶಃ ಅತಿ ಪುರಾತನ ಇತಿಹಾಸವುಳ್ಳ ಪಟ್ಟಣವು ಇದೇ ಇರುವದು. ಇದಕ್ಕೆ ಹಿಂದೆ ಪಾನುಗಲ್ಲು, ವಿರಾಟನಗರಿ, ವಿರಾಟಕೋಟೆ ಎಂಬ ಹೆಸರುಗಳಿದ್ದವು. ಆದ್ದರಿಂದ ಪಾಂಡವರು, ತಮ್ಮ ವನವಾಸದ ೧೩ನೇ ವರ್ಷ ಅಜ್ಞಾತವಾಸದಲ್ಲಿದ್ದ ವಿರಾಟರಾಯನ ಪಟ್ಟಣವು ಇದೇ ಎಂದು ಜನರ ನಂಬಿಗೆಯುಂಟು. ಇಲ್ಲಿ ತ್ರಿಕೋಟೇಶ್ವರನ ದೇವಾಲಯವು ನೋಡತಕ್ಕದ್ದಾಗಿದೆ.

ಹಾವೇರಿ:—(೭೯೭೪) ಉ. ೧೪ ೪೬ ಪೂ. ೭೫ ೨೮. ಹಾವೇರಿಯ ಮೇಲಿಂದ ಸದರ್ನ್‌ಮರಾಠಾ ರೇಲ್ವೆಯು ಬೆಂಗಳೂರಿಗೆ ಹೋಗಿರುತ್ತದೆ. ಇಲ್ಲಿ ಹತ್ತಿಮೊದಲಾದ ವ್ಯಾಪಾರವು ಚೆನ್ನಾಗಿ ಆಗುತ್ತದೆ. ಇಲ್ಲಿದ್ದ ಯಾಲಕ್ಕಿ ತೊಳೆಯುವ ಬಾವಿಯ ಬಗ್ಗೆ ಹಿಂದೆ ಹೇಳಿದ್ದೇವೆ.

ಹುಬ್ಬಳ್ಳಿ:— ೬೦,೭೧೪. ಉ. ೧೫ ೨೦ ಪೂ. ೭೫ ೯. ತಾಲೂಕಿನ ಮುಖ್ಯಸ್ಥಳ. ಮುಂಬಯಿ ಇಲಾಖೆಯಲ್ಲಿ ೪ನೇ ಪಟ್ಟಣ. ಕರ್ನಾಟಕ

ದಲ್ಲಿ ಅತಿಶಯ ಮಹತ್ವವುಳ್ಳದ್ದು. ಮಾರ್ಗಗಳ ಅನುಕೂಲತೆಯ ಬಗೆಯೂ ವ್ಯಾಪಾರದ ಬಗ್ಗೆಯೂ ಕೈಗಾರಿಕೆಗಳ ಬಗ್ಗೆಯೂ ಹಿಂದೆ ಹೇಳಿದ್ದೇವೆ. ೪೦೦ ವರ್ಷಗಳಿಂದ ಹುಬ್ಬಳ್ಳಿಯು ವ್ಯಾಪಾರದ ಬಗ್ಗೆ ಹೆಸರಾಗಿತ್ತೆಂದು ಅದರ ಇತಿಹಾಸದಿಂದ ಗೊತ್ತಾಗುವದು. ಇದರಲ್ಲಿ ಹಳೇ ಹುಬ್ಬಳ್ಳಿ ಎಂದೂ ಹೊಸ ಹುಬ್ಬಳ್ಳಿಯೆಂದೂ ಎರಡು ಭಾಗಗಳುಂಟು. ಹಳೇ ಹುಬ್ಬಳ್ಳಿಗೆ ರಾಯರ ಹುಬ್ಬಳ್ಳಿಯೆಂತಲೂ ಹೆಸರುಂಟು. ಯಾಕಂದರೆ, ಇದನ್ನು ವಿಜಯನಗರದ ಅರಸರು (೧೩೩೬–೧೫೬೫) ಸ್ಥಾಪಿಸಿದರು. ೧೬೭೫ರಲ್ಲಿ ಇದನ್ನು ಅವರಂಗಜೇಬನ ಸರದಾರನಾದ ಮಹಮ್ಮದ ಸಯ್ಯದಖಾನ ತಾರೀನ ಎಂಬವನು ವಶಮಾಡಿಕೊಂಡನು. ಈ ಮುತ್ತಿಗೆಯಲ್ಲಿ ಆ ಸರದಾರನು ಸತ್ತನಾದ ಕಾರಣ ಅವನ ಮಗನಿಗೆ ಅವರಂಗಜೇಬನು ರಾಯರ ಹುಬ್ಬಳ್ಳಿಯನ್ನೂ ದೇವರ ಹುಬ್ಬಳ್ಳಿಯ ಸಣ್ಣ ಪ್ರದೇಶವನ್ನೂ ಉಂಬಳಿ ಹಾಕಿ ಕೊಟ್ಟನು. ಮುಂದೆ ೧೭೮೫ರಲ್ಲಿ ಸುಲ್ತಾನ ಮುಅಝ್ಝಮನೆಂಬವನು ಹುಬ್ಬಳ್ಳಿಯನ್ನೂ ಧಾರವಾಡವನ್ನೂ ತಕ್ಕೊಂಡನು. ೧೭೯೭ರಲ್ಲಿ ಹಳೇ ಹುಬ್ಬಳ್ಳಿಯ ಬಸಪ್ಪನೆಂಬವನೊಬ್ಬನು ಹೊಸ ಹುಬ್ಬಳ್ಳಿಯನ್ನೂ ಅದರ ಕೋಟೆಯನ್ನೂ ಕಟ್ಟಿಸಿದನು. ೧೮ನೇ ಶತಮಾನದಲ್ಲಿ ಮೈಸೂರು ಮಹಾರಾಷ್ಟ್ರ ಅರಸರ ಕದನದಲ್ಲಿ ಇಲ್ಲಿ ಆಳುತ್ತಿದ್ದ ತಾರೀನ ವಂಶದವರಿಗೆ ಹಾನಿ ತಟ್ಟಿತು. ಬ್ರಿಟಿಶ್ ಸರದಾರನಾದ ಜನರಲ್ ಮನ್ರೋನು ಹಳೇ ಹುಬ್ಬಳ್ಳಿಯನ್ನು ೧೮೧೮ರಲ್ಲಿ ತಕ್ಕೊಂಡಾಗ ಅದು ಸಾಂಗಲಿ ಸಂಸ್ಥಾನದ ಕಡೆಗೆ ಇತ್ತು. ಅದೇ ಸಂಸ್ಥಾನಕ್ಕೆ ಹೊಸ ಹುಬ್ಬಳ್ಳಿಯೂ ಸೇರಿದ್ದಂತೆ ತೋರುತ್ತದೆ. ೧೮೬೦ ರಲ್ಲಿ ಹೊಸ ಹುಬ್ಬಳ್ಳಿಯನ್ನೂ ಹಲವು ಬೇರೆ ಹಳ್ಳಿಗಳನ್ನೂ ಸಾಂಗಲಿಯ ಸಂಸ್ಥಾನಿಕನು ಇಂಗ್ಲೀಸರಿಗೆ ದಂಡಿನ ವೆಚ್ಚದ ಬದಲಾಗಿ ಕೊಟ್ಟನು. ಇಲ್ಲಿ ಬಟ್ಟೆಗಳನ್ನು ನೇಯುವ ೬ ಯಂತ್ರಗಳೂ ಹತ್ತಿಯನ್ನು ಹಸನ ಮಾಡಿ ಒತ್ತುವ ೬ ಯಂತ್ರಗಳೂ ಸದರ್ನ ಮರಾಠಾ ರೇಲ್ವೆ ಕಂಪನಿಯ ವರ್ಕ್‌ಷಾಪ್ ಎಂಬದೊಂದು ಕಾರಖಾನೆಯೂ ಇವೆ. ಒಂದು ಹಾಳು ಬಿದ್ದ ಕೋಟೆಯೂ ಭವಾನಿಶಂಕರನ ಪುರಾತನ ಕಾಲದ ಗುಡಿಯೂ ಇವೆ. ಈ ಗುಡಿಯಲ್ಲಿದ್ದ ಶಿಲಾಲೇಖದಿಂದ ಇದು ೧೧ನೇ ಶತಮಾನದಲ್ಲಿ ಕಟ್ಟಿದಂತೆ ತೋರುತ್ತದೆ. ಇದಲ್ಲದೆ ೫೬ ಬೇರೆ ಗುಡಿಗಳೂ ೨೭ ಮಠಗಳೂ ೧೭ ಮಸೀದಿಗಳೂ ಒಂದು ಇಂಗ್ಲೀಷ

ಜಕ್ಕಣ್ಣ ಇವೆ. ಮತಗಳಲ್ಲಿ ಲಿಂಗಾಯತ ಮತಸ್ಥರ ಮೂರಸಾವಿರದಯ್ಯನವರ ಮಠವು ಭವ್ಯವಾದದ್ದೂ ಶಾಶ್ವತವಾದದ್ದೂ ಇದೆ.

ಲಕ್ಕುಂಡಿ:– (೪೪೫೪) ಉ. ೧೫° ೩೩′ ಪೂ ೭೫°–೪೩′. ಇಲ್ಲಿ ಪ್ರಾಚೀನದ ೫೦ ಸಣ್ಣ ದೊಡ್ಡ ಗುಡಿಗಳುಂಟು. ಇವೆಲ್ಲ ಜಕ್ಕಣಾಚಾರ್ಯನಿಂದ ಕಟ್ಟಲ್ಪಟ್ಟವೆಂದು ಹೇಳುತ್ತಾರೆ. ಇವುಗಳಲ್ಲಿ ಕಾಶೀವಿಶ್ವೇಶ್ವರನ ಗುಡಿಯು ಬಹು ಸುಂದರವಿರುತ್ತದೆ. ಹೊಯಿಸಳ ಅರಸನಾದ ವೀರಬಲ್ಲಾಳನು ಇದನ್ನು ೧೧೯೯ರಲ್ಲಿ ತನ್ನ ರಾಜಧಾನಿಯೆನ್ನು ಮಾಡಿದನು; ಹಾಗೂ ಇದರ ನೆರೆಯಲ್ಲಿ ದೇವಗಿರಿಯ ಯಾದವ ಅರಸನಾದ ಭಿಲ್ಲಮನ ಮಗ ಜೈತುಗಿಯ ಸೈನ್ಯವನ್ನು ಪರಾಭವ ಪಡಿಸಿದನು. ಆಗ ಅದಕ್ಕೆ " ಲೊಕ್ಕಿ ಗುಂಡಿ " ಎಂಬ ಹೆಸರಿತ್ತು. ಇಲ್ಲಿ ದೊರೆಯುವ ತಾಮ್ರಪಟಗಳಿಂದಲೂ ಇಲ್ಲಿರುವ ಗುಡಿಗಳಿಂದಲೂ ೯ ರಿಂದ ೧೪ನೇ ಶತಮಾನಗಳ ವರೆಗೆ ಇದು ಮಹತ್ವದ ಪಟ್ಟಣವಾಗಿತ್ತೆಂದು ತೋರುತ್ತದೆ. ಇಲ್ಲಿ ದೊರೆಯುವ ೩೫ ಶಿಲಾಲೇಖಗಳಲ್ಲಿ ಈವರೆಗೆ ಅತಿ ಪ್ರಾಚೀನವೆಂದು ಗೊತ್ತಾದದ್ದು ೬೬೮ ಇಸವಿಯದಾಗಿರುತ್ತದೆ.

ಮುಂಡರಗಿ:— (೪೬೫೩) ಉ. ೧೫° ೧೨ ಪೂ. ೭೫° ೫೩. ಗದಗ ತಾಲೂಕಿನಲ್ಲಿ ಇದು ಹೆಸರಾದ ಪೇಠೆಯ ಮುಖ್ಯಸ್ಥಳವು. ಈ ಊರು ಒಂದು ಗುಡ್ಡದ ಅಂಚಿಗೆ ಕಟ್ಟಿದೆ. ಈ ಗುಡ್ಡದ ಮೇಲೆ ಒಂದು ಹಾಳು ಬಿದ್ದ ಕೋಟೆಯುಂಟು. ಧಾರವಾಡ ಜಿಲ್ಲೆಗೂ ನಿಜಾಮನ ರಾಜ್ಯಕ್ಕೂ ಮಧ್ಯದಲ್ಲಿರುವದರಿಂದ ವ್ಯಾಪಾರದ ಪಡಮೂಲೆಯಾಗಿದೆ. ೧೮೫೭ನೇ ಇಸವಿಯಲ್ಲಾದ ಬಂಡಾಯದ ಕಾಲದಲ್ಲಿ ಈ ಊರು ಭೀಮರಾವ ನಾಡಿಗೇರ ಎಂಬ ಅಧಿಕಾರಸ್ಥನ ವಶದಲ್ಲಿತ್ತು. ಇವನು ನರಗುಂದದ ಸಂಸ್ಥಾನಿಕನೊಡನೆ ಒಳಸಂಚು ನಡಿಸಿ, ಅವರ ಮದ್ದಿನ ಸಂಚಯವನ್ನು ಕಾಯುತ್ತಿದ್ದ ಒಬ್ಬ ಇಂಗ್ಲಿಷ ಕಾಪಲುಗಾರನನ್ನು ಕೊಂದು, ನಿಜಾಮನ ರಾಜ್ಯದಲ್ಲಿದ್ದ ಕೊಪ್ಪಳವೆಂಬಲ್ಲಿಗೆ ಪಲಾಯನ ಮಾಡಿದನು. ಇವನು ಮುಂದೆ ಕೊಪ್ಪಳದ ಮುತ್ತಿಗೆಯಲ್ಲಿ ಸತ್ತನು.

ನರೇಗಲ್ಲ:—(೪೩೭೭) ಉ. ೧೫° ೩೪′, ಪೂ. ೭೫° ೪೮. ಇದು ಪುರಾತನ ಪಟ್ಟಣವು. ಇಲ್ಲಿ ಕೆಲವು ದೇವಾಲಯಗಳುಂಟು. ಈ ದೇ

ವಾಲಯಗಳಲ್ಲಿದ್ದ ಶಿಲಾಲೇಖಗಳು ೧೨, ೧೩ ಶತಮಾನಗಳವಿರುತ್ತ

ನರಗುಂದ:— (೧೦೪೧೬) ಉ. ೧೫ ೪೩ ಪೂ. ೭೫ ೨೪. ನವ
ಗುಂದ ತಾಲೂಕಿನಲ್ಲಿ ಹುಬ್ಬಳ್ಳಿಯಿಂದ ವಿಜಾಪುರಕ್ಕೆ ಹೋಗುವ ಬೈ
ಮಾರ್ಗದ ಮೇಲಿರುವದು. ಇದು ವ್ಯಾಪಾರದ ಪಡಮೂಲೆ; ಒಂ
ಗುಡ್ಡದ ಅಂಚಿಗಿರುವದು. ಗುಡ್ಡದ ಮೇಲೆ ಒಂದು ಹಾಳು ಬಿದ್ದ ಕೋ
ಟೆಯುಂಟು. ಸದ್ಯಕ್ಕೆ ಇದು ನರಗುಂದದ ಪೇಠೆಯ ಮುಖ್ಯ ಸ್ಥಳವಾಗಿದ
ಇಲ್ಲಿ ಕೆಲವು ದೇವಾಲಯಗಳುಂಟು. ಇವುಗಳಲ್ಲಿ ವೆಂಕಟೇಶ ದೇವ
ಗುಡಿಯು ಹೆಸರಾದದ್ದು. ಆಶ್ವಿನ ಮಾಸದ ಪೂರ್ಣಿಮೆಯ ದಿವಸ ಇ
ಜಾತ್ರೆಯಾಗುತ್ತದೆ. ಸುತ್ತಲಿನ ಪ್ರಾಂತಗಳಿಂದ ಸುಮಾರು ೧೦,೦೦
ಜನರು ನೆರೆಯುವರು. ಈ ಊರನ್ನು ವಿಜಾಪುರದ ಸುಲ್ತಾನರಿಂ
ಶಿವಾಜಿಯು ತಕ್ಕೊಂಡನು. ನರಗುಂದದ ಕೋಟೆಯನ್ನು ಮೊದಲು ಶಿವ
ಜಿಯು ೧೬೭೪ರಲ್ಲಿ ಕಟ್ಟಿಸಿದನೆಂದು ಹೇಳುತ್ತಾರೆ. ೧೭೧೮ರಲ್ಲಿ ಪೇ
ಯವರ ಬೇರೆ ಸೀಮೆಗಳ ಕೂಡ ಇದು ಇಂಗ್ಲೀಷರ ಕೈಸೇರಿತ.
ಅವರು ಇದನ್ನು ಅಲ್ಲಿಯ ಮೊದಲಿನ ಸಂಸ್ಥಾನಿಕನಾದ ದಾದಾಜಿ
ರಾವ ಭಾವೇ ಇವನಿಗೆ ಕೊಟ್ಟರು. ೧೭೫೭ ಇಸವಿಯ ಬಂಡಾಯದ
ಕಾಲದಲ್ಲಿ ನರಗುಂದಕ್ಕೆ ಭಾಸ್ಕರರಾವ ಉರ್ಫ ಬಾಬಾಸಾಹೇಬ್ ಭಾ
ಎಂಬವನು ಯಜಮಾನನಾಗಿದ್ದನು. ಇವನು ಉತ್ತರಹಿಂದುಸ್ಥಾನ
ಬಂಡಾಯದಿಂದ ಹುರಿದುಂಬಿ ಬಂಡಾಯವನ್ನೆಬ್ಬಿಸಿ ಕವಿಾಶನರನೂ ಪೊ
ಟಿಕಲ್ ಏಜಂಟನೂ ಆದ ಮಿಸ್ತರ ವ್ಯಾನ್‌ಸನ್ ಎಂಬ ಅಧಿಕಾರಿಯನ್ನು
ಕೊಲ್ಲಿಸಿದನು. ಕೂಡಲೆ, ಇಂಗ್ಲಿಷರು ನರಗುಂದವನ್ನು ಮುತ್ತಲು ಇವನ
ಅಲ್ಲಿಂದ ಪಲಾಯನ ಮಾಡಿದನು. ಮುಂದೆ ಅವನು ತೊರಗಲ್ಲದ ಅಡ
ಯಲ್ಲಿ ಯಾತ್ರಿಕನ ವೇಷವನ್ನು ಹಾಕಿಕೊಂಡು ಪಂಢರಪುರಕ್ಕೆ ಹೋಗ
ವಾಗ ಇಂಗ್ಲೀಷರಿಗೆ ಸಿಕ್ಕನು. ಇವನನ್ನು ಅದೇ ವರ್ಷ ಬೆಳಗಾವಿಯಲ್ಲಿ
ಗಲ್ಲಿಗೆ ಹಾಕಿದರು; ಹಾಗೂ ಅವನ ಸಂಸ್ಥಾನವನ್ನು ಇಂಗ್ಲಿಷರಾಜ್ಯಕ್ಕೆ
ಸೇರಿಸಿದರು.

ನವಲಗುಂದ:—(೩೮೬೨) ಉ. ೧೫. ೩೩ ಪೂ. ೭೫ ೨೧. ತಾಲೂ
ಕಿನ ಮುಖ್ಯಸ್ಥಳು. ಇಲ್ಲಿಯ ಜಮೀನಾನೆಗೆಳು ಹೆಸರಾದವಿರುತ್ತವೆ. ನವ

ಗುಂದದ ಎತ್ತುಗಳೂ ಮೇಲ್ತರದವಿರುತ್ತವೆ. ನವಲಗುಂದವು ಪುರಾ
ನಕಾಲದಲ್ಲಿ ಹೆಸರಾಗಿದ್ದ ಪಟ್ಟಣವಲ್ಲ. ಇಲ್ಲಿ ಪ್ರಾಚೀನ ಗುಡಿಗಳೂ
ಶಾಲೇಖಗಳೂ ದೊರೆಯುವದಿಲ್ಲ.

ಡಾಣೇಬಿಕ್ಕೂರ:— (೧೪,೮೫೧) ಉ. ೧೪ ೫೭ ಪೂ. ೭೫ ೫೮. ಹು
ಳ್ಳಿಯಿಂದ ಬೆಂಗಳೂರಿಗೆ ಹೋಗುವ ಮಾರ್ಗದ ಮೇಲಿರುವದು. ತಾಲೂ
ನ ಮುಖ್ಯಸ್ಥಳ. ಇಲ್ಲಿಯ ವ್ಯಾಪಾರವು ಬೆಳೆಯುತ್ತಲಿದೆ. ಹತ್ತಿ, ಉತ್ತ
ು ಅರಿವೆಗಳು, ರೇಸಿಮೆಯ ಬಟ್ಟೆಗಳು ಜಿಲ್ಹೆಯತುಂಬ ಹೋಗುತ್ತವೆ.
ದರ ಸುತ್ತಲು ತೋಟಗಳು ಬಹಳ.

ಯಮನೂರು:—(೮೫೭) ಉ. ೧೫ ೭೭ ಪೂ. ೭೫ ೭೭. ನವಲ
ುಂದ ತಾಲೂಕಿನಲ್ಲಿ ನವಲಗುಂದದ ನೈಋತ್ಯಕ್ಕೆ ೩ ಮೈಲಿನ ಅಂತರದಲ್ಲಿ
ುವದು. ಯಮನೂರ ಊರಸು ಜಿಲ್ಹೆಯಲ್ಲಿ ಎಲ್ಲಕ್ಕೂ ದೊಡ್ಡದಿರುತ್ತದೆ.
೫ ಊರುಸಿಗೆ ೫೦೦೦೦ ದಿಂದ ೧ ಲಕ್ಷದವರೆಗೆ ಜನರು ನೆರೆಯುತ್ತಾರೆ.
ಕ್ಕಮಟ್ಟಿಗೆ ವ್ಯಾಪಾರವಾಗುತ್ತದೆ. ನಿಜಾಮನ ರಾಜ್ಯದಲ್ಲಿರುವ ಕಲಬು
ರ್ಗೆಯ ಒಬ್ಬ ಮುಸಲ್ಮಾನ ಫಕೀರನ ಸನ್ಮಾನಕ್ಕೋಸ್ಕರ ಇಲ್ಲಿ ಜನರು
ರೆಯುಸ್ತಾರೆ. ಇವನು ಹುಲಿಯಮೇಲೆ ಕುಳಿತು ಮತ್ತೊಬ್ಬ ಸಾಧುವ
ನ್ನು ನೋಡಲಿಕ್ಕೆ ಹೋದದ್ದರಿಂದ ಇವನಿಗೆ ರಾಜಾ ಬಾಘಸವಾರ ಎಂಬ
ಸರು ಬಿದ್ದದೆ. ಇದು ಫಾಲ್ಗುಣ ವದ್ಯ ಪಂಚಮಿಯ ದಿವಸದಿಂದ ನಾಲ್ಕು
ವಸಗಳವರೆಗೆ ನಡಿಯುತ್ತದೆ.

ಧಾರವಾಡಜಿಲ್ಹೆಯ ಉಳಿದ ಕೆಲವು ದೊಡ್ಡ ಊರುಗಳನ್ನು ಇಲ್ಲಿ
ೊಡುತ್ತೇವೆ:—

ಗಜೇಂದ್ರಗಡ:—(೯೪೫೩) ಉ. ೧೫ ೪೪ ಪೂ. ೭೫ ೪೮. ರೋ
ಣ ತಾಲೂಕಿನಲ್ಲಿ.

ಹೆಬ್ಬಳ್ಳಿ:—(೫೭೯೪) ಉ. ೧೫ ೭೮ ಪೂ. ೭೫ ೮. ಧಾರವಾಡ ತಾ
ಲೂಕಿನಲ್ಲಿ ಧಾರವಾಡದಿಂದ ೭ ಮೈಲಿನ ಮೇಲೆ ಪೂರ್ವದಲ್ಲಿರುವದು.

ಕುರ್ತಕೋಟಿ:—(೫೩೪೭) ಉ. ೧೫ ೭೨ ಪೂ. ೭೫ ೭೧. ಗದ
ಗ ತಾಲೂಕಿನಲ್ಲಿ.

ಮುಳಗುಂದ:— (೭೫೨೩) ಉ. ೧೫ ೧೬ ಪೂ. ೭೫ ೩೧. ಗದಗ ತಾಲೂಕಿನಲ್ಲಿ.

ರಟ್ಟಿಹಳ್ಳಿ:—(೩೩೨೮) ಉ. ೧೪ ೧೫ ಪೂ. ೭೫ ೩೧.

ರೋಣ:—(೭೨೯೮) ಉ. ೧೫ ೪೨ ಪೂ. ೭೫ ೪೪ ತಾಲೂಕಿನ ಮುಖ್ಯಸ್ಥಳ. ಇಲ್ಲಿ ಕರೇಕಲ್ಲಿನ ದೇವಾಲಯಗಳಿವೆ.

ಸವದಿ:—(೫೨೦೨) ಉ. ೧೫ ೨೯ ಪೂ. ೭೫ ೪೫. ಇದು ರೋಣ ತಾಲೂಕಿನಲ್ಲಿ.

ಸಿಗ್ಗಾವಿ:—(೫೨೩೨) ಬಂಕಾಪುರ ತಾಲೂಕಿನ ಕಚೇರಿ ಇರುವ ಸ್ಥಳ. ಉ. ೧೪ ೨೯ ಪೂ. ೭೫ ೧೩.

ತುಮ್ಮಿನಕಟ್ಟಿ:—(೬೩೪೧) ತುಂಗಭದ್ರೆಯ ಮೇಲೆ.

ಅಮ್ಮಿನಭಾವಿ:—ಧಾರವಾಡ ತಾಲೂಕಿನಲ್ಲಿ.

ಚಿಕ್ಕೇರೂರ:—ಕೋಡ ತಾಲೂಕಿನಲ್ಲಿ.

ದೇವಗಿರಿ:—ಕರ್ಜಗಿ ತಾಲೂಕಿನಲ್ಲಿ. ಕರ್ಜಗಿಯ ಪಶ್ಚಿಮದಲ್ಲಿ ೬ ಮೈಲಿನಮೇಲೆ ರಾಣೇಬಿನ್ನೂರ ದಾರಿಯಮೇಲೆ ಇರುತ್ತದೆ. ಇಲ್ಲಿ ಜವಾರಿ ಉರುಟುಬಟ್ಟೆ ತಯಾರಾಗಿ ವಾರಾಟವಾಗುತ್ತದೆ. ಇಲ್ಲಿ ಒಂದು ಡಿಸ್ಪೆನ್ಸರಿ ಬಂಗಲೆಯುಂಟು.

ಹಿರೇಕೆರೂರ:—ಉ. ೧೪ ೧೯ ಪೂ. ೭೫ ೪೮. ಕೋಡ ತಾಲೂಕಿನ ಮುಖ್ಯಸ್ಥಳ. ಮಾಮಲೇದಾರ ಕಚೇರಿಯು ಇಲ್ಲೇ ಇರುವದು. ಈ ತಾಲೂಕಿನ ಹವೆಯು ಸುಮಾರಾದದ್ದಿರುವದು.

ಕಾಗಿನೆಲ್ಲಿ:—ಕೋಡದ ವಾಯವ್ಯದಲ್ಲಿ ೧೩ ಮೈಲಿನ ಮೇಲೆ. ಇಲ್ಲಿ ಅನೇಕ ಪುರಾತನ ದೇವಾಲಯಗಳುಂಟು.

ಮಿಶ್ರಿಕೋಟಿ:—ಹುಬ್ಬಳ್ಳಿಯಿಂದ ಕಲಘಟಗಿಗೆ ಹೋಗುವ ರಸ್ತೆಯ ಮೇಲಿರುವದು. ಇಲ್ಲಿ ಒಂದು ಹಾಳು ಬಿದ್ದ ಕೋಟೆಯೂ ಒಂದು ಕರೆ ಕಲ್ಲಿನ ದೇವಾಲಯವೂ ಇವೆ.

ಮೋಟೆಬಿನ್ನೂರ:—ರಾಣೇಬಿನ್ನೂರಿನ ಈಶಾನ್ಯದಲ್ಲಿ. ಇಲ್ಲಿ ಪ್ರಯಾಣಸ್ಥರ ಅನುಕೂಲಕ್ಕೋಸ್ಕರ ಕಟ್ಟಿಸಿದ ಬಂಗಲೆಯುಂಟು.

ತಡಸ—ಕಲಿಕ್ಟರನ ಬಂಗಲೆಯುಂಟು.

ತೇಗೂರ—ಧಾರವಾಡದಿಂದ ಬೆಳಗಾವಿಗೆ ಹೋಗುವ ರಸ್ತೆಯ ಮೇಲೆ. ಇಲ್ಲಿ ಪ್ರವಾಸಿಕರು ಇಳುಕೊಳ್ಳಲಿಕ್ಕೆ ಬಂದು ಬಂಗಲೆಯೂ ದಂ ಡಾಳುಗಳು ಇಳಕೊಳ್ಳಲಿಕ್ಕೆ ಮೈದಾನವೂ ಇದೆ

ಗಿನೇ ಪ್ರಕರಣ.

ಧಾರವಾಡಜಿಲ್ಲೆಯ ಇತಿಹಾಸ.

ಧಾರವಾಡಜಿಲ್ಲೆಯ ಹಲವು ಹಳ್ಳಿಗಳಲ್ಲಿ ಅನೇಕ ದೇವಾಲಯಗಳೂ, ಶಿಲಾಲೇಖಗಳೂ ದೊರೆಯುತ್ತವೆ. ಹಾಳುಬಿದ್ದ ಕೋಟೆ ಇಲ್ಲದ ಊರುಗಳನ್ನು ಅಪರೂಪವಾಗಿ ನೋಡಬಹುದು. ಆದ್ದರಿಂದ, ಪ್ರಾಚೀನ ಕಾಲದಲ್ಲಿ ಪ್ರತಿಬಂದು ಊರವರಿಗೆ ಶತ್ರುಗಳ ಭಯವು ಎಷ್ಟತ್ತೆಂದು ಚನ್ನಾಗಿ ವ್ಯಕ್ತವಾಗುತ್ತದೆ. ಮಧ್ಯಕಾಲದಲ್ಲಿ, ಅಂದರೆ ಗಿನೇ ಶತಮಾನದಿಂದ ಗಿಸನೇ ಶತಮಾನದವರೆಗಂತೂ ಈ ಪ್ರಾಂತವು ಮುಸಲ್ಮಾನ, ಮಹಾರಾಷ್ಟ್ರ ಹಾಗು ಆಂಗ್ಲರ ರಣರಂಗವಾಗಿತ್ತು. ಆ ಕಾಲದಲ್ಲಿ ಈ ಪ್ರಾಂತದ ಸುತ್ತಲು ಇದ್ದ ಅರಸರನ್ನೂ ರಾಷ್ಟ್ರಗಳನ್ನೂ ನೋಡಿದರೆ, ಈ ಪ್ರಾಂತವು ಅನೇಕ ಅರಸರ ರಣರಂಗವಾದದ್ದು ಸೋ ಜಿಗವಲ್ಲ. ಉತ್ತರದಲ್ಲಿ ಮಹಾರಾಷ್ಟ್ರರೂ, ಪೂರ್ವದಲ್ಲಿ ಮುಸಲ್ಮಾನರೂ, ಆಗ್ನೇಯದಲ್ಲಿ ಆಂಗ್ಲರೂ, ದಕ್ಷಿಣದಲ್ಲಿ ಮೈಸೂರಿನ ಹೈದರ, ಟಿಪ್ಪು ಮೊದಲಾದವರೂ ರಾಜ್ಯಗಳನ್ನು ಮಾಡುತ್ತಿದ್ದದರಿಂದ ಈ ನಾಲ್ಕರ ಜಯಾಪಜಯಗಳ ಮೇರೆಗೆ ಈ ಪ್ರಾಂತವು ಒಂದಿಲ್ಲೊಂದು ಸಮಯದಲ್ಲಿ ಪ್ರತಿಯೊಬ್ಬರ ವಶದಲ್ಲಿದ್ದದ್ದು ಸ್ವಾಭಾವಿಕವೇ. ಧಾರವಾಡಜಿಲ್ಲೆಯ ಪಟ್ಟಣಗಳ ಪ್ರಾಚೀನ ಇತಿಹಾಸದಿಂದ ಈ ಪ್ರಾಂತವು ಪಾಂಡವರ ಕಾಲದಲ್ಲಿ ಸಹ ಹೆಸರಾಗಿತ್ತೆಂದು ಗೊತ್ತಾಗುತ್ತದೆ. ಧಾರವಾಡ ಊರಿಗೆ ೫೦ ಮೈಲು ದಕ್ಷಿಣದಲ್ಲಿರುವ ಹಾನಗಲ್ಲಿನಲ್ಲಿ ದೊರೆತ ಗಿನೇ ಶತಮಾನದ ಶಿಲಾಲೇಖಗಳು ಈ ಊರಿಗೆ ವಿರಾಟಕೋಟೆ, ವಿರಾಟನಗರಗಳೆಂಬ ಹೆಸರುಗಳವೆ. ಆದ್ದರಿಂದ ಈ ಪಟ್ಟಣದಲ್ಲಿ ಪಾಂಡವರು ಅಜ್ಞಾತವಸನ್ನು ಕಳೆದರೆಂದು ಅಲ್ಲಿಯ ಜನರು ನಂಬುವರು.

ಕ್ರಿಸ್ತಶಕದ ೫ನೇ ಶತಮಾನದ ಇತ್ತ ಕಡೆಗೆ ನಡೆದ ಕೆಲವು ಸ
ಘಾಸಿಕ ಸಂಗತಿಗಳು ಇಲ್ಲಿ ದೊರೆಯುವ ಶಿಲಾಲೇಖಗಳಿಂದಲೂ ತಾಮ್ರ
ಪಟಗಳಿಂದಲೂ ಗೊತ್ತಾಗುತ್ತವೆ. ಕ್ರಿ. ಶ. ದ ಆರಂಭದಿಂದ ೩ನ
ಶತಕದವರೆಗೆ ಬನವಾಸಿಯು ಈ ಭಾಗದಲ್ಲಿ ಇತಿಹಾಸಪ್ರಸಿದ್ಧವಾ
ರಾಜಧಾನಿಯಾಗಿತ್ತೆಂದು ಗೊತ್ತಾಗುತ್ತದೆ. ಸದ್ಯಕ್ಕೆ ಇದು ಉತ್ತ
ಕಾನಡಾಜಿಲ್ಲೆಯಲ್ಲಿ ಶಿರಸಿ ತಾಲೂಕಿನಲ್ಲಿ ಅದೆ. ಬನವಾಸಿಗೆ ಎರ
ನೆಯದಾದ ಐತಿಹಾಸಿಕ ಸ್ಥಳವು ಹಾನಗಲ್ಲು. ಅಂಜಿಗೇರಿ, ಬಂಕಾ
ರ, ಡಂಬಳ, ಗದಗು, ಲಕ್ಕುಂಡಿ, ಲಕ್ಷ್ಮೇಶ್ವರ, ನರೇಗಲ್ಲು, ಮೊ
ಲಾದವಾವರೂ ಆ ಕಾಲದಲ್ಲಿ ಹೆಸರಾಗಿದ್ದವೆಂದು ಅಲ್ಲಿರುವ ಪುರಾತ
ದ ದೇವಾಲಯಗಳಿಂದಲೂ, ಅಲ್ಲಲ್ಲಿ ದೊರೆತ ಶಿಲಾಲೇಖಗಳಿಂದಲ
ಸಿದ್ಧವಾಗುವದು.

ಕ್ರಿ. ಶಕದ ಆರಂಭದಲ್ಲಿ ಬನವಾಸಿಯಲ್ಲಿ ಆಂಧ್ರಭೃತ್ಯರು ಆಳ
ತ್ತಿದ್ದರು. ಮುಂದೆ ಗಂಗರು, ಇಲ್ಲವೆ ವಲ್ಲಭರು ಈ ಪ್ರದೇಶದ ಒಡ
ಯರಾದರು. ಇವರ ತರುವಾಯ ಕದಂಬರೆಂಬ ಜೈನಮತದ ಅರಸರ
೬ನೇ ಶತಮಾನದವರೆಗೆ ಬನವಾಸಿಯಲ್ಲಿ ಆಳಿದರು. ಮುಂದಿನ ಕಾಲ
ಈ ಜಿಲ್ಲೆಯ ಇತಿಹಾಸದಲ್ಲಿ ೩ ಭಾಗಗಳನ್ನು ಮಾಡಬಹುದು. ಚಾಲ
ಕ್ಯರು (ಪಟ್ಟವೆದ ಚಾಲುಕ್ಯರು) ಕ್ರಿ. ಶ. ೭೬೦ ವರೆಗೆ ಆಳಿದರು. ಆಮೆ
ಲೆ ರಾಷ್ಟ್ರಕೂಟರು ೯೭೩ ವರೆಗೆ ರಾಜ್ಯವನ್ನಾಡಿದರು. ಮುಂದೆ ಪಶ್ಚಿ
ಮದ ಚಾಲುಕ್ಯರು ರಾಜ್ಯಾಧಿಕಾರವನ್ನು ಮತ್ತೆ ಪಡೆದರು. ಇವರ
ಅಳಿಕೆ ೧೮೧೯ರಿಂದ ೧೧೫೬ವರೆಗೆ. ಇವರ ಬಳಿಕ ಕಲಚೂರಿಯ ಅರಸರು
೧೧೫೬ರಿಂದ ೧೨೮೪ರ ವರೆಗೆ ಈ ದೇಶದ ಒಡೆಯರಾಗಿದ್ದರು. ೧೧೯೯
ರಿಂದ ೧೩೦೩ ವರೆಗೆ ಹೊಯ್ಸಳರು ಈ ಪ್ರಾಂತವನ್ನು ಆಕ್ರಮಿಸಿದ್ದರು.
ಇವರನ್ನು ದೇವಗಿರಿಯ ಯಾದವರು ಗೆದ್ದು ೧೩೧೦ರಿಂದ ೧೪೯೫ವರೆಗೆ
ಆಳಿದರು. ಇವರ ರಾಜಧಾನಿಯು ಬನವಾಸಿಯಲ್ಲಿತ್ತು. ಹಾನಗಲ್ಲು
ದರೂ ಇವರ ಕಾಲದಲ್ಲಿ ಮುಖ್ಯ ಪಟ್ಟಣವಾಗಿತ್ತು. ೧೩೧೦ ರಲ್ಲಿ ಮಲ
ಕಕಾಫಿರನು ಕರ್ನಾಟಕವನ್ನು ಸುಲಿದನು. ಕೆಲ ಕಾಲವಾದ ಬಳಿಕ
ಮಹಮ್ಮದ ತಘಲಕನು ಮತ್ತೆ ಈ ಭಾಗಗಳ ಮೇಲೆ ದಂಡೆತ್ತಿ ಬಂದ
ನು. ಮುಂದೆ ಈ ಪ್ರಾಂತವು ಹೊಸದಾಗಿ ಸ್ಥಾಪಿತವಾದ ವಿಜಯನಗ

ರದ ಹಿಂಡೂರಾಜರ ಅಮಲಿನಲ್ಲಿ ಬಂತು. ಇಷ್ಟರಲ್ಲಿ ದಕ್ಷಿಣ ಹಿಂದು ಸ್ತಾನದಲ್ಲಿ ನೆಲೆಗೊಂಡಿದ್ದ ಬಾಹದುನೀ ವಂಶದ ಅರಸರು ಇದನ್ನು ಆಕ್ರಮಿಸಲಿಕ್ಕೆ ಯತ್ನಿಸಲಾರಂಭಿಸಿದರು. ಬಂಕಾಪುರವನ್ನು ಇವರು ಎಷ್ಟೋಸಾರಿ ಹಿಡಿದುಕೊಂಡಿದ್ದರು. ತಾಳೀಕೋಟೆಯ ಯುದ್ಧವಾಗುವ ದಕ್ಕೆ ಸ್ವಲ್ಪ ಮುಂದಾಗಿ ಈ ಪ್ರಾಂತವು ವಿಜಾಪುರದ ಸುಲ್ತಾನರ ಆಡಳಿತಕ್ಕೆ ಒಳಗಾಗಿತ್ತು. ಇದನ್ನು ಇವರು ೧೬೮೬ ವರೆಗೆ ಆಳಿದರು. ಈ ಸುಮಾರಿಗೆ ಅವರಂಗಜೇಬನು, ಅದೀಲಶಾಹಿ ವಂಶವನ್ನು ಮುರಿದನು. ಇತ್ತ ಮಹಾರಾಷ್ಟ್ರರು ಈ ಪ್ರಾಂತವನ್ನು ಮೇಲಿಂದಮೇಲೆ ಸುಲಿಯುತ್ತಿದ್ದರು. ೧೬೬೭ರಲ್ಲಿ ಆಂಣಾಜಿ ದತ್ತ ಎಂಬವನು ಹುಬ್ಬಳ್ಳಿಯನ್ನು ಸುಲಿದನು. ೧೬೭೬ರಲ್ಲಿ ಬಾಜೀರಾಯನು ಈ ಪ್ರಾಂತವನ್ನು ಹಾಳುಗೆಡವಿದನು. ಮುಂದೆ ಕೆಲ ಕಾಲದವರೆಗೆ ಮಹಾರಾಷ್ಟ್ರರು ಈ ಪ್ರಾಂತದಲ್ಲಿ ಮೇಲಧಿಕಾರವನ್ನು ನೆಲೆಗೊಳಿಸಿದರು. ಹೈದರ ಅಲ್ಲಿಯು ಈ ಪ್ರಾಂತವನ್ನು ಮಹಾರಾಷ್ಟ್ರರಿಂದ ಕಸಕೊಂಡನು. ಆದರೆ ಮರು ವರ್ಷ ಅವನು ಸೋತದ್ದರಿಂದ ಈ ಪ್ರಾಂತವು ಮತ್ತೆ ಮಹಾರಾಷ್ಟ್ರರ ಕೈಯಲ್ಲಿ ಬಂತು. ಮುಂದೆ ಟೀಪುವು ಇದರಮೇಲೆ ಕಣ್ಣು ಹಾಕಿದನು. ಕಡೆಗೆ ೧೭೯೦ರಲ್ಲಿ ಇಂಗ್ಲಿಷರ ಸಹಾಯದಿಂದ ಮಹಾರಾಷ್ಟ್ರರು ಮತ್ತೆ ಇದನ್ನು ವಶಮಾಡಿಕೊಂಡರು. ೧೮೧೮ರಲ್ಲಿ ಈ ಪ್ರಾಂತವು ಇಂಗ್ಲಿಷರ ಅಮಲಿನಲ್ಲಿ ಬಂತು. ಇಂಗ್ಲಿಷರ ಅಮಲಿನಲ್ಲಿ ಬಂದಂದಿನಿಂದ ಇಷ್ಟಕ್ಕೆ ಪರಸ್ಥಿತಿಯು ಅಭಿವೃದ್ಧಿಗೆ

ಶಾಸ್ತ್ರೀಯ ಟಿಪ್ಪಣಿಗಳು.

ಹೊನ್ನೆಹುಳದ ಪ್ರಕಾಶವು.

ಬೇರೆ ಬೇರೆ ತರದ ದೀಪಗಳಿಂದ ಪ್ರಕಾಶ ಮತ್ತು ಉಷ್ಣತೆಯ ಕಿರಣಗಳು ಬೇರೆ ಬೇರೆ ಪ್ರಮಾಣದಿಂದ ಹೊರಬೀಳುತ್ತವೆ. ಹೊಗೆದೀಪದಲ್ಲಿ ನೂರರಲ್ಲಿ ಒಂದು ಭಾಗ ಪ್ರಕಾಶವೂ ತೊಂಬತ್ತೊಂಬತ್ತು ಭಾಗ ಉಷ್ಣತೆಯೂ ಇರುತ್ತದೆ. ವಿದ್ಯುದ್ದೀಪಗಳಲ್ಲಿ ನೂರರಲ್ಲಿ ೩೫ರಿಂದ ೩೮ ಭಾಗ ಪ್ರಕಾಶವೂ ೬೨ರಿಂದ ೬೫ ಭಾಗ ಉಷ್ಣತೆಯೂ ಇರುತ್ತದೆಂದು ಗೊತ್ತಾಗಿದೆ. ಶಾಸ್ತ್ರಜ್ಞಾನವು ಹೆಚ್ಚುತ್ತ ಹೋದಂತೆ ಉಷ್ಣತೆಯ ಪ್ರಮಾಣವು ಕಡಿಮೆಯಾಗಿ ಹೆಚ್ಚು ಪ್ರಕಾಶವನ್ನು ಕೊಡುವ ಪದಾರ್ಥಗಳು ಗೊತ್ತಾಗಬಹುದು. ಇಲ್ಲವೆ, ಒಂದು ಪದಾರ್ಥದೊಳಗಿನ ಉಷ್ಣತೆಯ ಕಿರಣಗಳನ್ನು ಪೂರಾ ಕಡಿಮೆ ಮಾಡಿ ಪ್ರಕಾಶವನ್ನಷ್ಟೇ ಹೊರಗೆಡಹುವಂತೆ ಮಾಡಬಹುದು. ನಮ್ಮ ಮನೆಯಲ್ಲಿ ಹಚ್ಚುವ ದೀಪದಿಂದ ಪ್ರಕಾಶವಲ್ಲದೆ, ಉಷ್ಣತೆಯ ಉಪಯೋಗವೇನೂ ಆಗುವುದಿಲ್ಲ.

ಹೊನ್ನೆ ಹುಳದ ಪ್ರಕಾಶದಲ್ಲಿ ಉಷ್ಣತೆಯ ಕಿರಣಗಳು ತೀರ ಸ್ವಲ್ಪ, ಅಂದರೆ ನೂರರಲ್ಲಿ ಒಂದರಷ್ಟು ಇರುತ್ತವೆ. ಇದರ ಮೇಲಿಂದ ಉಷ್ಣತೆಯನ್ನುಂಟು ಮಾಡದೆ ಪ್ರಕಾಶವನ್ನು ಕೊಡುವ ಶಕ್ತಿಯು ಹೊನ್ನೆ ಹುಳದಲ್ಲಿ ಇರುತ್ತದೆಂದರೂ ಸಲ್ಲುವದು. ನಮ್ಮಲ್ಲಿಯ ಹೊನ್ನೆಹುಳಗಳಿಗಿಂತ ವೆಸ್ಟ ಇಂಡೀಜ ನಡುಗಡ್ಡೆಗಳಲ್ಲಿಯೂ ದಕ್ಷಿಣ ಅಮೇರಿಕದಲ್ಲಿಯೂ ಇರುವ ಹೊನ್ನೆ ಹುಳಗಳ ಪ್ರಕಾಶವು ಬಹಳ ಇರುತ್ತದೆ. ಇಂಥ ಹತ್ತೆಂಟು ಹುಳಗಳನ್ನು ಸಿಡಿದು ಬಂದು ಕಂದೀಲದಲ್ಲಿ ಇಟ್ಟರೆ ಓದಲಿಕ್ಕೆ ಬರುವಷ್ಟು ಪ್ರಕಾಶವು ಅನಾಯಾಸವಾಗಿ ಸಿಗುವದು. ಈ ಹುಳಗಳ ಪ್ರಕಾಶದಂತೆಯೇ ಉಷ್ಣತೆಯಿಲ್ಲದ ಪ್ರಕಾಶವನ್ನುಂಟು ಮಾಡಬೇಕೆಂದು ಶಾಸ್ತ್ರಜ್ಞರ ಪ್ರಯತ್ನವು ನಡೆದಿರುತ್ತದೆ. ಇದು ಸಾಧ್ಯವಾದರೆ, ಈ ಸಂಬಂಧದಿಂದ ಮನುಷ್ಯನ ಸೌಖ್ಯವನ್ನು ಹೆಚ್ಚಿಸಿದಂತಾಗುವದು.

ಕಾಡು ಮೃಗಗಳ ಪ್ರಕಾಶಚಿತ್ರಗಳು.

ಪ್ರಕಾಶಲೇಖನಕಲೆಯಲ್ಲಿ ಇತ್ತಲಾಗಿ ಅನೇಕ ಸುಧಾರಣೆಗಳಾಗಿರುವದರಿಂದ ಮೊದಲು ಅಸಾಧ್ಯವೆಂದು ತಿಳಿದ ಎಷ್ಟೋ ಪದಾರ್ಥಗಳ ಪ್ರಕಾಶಚಿತ್ರಗಳನ್ನು ಈಗ ತೆಗೆಯಬಹುದಾಗಿದೆ. ಓಡುವ ಕುದುರೆ

ಗಳ, ಹಾರುವ ಹಕ್ಕಿಗಳ, ಹಾಗೂ ಗ್ರಹ–ನಕ್ಷತ್ರಗಳ ಪ್ರಕಾಶಚಿತ್ರ ಗಳನ್ನು ಎಲ್ಲರೂ ನೋಡಿರಬಹುದು. ಆದರೆ ಅರಣ್ಯದಲ್ಲಿ ಹಗಲಿರು ಳು ತಿರುಗುವ ಕ್ರೂರ ಪಶುಗಳು ತಮ್ಮ ನೈಸರ್ಗಿಕ ಸ್ಥಿತಿಯಲ್ಲಿದ್ದಾ ಗ ಅವುಗಳ ಪ್ರಕಾಶಚಿತ್ರಗಳನ್ನು ಇದ್ದಕ್ಕಿದ್ದ ಹಾಗೆ ತೆಗೆಯುವ ರೀತಿ ಯು ಬಹು ಮನೋರಂಜಕವಾಗಿದೆ. ಬೇಟೆಯಾಡುವವರು ಇಂಥ ಚಿತ್ರಗಳನ್ನು ತೆಗೆಯುವ ಯಂತ್ರವನ್ನು ತಮ್ಮ ಕೊರಳಲ್ಲಿ ಕಟ್ಟಿಕೊಂಡು ಹೋಗುವರು; ಹಾಗೂ ಯಾವದೊಂದು ಅನ್ಯಪಶುವನ್ನು ಕಂಡಕೂಡಲೆ ಅದರ ಚಿತ್ರವನ್ನು ತಕ್ಕೊಂಡು ಆ ಮೇಲೆ ಅದನ್ನು ಗುಂಡುಹಾಕಿ ಕೊಲ್ಲು ವರು. ರಾತ್ರಿಯಲ್ಲಿ ಪ್ರಕಾಶವಿಲ್ಲದ್ದರಿಂದ ಈ ಪ್ರಕಾರ ಚಿತ್ರ ತೆಗೆಯು ವದು ಅಸಾಧ್ಯವು. ಆದದರಿಂದ ಸಿಂಹ–ವ್ಯಾಘ್ರಾದಿಗಳು ಮಾಡಿಕೆ ಯಾಗಿ ಆಹಾರವನ್ನು ಹುಡುಕುವದಕ್ಕಾಗಲಿ ನೀರು ಕುಡಿಯುವದಕ್ಕಾ ಗಲಿ ಬರುವ ಸ್ಥಳದಲ್ಲಿ ಇಂಥಾದ್ದೊಂದು ಯಂತ್ರವನ್ನಿಡುತ್ತಾರೆ. ಪಶುಗ ಳು ಆ ಯಂತ್ರದ ಸವಿೂಪಕ್ಕೆ ಬಂದ ಕೂಡಲೆ ಆ ಯಂತ್ರದಲ್ಲಿ ಒಂದು ಅತಿಶಯ ಪ್ರಕಾಶ ಕೊಡುವ ದೀಪವು ಒಮ್ಮಿಂದೊಮ್ಮೆ ಪತ್ತಿ ಒಂದು ಕ್ಷಣದಲ್ಲಿ ಸಂದಿಹೋಗುವದು; ಹಾಗೂ ಅಷ್ಟು ಅವಕಾಶದಲ್ಲಿ ಆ ಪ್ರಾಣಿ ಯ ಚಿತ್ರವು ಅದಕ್ಕೆ ಗೊತ್ತಿಲ್ಲದಂತ ಯಂತ್ರದಲ್ಲಿ ಹೊರಡುವದು.

G. V. Gokhale.

ಸತ್ಕಾರ್ಯವ್ಯವಹಾರ.

ರಾವಸಾ. ಕನ್ನಡ ಶಾಲಾಪತ್ರಿಕೆಯ ಸಂಪಾದಕ–ಮಹಾಶಯರ ಸನ್ನಿಧಾನಕ್ಕೆ:—ಸಾ. ಸ. ವಿ. ವಿ. ನಿನ್ನಿನ ದಿವಸ ರಾ॥ ಸಾ॥ ಕೆ. ಎಸ್. ಕಳಸ ಬೀ. ಎ. ಮೂವ್ಲತದಾರ ತಾಲೂಕ ಬಂಕಾಪುರ ಇವರ ಅಧ್ಯಕ್ಷತೆಯ ಕೆಳಗೆ ಈ ವರ್ಷದ ಬಕ್ಷೀಸ ಸಮಾರಂಭವು ಬಹು ವಿಜೃಂಭಣೆ ಯಿಂದ ನೆಗವೇರಿತು. ವಿದ್ಯಾರ್ಥಿಗಳ ರಾಜಭಕ್ತಿ, ನೀತಿ, ಸಾಲೆಯ ಸುಸ್ಥಿತಿ, ಇವನ್ನು ಕಂಡು ಆನಂದವಟ್ಟು ವ್ಹಿ. ಬುಕ್ಕಿನೆಲ್ಲಿ ಉತ್ತಮವಾದ ಶರಾ ಬರೆದಿರುವರು.

ಸಮಾರಂಭದ ಕಾ

ಶ್ರೀ. ರಾ. ರಾ. ಫಕ್ಕೀರಪ್ಪ [illegible] ಬ [illegible]

ಗೆ ತಾಲೀಮಿನೆ ಎಲ್ಲ ಸಾವಾನುಗಳನ್ನೂ, ಸಭ್ಯಗೃಹಸ್ಥರಾದ ಮೆ. ರಾ. ರಾ. ಜೀವಣರಾವ ದೇವರಾವ ಕುಲಕರ್ಣಿ ಇವರು ಝಾಂಗಟೆಯನ್ನೂ ಕೊಡುತ್ತೇವೆಂದು ಸಭೆಯಲ್ಲಿ ವಾಗ್ದಾನ ಮಾಡಿರುತ್ತಾರೆ. ಇದು ಆ ಉದಾರ ಗೃಹಸ್ಥರಿಗೆ ಭೂಷಣವೇ ಸರಿ.

ಇದರಂತೆ ಯಾವತ್ತು ಸದ್ಗೃಹಸ್ಥರು ನೆರವಾದರೆ ಸಾಲೆಯ ಉತ್ಕರ್ಷಕ್ಕೆ ಒಳ್ಳೇ ಸಹಾಯವಾಗುವುದು. ದೇವರು ಸರ್ವರಿಗೂ ಶುಭ ವೀಯಲಿ. ಇಂತೀ ವಿಜ್ಞಾಪನೆಗಳು.

ಶಾಳಾ ಹುಲಗೂರ
ತಾ. ೧೮–೪–೧೧

ತಮ್ಮ ವಿಧೇಯ.
K. S. Ingalgikar.
ಹೆ. ಮಾ. ಕ್ಲ. ಶಾ. ಹುಲಗೂರು.

ಕೆಳಗೆ ಕಾಣಿಸಿದ ಪತ್ರವ್ಯವಹಾರವನ್ನು ಮುದ್ರಿಸಲು ಸ್ಥಳವಿಲ್ಲ:—

ಮಿ॥ ರುದ್ರಗೌಡಾ ವೀರಬಸಪ್ಪಗೌಡಾ ನಿಂಬಾಳಿ ಮಾಸ್ತರ ಶಿರ ಗಂಬಿ ಇವರು ಕಳುಹಿಸಿದ ಗೀತಗಳು.

ಮಿ॥ ದತ್ತಾತ್ರೆಯ ನಾರಾಯಣ ದೇಶಪಾಂಡೆ ಎಂಬವರು ಕಳುಹಿಸಿದ ಕಜೀಗಿ ಶಾಲೆಯ ಬಕ್ಷೀಸ ಸಮಾರಂಭದ ವೃತ್ತಾಂತ.

ಮಿ॥ ಸುಬ್ಬಯ್ಯಾ ಪರಮಯ್ಯಾ ಹೆಗಡೆ ಮುತ್ತಿಗಾರ ಎಂಬವರು ಬರೆದು ಕಳುಹಿಸಿದ ಮುತ್ತಿಗಾರ ಶಾಲೆಯ ಮಾಸ್ತರರ ಪ್ರಶಂಸೆ.

ಮಿ॥ ಬಸಪ್ಪಾ ಚನ್ನಪ್ಪಾ ಪಟ್ಟೇದ ಹೆಡ್ಡ ಮಾಸ್ತರ ಶಾಳಾ ವೆಂಟ ಮುರಿ ಇವರು ಬರೆದು ಕಳುಹಿಸಿದ "ಮೂರನೆಯ ಇಯತ್ತೆಯ ವ್ಯಾಕರಣವು."

ಮಿ॥ ದತ್ತಾತ್ರೆಯ ಶಂಕರ ಪಾಟೀಲ ಎಂಬವರು ಬರೆದು ಕಳುಹಿಸಿದ ಹಳ್ಳೇಕೇರಿ ಶಾಲೆಯ ಬಕ್ಷೀಸ ಸಮಾರಂಭದ ವೃತ್ತಾಂತ.

ಬಾನಗಿತ್ತಿ ಗುಡಿಹಾಳದ ಸ್ಕೂಲಕಮೀಟದಾರರು ಬರೆದು ಕಳುಹಿಸಿದ ಸದರೀ ಶಾಲೆಯ ಬಕ್ಷೀಸ ಸಮಾರಂಭದ ವೃತ್ತಾಂತ

ಶಾಲಾಪತ್ರಿಕೆ

ಪದ್ಯಂ

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ
ಜಯಿಸುತ್ತಂ ಪ್ರತಿಮಾಸದಾದಿಗೊಲವಿಂದೀ ಪತ್ರಮಂ ಮುದ್ರಿಸಿ ||
ನಯದಿಂದಿತ್ತಪೆವೋದುವರ್ಗೆ ಸುಗುಣಂದೋರಲ್ಕೆ ಕೈಕೊಂಬುದೈ
ದಯೆಯಿಂ ದೋಷವತಿದ್ದವೇಳ್ವುದು ಬುಧರ್ ಜ್ಞಾನಾಭಿವೃದ್ಧಿಪ್ರಿಯರ

ಪುಸ್ತಕ ೪೭ | ಮೇ ೧೯೧೧. | ಸಂಚಿಕೆ ೫.

ವಿದ್ಯಾಸುಧಾರಣಾಸಂಬಂಧದ ವೃತ್ತಾಂತಗಳು.

ಕಳೆದ ಮಾರ್ಚ್ ತಿಂಗಳ ೨೧ನೇ ತಾರೀಖಿನ ದಿವಸ ಮುಂಬಯಿ ಯುನಿವ್ಹರ್ಸಿಟಿಯ, ಅಂದರೆ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭವು ನೆರವೇರಿತು. ಆಕಾಲಕ್ಕೆ ಮುಂಬಯಿಯ ಗವ್ಹರ್ನರರಾದ ನಾಮದಾರ ಸರ್ ಜಾರ್ಜ ಕ್ಲಾರ್ಕ್‌ದೊರೆಗಳವರು ಯುನಿವ್ಹರ್ಸಿಟಿಯ ಚಾನ್ಸೆಲರ (ಅಧ್ಯಕ್ಷ) ರೆಂಬ ಸಂಬಂಧದಿಂದ ಮಾಡಿದ ಭಾಷಣದಲ್ಲಿ ಬಹ್ವಂಶವು ಪ್ರಾಥಮಿಕ ಶಿಕ್ಷಣವನ್ನು ಉದ್ದೇಶಿಸಿ ಇತ್ತು. ಶಿಕ್ಷಣದ ಸಂಬಂಧದಿಂದ ಸರಕಾರದ ಧೋರಣವು ಏನಿರುವದೆಂಬದು, ಆ ಭಾಷಣದಿಂದ ಚನ್ನಾಗಿ ವ್ಯಕ್ತವಾಗುವ ಕಾರಣ ಆ ಭಾಷಣದೊಳಗಿನ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಭಾಗವನ್ನು ಕನ್ನಡಕ್ಕೆ ಪರಿವರ್ತಿಸಿ ಕೆಳಗೆ ಕೊಟ್ಟಿದ್ದೇವೆ. ಅದರ ಪೂರ್ವದಲ್ಲಿ ನಾಮದಾರ ಸಾಹೇಬರವರು ಶಿಕ್ಷಣದ ಧ್ಯೇಯವೇನಿರಬೇಕೆಂಬ ಬಗ್ಗೆ ಪ್ರಖ್ಯಾತ ಇಂಗ್ಲಿಷ್ ಗ್ರಂಥಕಾರನಾದ ರಸ್ಕಿನ್ ಎಂಬವನ ಅಭಿಪ್ರಾಯವನ್ನು ತಮ್ಮ ಭಾಷಣದಲ್ಲಿ ಹೇಳಿದರು. ಅದನ್ನು ಇಲ್ಲಿ ಕೊಡುತ್ತೇವೆ:—

ರಸ್ಕಿನನು ಹೇಳುವದೇನೆಂದರೆ:— "ಪ್ರತಿಬಬ್ಬ ಮನುಷ್ಯನು ನ್ಯಾಯದಿಂದಲೂ ನೀತಿಯಿಂದಲೂ ನಡೆಯಬೇಕು; ಇಷ್ಟೇ ಅಲ್ಲ; ಅನ್ಯಾಯದ ಬಗ್ಗೆ ಪ್ರತಿಬಬ್ಬನ ಮನಸಿನಲ್ಲಿ ಸ್ವಾಭಾವಿಕವಾಗಿಯೇ ತಿರಸ್ಕಾರವು ಹುಟ್ಟಲಿಕ್ಕೆ

ಬೇಕು; ಶಾಲೆಯು ಸ್ವತಃ ಉದ್ಯೋಗಿಯಾಗಿರುವದಲ್ಲದೆ, ಉದ್ಯೋಗದಲ್ಲಿ ಅವನಿಗೆ ಪ್ರೇಮವಿಟ್ಟಿಗೆ ಇರಬೇಕು; ಸ್ವತಃ ವಿದ್ವಾಂಸನಾಗಿರುವದಲ್ಲದೆ, ಇತರರ ವಿದ್ವತ್ತೆಯ ಬಗ್ಗೆ ಆದರವುಳ್ಳವನಾಗಿರಬೇಕು; ಸ್ವತಃ ಶುದ್ಧಾಚರಣೆಯುಳ್ಳವನಾಗಿರುವದಲ್ಲದೆ, ಪರರ ಶುದ್ಧಾಚರಣೆಗೆ ಸಹಾಯವಾಗಬೇಕು; ಸ್ವತಃ ನ್ಯಾಯದಿಂದ ನಡೆಯುವದಲ್ಲದೆ, ಯಾವಾಗಲೂ ನ್ಯಾಯದ ಪಕ್ಷವನ್ನೇ ಕೈಕೊಳ್ಳುತ್ತಿರಬೇಕು."

ಶಿಕ್ಷಣದ ಮುಖ್ಯೋದ್ದೇಶವನ್ನು ಹೀಗೆ ಹೇಳಿ, ಮೇಲೆ ಕೊಟ್ಟ ರಸ್ಕಿನನ ಅಭಿಪ್ರಾಯವು ಪ್ರತಿಬಿಂಬಿಸುವಲ್ಲಿ ಬಂಗಾರದ ಅಕ್ಷರಗಳಿಂದ ಬರೆದಿಡುವಷ್ಟು ಯೋಗ್ಯತೆಯುಳ್ಳದ್ದಿರುತ್ತದೆಂದು ನಾಮದಾರ ಸಾಹೇಬರು ಹೇಳಿದರು. ತರುವಾಯ, ಅವರು ಪ್ರಾಥಮಿಕ ಶಿಕ್ಷಣದ ಬಗ್ಗೆ ಅಂದದ್ದೇನೆಂದರೆ:—

"ಪ್ರಾಥಮಿಕ ಶಿಕ್ಷಣವನ್ನು ಪುಕ್ಕಟೆಯಾಗಿಯೂ ಜುಲುಮೆಯಿಂದಲೂ ಕೊಡಬೇಕೆಂದು ಜನರು ಆಗಾಗ್ಗೆ ಬೇಡುತ್ತಾರೆ. ಈ ದಿಕ್ಕಿನಿಂದ ಪ್ರಯತ್ನ ಮಾಡುವದು ಇಷ್ಟವೇ ಸರಿ. ಆದರೆ, ಈ ಪ್ರಯತ್ನವು ಬಹಳ ತೊಡಕುಳ್ಳದ್ದಿದ್ದು, ಬಹುಜನರಿಗೆ ಅದರ ಯಥಾರ್ಥ ಕಲ್ಪನೆಯಾದಂತೆ ಕಂಡು ಬರುವದಿಲ್ಲ. "ಪುಕ್ಕಟೆಯಾದ ಶಿಕ್ಷಣ" ಎಂಬ ಶಬ್ದಗಳು ಅದರ ಅರ್ಥದ ಬಗ್ಗೆ ಬಹಳ ವಿಚಾರಮಾಡದೆ ಉಪಯೋಗಿಸಲ್ಪಡುತ್ತವೆ. ಸರಕಾರದ ಮುಖಾಂತರವಾಗಿ ಕೊಡಲ್ಪಡುವ ಶಿಕ್ಷಣವು ಎಂದೂ ಪುಕ್ಕಟೆಯಾದದ್ದಿರಲಾರದು. ಯಾಕಂದರೆ, ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಅಪ್ರತ್ಯಕ್ಷವಾಗಿ ಪ್ರತಿಬಿಬ್ಬನು ಶಿಕ್ಷಣಕ್ಕೋಸ್ಕರ ಕೆಲವು ಹಣವನ್ನು ಕೊಡಲೇ ಬೇಕಾಗುತ್ತದೆ. ಆದರೆ ಎಷ್ಟು ಎಂಬ ಬಗ್ಗೆ ಮಾತ್ರ ಪ್ರಶ್ನವಿರುತ್ತದೆ. ನಮ್ಮ ಇಲಾಖೆಯಲ್ಲಿ, ನಾದಾರ ಎಂಬ ಸದರಿನಲ್ಲಿ ಸೇರುವ ಎಷ್ಟೋ ಹುಡುಗರ ಫೀ ಹಣವು ಮಾಫು ಮಾಡಲ್ಪಟ್ಟಿರುವದು; ಮತ್ತು ನಿಜವಾಗಿ ಶಿಕ್ಷಣದ ಸಲುವಾಗಿ ಹಣವನ್ನು ವೆಚ್ಚಮಾಡುವ ಯೋಗ್ಯತೆ ಇಲ್ಲದಿದ್ದವರಿಗೆ ತಮ್ಮ ಹುಡುಗರಿಗೆ ಶಾಲೆಯಲ್ಲಿ ಪುಕ್ಕಟೆಯಾಗಿ ಶಿಕ್ಷಣವನ್ನು ಕೊಡಿಸಲಿಕ್ಕೆ ಸಾಕಷ್ಟು ಅನುಕೂಲತೆ ಇರುವದು. ಆರಂಭದಿಂದ ಏನೇ ಇಯತ್ತೆಯವರೆಗೆ ಒಬ್ಬ ಹುಡುಗನಿಗೆ ಎಷ್ಟು ಫೀ ಹಣವು ಬೇಕಾಗುವದೆಂಬದನ್ನು ಆಲೋಚಿಸಿದರೆ, ಮೇಲೆ ಹೇಳಿದ ಮಾತು ಚನ್ನಾಗಿ ಲಕ್ಷದಲ್ಲಿ ಬರುವದು. ದೊಡ್ಡ ಊರು

ಗಳಲ್ಲಿ ಒಬ್ಬ ವಿದ್ಯಾರ್ಥಿಯ ಒಟ್ಟು ಶಿಕ್ಷಣಕ್ಕೆ ಫೀ ಹಣವು ೧೦ ರೂಪಾಯಿ ೪ ಆಣೆ ಹಿಡಿಯುವದು; ಹಳ್ಳಿಗಳಲ್ಲಿ ೭ ರೂಪಾಯಿ ೬ ಆಣೆ ಹಿಡಿಯುವದು. ಇದರಿಂದ ಪ್ರಾಥಮಿಕ ಶಿಕ್ಷಣವು ಪುಕ್ಕಟೆಯಾಗಿ ಸಿಗುವಂತೆ ವ್ಯವಸ್ಥೆಮಾಡುವ ವಿಷಯದಲ್ಲಿ ಸರಕಾರದವರು ಎಷ್ಟು ಮುಂದರಿದಿರುವರೆಂಬದು ಕಂಡು ಬರುತ್ತದೆ. ರೂಪಾಯಿಗೆ ಒಂದು ಆಣೆಯಂತೆ ಲೋಕಲ್ ಫಂಡ ಕೊಡುವವರು ತಮ್ಮ ಹುಡುಗರ ಸಲುವಾಗಿ ವರ್ಷಕ್ಕೆ ೧೨ ಆಣೆಗಳನ್ನೂ ಚಿಕ್ಕ ಹುಡುಗರ ಸಲುವಾಗಿ ೬ ಆಣೆಗಳನ್ನೂ ಮಾತ್ರ ವೆಚ್ಚಮಾಡಬೇಕಾಗುವದು.

ಸದ್ಯಕ್ಕೆ ಅಸ್ತಿತ್ವದಲ್ಲಿರುವ ಪ್ರಾಥಮಿಕ ಶಾಲೆಗಳು ಒಳ್ಳೇ ಸಮಾಧಾನಕರವಾದ ಸ್ಥಿತಿಯಲ್ಲಿರುವವೆಂತಲೂ, ಅಲ್ಲಿ ಕೊಡಲ್ಪಡುವ ಶಿಕ್ಷಣವು ಉತ್ತಮವಾದದ್ದಿರುತ್ತದೆಂತಲೂ ಸ್ಥಿರವಾದ ಪರಿಣಾಮವನ್ನುಂಟು ಮಾಡುವಂಥಾದ್ದು ಇರುತ್ತದೆಯೆಂತಲೂ, ಹುಡುಗರ ಪಾಲಕರು ಇಂಥ ಶಾಲೆಗಳನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳುವರೆಂತಲೂ ಅನ್ನಲಿಕ್ಕೆ ಬರುವಂತಿದ್ದರೆ, ದುಡ್ಡಿನ ಅನುಕೂಲತೆ ಆದ ಆದಂತೆ ಇಂಥ ಶಾಲೆಗಳನ್ನು ಸಸೂಮಿತಿ ಇಲ್ಲದೆ ಬೇಕಾದಷ್ಟು ಬೆಳಿಸಬೇಕೆನ್ನುವದು ಯೋಗ್ಯವಾಗುತ್ತಿತ್ತು. ಆದರೆ ದುರ್ದೈವದಿಂದ ವಸ್ತುಸ್ಥಿತಿಯು ಹಾಗಿರುವದಿಲ್ಲ. ಈ ಸಂಬಂಧದಿಂದ ಕೇವಲ ಅಂಕೆಗಳನ್ನೇ ನಂಬಿ ನಡೆಯುವದು ತಪ್ಪಾಗುವದು. ಇ. ಸ. ೧೯೦೯–೧೦ನೇ ವರ್ಷದ ಅಂತ್ಯಕ್ಕೆ ಸರಕಾರದವರು ಮಾನ್ಯಮಾಡಿದ ಪ್ರಾಥಮಿಕ ಶಾಲೆಗಳ ಸಂಖ್ಯೆಯು ೧೧,೬೯೦ ಇತ್ತು. ವಿದ್ಯಾರ್ಥಿಗಳ ಸಂಖ್ಯೆಯು ೬,೯೦,೫೩೩ ಇತ್ತು. ಮತ್ತು ಶಾಲೆಗಳಿದ್ದ ಹಳ್ಳಿಗಳ ಸಂಖ್ಯೆಯು ೧೦,೮೪೫ ಇತ್ತು. ಈ ಸಂಖ್ಯೆಗಳು ಬೆಳೆದು ಸದ್ಯಕ್ಕೆ ಸಾಚ್ಚಾಗಿರುತ್ತವೆ. ಮತ್ತು ಇದಕ್ಕೂ ಹೆಚ್ಚು ಬೆಳಿಸುವ ನಮ್ಮ ವಿಚಾರವಿರುತ್ತದೆ. ಕೆಲ ಕೆಲವು ಸ್ಥಳಗಳಲ್ಲಿ ಇನ್ನೂ ಹೆಚ್ಚು ಶಾಲೆಗಳು ಬೇಕೆಂದು ಜನರಿಗೆ ತೋರುತ್ತದೆ. ಆದರೆ ಬಹುತರವಾಗಿ ಯಾವತ್ತೂ ಜಿಲ್ಲೆಗಳಲ್ಲಿ ಅವಶ್ಯವಿದ್ದಷ್ಟು ಶಾಲೆಗಳು ಆಗಿರುತ್ತವೆ. ವಾಡಿಕೆಯಾಗಿ ಹದಿನೈದು ಅಥವಾ ಹದಿನೈದಕ್ಕಿಂತಲೂ ಕಡಿಮೆ ಹುಡುಗರು ಹಾಜರ ಇರುವಲ್ಲಿ ಶಾಲೆಗಳು ಇಡಲ್ಪಟ್ಟಿರುತ್ತವೆ. ಆದರೆ ಪಾಲಕರ ಉದಾಸೀನತೆಯ ಮೂಲಕವಾಗಿಯೂ, ಲೋಕಲ್ ಬೋರ್ಡಿನ ಹಣಕ್ಕೆ ಇರುವ ಹಲವು ವಿಧವಾದ ಬೇಡಿಕೆ

ಗಳ ಮೂಲಕವಾಗಿಯೂ ಹಲಕೆಲವು ಸಾಲೆಗಳು ಬಂದು ಮಾಡಲ್ಪಟ್ಟಿರ
ವವು. ಇದರಿಂದ, ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕ ಪ್ರಸಾರದ ಪ್ರಯತ್ನ
ವನ್ನು ಮಾಡಬಾರದೆಂದು ಅನ್ನಲಿಕ್ಕೆ ಬಾರದಿದ್ದರೂ ಅಂಥ ಪ್ರಯತ್ನಗಳನ್ನು
ಮಾಡುವ ಕಾಲಕ್ಕೆ ಹೆಚ್ಚು ಎಚ್ಚರ ಪಡತಕ್ಕದ್ದೆಂತಲೂ, ಅವುಗಳನ್ನು
ಸಾವಕಾಶವಾಗಿ ಮಾಡತಕ್ಕದ್ದೆಂತಲೂ ಅನ್ನಬಹುದು. ಇದಲ್ಲದೆ, ಒಂದ
ನೊಂದು ಸಾಲೆಯು ಒಳ್ಳೇ ಯಶಸ್ವಿಯಾಗಿ, ಆ ಸಾಲೆಯಲ್ಲಿ ಶಿಕ್ಷಕರ ಮಾ
ದಿಂದ ಹುಡುಗರ ಸಂಖ್ಯೆಯು ಬಹಳ ಬೆಳೆದು, ಆ ಸಾಲೆಗೆ ಅಸಿಸ್ಟಂಟ
ನ್ನು ಕೊಡಲಿಕ್ಕಾಗದಿದ್ದರೆ, ಸ್ವಾಭಾವಿಕವಾದ ಅದರ ಪ್ರಗತಿಯು ಕಟ್ಟಾಗಿ
ಅದು ಬೇಗನೆ ಮುರಕಳಿಗೆ ಬರುವ ಸಂಭವವಿರುತ್ತದೆ. ಇಂಥ ಹಲವ
ಉದಾಹರಣೆಗಳು ದೃಷ್ಟಿಗೆ ಬೀಳುತ್ತವೆ. ಇಂಥ ಸ್ಥಿತಿಯಲ್ಲಿರುವ ಸಾಲೆ
ಗಳ ಬೇಡಿಕೆಗಳನ್ನು ಪೂರ್ಯಿಸುವದಕ್ಕಿಂತ ಮೊದಲು, ಹೊಸ ಸಾಲೆಗಳನ್ನು
ಸ್ಥಾಪಿಸುವದರಲ್ಲಿ ಹಣವನ್ನು ವೆಚ್ಚ ಮಾಡುವದು ಯೋಗ್ಯವಾಗಲಾರದು.

ಪ್ರಾಥಮಿಕ ಶಿಕ್ಷಣದ ಪ್ರಶ್ನವು ಬಹಳ ಮಹತ್ವದ್ದಿರುವದು. ಈ
ಪ್ರಶ್ನದ ವಿಚಾರವನ್ನು ಮಾಡುವಾಗ್ಗೆ ಹಲವು ಸಂಗತಿಗಳನ್ನು ಲಕ್ಷದಲ್ಲಿ
ಡುವ ಅವಶ್ಯಕತೆಯುಂಟೆಂದು ಕಂಡು ಬರುವದು. ಶಿಕ್ಷಕರ ಯೋಗ್ಯತೆ
ಗುಣ, ಶೀಲ ಇವುಗಳು ಅವರು ಕೈಕೊಂಡ ಉದ್ಯೋಗಕ್ಕೆ ಅವರನ್ನು ಯೋ
ಗ್ಯರನ್ನಾಗಿ ಮಾಡುವಂಥವು ಇದ್ದ ಹೊರತು, ರಸ್ಕಿನನು ಹೇಳಿದ ಶಿಕ್ಷಣದ
ಯಾವ ಉದ್ದೇಶವೂ ಈಡೇರಲಾರದು. ಪ್ರಾಥಮಿಕಶಾಲೆಗಳಲ್ಲಿ ಗಂಡಸರು
ಹೆಂಗಸರೂ ಕೂಡಿ ಒಟ್ಟಿಗೆ ೨೧,೭೧೬ ಜನ ಶಿಕ್ಷಕರಿರುವರು. ೪,೪೦೦
ಜನ ಹೆಡ್‌ಮಾಸ್ತರರಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ಅಂಟ್ರೇಂಡರಿರುವರು
೧೧,೭೦೬ ಜನ ಅಸಿಸ್ಟಂಟರಲ್ಲಿ ೫ ಜನರು ಮಾತ್ರ ಟ್ರೇಂಡ ಶಿಕ್ಷಕರಿರು
ವರು; ಅರ್ಧ ಜನರು ಮಾತ್ರ ದೇಶಭಾಷೆಯ ಸಾಲೆಗಳ ಕಟ್ಟಕಡೆಯ
ಪರೀಕ್ಷೆಯಲ್ಲಿ ಪಾಸಾದವರಿರುವರು. ಅವರಿಗೆ ಟ್ರೇಂಡ ಶಿಕ್ಷಕರಂತೆ
ಶಿಕ್ಷಣವು ದೊರೆತಿಲ್ಲ. ಇತ್ತಿತ್ತಲಾಗಿ ಸರಕಾರದವರು ಅಸಿಸ್ಟಂಟರ ಪಗಾರ
ವನ್ನು ತೀರ ಕಡಿಮೆಯೆಂದರೆ ೯ ರೂಪಾಯಿಗಳ ವರೆಗೆ ಮಾಡಿರುತ್ತಾರೆ
ಎಲ್ಲ ಟ್ರೇಂಡ ಶಿಕ್ಷಕರಿಗೆ ಅವರ ಸರಟೀಫಿಕೇಟಿನಷ್ಟು ಪಗಾರವು ದೊರ
ಯುವಂತೆ ವ್ಯವಸ್ಥೆಯು ಮಾಡಲ್ಪಟ್ಟಿರುವದು. ಹಾಗು ನ್ಯಾಯವಾಗಿ ಅವ

ರಿಗೆ ಸಿಗತಕ್ಕ ಪಗಾರದ ಸಂಬಂಧದಿಂದ ತಕ್ಕ ವ್ಯವಸ್ಥೆಯನ್ನು ಮಾಡುವ ವಿಚಾರವು ಸರಕಾರದ ಮನಸಿನಲ್ಲಿ ಅದೆ. ಲೋಕಲ್ ಬೋರ್ಡ ಶಾಲೆಗಳ ಹೆಡ್ ಮಾಸ್ತರರ ಪಗಾರದ ಸರಾಸರಿಯು ೩೦ ರೂಪಾಯಿ ೧೪ ಆಣೆ ೬ಪೈ ಯೆಂತಲೂ, ಮುನಸಿಪಲ್ ಶಾಲೆಗಳ ಹೆಡ್‌ಮಾಸ್ತರರ ಪಗಾರದ ಸರಾಸರಿಯು ೨೯ ರೂಪಾಯಿ ೮ ಆಣೆ ೬ ಪೈ ಯೆಂತಲೂ ವಿದ್ಯಾಖಾತೆಯ ಡಾಯರೆಕ್ಟರ ಸಾಹೇಬರವರ ರಿಪೋರ್ಟನಿಂದ ಗೊತ್ತಾಗುತ್ತದೆ. ಈ ಹೆಚ್ಚು ಕಡಿಮೆಗೆ ಮುಂಬಯಿ ಮ್ಯುನಸಿಪಾಲಿಟಿಯ ಮಾಸ್ತರರ ದೊಡ್ಡ ಪಗಾರಗಳನ್ನು ಕೂಡಿಸಿದ್ದೇ ಮುಖ್ಯ ಕಾರಣವೆಂದು ತೋರುತ್ತದೆ. ಇರಲಿ. ಇದರಿಂದ ಶಿಕ್ಷಕರಿಗೆ, ಮುಖ್ಯವಾಗಿ ಹಳ್ಳಿಯ ಶಾಲೆಗಳ ಶಿಕ್ಷಕರ ಪಗಾರವು ತೀರ ಕಡಿಮೆ ಇರುತ್ತದೆಯೆಂಬದು ಸ್ಪಷ್ಟವಾಗುತ್ತದೆ. ಶಿಕ್ಷಣದ ಉದ್ಯೋಗವು ಯಾವ ದೇಶದಲ್ಲಿಯೂ ದುಡ್ಡು ಸಂಪಾದಿಸುವ ಉದ್ಯೋಗವೆಂದು ತಿಳಿಯಲ್ಪಡುವದಿಲ್ಲವೆಂಬದೂ, ಈ ಉದ್ಯೋಗದಲ್ಲಿ ಬಹಳ ಲಾಭವಾಗುವದು ಎಂದೂ ಶಕ್ಯವಿಲ್ಲವೆಂಬದೂ ನಿಜ; ಹಾಗೂ ಈ ದೇಶದಲ್ಲಿ ನಿವೃತ್ತಿಮಾರ್ಗದ ವಿಚಾರಗಳ ಪರಂಪರೆಯ ಮೂಲಕವಾಗಿ ಸ್ವಾರ್ಥತ್ಯಾಗವನ್ನು ಮಾಡಿ ಈ ಪವಿತ್ರ ಉದ್ಯೋಗದಲ್ಲಿಯೇ ತಮ್ಮ ಆಯುಷ್ಯವನ್ನು ಕಳೆಯುವ ಜನರು ಬೇರೆ ದೇಶಗಳಿಗಿಂತ ಹೆಚ್ಚು ದೊರೆಯುವ ಸಂಭವವಿರುತ್ತದೆಂಬದೂ ನಿಜ. ಆದರೆ, ಸ್ವಾರ್ಥತ್ಯಾಗಕ್ಕಾದರೂ ಕೆಲವೊಂದು ಮರ್ಯಾದೆಯುಂಟು; ಮತ್ತು ಇಷ್ಟು ಸಣ್ಣ ಸಂಬಳವನ್ನು ತಕ್ಕೊಂಡು ಕೆಲಸ ಮಾಡುವ ಒಳ್ಳೇ ಶಿಕ್ಷಕರು ಬಹಳ ಮಂದಿ ದೊರೆಯುವೇಕೆಂದರೆ ತಪ್ಪಾಗುವದು. ಮೇಲೆ ಹೇಳಿದ ಉಚ್ಚ ಪ್ರವೃತ್ತಿಯ ಮೂಲಕವಾಗಿಯೇ ಪ್ರಾಥಮಿಕ ಶಾಲೆಗಳೊಳಗಿನ ಟ್ರೇಂಡ ಶಿಕ್ಷಕರು ಬಹಳ ಚನ್ನಾಗಿ ಕೆಲಸ ಮಾಡುತ್ತಾರೆಂದು ಹೇಳಬಹುದು; ಮತ್ತು ಸಾಧಾರಣವಾಗಿ ಪ್ರಾಥಮಿಕ ಶಾಲೆಗಳೊಳಗಿನ ಮೇಲಿನ ಇಯತ್ತೆಗಳಲ್ಲಿ ದೊರೆಯುವ ಶಿಕ್ಷಣವು ಮಧ್ಯಮ ಶಿಕ್ಷಣಶಾಲೆಗಳಲ್ಲಿ ದೊರೆಯುವ ಶಿಕ್ಷಣಕ್ಕಿಂತ ಬಹಳ ಸರಸವಾಗಿರುತ್ತದೆ. ಕೆಲಕೆಲವು ಪಟ್ಟಣಗಳಲ್ಲಿ ಕೆಳಗಿನ ಇಯತ್ತೆಗಳ ಶಿಕ್ಷಣವನ್ನು ಕೊಡುವ ಪ್ರಾಥಮಿಕ ಶಾಲೆಗಳೂ ನೆಟ್ಟಗಿರುತ್ತವೆ. ಆದರೆ ಅವುಗಳ ಸಂಬಂಧದಿಂದ ಒಟ್ಟಿನ ಮೇಲೆ ಅಭಿಪ್ರಾಯವನ್ನು ಕೊಡುವದಾದರೆ ಹಾಗೆ ಅನ್ನಲಿಕ್ಕೆ ಬರಲಾರದು. ಶಾಶ್ವತವಾದ ಜ್ಞಾನವು ಆದ ಹೊರತು ಶಿಕ್ಷಣದ ನಿಜವಾದ ಹೇತುವು ಸಾಧಿಸುವ

ದಿಲ್ಲಿಂಬ ಮಾತಿಗೆ ನೀವೆಲ್ಲರೂ ಒಪ್ಪಿಕೊಳ್ಳುವಿರಿ; ಆದಕಾರಣ, ಪ್ರಾಥಮಿಕ ಶಾಲೆಗಳಿಂದ ಹೊರಬೀಳುವ ವಿದ್ಯಾರ್ಥಿಗಳಿಗೆ ಅವರು ಜೀವದಿಂದ ಇರುವ ಮಟ್ಟಿಗೆ ಓದು-ಬರಹಗಳು ಬರುವಷ್ಟು ಶಿಕ್ಷಣವು ದೊರೆಯದಿದ್ದರೆ ಅವರ ಶಿಕ್ಷಣವು ನಿರರ್ಥಕವಾದದ್ದೆಂದು ಹೇಳಬಹುದು. ಕನಿಷ್ಠ ಪಕ್ಷಕ್ಕೆ ನಾಲ್ಕು ಇಯತ್ತೆಗಳ ವರೆಗಾದರೂ ಒಳ್ಳೇ ಶಿಕ್ಷಣವನ್ನು ಹೊಂದಿದ ಹುಡುಗರ ಅವಸ್ಥೆಯು ಹೀಗೇ ಆಗುತ್ತದೆಯೆಂದು ಅನುಭವವಿರುತ್ತದೆ. ಪುಕ್ಕಟೆಯಾಗಿಯೂ, ಜುಲುಮೆಯಿಂದಲೂ ಕೊಡುವ ಶಿಕ್ಷಣದ ಮಯರ್ಾದೆಯನ್ನು ತೀರ ಕಡಿಮೆಯೆಂದರೆ ನಾಲ್ಕನೇ ಇಯತ್ತೆಯ ವರೆಗಾದರೂ ಇಡುವದು ಅವಶ್ಯವದೆ. ವಾಡಿಕೆಯಾಗಿ ಹಳ್ಳಿಪಾಡದ ಶಾಲೆಗಳಲ್ಲಿ ನೂರಕ್ಕೆ ೩೩ ಹುಡುಗರು ಮಾತ್ರ ನಾಲ್ಕನೇ ಇಯತ್ತೆಯ ವರೆಗೆ ಕಲಿಯುತ್ತಾರೆ. ಉಳಿದವರ ಬುದ್ಧಿಗೆ ಅಲ್ಪ ಸ್ವಲ್ಪ ಚಾಲನೆ ದೊರೆಯುತ್ತಿರಬಹುದು; ಅವರಿಗೆ ಕೆಲ ಕೆಲವು ಹೊಸ ಕಲ್ಪನೆಗಳು ತಿಳಿಯಬಹುದು; ಮತ್ತು ತುಸು ಮಟ್ಟಿಗೆ ಶಿಸ್ತು ಹತ್ತಬಹುದು. ಆದರೆ ಯಾವ ಶಿಕ್ಷಣದ ಸಂಸ್ಕಾರವು ಸ್ವಲ್ಪ ವರ್ಷಗಳಲ್ಲಿ ತೀರ ನಷ್ಟವಾಗಿ ಹೋಗುವದೋ ಆ ಶಿಕ್ಷಣವು ಸರ್ವಥಾ ನಿರುಪಯುಕ್ತವಾದದ್ದೆಂದು ಖಂಡಿತವಾಗಿ ಹೇಳಬಹುದು. ಈ ಸ್ಥಿತಿಯುಂಟಾಗಲಿಕ್ಕೆ ಬಹಳ ಕಾರಣಗಳಿರುತ್ತವೆ. ಆ ಎಲ್ಲ ಕಾರಣಗಳ ಬೊಡ್ಡಿಗೆ ಬಹುತೇರವಾಗಿ ಶಾಲೆಗಳ ಅಸಮಾಧಾನಕರವಾದ ಸ್ಥಿತಿಯೇ ಇರುವದೆಂದು ತೋರುವದು. ಹಳ್ಳಿಯ ಶಾಲೆಯ ಶಿಕ್ಷಕನಿಗೆ ಬಾಲಕರ ವರ್ಗವಲ್ಲದೆ ಬೇರೆ ನಾಲ್ಕು ವರ್ಗಗಳನ್ನು ಕಲಿಸಬೇಕಾಗುತ್ತದೆ. ಒಬ್ಬ ಮನುಷ್ಯನೇ ೫ ವರ್ಗಗಳನ್ನು ಕಲಿಸುವದು ಶಕ್ಯವಿರುವದಿಲ್ಲಾದದರಿಂದ ಸ್ವಾಭಾವಿಕವಾಗಿಯೇ ವಿದ್ಯಾರ್ಥಿಗಳ ಶಿಕ್ಷಣವು ಅಲ್ಲಿಗೇ ಮುಗಿದು ಹೋಗುತ್ತದೆ. ಸಾಧಾರಣವಾಗಿ ೩ನೇ ೪ನೇ ಇಯತ್ತೆಗಳ ಮುಂದೆ ಆ ಹುಡುಗರ ಶಿಕ್ಷಣವೇ ಆಗುವದಿಲ್ಲ. ಕಿಂಡರಗಾರ್ಟನ್ ಪದ್ಧತಿಯು ಯೋಗ್ಯರೀತಿಯಿಂದ ಶಿಕ್ಷಣವನ್ನು ಹೊಂದಿದ ಟ್ರೇಂಡ ಶಿಕ್ಷಕನ ಕೈಯಲ್ಲಿದ್ದರೆ ಬಹಳ ಲಾಭವಾಗುವದು. ಆದರೆ ಅದನ್ನು ಅಂಟ್ರೇಂಡ ಶಿಕ್ಷಕನ ಕೈಯಲ್ಲಿ ಕೊಟ್ಟರೆ ಅದರಿಂದ ಏನೂ ಉಪಯೋಗವಾಗುವದಿಲ್ಲ. ಟ್ರೇಂಡ ಶಿಕ್ಷಕರ ಕೊರತೆಯುಂಟೆಂಬದನ್ನು ನಾನು ನಿಮಗೆ ಹಿಂದೆ ಹೇಳಿದ್ದೇನೆ. ಬಹುತೇರವಾಗಿ ಶಾಲೆಗಳ ವಿಷಯವಾಗಿ ಬಾಲಕರಲ್ಲಿರುವ ಉದಾಸೀನವೆಷ್ಟೆ ಪಾಲಿಸಲ್ಪಡುವ

ಸ್ಥಿತಿಯೂ, ಶಿಕ್ಷಕರ ಅಪಾತ್ರತೆಯೂ, ಮನೆಗೆಲಸಕ್ಕೆ ಹಳ್ಳಿಯ ಹುಡುಗರ ಅವಶ್ಯಕತೆಯೂ ಕಾರಣವಾಗಿರುತ್ತವೆ. ಅದಕ್ಕಾಗಿಯೇ ಶಿಕ್ಷಣದ ಸಂಬಂಧದಿಂದ ಜುಲುಮೆಯ ಅವಶ್ಯಕತೆಯುಂಟೆಂದು ಬಹು ಜನರ ಅಭಿಪ್ರಾಯವಿರುತ್ತದೆ.

ಪ್ರಾಥಮಿಕಶಿಕ್ಷಣವು ಲೋಕಪ್ರಿಯವಾಗುವಂತೆ ಮಾಡಲಿಕ್ಕೆ ಉತ್ಕೃಷ್ಟವೂ ಎಲ್ಲ ಅನುಕೂಲತೆಗಳುಳ್ಳಂಥವೂ ಆದ ಸುಂದರವಾದ ಶಾಲಾಗೃಹಗಳು ಬಹಳ ಅವಶ್ಯವಾಗಿರುವವು. ಎಷ್ಟೋ ಹಳ್ಳಿಯ ಶಾಲೆಗಳು ಕೀರ ಕಸಿಷ್ಠ ಪ್ರತಿಯವೂ ಎಲ್ಲ ಅನುಕೂಲತೆಗಳು ಇಲ್ಲದವುಗಳೂ ಇರುತ್ತವೆ. ಊರವರು ಶಾಲಾಗೃಹಗಳನ್ನು ಕಟ್ಟಿಸಿಕೊಡುವದರಿಂದ ಅವರಲ್ಲಿ ಶಿಕ್ಷಣಾಭಿರುಚಿಯು ಎಷ್ಟಿರುವದೆಂಬದು ಗೊತ್ತಾಗುವದು. ಎಷ್ಟೋ ಸ್ಥಳಗಳಲ್ಲಿ ಶಾಲಾಗೃಹಗಳನ್ನು ಕಟ್ಟಿಸಿಕೊಡುವ ಇಚ್ಛೆಯೂ ವ್ಯಕ್ತವಾಗುವದಿಲ್ಲ. ಬೇರೆ ಕೆಲವು ಕಡೆಗೆ ಈ ತರದ ಸಹಾಯ ಮಾಡುವ ಇಚ್ಛೆಯು ಕಂಡು ಬಂದಾಗ್ಯೂ ಸಾಕಷ್ಟು ಹಣವನ್ನು ಕೊಡುವ ಯೋಗ್ಯತೆಯು ಇಲ್ಲದ ಮೂಲಕವಾಗಿ ಸರಕಾರದವರ ಸಹಾಯವಿಲ್ಲದೆ ಕಲೋ ಶಾಲಾಗೃಹಗಳನ್ನು ಕಟ್ಟಿಸುವದು ಶಕ್ಯವಿಲ್ಲ. ಮ್ಯುನಿಸಿಪಾಲಿಟಿ, ಲೋಕಲ್‌ಬೋರ್ಡುಗಳ ಉತ್ಪನ್ನವು ಬೆಳೆಯಲಿಕ್ಕೆ ಮಾರ್ಗವಿಲ್ಲದ್ದರಿಂದಲೂ, ಇದ್ದ ಉತ್ಪನ್ನಕ್ಕೆ ಬೇರೆಬೇರೆ ಕೆಲಸಗಳ ಸಲುವಾಗಿ ಅನೇಕ ಖರ್ಚಿನ ಬಾಬುಗಳು ಇರುವದರಿಂದಲೂ, ಹೊಸ ಸಾಲೆಗಳನ್ನು ಸ್ಥಾಪಿಸಲಿಕ್ಕೂ ಶಿಕ್ಷಕರ ಸಂಖ್ಯೆಯನ್ನು ಬೆಳಿಸಲಿಕ್ಕೂ ಶಿಕ್ಷಕರಿಗೆ ಹೆಚ್ಚು ಪಗಾರವನ್ನು ಕೊಡಲಿಕ್ಕೂ ಅವರಲ್ಲಿ ಹಣವಿಲ್ಲ. ಸರಕಾರದವರಿಗೆ ಈ ಎಲ್ಲ ತೊಂದರೆಗಳು ಗೊತ್ತಿರುತ್ತವೆ. ಮತ್ತು ಸ್ಥಾನಿಕ ಕರವನ್ನು ಹೆಚ್ಚು ಬೆಳಿಸದೆ, ಅಥವಾ ಪ್ರಾಂತಿಕ ಸರಕಾರದ ಬೊಕ್ಕಸದೊಳಗಿಂದ ಹಣದ ಸಹಾಯವನ್ನು ಮಾದದೆ, ಈ ಸುಧಾರಣೆಗಳನ್ನು ಮಾಡುವದು ಅಶಕ್ಯವೆಂಬದನ್ನೂ ನಾವು ಬಲ್ಲೆವು. ಪ್ರಾಥಮಿಕ ಶಿಕ್ಷಣದ ಸದ್ಯಸ್ಥಿತಿಯನ್ನು ಪರಿತುಕೊಳ್ಳಲಿಚ್ಛಿಸುವವರು ಚನ್ನಾಗಿ ತಿಳಕೊಳ್ಳತಕ್ಕ ಮುಖ್ಯ ಮಾತುಗಳ ದಿಗ್ದರ್ಶನವನ್ನು ಮಾತ್ರ ನಾನು ಇಲ್ಲಿ ಮಾಡಿರುತ್ತೇನೆ. ಈ ಮುಖ್ಯವಾದ ಮುದ್ದೆಯ ಮಾತುಗಳಿಂದ ಪ್ರಾಥಮಿಕ ಶಿಕ್ಷಣಕ್ಕೆ ಅವ

ಶ್ಯಕವಾದ ಸಂಗತಿಗಳು ಯಾವವೆಂಬದು ಗೊತ್ತಾಗುವದು; ಪ್ರಾಥಮಿಕ ಶಿಕ್ಷಣದ ಸದ್ಯಸ್ಥಿತಿಯನ್ನು ಸುಧಾರಿಸಲಿಕ್ಕೆ ಹಣದ ಅವಶ್ಯಕತೆಯು ಎಷ್ಟಿರುವದೆಂಬದನ್ನು ಇವೇ ಮಾತುಗಳಿಂದ ಸಿದ್ಧಮಾಡಿ ತೋರಿಸಬಹುದು; ಹಾಗೂ ಸದ್ಯದಂಥ ಸಾಲೆಗಳ ಸಂಖ್ಯೆಯನ್ನು ಇನ್ನು ಮುಂದೆ ಊರೂರಿಗೆ ಬೆಳಿಸುತ್ತ ಹೋದರೆ ಮೊದಲೇ ಕನಿಷ್ಠ ಪ್ರತಿಯು ದಾಗಿರುವ ಶಿಕ್ಷಣವು ಮತ್ತಿಷ್ಟು ಕಡಿಮೆ ಪ್ರತಿಯದಾಗುವದೆಂಬದನ್ನೂ ಇವೇ ಮಾತುಗಳಿಂದ ಸ್ಪಷ್ಟವಾಡಿ ತೋರಿಸಬಹುದು. ಪ್ರಾಥಮಿಕ ಶಾಲೆಗಳ ಅಭ್ಯಾಸಕ್ರಮದ ಬಗ್ಗೆ ಪುನಃ ವಿಚಾರವಾಗಿ, ಅದು ವ್ಯವಹಾರಕ್ಕೆ ಹೆಚ್ಚು ಯೋಗ್ಯವಾಗುವಂತೆಯೂ ಅದು ಯಾವಾಗಲೂ ಉಪಯೋಗ ಬೀಳುವಂತೆಯೂ ಅದಕ್ಕೆ ತಕ್ಕ ಸ್ವರೂಪವನ್ನು ಕೊಡಲಿಕ್ಕೆ ಯೋಗ್ಯವಾದ ಪ್ರಯತ್ನವು ಮಾಡಲ್ಪಡುವದು. ಈ ಸುಧಾರಣೆಗಳು ವಿಶೇಷವಾಗಿ ಹಳ್ಳಿಯ ಸಾಲೆಗಳಲ್ಲಿ ಮಾಡಲ್ಪಡುವವು. ಯೋಗ್ಯ ಪದ್ಧತಿಯಿಂದ ಕಲಿಸಲಿಕ್ಕೆ ತಕ್ಕ ವ್ಯವಸ್ಥೆಯು ಆಗದ ವಿಷಯಗಳನ್ನು ಪೂರ್ಣವಾಗಿ ತೆಗೆದು ಹಾಕಲಾದೀತು. ಪ್ರಾಥಮಿಕ ಶಾಲೆಗಳೊಳಗಿನ ಅಭ್ಯಾಸಕ್ರಮದಲ್ಲಿ ಸ್ವಚ್ಛತೆ ಆರೋಗ್ಯ ಇವುಗಳ ಸಂಬಂಧದ ಕೆಲವು ಉಪಯುಕ್ತ ನಿಯಮಗಳನ್ನೂ ಸ್ಥಾನಿಕ ಭೂಗೋಲವನ್ನೂ ಕೃಷಿಕರ್ಮದ ವಿಷಯವಾಗಿ ಹುರುಪು ಹುಟ್ಟಿಸುವಂಥ ಕೆಲವು ವಸ್ತುಪಾಠಗಳನ್ನೂ ಡ್ರಾಯಿಂಗ, ಗಾಯನ ಮುಂತಾದ ವಿಷಯಗಳನ್ನೂ ಸೇರಿಸಿದರೆ ಹೆಚ್ಚು ಲಾಭವಾಗುವದು. ಸದ್ಯದಲ್ಲಿ ನಮ್ಮ ಶಿಕ್ಷಣದ ಧೋರಣವು ಶಿಕ್ಷಣದ ಪ್ರಸಾರವನ್ನು ಹೆಚ್ಚು ಮಾಡುವದಿರದೆ, ಅದು ವಿದ್ಯಾರ್ಥಿಗಳ ಮನಸಿನಲ್ಲಿ ಸ್ಥಿರವಾದ ಪರಿಣಾಮವನ್ನುಂಟು ಮಾಡುವಂಥದು ಆಗುವಂತೆ ಯತ್ನಮಾಡುವದೇ ಇರುತ್ತದೆ."

(ಜನವರಿ ೫ಂಗಳಿಂದ ಮುಂದೆ ಸರಾಗಿದ್ದು.)

ಕೂಡಲೆ ಅದು ಗಗನೆಯ ಆಕೃತಿಯಲ್ಲಿ ತೋರಿಸಿದಂತೆ ನೆಟ್ಟನೆ ಕೆಳಗೆ ಬೆಳೆಯ ಹತ್ತುವದು.

ಈ ಪ್ರಯೋಗಗಳಿಂದ ಕಂಡುಬರುವದೇನೆಂದರೆ, ಬೆಳೆಯುವ ಸಾಮರ್ಥ್ಯವು ವನಸ್ಪತಿಯ ಬೇರಿನ ಅಗ್ರ ಭಾಗದಲ್ಲಿ ಇರುವದು; ಹಾಗೂ ಗಿಡದ ನಿಲುವಿಕೆಯ ಕ್ರಮದಲ್ಲಿ ಅವ್ಯವಸ್ಥೆಯುಂಟಾದದ್ದು ಅದೇ ಭಾಗಕ್ಕೆ ತಿಳಿದು ಅದನ್ನು ಸುಧಾರಿಸಲಿಕ್ಕೆ ಆಭಾಗವು ಪ್ರಯತ್ನಿಸುವದು. ಹಲವು ದಿವಸಗಳ ಮೇಲೆ ಬೇರಿಗೆ ಎಷ್ಟೋ ಶಾಖೋಪಶಾಖೆಗಳುಂಟಾಗುವವು. ಬೇರು ಬೆಳೆಯುವ ದಿಕ್ಕಿನ ವಿರುದ್ಧ ದಿಕ್ಕಿನಲ್ಲಿ ದೇಟಾಗುವ ಭಾಗವು ನೆಟ್ಟಗೆ ಬೆಳೆಯುತ್ತ ಹಲವು ದಿವಸಗಳ ಮೇಲೆ ಹಸರೆಲೆಗಳನ್ನು ಧರಿಸುವದು. ಬೇರು ಎಲೆಗಳ ಸಹಾಯದಿಂದ ಆ ವನಸ್ಪತಿಯು ತನ್ನ ಆಹಾರವನ್ನು ತಾನೇ ದೊರಕಿಸಿಕೊಳ್ಳುವಷ್ಟು ಸಾಮರ್ಥ್ಯವುಳ್ಳದ್ದಾಗುವದು. ಈ ಸಂಧಿಗೆ ಬೀಜದಳ ಅಂದರೆ ದಾಯಿಯೆಲೆಗಳಲ್ಲಿರುವ ಆಹಾರದ ಸಂಚಯವು ತೀರಿ ಅವು ಉದುರಿ ಬೀಳುವವು.

ವನಸ್ಪತಿಯು ತನ್ನ ಬೇರು, ಎಲೆಗಳ ಸಹಾಯದಿಂದ ತನಗೆ ಬೇಕಾಗುವ ಆಹಾರದ ಪದಾರ್ಥಗಳನ್ನು ಎಲ್ಲಿ? ಹ್ಯಾಗೆ? ದೊರಕಿಸಿಕೊಳ್ಳುತ್ತವೆಂಬದನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸುವೆವು.

೫ನೇ ಅಧ್ಯಾಯವು.

ಭೂಮಿಯಿಂದ ವನಸ್ಪತಿಗಳಿಗೆ ದೊರಕುವ ಪದಾರ್ಥಗಳು:

ತಾಯಿ ಗಿಡವು ಬೀಜದಳದಲ್ಲಿಟ್ಟ ಆಹಾರದ ಪದಾರ್ಥಗಳ ಸಂಚಯವು ತೀರಿ ಹೋದ ಮೇಲೆ, ಸಸಿಯು ತನಗೆ ಬೇಕಾಗುವ ಆಹಾರವನ್ನು ತಾನೇ ದೊರಕಿಸಿಕೊಂಡು, ಸಿದ್ಧಪಸಿಡಿಕೊಳ್ಳಬೇಕಾಗುವದು. ವನಸ್ಪತಿಯ ಆಹಾರಕ್ಕೆ ಬೇಕಾಗುವ ಪದಾರ್ಥಗಳು ನಿಯಮಿತವಿದ್ದು ಅವುಗಳಲ್ಲಿ ಹಲವು ಭೂಮಿಯಿಂದಲೂ ಬೇರೆ ಕೆಲವು ಹವೆಯಿಂದಲೂ ದೊರೆಯುತ್ತಿರುವವು. ಘನರೂಪದಲ್ಲಿರುವ ಆಹಾರದ ಪದಾರ್ಥಗಳು ವನಸ್ಪತಿಗಳ ಉಪಯೋಗಕ್ಕೆ ಬರುವದಿಲ್ಲ. ತೇವವಿಲ್ಲದ ಮಣ್ಣಿನ ರಾಸಿಯಲ್ಲಿ ವನಸ್ಪತಿಯ ಬೇರುಗಳನ್ನು ಹುಗಿದಿಟ್ಟು ತುಸು ಹೊತ್ತಿನ ಮೇಲೆ ನೋಡಿದರೆ ಆ ವನಸ್ಪತಿಯು ಬಾಡಿ ಹೋದದ್ದು ಕಂಡು ಬರುವದು. ವನಸ್ಪತಿಯ ಆಹಾರವಾಗಿ ಉಪ

ಯೋಗಿಸಲ್ಪಡುವ ಪದಾರ್ಥಗಳೆಲ್ಲ ಪ್ರವಾಹಿ ಇಲ್ಲವೆ ವಾಯು ರೂಪದಲ್ಲಿರ ಬೇಕಾಗುವದು. ವನಸ್ಪತಿಗೆ ಪ್ರವಾಹಿರೂಪದಲ್ಲಿರುವ ಪದಾರ್ಥಗಳನ್ನು ಹೀರಿಕೊಳ್ಳುವದಕ್ಕೋಸುಗ ಕೆಲವೊಂದು ಅವಯವವಿರುವದು. ವಾಯು ರೂಪದಲ್ಲಿರು ಪದಾರ್ಥಗಳನ್ನು ನುಂಗಿಕೊಳ್ಳಲಿಕ್ಕೆ ಅದಕ್ಕೆ ಬೇರೊಂದು ಅವಯವವಿರುವದು.

ಇನ್ನು ಪ್ರವಾಹಿರೂಪದಲ್ಲಿರುವ ಪದಾರ್ಥಗಳನ್ನು ಹೀರಿಕೊಳ್ಳುವ ವನಸ್ಪತಿಯ ಅವಯವವು ಯಾವದೆಂಬದನ್ನು ತಿಳಿದುಕೊಳ್ಳ ಬೇಕಾದರೆ, ಎರಡು ಅಗಲ ಬಾಯಿಳ್ಳ ಸೀಸೆಗಳನ್ನು ತೆಗೆದುಕೊಂಡು, ಅವುಗಳಲ್ಲಿ ಅಂ ಚಿನವರೆಗೆ ನೀರು ತುಂಬಿ, ಒಂದು ಸೀಸೆಯಲ್ಲಿ ಒಂದು ಸಸಿಯನ್ನು ಬೇರು ನೀರನಲ್ಲಿ ಮುಳುಗುವಂತೆಯೂ ಮತ್ತೊಂದರಲ್ಲಿ ಬೇರೊಂದು ಸಸಿಯನ್ನು ಬುಡ ಮೇಲು ಮಾಡಿ ಅಂದರೆ ಬೇರು ಹವೆಯಲ್ಲಿ ಎಲೆದಳಗಳು ನೀರನಲ್ಲಿ ಮುಳುಗುವಂತೆಯೂ ಇಟ್ಟು, ೩-೪ ತಾಸುಗಳ ಮೇಲೆ ಆ ಸಸಿಗಳನ್ನು ಪರೀಕ್ಷಿಸಿ ನೋಡಿದರೆ, ಬೇರು ನೀರಿನಲ್ಲಿ ಮುಳುಗುವಂತಿಟ್ಟ ಸಸಿಯು ಅಚ್ಚಳಿಯದೆ ಭರದಿಂದ ಬೆಳೆಯುತ್ತಿರವನು ಕಂಡು ಬರುವದು. ಹಾಗೂ ಬುಡ ಮೇಲು ಮಾಡಿಟ್ಟ ಸಸಿಯು ಬಾಡಿ ನಿಸ್ತೇಜವಾದಂತೆ ಕಂಡು ಬರುವದು. (ಆಕೃ. ೧೩). ಹೀಗಾಗುವ ಕಾರಣವೇನೆಂದರೆ, ಮಳೆಯ ನೀರು ಭೂಮಿಯ ಮೇಲೆ ಬಿದ್ದ ಕೂಡಲೆ ಅದು ಮಣ್ಣಿನಲ್ಲಿದ್ದ ಖನಿಜಪದಾರ್ಥಗಳನ್ನು ಕೆಲಮಟ್ಟಿಗೆ ಕರಗಿಸಿ ತನ್ನಲ್ಲಿಟ್ಟುಕೊಂಡಿರುವದು. ಈ ಪ್ರಕಾರ ನೀರಿನಲ್ಲಿ ಬೆರೆತುಕೊಂಡಿರುವ ಖನಿಜ ಪದಾರ್ಥಗಳನ್ನು ಬೇರು ಹೀರಿಕೊಂಡು, ವನಸ್ಪತಿಗೆ ಬೇಕಾಗುವ ಆಹಾರವನ್ನು ಸಿದ್ಧಪಡಿಸುವದಕ್ಕೋಸುಗ ಅವುಗಳನ್ನು ಬೇರೊಂದು ಅವಯವಕ್ಕೆ ಕಳಿಸಿಕೊಡುವದು.

ಇನ್ನು ನೀರನಲ್ಲಿ ಬೆರೆತುಕೊಂಡಿರುವ ಖನಿಜದ್ರವ್ಯಗಳನ್ನು ಹೀರಿಕೊಳ್ಳುವ ಶಕ್ತಿಯು ಬೇರಿನ ಎಲ್ಲ ಭಾಗಗಳಿಗೆ ಉಂಟೋ? ಹ್ಯಾಗೆ? ಎಂಬ ಬಗ್ಗೆ ಕೆಲವು ಪ್ರಯೋಗಗಳನ್ನು ಮಾಡಿ ನೋಡುವಾ. ವನಸ್ಪತಿಯ ಬೇರು ಭೂಮಿಯಲ್ಲಿ ಸೇರಿಕೊಂಡಮೇಲೆ, ಅದಕ್ಕೆ ಎಷ್ಟೋ ಶಾಖೋಪಶಾಖಿಗಳಾಗುತ್ತವೆಂಬದು ಎಲ್ಲರಿಗೂ ಗೊತ್ತಿದ್ದ ಸಂಗತಿಯು. ಈ ಉಪಶಾಖೆಗಳು ಕೂದಲಿನಷ್ಟು ಸಣ್ಣವಿದ್ದು ಅವುಗಳ ಮೇಲೆ ಮೂರು ಪದರುಗಳುಳ್ಳ ಒಂದು ಕವಚವಿರುವದು.(ಆಕೃ.೧೩).ಈ ಕವಚದ ಎಲ್ಲಕ್ಕೂ ಹೊರಗಿರುವ ಪದರು

ಗಟ್ಟಿಯಾದ ಭೂಮಿಯೆಲ್ಲಿ ಕೆಲಸ ಮಾಡಬೇಕಾಗುವದಕ್ಕಿಂದ ಅದು ಮೇಲಿಂದ ಮೇಲೆ ಸವೆದು ಹೋಗುವದು. ಆಗ ಮಧ್ಯದಲ್ಲಿರುವ ಪದರು ಹೊರಪದರಾಗುವದು. ಹಾಗೂ ಒಳಪದರು ಮಧ್ಯದಲ್ಲಿ ಬರುವದು. ಈ ಸಂಧಿಗೆ ಬೇರೊಂದು ಹೊಸಪದರು ಆ ಕೇಶರೂಪಶಾಖೆಗಳಮೇಲೆ ಹುಟ್ಟುವದುಂಟು. ಈ ಸಣ್ಣ ಬೇರುಗಳಮೇಲಿರುವ ಕವಚವನ್ನು ಚಾಕುವಿನಿಂದ ಸುಲಿದು ಸೂಕ್ಷ್ಮದರ್ಶಕ ಯಂತ್ರದಲ್ಲಿಟ್ಟು ನೋಡಿದರೆ, ಅದರಲ್ಲಿರುವ ಮೂರು ಪದರುಗಳು ಗಿಣಿಯೇ ಆಕೃತಿಯಲ್ಲಿ ತೋರಿಸಿದಂತೆ ಕಾಣುವವು. ಈ ತರದ ಕವಚದ ಮಹತ್ವವೇನಿರುವದೆಂಬ ಬಗ್ಗೆ ಒಂದು ಪ್ರಯೋಗ ಮಾಡುವಾ. ಅದಷ್ಟು ಮಟ್ಟಿಗೆ ಒಂದೇ ತರದ ಪರಿಸ್ಥಿತಿಯಲ್ಲಿ ಬೆಳೆಯಿಸಿದ ಒಂದೇ ಜಾಯತಿಯ ವನಸ್ಪತಿಯ ಎರಡು ಸಸಿಗಳನ್ನು ವಟ್ಲಿ ದಿಂದ (Nursery bed) ಕಿತ್ತು ತೆಗೆದು, ಒಂದು ಸಸಿಯ ಕೇಶರೂಪ ಬೇರು ಗಳ ಕವಚವನ್ನು ಚಾಕುವಿನಿಂದ ತೆಗೆದುಹಾಕಿ, ಮತ್ತೊಂದು ಸಸಿಯ ಅತರದ ಬೇರುಗಳ ಮೇಲಿರುವ ಕವಚವನ್ನು ಇದ್ದಂತೆ ಉಳಿಯುಗೊಟ್ಟು, ಆ ಎರಡೂ ಸಸಿಗಳನ್ನು ನೀರು ತುಂಬಿದ ಸೀಸೆಯಲ್ಲಿ ಬೇರುಗಳು ನೀರನ ಲ್ಲಿ ಮುಳುಗುವಂತಿಟ್ಟರೆ, ೪-೫ ತಾಸುಗಳಲ್ಲಿ ಕೇಶರೂಪವಾದ ಬೇರುಗಳ ಮೇಲಿರುವ ಕವಚವನ್ನು ತೆಗೆದು ಹಾಕಿದ ಸಸಿಯು ಬಾಡಿಹೋಗಿ, ಮುಖ ಕೆಳಗೆ ಮಾಡಿರುವದೂ ,ಆ ಕವಚವನ್ನು ತೆಗೆಯದೆ ಇದ್ದ ಸಸಿಯು ಉಲ್ಲಾಸದಿಂದ ಬೆಳೆಯುತ್ತಿರುವದೂ ನಮ್ಮ ನಿದರ್ಶನಕ್ಕೆ ಬರುವದು. ಈ ಪ್ರಯೋಗದಿಂದ ನೀರಲ್ಲಿ ಬೆರತುಕೊಂಡಿರುವ ಪದಾರ್ಥಗಳನ್ನು ಹೀರಿ ಕೊಳ್ಳುವ ಶಕ್ತಿಯು ಬೇರಿನ ಎಲ್ಲ ಭಾಗಗಳಿಗಿರದೆ ಮೂರು ಪದರುಗಳುಳ್ಳ ಕೇಶರೂಪ ಬೇರುಗಳಿಗೆ ಮಾತ್ರ ಇರುತ್ತದೆಂಬ ಸಂಗತಿಯು ಸ್ಪಷ್ಟವಾ ಗುವದು. ಭೂಮಿಯೆಂಬದು ವನಸ್ಪತಿಗಳ ಆಹಾರಕ್ಕೆ ಬೇಕಾಗುವ ಖನಿಜ ಪದಾರ್ಥಗಳ ಆಗರವೆನ್ನಬಹುದು. ನೀರನಲ್ಲಿ ಕರಗುವಂತಿರುವ ಕ್ಷಾರಗಳನ್ನು ಮಾತ್ರ ವನಸ್ಪತಿಗಳು ತಮ್ಮ ಬೇರುಗಳಿಂದ ತೆಗೆದುಕೊ ಳ್ಳ ಬಲ್ಲವಾದ್ದರಿಂದ, ಭೂಮಿಯಲ್ಲಿ ಈ ತರದ ಕ್ಷಾರಗಳ ಪ್ರಮಾಣವು ಹೆಚ್ಚುವಂತೆ ಮಾಡಬೇಕಾದರೆ, ಅದರಲ್ಲಿರುವ ಮಣ್ಣಿನ ಸಂಚಯದ ಪಿಂ ಡವನ್ನು ಒಡೆದು ಸಣ್ಣಸಣ್ಣ ಕಣಗಳಾಗುವಂತೆ ಹದಗೊಳಿಸಬೇಕಾಗು ವದು. ಹೀಗೆ ಸಣ್ಣಾದ ಮಣ್ಣಿನ ಕಣಗಳಮೇಲೆ ಸೂರ್ಯನ

ಉಷ್ಣತೆ ಹಾಗೂ ಹವೆಯಲ್ಲಿರುವ ಆಕ್ಸಿಜನ್, ಕಾರ್ಬಾಸಿಕ್ ಆಸಿಡ ಗ್ಯಾಸ ಇವೇ ಮೊದಲಾದವುಗಳ ವ್ಯಾಪಾರ ನಡೆಯಲು ಕಾಲಾಂತರದಲ್ಲಿ ಆಕಣಗಳಲ್ಲಿರುವ ಕ್ಷಾರಗಳು ಹೊರಬಿದ್ದು ನೀರನಲ್ಲಿ ಕರಗುವಂತಾಗುವವು. ವನಸ್ಪತಿಯ ಬೆಳವಣಿಗೆಗೆ ಭೂಮಿಯಲ್ಲಿರುವ ಖನಿಜದ್ರವ್ಯಗಳು ಮಾತ್ರ ಅವಶ್ಯವಾಗಿ ಬೇಕಾಗುವವಲ್ಲದೆ ಉಳಿದ ಭಾಗವು ಅಷ್ಟು ಮಹತ್ವವುಳ್ಳದ್ದಲ್ಲ. ವನಸ್ಪತಿಗಳಿಗೆ ಬೇಕಾಗುವ ಖನಿಜ ದ್ರವ್ಯಗಳನ್ನು ತಕ್ಕ ಪ್ರಮಾಣಗಳಲ್ಲಿ ಕೃತ್ರಿಮ ರೀತಿಯಿಂದ ಅವುಗಳಿಗೆ ಪೂರೈಸಿ ಕೊಟ್ಟರೆ ಭೂಮಿಯ ಸಹಾಯವಿಲ್ಲದೆ ಬೇಕಾದ ವನಸ್ಪತಿಗಳನ್ನು ಬೆಳೆಸಲಿಕ್ಕೆ ಬರುವದುಂಟು. ಇದಕ್ಕಾಗಿ ಒಂದು ಪ್ರಯೋಗ ಮಾಡುವಾ:— ಮಟ್ಟಿನಲ್ಲಿ ಬೆಳೆಸಿದ ಒಂದೇ ಜಾತಿಯ ಮೂರು ಸಸಿಗಳನ್ನು ಅವುಗಳ ಬೀಜದಳಗಳು ಉದುರಿ ಬಿದ್ದಮೇಲೆ ಕಿತ್ತುತೆಗೆದು, ಅಗಲು ಬಾಯಿಯುಳ್ಳ ಹಾಗೂ ಒಂದು ಲಿಟರ ಅಂದರೆ ೧-೪ ಪಾಯಿಂಟ ನೀರು ಹಿಡಿಯುವ ಮೂರು ಸೀಸೆಗಳನ್ನುತೆಗೆದುಕೊಂಡು, ಅವುಗಳ ಬಾಯಿಗೆ ಸರಿಯಾಗಿ ಕೂಡುವಂಥ ಮೂರು ಬೂಚುಗಳ ಮಧ್ಯದಲ್ಲಿ ಆ ಸಸಿಗಳ ಕಾಂಡಗಳು ಹಿಡಿಯುವಷ್ಟು ಛಿದ್ರಗಳನ್ನು ಮಾಡಿ (ಆಕೃತಿ ೧೪) ರಲ್ಲಿ ತೋರಿಸಿದಂತೆ ಒಂದೊಂದು ಬೂಚಿನ ಮಧ್ಯದಲ್ಲಿ ಒಂದೊಂದು ಸಸಿಯ ಕಾಂಡವನ್ನು ಸೇರಿಸಿಡುವಾ ಆಮೇಲೆ (A) ಸೀಸೆಯಲ್ಲಿ ೧ ಲಿಟರ ಭಟ್ಟಿಗೆ ಹಾಕಿದ ನೀರು (Distilled water) ಹಾಕುವಾ. (B) ಸೀಸೆಯಲ್ಲಿ ಅಷ್ಟೇ ಭಟ್ಟಿಗೆ ಹಾಕಿದ ನೀರು ತುಂಬಿ ಅದಕ್ಕೆ ಕೆಳಗೆ ಕೊಟ್ಟ ಕ್ಷಾರಗಳ ಮಿಶ್ರಣವನ್ನು ಕೂಡಿಸುವಾ.

(೧) ಪೋಟಾಸಿಯಮ್ ನೈಟ್ರೇಟ್(ಸೋರುಪ್ಪು) .... ೧ ಗ್ರ್ಯಾಮ್
(Potassium Nitrate)

(೨) ಕ್ಯಾಲ್ಸಿಯಮ್ ಸಲ್ಫೇಟ (ಪ್ಲಾಷ್ಟರ ಆಫ್‌ಪಾರೀಸ) ೪ ,,
(Calcium Sulphate)

(೩) ಸೋಡಿಯಮ್ ಕ್ಲೋರಾಯಿಡ್ (ಉಪ್ಪು) .... ೪ ,
(Sodium Chloride)

೪) ಮ್ಯಾಗ್ನೇಸಿಯಮ್ ಸಲ್ಫೇಟ (ರೇಚಕ ಲವಣ) .... ೪ ,,
(Magnesium Sulphate)

೫) ಕ್ಯಾಲ್ಸಿಯಮ್ ಫಾಸ್ಫೇಟ (ಎಲುವಿನ ಬೂದಿ) .... ೪ ,,
(Calcium Phosphate)

(C) ಸೀಸೆಯಲ್ಲಿ ಹಾಕಿದ ಶುದ್ಧ ನೀರಿಗೆ ಮೇಲೆ ಕೊಟ್ಟ ೫ ಕ್ಷಾರಗಳನ್ನು ಕೂಡಿಸುವದಲ್ಲದೆ ಕಬ್ಬಿಣದ ಕ್ಲೋರಾಯಿಡನ ೨–೩ ಹನಿಗಳನ್ನೂ ಬೆರಿಸುವಾ. ಈ ರೀತಿಯಿಂದ ನೀರು ತುಂಬಿದ ಸೀಸೆಗಳಲ್ಲಿ ಮೊದಲು ತೂಕಮಾಡಿ, ಪ್ರತಿಯೊಂದು ಸಸಿಯ ಭಾರವನ್ನು ಗೊತ್ತುಪಡಿಸಿ, ಬೂಚಿನ ಮಧ್ಯದಲ್ಲಿ ತೆಗೆದ ಛಿದ್ರದಲ್ಲಿ ೧ಳನೇಆಕೃತಿಯಲ್ಲಿ ತೋರಿಸಿದಂತೆ ಸೇರಿಸಿದ ಸಸಿಗಳನ್ನು ಒಂದೊಂದನ್ನು ಕ್ರಮವಾಗಿ (A),(B),(C) ಸೀಸೆಗಳಲ್ಲಿ ಬೇರುಗಳು ನೀರಿನಲ್ಲಿ ಮುಳುಗುವಂತಿಪ್ಪು, ಆ ಸೀಸೆಗಳನ್ನು ಸೂರ್ಯನ ಬೆಳಕು ಬರುವ ಸ್ಥಳದಲ್ಲಿರಿಸುವಾ. ತುಸು ದಿವಸಗಳಲ್ಲಿ (A) ಸೀಸೆಯಲ್ಲಿಟ್ಟ ಎಂದರೆ ಬರಿಯ ಭಟ್ಟಿಗೆಹಾಕಿದ ನೀರಿನಲ್ಲಿಟ್ಟ ಸಸಿಯು ಎಷ್ಟು ಮಾತ್ರವೂ ಬೆಳೆಯದೆ ಸತ್ತು ಹೋಗುವದು. B. ಸೀಸೆಯಲ್ಲಿಟ್ಟ ಸಸಿಯು ಕೆಲವು ದಿವಸಗಳವರೆಗೆ ಬೆಳೆಯುತ್ತ ಹೋಗುವದು. ಆಮೇಲೆ ಅದರ ಎಲೆಗಳು ಹಳದಿಯೊರೆದು ಮುಂದೆ ಅದು ಬಿಡುವ ಎಲೆಗಳ ಬಣ್ಣವು ಹಸುರಿರದೆ ಹಳದಿಯಾಗುವದು. ಆ ಸಸಿಯನ್ನು ಹಾಗೇ ಬೆಳೆಯಗೊಟ್ಟರೆ ಕೆಲವು ದಿವಸದಲ್ಲಿ ಅದು ನಿಸ್ತೇಜವಾಗುತ್ತ ಕಡೆಗೆ ಸತ್ತು ಹೋಗುವದು. ಆದರೆ ಆ ಸಂಧಿಗೆ B ಸೀಸೆಯಲ್ಲಿ ಹಾಕಿದ ಕ್ಷಾರಗಳಿಗೆ ೨–೩ ಕಬ್ಬಿಣದ ಕ್ಲೋರಾಯಿಡದ ಹನಿಗಳನ್ನು ಬೆರೆಸಿದರೆ ಒಂದೆರಡು ತಾಸುಗಳಲ್ಲಿ ಅದರ ಎಲೆಗಳು ಹಚ್ಚಗಾಗಹತ್ತಿ, ಅದು ಭರದಿಂದ ಬೆಳೆಯಹತ್ತುವದು. C. ಸೀಸೆಯಲ್ಲಿಟ್ಟ ಸಸಿಯು (ಆಕೃತಿ ೧೫) ರಲ್ಲಿ ತೋರಿಸಿದಂತೆ ಬಹು ಈಸುವಿನಿಂದ ಬೆಳೆಯುತ್ತಿರುವದು ಇದರಿಂದ C ಸೀಸೆಯಲ್ಲಿ ವನಸ್ಪತಿಯ ಬೆಳವಣಿಗೆಗೆ ಬೇಕಾಗುವ ಎಲ್ಲ ಖನಿಜ ಪದಾರ್ಥಗಳು ತಕ್ಕ ಪ್ರಮಾಣದಿಂದ ನೀರಿನಲ್ಲಿ ಬೆರೆತುಕೊಂಡಿರುತ್ತವೆಂಬದು ನಮಗೆ ಗೊತ್ತಾಗುವದು. ಆ ಸೀಸೆಯಲ್ಲಿ ಹಾಕಿದ ಕ್ಷಾರಗಳ ಪ್ರಮಾಣವನ್ನು ಹೆಚ್ಚಿಸುತ್ತ ಹೋದರೆ ಅದರಲ್ಲಿಟ್ಟ ಸಸಿಯ ಬೆಳವಣಿಗೆಯು ಕುಗ್ಗ ಹತ್ತುವದು. ಕ್ಷಾರಗಳ ಪ್ರಮಾಣವು ತೀರ ಹೆಚ್ಚಾದರೆ ಅದು ಸತ್ತು ಹೋಗುವದು. ಈ ಪ್ರಯೋಗಗಳಿಂದ ವನಸ್ಪತಿಯ ಬೆಳವಣಿಗೆಗೆ ಅವಶ್ಯವಾದ ಖನಿಜ ಪದಾರ್ಥಗಳು ನಿಯಮಿತ ವಿರುತ್ತವೆಂದೂ ಅವು ಕೆಲವೊಂದು ನಿಯಮಿತ ಪ್ರಮಾಣದಿಂದ ನೀರಿನಲ್ಲಿ ಬೆರೆತುಕೊಂಡಿದ್ದರೆ ವನಸ್ಪತಿಗಳಿಗೆ ತಕ್ಕ ಆಹಾರದ ಪದಾರ್ಥಗಳಾಗುತ್ತವೆಂದೂ ಅವುಗಳಲ್ಲಿ ಒಂದು ಕಡಿಮೆ

ಯಾದರೆ ವನಸ್ಪತಿಯು ಬದುಕಿರಲಾರದೆಂದೂ ನಮಗೆ ಗೊತ್ತಾಯಿತ
ಖನಿಜದ್ರವ್ಯಗಳಹೊರತು ಉಳಿದ ಕೆಲವು ಪದಾರ್ಥಗಳು ವನಸ್ಪತಿಗಳಿ
ಎಲ್ಲಿಂದ? ಹ್ಯಾಗೆ? ದೊರಕುತ್ತವೆಂಬದನ್ನು ಮುಂದಿನ ಅಧ್ಯಾಯದಲ್ಲಿ ಕ
ಳುವೆವು.

ಒನೇ ಅಧ್ಯಾಯವು.

ವನಸ್ಪತಿಗಳಿಗೆ ಹವೆಯಿಂದ ದೊರಕುವ ಪದಾರ್ಥಗಳು.

ಹಿಂದಿನ ಅಧ್ಯಾಯದಲ್ಲಿ ವಿವರಿಸಿದ ಪ್ರಯೋಗಗಳಿಂದ ವನಸ್ಪತಿ
ಳಿಗೆ ನೀರಿನಲ್ಲಿ ಕರಗಿ ಕೊಂಡಿರುವ ಕೆಲವು ನಿಯಮಿತ ಖನಿಜದ್ರವ್ಯಗಳ
ಅವಶ್ಯವಾಗಿ ಬೇಕಾಗುವವೆಂಬದು ನಮಗೆ ಗೊತ್ತಾಗಿದೆ. ಈ ಪ್ರಕಾರಗ
ಆವಶ್ಯಕತೆಯು ಇಷ್ಟು ಬಹಳವಿದ್ದಾಗ್ಯೂ ಅವುಗಳನ್ನು ವನಸ್ಪತಿಗಳು ಹೆಚ್ಚ
ಪ್ರಮಾಣದಲ್ಲಿ ತೆಗೆದುಕೊಳ್ಳಲಾರವೆಂಬದನ್ನು ತಿಳಿದು ಕೊಳ್ಳಬೇಕಾದರೆ, (
ಸೀಸೆಯಲ್ಲಿ ಬೆಳೆಯಿಸಿದ ಸಸಿಯನ್ನು ಹೊರಗೆ ತೆಗೆದು, ಎಲ್ಲಿಕ್ಕೂ ಮೊದಲ
ಗೊತ್ತು ಪಡಿಸಿದ ಆ ಸಸಿಯ ಭಾರದಷ್ಟು ಭಾರದಷ್ಟು ಭಾಗವನ್ನು ಆ ಸ
ಯಿಂದ ಕತ್ತರಿಸಿ ತೆಗೆದರೆ ಉಳಿದ ಭಾಗವು ಕೊಟ್ಟ ಅವಧಿಯಲ್ಲಿ ಬೆಳವ
ಗೆಯ ಮೂಲಕ ಹೆಚ್ಚಾದ ಭಾರವನ್ನೂ ತೋರಿಸುವದು. ಆ ಭಾಗದ
ನೀರೂ ಇರುವದರಿಂದ ಅದನ್ನು ಬಿಸಿಲಲ್ಲಿಟ್ಟು ಒಣಗಿಸಿದರೆ ನೀರು ಉ
ಯಾಗಿ ಹೊರಟು ಹೋಗಿ ಘನ ರೂಪದಲ್ಲಿರುವ ಭಾಗವು ಮಾತ್ರ ಉ
ಯುವದು. ಆ ಭಾಗದಲ್ಲಿರುವ ಪದಾರ್ಥಗಳ ಭಾರವು ಆ ವನಸ್ಪತಿಯ
ಹೆಚ್ಚಿಗೆ ಬೆಳೆಯುವದರಲ್ಲಿ ಉಪಯೋಗಿಸಿಕೊಂಡ ಖನಿಜ ದ್ರವ್ಯಗಳ ಭಾ
ದಷ್ಟೇ ಇರುವದೋ? ಹ್ಯಾಗೆ? ಎಂಬದನ್ನು ಪರೀಕ್ಷಿಸುವಾ.

C ಸೀಸೆಯಲ್ಲಿ ಹಾಕಿಟ್ಟ ನೀರನ್ನು ಬಂದು ಪಾತ್ರೆಯಲ್ಲಿ ಬಗ್ಗಿಸಿಕೊ
ಡು ಕಾಸಿದರೆ ಅದು ಉಗಿಯಾಗಿ ಹೊರಟು ಹೋಗುವದು. ಹಾಗೂ ಪಾತ್ರೆ
ಯ ತಳದಲ್ಲಿ ನೀರಿನಲ್ಲಿ ಮೊದಲು ಬೆರೆತುಕೊಂಡಿರುವ ಖನಿಜ ಪದಾರ್ಥ
ಳುಳಿಯುವವು. ಆ ಪದಾರ್ಥಗಳನ್ನು ತೂಗಿ ನೋಡಿದರೆ ಅವುಗಳ ಮೂ
ಭಾರದಲ್ಲಿ ಎಷ್ಟು ಕಡಿಮೆ ಯಾಗಿರುವದೆಂಬದು ಗೊತ್ತಾಗುವದು. ಹೀಗ
ಕಡಿಮೆಯಾದ ಭಾರವನ್ನು ಒಣಗಿಸಿದ ಸಸಿಯ ಭಾರಕ್ಕೆ ಹೋಲಿಸಿ ನೋ
ಡಲು ಆ ಸಸಿಯ ಭಾರವು ಬಹಳೇ ಹೆಚ್ಚಿದ್ದದ್ದು ಕಂಡು ಬರುವದು. ಹಾಗ
ದರೆ ಈ ಹೆಚ್ಚಾದ ಭಾಗವು ಅದಕ್ಕೆ ಎಲ್ಲಿಂದ ದೊರೆತಿರ ಬಹುದೆಂ

ವಿಚಾರವು ನಮ್ಮ ಮನಸಿನಲ್ಲಿ ಕೂಡಲೆ ಬರುವದು. ಅದಕ್ಕೆ ಸವಾಧಾನ ವೇನಂದರೆ, ಆ ವನಸ್ಪತಿಯ ಕಾಂಡವು ಹವೆಯಲ್ಲಿ ನೆಟ್ಟನೆ ಬೆಳೆದಿದ್ದದರಿಂದ ಹೆಚ್ಚಾದ ಭಾರದಷ್ಟು ಬೇರೆ ಪದಾರ್ಥಗಳನ್ನು ಕಾಂಡದ ಕೆಲವೊಂದು ಭಾಗವು ಹವೆಯೊಳಗಿಂದ ತೆಗೆದುಕೊಂಡಿರಬಹುದು. ಈ ಅನುಮಾನವು ಸರಿಯೋ? ಹ್ಯಾಗೆ? ಎಂಬ ಬಗ್ಗೆ ಕೆಲವು ಪ್ರಯೋಗಗಳನ್ನು ಮಾಡತೊಡ ಗುವಾ.

ಮೇಲೆ ಕೊಟ್ಟ ಪ್ರಯೋಗದಲ್ಲಿ ಒಣಗಿಸಿದ ಸಸಿಯನ್ನು ಒಂದು ಕನುಚೆಯಲ್ಲಿ ಹಾಕಿ, ಅದನ್ನು ಬೆಂಕೆಯ ಮೇಲೆ ಹಿಡಿದರೆ, ಅದು ಕಪ್ಪು ಡೆಯ ಹತ್ತಿ ತುಸು ಹೊತ್ತಿನ ಮೇಲೆ ಕರಕಾಗುವದು. ಇದರಿಂದ ಅದ ಲ್ಲಿ ಕಾರ್ಬೊನ್ನು ಇರುವದೆಂದು ಸಿದ್ಧವಾಗುವದು. ಕಾರ್ಬೊನ್ನು ನಮಗೆ ಸದ್ಯಕ್ಕೆ ಗೊತ್ತಿರುವ ಮೂಲತತ್ವಗಳಲ್ಲೊಂದಾಗಿರುವದರಿಂದ ಪ್ರಾಣಿ ವನಸ್ಪತಿಗಳು ಅದರ ರೂಪಾಂತರ ಮಾಡಬಲ್ಲವೇ ಹೊರತು ಆ ಮೂಲತತ್ವವನ್ನು ಹೊಸದಾಗಿ ನಿರ್ಮಿಸುವದು ಇಲ್ಲವೆ ಅಗಸ್ಮಾ ಸಮಗ್ರ ವಾಗಿ ನಾಶಮಾಡುವದು ಅಪ್ಪುಗಳಿಂದಾಗದ ಮಾತೆಂಬದು ರಸಾಯನ ಶಾಸ್ತ್ರದಿಂದ ನಮಗೆ ಗೊತ್ತಾಗುವದು. ನಾವು ವನಸ್ಪತಿಯ ಬೆಳವಣಿಗೆಯ ಸಲುವಾಗಿ C ಸೀಸೆಯಲ್ಲಿ ಹಾಕಿದ ಪದಾರ್ಥಗಳಲ್ಲಿ ಕಾರ್ಬೊನ್ನಿನ ಅಂಶ ವು ಮೂಲತತ್ವದಂತಾಗಲಿ, ರಸಾಯನ ಮಿಶ್ರಣದಂತಾಗಲಿ, ಲೇಶಮಾತ್ರ ವಾದರೂ ಇರುವದಿಲ್ಲ. ಹಾಗಾದರೆ ಆ ವನಸ್ಪತಿಯಲ್ಲಿ ಕಂಡು ಬರುವ ಕಾರ್ಬೊನ್ನು ಅದಕ್ಕೆ ಹವೆಯಿಂದ ದೊರೆತಿರಲಿಕ್ಕೆ ಬೇಕು.

ಹವೆಯು ಹಲವು ವಾಯುಗಳ ಯಾಂತ್ರಿಕ ಮಿಶ್ರಣವಿರುವದು. ಅವು ಗಳಲ್ಲಿ ಆಕ್ಸಿಜನ್, ನೈಟ್ರೋಜನ್, ಕಾರ್ಬಾನಿಕ್‌ಆಸಿಡ್‌ಗ್ಯಾಸ ಹಾಗೂ ನೀರಿನ ಉಗಿ ಇವೇ ಮುಖ್ಯವಾದವು. ಆಕಾರ ಮಾನದಿಂದ ೧೦೦ ಪಾಲು ಹವೆಯಲ್ಲಿ ಈ ವಾಯುಗಳಿಷ್ಟಿರುವವೆಂಬದನ್ನೂ ಕೆಳಗೆ ಕೊಟ್ಟಿದ್ದೇವೆ.

ಆಕ್ಸಿಜನ್	....	....	೨೦.೦೧
ನೈಟ್ರೋಜನ್	....	....	೭೯.೦೯
ಕಾರ್ಬಾನಿಕ್ ಆಸಿಡ್‌ಗ್ಯಾಸ	....		೦.೦೪
ನೀರಿನ ಉಗಿ	....	....	೧.೪೦
ಉಳಿದ ಘಟಕಗಳು	....		೦.೪೬
			೧೦೦.೦೦

ಹವೆಯಲ್ಲಿರುವ ಕಾರ್ಬಾನಿಕ್ ಆಸಿಡ್ ಗ್ಯಾಸವು, ಪ್ರಾಣಿವನಸ್ಪತಿಗಳ ಶ್ವಾಸೋಚ್ಛ್ವಾಸ, ಸೇಂದ್ರಿಯ ಪದಾರ್ಥಗಳ ಜ್ವಲನ ಹಾಗೂ ಕೊಳೆಯುವಿಕೆಗಳಿಂದ ಹುಟ್ಟುತ್ತದೆ. ಹವೆಯಲ್ಲಿ ಅದರ ಪ್ರಮಾಣವು ತೀರ ಕಡಿಮೆಯಿದ್ದರೂ ವನಸ್ಪತಿಗಳ ಜೀವನ ವ್ಯಾಪಾರಗಳಲ್ಲಿ ಅದರ ಮಹತ್ವವು ಹೇಳ ಕೂಡದಷ್ಟು ಹೆಚ್ಚಿರುವದು.

ಎರಡು ಸಣ್ಣ ಬಾನೆಗಳಲ್ಲಿ ಪ್ರತ್ಯೇಕವಾಗಿ ಬೆಳೆಯಿಸಿದ ಒಂದೇ ಜಾತಿಯ ಎರಡು ಸಸಿಗಳನ್ನು ತೆಗೆದುಕೊಂಡು, ಒಂದು ಸಸಿಯನ್ನು ಬಾನೆ ಸಹಿತವಾಗಿ (ಆಕೃತಿ. ೧೬)ರಲ್ಲಿ ತೋರಿಸಿದಂತೆ C ಪಾತ್ರೆಯಲ್ಲಿ ತುಸು ಸುಣ್ಣದ ತಿಳಿನೀರು ಹಾಕಿ, ಅದರಲ್ಲಿ ಒಂದು ತಿವಟಿಗೆಯನ್ನಿಟ್ಟು, ಅದರ ಮೇಲಿರಿಸುವಾ. ಆ ವನಸ್ಪತಿಯಮೇಲೆ ಗಂಟೆಯಾಕಾರದ D ಎಂಬ ಕಾಜಿನ ಪಾತ್ರೆಯನ್ನೂ ಡಬ್ಬಹಾಕುವಾ. Aಸೀಸೆಯಲ್ಲಿ ಕಾಸ್ಟಿಕ್‌ಸೋಡಾ (Caustic Potash) ದ ನೀರನ್ನು B ಸೀಸೆಯಲ್ಲಿ ಸುಣ್ಣದ ತಿಳಿನೀರನ್ನು, ಹಾಕಿ, ಆಕೃತಿಯಲ್ಲಿ ತೋರಿಸಿದಂತೆ AB ಹಾಗೂ D ಪಾತ್ರೆಗಳ ಸಂಬಂಧಗಳನ್ನೂ ಕಾಜಿನ ವಕ್ರನಳಿಕೆಗಳಿಂದ ಮಾಡಿ, G ವಕ್ರನಳಿಕೆಗೆ ಒಂದು ರಬ್ಬರಿನ ನಳಿಯನ್ನು ಹಚ್ಚಿಡುವಾ.

D ಪಾತ್ರೆಯೊಳಗಿಟ್ಟ ವನಸ್ಪತಿಯ ಮೇಲೆ ಸೂರ್ಯನ ಬಿಸಿಲು ಬೀಳುವಂತೆ ಮಾಡಿ, ಅದರ ಹತ್ತರ ಬೇರೊಂದು ಬಾನೆಯಲ್ಲಿರುವ ಸಸಿಯನ್ನು ಅದರ ಮೇಲೆ ಬಿಸಿಲು ಬೀಳುವಂತೆ ಇರಿಸುವಾ. D ಪಾತ್ರೆಯಲ್ಲಿರುವ ಹವೆಯೊಳಗಿನ ಕಾರ್ಬಾನಿಕ್ ಆಸಿಡ್‌ಗ್ಯಾಸವನ್ನೂ ಆ ಪಾತ್ರೆಯೊಳಗಿಟ್ಟ ಸಸಿಯು ಉಚ್ಛ್ವಸಿಸುವ ಕಾರ್ಬಾನಿಕ್ ಆಸಿಡ್‌ಗ್ಯಾಸವನ್ನೂ C ಪಾತ್ರೆಯಲ್ಲಿ ಹಾಕಿಟ್ಟ ಸುಣ್ಣದ ತಿಳಿನೀರು ಶೋಷಿಸಿಕೊಳ್ಳುವದು. G ನಳಿಕೆಗೆ ಬಾಯಿ ಹಚ್ಚಿ C ಪಾತ್ರೆಯೊಳಗಿನ ಹವೆಯನ್ನು ಜಗ್ಗಿಕೊಳ್ಳಲು ಆ ತೆರವಾದ ಸ್ಥಳವನ್ನು ವ್ಯಾಪಿಸುವದಕ್ಕೆ ಹೊರಗಿನ ಹವೆಯು A ಸೀಸೆಯೊಳಗೆ ಹಾಕಿಟ್ಟ ಕಾಷ್ಟಿಕ್ ಪೋಟಾಶದ ನೀರೊಳಗೆ ಹಾಯ್ದು ಆ ಮೇಲೆ B ಸೀಸೆಯೊಳಗಿನ ಸುಣ್ಣದ ನೀರೊಳಗೆ ಹಾಯ್ದು ಬರುವದು. ಅದರಿಂದ ಆ ಹವೆಯೊಳಗಿರುವ ಅಂಗಾರಾಮ್ಲ ವಾಯುವು ಆ ದ್ರವಗಳಿಂದ ಶೋಷಿಸಲ್ಪಟ್ಟು D ಪಾತ್ರೆಯಲ್ಲಿ ಆ ವಾಯುವಿನ ಅಭಾವವುಂಟಾಗುವದು.

ಈ ಪರಿಸ್ಥಿತಿಯಲ್ಲಿ ಬೆಳೆಯಿಸಹತ್ತಿದ ಆ ಪಾತ್ರೆಯೊಳಗಿಟ್ಟ ವನಸ್ಪತಿಯು ಬೆಳವಣಿಗೆಯು ಕುಗ್ಗಹತ್ತಿ ಅದು ತೀರ ಸಣ್ಣದ ಎಲೆಗಳನ್ನು ಬಿಡಲಾರಂಭಿಸುವದು. ಕೆಲವು ದಿವಸಗಳ ಮೇಲೆ ಅದರ ಬೆಳವಣಿಗೆಯು ತೀರ ಕಟ್ಟಾಗುವದು. ಈ ಸಂಧಿಗೆ ಅದರ ಎಲೆಗಳನ್ನು ಪರೀಕ್ಷಿಸಿ ನೋಡಿದರೆ, ಅವುಗಳಲ್ಲಿ ಗಂಜೀಸಿಟ್ಟು (starch) ಇಲ್ಲದಂತಾಗಿರುವದು. ಬೇರೊಂದು ಬಾನೆಯಲ್ಲಿಟ್ಟ ವನಸ್ಪತಿಯು ಹವೆಯೊಳಗಿನ ಅಂಗಾಧಾಮ್ಲ ವಾಯುವನ್ನು ಬೇಕಾದಷ್ಟು ತೆಗೆದುಕೊಂಡು, ಭರದಿಂದ ಬೆಳೆದಿರುವದು. ಅದರ ಎಲೆಗಳಲ್ಲಿ ಗಂಜೀಸಿಟ್ಟು (starch) ಬೇಕಾದಷ್ಟು ತುಂಬಿರುವದೆಂಬದು ರಸಾಯನ ಪರೀಕ್ಷಣ (Chemical test) ದಿಂದ ನಮಗೆಗೊತ್ತಾಗುವದು. ಭರದಿಂದ ಬೆಳೆದು ಹಸರು ಬಣ್ಣದಿಂದೊಪ್ಪುವ ಎಲೆಗಳನ್ನು ಧರಿಸಿದ ಎಲ್ಲ ವನಸ್ಪತಿಗಳಲ್ಲಿ ಗಂಜೀಸಿಟ್ಟು ಅತಿ ದೊಡ್ಡ ಪ್ರಮಾಣದಿಂದಿದ್ದೇ ಇರುವದು. ಅಂಗಾರಾಮ್ಲವಾಯುವು ದೊರಕದಂತೆ ಮೇಲಿನ ಪ್ರಯೋಗದಲ್ಲಿ ಬೆಳೆಸಿದ ವನಸ್ಪತಿಯ ಎಲೆಗಳಲ್ಲಿ ಗಂಜೀಸಿಟ್ಟು ಹುಟ್ಟಿದಿರುವದು ಆ ವನಸ್ಪತಿಗುಂಟಾದ ಕೆಲವೊಂದು ವಿಕಾರದ ಪ್ರತ್ಯಕ್ಷ ಪ್ರಮಾಣವಾಗಿದೆ. ಇದರಿಂದ ಹವೆಯೊಳಗಿನ ಅಂಗಾರಾಮ್ಲವಾಯುವು ವನಸ್ಪತಿಗಳ ನಿರ್ವಾಹಕ್ಕೆ ಅತ್ಯವಶ್ಯವಾದದ್ದೆಂಬ ಸಂಗತಿಯು ಸಿದ್ಧವಾಗುವದು.

ಹವೆಯಲ್ಲಿರುವ ಅಂಗಾರಾಮ್ಲವಾಯುವು ಕಾರ್ಬೊನ್ನು ಹಾಗೂ ಆಕ್ಸಿಜನಗಳ ರಸಾಯನ ವ್ಯಾಪಾರದಿಂದುಂಟಾದ ಒಂದು ಸಂಯುಕ್ತ ಪದಾರ್ಥವಿರುವದು. ಇನ್ನು ವನಸ್ಪತಿಗಳು ಆ ಸಂಯುಕ್ತ ಪದಾರ್ಥವನ್ನೇ ತಮ್ಮ ಪೋಷಣೆಗಾಗಿ ಉಪಯೋಗಿಸಿಕೊಳ್ಳುತ್ತವೆಯೋ? ಇಲ್ಲವೆ ಅದರ ಘಟಕಗಳಾದ ಕಾರ್ಬೊನ್ನು ಹಾಗೂ ಆಕ್ಸಿಜನಗಳಲ್ಲಿ ಕೆಲವೊಂದನ್ನು ಉಪಯೋಗಿಸಿಕೊಳ್ಳುತ್ತವೆಯೋ? ಎಂದು ಯಾರಾದರೂ ಪ್ರಶ್ನೆ ಮಾಡಿದರೆ, ಅವರ ಸಂಶಯ ನಿವಾರಣಾರ್ಥವಾಗಿ ಕೆಳಗೆ ಕೊಟ್ಟ ಪ್ರಯೋಗ ಮಾಡುವಾ.

ಹಚ್ಚಗಾಗಿರುವ ೧೫-೨೦ ಎಲೆಗಳನ್ನು A ಪಾತ್ರೆಯೆಲ್ಲಿ ಆಕೃತಿ (೧೬) ರಲ್ಲಿ ತೋರಿಸಿದಂತಿಟ್ಟು, ಅದರಲ್ಲಿ ನೀರು ತುಂಬಿ, ಒಂದು ಕಾಜಿನ ಲಾಳಿಕೆಯನ್ನು ಆ ಎಲೆಗಳ ಮೇಲೆ ಆಕೃತಿಯಲ್ಲಿ ತೋರಿಸಿದಂತೆ ಇರಿಸುವಾ.

ಆ ಮೇಲೆ ಒಂದು ಪರೀಕ್ಷಾ ನಲಿಕೆಯನ್ನು ನೀರಿನಿಂದ ತುಂಬಿ, ಅದರ ಬಾಯಿಗೆ ಬೊಟ್ಟಟ್ಟು ಹಬ್ಬು ಮಾಡಿ A ಪಾತ್ರೆಯಲ್ಲಿ ಹಾಕಿದ ನೀರಿನಲ್ಲಿ ಅದರ ಬಾಯಿಯನ್ನು ಮುಳುಗಿಸಿ, ಅದರ ಮೇಲಿನ ಬೊಟ್ಟು ತೆಗೆದರೆ ಹವೆಯ್ಕ ಒತ್ತುವಿಕೆಯ ಮೂಲಕ ಆ ನಲಿಕೆಯೊಳಗಿನ ನೀರು ಕೆಳಗಿಳಿಯದೆ ಅದನ್ನು ತುಂಬಿ ನಿಲ್ಲುವದು. ಇಷ್ಟಾದ ಬಳಿಕ ಆ ಪರೀಕ್ಷಾ ನಲಿಕೆಯನ್ನು B ಲಾಳಿಕೆಯ ಮೇಲೆ ಆಕೃತಿಯಲ್ಲಿ ತೋರಿಸಿದಂತಿಟ್ಟು A ಪಾತ್ರೆಯನ್ನು ಪರೀಕ್ಷಾನಲಿಕೆಯ ಸಹಿತ ಬಿಸಲಿನಲ್ಲಿಟ್ಟರೆ, ತುಸು ಹೊತ್ತಿನ ಮೇಲೆ ಆ ಪರೀಕ್ಷಾ ನಲಿಕೆಯಲ್ಲಿ ಗುಳ್ಳೆಗಳೇಳುವದು ಕಂಡು ಬರುವದು. ಪರೀಕ್ಷಾನಲಿಕೆಯಲ್ಲಿ ವಾಯುವು ಕೂಡ ಬಿದ್ದ ಹಾಗೆ, ಅದರೊಳಗಿನ ನೀರು ಕೆಳಗಿಳಿಯಹತ್ತುವದು. ಸಾಕಷ್ಟು ವಾಯುವು ಅದರಲ್ಲಿ ಕೂಡ ಬಿದ್ದ ಮೇಲೆ ಆ ನಲಿಕೆಯನ್ನು ಹೊರಗೆ ತೆಗೆದು, ಅದರಲ್ಲಿರುವ ವಾಯುವಿನಲ್ಲಿ ಅರ್ಧಮರ್ಧ ಸುಡುವ ಇದ್ದಲಿಯ ಕೆಂಡವನ್ನಿಟ್ಟರೆ ಅದು ಕೂಡಲೆ ಪ್ರಜ್ವಲಿಸಹತ್ತುವದು. ಇದರಿಂದ ಆ ವಾಯುವು ಆಕ್ಸಿಜನವೆಂದು ಗೊತ್ತಾಗುವದು. ಈ ಪ್ರಯೋಗದಿಂದ ವನಸ್ಪತಿಗಳು ಕಾರ್ಬಾನಿಕ್ ಆಸಿಡ್‌ಗ್ಯಾಸವನ್ನು ಪ್ರತಃಕ್ಕರಿಸಿ ಕಾರ್ಬೊನ್ನವನ್ನು ತಮ್ಮ ಉಪಯೋಗಕ್ಕಾಗಿಟ್ಟುಕೊಂಡು ಆಕ್ಸಿಜನವನ್ನು ಬಿಟ್ಟು ಬಿಡುತ್ತವೆಂಬದು ಸ್ಪಷ್ಟವು.

ಸೂರ್ಯನ ಪ್ರಕಾಶವು ಹೆಚ್ಚಿದಂತೆ ಕಾರ್ಬಾನಿಕ್ ಆಸಿಡ್‌ಗ್ಯಾಸದ ಪ್ರತಃಕ್ಕರಣವು ಹೆಚ್ಚು ಕಸುವಿನಿಂದ ನಡೆಯುವದು. ವನಸ್ಪತಿಗಳು ಬೇರಿನಿಂದ ತೆಗೆದುಕೊಂಡ ಖನಿಜ ಪದಾರ್ಥಗಳನ್ನೂ ಎಲೆಗಳಿಂದ ತೆಗೆದುಕೊಂಡ ಕಾರ್ಬೊನ್ನವನ್ನೂ ಮಿಶ್ರ ಮಾಡಿ, ತಮಗೆ ಬೇಕಾಗುವ ಆಹಾರದ ಪದಾರ್ಥಗಳನ್ನು ಹ್ಯಾಗೆ ಸಿದ್ಧಮಾಡುತ್ತವೆಂಬದನ್ನು ಮುಂದಿನ ಅಧ್ಯಾಯದಲ್ಲಿ ಹೇಳುವೆವು.

---

೩ ನೇ ಅಧ್ಯಾಯ.

ವನಸ್ಪತಿಗಳ ಆಹಾರದ ಸಿದ್ಧತೆಯು

ವನಸ್ಪತಿಗಳು ತಮ್ಮ ಬೇರುಗಳ ಸಹಾಯದಿಂದ ನೀರಿನಲ್ಲಿ ಕರಗಿದ ಖನಿಜದ್ರವ್ಯಗಳನ್ನೂ ಹಸರೆಲೆಗಳ ಸಹಾಯದಿಂದ ಹವೆಯೊಳಗಿನ ಕಾರ್ಬಾನಿಕ್ ಆಸಿಡ್ ಗ್ಯಾಸವನ್ನೂ ಪೃತಃಕರಿಸಿ ಅದರದೊಂದು ಘಟಕ

ನಾದ ಕಾರ್ಬೊನ್ನವನ್ನು ದೊರಕಿಸಿಕೊಳ್ಳುತ್ತವೆಂಬದನ್ನು ಹಿಂದಿನ ಅಧ್ಯಾಯಗಳಲ್ಲಿ ಹೇಳಿಯಿದೆ.

ವನಸ್ಪತಿಗಳು ಬೇರಿನಿಂದ ತೆಗೆದಕೊಂಡು ಖನಿಜಪದಾರ್ಥಗಳು ಅವುಗಳ ಕಾಂಡಗಳಲ್ಲಿ ತಾವು ಕರಗಿಕೊಂಡಿರುವ ನೀರಿನಸಂಗಡ ಏರು ತ್ತೇರುತ್ತ ಎಲೆಗಳ ವಿಸ್ತಾರವಾದ ಭಾಗಕ್ಕೆ ಬಂದುಮುಟ್ಟಲು, ಎಲೆಗಳ ತ್ವಚೆಯಲ್ಲಿರುವ ಛಿದ್ರಗಳೊಳಗೆ ವಾರಾಗಿ, ನೀರು ಉಗಿಯರೂಪದಿಂದ ವಾತಾವರಣಕ್ಕೆ ಹೊರಟುಹೋಗಲು, ಅದರಲ್ಲಿ ಕರಗಿಕೊಂಡುಬಂದ ಖನಿಜಪದಾರ್ಥಗಳು ಎಲೆಗಳಲ್ಲಿಯೇ ಉಳಿದಬಿಡುವವು. ಎಲೆಗಳು ಮುಂಚಿತವಾಗಿ ಹಿಡಿದಿಟ್ಟ ಕಾರ್ಬೊನ್ನು ಈ ಖನಿಜಪದಾರ್ಥಗಳ ಸಂಗಡ ರಸಾಯನರೀತಿಯಿಂದ ಮಿಶ್ರವಾಗಲು ಗಂಜೀಹಿಟ್ಟು (Starch) ಅಂಟು, ಗಿಣ್ಣ, ಸಕ್ಕರೆ, ಲೋಳೆ, ಸೇಂದ್ರಿಯ ಆಮ್ಲಗಳು ಇವೇ ಮೊದಲಾದ *ಸೇಂದ್ರಿಯ ಪದಾರ್ಥಗಳು ಎಲೆಗಳಲ್ಲಿ ಸಿದ್ಧವಾಗುವವು. ಈ ಪದಾರ್ಥಗಳೆಲ್ಲ ವನಸ್ಪತಿಗಳ ಆಹಾರದ ಪದಾರ್ಥಗಳಂತೂ ಸರಿಯೇ. ಪ್ರಾಣಿಗಳಾದರೂ ಇವೇ ಪದಾರ್ಥಗಳನ್ನು ತಿಂದು ಬದುಕುವವು. ಆದದರಿಂದ ವನಸ್ಪತಿಗಳು ಪ್ರಾಣಿಗಳಿಗೆ ಅನ್ನದಾಯಕಗಳೆಂದು ಧಾರಾಳವಾಗಿ ಹೇಳಬಹುದು.

ರಸಾಯನಶಾಸ್ತ್ರದ ಸಂಪೂರ್ಣಜ್ಞಾನವಿದ್ದ ಹೊರತು ರಸಾಯನವ್ಯಾಪಾರಗಳ ಮೂಲಕ ವನಸ್ಪತಿಗಳ ಎಲೆಗಳಲ್ಲಿ ಸೇಂದ್ರಿಯ ಪದಾರ್ಥಗಳು ಸಿದ್ಧವಾಗುವ ಕ್ರಮವನ್ನು ಸಮಗ್ರವಾಗಿ ತಿಳಿದುಕೊಳ್ಳುವದು ಅಸಂಭವನೀಯವಾದದರಿಂದ, ಆ ಸೇಂದ್ರಿಯ ಪದಾರ್ಥಗಳಲ್ಲಿ ಹೆಚ್ಚು ಮಹತ್ವವುಳ್ಳ ಗಂಜೀಹಿಟ್ಟು ಎಂಬ ಸೇಂದ್ರಿಯ ಪದಾರ್ಥವು ವನಸ್ಪತಿಗಳ ಎಲೆಗಳಲ್ಲಿ ಹ್ಯಾಗೆ ಸಿದ್ಧವಾಗುತ್ತದೆಂಬದನ್ನು ಮಾತ್ರ ಈ ಅಧ್ಯಾಯದಲ್ಲಿ ವಿವರಿಸುವೆವು.

---

* ಕಾರ್ಬೊನ್ನು ಮುಖ್ಯವಾದ ಘಟಕವಾಗಿರುವ ಪದಾರ್ಥಗಳಿಗೆ ಸೇಂದ್ರಿಯ (Organic) ಪದಾರ್ಥಗಳೆಂಬ ಹೆಸರು. ಸೇಂದ್ರಿಯ ಪದಾರ್ಥಗಳನ್ನು ಸುಟ್ಟರೆ ಅವು ಕರಕಾಗಹತ್ತಿ ಕಪ್ಪಾಗುವವು. ಕಟ್ಟಿಗೆ, ಸಕ್ಕಡಿ, ಮೇಣ, ಅಂಟು, ಕಾಳುಕಡಿ, ಮೊದಲಾದವುಗಳೆಲ್ಲ ಸೇಂದ್ರಿಯ ಪದಾರ್ಥಗಳು.

ತಾಯಿ ವನಸ್ಪತಿಯು ದಾಯಿ ಯೆಲೆಗಳಲ್ಲಿಟ್ಟ ಆಹಾರದ ಸಂಚ
ಯದ ದೊಡ್ಡ ಭಾಗವು ಗಂಜೀಹಿಟ್ಟಿನದಿರುತ್ತದೆಂದೂ ಅಂಕುರವು
ಮೊಳೆತು ಸಸಿಯಾಗಿ ತನ್ನ ಆಹಾರವನ್ನು ದೊರಕಿಸಿಕೊಳ್ಳುವಷ್ಟು ಸಾಮ
ರ್ಥ್ಯವು ಅದಕ್ಕೆ ಉಂಟಾಗುವವರೆಗೆ ಅದು ಆ ಗಂಜೀಹಿಟ್ಟನ್ನು ತನ್ನ
ಆಹಾರದಂತೆ ಉಪಯೋಗಿಸಿಕೊಳ್ಳುತ್ತದೆಂದೂ ಈ ಮೊದಲು ನಮಗೆ
ಗೊತ್ತಾಗಿದೆ. ದಾಯಿ ಯೆಲೆಗಳು ಉದುರಿಬಿದ್ದ ಮೇಲೆ ತನ್ನ ಆಹಾರವನ್ನು
ತಾನೇ ದೊರಕಿಸಿಕೊಂಡು ಬೆಳೆಯುತ್ತಿರುವ ವನಸ್ಪತಿಗಳ ಎಲ್ಲಭಾಗಗಳಲ್ಲಿ
ಗಂಜೀಹಿಟ್ಟು ಪಿತಪ್ರೋತವಾಗಿ ತುಂಬಿರುವದೆಂಬದು ಬಾಟಾಟು, ಗೆಣಸು,
ಗಜ್ಜರಿ, ದಂಟು, ಕಾಳು ಮೊದಲಾದವುಗಳನ್ನು ಪುಡಿಮಾಡಿ ಆ ಪುಡಿಯ
ಮೇಲೆ ನೀರಿನಲ್ಲಿ ಬೆರಿಸಿದ ಆಯೊಡಾಯಿನವನ್ನು ಸುರುವಿದರೆ ಅದರ
ಬಣ್ಣವು ನೀಲವಾಗುವದರಿಂದ ಸಿದ್ಧವಾಗುವದು. ಇದರಿಂದ ಬೆಳವ
ಣಿಗೆಯುಳ್ಳ ಎಲ್ಲ ವನಸ್ಪತಿಗಳಲ್ಲಿ ಗಂಜೀಹಿಟ್ಟು ನಿತ್ಯಶಃ ಹುಟ್ಟು
ತ್ತಲೇ ಇರಬೇಕೆಂಬ ಅನುಮಾನವು ನಮ್ಮ ಮನಸ್ಸಿನಲ್ಲಿ ಬರು
ವದು. ಈ ಅನುಮಾನವು ಸರಿಯಾಗಿದೆಯೋ? ಹ್ಯಾಗೆ? ವನಸ್ಪ
ತಿಗಳಲ್ಲಿ ಕಂಡುಬರುವ ಗಂಜೀಹಿಟ್ಟಿನ ಘಟಕಗಳು ಯಾವವು? ಗಂಜೀ
ಹಿಟ್ಟು ಎಲೆಗಳಲ್ಲಿ ಹ್ಯಾಗೆ ಸಿದ್ಧವಾಗುವದು? ಅದು ಹುಟ್ಟಲಿಕ್ಕೆ ಬೇಕಾ
ಗುವ ಅನುಕೂಲತೆಗಳು ಯಾವ ? ಎಂಬದನ್ನು ಕುರಿತು ತುಸ
ವಿಚಾರಿಸುವಾ.

ಸ್ವಲ್ಪ ಅಕ್ಕಿಯ ಹಿಲ್ಲವೆ ಗೋದಿಯಹಿಟ್ಟು ತೆಗೆದುಕೊಂಡು, ಸಣ್ಣ
ಸವಟನಲ್ಲಿ ಹಾಕಿ, ಅದನ್ನು ಬೆಂಕಿಯಮೇಲಿಟ್ಟು ಕಾಸಹತ್ತಿದರೆ, ಆಹಿಟ್ಟು
ಕಪ್ಪಾಗಹತ್ತಿ, ಕಡೆಗೆ ಅದಕ್ಕೆ ಬೆಂಕಿಹತ್ತಿ ಅದು ಉರಿಯಹತ್ತುವದು.
ಅರ್ಧಮರ್ಧಸುಟ್ಟಮೇಲೆ ಹಿಟ್ಟಗೆಹತ್ತಿದ ಉರಿಯನ್ನು ನಂದಿಸಿಬಿಟ್ಟು,
ಅದನ್ನು ನೆಲದ ಮೇಲೆ ಸುರುವಿದರೆ ಅದು ಕರಕಾದ ಇದ್ದಲಿಯಂತೆ ಕಾಣ
ಹತ್ತುವದು. ಇದರಿಂದ ಗಂಜೀಹಿಟ್ಟಿನ ಘನರೂಪದಲ್ಲಿರುವ ಘಟಕವು
ಕಾರ್ಬೊನ್ನು ಎಂಬದು ಗೊತ್ತಾಗುವದು. ಗಂಜೀಹಿಟ್ಟಿನ ಉಳಿದ ಘಟ
ಕಗಳನ್ನು ಗೊತ್ತುಹಚ್ಚಲಿಕ್ಕೆ ಅದರ ವೃತಃಕರಣ ಮಾಡಬೇಕಾಗು
ವದು. ಅದು ಬಹುಕಷ್ಟಸಾಧ್ಯವಾಗಿರುವದರಿಂದ ರಸಾಯನಶಾಸ್ತ್ರಜ್ಞರು
ನಾನಿವ ಪ್ರಯೋಗಗಳ ಫಲಿತವನ್ನು ಗ್ರಹಿಸಲಿಕ್ಕೆ ಅಡ್ಡಿತೋರುವದಿಲ್ಲ.

ಗಂಜೀಹಿಟ್ಟಿನಲ್ಲಿ (Slarch= $\underset{6}{C}\underset{10}{H}\underset{5}{O}$) ಕಾರ್ಬೋನ್ನಿನ ೬ ಪರಮಾಣುಗಳು, ಹೈಡ್ರೋಜನದ ೧೦ ಪರಮಾಣುಗಳು, ಆಕ್ಸಿಜನದ ೫ ಪರಮಾಣುಗಳು ರಸಾಯನ ರೀತಿಯಿಂದ ಸಂಯೋಗವಾಗಿರುತ್ತವೆಂದು ರಸಾಯನ ಶಾಸ್ತ್ರಜ್ಞರು ಸಿದ್ಧಮಾಡಿದ್ದಾರೆ.

ವನಸ್ಪತಿಗಳು ಅಂಗಾರಾಮ್ಲವಾಯುವುಳ್ಳ ಹವೆಯಲ್ಲಿ ನೆಟ್ಟಗೆ ಬೆಳೆದು ತಮ್ಮ ಎಲೆಗಳಮೇಲೆ ಸೂರ್ಯನ ಪ್ರಕಾಶವು ಚನ್ನಾಗಿ ಬೀಳುವಂತೆ ಅವುಗಳನ್ನು ಹರವಿಕೊಂಡಿರುವದರಿಂದ, ಎಲೆಗಳೊಳಗಿನ ಕೆಲವು ಪದಾರ್ಥಗಳು ಸೂರ್ಯನ ಪ್ರಕಾಶವೆಂಬ ಶಕ್ತಿಯನ್ನು ಸುಂಗಿಕೊಂಡು ಆ ಶಕ್ತಿಯ ಸಹಾಯದಿಂದ ಅಂಗಾರಾಮ್ಲವಾಯುವಿನ ಪ್ರತಃಕರಣಮಾಡಿ, ಅಂಗಾರ (ಕಾರ್ಬೋನ್ನು) ವನ್ನು ಹಿಡಿದಿಟ್ಟುಕೊಂಡು, ಅದು ಬೇರೆ ಕೆಲವು ಮೂಲತತ್ವಗಳ ಸಂಗಡ ಸಂಯೋಗವಾಗುವಂತೆ ಮಾಡಿ, ವನಸ್ಪತಿಗಳಿಗೆ ಬೇಕಾಗುವ ಆಹಾರವನ್ನು ಸಿದ್ಧಪಡಿಸುತ್ತಿರುವವು. ಈ ಕಾರಣದಿಂದ ಎಲೆಗಳು ವನಸ್ಪತಿಗಳ ಆಹಾರದ ಅಡಿಗೆಯಾಗುವ ಮನೆಗಳೆಂದೆನ್ನಬಹುದು.

ಹಗಲು ವನಸ್ಪತಿಗಳ ಎಲೆಗಳಲ್ಲಿ ಗಂಜೀಹಿಟ್ಟಿನ ಕಣಗಳು ತುಂಬಿರುವವು. ಆದರೆ ಆ ಎಲೆಗಳಿಗಿರುವ ಹಸರು ಬಣ್ಣದ ಮೂಲಕ ಅವುಗಳ ಮೇಲೆ ಅಯೋಡಾಯಿನದ ಮಿಶ್ರಣವನ್ನು ಸುರುವುವದರಿಂದುಂಟಾದ ನೀಲ ವರ್ಣವು ಸ್ಪಷ್ಟವಾಗಿ ಕಾಣಿಸುವದಿಲ್ಲ. ಆದಕಾರಣ ಮೂರುಸಂಜೆಯ ಸುಮಾರಕ್ಕೆ ಯಾವದೊಂದು ವನಸ್ಪತಿಯ ಹಸರೆಲೆಯನ್ನು ತುಂಬಿನ ಹತ್ತರ ಕೊಯ್ದು. ಕೂಡಲೇ ಅದನ್ನು ಕುದಿಯುವ ನೀರಿನಲ್ಲಿ ಹಾಕಿ ೨।೩ ಮಿನೀಟುಗಳ ವರೆಗೆ ಕುದಿಸಿದರೆ, ಅದು ಮೆತ್ತಗಾಗುವದು. ಆ ಮೇಲೆ ಅದನ್ನು ಕುದಿಯುವ ನೀರಿನೊಳಗಿಂದ ಹೊರಗೆ ತೆಗೆದು ಬೇರೊಂದು ಪಾತ್ರೆಯಲ್ಲಿ ಹಾಕಿಟ್ಟ ಮದ್ಯಾರ್ಕ (Alcohol) ದಲ್ಲಿ ಮುಳಗಿಸಿ, ಇಡಿ ರಾತ್ರಿ ಹಾಗೆ ಬಿಟ್ಟು ಮರುದಿವಸ ಬೆಳಗುಮುಂಜಾನೆ ಆ ಎಲೆಯನ್ನು ಹೊರಗೆ ತೆಗೆದು ನೋಡಿದರೆ ಅದರ ಹಸುರು ಬಣ್ಣವೆಲ್ಲ ಹೊರಟು ಹೋಗಿರುವದು ಕಂಡು ಬರುವದು. ಆ ಮೇಲೆ ಆ ಎಲೆಯ ಮೇಲೆ ಅಯೋಡಾಯಿನ್ನದ ಮಿಶ್ರಣವನ್ನು ಸುರುವಿದರೆ ಅದರ ಬಣ್ಣವು ನೀಲವಾಗುವದು ಕಂಡುಬರುವದು. ಇದರಿಂದ ಆ ಎಲೆಯೆಲ್ಲಿ ಗಂಜೀ ಹಿಟ್ಟಿನ ಕಣಗಳು ತುಬಿಂರುತ್ತವೆಂಬದು ನಮ್ಮ ನಿದರ್ಶನಕ್ಕೆ ಬರುವದು.

ಇನ್ನು ಸೂರ್ಯನ ಬಿಸಿಲು ಬೀಳದಿರುವ ಯಾವದೊಂದು ಎಲೆಯ ಭಾಗದಲ್ಲಿ ಗಂಜೀ ಹಿಟ್ಟು ಹುಟ್ಟುವದಿಲ್ಲವೋ? ಹ್ಯಾಗೆ? ಎಂದು ಯಾರಾದರು ಕಂಕಿಸಿದರೆ ಅವರಿಗೆ ಉತ್ತರವನ್ನು ಕೊಡುವದಕ್ಕಿಂತ ಮೊದಲು ಒಂದು ಪ್ರಯೋಗ ಮಾಡುವಾ. ಚನ್ನಾಗಿ ಬಲಿತು ಹಸರು ಬಣ್ಣವುಳ್ಳ ಯಾವದೊಂದು ವನಸ್ಪತಿಯ ಎಲೆಯನ್ನು ಆರಿಸಿ ಗೊತ್ತುಮಾಡಿ ೧½ ಇಂಚ ಉದ್ದ ೧ ಇಂಚು ಅಗಲಾದ ಎರಡು ದಪ್ಪಾದ ಕಾಗದಗಳ ಚೂರುಗಳನ್ನು ಕತ್ತರಿಸಿ ಅವುಗಳ ಒಂದು ಮೈಗೆ ಬೇಗಡಿಯನ್ನು ಹಚ್ಚಿ ಆ ಚೂರಗಳನ್ನು ಆರಿಸಿಟ್ಟ ಎಲೆಯ ಮೇಲೊಂದು ಕೆಳಗೊಂದು ಬರುವ ಹಾಗೆ ಗಲನೇ ಚಿತ್ರದಲ್ಲಿ ತೋರಿಸಿದಂತೆ ಬೇಗಡಿ ಹಚ್ಚಿದಮೈ ಎಲೆಯಕಡೆಗೆ ಆಗುವಂತೆ ಇಟ್ಟು, ದಾರದಿಂದ ಕಟ್ಟಿ, ಆ ಎಲೆಯಮೇಲೆ ಸೂರ್ಯನ ಬಿಸಿಲು ಬೀಳುವಂತೆ ವ್ಯವಸ್ಥೆ ಮಾಡುವಾ. ಈ ಸ್ಥಿತಿಯಲ್ಲಿ ಆ ಎಲೆಯನ್ನು ಮೂರು ದಿವಸಗಳವರೆಗೆ ಗಿಡದಲ್ಲಿಯೇ ಬಿಟ್ಟು ನಾಲ್ಕನೇ ದಿವಸ ಮಧ್ಯಾನ್ಹದ ಸುಮಾರಕ್ಕೆ ಅದನ್ನು ಗಿಡದಿಂದ ಕೊಯಿದುತಂದು ಬೆಳಕುಬಾರದ ಸ್ಥಳದಲ್ಲಿ ಅಡಕ್ಕೆ ಕಟ್ಟಿರುವ ಕಾಗದದ ಚೂರುಗಳನ್ನು ಬಿಚ್ಚಿತೆಗೆದು ಮೇಲೆ ಹೇಳಿದ ಪ್ರಯೋಗವನ್ನು ಮಾಡಿ ನೋಡಲು ಆಕೃತಿ (೧೯) ರಲ್ಲಿ ತೋರಿಸಿದಂತೆ ಕಾಗದದ ಚೂರುಗಳಿಂದ ಮುಚ್ಚಲ್ಪಟ್ಟ ಭಾಗದಲ್ಲಿ ಆಯೋಡಾಯಿನ್ನಿನ ಮಿಶ್ರಣದಿಂದ ನಿಲವರ್ಣವು ಉಂಟಾಗುವದಿಲ್ಲೆಂಬದು ಗೊತ್ತಾಗುವದು. ಈ ಪ್ರಯೋಗದಿಂದ ಸೂರ್ಯನ ಪ್ರಕಾಶವು ಬೀಳದಿರುವ ಯಾವದೊಂದು ಎಲೆಯ ಭಾಗದಲ್ಲಿ ಗಂಜೀ ಹಿಟ್ಟು ಹುಟ್ಟುವದಿಲ್ಲೆಂದು ಸಿದ್ಧವಾಗುವದು.

ಒಂದೇ ದಿವಸ ಬೆಳಗುಮುಂಜಾನೆ, ಮಧ್ಯಾಹ್ನದಲ್ಲಿ, ಮೂರು ಘಂಟೆಯ ಸುಮಾರಕ್ಕೆ, ಒಂದೇ ವನಸ್ಪತಿಯ ಎಲೆಗಳನ್ನು ಕೊಯ್ದು ಆಯೋಡಾಯಿನೆದ ಮಿಶ್ರಣದಿಂದ ಪರೀಕ್ಷಿಸಿದರೆ, ಬೆಳಗುಮುಂಜಾನೆ ಕೊಯಿದ ಎಲೆಯಲ್ಲಿ ಗಂಜೀಹಿಟ್ಟು ಎಷ್ಟು ಮಾತ್ರವೂ ಕಂಡು ಬರುವದಿಲ್ಲ. ಮಧ್ಯಾನ್ಹದಲ್ಲಿ ಕೊಯಿದ ಎಲೆಯಲ್ಲಿರುವ ಆ ಹಿಟ್ಟಿನ ಸಂಚಯಕ್ಕಿಂತ ಮೂರು ಘಂಟೆಯ ಸುಮಾರಕ್ಕೆ ತೆಗೆದ ಎಲೆಯಲ್ಲಿ ಅದರ ಸಂಚಯವು ಹೆಚ್ಚಿರುವದು. ಇನ್ನು ಪ್ರಾತಃಕಾಲದಲ್ಲಿ ವನಸ್ಪತಿಗಳ ಎಲೆಗಳಲ್ಲಿ ಗಂಜೀಹಿಟ್ಟು ಕಂಡು ಬಾರದಿರುವದರಿಂದ ಸಾಯಂಕಾಲದ ವರೆಗೆ ಅವುಗಳಲ್ಲಿ ಕೂಡ

ಬಿದ್ದ ಹಿಟ್ಟಿನ ಭಾಗವು ಎಲ್ಲಿ ಹೊರಟು ಹೋಗುವದು? ಎಂಬ ಪ್ರಶ್ನೆಯು ಸಹಜವಾಗಿ ಉದ್ಭವಿಸುವದು. ಅದಕ್ಕೆ ಉತ್ತರವೇನೆಂದರೆ, ರಾತ್ರಿಯಲ್ಲಿ ವನಸ್ಪತಿಯ ಎಲೆಗಳು ತಮ್ಮಲ್ಲಿರುವ ಹಿಟ್ಟಿನ ಸಂಚಯವನ್ನು ಭೂಮಿಯಲ್ಲಿ ಅಡಗಿಕೊಂಡಿರುವ ಬೇರು ಇಲ್ಲವೆ ಕಾಂಡದ ಭಾಗಗಳಿಗೆ ಕಳುಹಿಸಿ ಕೊಟ್ಟು ಸೂರ್ಯೋದಯವಾದ ಕೂಡಲೇ ಪುನಃ ಅದನ್ನು ಹುಟ್ಟಿಸುವ ಕೆಲಸದಲ್ಲಿ ತೊಡಗಿಕೊಳ್ಳುತ್ತವೆ. ಈ ಕಾರಣದಿಂದ ಬಟಾಟಿ, ಗೆಣಸು, ಗಜ್ಜರಿ ಮೊದಲಾದವುಗಳಲ್ಲಿ ಗಂಜೀಹಿಟ್ಟು ಸಂಚಿತವಾಗಿರುವದು. ಈ ತರದ ಕಂದಮೂಲಗಳು ಗಂಜೀಹಿಟ್ಟಿನ ಉಗ್ರಾಣಗಳಾಗಿವೆ ಹೊರತು ಅದನ್ನು ನಿರ್ಮಿಸುವ ಶಕ್ತಿಯು ಅವುಗಳಿಗೆ ಎಷ್ಟು ಮಾತ್ರವೂ ಇರುವದಿಲ್ಲ.

ಮೇಲಿನ ಪ್ರಯೋಗಗಳಿಂದ ವನಸ್ಪತಿಗಳ ಆಹಾರದ ಸಿದ್ಧತೆಗೆ ಹವೆಯೂ, ಸೂರ್ಯನ ಪ್ರಕಾಶವೂ, ಹಸರೆಲೆಗಳೂ ಎಂಬ ಅನುಕೂಲತೆಗಳೂ ಅವಶ್ಯವಾಗಿ ಬೇಕಾಗುತ್ತವೆಂಬದು ಈಗ ನಮಗೆ ಗೊತ್ತಾಯಿತು. ಎಲೆಗಳಿಗೆ ಹಸರು ಬಣ್ಣವುಂಟಾಗಲಿಕ್ಕೆ ಕಬ್ಬಿಣದ ಕ್ಷಾರಗಳು ಅವಶ್ಯವಾಗಿ ಬೇಕಾಗುವವು. ಈ ಮೊದಲು ಮಾಡಿದ ಪ್ರಯೋಗಗಳಲ್ಲಿ (ಆಕೃತಿ ೧೫) ರಲ್ಲಿ (R) ಸೀಸೆಯಲ್ಲಿಟ್ಟ ವನಸ್ಪತಿಯು ಕಬ್ಬಿಣದ ಕ್ಷಾರದ ಅಭಾವದ ಮೂಲಕ ಸತ್ತು ಹೋಗುವದೆಂಬದು ನಮಗೆ ಗೊತ್ತಾಗಿದೆ. ಹಸರುಬಣ್ಣವುಳ್ಳ ಎಲೆಗಳಿಗೆ ಸೂರ್ಯನ ಪ್ರಕಾಶವೆಂಬ ಶಕ್ತಿಯನ್ನು ನುಂಗಿಕೊಂಡು ಅದರ ಸಹಾಯದಿಂದ ಪದಾರ್ಥಗಳ ಪೃತಃಕ್ಕರಣ ಏಕೀಕರಣ ಮೊದಲಾದ ಕಾರ್ಯಗಳನ್ನು ಜರಗಿಸುವ ಗುಣಧರ್ಮವಿರುವದು. ಎಲೆಗಳಿಗಿರುವ ಹಸರುಬಣ್ಣವು ಹೊರಟು ಹೋದ ಕೂಡಲೆ ವನಸ್ಪತಿಗಳು ಅವುಗಳನ್ನು ಒಂದು ಕ್ಷಣಸಹ ಇಟ್ಟುಕೊಳ್ಳದೆ ಉದುರಿಸಿ ಬಿಡುವವು

ಎಲೆಗಳಲ್ಲಿ ಗಂಜೀ ಹಿಟ್ಟು ಹುಟ್ಟುವಂತೆ ಅಂಟು, ಸಕ್ಕರೆ, ಗಿಣ್ಣು ತೊಳೆ ಮೊದಲಾದವುಗಳಾದರೂ ಹಲವು ರಸಾಯನ ವ್ಯಾಪಾರಗಳ ಯೋಗದಿಂದ ಹುಟ್ಟುವದುಂಟು. ಈ ಪೋಷಕ ದ್ರವ್ಯಗಳು ನಮ್ಮಮ್ಮೈಯ್ಯಲ್ಲಿ ರಕ್ತವು ಸಂಚರಿಸುವಂತೆ ವನಸ್ಪತಿಗಳ ಎಲ್ಲ ಭಾಗಗಳಲ್ಲಿ ಸಂಚರಿಸುತ್ತ ಅವುಗಳಿಗೆ ಬೇಕಾದ ಪೋಷಕ ಪದಾರ್ಥಗಳನ್ನು ಪೂರೈಸಿ ಕೊಡುವವು.

ಬೇರುಗಳು ಹೀರಿಕೊಂಡ ಖನಿಜ ದ್ರವ್ಯಗಳನ್ನು ಎಲೆಗಳಿಗೂ ಎಲೆಗಳು ಸಿದ್ಧಪಡಿಸಿದ ಪೋಷಕ ಪದಾರ್ಥಗಳನ್ನು ವನಸ್ಪತಿಯ ಎಲ್ಲ ಭಾಗಗಳಿಗೂ ಒಯ್ದು ಮುಟ್ಟಿಸುವ ಕಾರ್ಯವನ್ನು ನೀರು ಎಡೆಬಿಡದೆ ಮಾಡುತ್ತಿರುವದರಿಂದ ವನಸ್ಪತಿಗಳಲ್ಲಿ ನಡೆದಿರುವ ನೀರಿನ ಸಂಚಾರವನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸುವೆವು.

ಎನೇ ಅಧ್ಯಾಯ.

ವನಸ್ಪತಿಗಳಲ್ಲಿ ಎಡೆಬಿಡದೆ ನಡೆದಿರುವ ನೀರಿನ ಸಂಚಾರವು.

ವನಸ್ಪತಿಗಳ ಜೀವನ ವ್ಯಾಪಾರಗಳಿಗೆ ನೀರು ಅತ್ಯವಶ್ಯವಾದ ಪದಾರ್ಥವಿರುತ್ತದೆಂಬದು ಎಲ್ಲರಿಗೂ ಗೊತ್ತಿದ್ದ ಸಂಗತಿಯು. ವನಸ್ಪತಿಗಳು ಭರದಿಂದ ಬೆಳೆಯಬೇಕಾದರೆ ಅವುಗಳ ಬೆಳೆಯುತಕ್ಕ ಭಾಗಗಳಿಗೆ ನೀರು ತಕ್ಕ ಪ್ರಮಾಣದಿಂದ ಕಾಲಕಾಲಕ್ಕೆ ಹೋಗಿ ಮುಟ್ಟಬೇಕಾಗುವದು. ಬೀಜಗಳು ಮೊಳೆಯಬೇಕಾದರೆ ನೀರು ಅವಶ್ಯವಾಗಿ ಬೇಕಾಗುವದು. ವನಸ್ಪತಿಗಳ ಬೇರುಗಳು ಭೂಮಿಯಿಂದ ತೆಗೆದುಕೊಂಡ ಖನಿಜದ್ರವ್ಯಗಳನ್ನು ಅವಗಳ ಎಲೆಗಳಿಗೆ ಒಯ್ದು ಮುಟ್ಟಿಸುವ ಕೆಲಸವನ್ನು ನೀರು ಯಾವಾಗಲು ಮಾಡುತ್ತಿರುವದು. ಎಲೆಗಳಲ್ಲಿ ಸಿದ್ಧವಾದ ವನಸ್ಪತಿಗಳ ಆಹಾರವನ್ನು ರಸರೂಪದಿಂದ ಅವುಗಳ ಎಲ್ಲಭಾಗಗಳಿಗೆ ಮುಟ್ಟಿಸುವದು ನೀರಿನ ಸಹಾಯದಿಂದಲೇ ಆಗುವದು. ಒಟ್ಟಿನಮೇಲೆ ವನಸ್ಪತಿಗಳಿಗಿರುವ ನೀರಿನ ಮಹತ್ವವು ಅದರ ಅಭಾವದಿಂದ ನಮಗೆ ಕೊಡಲೆ ವ್ಯಕ್ತವಾಗುವದು. ತೇವವವಿಲ್ಲದ ಮಣ್ಣಿನ ಹೂಡಿಯಲ್ಲಿ ಯಾವದೊಂದು ವನಸ್ಪತಿಯ ಬೇರುಗಳನ್ನು ಹುಗಿದಿಟ್ಟರೆ ಅದು ಬಾಡಿಹೋಗುವದೆಂಬದು ಈ ಮೊದಲು ನಮಗೆ ಗೊತ್ತಾಗಿದೆ. ವನಸ್ಪತಿಯ ಕೆಲಸಮಾಡುವ ಎಲೆದೇಟು ಮೊದಲಾದ ಭಾಗಗಳಿಗೆ ನೀರು ಯೋಗ್ಯಕಾಲಕ್ಕೆ ಸಾಕಷ್ಟು ಹೋಗಿ ಮುಟ್ಟದಿದ್ದರೆ ಅವು ಬಾಡಿದಂತಾಗಿ ಅವುಗಳಿಗಿರುವ ಕಾಂತಿಯೂ ಬಿರುಸುತನವೂ ಹೊರಟುಹೋಗಿ ಅವು ವಿಲಿವಿಲಿಯಾಗುವವು.

R. M. Mahishi

ಹಿಂದುಸ್ಥಾನಕ್ಕೆ

ಬ್ರಿಟಿಶ್ ರಾಜ್ಯದಿಂದ ಆದ ಲಾಭಗಳು

೧೯೦೩ನೇ ಇಸ್ವಿಯಲ್ಲಿ ದಿಲ್ಲಿಯಲ್ಲಿ ನೆರೆದ ದರಬಾರದಲ್ಲಿ ಮಾತಾಡು ವಾಗ ಆಗಿನ ವ್ಹಾಯಿಸ್‌ರಾಯರಾದ ಲಾರ್ಡ ಕರ್ಝನ್ ದೊರೆಗಳು ಹಿಂದೂ ಜನರ ಸ್ಥಿತಿಯನ್ನು ಈ ರೀತಿಯಾಗಿ ವರ್ಣಿಸಿದರು:— "ಬ್ರಿಟಿಶ್ ರಾಜರ ಆಳಿಕೆಯಲ್ಲಿ ಹಿಂದುಸ್ತಾನದ ೩೦ಕೋಟಿ ಜನರಿಗೆ ಅರಾಜಕತ್ವ-ವೈರಚಕ್ರಗಳ ಭಯವು ಇಲ್ಲದಂತಾಗಿದೆ. ಜನರ ಹಕ್ಕುಗಳು ನಿರ್ಬಾಧವಾಗಿವೆ. ಸರ ಕಾರದ ಚಾಕರಿಯಲ್ಲಿ ಘನತೆಗೇರುವ ಮಾರ್ಗವು ಸುಕರವಾಗಿದೆ. ಜುಲು ಮೆಯು ಹೆಸರಿಗೆ ಸಹ ಉಳಿದಿಲ್ಲ. ವಿಪತ್ಕಾಲದಲ್ಲಿ ಜನರಿಗೆ ಸಹಾಯವೂ, ಪಕ್ಷಪಾತವಿಲ್ಲದ ನ್ಯಾಯವೂ, ಸುಖ-ಶಾಂತಿ-ಸುಶಿಕ್ಷಣಗಳ ಲಾಭವೂ ಎಲ್ಲ ರಿಗೂ ಸವನಾಗಿ ದೊರೆಯುತ್ತಲಿವೆ. ಬ್ರಿಟಿಶ್ ಜನರು ಇಂಥ ವಿಸ್ತೀರ್ಣವಾದ ರಾಜ್ಯವನ್ನು ಸಂಪಾದನೆ ಮಾಡಿರುವದೇ ಒಂದು ಮಹತ್ಕಾರ್ಯವು; ಧರ್ಮ ನೀತಿಗಳಿಂದ ರಾಜ್ಯವನ್ನು ಪರಿಪಾಲಿಸುವದು ಅದಕ್ಕೂ ಮಹತ್ತರವಾದದ್ದು; ಜಾನ್ಮೆಯುಳ್ಳ ಮುತ್ಸದ್ದಿತನದಿಂದ ಅದನ್ನು ಅಳಿಯದೆ ಉಳಿಸಿದ ಒಂದೇ ರಾಷ್ಟ್ರ ವನ್ನಾಗಿ ಮಾಡುವದು ಎಲ್ಲಕ್ಕೂ ಮಹತ್ತ್ವವಾದದ್ದು." ಲಾರ್ಡ ಕರ್ಝನ್ ದೊರೆಗಳ ಈ ಶಬ್ದಗಳು ಅಕ್ಷರಶಃ ನಿಜವಿರುತ್ತವೆ. ಆದರೆ ಅವುಗಳ ನಿಜ ತ್ವವನ್ನು ಸಂಪೂರ್ಣವಾಗಿ ಮನಗಾಣಬೇಕಾದರೆ ನಮ್ಮ ದೇಶದ ಹಿಂದಿನ ಕಾಲದ ಸ್ಥಿತಿಯನ್ನು ಸ್ವಲ್ಪ ಜ್ಞಾಪಕಕ್ಕೆ ತಂದುಕೊಳ್ಳಬೇಕಾಗುತ್ತದೆ. ಯಾ ಕೆಂದರೆ, ಬ್ರಿಟಿಶ್‌ರಾಜ್ಯದಲ್ಲಿ ಈಗ ಬಹು ದಿವಸಗಳಿಂದ ಅಖಂಡವಾಗಿ ನೆಲಿಸಿ ರುವ ಶಾಂತತೆಯ ಕಾಲದಲ್ಲಿ, ಹಿಂದೆ ನಮ್ಮ ಹಿರಿಯರಿಗೆ ಒದಗಿದ ಸಂಕಟ ಗಳನ್ನು ಊಹಿಸುವದು ಅಶಕ್ಯವಾಗಿದೆ. ಆದಕಾರಣ, ಈ ದೇಶದ ಪ್ರಾಚೀ ನಕಾಲದ ಸ್ಥಿತಿಯ ಬಗ್ಗೆ ಸ್ವಲ್ಪ ಹೇಳುತ್ತೇವೆ. ಇತಿಹಾಸವನ್ನು ಅಲ್ಪ ಸ್ವಲ್ಪವಾದರೂ ಓದಿದವರಿಗೆ ಹಿಂದಕ್ಕೆ ಇರಾಣ, ಅಫಗಾಣಿಸ್ತಾನ, ಇಲ್ಲವೆ ಮಧ್ಯ ಏಶಿಯಾದಿಂದ ಬಂದ ಜನರ ದಾಳಿಗಳಿಂದ ನಮ್ಮ ಪೂರ್ವಜರಿಗಾ ಗುತ್ತಿದ್ದ ದುಃಖಗಳನ್ನು ಹೇಳುವ ಅವಶ್ಯವಿಲ್ಲ. ಈ ದಾಳಿಗಾರರು ಲಕ್ಷಗಟ್ಟಲೆ ಯಾಗಿ ಈ ದೇಶವನ್ನು ಒಳನುಗ್ಗಿ, ಹಾದಿಯಲ್ಲಿ ಹತ್ತಿದ ದೊಡ್ಡ ಪಟ್ಟಣ ಗಳನ್ನೂ ಹಳ್ಳಿಪಳ್ಳಿಗಳನ್ನೂ ಸೂಲಪೆನೆಗಳನ್ನೂ ಸುಟ್ಟು ಹಾಳುಮಾಡು ತ್ತ, ಜನರನ್ನು ಮನಸೋಇಚ್ಛವಾಗಿ ಕೊಲ್ಲುತ್ತ, ರಾಜಧಾನಿಯನ್ನು ವಶಮಾಡಿ

ಕೊಂಡು, ಅಲ್ಲಿಯೂ ಬಣ್ಣಿಸಲಸಾಧ್ಯವಾದ ಕ್ರೂರತನದಿಂದ ಕೊಲೆಸು
ಗೆಗಳನ್ನು ಮಾಡುತ್ತಿದ್ದರು. ಉದಾಹರಣಾರ್ಥವಾಗಿ ಇಂಥ ಒಂದೆರ
ಪ್ರಸಂಗಗಳನ್ನೇ ತಕ್ಕೊಳ್ಳುವಾ. ನಾದಿರಶಹನು ದಿಲ್ಲಿಯನ್ನು ವಶವಾ
ಕೊಂಡಾಗ ಹುಡುಗರು ಹೆಂಗಸರು ಎಂಬದನ್ನು ಕೂಡಾ ಲೆಕ್ಕಿಸದೆ ಎಂ
ಸಾವಿರ ಜನರನ್ನು ಒಂದೇ ಜಾವಿನಲ್ಲಿ ಕೊಂದು ಹಾಕಿದನು. ಇಷ್ಟರಿಂದಲ
ಅವನು ಸಮಾಧಾನಪಡದೆ ದಿಲ್ಲೀ ಪಟ್ಟಣವನ್ನು ಸೂರೆ ಮಾಡಿ ಕಡೆಗೆ ಅದ
ಬೆಂಕಿಯನ್ನು ಹಚ್ಚಿಸಿದನು. ನಾದಿರಶಹನು ಈ ದೇಶವನ್ನು ಬಿಟ್ಟು ಹೋ
ತರುವಾಯ ಸ್ವಲ್ಪ ವರ್ಷಗಳಲ್ಲಿಯೇ ಅಹಮ್ಮದಶಹನು ಈ ದೇಶದ
ಐದು ದಾಳಿಗಳನ್ನು ಮಾಡಿದನು. ಒಂದು ದಾಳಿಯಲ್ಲಿ ಅವನ ಸೈ
ಕರು ಎಷ್ಟೋ ವಾರಗಳ ವರೆಗೆ ದಿಲ್ಲಿಯಲ್ಲಿ ಘೋರತರವಾದ ಕೆಲ
ಗಳನ್ನು ಮಾಡಿದರು. ಪಠಾಣಸ್ವಾರರು ಮಾರ್ಗದಲ್ಲಿ ಎದುರಾದವ
ಅವಯವಗಳನ್ನು ಕಡಿದು ಹಾಕುತ್ತಾ, ಪಟ್ಟಣಗಳನ್ನೂ ಹಳ್ಳಿಗಳನ್ನು
ಸುಲಿಯುತ್ತಾ, ಸುಡುತ್ತಾ, ದೇಶವನ್ನು ಹಾಳುಗೆಡಹಿದರು. ಯಾ
ಗೋಸ್ಕರ ಮಥುರೆಗೆ ಸಾವಿರಾರು ನಿರುಪದ್ರವಿಗಳಾದ ಯಾತ್ರಿಕರು ಬಂದಾ
ದಾಳಿಗಾರರು ಆ ಪಟ್ಟಣವನ್ನು ಆಕ್ರಮಿಸಿದರು. ಯಾತ್ರಿಗಾರರು ತಪ್ಪಿ
ಕೊಂಡು ಹೋಗ ಬೇಕೆನ್ನುವಷ್ಟರಲ್ಲಿಯೇ ದಾಳಿಗಾರರು ಅವರಿದ್ದ ಮ
ಗಳಿಗೆ ಬೆಂಕೀ ಹಚ್ಚಿ ಬೀದಿಗಳಲ್ಲಿ ಸಿಕ್ಕ ಎಷ್ಟೋ ಜನರನ್ನು ಕಡಿದು ಹಾ
ದರು; ಎಷ್ಟೋಜನರನ್ನು ಸೆರೆ ಹಿಡಿದೊಯ್ದರು. ಹಿಂದುಸ್ತಾನದ ಸ್ಥಿತಿಯ
೧೫೦ ವರ್ಷಗಳ ಹಿಂದೆ ಈ ಪರಿಯಾಗಿತ್ತು. ಹಿಂದುಸ್ತಾನದ ಉಳಿದ ಭಾಗ
ಳಲ್ಲಿಯೂ ಸುಖವಿರಲಿಲ್ಲ. ಆಸಾಮದಲ್ಲಿ ಕಾಕ್ ಮತ್ತು ಅಹೋಮ್ ಎಂ
ಮೂಲ ನಿವಾಸಿಗಳ ಹಾವಳಿಗಳು ನಡೆದಿದ್ದವು. ಕಡುಗಲಿಗಳಾದ ಬ್ರಹ್ಮ
ಯರು ಪೂರ್ವ ಬಂಗಾಲವನ್ನು ಹಾಳು ಮಾಡುತ್ತಿದ್ದರು. ದಕ್ಷಿಣ ಬಂಗಾ
ಚೋಳಮಂಡಲ, ಮಲಬಾರ ದಂಡೆಗಳಲ್ಲಿ ವಾಸಿಸುವ ರೈತರಿಗೆ ಹ
ಲಿರುಳು ಕಡಲಗಳ್ಳರ ಭಯವು ತಪ್ಪುತ್ತಿದ್ದಿಲ್ಲ. ಆಗಿನ ಸ್ಥಿತಿಗ
ಈಗಿನ ಸ್ಥಿತಿಗೂ ಏನೊಂದು ಸಾಮ್ಯವು ಇಲ್ಲ. ಉತ್ತರ ದಿಕ್ಕಿನಿಂ
ಶತ್ರುಗಳ ಪ್ರವೇಶಕ್ಕೆ ಹಿಮಾಲಯದಲ್ಲಿ ಹಾದಿಯು ಉಳಿದಿಲ್ಲ. ದೇಶದೊಳ
ಗಿನ ಕಾಡು ಜನರೆಲ್ಲರೂ ಬ್ರಿಟಿಶ್ ಸರಕಾರಕ್ಕೆ ಅಧೀನರಾಗಿದ್ದಾರೆ. ಅಪ್ರತಿ
ಮವಾದ ನೌಕಾಬಲವುಳ್ಳ ಬ್ರಿಟಿಶರ ಅಳಿಕೆಯಲ್ಲಿ ಹಡಗುಗಳ್ಳರ ಹಾವಳಿಗೆ
ಅಸ್ಪದವೇ ಸಿಗುವಂತಿಲ್ಲ.

ಪೂರ್ವಕಾಲದಲ್ಲಿ ವರಕೀಯರ ದೌಡುಗಳಿಂದುಂಟಾದ ವಿಪತ್ತುಗಳಂತೂ ಇರಲಿ, ಒಳದೇಶದ ಕಲಹಗಳೂ ಜನರಿಗೆ ಮಿತಿಮೀರಿದ ವಿಪತ್ತುಗಳನ್ನು ತರುತ್ತಿದ್ದವು. ಒಮ್ಮೆ ಕಲಬುರ್ಗೆಯ ಅರಸನಾದ ವ.ಹ ಮ್ಮದಶಹನು ವಿಜಯನಗರದ ಅರಸನ ಕೂಡ ಜಗಳ ತೆಗೆದು ಐವತ್ತು ಸಾವಿರ ಜನರನ್ನು ಕೊಂದ ಹೊರತು ಶಸ್ತ್ರವನ್ನು ಕೆಳಗಿಡಲಿಲ್ಲವೆಂದು ಹೇಳುತ್ತಾರೆ. ಮಹಾರಾಷ್ಟ್ರರೂ ತಮ್ಮ ರಾಜ್ಯದ ಸುತ್ತಲಿನ ಪ್ರದೇಶಗಳಲ್ಲಿ ದಾಳಿಗಳನ್ನು ಮಾಡುತ್ತಿದ್ದದರಿಂದ ಅವ್ರೂ ಹಾಳಾಗಿದ್ದವು. ಇವರ ರಣವಾದ್ಯದ ಧ್ವನಿಯನ್ನು ಕೇಳಿದ ಕೂಡಲೆ ಒಕ್ಕಲಿಗರು ಧಾನ್ಯದ ಚೀಲಗಳನ್ನು ಹೆಗಲಮೇಲೆ ಹೊತ್ತುಕೊಂಡು, ಗಳಿಸಿದ ದುಡ್ಡನ್ನು ಹವ್ಮಣಿಗಳಲ್ಲಿ ಬಿಗಿದು, ಹೆಂಡರುಮಕ್ಕಳನ್ನು ಕಟ್ಟಿಕೊಂಡು, ಅರಣ್ಯದಲ್ಲಿ ಹಿಂಸ್ರಪಶುಗಳ ಸಾನ್ನಿಧ್ಯಕ್ಕೆ ಹೋಗುತ್ತಿದ್ದರು. ಅವರಿಗೆ ಆಗ ಮನುಷ್ಯರ ಸಹವಾಸಕ್ಕಿಂತಲೂ ಅರಣ್ಯದೊಳಗಿನ ಕ್ರೂರಪಶುಗಳ ನೆರವೇ ಲೇಸೆಂದೆನಿಸುತ್ತಿತ್ತು. ಪೆಂಡಾರೇರ ಹಾವಳಿಗಳಂತೂ ಇದಕ್ಕಿಂತ ಕಷ್ಟಪ್ರದವಾದವುಗಳು. ಚಿತ್ತೂ ಎಂಬ ಪೆಂಡಾರೇರ ಮುಖ್ಯಸ್ಥನು ಐವತ್ತೈದು ಸಾವಿರ ಪುಂಡರನ್ನು ಕೂಡಿಸಿಕೊಂಡು ನಿಜಾಮನ ರಾಜ್ಯದ ಮೇಲೆ ದಂಡೆತ್ತಿ ಹೋದಾಗ ಕೃಷ್ಣಾನದಿಯವರೆಗೆ ಎಲ್ಲ ರಾಜ್ಯವನ್ನು ಹಾಳು ಮಾಡಿದನು. ಆಮೇಲೆ ಉತ್ತರಸರಕಾರದ ಸೀಮೆಯನ್ನು ಹೊಕ್ಕು ತನ್ನ ಕ್ರೂರ ಕೃತ್ಯಗಳಿಂದ ಎಲ್ಲರ ಹೃದಯಗಳನ್ನು ತಲ್ಲಣಗೊಳಿಸಿದನು. ಈ ಕಲಹಗಳಲ್ಲದೆ ಪ್ರತಿ ಒಬ್ಬ ಅರಸನು ಸತ್ತ ಕೂಡಲೆ ದೇಶದಲ್ಲಿ ಅರಾಜಕತ್ವವುಂಟಾಗಿ ಜನರಿಗೆ ಒದಗುತ್ತಿದ್ದ ಕಷ್ಟಗಳು ಬೇರೆ. ಆಗಿನ ಸ್ಥಿತಿಗೂ ಈಗಿನ ಸ್ಥಿತಿಗೂ ಏನಾದರೂ ಸಾಮ್ಯ ಉಂಟೋ?

ನೂರು ವರ್ಷದ ಹಿಂದೆ ಜನರಿಗೆ ತಮ್ಮ ವಿತ್ತಜೀವಿತಗಳ ಮೇಲೆ ಸ್ವಾಭಾವಿಕವಾಗಿ ಇರತಕ್ಕ ಹಕ್ಕುಗಳನ್ನು ಕಾದುಕೊಳ್ಳುವದು ಆಗುತ್ತಿದ್ದಿಲ್ಲ. ಯಾಕಂದರೆ, ಯಾವಹೊತ್ತಿಗೆ ಯಾವ ಮನುಷ್ಯನು ಪ್ರಾಣಕ್ಕೂ ಆಸ್ತಿಗೂ ಎರವಾಗಬಹುದೆಂಬದು ತಿಳಿಯುತ್ತಿದ್ದಿಲ್ಲ. ಬಹಳವೇಕೆ? ಹೊಲದಲ್ಲಿ ಬೆಳೆದು ನಿಂತಿರುವ ಪೈರಿನ ಮೇಲಿಂದಲೇ ಹೊಲದ ಬೆಲೆಯನ್ನು ಕಟ್ಟಬೇಕಾಗುತ್ತಿತ್ತು. ಯಾಕಂದರೆ, ಮಹಾರಾಷ್ಟ್ರರ ಮತ್ತು ಪೆಂಡಾರೇರ ಹಿಂಡು ಯಾವಾಗ ಬಂದು ಪೈರು ಕೊಯ್ದುಕೊಂಡು ಹೊಲದೊಡೆಯನನ್ನು ಹೊಡೆ

ದೋಡಿಸಬಹುದೆಂಬದು ತಿಳಿಯದಾಗಿತ್ತು. ಮೇಲಿಂದ ಮೇಲೆ ಏಳುತ್ತಿದ್ದ ಬಂಡಾಯಗಳಿಂದ ಹಿಂದುಸ್ತಾನ ಅಫಗಾಣಿಸ್ತಾನ ಇವುಗಳ ನಡುವಿನ ಗಡಿಯಸೀಮೆಯೂ ಹಿಮಾಲಯದ ಅಡಿಯ ಮೂವತ್ತು ನಾವಿರ ಚಚ್ಚೌಕ ಮೈಲು ಪ್ರದೇಶವೂ ಬಂಗಾಲ-ಆಸಾಮುದ ವಿಸ್ತೀರ್ಣವಾದ ಪ್ರದೇಶವು ನಿರ್ಜನವಾಗಿ, ಕಾಡುಮಿಕಗಳ ಬೀಡಾರವಾಗಿದ್ದವು. ಕಡಲಗಳ್ಳರ ಕಾಟದಿಂದ ಸಮುದ್ರದ ದಂಡೆಗುಂಟ ನಾವಿರಾರು ಮೈಲುಗಳವರೆಗೆ ಇದ್ದ ಜನರು ಓಡಿ ಹೋಗಿದ್ದರು. ಜನರಿಗೆ ತಮ್ಮ ಆಸ್ತಿಯೂ ಜೀವಿತ್ವವೂ ಅಸ್ಥಿರವಾದದ್ದರಿಂದ ತಮ್ಮ ಉಪಜೀವನಕ್ಕೆ ಅತ್ಯವಶ್ಯವಾದದ್ದಕ್ಕಿಂತ ಹೆಚ್ಚು ಸರಕುಗಳನ್ನು ಬೆಳಕೊಳ್ಳುವ ಪ್ರವೃತ್ತಿಯು ಆಗುತ್ತಿದ್ದಿಲ್ಲ. ಅದರಿಂದ ಉದ್ಯೋಗ-ವ್ಯವಸಾಯಗಳು ಬೆಳೆಯತಕ್ಕಷ್ಟು ಬೆಳೆಯಲಿಲ್ಲ. ವ್ಯಾಪಾರವು ಕುಂಠಿತ ಹೋಗಿತ್ತು. ಶತ್ರುಗಳ ಅಂಜಿಕೆಯಿಂದ ದೊಡ್ಡ ಪಟ್ಟಣಗಳನ್ನು ಕಟ್ಟಿಕೊಂಡು ವಸತಿಮಾಡುವದು ಜನರಿಗೆ ಅಶಕ್ಯವಾಗಿತ್ತು. ಆದರೆ ಈಗಾದ ಸ್ಥಿತ್ಯಂತರವನ್ನು ನೋಡಿದರೆ, ಹಿಮಾಲಯದ ಕಾಡುಗಳೆಲ್ಲ ಹಚ್ಚನೆ ಬೆಳೆಗಳಿಂದ ಒಕ್ಕುತ್ತಿರುವವೆ. ಅದರ ಇಳವಾರೆಯಲ್ಲಿ ಚಹಾದ ಬನಗಳು ಶೋಭಿಸುತ್ತಿರುವವು. ಅನತ ಪಡಭೂಮಿಯನ್ನೂ ಜವಳು ಪ್ರದೇಶವನ್ನೂ ಸಾಗು ಮಾಡುವ ಕಾರ್ಯವು ನಡೆದಿರುವದು. ಹೊಲಗಳ ಬೆಲೆಯು ಈಗ ಮೊದಲಿನದಕ್ಕಿಂತ ಇಪ್ಪತ್ತುಪಟ್ಟು ಹೆಚ್ಚಾಗಿದೆ. ಜನಸಂಖ್ಯೆಯು ಮಿತಿಮೀರಿ ಬೆಳೆದಾಗ ಜನರು ಮೊದಲಿನಂತೆ ಅಂಜಿಕೆಯಿಂದ ತಮ್ಮ ಮನೆಮಾರು-ಹೊಲಗಳನ್ನು ಬಿಟ್ಟುಹೋಗಿ ನಿರ್ಜನ ಪ್ರದೇಶವನ್ನು ಸಾಗುಮಾಡಿ ಹೊಟ್ಟೆತುಂಬಿಕೊಳ್ಳುವದಕ್ಕೆ ಮನಸ್ಸು ಮಾಡುವದಿಲ್ಲ. ಆದ್ದರಿಂದ ಶಹರಗಳ ಜನಸಂಖ್ಯೆಯು ಬೆಳೆದು, ಲಕ್ಷಗಟ್ಟಲೆ ಜನರಿಗೆ ನಾಕಾಗುವ ಆಹಾರವನ್ನು ಇಂಪೊಲಗಳಲ್ಲಿಯೇ ಬೆಳಿಸುವ ಕಠಿಣವಾದ ಪ್ರಶ್ನವು ಬಂದೊದಗಿದೆ.

ಸಾಮಾನ್ಯ ಜನರ ಹಕ್ಕುಗಳಂತೆ ವಿತದ್ದೇಶಿಯರಾಜರ ಹಕ್ಕುಗಳೂ ಈಗ ಸುರಕ್ಷಿತವಾಗಿವೆ. ಹಿಂದಕ್ಕೆ ಮೋಗಲ, ಮಹಾರಾಷ್ಟ್ರ, ಪೆಂಡಾರೇರು ಮೊದಲಾದವರು ಶ್ರೀಮಂತರಾದ ಸಂಸ್ಥಾನಿಕರ ಮೇಲೆಯೇ ಕಣ್ಣು ಇಡುತ್ತಿದ್ದರು. ಇವರು ಎಷ್ಟೋಸಾರೆ ಆತ್ಮಸಂರಕ್ಷಣೆಯ ಸಲುವಾಗಿ ತಾವು ಸಂಪಾದಿಸಿದ ಧನವನ್ನೆಲ್ಲ ಚಾಳಿಗಾತರಿಗೆ ಕೊಟ್ಟು ಅವರ ಕೈಯೊಳಗಿಂದ ಬಿಡುಗಡೆ ಮಾಡಿಕೊಳ್ಳಬೇಕಾಗುತ್ತಿತ್ತು. ಇಲ್ಲವೆ ಅವರ ಕೈವ

೨೧

ವಾಗಿ ತಮ್ಮ ರಾಜ್ಯವನ್ನು ಕಳಕೊಂಡು ಕೂಡ್ರಬೇಕಾಗುತ್ತಿತ್ತು. ಆದರೆ ಇಂಥ ಅನ್ಯಾಯಗಳು ಈಗ ನಡೆಯದಂತಾಗಿ ದೇಶೀಯ ರಾಜರ ಎಷ್ಟೋ ರಾಜ್ಯಗಳು ಇನ್ನೂವರೆಗೆ ನಡೆಯುತ್ತಲಿದ್ದು, ಅವರು ಕೃತಜ್ಞರೂ ಸ್ವಾಮಿ ನಿಷ್ಠರೂ ಆಗಿದ್ದಾರೆ. ಕೆಲವರು ಹಿಂದುಸ್ತಾನ ಸರಕಾರಕ್ಕೆ ಸಹಾಯ ಮಾಡುವದಕ್ಕಾಗಿ ಸೈನ್ಯವನ್ನಿಟ್ಟಿದ್ದಾರೆ, ಮತ್ತು ಕೆಲವು ರಾಜಕುಮಾರರಿಗೆ ಸೈನ್ಯದಲ್ಲಿ ದೊಡ್ಡ ಅಧಿಕಾರದ ಕೆಲಸಗಳು ಕೊಡಲ್ಪಟ್ಟಿರುತ್ತವೆ.

ಕೃಷಿಕರು, ವ್ಯಾಪಾರ, ಉದ್ಯೋಗಗಳು:—ಬ್ರಿಟಿಶರ ಆಳಿಕೆಯು ಮಹತ್ವವು ಮುಖ್ಯವಾಗಿ ಜನರ ವಿತ್ತಜೀವಿತಗಳ ಸುರಕ್ಷತೆಯನ್ನೇ ಅವಲಂಬಿಸಿರುತ್ತದೆ. ದೇಶದೊಳಗೆ ಶಾಂತತೆ ಇದ್ದದರಿಂದ ಒಂದು ಶತಮಾನದೊಳಗೇ ಒಕ್ಕಲತನವು ವಿಲಕ್ಷಣವಾಗಿ ಬೆಳೆದದೆ. ರಾಜರಿಗೂ ಪ್ರಜೆಗಳಿಗೂ ತಮ್ಮ ಆಸ್ತಿಯ ಮೇಲಿನ ಸ್ವಾಮಿತ್ವಕ್ಕೆ ಬಾಧೆ ಇಲ್ಲವೆಂದೆನಿಸುವದರಿಂದಲೂ ತಮ್ಮ ಉದ್ಯೋಗದ ಫಲವನ್ನು ತಾವು ನಿಶ್ಚಯವಾಗಿ ಉಪಭೋಗಿಸ ಬಹುದೆಂಬ ನಂಬಿಗೆ ಇದ್ದದರಿಂದಲೂ ವ್ಯಾಪಾರ ಉದ್ಯೋಗಗಳು ಕಳೆಯೇರಿವೆ. ಜನಸಂಖ್ಯೆಯು ಬಹಳವಾಗಿ ಬೆಳೆದಿರುತ್ತದೆ; ಮತ್ತು ಪಡಭೂಮಿಗಳೆಲ್ಲ ಸಾಗು ಮಾಡಲ್ಪಟ್ಟವೆ. ದಟ್ಟವಾದ ವಸತಿಯುಳ್ಳ ಪಟ್ಟಣಗಳಲ್ಲಿ ಕೂಲಿಕಾರರು ಕಾರಖಾನೆಗಳಲ್ಲಿ ದುಡಿದು ಹೊಟ್ಟೆತುಂಬಿಸಿಕೊಳ್ಳುವರು. ಬ್ರಿಟಿಶ್‌ಬಂಡವಲದಿಂದ ನಡೆಸಿದ ಚಹಾ, ಕಾಫಿಯ ತೋಟಗಳಲ್ಲಿಯೂ ಅರಳೆಯ ಮತ್ತು ನಾರಿನ ಗಿರಣಿಗಳಲ್ಲಿಯೂ, ಕಲ್ಲಿಣ್ಣೆ ಮತ್ತು ಕಲ್ಲಿದ್ದಲಿಗಳ ಕಣಿಗಳಲ್ಲಿಯೂ ಅಭ್ರ-ನೀಲಿಗಳ ಕಾರಖಾನೆಗಳಲ್ಲಿಯೂ, ಮಣ್ಣಿನ ಪಾತ್ರೆ,ಹಗ್ಗ ಮುಂತಾದವುಗಳನ್ನು ಮಾಡುವ ಕಾರಖಾನೆಗಳಲ್ಲಿಯೂ ಕಲ್ಲಿನ ಕಣಿಗಳಲ್ಲಿಯೂ ಇತರ ಉದ್ಯೋಗಗಳಲ್ಲಿಯೂ ಲಕ್ಷಗಟ್ಟಲೆ ಜನರು ಹೊಟ್ಟೆ ಸಾಗಿಸುವರು.

ಟಪಾಲು ಮತ್ತು ತಂತೀ ಟಪಾಲು:—ವ್ಯಾಪಾರಉದ್ಯೋಗಗಳ ಉತ್ಕರ್ಷವಾದಂತೆ, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸುದ್ದಿಯನ್ನು ಶೀಘ್ರವಾಗಿ ಮುಟ್ಟಿಸುವ ಸಾಧನಗಳೂ, ಸರಕುಗಳನ್ನು ಬಹಳ ಖರ್ಚಿಲ್ಲದೆ ತೀವ್ರವಾಗಿ ಒಯ್ಯುವ ಸಾಧನಗಳೂ ಪ್ರಚಾರದಲ್ಲಿ ಬಂದವೆ. ಟಪಾಲಖಾತೆಯು ೧೮೩೭ ರಲ್ಲಿ ಸ್ಥಾಪಿಸಲ್ಪಟ್ಟಿತು. ಅದಕ್ಕೂ ಮೊದಲು ಸರಕಾರೀ ಪತ್ರಗಳನ್ನು ಊರಿಂದೂರಿಗೆ ಒಯ್ಯುವ ವ್ಯವಸ್ಥೆಯು ಸರಕಾ

ರದವರ ಪೂರ್ತಿ ಮಾಡಲ್ಪಡುತ್ತಿತ್ತು; ಮತ್ತು ಅನುಕೂಲವಾದರೆ ಮಾತ್ರ ಖಾಸಗೀ ಪತ್ರಗಳನ್ನು ಸರಕಾರದವರು ಮುಟ್ಟಿಸುತ್ತಿದ್ದರು. ಆಗ ಉಗಿಬಂಡಿ-ಉಗಿಹಡಗಗಳು ಇಲ್ಲದ್ದರಿಂದ ಪತ್ರಗಳನ್ನು ಹರಗೋಲು, ಗಾಡಿ, ಕುದುರೆ, ಒಂಟೆಯ ಮೇಲೆ ಇಲ್ಲವೆ ಓಲೆಕಾರರ ಕೂಡ ಕಳಿಸಬೇಕಾಗುತ್ತಿತ್ತು. ತಿಕೀಟುಗಳು ಇರಲಿಲ್ಲ. ಮುಂಬಯಿಯಿಂದ ಕಲ್ಕತ್ತೆಗೆ ಒಂದು ತೊಲೆಗೆ ಒಂದು ರೂಪಾಯಿ ಅಂಚೇ ವೆಚ್ಚವು ಬೀಳುತ್ತಿತ್ತು. ಈಗ ಒಂದು ಆಣೆ ಖರ್ಚು ಮಾಡಿದರೆ ಇಂಗ್ಲಂಡಕ್ಕೆ ಪತ್ರ ಕಳಿಸಬಹುದು; ಮತ್ತು ಒಂದು ದುಡ್ಡು ಖರ್ಚು ಮಾಡಿದರೆ ಹಿಂದುಸ್ತಾನದಲ್ಲಿ ಬೇಕಾದಲ್ಲಿಗೆ ಪತ್ರವು ಹೋಗುವದು. ಈಗ ಟಪಾಲಮಾರ್ಗದ ವಿಸ್ತಾರವು ೧,೪೦,೦೦೦ ಮೈಲು ಅದೆ. ಪತ್ರಗಳೂ ವರ್ತಮಾನಪತ್ರಗಳೂ ಬಾಂಗಿಗಳೂ ಕೂಡಿ ವರ್ಷದಲ್ಲಿ ೫೦,೪೦,೦೦೦ ಕ್ಕಿಂತ ಹೆಚ್ಚು ಟಪಾಲಿನಿಂದ ಹೋಗುತ್ತವೆ. ಟಪಾಲಖಾತೆಯವರು ಟಪಾಲಿನ ಕೆಲಸವಲ್ಲದೆ ಹಣವನ್ನು ಪರಊರಿಗೆ ಕಳಿಸುವದು, ಕ್ವಿನೈನ್ ಮಾರುವದು, ಬಾಂಗಿಗಳ ವಿಮೆ ಇಳಿಸುವದು ಮುಂತಾದ ಕೆಲಸಗಳನ್ನೂ ಮಾಡುತ್ತಾರೆ. ೫೦ ವರ್ಷಗಳ ಹಿಂದೆ ಪತ್ರವು ಕಳಿಸಿದ ಸ್ಥಳಕ್ಕೆ ತಿಂಗಳ ಮೇಲೆಯಾದರೂ ಮುಟ್ಟೀತೋ ಇಲ್ಲವೋ ಎಂಬ ಸಂಶಯವಿರುತ್ತಿತ್ತು. ಆದರೆ ಈಗ ಪತ್ರಗಳು ಬಂದೆರಡು ದಿವಸಗಳಲ್ಲಿ ಹಾಕಿದ ಸ್ಥಳಕ್ಕೆ ತಪ್ಪದೆ ಮುಟ್ಟುವವು. ೧೯೦೧ನೇ ಇಸ್ವಿಯಲ್ಲಿ ಪೋಸ್ಟಹಾಪಿಸಿನ ಸೆವ್ಹಿಂಗ್ಸ ಬ್ಯಾಂಕಿನಲ್ಲಿ ಜನರ ಸಲುವಾಗಿ ಬಡ್ಡಿಯಿಂದ ೧೦,೬೮,೨೧,೨೬೫ ರೂಪಾಯಿಗಳು ಇಡಲ್ಪಟ್ಟಿದ್ದವು.

ಪೋಷ್ಟಿಗೆ ನಿಕಟವಾಗಿ ಸಂಬಂಧಿಸಿದ್ದ ಎರಡನೇ ಖಾತೆಯು ತಂತೀ ಟಪಾಲು. ಇದನ್ನು ಮೊದಲು ಈ ದೇಶದಲ್ಲಿ ಕಲಕತ್ತಾ ವೈದ್ಯಕವಿದ್ಯಾಲಯದ ಪಂಡಿತರಾದ ಓಶಾನೆಸಿ ಎಂಬವರು ಸ್ಥಾಪಿಸಿದರು. ಇವರು ಹುಗಳೀ ನದಿಯಾಚೆಗೆ ವನಸ್ಪತಿ ಶಾಸ್ತ್ರದ ಅಭ್ಯಾಸಕ್ಕಾಗಿ ಮಾಡಿದ ತೋಟದಲ್ಲಿ ತಂತೀಟಪಾಲಿನ ಪ್ರಯೋಗಗಳನ್ನು ಮಾಡಿ ನೋಡಿ ಮನಗಂಡು ೧೮೫೨ ರಲ್ಲಿ ೪೨ ಮೈಲುಗಳಾಚೆಗೆ ಸುದ್ದಿ ಕಳಿಸುವಂತೆ ತಂತೀಟಪಾಲಿನ ಯಂತ್ರಗಳನ್ನಿಟ್ಟರು. ಲಾರ್ಡ ಡಾಲಹೌಸಿಯ ಕಾಲದಲ್ಲಿ ಕಲಕತ್ತಾ, ಆಗ್ರಾ, ಮುಂಬಯಿ ಪೇಶಾವರ ಮದ್ರಾಸಗಳಿಗೆ ತಂತಿಯಿಂದ ಸುದ್ದೀ ಮುಟ್ಟಿಸುವ ವ್ಯವಸ್ಥೆಯಾಯಿತು. ೧೮೫೫ ರಲ್ಲಿ ಖಾಸಗೀ ಸುದ್ದಿಗಳು ಸಹ ಕಳಿಸಲ್ಪಡಹತ್ತಿದವು. ಈಗ ತಂತೀಟಪಾಲಿನ ವಿಸ್ತಾರವು ೫೦೦೦೦ ಮೈಲು ಇದ್ದು, ಅರು ಆಣೆ

ಶಿಕ್ಷಣವಾಡಿದರೆ ಒಂದು ಕ್ಷಣದಲ್ಲಿ ಕುಮಾರೀ ಭೂಶಿರದಿಂದ ಪೇಶಾವ ರಕ್ಕೆ ಸುದ್ದೀ ಕಳಿಸಬಹುದು. ತಂತೀಟಪಾಲಿನಿಂದ ಅನೇಕ ಲಾಭಗಳಾ ಗಿವೆ; ಮತ್ತು ಗಿಗ್ಗಿನೇ ಇಸ್ವಿಯ ಬಂಡಾಯದಲ್ಲಿ ಆದ ಅದರ ಉಪಯೋ ಗದಿಂದ ನೋಡಿದರೆ, ಸರಕಾರಕ್ಕೆ ರಾಜಕೀಯ ದೃಷ್ಟಿಯಿಂದ ಇದರ ಅವಶ್ಯಕತೆಯು ವಿಶೇಷವದೆಯೆಂದು ಕಂಡು ಬರುವದು.

ವ್ಯಾಪಾರವಿಸ್ತಾರವು:—ಟಪಾಲಿನ ಕೆಲಸವೇ ಆಗಲಿ, ವ್ಯಾಪಾರವೇ ಆಗಲಿ, ಉಗಿಬಂಡಿಗಳ ಹೊರ್ತು ಈಗಿನಷ್ಟು ಅಭಿವೃದ್ಧಿಗೆ ಬರುತ್ತಿದ್ದಿಲ್ಲ. ನೂರು ವರ್ಷಗಳ ಹಿಂದೆ ಪ್ರಯಾಣಸ್ಥರಿಗೆ ವನ್ಯಪಶುಗಳ ಭೀತಿಯೂ, ಪಾದಿ ಗಳನ್ನು ಬಡಿಯುವ ಕಳ್ಳರ ಉಪದ್ರವವೂ ಆಗುತ್ತಿದ್ದವು. ಜಲೋ ಮಾರ್ಗ ಗಳಂತೂ ಇರಲೇ ಇಲ್ಲ. ಇದಲ್ಲದೆ ದುಷ್ಕಾಳಪೀಡಿತ ಪ್ರದೇಶಗಳೂ, ತುಂ ಬಿ ಹರಿಯುವ ನದಿಗಳೂ ಮಾರ್ಗದಲ್ಲಿ ವಿಘ್ನವನ್ನುಂಟು ಮಾಡುತ್ತಿದ್ದವು. ಈಗ ಉಗಿಬಂಡಿಗಳಿಂದ ಬಹಳ ಖರ್ಚಿಲ್ಲದೆ, ಭಯವಿಲ್ಲದೆ, ಸ್ವಲ್ಪ ಕಾಲದಲ್ಲಿ ಬಹುದೂರ, ಬೇಕಾದಲ್ಲಿ ಪ್ರವಾಸ ಮಾಡಬಹುದು. ಸ್ವಲ್ಪ ಬಾಡಿಗೆಯಿಂದ ವ್ಯಾಪಾರದ ಜೀನಸುಗಳು ಬಹು ದೂರದ ವರೆಗೆ ಹೋಗುತ್ತವೆ. ಸದ್ಯಕ್ಕೆ ಹಿಂದುಸ್ತಾನದಲ್ಲಿ ೩೦೦೦೦ ಮೈಲು ರೇಲ್ವೆಯ ಮಾರ್ಗವದೆ. ೩೦,೦೦,೦೦೦ ಜನರು ರೇಲ್ವೆಯ ನೌಕರರಾಗಿ ಉಪಜೀವನ ಸಾಗಿಸಿಕೊಳ್ಳುತ್ತಾರೆ.

ಮಾರ್ಗಗಳೂ ಕಾಲುವೆಗಳೂ:—ಪೂರ್ವಕಾಲದಲ್ಲಿ ದೇಶದಲ್ಲಿ ಪ್ರಾಂತ ಪ್ರಾಂತಗಳ ನಡುವೆ ವ್ಯಾಪಾರ ನಡಿಯುವದು ಬಹು ಕಷ್ಟವಾ ಗಿತ್ತು. ಆದರೆ ಈಗ ಹಳ್ಳವಾಡದೊಳಗಿನ ಧಾನ್ಯವನ್ನು ರೇಲ್ವೆಸ್ಟೇಶನ್ನಿಗೆ ತಂದ ರಾಯಿತು. ಅಲ್ಲಿಂದ ಬೇಕಾದಲ್ಲಿ ಒಯ್ಯಲಿಕ್ಕಾಗುತ್ತದೆ. ಹೀಗಾಗಿ ರೈತರು ಶಕ್ಯವಿದ್ದಷ್ಟು ಹೆಚ್ಚು ಪೈರನ್ನು ಹೊಲದಲ್ಲಿ ಬೆಳೆಯಿಸಿ ತಮಗೆ ಬೇಕಾ ದಷ್ಟನ್ನು ಇಟ್ಟುಕೊಂಡು, ಉಳಿದದ್ದನ್ನು ಮಾರಿ, ಬಂದ ಹಣದಿಂದ ತಮ್ಮ ಕೊರತೆಗಳನ್ನು ನೀಗಿಸಿಕೊಂಡು ಸುಖದಿಂದ ಇರುವರು. ಉಗಿ ಬಂಡಿಯಾದಂದಿನಿಂದ ದೇಶದಲ್ಲಿ ಲೈನಮಾರ್ಗಗಳು ಅಗಣಿತವಾಗಿವೆ. ಕಲ ಕತ್ತೆಯಿಂದ ದಿಲ್ಲಿಯ ವರೆಗೆ ಗ್ರಾಂಡ್ ಟ್ರಂಕ ರೋಡ ಎಂಬ ಮುಖ್ಯ ಮಾರ್ಗವನ್ನು ಬೆಂಟಿಂಕ್ ದೊರೆಯು ಕಟ್ಟಿಸಲಿಕ್ಕೆ ಆರಂಭ ಮಾಡಿದಂದಿ ನಿಂದ ಸ್ಥಾನಿಕ ಸರಕಾರದವರೂ ಮ್ಯುನಸಿಪಾಲಿಟಿ ಲೋಕಲ್ ಬೋರ್ಡಿ ನವರೂ ಅಲ್ಲಲ್ಲಿಗೆ ಮಾರ್ಗಗಳನ್ನು ಮಾಡಿಸ ಹತ್ತಿದರು. ಅದರಿಂದ ಈಗ

ಬೇಕಾದ ಹೊಲದ ಬೆಳೆಯನ್ನು ರೇಲ್ವೆ ಸ್ಟೇಶನಿಗೆ ತರಬಹುದಾಗಿದೆ ವ್ಯಾಪಾರದ ಮುಖ್ಯ ಸ್ಥಳಕ್ಕೆ ಹೋಗುವದಕ್ಕೆ ಮಾರ್ಗಗಳಿಲ್ಲದಲ್ಲಿ ಕಾಲುಹಾ ಗಳು ಉಗಿ ಹಡಗಗಳಿಗೆ ಮಾರ್ಗ ಕೊಡುತ್ತವೆ.

ವಿದ್ಯಾಪ್ರಸಾರ:—ಶಾಂತತೆಯಿಂದ ವಿದ್ಯಾಪ್ರಸಾರಕ್ಕೆ ಉತ್ತೇಜನವು ಸಿಗುತ್ತದೆ. ಬ್ರಿಟಿಶರ ಅಡಳತೆಗಿಂತ ಮುಂಚೆ ಲೋಕಶಿಕ್ಷಣವು ಸರಕಾ ರದ ಕರ್ತವ್ಯವೆಂದು ಯಾವ ಅರಸರೂ ತಿಳಿದಿದ್ದಿಲ್ಲ. ಹಿಂದು ಜನರಲ್ಲಿ ಬ್ರಾಹ್ಮಣರಷ್ಟೇ ಸಂಸ್ಕೃತವಿದ್ಯೆಯಲ್ಲಿ ಪ್ರವೀಣರಾಗುತ್ತಿದ್ದರು; ಅದ ರಂತೆ ಮುಸಲ್ಮಾನರಲ್ಲಿ ಮುಲ್ಲಾಗಳು ಅರಬೀ ಭಾಷೆಯ ಅಭ್ಯಾಸ ಮಾಡುತ್ತಿದ್ದರು. ಸಾಮಾನ್ಯ ಜನರ ಶಿಕ್ಷಣವೆಂಬದು ಗೊತ್ತೇ ಇದ್ದಿಲ್ಲ ೧೭೮೧ ರಲ್ಲಿ ವಾರನ್ ಹೆಸ್ಟಿಂಗ್ಸನು ಕಲಕತ್ತೆಯಲ್ಲಿ ಒಂದು ವಿದ್ಯಾಲಯ ವನ್ನು ಸ್ಥಾಪಿಸಿದನು. ೧೭೯೩ ರಲ್ಲಿ ಈಸ್ಟ ಇಂಡಿಯಾ ಕಂಪನಿಯವರ ಪ್ರತಿ ವರ್ಷ ಶಿಕ್ಷಣಕ್ಕಾಗಿ ಒಂದು ಲಕ್ಷ ರೂಪಾಯಿ ಖರ್ಚು ಮಾಡಬೇ ಕೆಂದು ಗೊತ್ತು ಮಾಡಿದರು. ಬೆಂಟಿಂಕನು ಇಂಗ್ಲಿಷ ಶಿಕ್ಷಣವನು ಮೊದಲು ಪ್ರಾರಂಭಿಸಿದನು. ೧೮೫೭ ರಲ್ಲಿ ಕಲಕತ್ತಾ, ಮುಂಬಯಿ ಮದ್ರಾಸಗಳಲ್ಲಿ ವಿಶ್ವವಿದ್ಯಾಲಯಗಳು ಸ್ಥಾಪನೆಯಾದವು. ಮುಂದೆ ಅಲ ಹಾಬಾದ-ಲಾಹೋರಗಳಲ್ಲಿ ವಿಶ್ವವಿದ್ಯಾಲಯಗಳು ಸ್ಥಾಪಿಸಲ್ಪಟ್ಟವು. ಲಾರ್ಡ ಮೇಯೋ ಲಾರ್ಡ ರಿಪನ್ ದೊರೆಗಳು ಸಾಮಾನ್ಯ ಜನರಲ್ಲಿ ಶಿಕ್ಷಣಕ್ಕೆ ಬಹಳ ಉತ್ತೇಜನ ಕೊಟ್ಟರು. ಈಗ ಹಿಂದುಸ್ತಾನದಲ್ಲಿ ೯೨೦೦೦ ಪ್ರಾಥಮಿಕಶಾಲೆಗಳಿದ್ದು, ೩೧,೬೪,೦೦೦ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಾ ಇದ್ದಾರೆ. ೫೦೩೨ ಹಾಯಸ್ಕೂಲುಗಳಲ್ಲಿ ೨,೫೬,೪೧೨ ವಿದ್ಯಾ ರ್ಥಿಗಳು ಇಂಗ್ಲಿಷ ಕಲಿಯುತ್ತಾ ಇದ್ದಾರೆ. ಶಾಲೆಗಳಲ್ಲಿ ವಸೂಲಾದ ಫೀಯನ್ನೂ ವಿದ್ಯಾಪಕ್ಷಪಾತಿಗಳಾದ ಶ್ರೀಮಂತ ಜನರು ಉದಾರ ಮನಸ್ಸಿ ನಿಂದ ಕೊಟ್ಟ ಹಣವನ್ನೂ ಬಿಟ್ಟು, ಸರಕಾರದವರು ಶಿಕ್ಷಣದ ಸಲುವಾಗಿ ೧೯೦೨ ರಲ್ಲಿ ೧೧೦ ಲಕ್ಷ ರೂಪಾಯಿ ಖರ್ಚು ಮಾಡಿದರು. ಇತ್ತಲಾಗಿ ಸರ ಕಾರದವರು ವಿದ್ಯಾಪ್ರಸಾರಕ್ಕೋಸ್ಕರ ಇದಕ್ಕೂ ಬಹಳ ಹೆಚ್ಚು ಹಣ ವನು ಖರ್ಚು ಮಾಡುತ್ತ ಇದ್ದಾರೆ.

ಗ ದಾ. ಗೋಖಲೇ ಬಿ. ಎ.

(ಸಶೇಷ)

ಶಾಲಾಪತ್ರಿಕೆ

ಪುಸ್ತಕ ೪೩ | ಜೂನ ೧೯೧೧. | ಸಂಚಿಕೆ ೬

ಬ್ರಿಟಿಶ್ ರಾಜ್ಯದಿಂದ ಆದ ಲಾಭಗಳು.

(ಮೋತಿಂಗಳ ಸಂಚಿಕೆಯಿಂದ ಮುಂದೆ ಸಾಗಿದ್ದು.)

ಧರ್ಮಸ್ವಾತಂತ್ರ್ಯವು:—ಪ್ರತಿ ಒಬ್ಬನು ತನಗೆ ಯೋಗ್ಯವೆನಿಸಿದ ಧರ್ಮವನ್ನು ಸಂಬಲಿಕ್ಕೆ ಸ್ವತಂತ್ರನಿರುತ್ತಾನೆ. ಆದರೆ ಪೂರ್ವಕಾಲದ ಅರಸರು ಈ ಸಂಗತಿಯನ್ನು ಒಪ್ಪಿಕೊಳ್ಳುತ್ತಿರಲಿಲ್ಲ. ಆದಕಾರಣ, ರಾಜ್ಯಕರ್ತರು ಪರಧರ್ಮೀಯರ ಮೇಲೆ ಜಿಜಿಯಾದಂಥ ಕರಗಳನ್ನು ಕೂರ್ತ್ರಿಸುತ್ತಿದ್ದರು. ಹಿಂದೂ ಜನರು ಮುಸಲ್ಮಾನರನ್ನೂ ಮುಸಲ್ಮಾನರು ಹಿಂದುಗಳನ್ನೂ ಪೀಡಿಸುತ್ತಿದ್ದರು. ಆದರೆ ಬ್ರಿಟಿಶ್ ರಾಜರ ಆಳಿಕೆಯಲ್ಲಿ ಬೇಕಾದವರು ಬೇಕಾದ ಧರ್ಮದಂತೆ ಆಚರಣೆ ಮಾಡಲಿಕ್ಕೆ ಪೂರ್ಣ ಸ್ವತಂತ್ರರಿದ್ದಾರೆ. ಕ್ರಿಸ್ತೋಪದೇಶಕರು ಕ್ರಿಸ್ತೋಧರ್ಮವನ್ನುಪದೇಶಿಸಿದಂತೆ, ಮುಸಲ್ಮಾನರು, ಬುದ್ಧರು, ಬ್ರಹ್ಮೋಗಳು ತಮ್ಮ ತಮ್ಮ ಮತಗಳನ್ನು ಪ್ರತಿಪಾದಿಸುತ್ತಾರೆ. ಕಾಯದೆಯ ದೃಷ್ಟಿಯಿಂದ ಎಲ್ಲ ಧರ್ಮಗಳೂ ಸಮನಾಗಿವೆ; ಮತ್ತು ಯಾವ ಮನುಷ್ಯನೂ ಯಾವ ಧರ್ಮವನ್ನನುಸರಿಸಿದರೂ ಸರಕಾರದ ಚಾಕರಿಗೆ ಅಯೋಗ್ಯನಾಗುವದಿಲ್ಲ.

ಪೋಲೀಸಖಾತೆ:— ದೇಶದಲ್ಲಿ ಕೊಲೆ ಸುಲಿಗೆ ಮುಂತಾದವುಗಳು ಆಗದಂತೆ ವ್ಯವಸ್ಥೆಯನ್ನು ಇಟ್ಟು, ಶಾಂತತೆಯನ್ನು ಕಾಪಾಡುವದಕ್ಕೆ ಸರಕಾರದವರು ಪೋಲೀಸಖಾತೆಯನ್ನು ಇಟ್ಟಿರುವರು. ಮೋಗಲರ ರಾಜ್ಯದಲ್ಲಿ ಅಶಿಕ್ಷಿತ ಶಿಪಾಯರೇ ಪೋಲೀಸ ಕೆಲಸವನ್ನು ಮಾಡುತ್ತಿದ್ದರು. ಅವರಿಗೆ ಸಾಕಷ್ಟು ಸಂಬಳವು ಸಿಗದ್ದರಿಂದ ಅವರು ಜನರನ್ನು ಸುಲಕೊಂಡು ತಮ್ಮ ಉಪಜೀವನ ಸಾಗಿಸುತ್ತಿದ್ದರು. ಆದರೆ ಈಗಿನ ಪೋಲೀಸರ ಸಂಬಳವು ನಿಯತವಾಗಿದ್ದು, ಅವರು ಕಠಿಣವಾದ ನಿಯಮಗಳಿಗೆ ಒಳಗಾಗಿದ್ದಾರೆ. ಗುನ್ಹೆಗಳು ಆಗದಂತೆ ಬಂದೋಬಸ್ತು ಇಡುವದು, ಗುನ್ಹೆಗಳನ್ನು ಪತ್ತೆ ಹಚ್ಚುವದು ಕಾಯದೆಗಳಿಂದ ಜನರಿಗೆ ನ್ಯಾಯವೊದಗಿಸುವದಕ್ಕೆ

ಸಹಾಯ ಮಾಡುವದು, ಕಾಯದೆಯ ವಿರುದ್ಧವಾಗಿ ನಡೆದ ಕೆಲಸಗಳನ್ನ
ಸರಕಾರದ ನಜರಿಗೆ ತರುವದು, ಇವೇ ಮೊದಲಾದವುಗಳು ಪೋಲೀಸ
ಕರ್ತವ್ಯಗಳಿರುತ್ತವೆ. ಪೋಲೀಸರನ್ನಿಡುವ ಖರ್ಚಿಗಾಗಿ ಪ್ರತಿ ಒಬ್ಬನು ತಿಂ
ಳಿಗೆ ಒಂದು ದುಡ್ಡಿಗಿಂತ ಕಡಿಮೆ ಕರವನ್ನು ಕೊಡುತ್ತಾನೆ. ದೇಶದಲ್ಲಿ ಅಲ್ಲ
ಗೆ ಕೋರ್ಟುಗಳೂ, ತುರಂಗಗಳೂ, ಚಾವಡಿಗಳೂ ಇಡಲ್ಪಟ್ಟಿವೆ. ಮೊ
ಗಲರ ಆಳಿಕೆಯಲ್ಲಿ ತುರಂಗಗಳೆಂದರೆ ಭಯಂಕರವಾದ ಕತ್ತಲೆಕೋಣೆ
ಳಾಗಿದ್ದವು. ಅವುಗಳಲ್ಲಿ ಕೈದಿಗಳನ್ನು ಯಾವಾಗಲೂ ಬೇಡಿ ಹಾಕಿ ಇ
ತ್ತಿದ್ದರು. ಕೈದಿಗಳನ್ನು ನಡಿಸುವ ಈಗಿನ ರೀತಿಯು ತೀರ ಭಿನ್ನವಾಗಿ
ಮೊದಲಿಗಿಂತ ಕಳವುಗಳೂ ಬಡಿದಾಟಗಳೂ ಕಡಿಮೆಯಾಗಿವೆ. ಹಿಂ
ಸ್ತಾನದ ಪೋಲೀಸ ವ್ಯವಸ್ಥೆಯಲ್ಲಿ ಇನ್ನೂ ಸುಧಾರಣೆಯಾಗಬೇಕಾದಾಗ
ಈಗಿನ ವ್ಯವಸ್ಥೆಯಿಂದಲೇ ಅಪರಾಧಗಳ ಪ್ರಮಾಣವು ಇಗ್ಲಂಡದಲ್ಲಿ
ದ್ದಕ್ಕಿಂತ ಹಿಂದುಸ್ತಾನದಲ್ಲಿ ಕಡಿಮೆಯದೆ.

ನಿಷ್ಪಕ್ಷಪಾತವಾದ ನ್ಯಾಯಪದ್ಧತಿಯು:—ಮೋಗಲರ ಆಳಿ
ಯಲ್ಲಿ ಕ್ರಮವುಳ್ಳ ನ್ಯಾಯಪದ್ಧತಿ ಇರಲಿಲ್ಲ. ನ್ಯಾಯಾಧೀಶರಿಗೆ ಸಂಬಳ
ಇರಲಿಲ್ಲ. ಅವರು ಮಾಡಿದ ನಿರ್ಣಯಗಳ ಮೇಲ್ವಿಚಾರಣೆ ಮಾಡುವ ಮೇ
ನ ನ್ಯಾಯಾಸನಗಳೂ ಇರಲಿಲ್ಲ. ಅವರು ವಾದಿ–ಪ್ರತಿವಾದಿಗಳಿಬ್ಬರಿಂದಲ
ದುಡ್ಡು ತಕ್ಕೊಂಡು ತಮ್ಮ ಉಪಜೀವನವನ್ನು ಸಾಗಿಸುತ್ತಿದ್ದರು. ಅವ
ಕೇವಲ ತೀರ್ಪುಗಳನ್ನು ಮಾರುವವರೇ ಆಗಿದ್ದರೆಂದರೂ ಸಲ್ಲುವದು. ನಿಂ
ಮಿತವಾದ ದಿವಾಣೀ ಮುಲಕೀ ಕಾಯದೆಗಳು ಇರಲಿಲ್ಲ. ಆರೋಪಿಗೆ ತ
ನಿರಪರಾಧಿತ್ವವನ್ನು ತೋರಿಸುವ ಹಕ್ಕು ಇರಲಿಲ್ಲ. ಈಗ ಕೆಳಗಿ
ಮ್ಯಾಜಿಸ್ಟ್ರೇಟರ ಮತ್ತು ಕೆಳಗಿನ ಕೋರ್ಟುಗಳ ನಿರ್ಣಯಗಳು ಅನ್ಯಾಯ
ವೆಂದು ತೋರಿದರೆ ಮೇಲಿನ ಕೋರ್ಟಿಗೆ ಅಪೀಲು ಮಾಡಲಿಕ್ಕೆ ಬರುತ್ತ
ಕಾಯದೆಗಳಲ್ಲಿ ಬಡವರು ಶ್ರೀಮಂತರು ಎಂಬ ಭೇದವಿರುವದಿಲ್ಲ.
ಮ್ಯಾಜಿಸ್ಟ್ರೇಟರ ಅಧಿಕಾರಗಳು ಅವರವರ ದರ್ಜೆಗಳ ಪ್ರಕಾರ ಭಿನ್ನವಾಗಿ
ರುತ್ತವೆ. ಬೇಕಾದಂಥ ಅಪರಾಧಿಗಳಿಗಾದರೂ ಕಾಯದೆಗಳನ್ನು ಬಲ್ಲವ
ರಾದ ವಕೀಲ, ಬ್ಯಾರಿಸ್ಟರರ ಸಹಾಯವು ದೊರೆಯುತ್ತದೆ. ನ್ಯಾಯಾಧೀಶ
ರಿಗೆ ಸಾಕಷ್ಟು ಸಂಬಳವು ಸಿಗುತ್ತದೆ, ಮತ್ತು ಅವರು ನಿಷ್ಪಕ್ಷಪಾತಿಗ
ಳಾಗಿರುತ್ತಾರೆ.

ಸಾಮಾಜಿಕ, ಧಾರ್ಮಿಕ, ರಾಜಕೀಯ ಪ್ರಗತಿಯು:— ಹಿಂ
ದುಸ್ತಾನದಲ್ಲಿ ಸಾಮಾಜಿಕ ವ್ಯವಹಾರಗಳಿಗೂ ಧರ್ಮದ ಕಟ್ಟಳೆಗಳಿಗೂ
ನಿಕಟ ಸಂಬಂಧವಿರುತ್ತದೆ. ಜನರ ನಡೆನುಡಿಗಳಲ್ಲಿ ಕೆಲಮಟ್ಟಿಗೆ ಹೆಚ್ಚು
ಕಡಿಮೆಯಾಗುತ್ತಿದ್ದಾಗ್ಯೂ ಧರ್ಮದ ಕಟ್ಟಳೆಗಳು ಇದ್ದಂತೆಯೇ ಇರುತ್ತವೆ.
ಇದಕಾರಣ ಧರ್ಮಬಂಧನಗಳು ಕಾಯಮ್ಮಾಗಿ ಇರುವವರೆಗೆ ಹೊಸ
ವಿಚಾರವಿಚಾರಗಳು ನೆಲೆಗೊಳ್ಳುವದಿಲ್ಲ. ಈ ಕಾರಣದಿಂದಲೇ, ಹಿಂದು
ಸ್ತಾನದ ಸಾಂಪತ್ತಿಕ ಸ್ಥಿತಿಯು ಸುಧಾರಿಸಿದ್ದರೂ ಸಾಮಾಜಿಕಸ್ಥಿತಿಯಲ್ಲಿ
ಹೆಚ್ಚಿನ ಪ್ರಗತಿಯು ಕಂಡು ಬರುವದಿಲ್ಲ. ಆದಾಗ್ಯೂ ಈಗ ಪರಿಸ್ಥಿತಿಯು
ಉತ್ತರದಿಂದ ಬದಲಾಗುತ್ತ ನಡೆದ ಹಾಗೆ ಹೆಚ್ಚು ಸುಧಾರಣೆಗಳನ್ನು ಮಾಡ
ಬೇಕೆಂಬ ಇಚ್ಛೆಯು ಪ್ರಬಲವಾಗುತ್ತ ನಡೆದದೆ. ಪಾಶ್ಚಿಮಾತ್ಯರ ವಾಙ್ಮಯದ
ಪರಿಶೀಲನದಿಂದ ಹೊಸ ಹೊಸ ವಿಚಾರಗಳೂ ಆಯುಷ್ಯದ ಇತಿಕರ್ತವ್ಯ
ತೆಯ ಹೊಸಕಲ್ಪನೆಗಳೂ ಉದ್ಭವಿಸಹತ್ತಿವೆ. ಪರದೇಶವ್ಯಾಪಾರ ಮೂಲ
ಕವಾಗಿ ಎಲ್ಲ ಭೂಖಂಡಗಳಿಂದ ಬರುವಂಥ ಅಪೂರ್ವವಾದ ವಸ್ತುಗಳು
ಸಾಮಾನ್ಯ ಜನರ ಮನೆಗಳಲ್ಲಿಯೂ ಕಂಡು ಬರಹತ್ತಿವೆ. ಯುರೋಪೀಯರ
ಸಂಸರ್ಗದಿಂದ ನಮ್ಮ ದೃಷ್ಟಿಯ ಪರ್ಯಾದೆಯು ವಿಸ್ತೃತವಾಗಿದೆ. ಹಾಗೂ
ಮೂರು ವರ್ಷಗಳ ಹಿಂದಿನ ವರೆಗೆ ಜನರಲ್ಲಿ ಒಬ್ಬರಿಂದೊಬ್ಬರು ತೀರ ದೂರ
ಇರಬೇಕೆಂದು ಕಂಡು ಬರುತ್ತಿದ್ದ ಪ್ರವೃತ್ತಿಯು ಈಗ ಕಡಿಮೆಯಾಗಹತ್ತಿ,
ನೇರೆ ಬೇರೆ ಸಮಾಜಗಳಲ್ಲಿ ಪರಸ್ಪರರ ವಿಷಯದಲ್ಲಿ ಪ್ರೀತಿಯೂ
ಆದರವೂ ಕಂಡುಬರುತ್ತವೆ. ಶಾಲೆಯಲ್ಲಿ ಎಲ್ಲ ಜಾತಿಯ ಹುಡುಗರು
ಕೂಡಿ ಕುಳಿತು ಶಿಕ್ಷಣದ ಲಾಭವನ್ನು ಹೊಂದುತ್ತಾರೆ. ಹೊಗೆ ಬಂಡಿಗಳಲ್ಲಿ
ಎಲ್ಲ ಜಾತಿಯ ಜನರು ಕೂಡಿ ಕೂಡ್ರುತ್ತಾರೆ. ಪೂರ್ವಕಾಲದಲ್ಲಿ ಕೀಳಜಾತಿ
ಯವರೆಂದು ಎಣಿಸಲ್ಪಟ್ಟ ಜನರು ಕೂಡಾ ಈಗ ಜವಾಬದಾರಿಯ ಮತ್ತು
ಪರ್ಯಾದೆಯ ಕೆಲಸಗಳನ್ನು ಮಾಡುತ್ತಾ ಇದ್ದಾರೆ. ಜಾತಿಗಳ ಉಚ್ಚ
ನೀಚ ಭಾವವು ಕಡಿಮೆಯಾಗುತ್ತಾ ಇದೆ. ಜಾತಿಭೇದಗಳು ಇನ್ನೂ ಪೂರಾ
ಇಲ್ಲದಂತೆ ಆಗದಿದ್ದಾಗ್ಯೂ ಜನರಲ್ಲಿ ಪರಸ್ಪರರ ರೀತಿರಿವಾಜುಗಳ ಬಗ್ಗೆ
ಸಹಿಷ್ಣುತೆಯು ಹುಟ್ಟಿದೆ. ಪ್ರತಿಯೊಂದು ಸಮಾಜದವರು ತಮ್ಮ ಸಾಮಾ
ಜಿಕ ನೈತಿಕ ಸುಧಾರಣೆಗಳನ್ನು ಮಾಡತೊಡಗಿದ್ದಾರೆ; ಹಾಗೂ ಅವರಿಗೆ
ಬೇರೆ ಸಮಾಜದವರು ತಮ್ಮ ಕೈಲಾದಮಟ್ಟಿಗೆ ಸಹಾಯ ಮಾಡುತ್ತಾರೆ.

ಧರ್ಮದ ವಿಷಯಕ್ಕೆ ಬಹಳ ಹೇಳುವ ಅವಶ್ಯವಿಲ್ಲ. ಬ್ರಿಟಿಶ್ ಸರಕಾರದವರು ಧರ್ಮದಲ್ಲಿ ಕೈ ಹಾಕುವದಿಲ್ಲ. ಪ್ರತಿಬ್ಬರು ತಮ್ಮ ವಿಶ್ವಾಸವಿಷ್ಟ ಧರ್ಮವನ್ನು ಆಚರಿಸಬಹುದು. ಆದರೆ ಧರ್ಮದ ಹೆಸರಿನಿಂದ ಮನುಷ್ಯತ್ವಕ್ಕೆ ಕುಂದು ತರುವಂಥ ಆಚರಣೆಗಳನ್ನು ಯಾರಾದರೂ ಮಾಡುವದು ಕಂಡು ಬಂದರೆ ಮಾತ್ರ ಸರಕಾರದವರು ಅವುಗಳನ್ನು ಪ್ರತಿಬಂಧಿಸುವರು. ಉದಾಹರಣಾರ್ಥವಾಗಿ ಹಿಂದಕ್ಕೆ ನಡೆಯುತ್ತಿದ್ದ ಸತಿ, ಬಾಲಹತ್ಯ, ನರಬಲಿ ಮುಂತಾದ ಘೋರವಾದ ಆಚರಣೆಗಳು ಈಗ ನಿಲ್ಲಿಸಲ್ಪಟ್ಟಿರುವವು. ಜನರಲ್ಲಿ ಚಿಕಿತ್ಸಾಬುದ್ಧಿಯು ಜಾಗೃತವಾಗಿ ಪವಿತ್ರ ಗ್ರಂಥಗಳನ್ನು ಹೀಗೆ ಮನನ ಮಾಡಿ ಅವುಗಳಲ್ಲಿ ಗ್ರಾಹ್ಯವಾದವುಗಳಿಂದು ಕಂಡು ಬಂದ ಧರ್ಮತತ್ವಗಳನ್ನಷ್ಟೇ ನಂಬುವ ಪ್ರವೃತ್ತಿಯು ಬಲವಾಗುತ್ತ ನಡೆದದೆ. ವರ್ತಮಾನಪತ್ರಗಳೂ ಮಾಸಪತ್ರಿಕೆಗಳೂ ಧರ್ಮತತ್ವಗಳನ್ನು ಚರ್ಚಿಸುತ್ತವೆ. ಹಾಗೂ ಯುರೋಪದಲ್ಲಿ ಗತನೇ ಶತಮಾನದಲ್ಲಿ ಮುಗ್ಗುಲಾದ ಹಳೇ ಧರ್ಮವು ಹಿಂದಕ್ಕೆ ಬಿದ್ದು ಪ್ರೊಟೆಸ್ಟಂಟ ಧರ್ಮವು ಹಬ್ಬಿದಂತೆ ಈ ದೇಶದಲ್ಲಿಯೂ ಹೊಸ ಮತಗಳೂ ಹೊಸ ಪಂಥಗಳೂ ತಲೆದೋರಲಾರಂಭಿಸಿವೆ.

ರಾಜಕೀಯ ವಿಚಾರಗಳ ದೃಷ್ಟಿಯಿಂದ ನೋಡಿದರೂ ಬಹಳ ಪ್ರಗತಿಯಾದದ್ದು ಕಂಡು ಬರುವದು. ದೇಶದ ರಾಜ್ಯಕಾರಭಾರವನ್ನು ನಡೆಸುತ್ತಿದ್ದ ಸರಕಾರದ ಸಣ್ಣ ದೊಡ್ಡ ಅಧಿಕಾರಿಗಳಲ್ಲದೆ, ಇತರ ಜನರ ಸಹ ಸಾರ್ವಜನಿಕ ಕಾರ್ಯಗಳಲ್ಲಿ ಮನಸ್ಸು ಹಾಕುತ್ತಾರೆ. ಮ್ಯುನಸಿಪಾಲಿಟಿ, ಲೋಕಲ್‌ಬೋರ್ಡುಗಳಿಂದ ಕೆಲಮಟ್ಟಿಗೆ ಸ್ಥಾನಿಕಸ್ವರಾಜ್ಯದ ಉಪಕ್ರಮ ಮಾಡಿಸಲ್ಪಟ್ಟಿದೆ. ಪ್ರಾಂತದ ಕಾಯಿದೆಕೌನ್ಸಿಲುಗಳಲ್ಲಿಯೂ ಹಿಂದುಸ್ತಾನ ಸರಕಾರದ ಕಾಯಿದೆಕೌನ್ಸಿಲುಗಳಲ್ಲಿಯೂ ಜನರಿಂದ ಆರಿಸಲ್ಪಟ್ಟಂಥ ಸಭಾಸದರಿರುತ್ತಾರೆ. ಪ್ರಾಂತಿಕ ಸರಕಾರದ ಹಾಗೂ ಹಿಂದುಸ್ತಾನ ಸರಕಾರದ ಕಾರ್ಯಪ್ರವರ್ತಕ ಆಲೋಚನಾಸಭೆಗಳಲ್ಲಿಯೂ ಹಿಂದುಸ್ತಾನದ ಜನರು ಸಭಾಸದರಾಗಿ ನಿಯಮಿಸಲ್ಪಡುತ್ತಾರೆ. ಸರಕಾರದವರು ಯಾವದೊಂದು ಕಾಯಿದೆಯನ್ನು ಮಾಡುವ ಮೊದಲು ಆ ಕಾಯಿದೆಯ ಮಸೂದೆಯನ್ನು ಪ್ರಸಿದ್ಧ ಮಾಡುತ್ತಾರೆ. ಇದರಿಂದ ವರ್ತಮಾನಪತ್ರಗಳಿಗೂ ಸಾರ್ವಜನಿಕ ಸಂಘಗಳಿಗೂ ಅದರ ವಿಷಯವಾಗಿ

ಮ್ಮ ಅನುಕೂಲ ಪ್ರತಿಕೂಲವಾದ ಅಭಿಪ್ರಾಯಗಳನ್ನು ವ್ಯಕ್ತ ಪಡಿಸ
ಕ್ಕೆ ಅನುಕೂಲವಾಗುತ್ತದೆ. ಈ ತರದ ಅನುಕೂಲಗಳು ಪ್ರಾಚೀನ
ಾಲದ ರಾಜ್ಯಗಳಲ್ಲಿ ಎಂದೂ ಇರಲಿಲ್ಲ.

ಒಟ್ಟಿಗೆ ಹೇಳತಕ್ಕದ್ದೇನೆಂದರೆ, ನಮ್ಮಾ ದೇಶದಲ್ಲಿ ಅಸೇತು—ಹಿಮಾ
ಲವಾಗಿ ನಡೆಯುತ್ತಿರುವ ಸುವ್ಯವಸ್ಥಿತವಾದ ಒಂದೇ ಅನುಶಾಸನಪದ್ಧತಿ,
ಡೀ ಹಿಂದುಸ್ತಾನದಲ್ಲಿ ನೆಲಿಸಿರುವ ಅಖಂಡಶಾಂತತೆ, ದೇಶದಲ್ಲಿ ಎಲ್ಲ
ಡೆಯಲ್ಲಿ ಜಾಳಿಗೆಯಂತೆ ಪಸರಿಸಿರುವ ಉಗಬಂಡಿಯ ಮಾರ್ಗಗಳು
ೊದಲಾದ ಗಮನಸಾಧನೆಗಳು, ಒಂದಕ್ಕೊಂದರ ಪರಿಚಯವಿಲ್ಲದಂಥ
ನೇಕ ಜನಾಂಗಗಳುಳ್ಳ ಈ ದೇಶದಲ್ಲಿ ಪರಸ್ಪರ ವ್ಯವಹಾರವನ್ನುಂಟು
ಾಡಿದಂಥ ಇಂಗ್ಲಿಷ ಭಾಷೆ, ಜಗತ್ತಿನ ಉನ್ನತ ವಿಚಾರಗಳ ತಿಳುಹ
ನ್ನುಂಟು ಮಾಡುವಂಥ ಇಂಗ್ಲಿಷ ವಾಙ್ಮಯ, ಅನುಕರಣೀಯವಾದಂಥ
ಬ್ರಿಟಿಶರ ಉದಾತ್ತ ಚರಿತ್ರದ ಉದಾಹರಣೆ ಇವೇ ಮೊದಲಾದ ಅಪೂರ್ವ
ಾಭಗಳು ನಮಗೆ ಬ್ರಿಟಿಶ್ ಸಾಮ್ರಾಜ್ಯದಿಂದಲೇ ಉಂಟಾಗಿರುತ್ತವೆ.
ಾಮದಾರ ಸರ್ ಜಾರ್ಜ ಕ್ಲಾರ್ಕ ದೊರೆಗಳು ಬಳಗಡೆಯಲ್ಲಿ ಪುಣೆಯ
ಗ್ಯುಸನ್ ಕಾಲೇಜದ ವಿದ್ಯಾರ್ಥಿಗಳಿಗೆ ಮಾಡಿದ ಉಪದೇಶದಲ್ಲಿ ಹೇಳಿ
ಂತೆ* ಇವುಗಳಿಂದ ಕಾಲಾಂತರದಲ್ಲಿ ಹಿಂದುಸ್ತಾನದೊಳಗಿನ ಜನಾಂಗ
ಗಳೆಲ್ಲ ಒಂದಾಗಿ ಅವುಗಳಿಂದ ಸುಸಂಹತವಾದ ಒಂದೇ ರಾಷ್ಟ್ರವಾಗು
ವದೆಂಬದಕ್ಕೆ ಸಂದೇಹವಿಲ್ಲ. ಈ ಲಾಭವು ಬ್ರಿಟಿಶಸಾಮ್ರಾಜ್ಯಕ್ಕೆ ನಾವು
ನಿಷ್ಠೋಭಾದಿಂದ ರಾಜನಿಷ್ಠರಾಗಿ ನಡೆದರೆ ಮಾತ್ರ, ಉಂಟಾಗುವ ಸಂಭವ
ವಿರುತ್ತದೆ.

ಇಷ್ಟು ಹೊತ್ತಿನವರೆಗೆ ಮೈಕೈಗಳಿಂದ ಗಟ್ಟಿಯಾಗಿದ್ದು ದುಡಿಯು
ವದಕ್ಕೆ ಸಾಮರ್ಥ್ಯವುಳ್ಳ ಜನರಿಗೆ ಸರಕಾರದಿಂದ ಉಂಟಾಗಿದ್ದ ಅನು
ಕೂಲಗಳನ್ನು ವಿವರಿಸಿದೆವು. ಆದರೆ ಶಾರೀರಿಕ ವ್ಯಾಧಿಗಳಿಂದಲೂ
ನ್ಯೂನತೆಗಳಿಂದಲೂ ಬಳಲುವಂಥ ರೋಗಿಗಳು, ಕುಂಟರು, ಕುರು
ರು ಮೊದಲಾದವರ ಬಗ್ಗೆಯೂ ಇಲ್ಲಿ ವಿಚಾರಿಸಲೇಕಲ್ಲವೆ? ಹಿಂದಿನ

---

* ಕಳೆದ ವರ್ಷದ ಶಾಲಾಪತ್ರಕದ ಅಕ್ಟೋಬರ ತಿಂಗಳ ಸಂಚಿಕೆಯ ೪೯೦
ದ ೪೯೩ ನೇ ಪುಟಗಳನ್ನು ನೋಡಿರಿ.

ಅರಸರ ಆಳಿಕೆಯೆಲ್ಲಿ ಇಂಥ ಜನರ ಬಗ್ಗೆ ಸಾರ್ವಜನಿಕ ಸಂಸ್ಥೆ
ಳೇನೂ ಇರಲಿಲ್ಲ. ಆದರೆ ಈಗ ಇಂಥ ಜನರ ದುಃಖನಿವಾರಣೆಗೂ
ಸ್ಕರ ಅಲ್ಲಲ್ಲಿಗೆ ದವಾಖಾನೆಗಳೂ ಅನಾಥಾಶ್ರಮಗಳೂ ಸ್ಥಾಪಿಸ
ಟ್ಟವೆ. ನಮ್ಮ ದೇಶಮರ್ಯಾದೆಗನುಸಾರವಾಗಿ ಹೆಂಗಸರಿಗೋಸ್ಕರ ಬೇ
ದವಾಖಾನೆಗಳು ಸ್ಥಾಪಿಸಲ್ಪಟ್ಟವೆ. ಇವಲ್ಲದೆ ಹುಚ್ಚರ ಸಲುವಾಗಿಯೂ
ಕುಷ್ಟ ರೋಗಿಗಳ ಸಲುವಾಗಿಯೂ, ಮಾರೀಬೇನೆ, ಪ್ಲೇಗ, ವೆ
ಮುಂತಾದ ಬೇರೆ ಬೇರೆ ರೋಗಗಳ ಸಲುವಾಗಿಯೂ ಬೇರೆ ದವಾ
ನೆಗಳು ಸ್ಥಾಪಿಸಲ್ಪಟ್ಟವೆ. ಅವುಗಳಲ್ಲಿ ಕೆಲವು ಪ್ರತ್ಯಕ್ಷವಾಗಿ ಸರ
ರದ ವೆಚ್ಚದಿಂದಲೇ ನಡಿಯುವವು; ಕೆಲವುಗಳಿಗೆ ಸರಕಾರದ ಆಶ್ರಯ
ರುವದು. ಈ ಮೇರೆಗೆ ವ್ಯಕ್ತಿಗಳ ದುಃಖನಿವಾರಣೆ ಮಾಡುವದಲ್ಲದೆ
ಕೆಲವು ಸಾರೆ ಸರಕಾರಕ್ಕೆ ಇಡೀ ದೇಶದ ದುಃಖವನ್ನು ಪರಿಹರಿಸ
ಪ್ರಸಂಗಗಳು ಬರುತ್ತವೆ. ಒಕ್ಕಲತನದಿಂದಲೇ ಉಪಜೀವನ ಮಾಡ
ಲಕ್ಷಗಟ್ಟಲೆ ಜನರಿಗೆ ಒಮ್ಮೊಮ್ಮೆ ಅತಿವೃಷ್ಟಿಯಿಂದಾಗಲಿ ಅನಾವೃಷ್ಟಿಯಿಂ
ದಾಗಲಿ ಬರಬಿದ್ದು ಸಾಯುವ ಹೊತ್ತು ಬರುತ್ತದೆ. ಯಾವ ದೇಶದಲ್ಲೇ
ದರೂ ಹೊಟ್ಟೆತುಂಬ ಕೂಳುಕಾಣದಂಥ ಜನರು ಹಲವರಿದ್ದೇ ಇರುತ್ತಾ
ಹಿಂದುಸ್ತಾನದಲ್ಲಿ ೩೦ ಕೋಟಿ ಜನರಲ್ಲಿ ಇಂಥ ಜನರು ಸುಮಾ
ಳ ಕೋಟಿ ಇರುತ್ತಾರೆ. ದುಷ್ಕಾಳದಲ್ಲಿ ಇಂಥ ಜನರು ಕಡುವಿಪತ್ತಿ
ಳಗಾಗುವರು. ದುಷ್ಕಾಳಗಳು ಹೊಸವಲ್ಲ. ಹಿಂದುಸ್ತಾನದಲ್ಲಿ ಹಿಂದಿನ
ಲದಲ್ಲಿಯೂ ದುಷ್ಕಾಳಗಳು ಬೀಳುತ್ತ ಬಂದಿರುತ್ತವೆ. ೧೩೯೬ನೇ
ವಿಯಲ್ಲಿ ಮಹಾರಾಷ್ಟ್ರದಲ್ಲಿ ಬಿದ್ದ ಬರವು ೧೨ ವರ್ಷ ಇತ್ತೆಂದು ಹೇ
ತ್ತಾರೆ. ಇಸವಿ ಸನ್ ೧೭೫೬ನೇ ವರ್ಷ ದಿಲ್ಲಿಯ ಪೂರ್ವಕ್ಕಿರುವ ಪ್ರಾ
ತಗಳಲ್ಲಿ ಬರಬಿದ್ದಾಗ ವಿಲಾಸಪ್ರಿಯರಾದ ಅಕಬರನ ದರಬಾರದವ
ಬುಭುಕ್ಷಿತರ ದುಃಖನಿವಾರಣೆಗಾಗಿ ಏನು ಪ್ರಯತ್ನ ಮಾಡಲಿಲ್ಲ.
ರೆ ೧೭೫೦ರಲ್ಲಿ ಬಂಗಾಲದಲ್ಲಿ ಬರಬಿದ್ದಾಗ ವಾರನ್ ಹೇಸ್ಟಿಂಗ್ಸನು ಪ್ರ
ಥರಕ್ಷಣೆಗಾಗಿ ೯೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದನು.
ದುಷ್ಕಾಳ ಪೀಡಿತರಿಗೆ ಧಾನ್ಯ ಮುಟ್ಟಿಸುವದಕ್ಕೆ ಒಳ್ಳೇ ದಾರಿಗಳೂ ಇ
ಸಾಧನಗಳೂ ಇರಲಿಲ್ಲ. ಹೇಸ್ಟಿಂಗ್ಸನಂಥವನು ೯೦ ಸಾವಿರ ರೂಪಾ
ಖರ್ಚು ಮಾಡಿದ್ದು ಬಹಳವೆಂದು ನಾವು ಹೇಳುವದಿಲ್ಲ. ಆದರೆ ಬರ

ಜಲ್ಲಿ ರೈತರ ಕಷ್ಟವನ್ನು ನೀಗಿಸುವದು ಸರಕಾರದ ಒಂದು ಕರ್ತವ್ಯವಿರುತ್ತದೆಂದು ಈ ದೇಶದಲ್ಲಿ ಮೊದಲು ಅವನೇ ತೋರಿಸಿ ಕೊಟ್ಟನೆಂದು ಹೇಳಬಹುದು. ಅವನ್ಮತರುವಾಯು ಬಂದವರಾದರೂ ಈ ಸಂಬಂಧದ ತಮ್ಮ ಜವಾಬುದಾರಿಯನ್ನು ಚನ್ನಾಗಿ ಅರಿತಿದ್ದಾರೆ. ೧೮೭೭ ನೇ ವರ್ಷದ ಬರಗಾಲದಲ್ಲಿ ರೈತರ ದೆಸೆಯಿಂದ ೪ ಕೋಟಿ ರೂಪಾಯಿಗಳು ಖರ್ಚು ಮಾಡಲ್ಪಟ್ಟವು. ೧೮೯೭ ನೇ ವರ್ಷದ ಬರದಲ್ಲಿ ಸರಕಾರಕ್ಕೆ ೫,೩೨,೫೬,೦೪೦ ರೂಪಾಯಿ ಖರ್ಚು ಬಿತ್ತು; ಮತ್ತು ಆಗ ದಿನಾಲು ಸರಾಸರಿ ೫೨ ಲಕ್ಷ ೭೮ ಸಾವಿರ ದುಷ್ಕಾಳಪೀಡಿತರಿಗೆ ಅನ್ನ ಕೊಡಲ್ಪಡುತ್ತಿತ್ತು.

ಆದರೆ ಸಮೃದ್ಧಿಯ ದಿವಸಗಳಲ್ಲಿಯೂ ಸರಕಾರದವರು ಆಲಸ್ಯದಿಂದಿರುವದಿಲ್ಲ. ಆ ಕಾಲದಲ್ಲಿ ಮುಂದೆ ಬರಬಹುದಾದ ಸಂಕಟಗಳ ನಿವಾರಣೆಗೋಸ್ಕರ ಅವರು ವಿಶ್ವಪ್ರಯತ್ನಗಳನ್ನು ಮಾಡುತ್ತಾರೆ. ಪ್ಲೇಗ, ಮಾರೀಬೇನೆ ಮುಂತಾದ ಬೇನೆಗಳು ಉದ್ಭವಿಸಬಾರದೆಂದು ದೇಶದಲ್ಲಿ ಸ್ವಚ್ಛತೆಯನ್ನು ನೆಲೆಗೊಳಿಸುವ ಪ್ರಯತ್ನಗಳು ಯಾವಾಗಲೂ ನಡೆದಿರುತ್ತವೆ. ಮೈಲಿಯ ಬೇನೆಯು ಹಬ್ಬಬಾರದೆಂದು ಜನರಿಗೆ ಮೈಲಿಯನ್ನು ತೆಗೆಯಿಸಿಕೊಳ್ಳುವ ಅನುಕೂಲವನ್ನು ಮಾಡಿಕೊಡುತ್ತಾರೆ. ಜ್ವರದ ಪರಿಹಾರಕ್ಕಾಗಿ ಪೋಷ್ಟ ಆಫೀಸುಗಳಲ್ಲಿ ಕ್ವಿನೈನವನ್ನು ಮಾರುವ ವ್ಯವಸ್ಥೆಯನ್ನು ಮಾಡಿದ್ದಾರೆ. ದೇಶದಲ್ಲಿ ಬರಬೀಳಬಾರದೆಂದು ಕಾಲುವೆಗಳೂ ಬಾವಿಗಳೂ ಕೆರೆಗಳೂ ಅಗಿಸಲ್ಪಟ್ಟವೆ. ಹೊಳೆಗಳ ಪೂರದಿಂದ ಹೈರಿನ ನಾಶವಾಗಬಾರದೆಂದು ಒಡ್ಡುಗಳು ಹಾಕಲ್ಪಟ್ಟವೆ. ಬರಗಾಲದಲ್ಲಿ ಬಡವರಿಗೆ ಅನ್ನವನ್ನು ಪೂರೈಸುವದಕ್ಕಾಗಿ "ದುಷ್ಕಾಳ ಫಂಡ" ಎಂಬದೊಂದು ಫಂಡು ಕಾದಿಡಲ್ಪಟ್ಟಿದೆ. ಹಾಗೂ ಇದು ವರೆಗೆ ೩೭ ಕೋಟಿ ರೂಪಾಯಿ ಖರ್ಚುಮಾಡಿ ಒಟ್ಟು ೪೦೦೦೦ ಮೈಲು ಕಾಲಿವೆಗಳನ್ನು ಕಡಿಸಿರುವದರಿಂದ ೧೪ ಕೋಟಿ ಎಕರೆ ಭೂಮಿಗೆ ನೀರು ಸಿಗುತ್ತದೆ.

ಒಟ್ಟಿಗೆ, ಈ ಲೇಖದ ಆರಂಭದಲ್ಲಿ ಕೊಟ್ಟ ಲಾರ್ಡ ಕರ್ಝನ್ ದೊರೆಗಳ ಶಬ್ದಗಳು ನಿಜವಾಗಿರುತ್ತವೆಂಬದನ್ನು ತೋರಿಸಲಿಕ್ಕೆ ಮೇಲೆ ಹೇಳಿದ ಲಾಭಗಳು ಸಾಕೆಂದೆಣಿಸುತ್ತೇವೆ. ಅವುಗಳಿಂದ ಪ್ರಜೆಗಳ ಕಲ್ಯಾಣಕ್ಕಾಗಿ ಇಂಗ್ಲೀಷ ಜನರು ಪ್ರಯತ್ನ ಪಡುವಷ್ಟು ಹಿಂದೆ ಯಾವ ಅರಸರೂ ಪಡಲಿಲ್ಲವೆಂದು ಖಂಡಿತವಾಗಿ ಹೇಳಬಹುದು. ನಾನಾವಿಧ ಜಾತಿಗಳೂ ಪರಸ್ಪರ

ವಿರೋಧಿಗಳಿಂದ ಹಿತಸಂಬಂಧಗಳುಳ್ಳ ಜನರೂ ಇದ್ದಂಥ ಈ ವಿಸ್ತೀರ್ಣವಾದ ದೇಶದ ರಾಜ್ಯಕಾರಭಾರವು ಕೇವಲ ನಿರ್ದೋಷವಾಗಿರುವದು ಅಶಕ್ಯವೆ. ಆದರೆ ಯಾವ ಸರಕಾರವಾದರೂ ಸತ್ಯವನ್ನು ಸ್ಮರಿಸಿ, ಯೋಗ್ಯವಾದದ್ದನ್ನೇ ಮಾಡುತ್ತದೆಂದು ಹೇಳಲಿಕ್ಕೆ ಬಂದರೆ, ಅದು ಸಾಮಾನ್ಯ ಸ್ತುತಿಯಲ್ಲ. ಇಂಥ ಸ್ತುತಿಗೆ ಹಿಂದುಸ್ತಾನದಲ್ಲಿ ಆಳುವ ಬ್ರಿಟಿಷ ಸರಕಾರವು ಸಂಪೂರ್ಣವಾಗಿ ಪಾತ್ರವಾಗಿರುತ್ತದೆಂಬದಕ್ಕೆ ತಿಲಮಾತ್ರ ಸಂದೇಹವಿಲ್ಲ. ಯಾಕಂದರೆ, ಈ ಲೇಖದ ಪ್ರಾರಂಭದಲ್ಲಿ ಕೊಟ್ಟ ಲಾರ್ಡ ಕರ್ಝನ್ ದೊರೆಗಳ ಭಾಷಣದೊಳಗಿನ ಅವತರಣದಲ್ಲಿ ಹೇಳಿದಂತೆ, ನಮ್ಮ ಪರಮಪೂಜ್ಯರಾದ ಚಕ್ರವರ್ತಿಗಳ ಪ್ರತಿನಿಧಿಗಳಾಗಿ ಹಿಂದುಸ್ತಾನದಲ್ಲಿ ಆಳುವ ಅಧಿಕಾರಿಗಳು, "ಹಿಂದುಸ್ತಾನದಂಥ ದೊಡ್ಡ ಸಾಮ್ರಾಜ್ಯವನ್ನು ಸಂಪಾದಿಸುವದೇ ಮಹತ್ಕಾರ್ಯವು, ಈ ಸಾಮ್ರಾಜ್ಯವನ್ನು ನ್ಯಾಯನೀತಿಗಳಿಂದ ಪರಿಪಾಲಿಸುವದು ಅದಕ್ಕೂ ಮಹತ್ತರವಾದ ಕಾರ್ಯವು, ಜ್ಞಾನತನವುಳ್ಳ ಮುತ್ಸದ್ದಿತನದಿಂದ ಈ ಸಾಮ್ರಾಜ್ಯದಲ್ಲಿ ಒಕ್ಕಟ್ಟನ್ನು ಉಂಟುಮಾಡಿ, ಅದನ್ನು ಸುಸಂಹತವಾದ ಒಂದೇ ರಾಷ್ಟ್ರವನ್ನಾಗಿ ಮಾಡುವದು ಮಹತ್ತಮವಾದ ಕಾರ್ಯವು" ಎಂದು ನೆರೆನಂಬಿ, ದೇಶದಲ್ಲಿ ನ್ಯಾಯ-ಸತ್ಯ-ಐಕಮತ್ಯಗಳನ್ನು ನೆಲೆಗೊಳಿಸುವದಕ್ಕೆ ಅವಿಶ್ರಾಂತಪ್ರಯತ್ನವನ್ನು ಗೈಯುತ್ತಿರುವರು. ಆದ ಕಾರಣ, ಮನೋವಾಕ್ಕಾಯಗಳಿಂದ ನಮ್ಮ ನಿಜವಾದ ಹಿತವನ್ನೇ ಬಯಸುವಂಥ ಬ್ರಿಟಿಶರ ರಾಜ್ಯವು ನಮ್ಮ ಮೇಲೆ ಚಿರಕಾಲವಿರಬೇಕೆಂದು ಕೃತಜ್ಞತಾಪೂರ್ವಕವಾಗಿ ದೇವರನ್ನು ಪ್ರಾರ್ಥಿಸುವದು ನಮ್ಮ ಕರ್ತವ್ಯವಾಗಿದೆ.

ಗ. ವಾ. ಗೋಖಲೆ, ಬಿ ಎ.

(ಮೇ ತಿಂಗಳಿಂದ ಮುಂದೆ ನಾಗಿದ್ದು)

ಹನೇ ಅಧ್ಯಾಯದಲ್ಲಿ ವನಸ್ಪತಿಗಳಿಗೆ ಬೇಕಾಗುವ ಖನಿಜಪದಾರ್ಥಗಳು ಅವುಗಳಿಗೆ ಭೂಮಿಯಿಂದ ದೊರಕುತ್ತವೆಂದು ಹೇಳಿದ್ದೀವೆ. ಈ ಹೊದಲು ಮಾಡಿದ ಪ್ರಯೋಗದಿಂದ ವನಸ್ಪತಿಗಳಿಗೆ ಬೇಕಾಗುವ ಖನಿಜ ಪದಾರ್ಥಗಳು ನಿಯಮಿತವಿರುತ್ತವೆಯೆಂದೂ ಅವು ತೀರ ಸ್ವಲ್ಪ ಪ್ರಮಾಣ ದಿಂದ ನೀರಿನಲ್ಲಿ ಬೆರೆತುಕೊಂಡಿದ್ದರೆ ಮಾತ್ರ ಅವು ವನಸ್ಪತಿಗಳ ಉಪ ಯೋಗಕ್ಕೆ ಬರುತ್ತವೆಂದೂ ಅವುಗಳ ಪ್ರಮಾಣವು ಹೆಚ್ಚಾದರೆ ವನಸ್ಪತಿ ಗಳ ಬೆಳವಣಿಗೆಯು ಕುಗ್ಗುತ್ತದೆಂದೂ ನಮಗೆ ಗೊತ್ತಾಗಿದೆ.

ಇನ್ನು, ಇಷ್ಟು ಸ್ವಲ್ಪ ಪ್ರಮಾಣದಿಂದ ನೀರಿನಲ್ಲಿ ಬೆರೆತುಕೊಂಡಿ ರುವ ಖನಿಜದ್ರವ್ಯಗಳಿಂದ ವನಸ್ಪತಿಗಳ ನಿರ್ವಾಹಕ್ಕೆ ಬೇಕಾಗುವಷ್ಟು ಖನಿಜದ್ರವ್ಯಗಳ ಸಂಚಯವು ವನಸ್ಪತಿಗಳ ಆಹಾರಸಿದ್ಧತೆಯಗೋಸುಗ ಅವುಗಳ ಎಲೆಗಳಲ್ಲಿ ಹ್ಯಾಗಾಗುವದೆಂದು ಯಾರಾದರು ಪ್ರಶ್ನೆಮಾಡಿದರೆ, ಅದಕ್ಕೆ ಉತ್ತರವೇನೆಂದರೆ, ವನಸ್ಪತಿಗಳಲ್ಲಿ ಎಡೆಬಿಡದೆ ನಡೆದಿರುವ ಕೆಲವು ವ್ಯಾಪಾರಗಳ ಮೂಲಕ ಅವುಗಳ ಬೇರುಗಳಿಂದ ಎಲೆಗಳ ವರೆಗೆ ಯಾವಾಗಲು ತಣ್ಣೀರಿನ ಪ್ರವಾಹವು ಹರಿಯುತ್ತಿರುತ್ತದೆ. ಆ ಪ್ರವಾಹದಲ್ಲಿ ಬೆರೆತು ಬಂದ ಖನಿಜಪದಾರ್ಥಗಳು ಎಲೆಗಳಿಗೆ ಬಂದು ಮುಟ್ಟಿದಮೇಲೆ, ಎಲೆಗಳ ತ್ವಚೆಯಲ್ಲಿರುವ ಛಿದ್ರಗಳೊಳಗಿಂದ ನೀರಾಗಿ ನೀರು ಉಗಿಯರೂಪ ದಿಂದ ವಾತಾವರಣಕ್ಕೆ ಹೊರಟುಹೋಗಲು, ಅದರಲ್ಲಿ ಬೆರೆತುಕೊಂಡಿರುವ ಖನಿಜಪದಾರ್ಥಗಳು ನೀರಿನಿಂದ ಬೇರೆಯಾಗಿ ಎಲೆಗಳಲ್ಲಿ ಉಳಿಯುವವು. ಈ ರೀತಿಯಿಂದ ಪ್ರತಿಸಾರೆ ಸ್ವಲ್ಪ ಸ್ವಲ್ಪ ತಮ್ಮ ಎಲೆಗಳಲ್ಲಿ ಬಂದು ಸಂಚಿ ತವಾಗುವ ಖನಿಜಪದಾರ್ಥಗಳಿಂದ ವನಸ್ಪತಿಗಳ ನಿರ್ವಾಹಕ್ಕೆ ಬೇಕಾಗು ವಷ್ಟು ಖನಿಜಪದಾರ್ಥಗಳು ಪೂರೈಸಲ್ಪಡುವವು.

ಸೂರ್ಯನ ಬಿಸಿಲಿನಲ್ಲಿ ಒಂದು ಕಲ್ಲನ್ನೂ ಒಂದು ಬಾನೆಯಲ್ಲಿ ಬೆಳೆ ಯಿಸಿದ ವನಸ್ಪತಿಯನ್ನೂ ಇರಿಸಿ ಪ್ರತಿಯೊಂದರಲ್ಲಿ ಒಂದೊಂದು ಉಷ್ಣ ಮಾಪಕ ಯಂತ್ರವನ್ನಿಟ್ಟು ನಿರೀಕ್ಷಿಸುತ್ತ ಕುಳಿತುಕೊಂಡರೆ ತುಸುಹೊತ್ತಿ ನಲ್ಲಿ ಕಲ್ಲಿನಲ್ಲಿಟ್ಟ ಉಷ್ಣಮಾಪಕಯಂತ್ರದಲ್ಲಿರುವ ಪಾದರಸದ ಕಂಬವು ಏರಹತ್ತುವದು. ಅದರಿಂದ ಸೂರ್ಯನ ಬಿಸಿಲಿಗೆ ಆ ಕಲ್ಲು ಕಾದು ಅದರ ಉಷ್ಣಮಾಪನವು ಏರಿತೆಂದು ಸಿದ್ಧವಾಗುವದು. ವನಸ್ಪತಿಯಲ್ಲಿಟ್ಟ ಉಷ್ಣ

ಮಾಪಕ ಯಂತ್ರದ ಪಾರಜವು ಮೊದಲಿದ್ದಲ್ಲಿಯೇ ಉಳಿಯುವದರಿಂದ ಆ ವನಸ್ಪತಿಯು ಬಿಸಿಲಿನಿಂದ ಕಾಯಲಿಲ್ಲೆಂದು ಗೊತ್ತಾಗುವದು. ಅದ ಕಾಯದಂತೆ ಅದರಲ್ಲಿ ತಣ್ಣೀರಿನ ಪ್ರವಾಹವು ಹರಿಯುತ್ತಿರುವದೋ ಹ್ಯಾಗೆ? ಎಂಬದನ್ನು ಗೊತ್ತುಪಡಿಸಲಿಕ್ಕೆ ಕೆಳಗೆ ಕೊಟ್ಟ ಪ್ರಯೋಗವನ್ನು ಮಾಡುವಾ.

ನೀರಿನ ಸಂಚಾರವು ಬೇರಿನಿಂದ ಎಲೆಗಳ ವರೆಗೆ ಎಡೆಬಿಡದೆ ನಡೆಯಬೇಕಾದರೆ, ಎಲೆಗಳಿಗೆ ಬಂದು ಮುಟ್ಟಿದ ನೀರು ಅಲ್ಲಿಯೇ ಉಳಿಯದೆ ವಾತಾವರಣಕ್ಕೆ ಹೊರಟುಹೋಗುವದು ಅವಶ್ಯವಾಗಿದೆ. ಹೀಗೆ ಆಗದೆ ಎಲೆಗಳಿಗೆ ಬಂದು ಮುಟ್ಟಿದ ನೀರು ಅಲ್ಲಿಯೇ ಉಳಿದಿದ್ದರೆ ಅದು ಎಲೆಗಳನ್ನು ಕೊಳೆಸಿಬಿಡುತ್ತಿತ್ತು. ಬಾಷ್ಪಭವನವೆಂಬ ಕ್ರಿಯೆಯಿಂದ ತಮ್ಮಲ್ಲಿರುವ ನೀರನ್ನು ಉಗಿಯರೂಪದಿಂದ ವಾತಾವರಣಕ್ಕೆ ಕಳುಹಿಸಿಬಿಡುವದಕ್ಕೆ ಎಲೆಗಳ ರಚನೆಯು ಬಹು ಅನುಕೂಲವಾಗಿದೆ. ಎಲೆಯ ಸುತ್ತಲು ಪರೆಯಂಥ ತ್ವಚೆಯಿರುವದು. ಈ ತ್ವಚೆಯಲ್ಲಿ ಅನೇಕ ಛಿದ್ರಗಳಿರುವವು ಎಲೆಯು ಉಳಿದಭಾಗಕ್ಕಿಂತ ಬಹು ವಿಸ್ತಾರವುಳ್ಳದ್ದಾಗಿರುವದು. ಸಾಮಾನ್ಯವಾಗಿ ಸೂರ್ಯನ ಬಿಸಿಲು ತನ್ನ ವೃಷ್ಠಭಾಗದ ಮೇಲೆ ಲಂಬವಾಗಿ ಬೀಳುವಂತೆ ಅದು ತನ್ನನ್ನು ಇಟ್ಟುಕೊಳ್ಳಲಿಕ್ಕೆ ಯತ್ನಿಸುತ್ತಿರುವದು. ಇವೆಲ್ಲ ಸಂಗತಿಗಳು ಬಾಷ್ಪಭವನಕ್ಕೆ ಬಹು ಅನುಕೂಲವಾಗಿರುವಂಥವು. ನೀರಿನ ಉಗಿಯು ಅದೃಶ್ಯವಾಗಿರುವದರಿಂದ ಅದು ವನಸ್ಪತಿಗಳ ಎಲೆಗಳಿಂದ ವಾತಾವರಣಕ್ಕೆ ಹೊರಟುಹೋಗುವಾಗ ನಮ್ಮ ಕಣ್ಣಿಗೆ ಕಾಣುವದಿಲ್ಲ. ಆದರೆ ಅಗಲಬಾಯುಳ್ಳ A ಎಂಬ ಪರೀಕ್ಷಾನಳಿಕೆಯನ್ನು ತೆಗೆದುಕೊಂಡು, ಯಾವದೊಂದು ವನಸ್ಪತಿಯ ಹಸುರುಬಣ್ಣದ ಎಲೆಯತುಂಬಿ ಅರಳೆಯನ್ನು ಸುತ್ತಿ, ಆ ಎಲೆಯನ್ನು ಪರೀಕ್ಷಾನಳಿಕೆಯಲ್ಲಿ ಸೇರಿಸಿ, ಅದರ ತುಂಬಿಗೆ ಸುತ್ತಿದ ಅರಳೆಯನ್ನು ನಳಿಕೆಯ ಬಾಯಿಗೆ ಬೆಣೆಯಂತೆ ಕೂಡಿಸಿ ಹಾಗೇ ಬಿಟ್ಟರೆ, ಇಲ್ಲವ ೨೦ನಯ ಆಕೃತಿಯಲ್ಲಿ ತೋರಿಸಿದಂತೆ ಯಾವದೊಂದು ವನಸ್ಪತಿಯ ಟೊಂಗೆಯನ್ನು ನೀರು ತುಂಬಿದ ಕಾಚಿನಪಾತ್ರೆಯಲ್ಲಿಟ್ಟು, ಈಚರದೊಂದು ಎಲೆಯನ್ನು ಮೇಲೆ ಹೇಳಿದಂತೆ ಪರೀಕ್ಷಾನಳಿಕೆಯಲ್ಲಿ ಸೇರಿಸಿ, ಅದು ಬೀಳದಂತೆ ನಳಿಕೆಗೆ ದಾರಕಟ್ಟಿ ಆಕೃತಿಯಲ್ಲಿ ತೋರಿಸಿದಂತೆ ತೊಗಹಾಳದರ ಬಂದರಹು. ತಾಸುಗಳಲ್ಲಿ ಆ ಪರೀಕ್ಷಾನಳಿಕೆಯ

ಬಳಬದಿಗೆ ನೀರಿನ ಹನಿಗಳು ಅಂಟಿಕೊಂಡದ್ದು ಕಂಡುಬರುವದು. ಪರೀಕ್ಷಾನಳಿಕೆಯನ್ನು ಅದೇ ಸ್ಥಿತಿಯಲ್ಲಿ ಇನ್ನೂ ಕೆಲವು ತಾಸುಗಳವರೆಗೆ ಇರಗೊಟ್ಟರೆ, ಆ ಅವಧಿಯಲ್ಲಿ ಎಲೆಯ ಛಿದ್ರಗಳೊಳಗಿಂದ ಹೊರಬಿದ್ದ ನೀರಿನ ಹನಿಗಳು ಒಟ್ಟುಗೂಡಿ ಸುಮಾರು ಒಂದು ಚಮಚೆಯಷ್ಟು ನೀರು ಅದರಲ್ಲಿ ಕೂಡಬೀಳುವದು. ಈ ಪ್ರಯೋಗದಿಂದ ಪರೀಕ್ಷಾನಳಿಕೆಯಲ್ಲಿ ಸೇರಿಸಿದ ಎಲೆಯಷ್ಟು ಕ್ಷೇತ್ರವುಳ್ಳ ಭಾಗದಿಂದ ಕೊಟ್ಟ ಅವಧಿಯಲ್ಲಿ ಎಷ್ಟು ನೀರು ಹೊರಬೀಳುವದೆಂಬದು ಸಹಜವಾಗಿ ಗೊತ್ತಾಗುವದು. ವನಸ್ಪತಿಗಳಿಗೆ ಈ ತರದ ಸಾವಿರಾರು ಎಲೆಗಳಿರುವದರಿಂದ ಪ್ರತಿಯೊಂದು ವನಸ್ಪತಿಯು ಪ್ರತಿದಿನ ಬಿಡುವ ನೀರಿನ ಪರಿಮಾಣವು ಎಷ್ಟೆಂಬದನ್ನು ಗಣಿತಶಾಸ್ತ್ರದಿಂದ ಸುಲಭವಾಗಿ ತಿಳಕೊಳ್ಳಬಹುದು. ಆ ನೀರಿನ ಪರಿಮಾಣವು ನಮಗೆ ಗೊತ್ತಾಗಲು, ನಾವು ಆಶ್ಚರ್ಯಚಕಿತರಾಗದೆ ಇರಲಾರೆವು. ವನಸ್ಪತಿಯ ಎಲೆಗಳಿಂದ ವಾತಾವರಣಕ್ಕೆ ಉಗಿಯಕೂಪದಿಂದ ನೀರು ಹೊರಟುಹೋಗುವ ವ್ಯಾಪಾರಕ್ಕೆ ಜಲವಿಮೋಚನೆ (Transpiration), ಎಂಬ ಹೆಸರುಂಟು.

ಜಲವಿಮೋಚನೆಯ ವ್ಯಾಪಾರದಲ್ಲಿ ಎಲೆಗಳ ಕರ್ತವ್ಯವೇ ಹೆಚ್ಚಾಗಿರುವದೆಂಬದನ್ನು ತೋರಿಸುವದಕ್ಕಾಗಿ ಇನ್ನೊಂದು ಸುಲಭ ಪ್ರಯೋಗವನ್ನು ಮಾಡುವಾ.

ಒಂದು ಲಿಟರ ಎಂದರೆ ೧.೭ ಪಾಯಿಂಟ ನೀರು ಹಿಡಿಯುವ ಮೂರು ಸೀಸೆಗಳನ್ನು ತೆಗೆದುಕೊಂಡು A ಸೀಸೆಯಲಿ ಕುತ್ತಿಗೆಯವರೆಗೆ ನೀರು ತುಂಬುವಾ (ಆಕೃತಿ ೩೧). 'B' ಸೀಸೆಯಲ್ಲಿ ಅಷ್ಟೇ ನೀರು ತುಂಬಿ ಅದರಲ್ಲಿ ಎಲೆಗಳನ್ನು ತರಿದ ಒಂದು ಟೊಂಗೆಯನ್ನು ಇಡುವಾ. C ಸೀಸೆಯಲ್ಲಿ ಅಷ್ಟೇ ನೀರು ತುಂಬಿ ಎಲೆಗಳುಳ್ಳ ಅದೇ ಜಾತಿಯ ಗಿಡದ ಟೊಂಗೆಯನ್ನು ಇಡುವಾ. ಮರುದಿವಸ ನೀರಿನ ಪಾತಳಿಯನ್ನು ನೋಡಲು A ಸೀಸೆಯ ನೀರು a ಗುರುತಿನಿಂದ b ಗುರುತಿನವರೆಗೆ, B ಸೀಸೆಯಲ್ಲಿ a' ಇಂದ b' ವರೆಗೆ, C ಸೀಸೆಯಲ್ಲಿ a'' ಇಂದ b'' ವರೆಗೆ ಇಳಿದಿರುವದು ಕಂಡುಬರುವದು. ಇದರಿಂದ C ಸೀಸೆಯಲ್ಲಿ ನೀರಿನ ಪಾತಳಿಯು ಎಲ್ಲಕ್ಕೂ ಹೆಚ್ಚು ಕೆಳಗಿಳಿದಿರುವದಕ್ಕೆ ಎಲೆಗಳ ಜಲವಿಮೋಚನೆಯೇ ಕಾರಣವೆಂಬದು ಸಿದ್ಧವಾಗುವದು.

12

ಮೇಲೆ ಹೇಳಿದ ಜಲವಿಮೋಚನೆ (Transpiration) ಯೆಂಬ ವನಸ್ಪತಿಗಳ ಜೀವನ ವ್ಯಾಪಾರವು ಕೇವಲ ಯಾಂತ್ರಿಕ ವ್ಯಾಪಾರವಿರದೆ ಅವು ತಮ್ಮ ಸ್ವಂತ ಹಿತಕ್ಕಾಗಿ ಮನಮುಟ್ಟಿ ಮಾಡುವ ಹಲವು ಜೀವನ ವ್ಯಾಪಾರಗಳಲ್ಲಿ ಒಂದಾಗಿದೆ. ಎಷ್ಟೋ ವನಸ್ಪತಿಗಳ ಎಲೆಗಳ ಮೇಲಿರುವ ಪರೆಯಂಥ ತ್ವಚೆಯಲ್ಲಿರುವ ಎಲ್ಲ ಛಿದ್ರಗಳು ನೀರಿನ ಉಗಿಯು ಹಾಯಿಸು ಹೋಗುವಷ್ಟು ದೊಡ್ಡವಿರುವದಿಲ್ಲ. ಎಲೆಗಳ ಕೆಳಮ್ಯೆಗಿರುವ ಪರೆಯಲ್ಲಿ ಮಾತ್ರ ಈ ತರದ ಛಿದ್ರಗಳು ವಿಪುಲವಾಗಿರುವವೆಂಬ ಸಂಗತಿಯು ಇನ್ನು ಮೇಲೆ ನಾವು ಮಾಡುವ ಪ್ರಯೋಗದಿಂದ ನಮಗೆ ಗೊತ್ತಾಗುವದು. ಈ ತರದ ಛಿದ್ರಗಳ ಬಾಯಿಯು ಹೆಚ್ಚು ಹೆಚ್ಚು ಅಗಲಾಗತೆರೆದಂತೆ ನೀರು ಹೆಚ್ಚು ಹೆಚ್ಚು ಪ್ರಮಾಣದಿಂದ ಉಗಿಯಾಗಿ ವಾತಾವರಣಕ್ಕೆ ಹೊರಟು ಹೋಗುವದು. ಅವುಗಳ ಬಾಯಿಯು ಕಿರಿದಾದಂತೆ ನೀರು ಕಡಿಮೆ ಪ್ರಮಾಣದಿಂದ ಉಗಿಯ ರೂಪದಿಂದ ಹೊರಬೀಳುವದು. ಪರಿಸ್ಥಿತಿಗೆ ಅನುಸರಿಸಿ ವನಸ್ಪತಿಯು ತನ್ನ ಎಲೆಗಳ ಕೆಳಮ್ಯೆಗಿರುವ ತ್ವಚೆಯಲ್ಲಿರುವ ಛಿದ್ರಗಳ ಬಾಯಿಯ ಪ್ರಸರಣಾಕುಂಚನೆಗಳನ್ನು ಮಾಡುತ್ತಿರುವದು.

ಸೂರ್ಯನ ಪ್ರಖರವಾದ ಉಷ್ಣತೆಯಿಂದ ಹವೆಯು ಉಷ್ಣವಾನವಾಗಿರಲಾಗಿ, ಅದರ ದುಷ್ಪರಿಣಾಮಗಳು ವನಸ್ಪತಿಗಳ ಮೇಲೆ ಆಗ ಹತ್ತುವವು. ಈ ಸಂಗತಿಯು ವನಸ್ಪತಿಗಳಿಗೆ ಕೂಡಲೆ ಗೊತ್ತಾಗಿ, ಅವು ತಮ್ಮ ಎಲೆಗಳ ಕೆಳಮ್ಯೆಮೇಲಿರುವ ತ್ವಚೆಯ ಛಿದ್ರಗಳನ್ನು ಅಗಲಾಗಿ ತೆರೆದ ಹೆಚ್ಚು ನೀರನ್ನು ಉಗಿಯ ರೂಪದಿಂದ ಹವೆಗೆ ಬಿಟ್ಟು ಬಿಡಲು, ಬೇರುಗಳು ಭೂಮಿಯೊಳಗಿನ ನೀರನ್ನು ಮತ್ತೆ ಹೀರಿಕೊಂಡು ಎಲೆಗಳಿಗೆ ಕಳಿಸಿ ಕೊಡಹತ್ತುವವು. ಇದರಿಂದ ವನಸ್ಪತಿಗಳ ಮೈಯೊಳಗೆಲ್ಲ ತಣ್ಣೀರಿನ ಪ್ರವಾಹಗಳು ಹರಿಯ ಹತ್ತುವ ಕಾರಣ ಅವುಗಳ ಉಷ್ಣವಾನವೇರದೆ ಇದ್ದಷ್ಟೇ ಉಳಿಯುವದು. ಇದಕ್ಕೆ ವಿಪರೀತವಾಗಿ ಹವೆಯುಷ್ಣತೆಯ ಅಂಶವು ಹೆಚ್ಚಾದರೆ ವನಸ್ಪತಿಗಳು ಆ ಛಿದ್ರಗಳ ಬಾಯಿ ಮುಚ್ಚುವಂತೆ ಮಾಡಿ, ಬೇರುಗಳಿಂದ ಮೇಲಕ್ಕೇರುವ ನೀರಿನ ಪ್ರವಾಹಗಳನ್ನು ಕಟ್ಟು ಮಾಡುವವು. ಈ ಗುಣದ ಮೂಲಕ ತಾವು ದೊರಕಿಸಿಕೊಂಡ ನೀರಿನ ಸಂಚಯದ ವಿನಿಯೋಗವನ್ನು ತಮ್ಮ ಸ್ವಂತ ಹಿತಕ್ಕಾಗಿ ಮಾಡಿಕೊಳ್ಳುವ ಶಕ್ತಿಯು ವನಸ್ಪತಿಗಳಿಗುಂಟಾಗುತ್ತದೆ.

ಇನ್ನು, ವನಸ್ಪತಿಗಳ ಎಲೆಗಳ ಕೆಳಮೈಮೇಲಿರುವ ತ್ವಚೆಯಲ್ಲಿ ಮಾತ್ರ ಉಗಿಯ ರೂಪ ಹೊಂದಿದ ನೀರನ್ನು ಹೊರಗೆ ಬಿಟ್ಟು ಬಿಡುವಂಥ ಛಿದ್ರಗಳಿರುವವೆಂಬ ಸಂಗತಿಯನ್ನು ಸಿದ್ಧ ಮಾಡಿ ತೋರಿಸುವದಕ್ಕಾಗಿ ಕೆಳಗೆ ಕೊಟ್ಟ ಪ್ರಯೋಗ ಮಾಡುವಾ.

ಒಂದೇ ವನಸ್ಪತಿಯ ಅಷ್ಟೇ ಕ್ಷೇತ್ರವುಳ್ಳ ಹಾಗು ಭರದಿಂದ ಬೆಳೆದ ಮೂರು ಎಲೆಗಳನ್ನು ಒಂದೇ ಕಾಲಕ್ಕೆ ಕೊಯ್ದು ತೆಗೆದು ಒಂದೇ ಆಕೃತಿಯಲ್ಲಿ ತೋರಿಸಿದಂತೆ ಅವುಗಳ ತುಂಬಿಗೆ ದಾರ ಕಟ್ಟಿ ಬಿಸಲಿನಲ್ಲಿ ತೂಗ ಹಾಕುವಾ. A ಎಲೆಯನ್ನು ಹಾಗೇ ಬಿಟ್ಟು B ಎಲೆಯ ಮೇಲ್ಮೈಗೆ ಬೆಡಲೆ ಣ್ಣೆಯಲ್ಲಿ ಮೇಣವನ್ನು ಬೆರೆಯಿಸಿ, ಕಾಸಿ ಮಾಡಿದ ಲೇಪವನ್ನು ತೊಡೆಯುವಾ. C ಎಲೆಯ ಕೆಳಮೈಗೆ ಅದೇ ಲೇಪವನ್ನು ಹಚ್ಚುವಾ. ಈ ತರದ ಸಿದ್ಧತೆಯಾದ ಮೇಲೆ ಆ ಮೂರು ಎಲೆಗಳನ್ನು ನಿರೀಕ್ಷಿಸುತ್ತ ಕುಳಿತುಕೊಂಡರೆ, ಒಂದು ತಾಸಾದ ಮೇಲೆ ಚಿತ್ರದಲ್ಲಿ ತೋರಿಸಿದಂತೆ A ಹಾಗು B ಎಲೆಗಳು ಮುದುಡಿ ಬಣಗಿ ಹೋಗುವದು ಕಂಡು ಬರುವದು. ಹೀಗಾಗುವ ಕಾರಣವೇನಂದರೆ, ಆ ಎಲೆಗಳ ಕೆಳಮೈಯಲ್ಲಿರುವ ಛಿದ್ರಗಳು ಆ ಎಲೆಗಳ ಮೇಲೆ ಬಿದ್ದ ಸೂರ್ಯನ ಬಿಸಲಿನ ಮೂಲಕ ತಮ್ಮ ಬಾಯಿ ತೆರೆದು ಆ ಎಲೆಗಳಲ್ಲಿರುವ ನೀರನ್ನು ಹೊರಗೆ ಬಿಟ್ಟಿದ್ದರಿಂದ ಅವುಗಳಲ್ಲಿ ತುಂಬಿಕೊಂಡಿರುವ ರಸತುಂಬಿದ ಕೋಶಗಳು ಮುದುಡಿ ಸಣ್ಣಾಗಲು ಅವು ಬಣಗಿ ಹೋದವು. ಕೆಳಮೈಗೆ ಲೇಪವನ್ನು ಹಚ್ಚಿದ C ಎಲೆಯ ಮಾತ್ರ ನೀರು ಹೊರಗೆ ಹೋಗದ ಕಾರಣ ಇದ್ದಂತೆ ಉಳಿದಿರುವದು ನಮ್ಮ ನಿದರ್ಶನಕ್ಕೆ ಬರುವದು.

ಮೇಲಿನ ಪ್ರಯೋಗದಿಂದ ಎಲೆಗಳಲ್ಲಿರುವ ರಸತುಂಬಿದ ಕೋಶಗಳು ಆ ರಸದಲ್ಲಿರುವ ನೀರು ಹೊರಟು ಹೋಗಲು ಸಂಕುಚಿತವಾಗುತ್ತವೆಂಬದು ಗೊತ್ತಾಯಿತು. ಆ ಕೋಶಗಳು ಸಂಕುಚಿತವಾಗುವದು ಪದಾರ್ಥಗಳ ಅನ್ಯೋನ್ಯ ಮಿಶ್ರಣ * (Osmosis) ವೆಂಬ ವ್ಯಾಪಾರಕ್ಕೆ

---

* ಒಂದರೊಳಗೊಂದು ಬೆರೆತುಕೊಳ್ಳುವ ಪದಾರ್ಥಗಳು ಛಿದ್ರಮಯವಾದ ಹಾಗು ತಿಳುವಾಗಿರುವ ಪದಾರ್ಥದಿಂದ ವಿಂಗಡಿಸಲ್ಪಟ್ಟಾಗ, ಆ ಛಿದ್ರಗಳೊಳಗಿಂದ ಪರಸ್ಪರವಾಗಿ ಒಂದರೊಳಗೊಂದು ಕೂಡಿಕೊಳ್ಳುವ ವ್ಯಾಪಾರಕ್ಕೆ

ಬಹು ಅನುಕೂಲವಾಗುವದು. ಜಲವಿಸರ್ಜನೆಯಿಂದ ಎಲೆಗಳಿ ಬಂದು ಮುಟ್ಟಿದ ನೀರು ವಾತಾವರಣಕ್ಕೆ ಹೊರಟು ಹೋಗಲು ಅದರಲ್ಲಿ ಬೆರೆತು ಬಂದ ಖನಿಜ ದ್ರವ್ಯಗಳು ನೀರಿನಿಂದ ವಿಂಗಡಿಸಲ್ಪಟ್ಟು ಎಲೆಗಳ ಕೋಶಗಳಲ್ಲಿ ಉಳಿಯುವವು. ಇದರಿಂದ ಎಲೆಗಳಲ್ಲಿ ಹೆಚ್ಚು ದಹನಾರ್ಹ ಪದಾರ್ಥಗಳು ಉಳಿಯುವವು.

ಎಲೆಗಳಿಂದ ಬೇರುಗಳ ಕಡೆಗೆ ಹೋದ ಹಾಗೆ ರಸವಾಹಕ ನಳಿಗಗಳಲ್ಲಿರುವ ಹಾಗು ಖನಿಜದ್ರವ್ಯಗಳು ಬೆರೆತುಕೊಂಡಿರುವ ನೀರಿನ ಥರಗಳ ವಿಶಿಷ್ಟ ಗುರುತ್ವವು ಕಡಿಮೆಯಾಗುತ್ತ ಹೋಗಿರುವದರಿಂದ ಈ ವ್ಯಾಪಾರದ ಯೋಗದಿಂದ ಹೆಚ್ಚು ನೀರು ಮೇಲಕ್ಕೇರಲಿಕ್ಕೆ ಅಸ್ಪದವಾಗುವದು. ಈ ವ್ಯಾಪಾರದ ವಿವೇಚನವನ್ನು ಪದಾರ್ಥ ವಿಜ್ಞಾನ ಶಾಸ್ತ್ರದಲ್ಲಿ ಸಮಗ್ರವಾಗಿ ಮಾಡಿರುವರು. ಆದರೂ ಸುಲಭವಾದ ಪ್ರಯೋಗದಿಂದ ಇದನ್ನು ತಿಳಿದುಕೊಳ್ಳಬೇಕಾದರೆ ೩೩ನೇ ಆಕೃತಿಯಲ್ಲಿ ತೋರಿಸಿದಂತೆ A ಎಂಬ ಕಾಜಿನ ಲಾಳಿಕೆಯನ್ನು ತೆಗೆದುಕೊಂಡು ಅದರ ಬಾಯಿಗೆ B ಎಂಬ ಅರಿವೆಯ ಇಲ್ಲವೆ ಕಾಗದದ ತುಂಡನ್ನು ಕಟ್ಟಿ, ಅದರಲ್ಲಿ ೪ ಗುರುತಿನ ವರೆಗೆ ಬರುವಷ್ಟು ಸಕ್ಕರೆಯ ಪಾಕವನ್ನು ಸುರುವಿ, ನೀರು ತುಂಬಿದ C ಎಂಬ ಪಾತ್ರೆಯಲ್ಲಿ ಆಕೃತಿಯಲ್ಲಿ ತೋರಿಸಿದಂತೆ ಇಟ್ಟು ಕೆಲವು ತಾಸುಗಳ ಮೇಲೆ

ಓಸ್ಮಾಸಿಸ್ (Osmosis) ಎಂಬ ಹೆಸರು. ಸಕ್ಕರೆಯ ಪಾಕವನ್ನು ಒಂದು ಅರಿವೆಯ ಚೀಲದಲ್ಲಿ ತುಂಬಿ ಅದನ್ನು ನೀರು ತುಂಬಿದ ಪಾತ್ರೆಯಲ್ಲಿಟ್ಟರೆ, ಅರಿವೆಯಿಂದ ವಿಂಗಡಿಸಲ್ಪಟ್ಟ ಹಾಗು ಒಂದರಗೂಡೊಂದು ವಿಶ್ರವಾಗುವ ಸಕ್ಕರೆಯ ಪಾಕ ಹಾಗು ನೀರು ಇವುಗಳು ಅರಿವೆಯಲ್ಲಿರುವ ಛಿದ್ರಗಳೊಳಗೆ ಹಾಯ್ದು ಒಂದರಗೂಡೊಂದು ವಿಶ್ರವಾಗುವವು. ಅಂದರೆ ನೀರು ಸಕ್ಕರೆಯ ಪಾಕವನ್ನು ಹಾಕಿದ ಚೀಲದಲ್ಲಿ ಸೇರಿ ಆ ಪಾಕದೊಡನೆ ಬೆರೆತುಕೊಳ್ಳುವದು; ಹಾಗು ಪಾಕವು ಚೀಲದಿಂದ ಹೊರಬಿದ್ದು ನೀರಿನ ಸಂಗಡ ಕೂಡಿಕೊಳ್ಳುವದು. ಕೊಟ್ಟ ಅವಧಿಯಲ್ಲಿ ಆ ಚೀಲದಲ್ಲಿ ಸೇರಿದ ನೀರಿನ ಪರಿಮಾಣವನ್ನು ಅದರಿಂದ ಹೊರಬಿದ್ದ ಪಾಕದ ಪರಿಮಾಣಕ್ಕೆ ಹೋಲಿಸಿ ನೋಡಿದರೆ ನೀರಿನ ಪರಿಮಾಣವು ಹೆಚ್ಚಾಗಿ ಚೀಲವು ಹೆಚ್ಚು ಉಬ್ಬಿಕೊಂಡಿರುವದು ಕಂಡು ಬರುವದು. ಇದರಿಂದ ಈ ವ್ಯಾಪಾರವು ಪದಾರ್ಥಗಳ ವಿಶಿಷ್ಟಗುರುತ್ವವನ್ನೂ ಅವಲಂಬಿಸಿರುವದೆಂಬದು ನಮಗೆ ಮನವರಿಕೆಯಾಗುವದು.

ನೋಡಿದರೆ ಲಾಳಕಿಯ ನಲಿಕೆಯಲ್ಲಿ ನೀರು W ಗುರುತಿನ ವರೆಗೆ ಏರಿದ್ದು ಕಂಡು ಬರುವದು.

ವನಸ್ಪತಿಗಳ ಬೇರುಗಳು ಹೀರಿಕೊಂಡ ನೀರು ಎಲೆಗಳಿಗೆ ಹೋಗಿ ಮುಟ್ಟುವಂತೆ ಮಾಡುವದರಲ್ಲಿ ಮೇಲೆ ಹೇಳಿದ ವ್ಯಾಪಾರವು ಸಹಾಯ ಮಾಡುವಂತೆ ಬೇರುಗಳ ಒತ್ತುವಿಕೆ (Root Pressure) ಯಾದರೂ ಅದೇ ಕೆಲಸಕ್ಕೆ ತಕ್ಕ ಸಹಾಯವನ್ನು ಮಾಡುತ್ತಿರುವದು. ಬೇರುಗಳ ಒತ್ತುವಿಕೆಯಿಂದ ನೀರು ದೊಡ್ಡ ಪ್ರಮಾಣದಿಂದ ವನಸ್ಪತಿಗಳಲ್ಲಿ ಸೇರಿಕೊಳ್ಳುತ್ತದೆಂಬದನ್ನು ಮನಗಾಣುವದಕ್ಕಾಗಿ ಕೆಳಗೆ ಕೊಟ್ಟ ಪ್ರಯೋಗವನ್ನು ಮಾಡುವಾ.

ಬಾನೆಯಲ್ಲಿ ಬೆಳೆಸಿದ ನಿರೋಗಿಯಾದ ಒಂದು ವನಸ್ಪತಿಯನ್ನು ಆರಿಸಿಕೊಂಡು, ಅದರ ಕಾಂಡವು ನಾಲ್ಕು ಬೊಟ್ಟು ಉಳಿಯುವಂತೆ ಉಳಿದ ಭಾಗವನ್ನು ಕೊಯ್ದು ಜಲ್ಲಿ, ೫ನೇ ಚಿತ್ರದಲ್ಲಿ ತೋರಿಸಿದಂತೆ ಅದರ ಸುತ್ತಲು ಅರಿವೆಯ ಪಟಿಯನ್ನು ಸುತ್ತಿ ೧½ ಭೂಟು ಉದ್ದವಾದ ಹಾಗು ಆರಪಾರಾದ ಕಾಜಿನ ನಲಿಕೆಯನ್ನು ಆಕೃತಿಯಲ್ಲಿ ತೋರಿಸಿದಂತೆ ಕೂಡಿಸುವಾ. ಕೊಯಿದ ಭಾಗವು ಒಣಗದಂತೆ ಅದರ ಮೇಲೆ ಒಂದೆರಡು ನೀರಿನ ಹನಿಗಳನ್ನು ಬಿಟ್ಟು, ಬಾನೆಯಲ್ಲಿರುವ ಮಣ್ಣಿನ ಮೇಲೆ ನೀರು ಸುರುವಿದರೆ ಪ್ರತಿದಿನ ಅನಲಿಕೆಯಲ್ಲಿ ಏರುತ್ತಿರುವ ನೀರಿನ ಕಂಬದ ಎತ್ತರವು ಬೆಳೆಯುತ್ತಹೋಗುವದು ನಮ್ಮ ನಿದರ್ಶನಕ್ಕೆ ಬರುವದು. ಈ ಪ್ರಯೋಗದ ಸಲುವಾಗಿ ಆರಿಸಿಕೊಂಡ ವನಸ್ಪತಿಯ ಎಲೆಗಳನ್ನು ತೆಗೆದುಹಾಕಿರುವದರಿಂದ ಜಲವಿಮೋಚನೆ (Transpiration) ಯ ವ್ಯಾಪಾರವು ನಡೆಯಲಾರದೆಂದು ಗ್ರಹಿಸಲಿಕ್ಕೆ ಅಡ್ಡಿಯಿಲ್ಲ. ಕಾಜಿನ ನಲಿಕೆಯಲ್ಲಿ ದಿನೇ ದಿನೇ ಹೆಚ್ಚುನೀರನ್ನು ಏರಿಸಲಿಕ್ಕೆ ಬೇರುಗಳ ಒತ್ತುವಿಕೆಯೇ ಮೂಲಕಾರಣವಾಗಿದೆ.

ಸ್ವಭಾವಿಕ ಪರಿಸ್ಥಿತಿಯುಳ್ಳ ವನಸ್ಪತಿಗಳಲ್ಲಿ ನೀರಿನ ಸಂಚಾರವು ತಕ್ಕ ಪ್ರಮಾಣದಿಂದ ಎಡೆಬಿಡದೆ ನಡೆಯುವಂತೆ ಮಾಡುವದರಲ್ಲಿ ಜಲವಿಮೋಚನೆಯೂ ಬೇರುಗಳ ಒತ್ತುವಿಕೆಯೂ ಸಾಧನೀಭೂತವಾಗಿವೆ. ಸೂಕ್ಷ್ಮವಿಚಾರಮಾಡಿ ನೋಡಿದರೆ, ಪ್ರತಿಯೊಂದು ವನಸ್ಪತಿಗಿರುವ ಎಲೆಗಳ ಕ್ಷೇತ್ರಫಲವು ಅದರ ಸ್ಥಿತಿರೀತಿಗೆ ತಕ್ಕದ್ದಾಗಿರುವದು. ತುಸು ಎಲೆಗಳುಳ್ಳ ಬಾಳೆ ಮೊದಲಾದ ವನಸ್ಪತಿಗಳ ಎಲೆಗಳು ಬಹು ವಿಸ್ತಾರ

ವುಳ್ಳವುಗಳಾಗಿರುವವು. ಮಾವು, ಹಲಸು ಮೊದಲಾದ ವೃಕ್ಷಗಳಿಗೆ ಸಣ್ಣ ಸಣ್ಣ ಎಲೆಗಳಿರುವದರಿಂದ ಅವುಗಳ ಸಂಖ್ಯೆಯು ಸಾವಿರಾರು ಇರುವದು.

ಇನ್ನು ವನಸ್ಪತಿಗಳ ಆಹಾರದ ಸಿದ್ಧತೆ ಹಾಗು ಅವುಗಳಲ್ಲಿ ನಡೆವಿರುವ ನೀರಿನ ಸಂಚಾರ ಮೊದಲಾದವುಗಳಿಗೆ ಸೂರ್ಯನ ಪ್ರಕಾಶದ ಮಹತ್ವವು ಹೆಚ್ಚಿರುವದರಿಂದ ಆ ವಿಷಯದ ವಿವೇಚನವನ್ನು ಮುಂದಿನ ಅಧ್ಯಾಯದಲ್ಲಿ ಮಾಡುವೆವು.

೯ನೇ ಅಧ್ಯಾಯವು.

ವನಸ್ಪತಿಗಳಿಗಿರುವ ಸೂರ್ಯನ ಪ್ರಕಾಶದ ಅವಶ್ಯಕತೆಯು.

ವನಸ್ಪತಿಗಳು ಸಜೀವ ವಸ್ತುಗಳಾಗಿರುವದರಿಂದ ಅವು ಕಲ್ಲು, ಮಣ್ಣು ಮೊದಲಾದ ನಿರ್ಜೀವಪದಾರ್ಥಗಳಷ್ಟು ಉಷ್ಣತೆ, ಪ್ರಕಾಶ ಮೊದಲಾದ ಸೃಷ್ಟಶಕ್ತಿಗಳಿಗೆ ಕೇವಲ ಅಧೀನವಾಗಿರುವದಿಲ್ಲ. ಆ ಶಕ್ತಿಗಳನ್ನು ವನಸ್ಪತಿಗಳು ಆದಷ್ಟು ಮಟ್ಟಿಗೆ ತಮ್ಮ ಜೀವನವ್ಯಾಪಾರಗಳನ್ನು ಜರುಗಿಸುವದರಲ್ಲಿ ಉಪಯೋಗಿಸಿಕೊಳ್ಳುವದಕ್ಕೆ ಯತ್ನಿಸುತ್ತಿರುವವು. ಪರಿಸ್ಥಿತಿಯ ಪರಿಣಾಮಗಳು ಇತರ ಪದಾರ್ಥಗಳ ಮೇಲಾಗುತ್ತಿರುವಂತೆ ವನಸ್ಪತಿಗಳ ಮೇಲಾದರೂ ಆಗುತ್ತಲೇ ಇರುವವು. ಆದರೆ ಅವುಗಳ ದುಷ್ಪರಿಣಾಮಗಳು ತಮ್ಮ ಮೇಲೆ ಆಗಗೊಡದಂತೆ ವನಸ್ಪತಿಗಳು ಜಾಗರೂಕವಾಗಿರುವವು.

ಹವೆಯ ಉಷ್ಣಮಾನವು ಸೂರ್ಯನ ಬಿಸಲಿನಿಂದ ಏರಹತ್ತಿದ ಹಾಗೆ ಹವೆಯ ಆರ್ದ್ರತಾಗ್ರಾಹಕ ಶಕ್ತಿಯು (Point of Saturation) ಹೆಚ್ಚಾಗಿ ಹತ್ತುವದು. ಆದರಿಂದ ನೆನ್ನೆ ಮೈಯೊಳಗಿರುವ ನೀರು ಬೆವರಿನ ರೂಪದಿಂದ ಹೊರಬಿದ್ದು ವಾತಾವರಣಕ್ಕೆ ಉಗಿಯ ರೂಪದಿಂದ ಹೋಗುವಂತೆ ವನಸ್ಪತಿಗಳಲ್ಲಿರುವ ನೀರಾದರೂ ವಾತಾವರಣಕ್ಕೆ ಹೊರಟು ಹೋಗುವದು. ನೀರು ಹೊರಟು ಹೋದ ಭಾಗಕ್ಕೆ ವನಸ್ಪತಿಯ ಬೇರುಗಳು ತಗೆದುಕೊಂಡ ಹೊಸ ನೀರು ಬಂದು ಮುಟ್ಟದಿದ್ದರೆ ಅವು ಮುದುಡ ಹತ್ತಿ ಕಡೆಗೆ ಒಣಗಿ ಹೋಗುವವು. ಈ ತರದ ಹಾನಿಕಾರಕ ಪರಿಣಾಮಗಳು ಆಗಗೊಡದಂತೆ ಬೇರುಗಳ ಒತ್ತುವಿಕೆಯೂ (Root Pressure) ಜಲವಿಸರ್ಜನೆ (Transpiration) ಎಂಬ ಕಾರ್ಯವೂ ತಕ್ಕ ಕಾಲಕ್ಕೆ ಪ್ರಾರಂಭವಾಗಿ, ವನಸ್ಪತಿಗಳ ಮೈಯೊಳಗೆ ತಣ್ಣೀರಿನ

ಪ್ರವಾಹವು ಹರಿಯುವಂತೆ ಮಾಡಿ, ನೀರು ಹೊರಟು ಹೋದ ಭಾಗಗಳಿಗೆ ಪೂಸದಾಗಿ ನೀರನ್ನು ಮುಟ್ಟಿಸಿ, ಅವುಗಳ ಗಟ್ಟಿತನವು ಕುಂದದಂತೆ ವ್ಯವಸ್ಥೆಮಾಡುತ್ತಿರುವವೆಂಬ ಸಂಗತಿಯು ಹಿಂದಿನ ಅಧ್ಯಾಯದಲ್ಲಿ ವಿವರಿಸಲ್ಪಟ್ಟಿದೆ.

ಪ್ರಕಾಶವೆಂಬ ಶಕ್ತಿಯ ಉಪಯೋಗವನ್ನು ಮಾಡಿಕೊಂಡು, ವನಸ್ಪತಿಗಳು ತಮಗೆ ಬೇಕಾದ ಗಂಜೀಹಿಟ್ಟು, ಅಂಟು, ಸಕ್ಕರೆ, ಗಿಣ್ಣು, ಲೋಳೆ, ಸೇಂದ್ರಿಯ ಎಣ್ಣೆಗಳು ಇವೇ ಮೊದಲಾದ ಆಹಾರದ ಪದಾರ್ಥಗಳನ್ನು ತಮ್ಮ ಎಲೆಗಳಲ್ಲಿ ಸಿದ್ಧ ಪಡಿಸುತ್ತಿರುವದರಿಂದ, ಅವುಗಳಿಗೆ ಪ್ರಕಾಶದ ಮಹತ್ವವು ಹೇಳಕೂಡದಷ್ಟು ಇರುವದು. ಕಬ್ಬಿಣದ ಕ್ಷಾರಗಳ ಯೋಗದಿಂದ ವನಸ್ಪತಿಗಳ ಎಲೆಗಳಲ್ಲಿ ಪತ್ರಹರಿತ್ತು (Chlorophyll) ಎಂಬ ಒಂದು ತರದ ಹಸರು ಬಣ್ಣವನ್ನುಂಟು ಮಾಡುವ ಪದಾರ್ಥವು ಹುಟ್ಟುವದು. ಈ ಪದಾರ್ಥದ ಮೇಲೆ ಸೂರ್ಯನ ಪ್ರಕಾಶವು ಬೀಳಲು ಅದರ ಬಣ್ಣವು ಹಸರಾಗುವದು. ಕತ್ತಲೆಯಲ್ಲಿ ಬೆಳೆಯಿಸಿದ ಸಸಿಗಳಿಗೆ ಸ್ವಲ್ಪ ಹಳದಿಕೂಡಿದ ಬಿಳೀ ಬಣ್ಣವಿರುವದು. ಆ ಸಸಿಗಳನ್ನು ಸೂರ್ಯನ ಬಿಸಲಿನಲ್ಲಿ ಒಂದೆರಡು ಘಳಿಗೆಯ ವರೆಗೆ ಇಟ್ಟರೆ ಅವುಗಳ ಬಣ್ಣವು ಹೆಚ್ಚಗೊರೆಯುವದುಂಟು.

ಪತ್ರಹರಿತ್ತಿನಿಂದ ತುಂಬಿದ ಕೋಶಗಳಿಗೆ ಅಂಗಾರಾಮ್ಲವಾಯು, ನೀರು ಮೊದಲಾದವುಗಳ ಪೃಥಕ್ಕರಣ ಮಾಡುವ, ಹಾಗು ಆ ಪೃಥಕ್ಕರಣದಿಂದ ಉಪಲಬ್ಧವಾದ ಘಟಕಗಳನ್ನು ಬೇರುಗಳ ಸಹಾಯದಿಂದ ವನಸ್ಪತಿಗಳಿಗೆ ದೊರೆತ ಖನಿಜ ಪದಾರ್ಥಗಳ ಸಂಗಡ ರಸಾಯನ ರೀತಿಯಿಂದ ಮಿಶ್ರಮಾಡಿ, ಸೇಂದ್ರಿಯ ಪದಾರ್ಥಗಳನ್ನು (Organic substances) ಹುಟ್ಟಿಸುವ ಗುಣ ಧರ್ಮಗಳಿರುವವು. ಈ ತರದ ಪೃಥಕ್ಕರಣ ವಿಕ್ಷೇಕರಣಗಳು (Analysis and Synthesis) ಭೌತಿಕ ಶಾಸ್ತ್ರಗಳ (Physical Sciences') ದೃಷ್ಟ್ಯಯಿಂದ ಕಾರ್ಯಗಳಿರುವದರಿಂದ, ಆ ಕಾರ್ಯಗಳನ್ನು ಮಾಡಲಿಕ್ಕೆ ಕೆಲವೊಂದು ಪ್ರಕಾರದ ಕರ್ತೃತ್ವ ಶಕ್ತಿಯು (Energy) ಬೇಕಾಗುವದು. ನಿಸರ್ಗತಃ ಈ ತರದ ಶಕ್ತಿಯು ವನಸ್ಪತಿಗಳಲ್ಲಿರದ ಕಾರಣ ಪತ್ರಹರಿತ್ತಿನಿಂದ ತುಂಬಿರುವ ಕೋಶಗಳು ಸೂರ್ಯನ ಪ್ರಕಾಶವೆಂಬ ಶಕ್ತಿಯನ್ನು ನುಂಗಿಕೊಂಡು ಅದರ ಸಂಚಯ ಮಾಡಿಟ್ಟು

ರಾಸಾಯನಿಕ ವ್ಯತೀಕರಣ ವಿಕೀಕರಣ ಮೊದಲಾದ ಕಾರ್ಯಗಳಿಗೆ ಬೇಕಾಗುವ ಕರ್ತೃತ್ವಶಕ್ತಿಯ ಸಂಚಯವನ್ನು ಪೂರೈಸಿ ಕೊಡುವವು.

ಪತ್ರಹರಿತ್ತಿನಿಂದ ತುಂಬಿದ ಕೋಶಗಳು ಎಲೆಗಳಲ್ಲಿಯೇ ಮಿತಿ ಮೀರಿ ಇರುವದರಿಂದ ಸೂರ್ಯನ ಪ್ರಕಾಶವನ್ನು ಹಿಡದಿಟ್ಟುಕೊಳ್ಳುವ ಕೆಲಸದಲ್ಲಿ ಹಸದು ಬಣ್ಣವುಳ್ಳ ಎಲೆಗಳ ಕರ್ತವ್ಯವು ಹೆಚ್ಚಾಗಿರುವದು. ಈ ಕಾರಣದಿಂದ ಎಲೆಗಳು ಸ್ವಾಭಾವಿಕವಾಗಿ ತಮ್ಮ ವಿಸ್ತಾರವುಳ್ಳ ಭಾಗಗಳ ಮೇಲೆ ಸೂರ್ಯನ ಕಿರಣಗಳು ಬೀಳುವಂತೆ ತಮ್ಮನ್ನು ಇಟ್ಟುಕೊಳ್ಳಲಿಕ್ಕೆ ಯತ್ನಿಸುತ್ತಿರುವವು. ಶಿಂಬಿವಾಹಿನಿ (Leguminosæ) ಎಂಬ ವನಸ್ಪತಿ ವರ್ಗಕ್ಕೆ ಸೇರಿದ ಜೊಗಜಿ, ಅವರಿ, ಮುಟ್ಟಲ ಮುರಕಿ ಮೊದಲಾದ ವುಗಳ ಎಲೆಗಳನ್ನು ನಾವು ನಿರೀಕ್ಷಿಸಿದರೆ ಮೇಲೆ ಹೇಳಿದ ಸಂಗತಿಯು ನಮ್ಮ ನಿದರ್ಶನಕ್ಕೆ ಬರುವದು. ಈ ವನಸ್ಪತಿಗಳು ಸೂರ್ಯೋದಯವಾದ ಕೂಡಲೆ ರಾತ್ರಿಯಲ್ಲಿ ಮುಚ್ಚಿಕೊಂಡಿರುವ ತಮ್ಮ ಎಲೆಗಳನ್ನು ತೆರೆಯ ಹತ್ತಿ, ಸೂರ್ಯನ ಪ್ರಕಾಶವು ಹೆಚ್ಚಿದಂತೆ ಅವುಗಳನ್ನು ಹೆಚ್ಚು ಹೆಚ್ಚು ವಿಸ್ತಾರವಾಗಿ ತೆರೆಯುವವು. ಪುನಃ ಸೂರ್ಯಾಸ್ತವಾದ ಕೂಡಲೆ ಅವುಗಳನ್ನು ಮುಚ್ಚಿಕೊಳ್ಳುವವು. ಮುಟ್ಟಲಮುರಕಿ (Sensitive plant) ಯನ್ನು ಬಂದು ಬಾನೆಯಲ್ಲಿ ಹಚ್ಚಿ, ಆ ಬಾನೆಯನ್ನು ಕತ್ತಲಿರುವ ಸ್ಥಳದಲ್ಲಿ ಒಯ್ದಿಟ್ಟರೆ, ಒಂದೆರಡು ನಿಮಿಷಗಳಲ್ಲಿ ಅದರ ಎಲೆಗಳು ಮುಚ್ಚಿಕೊಂಡು ಜೋಲು ಬೀಳುವದೂ ಆ ಬಾನೆಯನ್ನು ಬೆಳಕಿರುವ ಸ್ಥಳದಲ್ಲಿ ತಂದಿಟ್ಟ ಕೂಡಲೆ ಪುನಃ ಆ ಎಲೆಗಳು ನೆಟ್ಟಗಾಗಿ ತೆರೆಯ ಹತ್ತುವದೂ ನಮಗೆ ಸಹಜವಾಗಿ ಕಂಡು ಬರುವದು.

ಸೂರ್ಯನ ಪ್ರಕಾಶವು ಎಲೆಗಳ ಮೇಲೆ ಹೆಚ್ಚಾಗಿ ಬೀಳುವಂತೆ ಮಾಡುವದರಲ್ಲಿ ವನಸ್ಪತಿಗಳ ಕಾಂಡ (Stem) ದ ಮೇಲೆ ಕಂಡು ಬರುವ ಆ ಎಲೆಗಳ ವಿಧಾನ ಪದ್ಧತಿಯು ಬಹು ಅನುಕೂಲವಾದದ್ದೂ ಆಶ್ಚರ್ಯಕಾರಕವಾದದ್ದೂ ಇರುವದು. ಸಾಮಾನ್ಯವಾಗಿ ವನಸ್ಪತಿಗಳ ಕಾಂಡಗಳಿಗೆ ಹಲವು ಗಣ್ಣುಗಳು (Nodes) ಇರುವವು. ಪ್ರತಿಯೊಂದು ಗಣ್ಣಿಗೆ ಒಂದು ಇಲ್ಲವೆ ಎರಡು ಎಲೆಗಳು ಸಂದಿತವಾಗಿರುವವು. ವನಸ್ಪತಿಯು ಗಣ್ಣಿಗೊಂದು ಎಲೆಯಂತೆ ಬಿಡುವ ಗುಣವುಳ್ಳದ್ದಾದರೆ ಅದರ ಎಲೆಗಳ ವಿಧಾನ ಕ್ರಮವು ಮಲಸುತ್ತಿನಂತಿರುವ ಕಾರಣ ಒಂದು ಚಕ್ರಾಕಾರವು

(Cycle) ಮುಗಿಯುವ ವರೆಗೆ ಪ್ರತಿಯೊಂದು ಎಲೆಯು ದಿಕ್ಕು ಬದಲು ನೂಡಿಕೊಂಡಿರುವದು. ಗಣ್ಣಿನಿಂದ ಜೋಡೆಲೆಗಳು ಹೊರಡುತ್ತಿದ್ದರೆ ಕೆಳಗಿನ ಗಣ್ಣಿನಿಂದೇಳುವ ಎಲೆಗಳ ದಿಕ್ಕಿಗೆ ಅದರ ಮೇಲಿನ ಗಣ್ಣಿನಿಂದೇಳುವ ಎಲೆಗಳ ದಿಕ್ಕು ಕಾಟಕೋನವನ್ನು ಮಾಡುವದು. ಈ ವಿಧಾನ ಕ್ರಮವನ್ನು ತುಳಸಿಯ ಗಿಡದಲ್ಲಿ ನೋಡಬಹುದು. ಈ ವಿಷಯದ ಬಗ್ಗೆ ವಿಶೇಷ ವಿವೇಚನವನ್ನು ಯೋಗ್ಯವಾದ ಸ್ಥಳದಲ್ಲಿ ಮಾಡುವೆವು.

ಮೇಲಿನ ವಿವರಣೆಯಿಂದ ವನಸ್ಪತಿಗಳಿಗೆ ಪ್ರಕಾಶದ ಮಹತ್ವವೆಷ್ಟಿರುವದೆಂಬದು ನಮಗೆ ಗೊತ್ತಾಯಿತು. ಸ್ವಭಾವತಃ ವನಸ್ಪತಿಗಳಿಗೆ ಸೂರ್ಯನ ಪ್ರಕಾಶದ ಕಡೆಗೆ ಒಲಿಯುವ ಗುಣವಿರುವದು. ಅದಕ್ಕೆ ಸೂರ್ಯೋನ್ಮುಖತೆ (Heliotropism) ಎಂಬ ಹೆಸರು. ಈ ಗುಣವನ್ನು ಕಂಡು ಹಿಡಿಯುವದಕ್ಕಾಗಿ ಕೆಳಗೆ ಕೊಟ್ಟ ಸುಲಭ ಪ್ರಯೋಗಗಳನ್ನು ಮಾಡುವಾ.

ಒಂದು ಹರಿವಾಣದಲ್ಲಿ ಮಣ್ಣು ಹಾಕಿ ಅದರಲ್ಲಿ ಬತ್ತ ಇಲ್ಲವೆ ಗೋಧಿಯ ಬೀಜಗಳನ್ನು ಬಿತ್ತಿ, ನೀರು ಹಾಕಿ, ಬೀಜಗಳು ಮೊಳೆತು ಸಸಿಗಳಾಗುವವರೆಗೆ ಆ ಹರಿವಾಣವನ್ನು ಕತ್ತಲೆಯಲ್ಲಿರಿಸುವಾ. ಸಸಿಗಳು ತುಸು ಎತ್ತರ ಬೆಳೆದ ಮೇಲೆ ೫೫ನೇ ಆಕೃತಿಯಲ್ಲಿ ತೋರಿಸಿದಂಥ ಒಂದು ಪೆಟ್ಟಿಗೆಯನ್ನು ತೆಗೆದುಕೊಂಡು ಅದರ ಒಳಮೈಗೆ ಕಪ್ಪು ಬಣ್ಣವನ್ನು ಹಚ್ಚಿ, A ಅಕ್ಷರದಿಂದ ತೋರಿಸಿದ ಸ್ಥಳದಲ್ಲಿ ಒಂದು ಸಣ್ಣ ಛಿದ್ರವನ್ನು ಮಾಡಿ, ಆ ಪೆಟ್ಟಿಗೆಯಲ್ಲಿ ಸಸಿಗಳನ್ನು ಬೆಳೆಯಿಸಿದ ಹರಿವಾಣವನ್ನಿಟ್ಟು, ಅದನ್ನು ಸೂರ್ಯನ ಪ್ರಕಾಶವು ನಿಚ್ಚಳವಾಗಿ ಬಿದ್ದ ಸ್ಥಳದಲ್ಲಿ ಒಗ್ಗಿಟ್ಟರೆ ಒಂದೆರಡು ತಾಸುಗಳಲ್ಲಿ ಎಲ್ಲ ಸಸಿಗಳ ಬಲವು ಚಿತ್ರದಲ್ಲಿ ತೋರಿಸಿದಂತೆ, ಪೆಟ್ಟಿಗೆಯೊಳಗೆ ಪ್ರಕಾಶವು ಬಂದು ಸೇರುವ ಛಿದ್ರದ ಕಡೆಗಿದ್ದದ್ದು ಕಂಡು ಬರುವದು. ಇಲ್ಲವೆ ಒಂದು ತಿವಟಿಗೆಯ ಮೇಲೆ ಬಾನೆಯಲ್ಲಿ ಬೆಳೆಯಿಸಿದ ಯಾವದೊಂದು ವನಸ್ಪತಿಯನ್ನು ೫೬ನೇ ಆಕೃತಿಯಲ್ಲಿ ತೋರಿಸಿದಂತಿಟ್ಟು, ಅದರ ಮೇಲೆ ಒಳಮೈಗೆ ಕಪ್ಪು ಬಣ್ಣವನ್ನು ಹಚ್ಚಿದ ಪೆಟ್ಟಿಗೆಯನ್ನು ಪ್ರಕಾಶವು ಬುಡದಿಂದ ಬಂದು ಸೇರುವಂತೆ ಆ ವನಸ್ಪತಿಯ ಮೇಲೆ ಡಬ್ಬು ಹಾಕಿಟ್ಟು, ಕೆಲವು ತಾಸುಗಳ ಮೇಲೆ ಆ ವನಸ್ಪತಿಯನ್ನು ನಿರೀಕ್ಷಿಸಿದರೆ ಅದರ ಎಲೆಗಳು ಬೆಳಕು ಬರುವ ದಿಕ್ಕಿನ ಕಡೆಗೆ ಒಲಿದಿರುವದು ಕಂಡು ಬರುವದು.

ಪ್ರಕಾಶದ ಅಭಾವವಾದ ಕತ್ತಲೆಯು ವನಸ್ಪತಿಗಳ ಜೀವನ ವ್ಯಾಪಾರಗಳಿಗೆ ಬಹು ಪ್ರತಿಕೂಲವಾಗಿರುವದರಿಂದ, ಆ ವನಸ್ಪತಿಗಳು ಅದಷ್ಟು ಬೇಗನೆ ಅದರಿಂದ ತಪ್ಪಿಸಿಕೊಂಡು ಬೆಳಕಿನ ಕಡೆಗೆ ಹೋಗಲು ಯತ್ನಿಸುವವು. ಚನ್ನಾಗಿ ಬಲಿತ ಎರಡು ಅವರೆಯ ಬೀಜಗಳನ್ನು ತೆಗೆದುಕೊಂಡು ಅವುಗಳಲ್ಲಿ ಒಂದು ಬೀಜವನ್ನು ಕಗ್ಗತ್ತಲಿರುವ ಸ್ಥಳದಲ್ಲಿ ಮತ್ತೊಂದನ್ನು ಬೆಳಕು ಬರುವ ಸ್ಥಳದಲ್ಲಿ ಬಿತ್ತಿ ಬೆಳೆಯಿಸಿ, ಆ ಸಸಿಗಳನ್ನು ಪರೀಕ್ಷಿಸಿ ನೋಡಿದರೆ, ಬೆಳಕಿರುವ ಸ್ಥಳದಲ್ಲಿ ಬೆಳೆದ ಸಸಿಯ ಆಕಾರವು ೩೭ನೇ ಆಕೃತಿಯಲ್ಲಿ A ಅಕ್ಷರದಿಂದ ತೋರಿಸಿದ ಚಿತ್ರದಂತೆ ಹಾಗು ಕತ್ತಲೆಯಲ್ಲಿ ಬೆಳೆದ ಸಸಿಯ ಆಕಾರವು B ಅಕ್ಷರದಿಂದ ತೋರಿಸಿದ ಚಿತ್ರದಂತೆ ಕಾಣುವದು. ಅವುಗಳಲ್ಲಿ ಕಂಡು ಬರುವ ವ್ಯತ್ಯಾಸಗಳೇನೆಂದರೆ, ಕತ್ತಲೆಯಲ್ಲಿ ಬೆಳೆದ ಸಸಿಗೆ ತುಸು ಹಳದಿಕೂಡಿದ ಬಿಳಿ ಬಣ್ಣವಿರುವದು. ಅದರ ಕಾಂಡವು ಸೀರಾಗಿ ಬಹು ಉದ್ದ ಬೆಳೆದಿರುವದು. ಅದಕ್ಕೆ ವಿಲಕ್ಷಣಾಕಾರದ ತೀರ ಸಣ್ಣ ಎಲೆಗಳಾಗಿರುವವು. ಬೆಳಕಿನಲ್ಲಿ ಬೆಳೆದ ಸಸಿಗೆ ಹಸರು ಬಣ್ಣವಿರುವದು. ಅದರ ಕಾಂಡವು ಗಡತರವಾಗಿದ್ದು ಗಣ್ಣುಗಳ ಮಧ್ಯದಲ್ಲಿರುವ ಅಂತರವು (Internode) ಕಡಿಮೆ ಇರುವದು. ಎಲೆಗಳು ಅಗಲಾಗಿದ್ದು ಅವುಗಳಿಗೆ ಕೆಲವೊಂದು ನಿಯಮಿತ ಆಕಾರವಿರುವದು.

ಮೇಲಿನ ಪ್ರಯೋಗದಲ್ಲಿ ಕಂಡು ಬರುವ ವ್ಯತ್ಯಾಸಗಳು ವನಸ್ಪತಿಗಳ ಜಾಣ್ಮೆಯನ್ನು ವ್ಯಕ್ತಪಡಿಸುತ್ತವೆ. ಈ ಪ್ರಯೋಗದಲ್ಲಿ ತೆಗೆದುಕೊಂಡ ಎರಡೂ ಸಸಿಗಳು ಬೀಜದಳ (Cotyledons) ಗಳಲ್ಲಿರುವ ಆಹಾರದ ಸಂಚಯವನ್ನೇ ಉಪಯೋಗಿಸಿಕೊಂಡು ಬೆಳೆದಿದ್ದು, ಕತ್ತಲೆಯಲ್ಲಿ ಬೆಳೆಯಿಸಿದ ಸಸಿಯೇ ಹೆಚ್ಚು ಉದ್ದವಾಗಿ ಬೆಳೆದಿರುವದರಿಂದ ಕತ್ತಲೆಯು ವನಸ್ಪತಿಗಳ ಜೀವನ ವ್ಯಾಪಾರಗಳಿಗೆ ಪ್ರತಿಕೂಲವಾದದ್ದೆಂದು ಹ್ಯಾಗೆ ಹೇಳುವಿರಿ? ಎಂದು ಯಾರಾದರೂ ಪ್ರಶ್ನೆ ಮಾಡಿದರೆ, ಅದಕ್ಕೆ ಉತ್ತರವೇನಂದರೆ, ಸಿದ್ಧವಾದ ಆಹಾರವು ದೊರೆತದ್ದಾದರೆ ವನಸ್ಪತಿಗಳ ಬೆಳವಣಿಗೆಗೆ ಕತ್ತಲೆಯೆಂಬ ಪ್ರತಿಬಂಧವಾಗುವದಿಲ್ಲ. ವನಸ್ಪತಿಗಳು ತಮ್ಮಲ್ಲಿರುವ ಆಹಾರದ ಸಂಚಯವು ತೀರುವದರೊಳಗಾಗಿ ಅದಷ್ಟು ಹೆಚ್ಚು ಉದ್ದವಾಗಿ ಬೆಳೆದು ಬೆಳಕಿದ್ದ ಕಡೆಗೆ ಹೋಗುವಷ್ಟಕ್ಕೆ ವಿಶ್ವಪ್ರಯತ್ನ ಮಾಡುತ್ತಿರುವವು. ಕತ್ತಲೆಯಲ್ಲಿದ್ದಾಗ ಎಲೆಗಳ ಉಪಯೋಗವೇನೂ ಆಗುವದಿಲ್ಲ

ಎಂಬ ಸಂಗತಿಯು ಅವುಗಳಿಗೆ ಗೊತ್ತಾಗಿರುವದರಿಂದ ಅವು ಎಲೆಗಳನ್ನು ಬಿಡುವದಕ್ಕೆ ಇಚ್ಛಿಸುವದಿಲ್ಲ. ನೆಲದಲ್ಲಿ ಹೂಳಿದ ಬೀಜಗಳನ್ನು ನಿರೀಕ್ಷಿಸಿದರೆ ಇದೇ ಸಂಗತಿಯು ವ್ಯಕ್ತವಾಗಿರುವದು. ಆ ಬೀಜಗಳು ಮೊಳೆತು ಬೆಳಕಿನೊಳಗೆ ಬರುವವರೆಗೆ ಅವುಗಳ ಕಾಂಡಗಳು ಮಾತ್ರ ಉದ್ದವಾಗುತ್ತ ಹೋಗುವದಲ್ಲದೆ ಅವುಗಳಿಗೆ ಯಾವ ತರದ ಎಲೆಗಳೂ ಆಗುವದಿಲ್ಲ.

ಇದು ವರೆಗೆ ನಾವು ಮಾಡಿದ ವನಸ್ಪತಿಗಳ ನಿರೀಕ್ಷಣದಿಂದ ಅವು ಪ್ರಯತ್ನ ಪೂರ್ವಕವಾಗಿ ಹಲವು ಕಾರ್ಯಗಳನ್ನು ಮಾಡುತ್ತಿರುತ್ತವೆಂಬದು ಗೊತ್ತಾಗಿದೆ. ಇದರಿಂದ ಪ್ರಾಣಿಗಳಂತೆ ವನಸ್ಪತಿಗಳೂ ಜ್ಞಾನವಿರುವದೋ? ಹ್ಯಾಗೆ? ಎಂಬ ಸಂಶಯವು ನಮ್ಮ ಮನಸ್ಸಿನಲ್ಲಿ ಬರುವದರಿಂದ ವನಸ್ಪತಿಗಳಲ್ಲಿ ಕಂಡು ಬರುವ ಜ್ಞಾನದ ಕುರುಹುಗಳ ವಿವೇಚನವನ್ನು ಮುಂದಿನ ಅಧ್ಯಾಯದಲ್ಲಿ ಮಾಡುವೆವು.

೧೦ನೇ ಅಧ್ಯಾಯವು.

ವನಸ್ಪತಿಗಳಲ್ಲಿ ಕಂಡು ಬರುವ ಜ್ಞಾನದ ಕುರುಹುಗಳು.

ವನಸ್ಪತಿಗಳ ಜೀವನ ವ್ಯಾಪಾರಗಳು ಪ್ರಾಣಿಗಳ ಜೀವನ ವ್ಯಾಪಾರಗಳಂತೆ ನಮ್ಮ ಚಿತ್ತವನ್ನು ಆಕರ್ಷಿಸಿಕೊಳ್ಳುವದಿಲ್ಲ. ಇದಕ್ಕೆ ಅನೇಕ ಕಾರಣಗಳಿರುವವು. ಪ್ರಾಣಿಗಳಲ್ಲಿ ಕಂಡುಬರುವ ಚಲನವಲನಗಳು (Movements) ಎಲ್ಲ ತರದ ಪ್ರಾಣಿಗಳಲ್ಲಿ ಒಂದೇ ಪ್ರಮಾಣದಿಂದಿರುವದಿಲ್ಲ. ಮೇಲ್ತರದ ಪ್ರಾಣಿಗಳಿಗೆ ಸ್ವೇಚ್ಛಾಗಮನಶಕ್ತಿ (Power of Voluntary Movements) ಇರುವದು. ಅದರ ಸಹಾಯದಿಂದ ಆ ಪ್ರಾಣಿಗಳು ಆಹಾರವನ್ನು ದೊರಕಿಸಿಕೊಳ್ಳುವದಕ್ಕೋಸುಗ ಮನಸಿಗೆ ಬಂದ ಕಡೆಗೆ ಸಂಚರಿಸುತ್ತಿರುವವು. ಸ್ವಲ್ಪ ಸೂಕ್ಷ್ಮ ರೀತಿಯಿಂದ ನಿರೀಕ್ಷಿಸಿದರೆ ಆದಿ ಪ್ರಾಣಿಗೆ (Amœba) ಪ್ರವಾಳಕೀಟಕ, ಸ್ಪಂಜ ಮೊದಲಾದವು ಸ್ಥಲಾಂತರ ಮಾಡದೆ ಇದ್ದಲ್ಲಿಯೇ ಉಳಿಯುವಂತೆ ಕಂಡು ಬಂದರೂ ನಿಜವಾಗಿ ಅವುಗಳಿಗೆ ಒಂದು ತರದ ಚಲನೆಯು ಇದ್ದೇ ಇರುವದೆಂದು ನಾವು ನಂಬಬೇಕಾಗುವದು. ಈ ಕ್ಷುದ್ರ ಪ್ರಾಣಿಗಳು ಮಾಡುವ ಹಲವು ವ್ಯಾಪಾರಗಳು ಬುದ್ಧಿಪುರಸ್ಸರವಾಗಿರುವದರಿಂದ ಆ ಬುದ್ಧಿಯ ಅಧಿಷ್ಠಾನವಾದ ಮಿದುಳೂ ಮಜ್ಜಾತಂತುಜಾಲಗಳೂ ಅವುಗಳಲ್ಲಿರಬೇಕೆಂದು ಅನುಮಾನಿಸಬೇಕಾಗು

ವದು. ಆ ಮಿದುಳಿನ ರಚನೆಯೂ ಅದರ ನಿಜಸ್ವರೂಪವೂ ಸ್ಥಾನವೂ ಮಾತ್ರ ನಮಗೆ ಸದ್ಯಕ್ಕೆ ಉಪಲಬ್ಧವಾಗಿರುವ ಸಾಧನಗಳಿಂದ ಗೊತ್ತಾಗ ವಂತಿಲ್ಲ. ನಮ್ಮ ಅಜ್ಞಾನ ಮೂಲಕ ಈ ತರದ ಪ್ರಾಣಿಗಳಿಗೆ ಜ್ಞಾನದ ಸಾಧನಗಳಿರುವದಿಲ್ಲೆಂದು ನಾವು ನಂಬುತ್ತೇವೆ.

ಮೇಲೆ ಹೇಳಿದ ಕ್ಷುದ್ರ ಪ್ರಾಣಿಗಳಿಗಿಂತ ಸಾವಿರಾರು ಪಟ್ಟು ಸಣ್ಣಾ ಗಿರುವ ಅಣುಜಂತು (Bacteria) ಗಳೆಂಬ ನೀಚ ವರ್ಗದ ಪ್ರಾಣಿಗಳ ಅಸಂಖ್ಯವಿರುವವು. ಇವೆಲ್ಲವುಗಳ ವಿಷಯವಾಗಿ ನಿಶ್ಚಿತಜ್ಞಾನವು ಅಣು ಜಂತು-ಶಾಸ್ತ್ರಜ್ಞರಿಗೆ (Bacteriologists) ಇನ್ನೂ ಆಗಿರುವದಿಲ್ಲ. ಇದೇ ರಂತೆಯೇ ವನಸ್ಪತಿಗಳ ವಿಷಯವಾಗಿ ಸದ್ಯಕ್ಕೆ ನಮಗಿರುವ ಜ್ಞಾನವು ಅಪೂರ್ಣವಾಗಿರುವದು. ವೇಲ್ಲರದ ವನಸ್ಪತಿಗಳು ಭೂಮಿಯಲ್ಲಿ ತಮ್ಮ ಬೇರುಗಳನ್ನು ಗಟ್ಟಿಯಾಗಿ ಊರಿಕೊಂಡು ನಿಂತಿರುವದರಿಂದ ಸ್ಥಳಾಂತರ ಮಾಡದೆ ಅವು ತಮ್ಮ ಅವಯವಗಳಾದ ಬೇರು, ದೇಟು, ಎಲೆ ಮೊದಲಾದ ವುಗಳನ್ನು ಚಲಿಸಗೊಟ್ಟು ತಮಗೆ ಬೇಕಾದ ಅನುಕೂಲತೆಗಳನ್ನು ಹುದಗಿ ಸಿಕೊಳ್ಳುತ್ತವೆ, ತಮ್ಮ ಮನೋವಿಕಾರಗಳನ್ನು ವ್ಯಕ್ತ ಪಡಿಸುತ್ತವೆ, ಹಾಗು ಆತ್ಮ ಸಂರಕ್ಷಣೆಯನ್ನು ಮಾಡಿಕೊಳ್ಳುತ್ತವೆ. ನೀಚ ವರ್ಗಕ್ಕೆ ಸೇರಿದ ಬೂರಸು (Fungi) ಮೊದಲಾದವು ಗಾಳಿಯ ಸಹಾಯದಿಂದ ಸ್ಥಳಾಂತರ ಮಾಡುತ್ತ ತಮಗೆ ಬೇಕಾದ ಆಹಾರದ ಪದಾರ್ಥಗಳನ್ನು ಹುಡುಕಿಕೊಂಡು, ಅವುಗಳ ಮೇಲೆ ಹೋಗಿ ಕುಳಿತು ಅಲ್ಲಿ ತಮ್ಮ ಸಂತತಿ ಯನ್ನು ಬೇಕಾದಷ್ಟು ಬೆಳೆಸುವವು. ಈ ತರದ ಕೀಳ ವನಸ್ಪತಿಗಳ ಜೀವ ನವ್ಯಾಪಾರಗಳನ್ನು ಕಂಡು ಹಿಡಿಯುವದು ಹೆಚ್ಚು ಶಕ್ತಿಯುಳ್ಳ ಸೂಕ್ಷ್ಮದ ರ್ಶಕ ಯಂತ್ರದ ಸಹಾಯದಿಂದಲೇ ಸಂಭವನೀಯವಾಗಿರುವದರಿಂದ ಅವುಗಳನ್ನು ಬಿಟ್ಟು, ಉಳಿದ ಉಚ್ಚ ವರ್ಗದ ವನಸ್ಪತಿಗಳ ಹಲವು ಚಲನ ವಲನಗಳನ್ನು ನಿರೀಕ್ಷಿಸಿ, ಅವುಗಳಿಂದ ಆ ವನಸ್ಪತಿಗಳಿಗೆ ಜ್ಞಾನವಿರು ವದೋ? ಹ್ಯಾಗೆ? ಎಂಬದನ್ನು ನಿಶ್ಚಯಿಸಲಿಕ್ಕೆ ಯತ್ನಿಸುವಾ.

ವನಸ್ಪತಿಗಳು ಬೇರುಗಳ ಸಹಾಯದಿಂದ ತಮ್ಮನ್ನು ಭೂಮಿಯಲ್ಲಿ ಗಟ್ಟಿಯಾಗಿ ಊರಿಕೊಂಡು ಅಲ್ಲಿರುವ ಖನಿಜದ್ರವ್ಯಗಳನ್ನು ಹೀರಿಕೊಳ್ಳು ತ್ತವೆಂಬದು ಈ ಮೊದಲು ಮಾಡಿದ ಪ್ರಯೋಗಗಳಿಂದ ಗೊತ್ತಾಗಿದೆ. ಈ ವ್ಯಾಪಾರಗಳು ಕೇವಲ ತಾಂತ್ರಿಕ ವ್ಯಾಪಾರಗಳಿರದೆ ಅವು ಬುದ್ಧಿ ಪೂರ್ವಕ

ವಾಗಿ ಮಾಡತಕ್ಕ ವ್ಯಾಪಾರಗಳಾಗಿವೆ. ಯಾವದೊಂದು ಪದಾರ್ಥಕ್ಕೆ ಸ್ಥೈರ್ಯವುಂಟಾಗಬೇಕಾದರೆ ಅದರ ಗುರುತ್ವಮಧ್ಯ ಬಿಂದುವಿನಿಂದ ತೆಗೆದ ಲಂಬ ರೇಖೆಯು ಅದರ ತಳದಲ್ಲಿಯೇ ಹಾಯಬೇಕೆಂಬದು ವಿಜ್ಞಾನ ಶಾಸ್ತ್ರದ ನಿಯಮವು. ಈ ನಿಯಮವನ್ನನುಸರಿಸುವಂತೆ ವನಸ್ಪತಿಗಳು ಪಿಲಂಬ ಗುಂಡಿನ ರೇಖೆಯಲ್ಲಿ (Plumb line) ತಮ್ಮನ್ನು ಇಟ್ಟುಕೊಳ್ಳುವವು. ಅದಕ್ಕೆ ವ್ಯತ್ಯಾಸ ಬಂದರೆ ಅದು ಬೇರುಗಳಿಗೆ ಕೂಡಲೆ ತಿಳಿದು ಅವು ಆ ಸ್ಥಿತಿಯನ್ನು ಸುಧಾರಿಸಿಕೊಳ್ಳಲಿಕ್ಕೆ ಯತ್ನಿಸುವವು. ಮೆಣಸಿನ ಅಗಿಗಳನ್ನು ಹಚ್ಚುವಾಗ ಅವುಗಳ ದೇಟು ಸೊಟ್ಟಾಗಿ ಬಾಗಿರುವಂತೆ ಹಚ್ಚಿದರೆ ೨-೩ ದಿವಸಗಳಲ್ಲಿ ಕ್ರಮೇಣ ಆ ದೇಟುಗಳು ಮೇಲಕ್ಕೇಳುತ್ತೇಳುತ್ತ ಕಡೆಗ ನೆಟ್ಟನೆ ನಿಂತುಕೊಳ್ಳುವವು. ಈ ಸ್ಥಿತಿಯು ಅವುಗಳಿಗುಂಟಾದ ಮೇಲೆ ಅವುಗಳಲ್ಲಿ ಒಂದು ಸಸಿಯ ಬುಡದಲ್ಲಿರುವ ಮಣ್ಣನ್ನು ಬಹು ಜಾಗರೂಕತೆಯಿಂದ ಕೆದರಿ ನೋಡಿದರೆ ಅದರ ತಾಯಿಬೇರು (Taproot) ಪಿಲಂಬಗುಂಡಿನ ರೇಖೆಯಲ್ಲಿದ್ದು ಅದರಿಂದ ಹೊರಟ ಸೀರಾದ ಬೇರುಗಳು (ಆಕೃತಿ ೩೮) ರಲ್ಲಿ ತೋರಿಸಿದಂತೆ ತಾಯಿಬೇರಿನ ದಿಕ್ಕಿಗೆ ಕಾಟಕೋನ ಮಾಡುವಂತೆ ಅದರ ಸುತ್ತಲು ಹಬ್ಬಿಕೊಂಡಿರುವದು ನಮ್ಮ ದೃಷ್ಟಿಗೆ ಬೀಳುವದು. ೫ ನೇ ಅಧ್ಯಾಯದಲ್ಲಿ ವನಸ್ಪತಿಗಳಿಗೆ ಭೂಮಿಯಿಂದ ದೊರಕುವ ಖನಿಜ ಪದಾರ್ಥಗಳನ್ನು ಹೇಳಿದ್ದೇವೆ. ಆ ಪದಾರ್ಥಗಳ ಹೊರತಾಗಿ ಭೂಮಿಯಲ್ಲಿ ಸಾವಿರಾರು ಖನಿಜ ದ್ರವ್ಯಗಳಿರಲು ವನಸ್ಪತಿಗಳು ಆ ಸಮುದಾಯದೊಳಗಿಂದ ತಮಗೆ ಬೇಕಾಗುವ ಪದಾರ್ಥಗಳನ್ನಷ್ಟೇ ಆರಿಸಿ ತೆಗೆದುಕೊಳ್ಳುವದು ಬುದ್ಧಿಪೂರ್ವಕವಾಗಿ ಮಾಡಿದ ವ್ಯಾಪಾರವಲ್ಲದೆ ಬೇರೆ ಇರಲಾರದು. ಒಂದು ಬಾನೆಯಲ್ಲಿ ಬೆಳೆಯಿಸಿದ ವನಸ್ಪತಿಯನ್ನು ತೆಗೆದುಕೊಂಡು ಅದರಲ್ಲಿ ಒಂದು ಕಡೆಗೆ ಆ ವನಸ್ಪತಿಯ ಆಹಾರದ ಸಿದ್ಧತೆಗೆ ಬೇಕಾದ ಖನಿಜದ್ರವ್ಯಗಳನ್ನೂ ಬೇರೊಂದು ಕಡೆಗೆ ಅದಕ್ಕೆ ಬೇಡಾದ ಇಲ್ಲವೆ ವಿಷಕಾರಕ ಪದಾರ್ಥಗಳನ್ನೂ ಮಣ್ಣು ತೋಡಿ ಹಾಕಿ ಬೆಳೆಸಹತ್ತಿ ಒಂದೆರಡು ತಿಂಗಳುಗಳಾದಮೇಲೆ ಬೇರುಗಳ ಮೇಲಿರುವ ಮಣ್ಣು ತೋಡಿ ನೋಡಲು ಅವು ತಮಗೆ ಬೇಕಾದ ಪದಾರ್ಥಗಳ ಕಡೆಗೆ ಬಹು ಉದ್ದವಾಗಿ ಬೆಳೆಯುತ್ತ ಬಂದಿರುವದು ಕಂಡುಬರುವದು. ಕಲ್ಲು ಬಂಡೆಗಳಲ್ಲಿ ಅಡಗಿಕೊಂಡಿರುವ ಖನಿಜ ದ್ರವ್ಯಗಳು ಹೊರಗೆ ಬರುವಂತೆ ಮಾಡಿ ಅವುಗಳನ್ನು ಹೀರಿಕೊಳ್ಳುವ ಉ

ಪ್ರಕೃತಿಯಿಂದ ವನಸ್ಪತಿಗಳು ಮಾಡುತ್ತಿರುವ ಪ್ರಯತ್ನವು ಬಹು ಸೋಜಿಗವಾ
ಗಿದ್ದಾಗಿದೆ. ವನಸ್ಪತಿಗಳು ಆ ಬಂಡೆಗಳ ಕಡೆಗೆ ತಮ್ಮ ಬೇರುಗಳನ್ನು
ಚಾಚಿ, ಎಲ್ಲ ಕಡೆಯಿಂದ ಅವುಗಳಿಗೆ ಮುತ್ತಿಗೆ ಹಾಕುವವು. ಆ ಮೇಲ
ಆ ಬೇರುಗಳು ತಮ್ಮ ಅಗ್ರಭಾಗದಲ್ಲಿರುವ ಒಂದು ವಿಶಿಷ್ಟ ದ್ರವದ ಸಹಾ
ಯದಿಂದ ಆ ಬಂಡೆಗಳಲ್ಲಿ ಛಿದ್ರ ಮಾಡಹತ್ತಿ, ಸಾಕಷ್ಟು ಅವಕಾಶವು ದೊರ
ತಕೂಡಲೆ ಯಾಂತ್ರಿಕ ಶಕ್ತಿಯನ್ನು (Mechanical force) ಉಪಯೋ
ಗಿಸಿ ಅವುಗಳನ್ನು ಒಡೆದು ಪುಡಿ ಪುಡಿ ಮಾಡುವವು.

ಮಾಲ್ಥರಬಿ, ಗ್ರಿಮರ್ಡ ಮೊದಲಾದ ವನಸ್ಪತಿ ಶಾಸ್ತ್ರಜ್ಞರ ನಿರೀಕ್ಷಣೆಕ್ಕೆ
ಬಂದ ಬಹು ಆಶ್ಚರ್ಯಕಾರಕವಾದ ಸಂಗತಿಗಳಿಂದ ವನಸ್ಪತಿಗಳಿಗೆ
ಜ್ಞಾನವಿರುತ್ತದೆಂದು ಧಾರಾಳವಾಗಿ ಹೇಳಬಹುದು. ಮಾಲ್ಥರಬಿಯು
ತಾನು ನೋಡಿದ ಗಿಡದ ವಿಷಯವಾಗಿ ಹೀಗೆ ಬರೆದಿದ್ದಾನೆ. "ಆ ವೃಕ್ಷವು
ಬೆಳೆದಿರುವ ಸ್ಥಳದಲ್ಲಿದ್ದ ನೀರಿನ ಸಂಚಯವೂ ತಾತ್ಕಾಲಕ್ಕೆ ನೀರಿನಲ್ಲಿ ಕರ
ಗುವಂಥ ಅದಕ್ಕೆ ಬೇಕಾದ ಖನಿಜದ್ರವ್ಯಗಳೂ ಮುಗಿಯಲು, ಕೆಲವು ದಿವಸ
ಗಳ ವರೆಗೆ ಅದು ಬಾಡ ಹತ್ತಿತು. ಕಡೆಗೆ ಗತ್ಯಂತರ ಕಾಣದೆ ಅದು ತನ್ನ
ಎಲ್ಲ ಶಕ್ತಿಯನ್ನು ಉಪಯೋಗಿಸಿಕೊಂಡು ಒಂದು ಬೇರನ್ನು ೬೬ ಫೂಟು
ಉದ್ದವಾಗಿ ಬೆಳೆಯಿಸಿ, ಅದು ಒಂದು ಜಲಾಶಯಕ್ಕೆ ಹೋಗಿ ಮುಟ್ಟುವಂತೆ
ಮಾಡಿ, ಅದರ ಸಹಾಯದಿಂದ ತನಗೆ ಬೇಕಾಗುವಷ್ಟು ನೀರನ್ನೂ ಖನಿಜ
ದ್ರವ್ಯಗಳನ್ನೂ ದೊರಕಿಸಿಕೊಂಡು ಎಂದಿನಂತೆ ಟವಟವಿಸಹತ್ತಿತು."
ಗ್ರಿಮರ್ಡನ ನಿರೀಕ್ಷಣೆಕ್ಕೆ ಬಂದ ವನಸ್ಪತಿಯು ಸ್ವಾಭಾವಿಕವಾಗಿ ೫–೬
ಇಂಚು ಎತ್ತರ ಬೆಳೆಯುವಂಥದಿತ್ತು. ಆಕಸ್ಮಿಕವಾಗಿ ಅದು ಒಂದು
ಖಣಿಯಲ್ಲಿ ಹುಟ್ಟಿದ್ದರಿಂದ ಅದಕ್ಕೆ ಸಾಕಷ್ಟು ಪ್ರಕಾಶವು ದೊರಕದಂತಾ
ಯಿತು. ಅದಕಾರಣ ಅದು ತನ್ನ ಕಾಂಡವನ್ನು ೧೨೦ ಫೂಟು ಉದ್ದವಾಗಿ
ಬೆಳೆಯಿಸಿ ಕಡೆಗೆ ಪ್ರಕಾಶವು ಯಥೇಚ್ಛವಾಗಿರುವ ಸ್ಥಳಕ್ಕೆ ಬಂದು
ಮುಟ್ಟಿತು,

ಮುಟ್ಟಿಲ ಮುರಕಿಯ ಎಲೆಗಳು ಸ್ವಾಭಾವಿಕವಾಗಿ ೯೯ನೇ ಆಕೃತಿ
ಯಲ್ಲಿ ತೋರಿಸಿದಂತೆ ಹರಡಿಕೊಂಡಿರುವವು. ಆ ಎಲೆಗಳನ್ನು ಒಂದು ಕಡ್ಡಿ
ಯಿಂದ ಮುಟ್ಟಿದರೆ ಅವು ಮುದುಡಿಕೊಳ್ಳಹತ್ತುವವು. ಅವುಗಳ ಮೇಲೆ
ಹೆಚ್ಚು ಕಸುವಿನಿಂದ ತಟ್ಟಿದರೆ ಕೂಡಲೆ ೩೦ನೇ ಆಕೃತಿಯಲ್ಲಿ ತೋರಿಸಿದಂತೆ

ಶಾಲಾಧ್ಯಾಪಕರ ಲೇಖಗಳು.

"ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರ

ಪೂರ್ವಾಶ್ರಮದ ವೃತ್ತಾ

— ಃ (೦) ಃ —

ಈ ಭರತ ಖಂಡದ ದಕ್ಷಿಣ ದಿಕ್ಕಿನಲ್ಲಿ ಕರ್ನಾಟಕ ದೇಶವಿರುವದು. ಇದರಲ್ಲಿ ಹರಿಯುವ ತುಂಗಭದ್ರಾ ನದಿಯ ತೀರದಲ್ಲಿ, ಪಂಪಾನಾಮಕ ಕ್ಷೇತ್ರವಿರುವದು. ಇದರಲ್ಲಿ "ವಿಜಯ" ವೆಂಬ ನಗರ (ವಿಜಯನಗರ) ವಿತ್ತು. ಇದಕ್ಕೆ ಪೂರ್ವಕಾಲದಲ್ಲಿ ಕಿಷ್ಕಿಂಧಾಪುರಿಯೆಂಬ ಹೆಸರು ಇತ್ತು. ಈ ಕ್ಷೇತ್ರದಲ್ಲಿ ವಿರೂಪಾಕ್ಷ ದೇವರ ಮಂದಿರವಿರುವದು. ಈಕ್ಷೇತ್ರದಲ್ಲಿ ಶ್ರೀ ವಿದ್ಯಾರಣ್ಯಸ್ವಾವಿ ವಾಶ್ರಮದ ಪ್ರವರ್ತನೆಯು ಉಂಟಾಗಿತ್ತು.

ಇವರಿಗೆ ಮಾಧವ, ಮಾಧವಾರ್ಯ, ಮಾಧವಾಚಾರ್ಯ, ಮಾಧವಾಮಾತ್ಯವೆಂಬ ಈ ನಾಮಗಳು ಪೂರ್ವಾಶ್ರಮದಲ್ಲಿದ್ದವು. ಬಳಿಕ ಉತ್ತರಾಶ್ರಮದಲ್ಲಿ ಜನಿಸಿದಾದ ಶ್ರೀ ವಿದ್ಯಾರಣ್ಯನಾಮವು ಉಂಟಾಯಿತು.

ಇವಗೆ ಜನ್ಮನಾಮವು ಮಾಧವವೆಂಬದಾಗಿತ್ತು. ಬಳಿಕ ಮಹಾ ವಿದ್ಯಾ ಪ್ರಾಪ್ತಿಯಾಗಲಾಗಿ, ವಿಜಯನಗರದ ರಾಜನಿಗೆ ಕುಲಗುರುವಾದ ಕಾರಣ, ಮಾಧವಾರ್ಯ, ಮಾಧವಾಚಾರ್ಯ, ಎಂಬ ನಾಮಗಳುಂಟಾದವು. ಶ್ರೀ ವಸಿಷ್ಠ ಮುನಿಯಂತೆ ರಾಜನಿಗೆ ಪ್ರಸಿದ್ಧ ಮಂತ್ರಿಯಾಗಿ ಇದ್ದ ಕಾರಣ, ಮಾಧವಾಮಾತ್ಯ ನಾಮದಿಂದ, ಆ ಕಾಲದಲ್ಲಿ ತಾವು ರಚಿಸಿದ ಗ್ರಂಥಗಳಲ್ಲಿ ತಮ್ಮ ನಾಮದ ಪ್ರಸಿದ್ಧಿಮಾಡಿಕೊಂಡರು. ವಿದ್ಯಾವನವು ಹ್ಯಾಗೋ ಹಾಗೆ ಇದ್ದರಾದ ಕಾರಣ, ಇವರಿಗೆ ವಿದ್ಯಾರಣ್ಯ ಎಂಬ ಅನ್ವರ್ಥನಾಮವು ಉಂಟಾಯಿತು.

ಶ್ರೀ ವಿದ್ಯಾರಣ್ಯಸ್ವಾಮಿಯವರು ಪೂರ್ವಸಂಸ್ಕಾರದಿಂದ ವಿದ್ಯಾ, ಐಶ್ವರ್ಯ, ಲಕ್ಷ್ಮಿ, ತೇಜಸ್ಸುಗಳಿಂದ ಭಗವಂತನಂತೆ ಮಹಾವಿಭೂತಿ ಸಂಪನ್ನರಾದ್ದರಿಂದ, ಜಗದುದ್ಧಾರವನ್ನು ಮಾಡುವದಕ್ಕೆ ಈಶ್ವರನ ಕಲೆಯು ಪ್ರಕಟವಾದಂತೆ ಅವತರಿಸಿದರು. ಅದ್ದರಿಂದ, ಅವರನ್ನು ರಾಜಸಭಾಮಧ್ಯದಲ್ಲಿ ಸರ್ವರೂ ಸಾಷ್ಟಾಂಗ ವಂದನಾದಿಗಳಿಂದ ಮಾನ್ಯಮಾಡುತ್ತಿದ್ದರು.

॥ಶ್ಲೋಕ॥ ಶ್ರೀಮತೀ ಜನನೀ ಯಸ್ಯ ಸುಕೀರ್ತಿರ್ಮಾಯಣಃ ಪಿತಾ।
ಸಾಯಣಸ್ಸೋಮನಾಥಶ್ಚ ಮನೋ ಬುದ್ಧೀ ಸಹೋದರೌ ॥೧
॥ಶ್ಲೋಕ॥ಯಸ್ಯ ಬೌದ್ಧಾಯನಂ ಸೂತ್ರಂ ಶಾಖಾ ಯಸ್ಯಚ ಯಾಜುಷೀ
ಭಾರದ್ವಾಜಂ ಯಸ್ಯ ಗೋತ್ರಂ ಸರ್ವಜ್ಞಃ ಸಹಿ ಮಾಧವಃ॥೨

ಶ್ರೀ ವಿದ್ಯಾರಣ್ಯಸ್ವಾಮಿಯವರು ಪರಾಶರಸ್ಮೃತಿ ವ್ಯಾಖ್ಯಾನ ಉಪೋದ್ಘಾತದಲ್ಲಿ ಈ ಎರಡು ಶ್ಲೋಕಗಳನ್ನು ಬರೆದಿರುತ್ತಾರೆ. ಇವುಗಳ

"ಶ್ರೀಮತೀ ನಾಮಕಳಾದ ತಾಯಿಯು ಯಾವನಿಗೋ, ಸುಂದ ಕೀರ್ತಿಯುಳ್ಳ "ಮಾಯಣ" ನೆಂಬ ತಂದೆಯು ಯಾವಾತನಿಗೋ, ಯ ವಾತನಿಗೆ ಮನೋ-ಬುದ್ಧಿಗಳಂಥವರಾದ, ಸಾಯಣ, ಸೋಮನಾ ಎಂಬವರಿಬ್ಬರು ಸಹೋದರರೋ, ಯಾವಾತನಿಗೆ ಕೃಷ್ಣ ಯಜುರ್ವೇದಾ ತರ್ಗತವಾದ ಬೌದ್ಧಾಯನೀ ಶಾಖೆಯೋ, ಯಾವಾತನಿಗೆ ಭಾರದ್ವಾ ಗೋತ್ರವೋ, ಅಂತಪ್ಪ ಸರ್ವಜ್ಞನಾದ ಮಾಧವನು ಈ ವ್ಯಾಖ್ಯಾ ಕರ್ತನು, ಈ ಮೇರೆಗೆ ತನ್ನ ಕುಲಗೋತ್ರಾದಿ ನಾಮಗಳನ್ನು ತಾ ತಿಳಿಸಿರುವನು.

ಶ್ರೀ ವಿದ್ಯಾರಣ್ಯಸ್ವಾಮಿಯವರ ಜನ್ಮಕಾಲವು ಶಾಲಿವಾಹನ ಶಕ ೧೩೦೦ನೇ ವರುಷದಲ್ಲಿ ಎಂಬದಾಗಿ "ಕವಿಚರಿತ್ರ" ಗ್ರಂಥದಲ್ಲಿ ಬರೆಯ ಟ್ಟಿದೆ; ಮತ್ತು ತಾಮ್ರಪಟಲೇಖನದಲ್ಲಿ, ೧೩೧೩ ಎಂಬದಾಗಿ ಬರೆಯ ಟ್ಟಿದೆ. ಮತ್ತು ಇದೇ ಲೇಖನದಲ್ಲಿ ೧೩೮೧ನೇ "ಪ್ರಜೋತ್ಪತ್ತಿನಾಮ ಸಂವತ್ಸರ ವೈಶಾಖಮಾಸ ಕೃಷ್ಣ ಪಕ್ಷದ ಸೂರ್ಯಗ್ರಹಣ ಕಾಲದ "ಮಹಾಮಂತ್ರೀಶ್ವರ ಉಪನಿಷನ್ಮಾರ್ಗ ಪ್ರವರ್ತಕ" ಶ್ರೀಮನ್ಮಾಧವರಾ ನು 'ಮಾಧವಪುರ' ವೆಂಬ ನಾಮವನ್ನಿಟ್ಟು, 'ಕಚೇರ' ನಾಮದಿಂದ ಪ್ರ ದ್ಧವಾದ ಗ್ರಾಮವನ್ನು ೩೫ ಇಪ್ಪತ್ತೈದು ಮಂದಿ ಬ್ರಾಹ್ಮಣರಿಗೋಸ್ಕ ದಾನವಾಗಿ ಕೊಟ್ಟನು, ಎಂಬದಾಗಿ ಬರೆಯಲ್ಪಟ್ಟಿದೆ. ಮತ್ತೊಂದು ಪ ದಲ್ಲಿ ಸನ್ಯಾಸ ಗ್ರಹಣಕಾಲವು ಶಾಲಿವಾಹನ ಶಕ ೧೩೩೩ನೇ ಪ್ರಜೋತ್ಪತ್ತಿ ಸಂವತ್ಸರದ ಕಾರ್ತಿಕ ಶುದ್ಧ ೫ ಎಂತಲೂ, ಮತ್ತು ಇವರ ಮೋಕ್ಷಕಾಲ ವು ಶಾಲಿವಾಹನಶಕ ೧೩೦೦ನೇ ಅಕ್ಷಯ ಸಂವತ್ಸರದ ಚೈತ್ರ ಶುದ್ಧ ತ್ರಯೋ ದಶಿ ಎಂತಲೂ, ಬರೆಯಲ್ಪಟ್ಟಿದೆ. ಮತ್ತು ಮೈಸೂರ ಕಾಲೇಜ ಲೇಖನ ದಲ್ಲಿ ಸನ್ನೆ ೧೩೩೩ನೇ ವರ್ಷವು ಜನನ ಕಾಲವೆಂತಲೂ, ಸನ್ನೆ ೧೩೮೬ನೇ

ವರ್ಷವು ಮೋಕ್ಷಕಾಲವೆಂತಲೂ, ಬರೆಯಲ್ಪಟ್ಟಿದೆ. ಈ ಲೇಖಗಳಿಂದ ಕಾಲಿವಾಹನ ಶಕೆ ೧೭೦೦, ೧೮೦೦ರಲ್ಲಿ ಈ ವಿದ್ಯಾರಣ್ಯ ಸ್ವಾಮಿಗಳ ಸ್ಥಿತಿ ಕಾಲಗಳೆಂದು ತಿಳಿಯ ಬರುತ್ತದೆ.

ಇಂಗ್ಲಿಷ ಸಂಖ್ಯೆಯ ಪ್ರಕಾರ ಈ ವರ್ತಮಾನವಾದ ೧೯೧೧ನೇ ಇಸ್ವಿಗೆ ಇವರ ಜನನ ಕಾಲವು ೫೮೦ ವರುಷಗಳೆಂಬದಾಗಿ ತೋರುತ್ತದೆ.

ಶ್ರೀ ಶಂಕರಾಚಾರ್ಯರ ಜನನಕಾಲವು ೭೪೫ನೇ ಇಸವಿಯಾದ್ದರಿಂದ ಅದರ ನಂತರ ಮುಂದೆ ೫೬೬ನೇ ವರ್ಷದಲ್ಲಿ ಇವರ ಜನ್ಮಕಾಲವೆಂದು ತಿಳಿಯಲ್ಪಡುತ್ತದೆ; ಮತ್ತು ಗುರುಪರಂಪರೆಯ ಪ್ರಕಾರ ಶಂಕರಾಚಾರ್ಯರ ಅನಂತರ ೪೦೦ ವರುಷಗಳಾದ ಬಳಿಕ, ಶ್ರೀ ವಿದ್ಯಾರಣ್ಯಸ್ವಾಮಿಗಳಿದ್ದರೆಂದು ತಿಳಿಯಲ್ಪಡುತ್ತದೆ.

"ಸಿದ್ಧಾಂತ ಕೌಮುದೀ" ಎಂಬ ವ್ಯಾಕರಣ ಗ್ರಂಥಕರ್ತನಾದ ಭಟ್ಟೋಜಿ ದೀಕ್ಷಿತನಿದ್ದಕಾಲವು ಈಗ್ಗೆ ೩೦೦ ವರುಷಗಳ ಮೇಲೆ ಆಗಿರುತ್ತದೆ. ಈತನು ವಿದ್ಯಾರಣ್ಯ ಸ್ವಾಮಿಗಳಿಂದ ರಚಿತವಾದ "ಮಾಧವವೃತ್ತಿ" ಎಂಬ ವ್ಯಾಕರಣ ಗ್ರಂಥವನ್ನು ತನ್ನ ಗ್ರಂಥದಲ್ಲಿ ಪ್ರಮಾಣವಾಗಿ ಕೊಟ್ಟಿದ್ದಾನೆ. ಇದರಿಂದಲೂ ಇವರು ೩೦೦ ವರ್ಷಗಳ ಪೂರ್ವದಲ್ಲಿ ಇದ್ದರೆಂದು ತಿಳಿಯ ಬರುವದು.

ಶ್ರೀ ವಿದ್ಯಾರಣ್ಯಸ್ವಾಮಿಯವರು ಮಹಾ ಧುರಂಧರ ಪಂಡಿತರಾಗಿದ್ದರು. ಸ್ವಲ್ಪಕಾಲದಲ್ಲಿಯೇ ಸರ್ವವಿದ್ಯೆಗಳ ಅಧ್ಯಯನ ಮಾಡಿದ್ದರು. ಬಹಳವಾಗಿ ಹೇಳತಕ್ಕದ್ದೇನಿದೆ? ಅನೇಕ ಉತ್ಕೃಷ್ಟ ಪಂಡಿತರಿಂದ ಅಂಗೀಕೃತರಾದ ಸರ್ವಯತಿಶಿರೋಮಣಿಗಳಾದ ಶ್ರೀ ಶಂಕರಾಚಾರ್ಯರು ಹೊರ್ತಾಗಿ ಅವರ ಪರಂಪರೆಯಲ್ಲಿ ಶ್ರೀ ವಿದ್ಯಾರಣ್ಯ ಸ್ವಾಮಿಯಂಥ ಅನ್ಯ ಪಂಡಿತರಾರೂ ಉಂಟಾಗಲಿಲ್ಲ. ಈ ಮೇರೆಗೆ ಈ ಮಹಾತ್ಮರು ಅಪೂರ್ವ ಪಂಡಿತರಾಗಿದ್ದರು. ಈ ವಾರ್ತೆಯು ವಿದ್ವಾಂಸರ ಮುಖದಿಂದಲೂ, ಇವರ ಗ್ರಂಥಗಳಿಂದಲೂ ತಿಳಿಯ ಬರುತ್ತದೆ. ಇವರು ವೈದ್ಯಶಾಸ್ತ್ರ, ಧರ್ಮಶಾಸ್ತ್ರ, ಜ್ಯೋತಿಷಶಾಸ್ತ್ರ, ವ್ಯಾಕರಣಶಾಸ್ತ್ರ, ಮತ್ತು ವೇದಾಂತ ಶಾಸ್ತ್ರಗಳ ಮೇಲೆ ಗ್ರಂಥಗಳನ್ನು ರಚಿಸಿರುವರು. ಅವುಗಳಲ್ಲಿ ಕೆಲವು ಪ್ರಸಿದ್ಧ ಗ್ರಂಥಗಳ ಹೆಸರುಗಳು ಕೆಳಗೆ ಬರೆಯಲ್ಪಟ್ಟವೆ:—

೧. ವೇದಾರ್ಥಪ್ರಕಾಶ— ಇದರಲ್ಲಿ ವೇದಗಳಿಗೆ ಮಹದ್ಗಂಭೀರವಾದ ಭಾಷ್ಯವು ರಚಿಸಿರುವದು.

೩. ಅಧಿಕರಣರತ್ನಮಾಲಾ— ಬ್ರಹ್ಮಮೀಮಾಂಸಾ ಶಾಸ್ತ್ರಕ್ಕೆ ೧೯೨ ಅಧಿಕರಣ ನಾಮಕ ಸೂತ್ರಂಗಳಿರುವವು. ಅವುಗಳ ಮೇಲೆ ಈ ಗ್ರಂಥವನ್ನು ರಚಿಸಿ, ಟೀಕೆಯನ್ನಾದರೂ ತಾವೇ ಬರೆದಿರುವರು.

೪. ಸರ್ವದರ್ಶನಸಾರಸಂಗ್ರಹ—ಇದರಲ್ಲಿ ವೇದಾಂತದಿಂದ ಭಿನ್ನವಾದ ಅನೇಕ ಪ್ರಾಚೀನ ಮತಗಳು ತೋರಿಸಲ್ಪಟ್ಟಿರುವವು.

೪. ಅನುಭೂತಿ ಪ್ರಕಾಶ—ಇದರಲ್ಲಿ ೩೦೦೦ ಶ್ಲೋಕಗಳಿರುವವು. ಅವುಗಳ ಮೂಲಕ ಸಂಕ್ಷೇಪವಾಗಿ ಸರ್ವ ಉಪನಿಷತ್ತುಗಳ ಸರ್ವ ಆಖ್ಯಾಯಿಕಾಸಹಿತವಾದ ಸಾರಾರ್ಥವು ಬರೆಯಲ್ಪಟ್ಟಿರುವದು.

೫. ಬ್ರಹ್ಮಗೀತಾ—ಇದರಲ್ಲಿ ಮಧ್ವ, ರಾಮಾನುಜ, ಶಂಕರ ಮತಗಳ ಪ್ರತಿಪಾದನ ಮಾಡಿಕೊಂಡು, ಶ್ರುತಿಸಮ್ಮತವಾದ ಅದ್ವೈತ ಸಿದ್ಧಾಂತದ ಸ್ಥಾಪನೆ ಮಾಡಲ್ಪಟ್ಟಿರುವದು. ಇದರ ಮೇಲೆ 'ಪ್ರಕಾಶಿಕಾ' ನಾಮಕವಾದ ಟೀಕೆಯು ಮಾಡಲ್ಪಟ್ಟಿರುವದು.

೬. ಪಂಚದಶೀ—ಇದು ವೇದಾಂತ ಗ್ರಂಥವಿದ್ದು ಇದರಲ್ಲಿ ಮುಮುಕ್ಷುಗಳಿಗೆ ಅನುಕೂಲವಾದ ಸಂಗತಿಗಳು ಬರೆಯಲ್ಪಟ್ಟವೆ.

೭. ಜೀವನ್ಮುಕ್ತಿ—ಇದರಲ್ಲಿ ಸನ್ಯಾಸದ ವಿಭಾಗ ಪೂರ್ವಕವಾಗಿ ಜೀವನ್ಮುಕ್ತರ ವಿಲಕ್ಷಣವಾದ ಸುಖದ ಪ್ರಕಾರವು ತೋರಿಸಲ್ಪಟ್ಟಿರುವದು.

೮. ದೃಗ್ದೃಶ್ಯ—ಆಚಾರ್ಯಕೃತವಾದ ಈ ಗ್ರಂಥಕ್ಕೆ ಟೀಕೆಯನ್ನು ಬರೆದಿರುವರು.

೯. ಅಪರೋಕ್ಷಾನುಭೂತಿ—ಆಚಾರ್ಯಕೃತವಾದ ಈ ಗ್ರಂಥಕ್ಕೆ ಟೀಕೆಯೆನ್ನು ಬರೆದಿರುವರು.

೧೦. ಸ್ಕಂದ ಪುರಾಣಾಂತರ್ಗತವಾದ "ಸೂತ ಸಂಹಿತಾ" ನಾಮಕ ಗ್ರಂಥಕ್ಕೆ ವ್ಯಾಖ್ಯಾನವು ಮಾಡಲ್ಪಟ್ಟಿರುವದು; ಮತ್ತು ಶಂಕರಾಚಾರ್ಯಕೃತವಾದವುಗಳೆಂಬ ಗೋವ್ಯ ಗ್ರಂಥಗಳು ಮುಮುಕ್ಷುಗಳ ಹಿತಾರ್ಥವಾಗಿ, ಶ್ರೀ ವಿದ್ಯಾರಣ್ಯ ಸ್ವಾಮಿಗಳಿಂದ ರಚಿಸಲ್ಪಟ್ಟವೆ. ಇವುಗಳಲ್ಲಿ ಅದ್ವೈತ ಸಿದ್ಧಾಂತವು ಚನ್ನಾಗಿ ಪ್ರಸಿದ್ಧ ಮಾಡಲ್ಪಟ್ಟಿರುವದು. ಇವೆಲ್ಲವೂ ವೇದಾಂತಕ್ಕೆ ಅನುಸಾರವಾದ ಗ್ರಂಥಗಳಿರುವವು.

೧೧. ಮಾಧವವೃತ್ತಿ ನಾಮಕ ವ್ಯಾಕರಣ—ಇದರಲ್ಲಿ ಕ್ರಿಯಾಪದಗ

ಳಿಗೆ ಮೂಲಧಾತುಗಳು ೨೫೦೦ ಇರುವವು. ಇವುಗಳೊಡನೆ ಭಿನ್ನ ಭಿನ್ನ ಪ್ರತ್ಯಯಗಳು ಸೇರಿ ಯಾವ ಪ್ರಕಾರದಿಂದ ಶಬ್ದವು ಸಿದ್ಧವಾಗುವದೋ ಆ ಪ್ರಕಾರವಾಗಿ ಪಾಣಿನೀಯ ಸೂತ್ರ, ತದ್ಭಾಷ್ಯ, ಮತ್ತು ವಾರ್ತಿಕ ವಚನಗಳನ್ನು ತೆಗೆದುಕೊಂಡು ಅನುಕ್ರಮದಿಂದ ಉದಾಹರಣೆ ತೋರಿಸಲ್ಪಟ್ಟಿರುವದು. ಅದರಲ್ಲಿ ಪ್ರಾಯಶಃ ಸರ್ವಶಬ್ದಗಳ ಸಂಗ್ರಹ ಮಾಡಲ್ಪಟ್ಟಿರುವದು. ಈ ಗ್ರಂಥದಲ್ಲಿ ೨೫,೦೦೦ ಶ್ಲೋಕಗಳಿರುವವು.

೧೨. ಮಾಧವನಿದಾನ—ಇದು ವೈದ್ಯ ಗ್ರಂಥವಿರುವದು. ಇದರಲ್ಲಿ ೧೫೦೦ ಶ್ಲೋಕಗಳಿರುವವು.

೧೩. ಕಾಲಮಾಧವ—ಇದರಲ್ಲಿ ಸರ್ವಕಾಲದ ನಿರ್ಣಯವು ಮಾಡಲ್ಪಟ್ಟಿರುವದು.

೧೪. ಶತಪ್ರಶ್ನಕಲ್ಪಲತಿಕಾ—ಇದರಲ್ಲಿ ಪ್ರತ್ಯೇಕ ಒಂದೊಂದು ಪ್ರಶ್ನೆಗೆ ಉತ್ತಮ ರೂಪವಾದ ಹತ್ತು ಹತ್ತು ಶ್ಲೋಕಗಳು ಮಾಡಲ್ಪಟ್ಟಿರುವವು; ಮತ್ತು ಆಯಾ ಪ್ರಕರಣಗಳಿಗೆ ನಾಮವು ದಶಕವೆಂದು ಇಟ್ಟಿರುವದು. ಹೀಗೆ ಇದರಲ್ಲಿ ನೂರು ಪ್ರಶ್ನೆಗಳ ಮೇಲೆ ನೂರು ದಶಕಗಳಿರುವವು. ಅವುಗಳಲ್ಲಿ ಪಂಚದ್ರಾವಿಡ ಮತ್ತು ಪಂಚಗೌಡರ ಅಂತರ್ಗತವಾದ ಬ್ರಾಹ್ಮಣರ ಭೇದವು ತೋರಿಸಲ್ಪಟ್ಟಿರುವದು.

೧೫. ಪರಾಶರಮಾಧವನಾಮಗ್ರಂಥ—ಪರಾಶರ ಸ್ಮೃತಿಯ ಮೇಲೆ ವ್ಯಾಖ್ಯಾನವು ಮಾಡಲ್ಪಟ್ಟಿರುವದು.

೧೬. ಕಾಲಮಾಧವ—ಇದು ಕಾಲನಿರ್ಣಯದ ಸ್ವತಂತ್ರಗ್ರಂಥವು. ಇದರಲ್ಲಿ ಪಂಚಾಂಗದ ವರ್ಣನೆಯಿರುವದು.

೧೭. ಜೈಮಿನಿಯ ನ್ಯಾಯಮಾಲಾ—ಜೈಮಿನಿಯ ಮೇಲೆ ವಿಸ್ತಾರವಾದ ಗ್ರಂಥವು ಮಾಡಲ್ಪಟ್ಟಿದೆ. ಇದು ಕರ್ಮಸ್ಮೃತಿಪಾದಕವಾಗಿರುವದು.

೧೮. ಆಚಾರಮಾಧವ—ಇದರಲ್ಲಿ ಬ್ರಾಹ್ಮಣರ ರೀತಿಯ ವರ್ಣನೆ ಮಾಡಲ್ಪಟ್ಟಿರುವದು.

೧೯. ವ್ಯವಹಾರ ಮಾಧವ—ಇದು ವ್ಯವಹಾರದ ನ್ಯಾಯದ ಗ್ರಂಥವು.

೨೦. ವಿದ್ಯಾರಣ್ಯಕಾಲಜ್ಞಾನಗ್ರಂಥ—ಇದರಲ್ಲಿ ಆಂಧ್ರದೇಶದ ರಾಜ

ರ ಮರ್ಯಾದೆ ಇರುವದು. ಮತ್ತು ರಾಜ್ಯಾಧಿರೂಢ ಪುರುಷರ ಕೃತ್ಯಗ ಇರುವದು. ಇದು ಭವಿಷ್ಯದ್ವಾರ್ತಾ ಎನಿಸುವದು.

೩೧. ಶಂಕರದಿಗ್ವಿಜಯ—ಇದರಲ್ಲಿ ಶ್ರೀ ಶಂಕರಾಚಾರ್ಯರ ಚರಿ ತ್ರೆಯ ವರ್ಣನೆ ಮಾಡಲ್ಪಟ್ಟಿರುವದು. ಈ ಗ್ರಂಥದ ಕವಿತೆಯು ಅತಿ ಮನೋಹರ, ಪ್ರೌಢ ಮತ್ತು ಗಂಭೀರವಾಗಿರುವದು. ಶ್ರೀ ವಿದ್ಯಾರಣ್ಯ ಸ್ವಾಮಿಯವರು ಶಂಕರವಿಜಯದ ಪ್ರಥಮ ಸರ್ಗದಲ್ಲಿ ತಮಗೆ ನವೀನ ಕಾಳಿದಾಸ ನಾಮವಿಟ್ಟುಕೊಂಡಿರುವರು. ಅದು ಅನುಚಿತವಲ್ಲ. ಕವಿತಾ ಪ್ರಭಾವದಿಂದ ಉಚಿತವಾಗಿಯೇ ಇರುವದು; ಶ್ರೀ ವಿದ್ಯಾರಣ್ಯ ಸ್ವಾಮಿಯವರ ಲೇಖನವು ಬಹಳ ಸರಳವಾಗಿಯೂ, ಗಂಭೀರವಾಗಿಯೂ, ಮನೋಹರವಾಗಿಯೂ, ಗೂಢಾರ್ಥಯುಕ್ತವಾಗಿಯೂ ಇರುವದು. ಶ್ರೀ ವಿದ್ಯಾರಣ್ಯ ಸ್ವಾಮಿಯವರು ಪೂರ್ವಾಶ್ರಮದಲ್ಲಿ ವಿಜಯನಗರದ ಯದುವಂಶೋತ್ಪನ್ನನಾದ ಕರ್ನಾಟ ರಾಜ್ಯಾಧಿಪತಿಯಾದ ಬುಕ್ಕದೇವರಾಜನ ಕುಲಗುರುವಾಗಿಯೂ, ಪ್ರಧಾನಮಂತ್ರಿಯಾಗಿಯೂ ಇದ್ದರು. ಈ ವಾರ್ತೆಯು ಅಧಿಕರಣ ರತ್ನಮಾಲಾ ಮುಂತಾದ ಗ್ರಂಥಗಳಲ್ಲಿ ಸ್ಪಷ್ಟವಾಗಿ ಬರೆಯಲ್ಪಟ್ಟಿರುವದು. ಈ ಮಹಾತ್ಮರ ಪ್ರತಾಪದಿಂದ ಆ ರಾಜನ ರಾಜ್ಯದ ಮತ್ತು ಈ ರಾಜ್ಯದಲ್ಲಿ ಧರ್ಮದ ಅಭಿವೃದ್ಧಿಯುಂಟಾಗಿತ್ತು; ಗೋವಾ ನಗರದಲ್ಲಿ ತುರ್ಕ ಜನವಿತ್ತು; ಅವರನ್ನು ಹೊರಡಿಸಿ ಅಲ್ಲಿ ಈ ರಾಜನ ಅಮಲು ಉಂಟು ಮಾಡಿದರು; ಮತ್ತು ಸಪ್ತನಾಥ ಮಹಾದೇವನ ಮೂರ್ತಿಯ ಸ್ಥಾಪನೆ ಮಾಡಿಸಿದರು. ಈ ಮಹಾತ್ಮರು "ಕಚರ" ನಾಮಕ ಗ್ರಾಮಕ್ಕೆ ಮಾಧವಪುರ ನಾಮವಿಟ್ಟು, ಬ್ರಾಹ್ಮಣರಿಗೆ ದಾನ ಮಾಡಿದರು. ಈ ದಾನವಲ್ಲದೆ, ಮಾತೆಯ ನಾಮದಿಂದ ಭೂದಾನ ಮಾಡಿದರು. ಅಲ್ಲಿ ಬ್ರಾಹ್ಮಣರಿಗೆ ಭೂಮಿಯ ವಿಭಾಗ ಮಾಡಿ ಕೊಟ್ಟು, ತಮ್ಮ ಮಾತೆಯ ನಾಮಕ್ಕೆ ಅನುಸಾರವಾಗಿ ಗ್ರಾಮದ ರಚನೆ ಮಾಡಿಸಿದರು. ಪ್ರಥಮದಿಂದ ಚಲತೀ ನದಿಗೆ ಈ ಮಹಾತ್ಮರ ಪರಿಚಯದಿಂದ ಮಾಧವತೀರ್ಥ ನಾಮವುಂಟಾಯಿತು. ಈ ಮಹಾತ್ಮರಿಂದ ವಿದ್ಯಾಶಾಲೆಗಳು, ಅನ್ನಛತ್ರಗಳು, ದೇವಾಲಯಗಳು ಅಸಂಖ್ಯಾತಗಳಾಗಿ ಮಾಡಿಸಲ್ಪಟ್ಟವು.

ಈ ರೀತಿಯಿಂದ ಇವರು ಶ್ರೌತಸ್ಮಾರ್ತ ಧರ್ಮದ ಪ್ರವರ್ತಕರಾಗಿದ್ದರು. ಇವರಿಂದ ರಚಿತವಾದ ಗ್ರಂಥಗಳು ಬಹಳ ಶುದ್ಧವಾಗಿ ತಿದ್ದ

ಲ್ಪಟ್ಟು ತಾಳಪತ್ರ ಮುಂತಾದವುಗಳಲ್ಲಿ ಬರೆಯಲ್ಪಟ್ಟು ಇಡಲ್ಪಟ್ಟವು. ಮತ್ತು ಅನೇಕ ಗ್ರಂಥಗಳು ಮಠ ವಿದ್ಯಾಶಾಲಾ ಮತ್ತು ಕ್ಷೇತ್ರಗಳಲ್ಲಿ ಇಡಲ್ಪಟ್ಟವು. ಕೆಲವು ಗ್ರಂಥಗಳು ಪರ್ವತ, ಕಂದರಗಳಲ್ಲಿ ಹಾಕಲ್ಪಟ್ಟವು. ಕೆಲವು ಗ್ರಂಥಗಳು ಭೂಮಿಯಲ್ಲಿ ಹೂಳಲ್ಪಟ್ಟವು. ಶ್ರೀ ವಿದ್ಯಾರಣ್ಯ ಸ್ವಾಮಿಯವರ ಕೆಲವು ಪುಸ್ತಕಗಳನ್ನು ಇಂಗ್ಲೀಷ ಜನರು ಭೂಮಿಯನ್ನು ಅಗಿಸಿ ಹೊರಕ್ಕೆ ತೆಗೆದರು. ಈ ವಾರ್ತೆಯು ೭೦-೮೦ ವರುಷಗಳ ಕೆಳಗೆ ನಡೆಯಿತೆಂದು ತಿಳಿಯುತ್ತದೆ.

ಈ ಮಹಾತ್ಮರು ಗೃಹಸ್ಥಾಶ್ರಮದಲ್ಲಿಯೂ, ಅದ್ವೈತತತ್ವದಲ್ಲಿಯೂ ನಿಷ್ಠಾಪರರಾಗಿ ಮತ್ತು ವಿವೇಕ, ವೈರಾಗ್ಯಾದಿ ಸಕಲ ಸದ್ಗುಣಗಳಿಂದ ಕೂಡಿದವರಾಗಿದ್ದರು. ಇಂಥಾ ಸತ್ಪುರುಷರು ಭೂತ, ಭವಿಷ್ಯತ್, ವರ್ತಮಾನ ಕಾಲದಲ್ಲಿಯೂ ದುರ್ಲಭರಾಗಿರುವರು. ಈ ಪ್ರಕಾರವಾಗಿ ಶ್ರೀ ವಿದ್ಯಾರಣ್ಯ ಸ್ವಾಮಿಯವರು ಗೃಹಸ್ಥಾಶ್ರಮದಲ್ಲಿ ಕಾಲಕ್ಷೇಪ ಮಾಡಿದರು. ಅನಂತರದಲ್ಲಿ ಈ ಮಹಾ ಪುರುಷರಿಗೆ ಒಂದಾನೊಂದು ಸಮಯದಲ್ಲಿ ಗಾಯತ್ರೀ ದೇವಿಯನ್ನು ಪ್ರತ್ಯಕ್ಷ ಮಾಡಿಕೊಳ್ಳಬೇಕೆಂಬ ಇಚ್ಛೆ ಹುಟ್ಟಿತು. ಇದಕ್ಕೋಸ್ಕರ ಬಹಳ ದೇಶದ ಬ್ರಾಹ್ಮಣರನ್ನು ಕರೆಯಿಸಿಕೊಂಡು ಗಾಯತ್ರಿಯ ಪುರಶ್ಚರಣ ಮಾಡಿದರು. ಬಹಳವಾಗಿ ಅನುಷ್ಠಾನ ಮಾಡಿದಾಗ್ಯೂ ಗಾಯತ್ರೀ ದೇವಿಯು ಪ್ರತ್ಯಕ್ಷವಾಗಲಿಲ್ಲ. ಆಗ ಗಾಯತ್ರೀ ಜಪದ ವಿಧಿಯಿಂದ ದೇವಿಯ ಅನಾಗಮನದಿಂದ, ಪೂರ್ವಪುಣ್ಯಪುಂಜದ ಪರಿಪಾಕದಿಂದ ಅವರಿಗೆ ಅತಿಶಯವಾದ ತೀವ್ರ ವೈರಾಗ್ಯ ಉದಯವಾಯಿತು. ಯಾವ ದಿನದಲ್ಲಿ ವೈರಾಗ್ಯ ಉಂಟಾಗುವದೋ ಆ ದಿನದಲ್ಲಿಯೇ ಸನ್ಯಾಸವನ್ನು ಮಾಡಬೇಕು ಇತ್ಯಾದಿ ಶ್ರುತಿ ವಚನದ ಅನುಸಾರವಾಗಿ ಆಗಲೇ ಅವರು ವಿಧಿವತ್ಸನ್ಯಾಸ ಧಾರಣಮಾಡಿದರು. ಅನಂತರ ಗಾಯತ್ರೀ ದೇವಿಯು ಪ್ರತ್ಯಕ್ಷವಾಗಿ ಬಂದು ವರವನ್ನು ಕೊಡುವದಕ್ಕೆ ಪ್ರಯತ್ನ ಪಟ್ಟಳು. ಆಗ ತಾವು ಸನ್ಯಾಸ ಗ್ರಹಣ ಮಾಡಿರುವ ದೆಸೆಯಿಂದ ವರದ ಗ್ರಹಣ ಮಾಡಲಿಲ್ಲ. ಆದಾಗ್ಯೂ ಅವೇಷದರ್ಶನಪ್ರದಳಾದ ದೇವಿಯು ಬಲಾತ್ಕಾರದಿಂದ ವರವನ್ನು ಕೊಡಬೇಕೆಂದು ಪ್ರಯತ್ನಬಟ್ಟಳು. ಆಗ ಈ ಮಹಾತ್ಮರು ಕೇಳಿಕೊಂಡದ್ದೇನೆಂದರೆ--ಎಲೇ ದೇವಿಯೇ, ಒಂದಾನೊಂದು ಸಮಯದಲ್ಲಿ ನಿನ್ನನ್ನು ನೆನಿಸುತ್ತೇನೆ. ಆ ಸಮಯದಲ್ಲಿ ನನ್ನ ಇಚ್ಛಾನುಸಾರವಾಗಿ ಈ ಕ್ಷೇತ್ರದಲ್ಲಿ ಸುವರ್ಣಮುದ್ರಾವೃಷ್ಟಿಯನ್ನು ಕರೆಯ

ಬೇಕು. ಅದರಿಂದ ಸರ್ವಜನರಿಗೂ ದರಿದ್ರತೆಯು ವಿಚ್ಛಿತ್ತಿಯಾಗಬೇಕು, ಎಂಬೀ ವರವನ್ನು ಬೇಡಿಕೊಂಡರು. ಆಗ "ತಥಾಸ್ತು" ಎಂಬದಾಗಿ ನುಡಿದು ದೇವಿಯು ಅಂತರ್ಧಾನ ಹೊಂದಿದಳು.

ಅನಂತರದಲ್ಲಿ ಈ ಮಹಾತ್ಮರು ಆ ದೇಶದ ರಾಜನನ್ನು ಕರೆಯಿಸಿಕೊಂಡು ಈ ವೃತ್ತಾಂತವನ್ನು ತಿಳಿಸಿ, ಪ್ರಜೆಗಳಿಗೆ ಸುವರ್ಣಮುದ್ರಾಪ್ರಾಪ್ತಿಯ ವಿಷಯವಾಗಿ ನಿನ್ನ ಅಭಿಪ್ರಾಯವೇನೆಂದು ಕೇಳಿದರು. ಆಗ ರಾಜನು ನುಡಿದದ್ದೇನೆಂದರೆ– ಯಾವ ಪ್ರಜೆಗಳ ಗೃಹದ ಮೇಲೆ, ಮತ್ತು ಮನೆಗಳ ನಾಲ್ಕೂ ದಿಕ್ಕುಗಳಲ್ಲಿಯೂ, ಸಪಾದ ಹಸ್ತ ಪರಿಯಂತ ಸುವರ್ಣ ಮುದ್ರೆಗಳ ಪ್ರಕ್ಷೇಪವಾಗುವದೋ, ಅವು ಆಯಾಪ್ರಜೆಗಳಿಗೆ ಆಗಬಹುದು; ಮತ್ತು ಅವಶೇಷವಾದ ಮಾರ್ಗಾದಿಕ ಭೂಮಿಗಳಲ್ಲಿ ಯಾವ ಸುವರ್ಣ ಮುದ್ರೆಗಳು ಬೀಳುವೆವೋ, ಅವು ನನ್ನವಾಗಿರಲಿ, ಎಂಬದಾಗಿ ನುಡಿದನು.

ಆಗ ದೇವಿಯು ತನ್ನ ವರದ ಪ್ರಕಾರ ಸಪಾದ ಪ್ರಹರ ಪರ್ಯಂತ ಸುವರ್ಣ ಮುದ್ರಾ ವೃಷ್ಟಿಯನ್ನು ಕರೆದಳು. ಆ ಸುವರ್ಣ ಮುದ್ರಾವೃಷ್ಟಿಯನ್ನು ಆ ಜನರು "ಭಂಗಾಕಸೋನು" ಎಂಬದಾಗಿ ಹೇಳುವರು.

ಬಳಿಕ ಆ ದೇಶದ ರಾಜನು, ಅವಕ್ಕೆ ಸಮಾನವಾಗಿ ಮತ್ತೂ ಬೇರೆ ಸುವರ್ಣ ಮುದ್ರೆಗಳನ್ನು ಮಾಡಿಸಿ, ತನ್ನ ದೇಶದಲ್ಲಿ ಚಲಾವಣೆ ಮಾಡಿದನು. ಈ ವಾರ್ತೆಯು ಆ ದೇಶದಲ್ಲಿ ಜನಗಳಲ್ಲಿ ಪ್ರಖ್ಯಾತವಾಗಿದೆ.



ಸಶೇಷ.

ಭಾಷಾಂತರಕಾರ

ರ. ಅ. ಹೊರಹಟ್ಟಿ.

ಹೆಡ್‌ಮಾಸ್ತರ ಶಾಳಾ ಕೊಣ್ಣೂರ

ಜಿ. ಬೆಳಗಾವ

ಶಾಲಾಪತ್ರಿಕೆ

ಪುಸ್ತಕ ೪೭ | ಜುಲೈ ೧೯೧೧. | ಸಂಚಿಕೆ ೭.

ರಾಜ್ಯಾರೋಹಣಸಮಾರಂಭವು.

ಕಳೆದ ತಿಂಗಳ ೨೨ನೇ ತಾರೀಖಿನ ದಿವಸವು ಬ್ರಿಟಿಶ್ ಸಾಮ್ರಾಜ್ಯ ದಲ್ಲಿ ಅತ್ಯಂತ ಆನಂದದ ದಿವಸವಾಗಿತ್ತು. ಆ ಶುಭದಿವಸದಲ್ಲಿ, ಎಷ್ಟೋ ತಿಂಗಳುಗಳಿಂದ ಸರ್ವತೋಮುಖವಾಗಿದ್ದಂತೆ, ಸಾರ್ವಭೌಮ ರಾದ ಪಂಚಮಜಾರ್ಜರವರ ಮತ್ತು ಅವರ ಪತ್ನಿಯೆರಾದ ಮೇರೀ ಮಹಾ ರಾಣಿಯವರ ರಾಜ್ಯಾರೋಹಣಸಮಾರಂಭವು ಅಪ್ರತಿಮವಾದ ವಿಜೃಂಭಣೆ ಯಿಂದ ನೆರವೇರಿಸಲ್ಪಟ್ಟಿತು. ಜಗತ್ತಿನ ಪಟ್ಟಣಗಳಲ್ಲಿ ಮಿಗಿಲಾದಂತೆ, ಪ್ರಾ ಚೀನ ಅರ್ವಾಚೀನ ಕಾಲಗಳ ಸಾಮ್ರಾಜ್ಯಗಳಲ್ಲಿ ಅದ್ವಿತೀಯವಾದ ಬ್ರಿಟಿಶ್ ಸಾಮ್ರಾಜ್ಯದ ರಾಜಧಾನಿಯಾದಂತೆ ಲಂಡನ ಪಟ್ಟಣವು ಆ ದಿವಸ ಅಮಿತ ವಾದ ಐಶ್ವರ್ಯ, ಅತುಲವಾದ ವೈಭವ, ನಿರತಿಶಯವಾದ ಉತ್ಸಾಹ, ನಿಸ್ಸೀ ಮವಾದ ರಾಜನಿಷ್ಠೆ, ಇವೇ ಮೊದಲಾದವುಗಳ ಅವರ್ಣನೀಯವಾದ ನೋಟವಾಗಿತ್ತೆಂದು ಆ ದಿವಸದ ಸಮಾರಂಭವನ್ನು ಕಣ್ಣುಟ್ಟ ನೋಡಿದ ವರು ಬರೆಯುತ್ತಾರೆ. ಅದನ್ನು ಇಲ್ಲಿ ಸಾದ್ಯಂತವಾಗಿ ವರ್ಣಿಸುವದು ಅಸಾ ಧ್ಯವಾದ್ದರಿಂದ ಅದರ ಸಾರವನ್ನು ಮಾತ್ರ ಕೊಡುತ್ತೇವೆ:—

ಸಮಾರಂಭದ ಕಾಲದ ಲಂಡನ ಪಟ್ಟಣವು:—. ಈಗ ಎಷ್ಟೋ ದಿವಸಗಳಿಂದ ಜನರ ಬಾಯಲ್ಲಿ ಇದೊಂದೇ ವಿಷಯವಾಗಿದ್ದದರಿಂದ ಈ ಅಪೂರ್ವವಾದ ಸಮಾರಂಭವನ್ನು ನೋಡಬೇಕೆಂದು ಜಗತ್ತಿನ ಎಲ್ಲ ದೇಶ ಗಳ ನಾನಾ ಜಾತಿಗಳ ಹಾಗು ವರ್ಣಗಳ ಜನರು ಲಂಡನ ಪಟ್ಟಣದಲ್ಲಿ ನೆರೆದಿದ್ದರು. ಇದಕ್ಕೂ ಪೂರ್ವದಲ್ಲಿ ಇಷ್ಟು ಜನಸಮೂಹವು ಅಲ್ಲಿ ಎಂದೂ ಕೂಡಿದ್ದಿಲ್ಲೆಂದು ಹೇಳುತ್ತಾರೆ. ಸಮಾರಂಭದ ದಿವಸ ಪಟ್ಟಣದ ರಾಜಮಾರ್ಗಗಳಲ್ಲಿ ಮಂದಗತಿಯಿಂದ ತಿರುಗುವ ಜನರ ಪ್ರಚಂಡಪಾಡ

ಸಂದಣಿಯು ಶಾಂತವಾದ ಸಮುದ್ರದಂತೆ ಕಂಗೊಳಿಸುತ್ತಿತ್ತು. ಆ ಕಾಲಕ್ಕೆ ಲಂಡನ ಪಟ್ಟಣವು ಸರ್ವರಾಷ್ಟ್ರೀಯತ್ವವನ್ನು ಪಡೆದಿತ್ತೆಂದು ಹೇಳಬಹುದು; ಅಥವಾ, ಅದು ಒಂದು ಸಣ್ಣ ಜಗತ್ತೇ ಆಗಿತ್ತೆಂದರೂ ಅತಿಶಯೋಕ್ತಿಯಾಗಲಾರದು. ಯಾಕಂದರೆ, ಆ ಕಾಲಕ್ಕೆ ಅಲ್ಲಿ ಜಗತ್ತಿನ ಎಲ್ಲ ದೇಶಗಳ ಜನರು ನೆರೆದಿದ್ದರಿಂದ ಜಗತ್ತಿನ ಸಮಸ್ತ ಭಾಷೆಗಳ ಗಲಿಬಿಲಿಯಾಗಿತ್ತು; ಆದರೆ, ಇಂಗ್ಲೀಷ ಭಾಷೆಯು ಮಾತ್ರ ಎಲ್ಲರಿಗೂ ತಿಳಿಯುತ್ತಿತ್ತು.

ಪೋಲೀಸರ ವ್ಯವಸ್ಥೆಯು:— ಜನಸಮ್ಮರ್ದವು ಅತಿಶಯವಾಗಿದ್ದಾಗ್ಯೂ ಯಾವತ್ತು ವ್ಯವಹಾರಗಳು ವ್ಯವಸ್ಥೆಯಿಂದ ಜರಗುತ್ತಿದ್ದವು ಹಾಗೂ ಕಾಯಿದೆಗಳನ್ನೂ ನಿಯಮಗಳನ್ನೂ ಪಾಲಿಸುವದರ ಕಡೆಗೆ ಜನರ ಪ್ರವೃತ್ತಿಯು ವಿಶೇಷವಾಗಿತ್ತೆಂಬ ಸಂಗತಿಯು ಪ್ರೇಕ್ಷಕರ ಲಕ್ಷದಲ್ಲಿ ಕೂಡದೇ ಬರುವಂತೆ ಇತ್ತು. ಪೋಲೀಸರ ಬುದ್ಧಿವಂತಿಕೆಯಿಂದಲೂ, ಚಾತುರ್ಯದಿಂದಲೂ, ಸೌಜನ್ಯದಿಂದಲೂ ಸಮಾರಂಭವು ನಿರ್ವಿಘ್ನವಾಗಿ ಸಾಂಗವಾಯಿತು. ಈ ಪ್ರಕಾರ ಜನರ ವರ್ತನವು ವ್ಯವಸ್ಥಿತವಾಗಿರದಿದ್ದರೆ ಪೋಲೀಸರಿಗೆ ವ್ಯವಸ್ಥೆಯನ್ನು ಕಾಯ್ದುಕೊಳ್ಳುವದು ಬಹಳ ಕಠಿಣವಾಗುತ್ತಿತ್ತೆಂಬದನ್ನು ಎಲ್ಲರೂ ಅಂತಃಕರಣಪೂರ್ವಕವಾಗಿ ಒಪ್ಪಿಕೊಳ್ಳುವಂತೆ ಇತ್ತು.

ಮೆರವಣಿಗೆ:— ಮೆರವಣಿಗೆಯು ೨೨ನೇ ತಾರೀಖು ಗುರುವಾರ ಮುಂಜಾನೆ ೯॥ ಗಂಟೆಗೆ ಪ್ರಾರಂಭವಾಗತಕ್ಕದ್ದಿತ್ತು. ಆದಕಾರಣ, ಅದಕ್ಕೂ ಪೂರ್ವದಲ್ಲಿ ಸುಮಾರು ೬।೧೦ ತಾಸು ಹೊದಲೇ ರಾಜಮಾರ್ಗಗಳಲ್ಲಿ ಜನರ ಗುಂಪುಗಳು ನೆರೆಯಲಾರಂಭಿಸಿದವು. ಎಷ್ಟೋ ಜನರು ಮುನ್ನಾ ದಿವಸ ರಾತ್ರಿಯೇ ಮಾರ್ಗದ ಎಡಬಲದ ತೋಟಗಳಲ್ಲಿ ಮಲಗಿದ್ದರು. ಮೆರವಣಿಗೆಯು ಹೊದಲು ಎಷ್ಟೋ ಹೊತ್ತು ಗಾಡಿಗಳ ಸರಹದ್ದಾರಿಯು ಕಟ್ಟು ಮಾಡಲ್ಪಟ್ಟಿತ್ತು; ಹಾಗೂ ಮುಂಜಾನೆ ೮ ಗಂಟೆಯ ತರುವಾಯ ಪಾದಚಾರಿಯಾದ ಮನುಷ್ಯನಿಗೂ ಕೂಡ ಆ ಮಾರ್ಗದಿಂದ ಹೋಗುವ ಧೈರ್ಯವಿದ್ದಿಲ್ಲ. ಆ ಕಾಲಕ್ಕೆ ಎಲ್ಲ ಮಾರ್ಗಗಳಲ್ಲಿಯೂ ಕಾವಲು ಇಡಲ್ಪಟ್ಟಿತ್ತು.

ಬಕಿಂಘ್ಯಾಮ ಅರಮನೆಯಿಂದ ವೆಸ್ಟಮಿನಿಸ್ಟರ ಅಬ್ಬಿ ಎಂಬ ಮಠದವರೆಗೆ ಮೆರವಣಿಗೆಯ ರಾಜಮಾರ್ಗದ ಎಡಬಲದಲಿ. ಕೆಂಪು ಸೋಪಾಕ

ಗಳನ್ನು ಹಾಕಿಕೊಂಡ ೪೦ ಸಾವಿರ ರಾಹುತರು ಸಜ್ಜಾಗಿ ನಿಂತಿದ್ದರು. ನಡ ನಡುವೆ ಸುಂದರ ಪೋಷಾಕುಗಳನ್ನು ಧರಿಸಿದ ಸೇನಾಧಿಕಾರಿಗಳು ಅತ್ತಲಿಂದ ಇತ್ತ, ಇತ್ತಲಿಂದ ಅತ್ತ ಕುದುರೆಗಳನ್ನು ಓಡಿಸಿಯಾಡುವದನ್ನು ಕಂಡು, ರಾಜದರ್ಶನೋತ್ಸುಕರಾದ ಜನರ ಮನಸಿಗೆ ಒಂದು ಬಗೆಯ ಆನಂದವಾಗುತ್ತಿತ್ತು. ಅನಂತರ ಮೆರವಣಿಗೆಯ ಮುಖ್ಯ ಮೂರು ಭಾಗಗಳು ಒಂದರ ಹಿಂದೊಂದರಂತೆ ಕ್ರಮವಾಗಿ ದೃಷ್ಟಿಗೆ ಬೀಳಹತ್ತಿದವು. ಎಲ್ಲಕ್ಕೂ ಮೊದಲು ವರದೇಶಗಳ ರಾಜರ ಪ್ರತಿನಿಧಿಗಳ ಗಾಡಿಗಳು ಬಂದವು. ಅವುಗಳಲ್ಲಿ ಎಲ್ಲಕ್ಕೂ ಕಡೆಯ ಗಾಡಿಯಲ್ಲಿ ಜರ್ಮನಿಯ ರಾಜಕುಮಾರರು ಕುಳಿತಿದ್ದರು. ಅವರನ್ನು ಕಂಡ ಕೂಡಲೆ, ಪ್ರಚಂಡವಾದ ಜನರ ಸಮೂಹವು ಎಷ್ಟೋ ನಿಮಿಟುಗಳ ವರೆಗೆ ಕರತಲತಾಡನದಿಂದ ಒಂದೇ ಸವನಾಗಿ ಆನಂದಪ್ರದರ್ಶನವನ್ನು ಮಾಡಿತು. ಈ ಗಾಡಿಗಳ ತರುವಾಯ ಇಂಗ್ಲಂಡದ ಅರಸುಮನೆತನದವರು ಕುಳಿತ ಗಾಡಿಗಳು ಬಂದವು. ಹಿಂದೊಂದು ಸಾಲಾಗಿ ಬರಹತ್ತಿದವು. ಆಗ ಎಲ್ಲ ಜನರು ರಾಜಪುತ್ರರನ್ನು ಉತ್ಸುಕತೆಯಿಂದ ನೋಡುತ್ತಿದ್ದರು. ಇವೆರಡೂ ಭಾಗಗಳ ಹಿಂದೆಯೂ ಮುಂದೆಯೂ ಉತ್ಕೃಷ್ಟವಾದ ಪೋಷಾಕು ಹಾಕಿಕೊಂಡ ರಾಹುತರ ಒಂದೊಂದು ತಂಡವು ನಡೆದಿತ್ತು. ಇವುಗಳ ಹಿಂದಿನಿಂದ ಎಂಟು ಕುದುರೆಗಳನ್ನು ಹೂಡಿದ ಮಹಾರಾಜರ ರಥವು ಬಂತು. ಈ ರಥದ ಮುಂದೆ ನಾಮಾಂಕಿತರೂ ಸನ್ಮಾನ್ಯರೂ ಆದ ಅಧಿಕಾರಿಗಳು ಇದ್ದರು. ನಾನಾ ಬಣ್ಣದ ಪೋಷಾಕುಗಳಿಂದಲೂ, ದೊಡ್ಡಿಸ್ತನದ ನಡವಳಿಕೆಯಿಂದಲೂ ವಿಶಿಷ್ಟರಾದ ಹಿಂದುಸ್ತಾನದ ಸಂಸ್ಥಾನಿಕರು ಜನರ ಲಕ್ಷ ಪೂರ್ವಕವಾದ ದೃಷ್ಟಿಯ ವಿಷಯವಾದರು. ಅವರನ್ನು ನೋಡಿದ ಕೂಡಲೆ ಜನರು ಆನಂದದ ಚಪ್ಪಾಳಿಯನ್ನು ಬಾರಿಸಿದರು. ಆ ಚಪ್ಪಾಳಿಯು ಗರ್ಜನೆಗೆ ಉತ್ತರವೆಂಬ ಅರ್ಥದಿಂದ ಸಂಸ್ಥಾನಿಕರು ಅವರಿಗೆ ಆಗಾಗ್ಗೆ ಸಮಾಧಾನದಿಂದ ಮುಜರೆಯನ್ನು ಮಾಡುತ್ತಿದ್ದರು. ಅವರ ಹಿಂದಿನಿಂದ ಮಹಾರಾಣಿಯವರ ಸಮೇತವಾಗಿದ್ದ ಮಹಾರಾಜರ ರಥವು ದೃಷ್ಟಿಪಥವನ್ನೈದಲಾಗಿ, ಜನರು ಪ್ರಚಂಡವಾದ ಜಯಘೋಷದ ಗರ್ಜನೆಯಿಂದ ತಮ್ಮ ಅಂತಃಕರಣಪೂರ್ವಕವಾದ ಆನಂದವನ್ನು ವ್ಯಕ್ತ ಪಡಿಸಿದರು. ಈ ಪ್ರಕಾರ ಮೆರವಣಿಗೆಯು ವೆಸ್ಟಮಿನಿಸ್ಟರ ಅಬ್ಬಿ ಎಂಬ ಮಠದ ಕಡೆಗೆ ಸಾಗಿತು.

ರಾಜ್ಯಾಭಿಷೇಕವಿಧಿಯು:—ಆ ಕಾಲಕ್ಕೆ ವೆಸ್ಟಮಿನಿಸ್ಟರ ಅಬಿಯ ಪ್ರಾಚೀನ ಇಮಾರತಿಗೆ ಒಂದು ವಿಶೇಷತರದ ಶೋಭೆಯು ಪ್ರಾಪ್ತವಾಗಿತ್ತು. ಬೇರೆ ಬೇರೆ ಬಣ್ಣದ ಧ್ವಜಗಳು, ತೋರಣಗಳು, ಪ್ರೇಕ್ಷಕ ಜನರು ಕೂಡ್ರುವದಕ್ಕಾಗಿ ಗ್ಯಾಲರಿಯಂತೆ ಕಟ್ಟಲ್ಪಟ್ಟ ಪಾವಟಿಗೆಗಳು, ಅಲ್ಲಿ ನೆರೆದ ಜನರ ಸಂದಣಿಯು, ಅವರ ಬೇರೆ ಬೇರೆ ಬಣ್ಣದ ಪೋಷಾಕುಗಳು ಇವೆಲ್ಲವುಗಳಿಂದ ಆ ಇಮಾರತಿಯ ಪ್ರಾಚೀನತ್ವವೆಲ್ಲ ಅಡಗಿ ಅದಕ್ಕೆ ಮನೋಹರವಾದ ಸ್ವರೂಪವುಂಟಾಗಿತ್ತು. ಮಠದಲ್ಲಿ ಜರುಗಿದ ರಾಜ್ಯಾಭಿಷೇಕ ವಿಧಿಯು ಅತ್ಯಂತ ಗಂಭೀರವಾದದ್ದೂ ಚಿತ್ತಾಕರ್ಷಕವಾದದ್ದೂ ಇತ್ತು. ೫ನೆಯ ಜಾರ್ಜ ಮಹಾರಾಜರ ಮೊದಲು ಅದೇ ಸ್ಥಳದಲ್ಲಿ ರಾಜರೂ ರಾಣಿಯರೂ ಕೂಡಿ ೫೯ ಜನರಿಗೆ ಇದೇ ಧರ್ಮವಿಧಿಯಿಂದ ರಾಜ್ಯಾಭಿಷೇಕವಾಗಿರುತ್ತದೆ. ಕೈಯಲ್ಲಿ ರಾಜದಂಡವನ್ನು ಕೊಡುವದು, ಮೈಗೆ ಎಣ್ಣೆಯನ್ನು ಪೂಸುವದು, ತಲೆಯ ಮೇಲೆ ಮುಕುಟವನ್ನು ಇಡುವದು, ಇವೆ ಮೊದಲಾದ ವಿಧಿಗಳು ಇಂಗ್ಲಂಡದ ಎಡ್ವರ್ಡ ದೀ ಕನ್ಫೆಸರನೆಂಬ ಅ-

ಸನ ಕಾಲದಿಂದ ನಡೆದು ಬಂದಿರುತ್ತವೆ; ಮತ್ತು ಅವು ಈಗಿನ ಧರ್ಮವಿಧಿಗಳಲ್ಲಿಯೂ ಸಮಾವೇಶವಾಗುತ್ತವೆ. ಅಂದಿನಿಂದ ಇಂದಿನ ವರೆಗೆ ಒಂದು ಸಾವಿರ ವರ್ಷಗಳು ಗತಿಸಿ ಹೋದಾಗ್ಯೂ ಈ ಧಾರ್ಮಿಕ ವಿಧಿಗಳಲ್ಲಿ ತಿಲಮಾತ್ರವಾದರೂ ಹೆಚ್ಚು ಕಡಿಮೆಯಾಗಿಲ್ಲ!! ಈ ಸಂಗತಿಯು ಇಂಗ್ಲಿಷ ಜನರ ಪರಸ್ಪರ ವಿರೋಧವಾದ ಸ್ವಭಾವಕ್ಕೆ ಬಲವತ್ತರವಾದ ಸಾಕ್ಷಿಯಾಗಿದೆ. ರಾಜ್ಯಕಾರಭಾರದಲ್ಲಿಯೂ, ವ್ಯಾಪಾರೋದ್ಯೋಗಗಳಲ್ಲಿಯೂ ಅವರು ವಿಲಕ್ಷಣವಾಗಿ ಪ್ರಗತಿಪರರಾಗಿದ್ದಾರೆ; ಆದರೆ ಮೇಲೆ ಹೇಳಿದಂಥ ವಿಧಿವಿಧಾನಗಳನ್ನು ಪರಂಪರೆಯಿಂದ ನಡೆದು ಬಂದ ಸಾಂಪ್ರದಾಯಗಳಂತೆ ಅಚ್ಚಳಿಯದೆ ನಡಿಸುವದರಲ್ಲಿಯೂ ದಕ್ಷರಾಗಿರುತ್ತಾರೆ. ಈ ಎರಡೂ ಗುಣಗಳು ಅವರಲ್ಲಿ ವಿಚಿತ್ರವಾಗಿ ಕೂಡಿಕೊಂಡಿರುವವು. ರಾಜ್ಯಾಭಿಷೇಕವಿಧಿಯು ಮುಗಿದ ಮೇಲೆ ಮಹಾರಾಜರು ಸಾಮ್ರಾಜ್ಯದೊಳಗಿನ ಮಾಂಡಲಿಕ ರಾಜರಿಂದ ಸಲಾಮುಗಳನ್ನು ತಕ್ಕೊಂಡರು.

ಮೆರವಣಿಗೆಯು ತಿರುಗಿ ಬರುವ ಕಾಲದ ವ್ಯವಸ್ಥೆಯು—ಮೆರವಣಿಗೆಯು ತಿರುಗಿ ಹೋಗುವಾಗ ಮುಂಚಿನ ವ್ಯವಸ್ಥೆಯು ಬದಲಾ

ಯಿತು. ಮಹಾರಾಜರ ರಥವು ಎಲ್ಲಕ್ಕೂ ಮುಂದೆ ಹೋಗುತ್ತಿತ್ತು. ಆ ಕಾಲಕ್ಕೆ ಪ್ರೇಕ್ಷಕರ ಚಪ್ಪಾಳಿಗಳ ಗರ್ಜನೆಯು ಒಂದೇ ಸವನೆ ನಡೆದಿತ್ತು. ಈ ಕಾಲದಲ್ಲಿ ಉದಾರಮತವಾದಿಗಳ ಪ್ರಾಬಲ್ಯವಿದ್ದಾಗ್ಯೂ, ಸಮಾಜ ಸತ್ತಾವಾದಿತ್ವವು ತಲೆಯೆತ್ತಲು ಯತ್ನಿಸುತ್ತಿದ್ದಾಗ್ಯೂ ಜನರು ಅಂತಃಕರಣ ಪೂರ್ವಕವಾಗಿ ತಮ್ಮ ರಾಜನಿಷ್ಠೆಯನ್ನು ವ್ಯಕ್ತ ಮಾಡಿದರು.

ಶಾಲೆಯ ಹುಡುಗರಿಗೆ ಶಿಪಾಯಿಗಿರಿಯ ಕೆಲಸವನ್ನು ಕಲಿಸಿದ್ದಲ್ಲದೆ ಬಾಲದೂತ (Boy Scouts)ರೆಂಬ ಹೆಸರಿನ ಅವರ ತಂಡಗಳು ಮಾಡಲ್ಪಟ್ಟಿದ್ದವು. ಮತ್ತು ಅವರಿಗೆ ಈ ಮೆರವಣಿಗೆಯಲ್ಲಿ ಬೇರೆ ಬೇರೆ ಕೆಲಸಗಳು ಹಂಚಿ ಕೊಡಲ್ಪಟ್ಟಿದ್ದವು. ಇದರಿಂದ ಆ ದೇಶದ ಹುಡುಗರಿಗೆ ಚಿಕ್ಕಂದಿನಿಂದಲೇ ಸ್ವದೇಶ ಸೇವೆಯ ಹಾಗು ಸ್ವದೇಶಪ್ರೀತಿಯ ಪಾಠಗಳು ಕೊಡಲ್ಪಡುವವೆಂಬದು ಸ್ಪಷ್ಟವಾಗುವದು.

ಇಂಗ್ಲಂಡದ ಕಡಗುಪಡೆಯ ಹಾಗು ದಂಡಿನ ವೈಭವವು— ಮಹಾರಾಜರ ಏನೇ ದಿವಸದ ಮೆರವಣಿಗೆಯಂತೂ ಮೊದಲನೆಯ ದಿವಸದ ಮೆರವಣಿಗೆಯನ್ನು ವೈಭವದ ಸಂಬಂಧದಿಂದಲೂ, ಅಚ್ಚುಕಟ್ಟುತನದ ಸಂಬಂಧದಿಂದಲೂ ಹಿಂದೆ ಹಾಕಿತು. ಈ ದಿವಸ ಇಂಗ್ಲಂಡದ ದಂಡಿನ ವೈಭವದ ಅತ್ಯುತ್ತಮವಾದ ನೋಟವು ಜನರ ಕಣ್ಣಿಗೆ ಬಿತ್ತು. ಮುನ್ನಾ ದಿವಸದಂತೆ ಈ ದಿವಸದ ಮೆರವಣಿಗೆಗೂ ಧಾರ್ಮಿಕವಿಧಿಗಳಿಗೂ ಏನೂ ಸಂಬಂಧವಿದ್ದಿಲ್ಲ. ಇದು ಕೇವಲ ಲಷ್ಕರೀ ಮೆರವಣಿಗೆಯಾಗಿತ್ತು. ಆದರೂ ಈ ಮೆರವಣಿಗೆಯೂ ಅತ್ಯಂತ ಮನೋಹರವಾಗಿ ಆಯಿತು. ಈ ಮೆರವಣಿಗೆಯ ಅಗ್ರಭಾಗದಲ್ಲಿ ರಾಯಲ್‌ಗಾರ್ಡ್ಸ್, ಅಂದರೆ ರಾಜಸಂರಕ್ಷಕರು, ತರುವಾಯ ರಾಯಲ್ ನೇವ್ಹಿ, ಅಂದರೆ ಹಡಗುಪಡೆಯವರು, ಅವರ ಹಿಂದೆ ತೋಫಖಾನೆ, ಆ ಬಳಿಕ ಕಾಲಾಳುಗಳ ದಂಡು ಈ ಪ್ರಕಾರ ವ್ಯವಸ್ಥೆಯು ಇತ್ತು. ಎಲ್ಲ ಮೆರವಣಿಗೆಯು ಬಹಳ ಅಟ್ಟಹಾಸದಿಂದ ಸಾಗಿತು. ಅರಸರೂ ರಾಣಿಯವರೂ ಬೆಂಪ ತೆಗೆದ ಗಾಡಿಯಲ್ಲಿ ಕುಳಿತು ಕೊಂಡು ಒಂದೇ ಸವನಾಗಿ ಜನರ ಮುಜುರೆಗಳನ್ನು ಸ್ವೀಕರಿಸುತ್ತಾ ಇದ್ದರು. ಯುದ್ಧಗಳಲ್ಲಿ ತಮ್ಮ ಶೌರ್ಯವನ್ನು ತೋರಿಸಿದ ಪ್ರತಾಪ ಶಾಲಿಗಳು ರಾಜಾಸಾಹೇಬರಿಗೆ ತ್ರಾಫಲ್ಗಾರ ಚೌಕಿನಲ್ಲಿ ಸ್ವಾಗತವನ್ನು ಮಾಡಿದರು. ರಾಜಾಸಾಹೇಬರು ನಗರ ಪ್ರವೇಶವನ್ನು ಮಾಡಿದ ಕಾಲಕ್ಕೆ

ಲಂಡನಿನ ಲಾರ್ಡಮೇಯರನು ಅವರಿಗೆ ಒಂದು ಸುಂದರವಾದ ಹಿಡಿಕೆಯುಳ್ಳ ಕತ್ತಿಯನ್ನು ಅರ್ಪಿಸಿದನು. ಈ ಪದ್ಧತಿಯು ಬಹು ಪ್ರಾಚೀನ ಕಾಲದಿಂದ ನಡೆದು ಬಂದಿರುತ್ತದೆ. ಎಷ್ಟೋ ಕಡೆಗೆ ಮಹಾರಾಜರಿಗೆ ಮಾನಪತ್ರಗಳು ಕೊಡಲ್ಪಟ್ಟವು. ಮಹಾರಾಜರು ಅವುಗಳಿಗೆ ಸಮಯೋಚಿತವಾದ ಉತ್ತರಗಳನ್ನು ಕೊಟ್ಟರು. ಈ ಮೆರವಣಿಗೆಯಿಂದ ಇಂಗ್ಲಂಡಿನ ವೈಭವವು ವ್ಯಕ್ತವಾಗುವದಲ್ಲದೆ ಇಂಗ್ಲಿಷ ಸಾಮ್ರಾಜ್ಯದ ಬಲವೂ, ವಿಸ್ತಾರವೂ ಎಷ್ಟು ಇರವವೆಂಬದರ ಕಲ್ಪನೆಯುಂಟಾಗುತ್ತಿತ್ತು.

ಬ್ರಿಟಿಶರು ಒಕ್ಕಲಾಗಿ ನಿಂತ ಪ್ರದೇಶಗಳಿಂದ ಎಷ್ಟೋ ಪ್ರತಿನಿಧಿಗಳು ಬಂದಿದ್ದರಲ್ಲದೆ, ಕಾನಡಾ, ದಕ್ಷಿಣಆಫ್ರಿಕಾ, ಆಸ್ಟ್ರೇಲಿಯಾ, ನ್ಯೂಝಿಲೀಲಂಡ ಈ ದೇಶಗಳ ಮುಖ್ಯ ಪ್ರಧಾನರೂ ಈ ಮೆರವಣಿಗೆಯಲ್ಲಿ ಗಾಡಿಯಲ್ಲಿ ಕುಳಿತು ನಡೆದಿದ್ದರು. ಅವರ ಸನ್ಮಾನಾರ್ಥವಾಗಿ, ನೆರೆದ ಜನರು ಆಗಾಗ್ಗೆ ಚಪ್ಪಾಳಿಗಳನ್ನು ಬಾರಿಸುತ್ತಿದ್ದರು. ಹಿಂದುಸ್ತಾನದ ಸಂಸ್ಥಾನಿಕರೂ ತಮ್ಮ ತಮ್ಮ ರಾಣಿಯರೊಡನೆ ಗಾಡಿಯೊಳಗೆ ಕುಳಿತು ಮೆರವಣಿಗೆಯ ಸಂಗಡ ನಡೆದಾಗ ಜನರು ಅವರನ್ನೂ ಅಂತಃಕರಣಪೂರ್ವಕವಾಗಿ ಚಪ್ಪಾಳಿಗಳನ್ನು ಬಾರಿಸಿ ಸನ್ಮಾನಮಾಡಿದರು. ಆಗ ಬ್ರಿಟಿಶ್ ಸಾಮ್ರಾಜ್ಯದ ಘಟಕರೂ ಹಿಂದುಸ್ತಾನದ ಪ್ರತಿನಿಧಿಗಳೂ ಎಂಬ ಎರಡು ಸಂಬಂಧಗಳಿಂದ ತಮ್ಮ ಯೋಗ್ಯತೆಯು ಬಹಳ ದೊಡ್ಡದಿರುವದೆಂದು ಹಿಂದುಸ್ತಾನದ ಸಂಸ್ಥಾನಿಕರಿಗೆ ನಿಸ್ಸಂಶಯವಾಗಿ ಎನಿಸಿರಬಹುದು. ಆ ಕಾಲಕ್ಕೆ ಪರರಾಷ್ಟ್ರಗಳ ಪ್ರತಿನಿಧಿಗಳಿಗೂ ಜಗತ್ತಿನಲ್ಲಿ ಬ್ರಿಟಿಶರ ವರ್ಚಸ್ಸು ಎಷ್ಟಿರುವದೆಂಬದು ಪೂರ್ಣವಾಗಿ ನಿದರ್ಶನಕ್ಕೆ ಬಂದಿರಲಿಕ್ಕೆ ಬೇಕು.

ಈ ೩ನೆಯ ದಿವಸದ ಮೆರವಣಿಗೆಗಿಂತಲೂ ೩ನೆಯ ದಿವಸ ಆದ ಹಡಗಪಡೆಯ ನೋಟವೂ ಬಹಳ ಮನೋಹರವಾಯಿತು. ಇಂಗ್ಲಂಡದ ಹಡಗಗಳೂ ಹೀರೆ ರಾಷ್ಟ್ರಗಳ ಹಡಗಗಳೂ ಕೂಡಿ ೧೮೫ ಹಡಗಗಳ ಎರಡು ಸಾಲುಗಳು ಉಭಯ ಪಾರ್ಶ್ವಗಳಲ್ಲಿ ನಿಂತಿದ್ದವು. ಅವುಗಳ ನಡುವ ರಾಜಾಸಾಹೇಬರ ಹಡಗವು ಸಾವಕಾಶವಾಗಿ ನಡೆದಿತ್ತು. ಅವರ ಸನ್ಮಾನಾರ್ಥವಾಗಿ ಮೂರು ಸಾವಿರ ತೋಪುಗಳು ಹಾರಿಸಲ್ಪಟ್ಟವು. ಈ ಸಮಾರಂಭದಿಂದ ಇಂಗ್ಲಂಡದ ಹಡಗಪಡೆಯ ಸಾಮರ್ಥ್ಯವು ಸ್ಪಷ್ಟವಾಗಿ ಕಂಡು ಬರುವಂತಿತ್ತು. ಅದನ್ನು ನೋಡಿದ ದೇಶಾಂತರಗಳ ಜನರು

ಆಶ್ಚರ್ಯಚಕಿತರಾದರು. ರಾತ್ರೆಯಲ್ಲಿ ಎಲ್ಲ ಹಡಗಗಳಲ್ಲಿ ಅತ್ಯಂತ ಪ್ರೇಕ್ಷಣೀಯವಾದ ದೀಪೋತ್ಸವವಾಯಿತು.

ದೀಪೋತ್ಸವವು:—ತರುವಾಯ, ಮೂರು ದಿವಸ ರಾತಿ ಪಟ್ಟಣದ ಎಲ್ಲ ಭಾಗಗಳಲ್ಲಿಯೂ ದೀಪೋತ್ಸವವು ನಡೆಯಿತು. ಪಿಕ್ಯಾಡಿಲಿ ರಾಜಮಾರ್ಗ ಬ್ಯೂಕ ಇವುಗಳಲ್ಲಿ ಬೇರೆ ಬೇರೆ ಬಣ್ಣದ ದೀಪಗಳನ್ನು ಹಚ್ಚಿದ್ದರಿಂದ ಆ ನೋಟವು ಬಹು ಮನೋಹರವಾಗಿತ್ತು. ಈ ದೀಪೋತ್ಸವವನ್ನು ನೋಡುವದಕ್ಕಾದರೂ ಬಹುಜನರು ಕೂಡಿದ್ದರು. ಈ ಕಾಲದಲ್ಲಿಯಾದರೂ ಜನರ ಬುದ್ಧಿವಂತಿಕೆಯೂ, ಅಚ್ಚುಕಟ್ಟುತನವೂ, ವಿಚಾರದಿಂದ ನಡೆಯುವ ಸ್ವಭಾವವೂ ಸ್ಪಷ್ಟವಾಗಿ ವ್ಯಕ್ತವಾಗುತ್ತಿದ್ದವು. ಪೋಲೀಸರ ಶಾಂತಿಗುಣವೂ ಗಾಂಭೀರ್ಯವೂ ಇಲ್ಲಿಯೂ ವರ್ಣಿಸತಕ್ಕಂಥವಿದ್ದವು. ಈ ಪ್ರಕಾರ ಈ ಸಮಾರಂಭವು ಅಶ್ರುತಪೂರ್ವವಾದ ವೈಭವದಿಂದಲೂ ಶೋಭೆಯಿಂದಲೂ ಸಾಂಗವಾಯಿತು.

ಪೂರ್ವ ದೇಶಗಳ ಇತಿಹಾಸಗಳಲ್ಲಿಯೂ ಪಾಶ್ಚಿಮಾತ್ಯರ ಇತಿಹಾಸಗಳಲ್ಲಿಯೂ ಅನೇಕ ವೈಭವಶಾಲಿಗಳಾದ ಅರಸರ ರಾಜ್ಯಾರೋಹಣ ಸಮಾರಂಭಗಳ ವರ್ಣನೆಯನ್ನು ವಾಚಕರು ಓದಿರಬಹುದು. ಆದರೆ ಜಾರ್ಜ ಸಾರ್ವಭೌಮರ ಸಾಮ್ರಾಜ್ಯಕ್ಕೆ ಸೇರಿದ ದೇಶಗಳಷ್ಟು ದೇಶಗಳೂ, ಅವರ ಪ್ರಜೆಗಳಾಗಿರುವ ಜನಾಂಗಗಳಷ್ಟು ಜನಾಂಗಗಳೂ, ಅವರ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳುವ ಇಡೀ ಪೃಥ್ವಿಯೊಳಗಿನ ಸಾಮಂತ ಅರಸರಷ್ಟು ಅರಸರೂ ಯಾವ ಅರಸನಿಗೂ ಯಾವ ಕಾಲದಲ್ಲಿಯೂ ಇರಲಿಲ್ಲವೆಂದು ನಿಃಸಂದೇಹವಾಗಿ ಹೇಳಬಹುದು. ಪ್ರಾಚೀನ ಕಾಲದಲ್ಲಿ ವಿಖ್ಯಾತವಾಗಿದ್ದ ರೋಮನ್ ಸಾಮ್ರಾಜ್ಯವು ವಿಸ್ತಾರದಿಂದಲೂ ವಿವಿಧತ್ವದಿಂದಲೂ ಈಗಿನ ಬ್ರಿಟಿಷ್ ಸಾಮ್ರಾಜ್ಯದ ಅರ್ಧದಷ್ಟು ಸಹ ಇರಲಿಲ್ಲ. ಮಹಮ್ಮದೀಯರ ಕಾಲಿಫರ ರಾಜ್ಯವು ಅವರ ಅತ್ಯಂತ ಊರ್ಜಿತ ಕಾಲದಲ್ಲಿಯೂ ಈಗಿನ ಬ್ರಿಟಿಶ್ ರಾಜ್ಯದ ಒಂದು ಜಿಲಾಖೆಗಿಂತ ದೊಡ್ಡದಾಗಿರಲಿಲ್ಲ. ಹಿಂದು ಸ್ತಾನದಲ್ಲಿ ಆಗಿ ಹೋದ ಮೋಗಲ್ ಸಾಮ್ರಾಜ್ಯದ ವಿಷಯದಲ್ಲಂತೂ ಹೇಳುವದೇ ಬೇಡ. ಯಾಕಂದರೆ, ಅವರಿಗೆ ಇತರ ದೇಶಗಳಂತೂ ಇರಲಿ, ಇಡೀ ಹಿಂದುಸ್ತಾನವೂ ಕಡೆತನಕ ವಶವಾಗಲಿಲ್ಲ. ಪಶ್ಚಿಮ ಯುರೋಪ

ಖಂಡದ ಸ್ವಾಮ್ರಾಜ್ಯವನ್ನು ಸ್ಥಾಪಿಸಿದ ಪ್ರತಾಪಶಾಲಿಯಾದ ಶಾರ್ಲಮೇ
ಅರಸನೇ ಆಗಲಿ, ವೈಭವಶಾಲಿಯಾದ ಕಾಲಿಫ್ ಹಿಮರನೇ ಆಗಲಿ, ಘ
ವಂತನಾದ ಅಕಬರನೇ ಆಗಲಿ, ಧರ್ಮಶೀಲನಾದ ಅಶೋಕನೇ ಆಗಲಿ
ಬಲಾಢ್ಯನಾದ ಚಂದ್ರಗುಪ್ತನೇ ಆಗಲಿ, ಯಾವ ಅರಸನೂ ಬ್ರಿಟಿಶ್ ಸಾಮ್ರಾ
ಜ್ಯದಷ್ಟು ವಿಸ್ತಾರವಾದ ರಾಜ್ಯವನ್ನು ಆಳಲಿಲ್ಲ. ಇವತ್ತಿಗೆ ಜಾರ್ಜ
ಚಕ್ರವರ್ತಿಗಳವರು ಜನವಸತಿಯುಳ್ಳ ಇಡೀ ಪೃಥ್ವಿಯ ೫ ಭಾಗಕ್ಕೂ
ಇಡೀ ಪೃಥ್ವಿಯ ಜನ ಸಂಖ್ಯೆಯ ೫ ಜನಸಂಖ್ಯೆಗೂ ಒಡೆಯರಾಗಿದ್ದಾರೆ.
ಆದ್ದರಿಂದಲೇ ಈ ಸಾವಮ್ರಾಜ್ಯದಲ್ಲಿ ಸೂರ್ಯನು ಅಸ್ತಂಗತನಾಗುವದಿ
ಲ್ಲೆಂಬ ಸಾರ್ಥಕವಾದ ನಾಣ್ಣುಡಿಯಾಗಿದೆ. ಈ ಅತ್ಯಂತ ಗೌರವವುಳ್ಳ
ಸಾಮ್ರಾಜ್ಯ ಪದಕ್ಕೆ ಜಾರ್ಜ ಸಮ್ರಾಟರು ಅತ್ಯಂತ ಯೋಗ್ಯರಾಗಿರುವ
ರೆಂಬದಂತೂ ಲೋಕವಿಶ್ರುತವಾಗಿದೆ. ಇವರು ಬಾಲ್ಯದಲ್ಲಿ ಕೈಕೊಂಡ ನಾವಿ
ಕನ ಉದ್ಯೋಗ, ಯುವರಾಜರಾಗಿದ್ದಾಗ ಪ್ರಕಟಿಸಿದ ಮುತ್ಸದ್ದಿತನ, ಸಾಮ್ರಾ
ಜ್ಯದ ಬಹುತರ ಎಲ್ಲ ಭಾಗಗಳಲ್ಲಿ ಪರ್ಯಟನ ಮಾಡಿ ದೊರಕಿಸಿದ ಲೋ
ಕಾನುಭವ, ಆ ಆ ಸ್ಥಳಗಳಲ್ಲಿ ದೊರಕಿಸಿದ ಪ್ರತ್ಯಕ್ಷ ಜ್ಞಾನ, ಅಲ್ಲಲ್ಲಿ
ವ್ಯಕ್ತ ಪಡಿಸಿದ ಸಹಾನುಭೂತಿ, ಇವುಗಳಿಂದ ಅವರು ಸಾಮ್ರಾಜ್ಯದಲ್ಲಿ ಎಲ್ಲ
ಕಡೆಯಲ್ಲಿದ್ದ ಪ್ರಜೆಗಳ ಭಕ್ತಿಯನ್ನೂ ಪ್ರೀತಿಯನ್ನೂ ಸಂಪಾದಿಸಿರುವರು.
ಇವರು ೧೯೦೫ ಇಸ್ವಿಯಲ್ಲಿ ಈ ದೇಶದಲ್ಲಿ ಸಂಚಾರ ಮಾಡಿ ತಿರುಗಿ
ಇಂಗ್ಲಂಡಕ್ಕೆ ಹೋದ ಬಳಿಕ ಲಂಡನದಲ್ಲಿ ಗಿಲ್ಡಹಾಲ್ ಎಂಬಲ್ಲಿ ಮಾಡಿದ
ಉದಾತ್ತವಾದ ಭಾಷಣದಲ್ಲಿ ನವಿ್ಮೀ ದೇಶದ ಬಗ್ಗೆ ತೋರಿಸಿದ ಅತ್ಯಂತ
ಸಹಾನುಭೂತಿಯಂತೂ ಈ ದೇಶದ ಜನರ ಅಂತಃಕರಣದಲ್ಲಿ ಚಿರಸ್ಥಾ
ಯಿಯಾಗಿದೆ. ಹಿಂದುಸ್ತಾನದ ಜನರ ವಿಷಯದಲ್ಲಿ ಇಷ್ಟು ಸಹಾನುಭೂತಿ
ಯುಳ್ಳ ಸಾರ್ವಭೌಮರ ರಾಜ್ಯಾರೋಹಣೋತ್ಸವದ ಶುಭದಿವಸದಲ್ಲಿ,
ಈ ದೇಶದಲ್ಲಿ ಸಮಸ್ತ ಜಾತಿಯ ಹಾಗೂ ಸ್ಥಿತಿಗತಿಯ ಅಬಾಲವೃದ್ಧರು
ರಾಜ್ಯಾರೋಹಣದ ಸಮಾರಂಭವನ್ನು ಅತ್ಯಂತ ಆನಂದದಿಂದ ಜರುಗಿಸಿ,
ಜಾರ್ಜ ಸಾರ್ವಭೌಮರಿಗೂ ಮಹನೀಯರಾದ ಅವರ ಪತ್ನಿಯವ
ರಿಗೂ ದೇವರು ಆಯುರಾರೋಗ್ಯಗಳನ್ನೀಯಲೆಂದು ಅಂತಃಕರಣಪೂರ್ವ
ಕವಾಗಿ ಪ್ರಾರ್ಥಿಸಿದ್ದು ಏನಾಶ್ಚರ್ಯ?

ಕೃಷ್ಣವಿಮರ್ಶೆ

(ಜೂನ ತಿಂಗಳಿಂದ ಮುಂದೆ ಸಾಗಿದ್ದು)

ಮುದುಡಿಕೊಂಡು ಜೋಲುಬೀಳುವವು. ಈ ವಿಲಕ್ಷಣವಾದ ವನಸ್ಪತಿಯನ್ನು ಒಂದು ಬಾನೆಯಲ್ಲಿ ಬೆಳೆಯಿಸಿ ಅದನ್ನು ಒಂದು ಕೈಗಾಡಿಯ ಮೇಲಿಟ್ಟು ಎಳೆಯಲು, ಅದು ತನ್ನ ಎಲ್ಲ ಎಲೆಗಳನ್ನು ಮುದುಡಿಕೊಂಡು ಸತ್ತಂತೆ ಬೀಳುವದು. ಆದರೆ ಆ ಬಂಡಿಯನ್ನು ಹಾಗೆಯೇ ಎಳೆಯುತ್ತ ಹೋದರೆ ತುಸು ಹೊತ್ತಿನ ಮೇಲೆ ಆ ವನಸ್ಪತಿಯು ತನ್ನ ತಲೆಯನ್ನು ಮೇಲಕ್ಕೆತ್ತಿ ಎಲೆಗಳನ್ನು ಪಸರಿಸಿಕೊಳ್ಳುವದು. ಇದರ ಕಾರಣವೇನೆಂದರೆ, ಆ ವನಸ್ಪತಿಗೆ ಧಕ್ಕೆ ತಗಲಿದ ಕೂಡಲೆ ತನ್ನ ಮೇಲೆ ಯಾವದೋ ಗಂಡಾಂತರ ಬರುವದೆಂಬ ತಿಳುವಳಿಕೆಯು ಅದಕ್ಕುಂಟಾಗಿ, ಆತ್ಮಸಂರಕ್ಷಣೆಗಾಗಿ ಅದು ತನ್ನನ್ನು ಮುದುಡಿಕೊಳ್ಳುವದು. ಇದೇ ಗುಣವು ಬೆಟ್ಟೀಬೆನಕದಲ್ಲಿ ಸಹ ಕಂಡುಬರುವದು. ಆ ಧಕ್ಕೆಯಿಂದ ತನಗೆ ಯಾವತರದ ಅಪಾಯವಾಗುವದಿಲ್ಲವೆಂಬದು ಅದಕ್ಕೆ ತಿಳಿದ ಮೇಲೆ ಅದು ತನ್ನ ಸ್ವಾಭಾವಿಕ ಸ್ಥಿತಿಯಲ್ಲಿರಲಿಕ್ಕೆ ಯತ್ನಿಸುವದು.

ಬಳ್ಳಿಗಳಲ್ಲಿ ಹಲವು ಸೋಜಿಗದ ಸಂಗತಿಗಳು ಕಂಡುಬರುವವು. ಅವುಗಳ ಕಾಂಡಗಳು ದುರ್ಬಲವಾಗಿಯೂ ಸಣ್ಣಾಗಿಯೂ ಇರುವದರಿಂದ ಎರಡನೇ ಪದಾರ್ಥಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಅವು ಬೆಳೆಯಬೇಕಾಗುವದು. ಇದಕ್ಕಾಗಿ ಹಲವು ಬಳ್ಳಿಗಳಿಗೆ ಕಸಿಗಳು (Tendrils) ಹುಟ್ಟುವವು. ಬೇರೆ ಕೆಲವಕ್ಕೆ ಗಣ್ಣುಗಣ್ಣಿಗೆ ಆಗಂತುಕ (Adventitious) ಬೇರುಗಳು ಹೊರಡುವವು. ಕುಂಬಳಬಳ್ಳಿಯು ಪ್ರತಿಗಣ್ಣಿಗೆ ಆಗಂತುಕ ಬೇರುಗಳನ್ನು ಬಿಟ್ಟು ಅವುಗಳ ಸಹಾಯದಿಂದ ಭೂಮಿಯಲ್ಲಿ ತನ್ನನ್ನು ಗಟ್ಟಿಯಾಗಿ ಊರಿಕೊಳ್ಳುವದನ್ನು ಎಷ್ಟೋ ಜನರು ನೋಡಿರುವರು. ಅವರಿ, ಪಡವಲ, ಹೀರಿ ಮೊದಲಾದವುಗಳ ಕಾಂಡಗಳಿಂದ ಹೊರಡುವ ಕಸಿಗಳು ಮೊದಲು ಇಗ ನೇ ಆಕೃತಿಯಲ್ಲಿ ತೋರಿಸಿದಂತೆ ನೆಟ್ಟನೆ ಬೆಳೆದು ಹಿಡಿದುಕೊಳ್ಳುವದಕ್ಕೋಸುಗ ಕೆಲವೊಂದು ಆಧಾರವನ್ನು ಹುಡುಕುತ್ತಿರುವವು. ಈ ಸಂಧಿಗೆ ಅವು ಆ ಆಧಾರಕ್ಕೆ ಬಂದು ಮುಟ್ಟಿದರೆ ಅದರ ಸುತ್ತಲು ಸುತ್ತುಹಾಕುವವು. ಈ ಧರ್ಮವನ್ನು ಪ್ರಯೋಗದಿಂದ ಮನಗಾಣಬೇಕಾದರೆ ನೆಟ್ಟನೆ ಬೆಳೆದ ಕಸಿಯನ್ನು ಒಂದು ಕಡ್ಡಿಯಿಂದ ಸ್ವಲ್ಪ ತಿಕ್ಕಿ, ಅದನ್ನು ಕೆಲವು ಹೊತ್ತಿನವರೆಗೆ ತಿಕ್ಕಿದ ಭಾಗದ ಮೇಲೆ ಹಿಡಿಯಬೇಕು. ಆ ಅವಧಿಯಲ್ಲಿ ಆ ಕಸಿಯು ಕಡ್ಡಿಗೆ ಸುತ್ತಿಕೊಳ್ಳುವದು.

ಆಹಾರದ ಸಿದ್ಧತೆ, ಜಲವಿಮೋಚನೆ ಮೊದಲಾದ ಕಾರ್ಯಗಳ ನಡೆದಿರುವಾಗ ಹವೆಯೊಳಗಿನ ಅಂಗಾರಾಮ್ಲವಾಯುವನ್ನು ಹೀರಿಕೆ. ಳ್ಳುವದೂ, ಪದಾರ್ಥಗಳ ವೃಥಕ್ಕರಣ-ವಿಕೀಕರಣಗಳನ್ನು ಮಾಡುವದೂ ಎಲೆಗಳ ತ್ವಚೆಯಲ್ಲಿರುವ ಛಿದ್ರಗಳ ಪ್ರಸರಣಾಕುಂಚನಗಳನ್ನು ಮಾಡ ವದೂ ಯಾಂತ್ರಿಕ ವ್ಯಾಪಾರಗಳಿರದೆ ಜ್ಞಾನವುಳ್ಳ ಸಜೀವ ವಸ್ತು ಮಾಡತಕ್ಕ ವ್ಯಾಪಾರಗಳಾಗಿವೆ. ಪರಪುಷ್ಟಗಳು (Parasites) ಬೇರೆ ವ ಸ್ಪತಿಗಳ ಕಾಂಡಗಳಲ್ಲಿ ತಮ್ಮ ಬೇರುಗಳನ್ನು ಸೇರಿಸಿ, ಅವುಗಳೊಳಗಿ ಪೋಷಕ ರಸವನ್ನು ಹೀರಿಕೊಳ್ಳುವದನ್ನೂ ಪಿಚರ್‌ಪ್ಲಾಂಟ್ (Pitcher Plant) ಮೊದಲಾದ ಮಾಂಸಭಕ್ಷಕಗಳು ಕೆಲವೊಂದು ವಿಧದಿಂದ ಕ್ರಿವಿ ಗಳನ್ನು ಸಿಡಿದು ತಿಂದುಬಿಡುತ್ತಿರುವದನ್ನೂ ಕಣ್ಣುಟ್ಟ ನೋಡಿದರೆ ವನಸ್ಪ ತಿಗಳಿಗೆ ಜ್ಞಾನವಿದ್ದೇ ಇರುವದೆಂದು ಒಪ್ಪಿಕೊಳ್ಳಬೇಕಾಗುವದು. ಬೀಜಾ ರೋಪಣ ಕಾರ್ಯದಲ್ಲಿ ವನಸ್ಪತಿಗಳು ವ್ಯಕ್ತಪಡಿಸುವ ಗುಣಗಳು ಅವ ಜ್ಞಾನವುಳ್ಳವುಗಳೆಂಬದಕ್ಕೆ ಪುಷ್ಟೀಕರಣಮಾಡುವವು. ಈ ವಿಷಯದ ವಿವೇಚನವನ್ನು ಯೋಗ್ಯಸ್ಥಳದಲ್ಲಿ ಮಾಡುವೆವು.

ಇದುವರೆಗೆ ವನಸ್ಪತಿಗಳ ಜೀವನ ವ್ಯಾಪಾರಗಳ ವಿಷಯವಾಗಿ ವಿವೇಚಿಸಿದೆವು. ಇನ್ನು ಹಿಂದೆ ಹೇಳಿದ ಎಲ್ಲ ವಿಷಯಗಳ ಸಿಂಹಾವಲೋ ಕನವನ್ನು ಮುಂದಿನ ಅಧ್ಯಾಯದಲ್ಲಿ ಮಾಡುವೆವು.

ಗಿಗನೇ ಅಧ್ಯಾಯ.

ಸಿಂಹಾವಲೋಕನವು.

ವನಸ್ಪತಿಗಳು ಸಜೀವ ವಸ್ತುಗಳಿದ್ದು ಪ್ರಾಣಿಗಳಂತೆ ಅವುಗಳಿಗೆ ಜನನ, ವೃದ್ಧಿ, ಮರಣಗಳೆಂಬ ಮುರೂ ಅವಸ್ಥೆಗಳುಂಟಾಗುವವು. ವನ ಸ್ಪತಿಗಳು ಬೀಜಗಳಿಂದ ಹುಟ್ಟುವವು. ಸಸಿಗಳು ಪರಾವಲಂಬಿಗಳಾಗಿರು ವಾಗ ಆ ಬೀಜಗಳ ನಿರ್ಜೀವಭಾಗವು ಸಮಶೀತೋಷ್ಣತೆ, ನೀರು, ಹವೆ, ಮೊದಲಾದ ಅನುಕೂಲತೆಗಳ ಸಹಾಯದಿಂದ ರೂಪಾಂತರ ಹೊಂದಲು, ಒಂದು ತರದ ದುಗ್ಧರಸವು ಸಿದ್ಧವಾಗುವದು. ಆ ರಸವನ್ನು ಉಪಯೋಗಿ ಸಿಕೊಂಡು ಸಸಿಗಳು ಬೆಳೆಯಹತ್ತಿ, ತಮ್ಮ ಬೇರುಗಳನ್ನು ಭೂಮಿಯಲ್ಲಿ ಬೂರಿಕೊಳ್ಳುವವು. ಕಾಂಡಗಳನ್ನು ಹವೆಯಲ್ಲಿ ಬೆಳೆಯಗೊಟ್ಟು ಹಲವು

ಸರಿಲೆಗಳನ್ನು ಧರಿಸಿ ತಮ್ಮ ಆಹಾರವನ್ನು ತಾವೇ ದೊರಕಿಸಿಕೊಳ್ಳಲಿಕ್ಕೆ ತ್ನಿಸುವವು. ಬೀಜದಳಗಳೆಂಬ ನಿರ್ಜೀವ ಭಾಗದಲ್ಲಿರುವ ಆಹಾರದ ಸಂ ಯವು ಮುಗಿದ ಕೂಡಲೆ ಅವು ಉದುರಿ ಬೀಳುವವು. ಹುಟ್ಟಿದಂದಿನಿಂದಲೆ ನಸ್ಪತಿಗಳ ಜೀವನ ವ್ಯಾಪಾರಗಳು ಪ್ರಾರಂಭವಾಗುವವು. ಪ್ರಾಣಿಗ ಂತೆ ವನಸ್ಪತಿಗಳಾದರೂ ಉಸುರಾಡಿಸುವವು; ಆಹಾರವನ್ನು ದೊರಕಿ ಕೊಳ್ಳುವವು. ಕೆಲವು ಪ್ರಸಂಗಗಳಲ್ಲಿ ಸ್ಥಳಾಂತರ ಮಾಡುವವು. ಲವು ದಿವಸಗಳ ಮೇಲೆ ಹೂ ಬಿಟ್ಟು ಆ ಅವಯವದ ಸಹಾಯದಿಂದ ಜಾತೀಯವಾದ ಸಸಿಯನ್ನು ಹುಟ್ಟಿಸುವ ಶಕ್ತಿಯುಳ್ಳ ಬಂದು ಇಲ್ಲವೆ ಚ್ಚು ಬೀಜಗಳನ್ನುಂಟು ಮಾಡಿ, ಕಡೆಗೆ ಸತ್ತು ಹೋಗುವವು.

ಅನ್ನ ಸಂಚಯದ ಸಲುವಾಗಿ ವನಸ್ಪತಿಗಳಿಗೆ ಜಠರವೆಂಬ ಅವಯ ವ ಇಲ್ಲದ್ದರಿಂದ ಘನರೂಪದಲ್ಲಿರುವ ಆಹಾರದ ಪದಾರ್ಥಗಳನ್ನು ಅವು ಉಪಯೋಗಿಸಿಕೊಳ್ಳಲಾರವು. ಆದ್ದರಿಂದ ವನಸ್ಪತಿಗಳ ಆಹಾರದ ಪದಾ ರ್ಥಗಳು ಪ್ರವಾಹಿಯಾಗಿ ಇಲ್ಲವೆ ವಾಯುರೂಪವಾಗಿ ಇರಬೇಕಾಗುವದು. ಖನಿಜಪದಾರ್ಥಗಳು ಹಲವು ರಸಾಯನ ವ್ಯಾಪಾರಗಳಿಂದ ನೀರಿನಲ್ಲಿ ಕರಗುವಂತೆ ವಿದ್ರಾವ್ಯ ಸ್ಥಿತಿಯನ್ನು ಹೊಂದಿ, ನೀರಿನಲ್ಲಿ ಕರಗಲಾಗಿ ಅವು ಗಳನ್ನು ಅವು ತಮ್ಮ ಬೇರುಗಳ ಸಹಾಯದಿಂದ ಹೀರಿಕೊಳ್ಳುವವು. ಈ ಧರ್ಮವು ಬೇರಿನ ಎಲ್ಲ ಭಾಗದಲ್ಲಿರದೆ ಮೂರು ಪದರಿನ ಕವಚವುಳ್ಳಂಥ ಕೇಶರೂಪವಾದ ಬೇರುಗಳ ಅಗ್ರಭಾಗದಲ್ಲಿ ಮಾತ್ರ ಇರುವದು. ಈ ಕವ ಚದ ಹೊರಪದರು ಸವೆದು ಹೋಗಲು ಹೊಸದೊಂದು ಪದರು ಒಳಗಿನಿಂದ ಹುಟ್ಟುವದು. ಈ ತರದ ಕವಚವುಳ್ಳ ಬೇರುಗಳು ಹರಿದು ಹೋದರೆ ನೀರಿನಲ್ಲಿ ಕರಗಿದ ಖನಿಜ ದ್ರವ್ಯಗಳನ್ನು ಹೀರಿಕೊಳ್ಳುವ ಸಾಧನವು ವನ ಸ್ಪತಿಗಳಿಗೆ ಇಲ್ಲದಂತಾಗುವದು. ಭೂಮಿಯಿಂದ ವನಸ್ಪತಿಗಳಿಗೆ ದೊರ ಕುವ ಖನಿಜದ್ರವ್ಯಗಳು ನಿಯಮಿತವಿದ್ದು ಅವುಗಳ ಸಂಖ್ಯೆಯು ಎಂಟು ಹತ್ತು ಮಾತ್ರ ಇರುವದು. ಬೇರುಗಳು ಹೀರಿಕೊಳ್ಳುವ ನೀರಿನಲ್ಲಿ ಅವು ಗಳ ಪರಿಮಾಣವು ಹೆಚ್ಚಾದರೆ ವನಸ್ಪತಿಗಳ ಬೆಳವಣಿಗೆಯು ಕುಗ್ಗಿ ಕೆಲವು ದಿವಸದ ಮೇಲೆ ಅವು ಸತ್ತು ಹೋಗುವವು. ಭೂಮಿಯಲ್ಲಿರುವ ಸಾವಿ ರಾರು ಖನಿಜ ದ್ರವ್ಯಗಳೊಳಗಿಂದ ವನಸ್ಪತಿಗಳು ತಮಗೆ ಬೇಡಾದವುಗ ಳನ್ನು ಬದಿಗೊತ್ತಿ ಅವಶ್ಯವಾಗಿ ಬೇಕಾದ ಪದಾರ್ಥಗಳನ್ನಷ್ಟೇ ಆರಿಸಿ ತೆಗೆ ದುಕೊಳ್ಳುವದರಲ್ಲಿ ಅವುಗಳ ಜಾಣ್ಮೆಯು ವ್ಯಕ್ತವಾಗುವದು

ವನಸ್ಪತಿಗಳಿಗೆ ಭೂಮಿಯಿಂದ ಖನಿಜದ್ರವ್ಯಗಳು ದೊರಕುವ ಹವೆಯಿಂದ ಆಕ್ಸಿಜನ್, ನೈಟ್ರೋಜನ್, ಕಾರ್ಬನ್ ಮೊದಲಾದವು ದೊರಕುವವು. ಪ್ರತಿಯೊಂದು ವನಸ್ಪತಿಯಲ್ಲಿ ಹವೆಯಿಂದ ತೆಗೆದುಕೊಳ್ಳಬಹುದಾದ ಪದಾರ್ಥಗಳ ಪ್ರಮಾಣವೇ ಬಹಳ ಹೆಚ್ಚಾಗಿರುವದು. ಪ್ರಾಯುಕ್ತ ಪದಾರ್ಥಗಳನ್ನು ಹೀರಿಕೊಳ್ಳಲಿಕ್ಕೆ ಅವುಗಳಿಗೆ ಎಲೆಗಳೆಂಬ ಅವಯವಗಳಿರುವವು. ಜಲವಿಮೋಚನೆ, ಬೇರುಗಳ ಒತ್ತುವಿಕೆ ಮೊದಲಾದ ವ್ಯಾಪಾರಗಳಿಂದ ಖನಿಜದ್ರವ್ಯಗಳು ಎಲೆಗಳಲ್ಲಿ ಬಂದು ಕೂಡಿ ಬೀಳುವವು. ಸೂರ್ಯನ ಪ್ರಕಾಶವೆಂಬ ಶಕ್ತಿಯಿಂದ ಎಲೆಗಳಲ್ಲಿ ಪತ್ರಹರಿತ್ತು ಎಂಬ ಹಸಿರು ಬಣ್ಣದಿಂದ ತುಂಬಿದ ಕೋಶಗಳುಂಟಾಗುವವು. ಅವುಗಳ ಸಹಾಯದಿಂದ ಎಲೆಗಳಲ್ಲಿ ರಾಸಾಯನಿಕ ವೃಥಕ್ಕರಣ ಏಕೀಕರಣ ಮೊದಲಾದ ಕಾರ್ಯಗಳು ನಡೆದು ಸೇಂದ್ರಿಯ ಪದಾರ್ಥಗಳು ಹುಟ್ಟುವವು. ಆ ನೀರಿನಲ್ಲಿ ಬೆರೆತುಕೊಂಡು ಬಂದು ಪೋಷಕರಸವಾಗಲು ಅದು ನನೆಮೈಯಲ್ಲಿ ರಕ್ತವು ಹರಿಯುವಂತೆ ಎಲ್ಲ ಭಾಗಗಳಿಗೆ ಹರಿಯುತ್ತ ಹೋಗಿ ಅವುಗಳಿಗೆ ಪೋಷಕ ಪದಾರ್ಥಗಳನ್ನು ಪೂರೈಸಿಕೊಡುವದು. ವನಸ್ಪತಿಗಳ ಶರೀರವು ಕಾಯದಂತೆ ಅವುಗಳಲ್ಲಿ ಬೇರಿನಿಂದ ಎಲೆಗಳವರೆಗೆ ಬಂದ ತಣ್ಣೀರಿನ ಪ್ರವಾಹವು ಯಾವಾಗಲು ಹರಿಯುತ್ತಿರುವದು. ಹವೆಯ ಉಷ್ಣಮಾನವು ಬೆಳೆದಂತೆ ಈ ಪ್ರವಾಹವು ಹೆಚ್ಚು ಕಸುವಿನಿಂದ ಹರಿಯಹತ್ತುವದು. ಅದರಿಂದ ಚಿಸಿಲಿನಲ್ಲಿ ಬೆಳೆಯುವ ವನಸ್ಪತಿಗಳ ಉಷ್ಣಮಾನವು ಎಂದೂ ಏರುವದಿಲ್ಲ. ಪ್ರವಾಹವು ಕಟ್ಟಾಗದೆ ಹರಿಯಬೇಕೆಂದು ಎಲೆಗಳು ತಮ್ಮಲ್ಲಿರುವ ಛಿದ್ರಗಳನ್ನು ತೆರೆದು ನೀರನ್ನು ಉಗಿಯ ರೂಪದಿಂದ ವಾತಾವರಣಕ್ಕೆ ಬಿಟ್ಟುಕೊಡುವವು. ಓಕ ಎಂಬ ಅತಿ ದೊಡ್ಡ ವೃಕ್ಷವು ೨೪ ತಾಸುಗಳ ಅವಧಿಯಲ್ಲಿ ೧೦೦ ರಿಂದ ೨೦೦ ಗ್ಯಾಲನ್ ನೀರನ್ನು ವಾತಾವರಣಕ್ಕೆ ಬಿಟ್ಟುಬಿಡುತ್ತದೆಂದು ವನಸ್ಪತಿಶಾಸ್ತ್ರಜ್ಞರು ಮಾಡಿದ ಪ್ರಯೋಗದಿಂದ ಗೊತ್ತಾಗಿದೆ. ಜಲವಿಮೋಚನೆಯು ಬಂದು ತರದ ಬಾಷ್ಪಭವನವಿರುವದರಿಂದ ಅದರ ಪ್ರಮಾಣವು ಪೃಷ್ಠ ಭಾಗದ ಕ್ಷೇತ್ರವನ್ನು ಅವಲಂಬಿಸಿರುವದು. ಬಾಳೆ ಮೊದಲಾದವುಗಳ ಹರವಾದ ಎಲೆಗಳಿಂದ ಹೆಚ್ಚು ನೀರು ಉಗಿಯಾಗಿ ಹೋಗುವದು ಸಹಜವು. ಆದ್ದರಿಂದ ಅಂಥ ವನಸ್ಪತಿಗಳಿಗೆ ಇರುವ ಎಲೆಗಳ ಸಂಖ್ಯೆಯು ತೀರ ಸಣ್ಣದಿರುವದು. ಸಣ್ಣ ಎಲೆ

ಳುಳ್ಳ ಗಿಡಗಳಿಗೆ ಬಹಳ ಎಲೆಗಳಿರುವವು. ಒಟ್ಟಿನಲ್ಲಿ ಎಲ್ಲ ವನಸ್ಪತಿ ಳ ಎಲೆಗಳ ಒಟ್ಟು ಕ್ಷೇತ್ರವು ಅವುಗಳ ಸ್ಥಿತಿರೀತಿಗೂ ಜೀವಿತಕ್ಕೂ ತಕ್ಕ ಹಾಗಿರುವದು.

ತಮ್ಮ ಜೀವನವ್ಯಾಪಾರಗಳನ್ನು ಜರುಗಿಸಲಿಕ್ಕೆ ಬೇಕಾಗುವ ಕರ್ತೃ ಶಕ್ತಿಯ ಸಂಚಯವನ್ನು ವನಸ್ಪತಿಗಳು ಸೂರ್ಯನ ಪ್ರಕಾಶದಿಂದಲೆ ಹೊರಕಿಸಿಕೊಳ್ಳುವವು. ಅವುಗಳ ಎಲೆಗಳು ಪ್ರಕಾಶವೆಂಬ ಶಕ್ತಿಯನ್ನು ೀರಿಕೊಂಡು ಅದರ ಸಹಾಯದಿಂದ ಆಹಾರದ ಸಿದ್ಧತೆಯನ್ನು ಮಾಡು ವು. ಪ್ರಕಾಶವು ತಮ್ಮ ಮೇಲೆ ಲಂಬವಾಗಿ ಬೀಳುವಂತೆ ತಮ್ಮನ್ನು ಟ್ಟುಕೊಳ್ಳಲಿಕ್ಕೆ ಎಲೆಗಳು ಯತ್ನಿಸುವವು. ವನಸ್ಪತಿಗಳ ಬಲವು ಪ್ರಕಾ ದ ಕಡೆಗೆ ಇದ್ದೇ ಇರುವದು.

ವನಸ್ಪತಿಗಳ ಬೇರು, ದೇಟು, ಎಲೆ, ಹೂ ಮೊದಲಾದ ಅವಯವ ಳು ಮಾಡುತ್ತಿರುವ ಕಾರ್ಯಗಳು ಕೇವಲ ಆಕಸ್ಮಿಕವಾಗಿರದೆ ಬುದ್ಧಿ ಪುರಸ್ಸರವಾಗಿರುವದರಿಂದ ವನಸ್ಪತಿಗಳಿಗೆ ಜ್ಞಾನವಿರುವದೆಂದು ನಂಬ ಬೇಕಾಗುವದು. ಆದರೆ ಸದ್ಯಕ್ಕೆ ಉಪಲಬ್ಧವಾಗಿರುವ ಸಾಧನಗಳಿಂದ ಆ ಜ್ಞಾನದ ಅಧಿಷ್ಠಾನವಾದ ಮಿದುಳೂ, ಮಜ್ಜಾತಂತುಗಳೂ ವನಸ್ಪತಿ ಗಳಲ್ಲಿ ಎಲ್ಲಿ ಇರುವವು? ಅವುಗಳ ಕಾರ್ಯಗಳು ಹ್ಯಾಗೆ ನಡೆಯುತ್ತಿರು ವವು? ಎಂಬದು ಗೊತ್ತಾಗುವದಿಲ್ಲ.

R. M. Mahishi, B. A.

ಶಾಲಾಧ್ಯಾಪಕರ ಲೇಖಗಳು.

"ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಚರಿತ್ರ."

ಉತ್ತರಾಶ್ರಮದ ವೃತ್ತಾಂತವು.

(ಕಳೆದ ಸಂಚಿಕೆಯಿಂದ ಮುಂದೆ ಸಾಗಿದ್ದು.)

— ಃ (೦) ಃ —

ಉತ್ತರಾಶ್ರಮದಲ್ಲಿ ಈ ಮಹಾತ್ಮರು ಯಾಜ್ಞವಲ್ಕ್ಯರಂತೆ ಬಹಳ ಉಪರಾಮ ಪಡೆದು ಬ್ರಹ್ಮವಿಚಾರದಲ್ಲಿಯೇ ತತ್ಪರರಾಗಿದ್ದರು. ಸಮ ಲೋಷ್ಟಾಶ್ಮಕಾಂಚನರಾದ್ದರಿಂದ ಅತ್ಯಂತ ವಿರಕ್ತತೆಯು ಈ ಮಹಾತ್ಮ ರಲ್ಲಿ ನೆಲೆಗೊಂಡಿತ್ತು, ಎಂಬೀ ವಾರ್ತೆಯು ಕೇಳಲ್ಪಡುತ್ತದೆ.

ಈ ಮಹಾತ್ಮರು ಒಂದಾನೊಂದು ಸಮಯದಲ್ಲಿ ಕಾಶೀಕ್ಷೇತ್ರ
ನ್ನೈದಿ ಬಹಳ ಪ್ರಯತ್ನದಿಂದ ಶ್ರೀವೇದವ್ಯಾಸ ಮುನೀಂದ್ರರ ದರ್ಶನ
ದುಕೊಂಡು ತಾವು ರಚಿಸಿದ ವೇದಭಾಷ್ಯವನ್ನು ಶುದ್ಧ ಮಾಡಿಸುವದಕ್ಕೆ
ಸ್ಕರ ತೋರಿಸಿದರು. ಆಗ ಯಾವ ಸ್ಥಳದಲ್ಲಿಯೂ ದೋಷವನ್ನು ಕಾಣ
ಶ್ರೀ ವ್ಯಾಸಮುನಿಯು ಈ ಮಹಾತ್ಮರಿಗೆ ಶ್ರೀ ವಿದ್ಯಾರಣ್ಯ ನಾಮವ
ಟ್ಟನು, ಎಂಬೀ ವಾರ್ತೆಯು ಕೂಡಾ ಕೇಳಲ್ಪಟ್ಟಿದೆ.

ಅನಂತರ ಉತ್ತರಾವಸ್ಥೆಯು ಪ್ರಾಪ್ತವಾದಲ್ಲಿ ಇತರ ಕ್ಷೇತ್ರಯಾ
ಮಾಡುವದಕ್ಕೆ ಅಸಮರ್ಥರಾದರು. ಆಗ ತಮ್ಮ ಗುರುವಿನ ಆಜ್ಞೆಯಿಂ
ದಕ್ಷಿಣ ದೇಶದಲ್ಲಿದ್ದ ಶ್ರೀ ಶಂಕರಾಚಾರ್ಯರಿಂದ ಸ್ಥಾಪಿತವಾದ ಶೃಂಗೇ
ಮತದ ಆಧಿಪತ್ಯವನ್ನು ಹೊಂದಿ, ಶ್ರೀ ಶಂಕರಾಚಾರ್ಯ ಪದವಿಯಿಂ
ಪ್ರಸಿದ್ಧರಾಗಿ ಅನೇಕ ಮತಗಳ ಖಂಡನ ಪೂರ್ವಕವಾಗಿ ಶ್ರುತಿಸಮ್ಮ
ವಾದ ಅದ್ವೈತ ಮತವನ್ನು ಪ್ರಸಿದ್ಧ ಪಡಿಸುತ್ತ ಇದ್ದರು.

೧. ಇವರು ತಮ್ಮಿಂದ ರಚಿತವಾದ "ಸರ್ವದರ್ಶನ ಸಂಗ್ರಹ
ಗ್ರಂಥದ ಆದಿಯಲ್ಲಿ "ನನ್ನನ್ನು ಉಚಿತಾರ್ಥಯುಕ್ತವಾದ ಆಚರಿತದಿಂ
ಅರ್ಥವಂತನನ್ನು ಮಾಡಿದನು. ಸರ್ವಜನರಲ್ಲಿ ಅಂತಪ್ಪ ಶ್ರೀಶಾರ್ಙ್ಗಪಾ
ಣಿಯ ತನಯನಾದ ಮತ್ತು ನಿಖಿಲಾಗಮತತ್ವಜ್ಞನಾದ ಸರ್ವಜ್ಞ ವಿಷ್ಣು
ನಾಮ ಗುರುವನ್ನು ನಾನು ನಿರಂತರವೂ ಆಶ್ರಯ ಮಾಡುವೆನು" ಇಂತೆಂ
ನು ಮಂಗಲಾಚರಣೆ ಮಾಡಿರುವನು. ಇದರಿಂದ ಸರ್ವಜ್ಞ ವಿಷ್ಣುನಾಮಕ
ರಂಡಿತರು ಇವರಿಗೆ ಗುರುವಾಗಿರಬೇಕೆಂದು ತಿಳಿಯಲ್ಪಡುತ್ತದೆ. ಅದರ
ತನು ವಿದ್ಯಾಗುರುವಾಗಿರಬೇಕೆಂದು ಅನುಮಾನ ಮಾಡಲ್ಪಡುತ್ತದೆ.

೨. ಪಂಚದಶಿಯ ಆರಂಭದಲ್ಲಿ—ಶ್ರೀಶಂಕರಾನಂದ ಗುರುವಿನ
ಪಾದರೂಪ ಅಂಬುಜನ್ಮಕ್ಕೊಸ್ಕರ ನನ್ನ ನಮಸ್ಕಾರವಾಗಲಿ. ಹೀಗೆ
ಮಂಗಲ ಮಾಡಿರುವನು. ಇದರಿಂದ ಶ್ರೀ ಶಂಕರಾನಂದ ಸ್ವಾಮಿಯು
ಕೂಡ ವಿದ್ಯಾರಣ್ಯಸ್ವಾಮಿಗೆ ಗುರುವಾಗಿದ್ದನೆಂದು ತಿಳಿಯಲ್ಪಡುವದು.
ಆದರೆ ಅತನು ಬ್ರಹ್ಮತತ್ತ್ವೋಪದೇಶಕ ಗುರುವಾಗಿರಬೇಕೆಂದು ಅನುಮಾ
ನವಾಗುತ್ತದೆ.

೩. ಶಂಕರವಿಜಯ, ಜೀವನ್ಮುಕ್ತವಿವೇಕ ಮುಂತಾದ ಗ್ರಂಥಗ
ಳಲ್ಲಿ ಶ್ರೀ ವಿದ್ಯಾತೀರ್ಥ ಗುರುವಿನ ಮಂಗಲ ಮಾಡಲ್ಪಟ್ಟಿದೆ. ಇದರಿಂದ

ಅವರೂ ಕೂಡ ಇವರಿಗೆ ಗುರುವಾಗಿರಬಹುದೆಂದು ಊಹಿಸಲಾಗುವದು. ಪರಂತು ಅವರು ಬಾಲ್ಯಾವಸ್ಥೆಯಲ್ಲಿ ಮಂತ್ರದೀಕ್ಷೆಯ, ಮತ್ತು ಉತ್ತರಾವಸ್ಥೆಯಲ್ಲಿ ಸನ್ಯಾಸದೀಕ್ಷೆಯ ಗುರುವಾಗಿರಬಹುದೆಂದು ತರ್ಕದಿಂದ ತಿಳಿಯು ಬರುತ್ತದೆ.

೪. ಮಹಾರಾಷ್ಟ್ರ ಭಾಷೆಯಲ್ಲಿ "ಗುರುಚರಿತ್ರೆ" ಎಂಬ ಗ್ರಂಥವೆ ಪ್ರಖ್ಯಾತವಾಗಿರುವದು. ಅದರಲ್ಲಿ ವಿದ್ಯಾರಣ್ಯ ಸ್ವಾಮಿಯ ಗುರು ಭಾರತೀತೀರ್ಥ ಸ್ವಾಮಿಯೆಂತಲೂ, ಅವರ ಗುರು ಶಿವತೀರ್ಥ ಸ್ವಾಮಿಯೆಂತಲೂ, ಅವರ ಗುರು ವಿದ್ಯಾತೀರ್ಥ ಸ್ವಾಮಿಯೆಂತಲೂ, ಇವರಿಗೆ ನರಸಿಂಹ ತೀರ್ಥಸ್ವಾಮಿ, ಇವರಿಗೆ ಈಶ್ವರತೀರ್ಥಸ್ವಾಮಿ, ಇವರಿಗೆ ಗುರು ಸಿಂಹಾಲಯ ಗಿರಿಸ್ವಾಮಿ, ಇವರಿಗೆ ಬೋಧಜ್ಞಾನಗಿರಿಸ್ವಾಮಿ, ಇವರಿಗೆ ವಿಶ್ವರೂಪಾಚಾರ್ಯಸ್ವಾಮಿ, ಮತ್ತು ಇವರಿಗೆ ಗುರು ಶ್ರೀ ಶಂಕರಾಚಾರ್ಯರೆಂದು, ಈ ರೀತಿಯಾಗಿ ಗುರುಪರಂಪರೆಯು ಬರೆಯಲ್ಪಟ್ಟಿದೆ. ಇದರಿಂದ ಶ್ರೀ ಶಂಕರಾಚಾರ್ಯರ ಅನಂತರ ೧೦ನೇ ಪದವಿಯಲ್ಲಿ ಶ್ರೀ ವಿದ್ಯಾರಣ್ಯ ಸ್ವಾಮಿಗಳಿದ್ದರೆಂದು ಸ್ಪಷ್ಟವಾಗಿ ತಿಳಿಯುತ್ತದೆ.

ಶ್ರೀ ಶೃಂಗೇರಿ ಜಗದ್ಗುರು ಪರಂಪರಾ.

(ಮೈಸೂರ ಸರಸ್ವತೀ ಭಂಡಾರದಲ್ಲಿದ್ದ ರೀತಿಯು.)

ಶ್ಲೋಕ॥ ಆದೌಸ್ವರಾಜೋಗುರುರದ್ವಿತೀಯಃ। ವಿಜ್ಞಾನ ಆನಂದ ಘನೋಮಹೇಶಃ।
ನಾರಾಯಣಃ ಪದ್ಮಭವೋವನಿಷ್ಟಃ ಶಕ್ತಿಶ್ಚತತ್ಪುತ್ರ ಪರಾಶರಶ್ಚ ॥೧॥
ವ್ಯಾಸಶ್ಯುಕೋಗೌಡಪದೋಮಹಂತೋ ಗೋವಿಂದ ಯೋಗೀಂದ್ರ ತಥಾಸ್ಯಶಿಷ್ಯಃ।
ಶ್ರೀ ಶಂಕರಾಚಾರ್ಯ ಗುರುರ್ವಯಂತೀಂದ್ರಃ ತಚ್ಛಿಷ್ಯಶಿಷ್ಯಾಂಶ್ಚ ಸದಾಭಜೇಹಂ ॥೨॥

ಪಂಕ್ತಿ.	ಹೆಸರುಗಳು.	ಜನನ ಕಾಲ.	ಮೋಕ್ಷಕಾ
೧	ಶ್ರೀ ಶಂಕರಾಚಾರ್ಯರು.	೭೪೬	೭೮೯
೨	ಸುರೇಶ್ವರಾಚಾರ್ಯ.	೭೫೩	೮೭೩
೩	ನಿತ್ಯಬೋಧ ಘನಾಚಾರ್ಯ.	೭೫೮	೮೪೮
೪	ಜ್ಞಾನ ಘನಾಚಾರ್ಯ.	೮೪೬	೯೧೦
೫	ಜ್ಞಾನೋತ್ತಮ ಶಿವಾಚಾರ್ಯ.	೯೦೫	೯೫೩
೬	ಜ್ಞಾನಗಿರಿ ಆಚಾರ್ಯ.	೯೪೯	೧೦೩೮
೭	ಸಿಂಹಗಿರಿ ಆಚಾರ್ಯ.	೧೦೩೬	೧೦೯೮
೮	ಈಶ್ವರ ತೀರ್ಥಾಚಾರ್ಯರು.	೧೦೯೭	೧೧೪೬
೯	ನರಸಿಂಹ ತೀರ್ಥರು.	೧೧೪೫	೧೨೨೮
೧೦	ವಿದ್ಯಾಶಂಕರರು.	೧೨೨೮	೧೨೩೩
೧೧	ಭಾರತೀ ಕೃಷ್ಣ ತೀರ್ಥರು.	೧೨೩೮	೧೨೮೦
೧೨	ವಿದ್ಯಾರಣ್ಯ ಸ್ವಾಮಿಗಳು.	೧೨೩೧	೧೨೮೬
೧೩	ಚಂದ್ರಶೇಖರ ಭಾರತಿಗಳು.	೧೨೬೮	೧೨೮೯
೧೪	ನೃಸಿಂಹ ಭಾರತಿಗಳು.	೧೨೮೨	೧೩೦೮
೧೫	ಪುರುಷೋತ್ತಮ ಭಾರತಿಗಳು.	೧೩೦೬	೧೩೪೮
೧೬	ಶಂಕರಾನಂದ ಭಾರತಿಗಳು.	೧೩೪೮	೧೩೫೪
೧೭	ಚಂದ್ರಶೇಖರ. ಭಾರತಿಗಳು.	೧೩೬೪	೧೩೫೯
೧೮	ನೃಸಿಂಹ ಭಾರತಿಗಳು.	೧೩೬೪	೧೩೭೯
೧೯	ಪುರುಷೋತ್ತಮ ಭಾರತಿಗಳು	೧೩೭೨	೧೩೧೩
೨೦	ರಾಮಚಂದ್ರ ಭಾರತಿಗಳು.	೧೩೦೮	೧೩೬೦
೨೧	ನೃಸಿಂಹ ಭಾರತಿಗಳು.	೧೩೫೨	೧೩೭೩
೨೨	ನೃಸಿಂಹ ಭಾರತಿಗಳು.	೧೩೬೩	೧೩೭೯
೨೩	ಇವ್ಮಡಿ ನೃಸಿಂಹ ಭಾರತಿಗಳು.	೧೩೭೩	೧೩೯೯
೨೪	ಅಭಿನವ ನೃಸಿಂಹ ಭಾರತಿಗಳು.	೧೩೯೯	೧೪೨೩
೨೫	ಸಚ್ಚಿದಾನಂದ ಭಾರತಿಗಳು.	೧೪೨೩	೧೪೪೩
೨೬	ನೃಸಿಂಹ ಭಾರತಿಗಳು.	೧೪೪೩	೧೪೦೫

೨೭	ಸಚ್ಚಿದಾನಂದ ಭಾರತಿಗಳು.	೧೭೦೫	೧೭೪೧
೨೮	ಅಭಿನವ ಸಚ್ಚಿದಾನಂದ ಭಾರತಿಗಳು	೧೭೪೧	೧೭೬೭
೨೯	ನೃಸಿಂಹ ಭಾರತಿಗಳು.	೧೭೬೭	೧೭೭೦
೩೦	ಸಚ್ಚಿದಾನಂದ ಭಾರತಿಗಳು.	೧೭೭೦	೧೮೧೪
೩೧	ಅಭಿನವ ಸಚ್ಚಿದಾನಂದಭಾರತಿಗಳು	೧೮೧೪	೧೮೧೭
೩೨	ನೃಸಿಂಹಭಾರತಿಗಳು.	೧೮೧೭	೧೮೪೯
೩೩	ಸಚ್ಚಿದಾನಂದ ಶಿವಾಭಿನವ ವಿದ್ಯಾ ನೃಸಿಂಹ ಭಾರತಿಗಳು.	೧೮೪೯	

ಭಾಷಾಂತರಕಾರ
ರ. ಅ. ಹೊರಹಟ್ಟಿ.
ಹೆ. ಮಾ. ಶಾಳಾ ಕೊಣ್ಣೂರ
ಜಿ. ಬೆಳಗಾವಿ.

ಪತ್ರವ್ಯವಹಾರ.

ರಾವಸಾಹೇಬ ಕನ್ನಡ ಶಾಲಾಪತ್ರಿಕೆಯ ಎಡಿಟರ ಘೊರೆಗಳವರ ಸನ್ನಿಧಿಗೆ:—

ವಿಜ್ಞಾಪನೆಗಳು:—ಈ ಕೆಳಗಿನ ನಾಲ್ಕು ಪಂಕ್ತಿಗಳನ್ನು ಶಾಲಾಪತ್ರಿಕೆಯಲ್ಲಿ ಪ್ರಕಟಿಸಿದರೆ, ಈಗ ನಾಲ್ಕೂ ಕಡೆಗೆ ವಿದ್ಯಾಭಿವೃದ್ಧಿಗಾಗಿ ಮನಮುಟ್ಟಿ ದುಡಿಯುವ ಶಾಲಾಧ್ಯಾಪಕರಿಗೆ ಒಂದು ಪ್ರಕಾರದ ಮೇಲಾಟವು ಉಂಟಾಗದೆ ಇರಲಾರದೆಂದು ನಂಬುತ್ತೇನೆ.

ರೋಗದ ಬೀಡಾದ ಮಲೆನಾಡಿನ (ಘಟ್ಟದ ಮೇಲಿನ ಪ್ರದೇಶದ) ಜನರು ವಿದ್ಯೆಯಲ್ಲಿ ಹಿಂದುಳಿದಿರುವದರಿಂದ ಅವರನ್ನು ಸುಧಾರಿಸಲು, ದಯಾಳು-ಸರಕಾರದವರು ಅನೇಕ ಯತ್ನಗಳನ್ನು ನಡಿಸಿರುವದು ಸರ್ವಶ್ರುತವಾಗಿರುವದು. ಈ ಯತ್ನದ ಫಲವು ಎಷ್ಟರ ಮಟ್ಟಿಗೆ ಪರಿಣಾಮವಾಗಿರುವದೆಂಬದನ್ನು ತಿಳಿಯಲು, ಮತ್ತು ಹೊಸದಾಗಿ ಸುಧಾರಿಸಲ್ಪಡಬೇಕಾದ ಸಂಗತಿಗಳನ್ನರಿಯಲು, ಪ್ರಜೆಗಳ ಹಿತಚಿಂತನೆಯಲ್ಲಿ ಜಾಗ್ರತರೂ, ವಿದ್ಯಾಭಿಮಾನಿಗಳೂ, ದಯಾಳುಗಳೂ ಆದ ಮೆ ।। ಡ್ರಾಯರೆಕ್ಟರ ಸಾಹೇಬ

ಬಹಾದ್ದೂರವರು ಮೆ॥ ದ॥ ಭಾ॥ ಎ॥ ಅನ್ಸಪೆಕ್ಟರರನ್ನೊಡಗೊಂ
ಕಾರವಾರ ಜಿಲ್ಹೆಯನ್ನು ಪ್ರವೇಶಿಸಿದರು. ಬಿತ್ತಿದ ಬೆಳಸಿನ ವೃದ್ಧಿಯನ್ನ
ನೋಡಿ ಯಾರಿಗೆ ತಾನೆ ಸಮಾಧಾನವಾಗಲಿಕ್ಕಿಲ್ಲ? ಹಾಗೆ ಧೊರೆಗಳ
ಮೊದಲು ಹಳಯಾಳ, ಯಲ್ಲಾಪೂರ, ಶಿರ್ಸಿ, ಮೊದಲಾದ ಸ್ಥಳಗಳಲ್ಲಿಂ
ಶಾಲೆಗಳನ್ನು ನೋಡುತ್ತ ಅಲ್ಲಲ್ಲಿ ಸಹ್ಯಾದ್ರಿಯ ಸೊಬಗನ್ನು ನೋಡಿ ಆ
ರ್ಯ ಪಡುತ್ತ ಹೋದ ತಿಂಗಳ ತಾರೀಖು ೧೯ನೇ ಮಂಗಳವಾರ ಪ್ರಾತ
ಕಾಲದ ೬ ಘಂಟೆಗೆ ಈ ಊರಿಗೆ (ಸಿದ್ದಾಪುರಕ್ಕೆ) ಬಂದು ಮುಟ್ಟಿದರು.
ಕಾರ್ಯೋತ್ಸುಕರಾದ ಈ ಡಾಯರೆಕ್ಟರ ಧೊರೆಗಳವರು ಮೆ॥ ದ॥ ಭಾ
ಎ॥ ಇನ್‌ಸ್ಪೆಕ್ಟರ, ಡಿ॥ ಎ॥ ಇನ್‌ಸ್ಪೆಕ್ಟರ ಮೊದಲಾದ ಪರಿವಾರದೊಡ
ಕೂಡಲೆ ಇಲ್ಲಿಯ ವಿದ್ಯಾಮಂದಿರದ ಹಾದಿಯನ್ನು ಹಿಡಿದರು.

ಆ ಕಾಲಕ್ಕೆ ಶಾಲೆಯ ಮುಂಬದಿಗೆ ಕಾರ್ಯ ಕ್ರಮದಂತೆ ಕವಾಯಿ
ತು ನಡೆದಿತ್ತು. ಇದನ್ನು ಸಾಹೇಬರು ಪೂರ್ಣವಾಗಿ ನೋಡಿ, ಅನಂದ
ಭರಿತರಾಗಿ ವಿದ್ಯಾರ್ಥಿಗಳಿಂದ ಸಲ್ಲಾಮುಗಳನ್ನು ಸ್ವೀಕರಿಸಿ, ಅಂಗಸಾಧನ
ಯ ಮನೆಯನ್ನು ಪ್ರವೇಶಿಸಿದರು. ಅಲ್ಲಿ ಅಂಗಸಾಧನೆಯುಲ್ಲಿ ಮೇಲಾದ
ವಿದ್ಯಾರ್ಥಿಗಳು ಮಲಖಂಬ, ಸಿಂಗಲ್‌ಬಾರ, ಪೇರಲಲ್ ಬಾರ, ಲೋಡು
ಮೊದಲಾದವುಗಳನ್ನು ಪೈಲವಾನರಂತೆ ಮಾಡಿ ತೋರಿಸಿದರು. ಅದರಲ್ಲಿ
ಮಲಖಂಬದ ಮೇಲಿನ ಕಸರತ್ತಂತೂ ವಿದ್ಯಾರ್ಥಿಗಳ ಶಕ್ತಿಗೆ ಮೀರಿದ್ದಿತ್ತು.
ಸಾಹೇಬ ಬಹದ್ದೂರವರಿಂದ ಮೇಲೆ ಮೇಲೆ ಚಪ್ಪಾಳೆಯನ್ನು ಹೊಂದು
ತ್ತಿತ್ತು.

ಅದರ ನೆರೆಯಲ್ಲಿಯೇ ಗೇರಸಪ್ಪೆಯ ಕೃತ್ರಿಮ ತಡಸಲು ನೆಲಸಿತ್ತು.
೬ನೇ, ೭ನೇ ಇಯತ್ತೆಯ ವಿದ್ಯಾರ್ಥಿಗಳು ಜೋಗಿನ ಪ್ರವಾಸ ಮಾಡಿ
ತಾವು ನೋಡಿದ ಸಂಗತಿಗಳನ್ನೇ ಇಲ್ಲಿ ಕೈಯಿಂದ ಮಾಡಿದ್ದರು. ಇದನ್ನು
ಅದೇ ಕಾಲಕ್ಕೆ ಕೆಳಗಿನ ಇಯತ್ತೆಯ ವಿದ್ಯಾರ್ಥಿಗಳಿಗೆ ತಿಳಿಸುತ್ತಿದ್ದರು.
ಅದನ್ನು ಧೊರೆಗಳು ಸಾವಧಾನ ಚಿತ್ತದಿಂದ ಕೇಳಿ, ಅತ್ಯಾನಂದ ಭರಿತ
ರಾಗಿ, ವಿದ್ಯಾರ್ಥಿಗಳಿಗೆ ಪ್ರವಾಸದ ಸಂಬಂಧದಿಂದ ಒಂದೆರಡು ಪ್ರಶ್ನೆಗ
ಳನ್ನು ಮಾಡಿ, ತಕ್ಕ ಉತ್ತರಗಳು ಬಂದದ್ದು ನೋಡಿ ಶಾಬಾಸ್, ಶಾಬಾಸ್
ಎಂದು ನುಡಿದು, ಸವಿೂಪದ ಆರೋಗ್ಯರಕ್ಷಣೆಯ ಬೈಲ ಮನೆಯನ್ನು
ಪ್ರವೇಶಿಸಿದರು. ಆ ಕಾಲಕ್ಕೆ ಅಲ್ಲಿ ಸಹ್ಯಾದ್ರಿಯ ವಿಷಯವು ಕಲಿಸಲ್ಪಡು

ತ್ತಿತ್ತು. ಕೃತ್ರಿಮ ಉಗೆಬಂಡಿಯ ದಾರಿ, ತಾರು, ಬಂದರ, ಹಿಂದುಸ್ತಾನದ ಮಾಡೆಲ್, ಸಹ್ಯಾದ್ರಿಯ ಮಾಡೆಲ್ ಮೊದಲಾದವುಗಳನ್ನು ನೋಡಿ, ಅವುಗಳಬಗ್ಗೆ ವಿದ್ಯಾರ್ಥಿಗಳಿಗೆ ಕೆಲವು ಪ್ರಶ್ನೆಗಳನ್ನು ಕೇಳಿ, ಉತ್ತರವನ್ನು ಸ್ವೀಕರಿಸಿ ನಗೆಮೊಗದೊಡನೆ ಒಳಗೆ ಪ್ರವೇಶಿಸಿದರು. ಇವರ ಶಾಂತತೆಯೂ, ನಗೆಮೊಗವೂ, ಅಂಜಿಕೆಯೆಂಬ ಹಗೆಯನ್ನು ಹೊಡೆದೋಡಿಸಿದ್ದರಿಂದಲೇ ಎಲ್ಲ ಕ್ಲಾಸುಗಳಲ್ಲಿ ಶಾಂತತೆಯಿಂದಲೂ, ಸಮಾಧಾನದಿಂದಲೂ ಸರಿಯಾಗಿ ಅಭ್ಯಾಸವು ಸಾಗಲಿಕ್ಕೆ ಅನುಕೂಲ ಮಾಡಿ ಕೊಟ್ಟಿರುವದೋ ಏನೋ ಎಂಬಂತೆ ತೋರುತ್ತಿತ್ತು.

ಇವರು ಪ್ರತಿಯೊಂದು ಕ್ಲಾಸಿನಲ್ಲಿ ಹೋಗಿ, ಅಲ್ಲಲ್ಲಿ ನಡೆದ ವಿಷಯಗಳನ್ನು ನೋಡಿದ್ದಲ್ಲದೆ, ೫ನೇ ಇಯತ್ತೆಯವರಿಗೆ ಮಾಹೆಲಿನ ಸಹಾಯದಿಂದ ಸ್ವಗ್ರಾವುದ ಭೂಗೋಲ ಕಲಿಸುವದನ್ನೂ ಬಾಲಕರ ಪಗರ್‌ಕ್ಕೆ ನೂತನ ಪದ್ಧತಿಯಿಂದ ಅಕ್ಷರ ಕಲಿಸುವದನ್ನೂ ನೋಡಿ ಹರ್ಷದಿಂದ ಮುಂದೆ ನಡೆದರು. ೧ನೇ ಇಯತ್ತೆಯವರು ಹಾಡಿನೊಡನೆ ಆಡಿದ ಬಾಲೋದ್ಯಾನದ ಆಟವನ್ನೂ ಹಸ್ತಕೌಶಲ್ಯವನ್ನೂ, ೭ನೇ ಇಯತ್ತೆಯ ವಿದ್ಯಾರ್ಥಿಗಳು ಕಾರ್ಬಾನಿಕ್ ಆಸಿಡ್‌ಗ್ಯಾಸ್, ಹೈಡ್ರೋಜನ್ ಈ ವಾಯುಗಳ ಪ್ರಯೋಗಗಳನ್ನು ಸ್ವತಃ ಮಾಡಿತೋರಿಸಿದ್ದನ್ನೂ ಸಾವಧಾನ ಚಿತ್ತದಿಂದ ಕೂತು ಕೇಳುವಷ್ಟರಲ್ಲಿಯೇ ವಿದ್ಯಾರ್ಥಿಗಳ ಕಲಾಕೌಶಲ್ಯವು ಧೊರೆಗಳನ್ನು ಕೂತಲ್ಲಿಂದ ಎಬ್ಬಿಸಿತು. ಈ ಕಾಲಕ್ಕೆ ಕಾರ್ಪೆಂಟರಿ ಕ್ಲಾಸಿನಲ್ಲಿ ವಿದ್ಯಾರ್ಥಿಗಳ ಯೋಗ್ಯತೆಗೆ ಸರಿಯಾಗಿ ಉಳಿ, ಕರಗಸ, ಉಜ್ಜುಗೊರಡು, ಗಾಡ ಇವುಗಳ ಕೆಲಸವು ನಡೆದಿತ್ತು. ಸಾಹೇಬರು ಗಾಡದ ಕೆಲಸವನ್ನು ಬಹಳ ಹೊತ್ತು ನಿಂತು ನೋಡಿದರು. ಹೆಣಿಕೆಯ ಕ್ಲಾಸಿನಲ್ಲಿ ಹುಡುಗರು ಸ್ವತಃ ಹೆಣೆಯುತ್ತಿದ್ದದ್ದನ್ನೂ ಹಾಸನದ ಟೊಪ್ಪಿಗೆಗಳನ್ನು ಸಿದ್ಧಪಡಿಸಿದ್ದನ್ನೂ ನೋಡಿ ಅವುಗಳ ಬೆಲೆ ಮೊದಲಾದವುಗಳ ಬಗ್ಗೆ ಕೇಳಿ, ಬಹಳ ಹೊತ್ತು ನಿಂತು ಸೆಂಟ್ರಲ್ ಕ್ಲಾಸಿಗೆ ಹೋಗಿ, ಅಲ್ಲಿಯ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದದ್ದನ್ನು ನೋಡಿ ಹರ್ಷಿತರಾದರು. ಬಳಿಕ ಬಾಲಸಂಗೀತವನ್ನು ಕೇಳಿಕೊಂಡು ಸದ್ಗುಣಿಗಳಾದ ಹುಡುಗರ ಭಾವಚಿತ್ರಗಳನ್ನು ತೆಗೆದುಕೊಂಡರಲ್ಲದೆ ಮಕ್ಕಳ ಆಟವನ್ನು ನೋಡಲಪೇಕ್ಷಿಸಿದಂತೆ ಶಾಲೆಯ ಮುಂಬದಿಗೆ ಹುಡುಗರು ತಿಳಿ ಆಟವನ್ನು ಆಡುತ್ತಿರಲು ಅವರ

ಭಾವಚಿತ್ರವನ್ನು ತೆಗೆದುಕೊಂಡು ತನ್ನ ವಸತಿಸ್ಥಾನವನ್ನು ಪ್ರವೇಶಿಸಿದರು.

ವಿದ್ಯಾರ್ಥಿಗಳ ಜ್ಞಾನವೃದ್ಧಿಗಾಗಿ ಆದಿನ ರಾತ್ರಿ ವಿದ್ಯಾಮಂದಿರದಲ್ಲಿಯೇ ಧೊರೆಗಳವರ ಸ್ವಹಸ್ತದಿಂದ ಮ್ಯಾಜಿಕ್ ಲ್ಯಾಂಟರ್ನವು ತೋರಿಸಲ್ಪಟ್ಟಿತು. ಅದರಲ್ಲಿ ಜಂಬೂ ದ್ವೀಪದಲ್ಲಿಯ ಹಿಂದುಗಳ ಸುಪ್ರಸಿದ್ಧ ಕ್ಷೇತ್ರಗಳೂ, ಮಂದಿರಗಳೂ, ಕೆಲವು ಪ್ರಾಣಿಗಳೂ ಬೇರೆ ಬೇರೆ ಭಾಗದ ಉದ್ಯೋಗಗಳೂ ಪ್ರತ್ಯಕ್ಷವಾಗಿದ್ದಂತೆ ಕಂಡು ಬಂದವು. ಧೊರೆಗಳವರು ಪ್ರತಿಯೊಂದು ಚಿತ್ರದ ಹೆಸರನ್ನು ವಿದ್ಯಾರ್ಥಿಗಳ ಬಾಯಿಂದಲೇ ಕೇಳಿಕೊಂಡರು. ಎಲ್ಲ ಚಿತ್ರಗಳನ್ನು ತೋರಿಸಿದ ನಂತರ ಧೊರೆಗಳೂ, ಕೂಡಿದ ಪ್ರೇಕ್ಷಕರೂ, ವಿದ್ಯಾರ್ಥಿಗಳೂ ತಕ್ಕಾಸನಗಳಲ್ಲಿ ಕುಳಿತುಕೊಂಡರು. ನಂತರ ಮೊಗದಿಂದ ಕೂಡಿದ ಧೊರೆಗಳು ಹುಡುಗರು ಸರಿಯಾದ ಉತ್ತರ ಕೊಟ್ಟದ್ದು ಕೇಳಿ, ನನಗೆ ಬಹಳ ಆನಂದವಾಗಿದೆ ಎಂಬದನ್ನು ಇಂಗ್ಲೀಷದಿಂದ ನುಡಿದರು. ಬಳಿಕ ಹಾರ, ತುರಾಯಿಗಳಿಂದ ಸಂತೋಷಿತರಾಗಿ, ಬಡಿಗತನದ ವಿದ್ಯಾರ್ಥಿಗಳು ಮಾಡಿದ ಕಟ್ಟಿಗೆಯ ವಾಟಕ (ನೀರು ಕುಡಿಯುವ ಪೇಲೆ) ಗಳನ್ನು ಕಾಣಿಕೆಯಾಗಿ ಸ್ವೀಕರಿಸಿ ಹರ್ಷಾಬ್ಧಿಯಲ್ಲಿ ಮುಳುಗಿದವರಾಗಿ ಸ್ವಸ್ಥಾನವನ್ನು ಕುರಿತು ತೆರಳಿದವರಾದರು.

ಲೋಕದಲ್ಲಿ ಮಕ್ಕಳ ಮೋಹವು ಬಳೆಯಂತಿರುವ ವಶೀಕರಣಮಂತ್ರವು. ಈ ಶಾಲೆಯ ಹುಡುಗರ ಸದ್ಗುಣವೆಂಬ ಈ ವಶೀಕರಣಮಂತ್ರವು, ಹಿಂದಿನ ದಿನದಿಂದ ಶಾಲೆಯನ್ನು ನೋಡುವ ಕೆಲಸವು ತೀರಿಸಲ್ಪಟ್ಟಿತ್ತಾದರೂ, ಧೊರೆಗಳವರನ್ನು ಮರು ದಿವಸ ಬೆಳಗಾಗುವದರೊಳಗೇ (೬ಘಂಟೆಗೇ) ಆಗಮಿಸುವಂತೆ ಮಾಡಿತು. ಪುನಃ ಆಗಮಿಸಿದ ಧೊರೆಗಳು ಕಾರ್ಯ ಕ್ರಮದಂತೆ ನಡೆಯುತ್ತಿದ್ದ ಅಭ್ಯಾಸವನ್ನು ಸಾವಧಾನ ಚಿತ್ತದಿಂದ ಆಯಾ ಕ್ಲಾಸಿನಲ್ಲಿ ಹೋಗಿ ನೋಡುತ್ತಲೂ ಅಲ್ಲಲ್ಲಿ ಕುಳಿತು ಹುಡುಗರಿಗೆ ಪ್ರಶ್ನೆಗಳನ್ನು ಕೇಳಿ, ಉತ್ತರಗಳನ್ನು ಸ್ವೀಕರಿಸುತ್ತಲೂ ೯ ಘಂಟೆಯ ವರೆಗೆ ಕಾಲ ಕಳೆದರು. ಅನಂತರ ಸೂಟಿಯ ಹೇಳಿಯಲ್ಲಿ ತೆರೆದ ಸ್ವೀಕನರಿ ಅಂಗಡಿಯಲ್ಲಿ ಕೆಲವು ಸಾಮಾನುಗಳನ್ನು ಕೊಂಡುಕೊಂಡು ನಿಜಭವನವನ್ನು ಸೇರಿದರು.

ಚಿಕ್ಕದಾದ ಈ ಸಿದ್ದಾಪುರ ಶಾಲೆಯ ಮೇಲೆ ಹುಟ್ಟಿದ ಇವರ ಪ್ರೇಮವು ಇಷ್ಟರಿಂದಲೂ ತೃಪ್ತಿ ಹೊಂದಲಿಲ್ಲ. ಯಾಕಂದರೆ, ನಿಜಭವನ ವನ್ನೈದಿದ ಭೊರೆಗಳು ಪುನಶ್ಚ ತಿರುಗಿ ಬಂದು ಶಾಲೆಯಲ್ಲಿ ಕುಳಿತುಕೊಂ ಡರು. ಮನದಲ್ಲಿ ಹುಟ್ಟಿದ ಈ ಬಡ ಶಾಲೆಯ ಪ್ರೇಮವು ಸ್ಥಿರವಾಗಿ ಉಳಿಸ ಲಪೇಕ್ಷೆ ಪಟ್ಟಂತೆ ಪ್ರತಿಯೊಂದು ಕ್ಲಾಸಿನ ವಿದ್ಯಾರ್ಥಿಗಳ ಭಾವಚಿತ್ರ ಗಳನ್ನೂ, ಕಾರ್ಪೆಂಟರಿ, ಶಾಲೀಮು ನೆಯಿಗೆ ಈ ಕೆಲಸಗಳನ್ನು ಪ್ರಾರಂ ಭಿಸಿ ಪ್ರತಿಪ್ರತ್ಯೇಕವಾಗಿ ಆಯಾ ಕ್ಲಾಸುಗಳು ನಡೆಯುವಾಗ ಅವರ ಭಾವಚಿತ್ರಗಳನ್ನೂ ಶಿಕ್ಷಕೋಪಶಿಕ್ಷಕರ ಭಾವಚಿತ್ರಗಳನ್ನೂ ತೆಗೆದು ಕೊಂಡು ಹರ್ಷಿತರಾಗಿ ಸ್ವಸ್ಥಾನವನ್ನು ಕುರಿತು ತೆರಳಿದರು. ಇಂಥ ಚಿಕ್ಕ ಶಾಲೆಯ ಮೇಲೆ ಉಂಟಾದ ಇವರ ಪ್ರೇಮದಿಂದ ಎಲ್ಲ ಶಿಕ್ಷಕರಿಗೆ ಹೆಚ್ಚು ಉತ್ತೇಜನ ದೊರೆತು, ಇದಕ್ಕಿಂತ ಹೆಚ್ಚು ಕರ್ತವ್ಯದಕ್ಷರಾಗಿ ನಿಜವಾದ ದೇಶಕಲ್ಯಾಣವಾಗಲೆಂದು ಆಶಿಸುತ್ತೇನೆ.

ತಮ್ಮ ವಿಧೇಯ,
ವಿದ್ಯಾಭಿಮಾನಿ,

ಸಿದ್ದಾಪುರ, ತಾ॥ ೫-೫-೧೧ | ಹರಿಯಪ್ಪಾ ವಾಸುದೇವಪ್ಪಾ ಚಂದ್ರಪಟ್ಟಣ. ಲೋಕಲ್‌ಬೋರ್ಡ ಮೆಂಬರ ಸಿದ್ದಾಪುರ,

---

ಕಳೆದ ತಿಂಗಳ ೨೨ನೇ ತಾರೀಖಿಗೆ ಆದ ರಾಜ್ಯಾರೋಹಣ ಸಮಾರಂಭದ ಬಗ್ಗೆ ಬಂದ

ಪತ್ರಗಳ ಸಾರಾಂಶವು.

ಕೋಡ ತಾಲೂಕ ಕಡೂರ ಶಾಲೆಯಲ್ಲಿ ಆದ ರಾಜ್ಯಾರೋಹಣೋತ್ಸವದ ಕಾಲಕ್ಕೆ ಅಲ್ಲಿಯ ಸಭ್ಯ ಗೃಹಸ್ಥರಾದ ಮ. ರಾ. ಬಸನಗೌಡಾ ಭೀಮನಗೌಡಾ ಮೇಗಳಮನೆಯ ಗೌಡರ ಇವರು ೨ ರೂಪಾಯಿಗಳ ಮಿಠಾಯಿ ಹಂಚಿದರೆಂದು ಆ ಸಾಲೆಯ ಸ್ಕೂಲ ಪಂಚರಾದ ಮ. ರಾ. ಧರಿಯಪ್ಪಾ ನರಸಪ್ಪಾ ಎಂಬವರು ಬರೆಯುತ್ತಾರೆ.

ಕಲಘಟಿಗಿ ತಾಲೂಕ ಮಿಶ್ರೀಕೋಟಿ ಸಾಲೆಯಲ್ಲಿ ರಾಜ್ಯಾರೋಹಣ ನಿಮಿತ್ತವಾಗಿ ನೆರೆದ ಸಭೆಯ ಕಾಲಕ್ಕೆ ಮ. ರಾ. ರಾ. ವೀರನಗೌಡ

ಸಂಕನೆಗೌಡ ಕನ್ನೂರ ಇವರು ೧೫ ರೂಪಾಯಿಯನ್ನೂ ಉಗ್ಗಿನಕೇರಿ ಮಡಿವಾಳಯ್ಯನವರು ೫॥ ರೂಪಾಯಿಗಳನ್ನೂ ಕೊಟ್ಟರೆಂದು ಆ ಶಾಲೆಯ ಸ್ಕೂಲ ಪಂಚರಾದ ಮ. ರಾ. ಗುರುಸಿದ್ದಪ್ಪ ಜಹಾಗೀರದಾರ ಇವರು ಬರೆಯುತ್ತಾರೆ.

ಕರ್ಜಗಿ ತಾಲೂಕ ಹೊಮ್ಮರ್ಡಿ ಸ್ಕೂಲ ಮಾಸ್ತರರು—ಉತ್ಸವದ ಖರ್ಚಿಗಾಗಿ ಸ್ಕೂಲಪಂಚರು ೨ ರೂಪಾಯಿಗಳನ್ನು ಕೊಟ್ಟರೆಂತಲೂ, ಒಬ್ಬ ಸಾವಕಾರರು ಎಲ್ಲ ಹುಡುಗರಿಗೆ ಮಿಠಾಯಿ ಹಂಚಿದರೆಂತಲೂ ತಿಳಿಸುತ್ತಾರೆ.

ಹುಬ್ಬಳ್ಳಿ ತಾಲೂಕ ಯರಗುಪ್ಪಿ ಸಾಲೆಯಲ್ಲಿ ಆದ ಉತ್ಸವದ ಸ್ಮಾರಕದ ಸಲುವಾಗಿ ಅಲ್ಲಿಯ ಕುಲಕರ್ಣಿ ಮಿ. ಗುರುರಾವ ಜಾವೊರ ಹಾಗು ಮಿ. ಫಕೀರಗೌಡ ಪಾಟೀಲ ಇವರು ೧೨ ರೂ. ವರ್ಗಣಿ ಕೂಡಿಸಿ ಒಂದು ಗಡಿಯಾಳವನ್ನೂ ಒಂದು ಗ್ಲೋಬನ್ನೂ ತರಿಸಿಕೊಡುವ ಅಭಿವಚನ ಕೊಟ್ಟದ್ದಾರೆಂದು ಮಿ. ರಂಗನಗೌಡ ಚಿಕ್ಕನಗೌಡ ಪಾಟೀಲ ಎಂಬವರು ಬರೆದು ತಿಳಿಸುತ್ತಾರೆ.

ಹುನಗುಂದ ತಾಲೂಕ ಅಮರಾವತಿ ಶಾಲೆಯ ಹೆಡ್‌ಮಾಸ್ತರ ಮಿ. ಗುಲಗಂಜಿ ಇವರು—ತಮ್ಮ ಸಾಲೆಯಲ್ಲಿ ಆದ ಉತ್ಸವದ ಕಾಲಕ್ಕೆ ಶ್ರೀಮಂತ ರಾವಸಾಹೇಬ ಲಿಂಗಪ್ಪ ರಾವಪ್ಪ ದೇಸಾಯಿ ಇವರು ಬಡ ಹುಡುಗರಿಗೆ ಪಾಟಿ ಪುಸ್ತಕಗಳನ್ನು ಹಂಚಿದರು; ಹಾಗು ಪ್ರತಿ ತಿಂಗಳ ಫೀ ಹಣವನ್ನು ಕೊಡಲಿಕ್ಕೆ ಒಪ್ಪಿಕೊಂಡಿರುವರು, ಎಂದು ಬರೆಯುತ್ತಾರೆ.

ರಾಣೇಬೆನ್ನೂರ ತಾಲೂಕ ನಾಗೇನಹಳ್ಳಿಯ ಸಾಲೆಯ ಉತ್ಸವದಲ್ಲಿ ಆ ಊರ ಕೆಲ ಸಭ್ಯಗೃಹಸ್ಥರು ೧೭ ರೂ. ವರ್ಗಣಿ ಕೂಡಿಸಿ ಬಡಹುಡುಗರಿಗೆ ಪಾಟಿಪುಸ್ತಕಗಳನ್ನು ಕೊಟ್ಟರೆಂತಲೂ, ಮಿಠಾಯಿ ಹಂಚಿದರೆಂತಲೂ ಆ ಊರ ಒಬ್ಬ ಸಜ್ಜನಗೃಹಸ್ಥನು ಬರೆಯುತ್ತಾನೆ.

ಇಂಡಿ ತಾಲೂಕ ಭತಗುಣಕಿ ಹಾಗು ಕೋಡ ತಾಲೂಕ ಅಣೂರ ಳ್ಳಿಯ ಶಾಲೆಗಳಲ್ಲಿ ಆದ ಉತ್ಸವಗಳಲ್ಲಿ ಊರೊಳಗಿನ ಕೆಲವು ಸದ್ಗೃಹ ರು ಕೂಡಿ, ಸಾಲೆಗೆ ಅನುಕ್ರಮವಾಗಿ ೨೫॥ ರೂಪಾಯಿಗಳನ್ನೂ ರೂಪಾಯಿಗಳನ್ನೂ ಕೊಟ್ಟರೆಂದು ಆಯಾ ಶಾಲೆಗಳಲ್ಲಿ ನೆರೆದ ಸಭಿಕರು ಳಿಸುತ್ತಾರೆ.

ರೋಣ ತಾಲೂಕ ನರೇಗಲ್ಲ ಶಾಲೆಯಲ್ಲಿ ಆದ ಉತ್ಸವದ ಕಾಲಕ್ಕೆ ಮಾಮಲೇದಾರರೂ ಸ್ಕೂಲ ಪಂಚರೂ ಕೂಡಿ ೧೩ ರೂಪಾಯಿ ವರ್ಗಣಿ ಕೂಡಿಸಿ ಸಾಲೆಗೆ ೮ ರೂಪಾಯಿಗಳ ಗಡಿಯಾಳವನ್ನು ತರಿಸಿ ಕೊಟ್ಟರು; ಮತ್ತು ೫ ರೂಪಾಯಿಗಳ ಮಿಠಾಯಿ ಹಂಚಿದರು.

ಪರಸಗಡ ತಾಲೂಕ ಹಾರೋಬೆಳವಡಿ ಹೊಂಗಲದ ಭೀಮಾಜಿ ವೆಂಕಟೇಶ ಸಬನೀಸ ಎಂಬವರು—ಅಲ್ಲಿಯ ಹೈ. ಮಾ. ಮಿಸ್ತ್ರರ ಹ. ಜೀ. ಕುಲಕರ್ಣಿ ಇವರ ಸೂಚನೆಯ ಮೇರೆಗೆ ಊರೊಳಗಿನ ಕೆಲವು ಸಭ್ಯಗೃಹಸ್ಥರು ಕೂಡಿ ೧೩ ರೂಪಾಯಿ ವರ್ಗಣಿ ಕೂಡಿಸಿ ಬಾದಶಹರ ರಾಜ್ಯಾರೋಹಣದ ಸ್ಮಾರಕದ ಸಲುವಾಗಿ ಒಂದು ಗಡಿಯಾಳವನ್ನು ತರಿಸಿ ಕೊಟ್ಟರೆಂದು ಬರೆಯುತ್ತಾರೆ.

ಬೇಡಿಕಿಹಾಳದ ಸಭೆಯು ಒಬ್ಬ ಶ್ರೇಷ್ಠಕರಾದ ನಾರಾಯಣ ಅಣ್ಣಾಜಿ ಕುಲಕರ್ಣಿ ಇವರು—ತಮ್ಮ ಊರಲ್ಲಿ ಬಾದಶಹರ ಪಟ್ಟಾಭಿಷೇಕೋತ್ಸವವು ಬಳ್ಳೀ ವಿಜೃಂಭಣೆಯಿಂದ ನೆರವೇರಿತೆಂತಲೂ ಆ ಕಾಲಕ್ಕೆ ಮಿ. ಗೋಪಾಳರಾವ ಕುಲಕರ್ಣಿ ಇವರು ವಿಕ್ಟೋರಿಯಾ ಮಹಾರಾಣಿ, ೭ನೇ ಎಡ್ವರ್ಡ, ೫ನೇ ಜಾರ್ಜ ಈ ಮಹನೀಯರ ಭಾವಪಠಗಳನ್ನು ಸಾಲೆಯಲ್ಲಿ ಹಚ್ಚುವದಕ್ಕಾಗಿ ೭ ರೂಪಾಯಿಗಳನ್ನು ಅಲ್ಲಿಯ ಶಾಲೆಯ ಹೆಡ್‌ಮಾಸ್ತರರ ಕಡೆಗೆ ಕೊಟ್ಟರೆಂತಲೂ ಬರೆಯುತ್ತಾರೆ.

ರೋಣ ತಾಲೂಕ ಅಬ್ಬಿಗೇರಿ ಶಾಲಾಮಾಸ್ತರರು—ಉತ್ಸವದ ನಿಮಿತ್ತವಾಗಿ, ಸಾಲೆಯ ಯಾಂತ್ರಿಕ ಸಾಮಾನುಗಳ ಸಲುವಾಗಿಯೂ,

ತಾಲೀಮು ಸಾವಕಾನುಗಳ ಸಲುವಾಗಿಯೂ, ಮಿ. ಸಂಗನಗೌಡ ಫಕೀ
ಗೌಡ ಪಾಟೀಲ ಎಂಬವರು ೨೫ ರೂಪಾಯಿಗಳನ್ನೂ ಸ್ಕೂಲ ಕಮಿಟಿ
ರರೂ ಲೋಕಲ್‌ಬೋರ್ಡ ಮೆಂಬರರೂ ಕೂಡಿ ೨೦ ರೂಪಾಯಿಗಳನ್ನ
ಬಾಳಾಜಿ ಶಂಕರ ಕುಲಕರ್ಣಿ ಇವರು ೫ ರೂಪಾಯಿಗಳನ್ನೂ ಕೊ
ರಂದು ಬರೆಯುತ್ತಾನೆ.

ಇಂಗಳ ಹಳ್ಳಿಯಲ್ಲಿ ಆದ ಉತ್ಸವದ ಸ್ಮಾರಕದ ಸಲುವಾಗಿ ಅಲ್ಲಿಂ
ಕೆಲವು ಸಭ್ಯ ಗೃಹಸ್ಥರು ಮುಂದಾಗಿಯೇ ವರ್ಗಣಿ ಕೂಡಿಸಿ, ಒಂದ
ಗಡಿಯಾಳವನ್ನೂ ಒಂದು ಝಾಗಟೆಯನ್ನೂ ತರಿಸಿ ಸಾಲೆಗೆ ಕೊಟ್ಟರೆಂದ
ಒಬ್ಬ ಸದ್ಗೃಹಸ್ಥರು ತಿಳಿಸುತ್ತಾರೆ.

ಗದಗ ಗರ್ಲ್‌ಸ್ಕೂಲಿನಲ್ಲಿ ಆದ ಸಭೆಯಲ್ಲಿ ಮಿ. ರಾ. ರಾ. ಗೋವಿಂ
ಕಾನಶೇಟ ಎಂಬವರು ಮಿಠಾಯಿ ಹಂಚಿದರೆಂತಲೂ, ಮಿ. ರಾ. ರಾ
ಭುಜಂಗಬಾ ಶೇಟಗೆ ಎಂಬವರು ನೀತಿವರ ಪುಸ್ತಕಗಳನ್ನು ಹಂಚಿದರೆ
ತಲೂ ಅಲ್ಲಿಯ ಹೆಡ್‌ಮಿಸ್ಟ್ರಸ್ಸಳು ಬರೆಯುತ್ತಾಳೆ.

ಹುಬ್ಬಳ್ಳಿ ತಾಲೂಕ ಹೆಬಸೂರ ಶಾಲೆಯ ೫ನೇ ಇಯತ್ತೆಯ ಒಬ್ಬ
ವಿದ್ಯಾರ್ಥಿಯು—ತಮ್ಮ ಶಾಲೆಯಲ್ಲಿ ಉತ್ಸವದ ನಿಮಿತ್ತವಾಗಿ ಶ್ರೀಯುತ
ಹಿರಿಯಪ್ಪಾ ಮುದಿರಡ್ಡಿ ಇವರ ಅಧ್ಯಕ್ಷತೆಯ ಕೆಳಗೆ ಸಭೆಯು ನೆರೆದಿತ್ತೆಂ
ತಲೂ, ಆ ಕಾಲಕ್ಕೆ ಸಾಲೆಯ ಸಲುವಾಗಿ ೩೪ ರೂಪಾಯಿ ವರ್ಗಣಿ
ಕೂಡಿಸಲ್ಪಟ್ಟಿತೆಂತಲೂ ಬರೆಯುತ್ತಾನೆ.

ಇದಲ್ಲದೆ ಭಟಕಳ, ಬಂಕಾಪೂರ ತಾಲೂಕ ಅತ್ತಿಗೇರಿ, ಗದಗ
ಶಹಾಪೂರ ಪೇಟ ಗರ್ಲ್‌ಸ್ಕೂಲ, ಬಂಕಾಪೂರ ತಾಲೂಕ ಕೋಳಿವಾಡ,
ಸಿಂದಿಗಿ ತಾಲೂಕ ಮೋರಟಗಿ, ನವಲಗುಂದ, ಮುದ್ದೇಬಿಹಾಳ,
ಮೇಡ್ಲೇರಿ, ನವಲಗುಂದ ತಾಲೂಕ ಹಳ್ಳೀಕೇರಿ, ರೋಣ ತಾಲೂಕ
ನಿಡಗುಂದಿ, ಧಾರವಾಡ ತಾಲೂಕ ಹೆಬ್ಬಳ್ಳಿ, ಕುಮಟಾ ಇವೇ ಮೊದ
ಲಾದ ಶಾಲೆಗಳಲ್ಲಿಯೂ ಉತ್ಸವವಾಯಿತೆಂದು ಆಯಾ ಶಾಲಾವಾಸ್ತ
ರರು ಬರೆಯುತ್ತಾರೆ.

ಕಳೆದ ತಿಂಗಳಲ್ಲಿ ಲಂಡನದಲ್ಲಿ ರಾಜ್ಯಾರೋಹಣ ಸಮಾರಂಭವಾದ ದಿವಸವೇ ಈ ನಮ್ಮ ಹಿಂದುಸ್ತಾನದಲ್ಲಿಯೂ ಈ ಸಮಾರಂಭವು ಅನೇಕ ಕಡೆಯಲ್ಲಿ ಬಹಳ ಉತ್ಸಾಹವಿಂದ ನೆರವೇರಿಸಲ್ಪಟ್ಟಿತು. ಬಹುಕಃ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿಯೂ ಈ ಉತ್ಸಾಹವು ಮಾಡಲ್ಪಟ್ಟಿತು. ಆ ಬಗ್ಗೆ ನಮ್ಮ ಕಡೆಗೆ ಶಾಲಾಪತ್ರಕದಲ್ಲಿ ಪ್ರಸಿದ್ಧಿಸುವದಕ್ಕೋಸ್ಕರ ಅನೇಕ ಪತ್ರಗಳು ಬಂದಿರುತ್ತವೆ. ಅವೆಲ್ಲವುಗಳನ್ನು ಮುದ್ರಿಸುವದು ಅಸಾಧ್ಯವಾದ್ದರಿಂದ ಆ ಪತ್ರಗಳಲ್ಲಿ ಕೆಲವುಗಳ ಸಾರಾಂಶವನ್ನು ಮೇಲೆ ಕೊಟ್ಟಿದ್ದೇವೆ; ಕೆಲವುಗಳ ಹೆಸರುಗಳನ್ನು ಮಾತ್ರ ನಿರ್ದೇಶಮಾಡಿದ್ದೇವೆ. ಇನ್ನು ಮಹಾದರಿಗಾಗಿ ಬಂದೆರಡು ಪತ್ರಗಳನ್ನು ಸಾದ್ಯಂತವಾಗಿ ಕೊಡುತ್ತೇವೆ:—

ಗು. ಮ. ರಾ. ಶಾಲಾಪತ್ರ ಕರ್ತರ ಸನ್ನಿಧಿಗೆ—

ಬಂಕಾಪುರದಲ್ಲಿ ಶಾ॥ ೨೨-೬-೧೧ ದಿವಸ, ಜನೇ ಜಾರ್ಜ ಬಾಡಶಹರ ರಾಜ್ಯಾರೋಹಣೋತ್ಸವವು ಬಳ್ಳೀ ವಿಜೃಂಭಣೆಯಿಂದ ನೆರವೇರಿತು. ಅದರ ತೀರ ಸಂಕ್ಷಿಪ್ತ ಸಂಗತಿಯನ್ನು ತಮ್ಮಿಷ್ಟಕ್ಕೆ ಕಳಿಸಿರುವೆನು. ಇದನ್ನು ಶಾಲಾಪತ್ರಕದಲ್ಲಿ ಪ್ರಕಟಗೊಳಿಸಬೇಕೆಂದು ಬಯಸುತ್ತೇನೆ.

(೧) ಮೆರವಣಿಗೆ:— ರಾಜ-ದಂಪತಿಗಳ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿಟ್ಟು ಮೆರವಣಿಗೆ ಹೊರಡಿಸಿತು. ಬ್ಯಾಂಡು, ಕಹಳೆ, ಬಜಂತ್ರಿಗಳ ವಾದ್ಯಗಳು ಭೋರ್ಗರೆಯುತ್ತಿದ್ದವು. ಸಂಗಡ ವಿದ್ಯಾರ್ಥಿಗಳು ಸಹಿತ ಎರಡು ಸಾವಿರ ಜನರು ಕಲೆತಿದ್ದರು. ೨ ಮೈಲು ಮೆರವಣಿಗೆಯಾಗಿ ಪಲ್ಲಕ್ಕಿಯು ಕನ್ನಡ ಸಾಲೆಗೆ ಬಂತು. ಅರಸರ ಜಯ ಜಯಕಾರ ಶಬ್ದವು ಊರ ತುಂಬ ಮೊಳಗುತ್ತ ಆನಂದವನ್ನುಂಟು ಮಾಡಿತು.

(೨) ಸಭೆ:— ನಿಶಾನೆ ತೋರಣಗಳಿಂದೊಪ್ಪುವ ಶಾಲೆಯಲ್ಲಿ, ಶೃಂಗರಿಸಿದ ಎತ್ತರವಾದ ಮಂಟಪದಲ್ಲಿ ಅರಸರ ಭಾವ-ಚಿತ್ರವು ಇಡಲ್ಪಟ್ಟಿತು. ಎಲ್ಲರು ಉಚಿತಾಸನದಲ್ಲಿ ಕುಳಿತರು. ಇಬ್ಬರು ವಿದ್ಯಾರ್ಥಿಗಳು ಪಿಯಾನೋದ ನಾದದಲ್ಲಿ ದೇವರ ಸ್ತೋತ್ರವನ್ನು ಸುಸ್ವರವಾಗಿ ಹಾಡಿದರು. ಮ. ರಾ. ಗೋವಿಂದರಾವ ಕಲಕೋಟಿ ಬಿ. ಏ. ಎಲ್, ಬಿ. ಶಿರಸ್ತೇದಾರ ಇವರು ಸಭಾಧ್ಯಕ್ಷರಾದರು. ಇಬ್ಬರು ವಿದ್ಯಾರ್ಥಿಗಳು ರಾಜನಿಷ್ಠೆಯ ಬಗ್ಗೆ ಸಂಭಾಷಣೆಯನ್ನೂ ಬೇರೆ ನಾಲ್ವರು ನಿಬಂಧವಾಚನವನ್ನೂ ಮಾಡಿ

ದರು. ಹೆ. ಮೊ. ತಟ್ಟಿ ಇವರು ಬ್ರಿಟಿಶ್‌ರಾಜ್ಯದ ವಿಸ್ತಾರದ ಬಗ್ಗೆ, ಸಿಂದಿ ಮೊಸ್ತರರು ಬಾದಶಹರ ಜೀವನ-ವೃತ್ತದ ಬಗ್ಗೆ ವ್ಯಾಖ್ಯಾನ ಕೊಟ್ಟರು ಗುರುರಾಪ ಸವಣೂರ ಇವರು ಜನರಿಗೆ ಈಗ ದೊರೆದಿರುವ ಹಕ್ಕುಗಳ ಇತಿಹಾಸವನ್ನು ವರ್ಣಿಸಿದರು. ಬಳಿಕ ಅಧ್ಯಕ್ಷರು, ಮಿ. ತಟ್ಟಿ ಇವರ ಪರಿಶ್ರಮ ಪಟ್ಟು ಊರವರ ನೆರವು ದೊರಕಿಸಿ, ಉತ್ಸಾಹದಿಂದ ಉತ್ಸವವನ್ನು ಸಾಂಗಗೊಳಿಸಿದ ಬಗ್ಗೆ ಅಭಾರವನ್ನು ಮನ್ನಿಸಿದರು.

ಸಿಹಿಊಟಗಳು:— ಫೋನೋಗ್ರಾಫಿನಲ್ಲಿ ಪದಗಳು ನಡೆದಾಗ ಕನ್ನಡ ಹಿಂದೀ ಬಡ ಗಂಡು-ಹೆಣ್ಣು ಹುಡುಗರಿಗೆ ೩೨ ಪುಸ್ತಕಗಳೂ ೧೬ ಖಣಗಳೂ ೧೦ ಪಾಟಿಗಳೂ, ೧೨ ಅಂಗಿಗಳೂ ಅಧ್ಯಕ್ಷರ ಕೈಯಿಂದ ಕೊಡಿಸಲ್ಪಟ್ಟವು. ಕೊನೆಗೆ ತಾಂಬೂಲ, ಪೂಮಾಲೆ, ಪೂಚಕಂಡು, ಪನ್ನೀರು, ಪರಿಮಳಗಳು ಕೊಡಲ್ಪಟ್ಟು, ಬಾದಶಹರ ತ್ರಿವಾರ ಜಯಘೋಷವಾಗಿ ಸಭಾ ವಿರ್ಜನೆಯಾಯಿತು. ಇಲ್ಲಿಯ ಸಾವಕಾರ ಮ. ರಾ. ಗುರಪ್ಪಾ ಅಂಕಲಕೋಪಿ, ಮುರಿಗೆಪ್ಪಾ ಚಿಕ್ಕೇರಿ ಇವರು ೬೦೦ ವಿದ್ಯಾರ್ಥಿಗಳಿಗೆ ಮಿಠಾಯಿ ಹಂಚಿದರು. ಈ ಊರಲ್ಲಿ ಯೋಗ್ಯತೆಯುಳ್ಳ ಪ್ರತಿಯೊಬ್ಬರು, ಪಲ್ಲಕ್ಕಿ, ಬಜಂತ್ರಿ, ಬ್ಯಾಂಡು, ಪಿಯಾನೋ, ಫೋನೋಗ್ರಾಫ, ಪುಸ್ತಕ, ಖಣ, ಪಾಟ, ಅರಿವೆ, ಮಿಠಾಯಿ ಮುಂತಾದ ರೂಪದಿಂದಲೂ ಬೇರೆ ತರದಿಂದಲೂ ಚನ್ನಾಗಿ ಸಹಾಯ ಮಾಡಿದ್ದರಿಂದ ನೂರಾರು ರೂಪಾಯಿ ವೆಚ್ಚ ಮಾಡಿದರೂ ಸರಸಾಗಿ ಆಗದಂಥ ಸವಾರಂಭವು ತುಸು ಹಣನಲ್ಲಿ ಅಸದೃಶವಾಗಿ ಸಾಂಗವಾಯಿತು. ಇದು ಊರವರಿಗೆ ಭೂಷಣವು. ಬಾದಶಹರ ಪುಣ್ಯಪ್ರತಾಪವು ಮಿಗಿಲಾದದ್ದಿರುತ್ತದೆ. ಶ್ರುತವಿರಬೇಕು. ಇತಿ ನಮಸ್ಕಾರಗಳು.

ಬಂಕಾಪುರ.
ತಾ॥ ೩೪-೬-೧೧.

ವಲ್ಲಭ. ಮ. ತಟ್ಟಿ.

ಎಡಿಟರ ಕನ್ನಡ ಶಾಳಾಪತ್ರಿಕ ಧೊರೆಗಳವರ ಸನ್ನಿಧಿಗೆ—

ವಿಧೇಯ ಶಿಷ್ಯನ ಸಾ॥ ನ॥ ವಿ॥ ಕೆಳಗೆ ಬರೆದ ನಾಲ್ಕು ಶಬ್ದಗಳಿಗೆ ಇಂಬು ದೊರೆಯುವದೆಂದು ನಂಬಿಕೊಂಡಿದ್ದೇನೆ.

ಬ್ರಿಟಿಶ್ ಸಾಮ್ರಾಜ್ಯದಲ್ಲೆಲ್ಲ ಅತ್ಯಂತ ಮಹತ್ವವನ್ನಿಸಿಕೊಳ್ಳುವ ನಿನ್ನೆ ಹೋದ ಜೂನ ೨೨ನೇ ತಾರೀಖಿನ ದಿವಸ ನಮ್ಮ ಶಾಲೆಯಲ್ಲಿ ಶ್ರೀಮ ಸ್ಯಹಾರಾಜ ೫ನೆಯ ಜಾರ್ಜ ಚಕ್ರವರ್ತಿಗಳವರ ಸಿಂಹಾ[illegible]

ತ್ಸವವು ಅತಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಈ ಉತ್ಸವ ಪ್ರಸಂಗದಲ್ಲಿ ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು, ಮಾಸ್ತರರು, ಸಭ್ಯಗೃಹಸ್ಥರು, ಗ್ರಾಮಸ್ಥರು ಹಾಜರ ಇದ್ದದ್ದಲ್ಲದೆ, ಶ್ರೀಮಂತ ಸರದಾರ ಲಕ್ಷ್ಮಣರಾವ ಉಫ್ ದಾದಾಸಾಹೇಬ ಜಹಗೀರದಾರರವರೂ ಶ್ರೀಮಂತ ಭಾಸ್ಕರರಾವ ಜಹಗೀರದಾರ ರಾವಬಾ|| ರವರೂ ಶ್ರೀಮಂತ ಬಳವಂತರಾವ ಜಹಗೀರದಾರರವರೂ ಸಭಾಸ್ಥಾನವನ್ನಲಂಕರಿಸಿದ್ದರಿಂದ ಉತ್ಸವಕ್ಕೆ ವಿಶೇಷವಾದ ಶೋಭೆಯು ಪ್ರಾಪ್ತವಾಯಿತು. ಸಭಾಸ್ಥಾನಕ್ಕಾಗಿ ಗೊತ್ತು ಪಡಿಸಿದ ಶಾಲಾಗೃಹದ ಭಾಗವು ಯಥೋಚಿತವಾಗಿ ಅಲಂಕರಿಸಲ್ಪಟ್ಟಿತ್ತು. ಮಾತಾಪಿತೃಗಳಿಂದೊಡಗೂಡಿದ ಎಂಪರರವರ ಹಾಗೂ ಎಂಪ್ರೆಸ್‌ರವರ ಭಾವಚಿತ್ರವು ಶೃಂಗರಿಸಿದ ಉಚ್ಚಾಸನದಲ್ಲಿ ಸ್ಥಾಪಿಸಲ್ಪಟ್ಟಿತ್ತು. ಶ್ರೀಮಂತ ಭಾಸ್ಕರರಾವ ಜಹಗೀರದಾರರವರು ಸರ್ವಾನುಮತದಿಂದ ಅಧ್ಯಕ್ಷಸ್ಥಾನವನ್ನಲಂಕರಿಸಿದರು. ಅಧ್ಯಕ್ಷರು ಈ ಉತ್ಸವದ ಕಾರಣವನ್ನೂ ಅವಶ್ಯಕತೆಯನ್ನೂ ಕುರಿತು ಅತ್ಯಂತ ಕಳಕಳಿಯಿಂದ ಮನೋವೇಧಕವಾದ ಭಾಷಣವನ್ನು ಮಾಡಿ ಸಭಿಕರನ್ನು ಕುರಿತು—"ಸಭಿಕರೇ, ಬಾದಶಹರವರ ಪ್ರೀತ್ಯರ್ಥವಾದ ನವಿನ್ಮಾಚಿಕ್ಕ ಸಮಾರಂಭವು ಈವೊತ್ತಿನ ದಿವಸ ಲಂಡನದಲ್ಲಿ ನಡೆಯುತ್ತಿದ್ದ ಉದ್ದಾಮ ಸಮಾರಂಭದ ಲಕ್ಷಾಂಶವನ್ನು ಸಹ ಸರಿಗಟ್ಟದಿದ್ದರೂ, ನಮ್ಮ ಹೃಯದಲ್ಲಿರುವ ರಾಜಭಕ್ತಿಯು ಸುಧಾಮನ ಕೃಷ್ಣಭಕ್ತಿಯಂತೆ, ಇಂಗ್ರಜ ನಿವಾಸಿಯ ರಾಜಭಕ್ತಿಯನ್ನು ಸರಿಗಟ್ಟಬಹುದು; ಇಷ್ಟೇ ಅಲ್ಲ! ಅದು ಶ್ರೇಷ್ಠತೆಯುವಾಗಿಯೂ ಇರಬಹುದೆಂಬುದನ್ನು ಅಭಿಮಾನದಿಂದ ಹೇಳಬಹುದು" ಎಂದು ಉದ್ಗಾರ ತೆಗೆಯಲು, ಸಭಿಕರು ತಮಗಾದ ಆನಂದಾತಿಶಯವನ್ನು ಆನಂದಾಶ್ರುಗಳಿಂದಲೂ, ಚಪ್ಪಾಳಿಯಿಂದಲೂ, ಹೊರಗೆಡವಿದರು. ಮತ್ತು ಅಧ್ಯಕ್ಷರವರು ಈ ಸಂತೋಷ ಪ್ರಸಂಗದಲ್ಲಿ ನೆರೆದ ವಿದ್ಯಾರ್ಥಿಗಳಿಗೆ ಮಿಠಾಯಿ ಹಂಚುವದಕ್ಕಾಗಿ ೫ ರೂಪಾಯಿಗಳನ್ನು ಕೊಡುತ್ತೇವೆಂದು ವಾಗ್ದಾನ ಮಾಡಿದರು. ಅಧ್ಯಕ್ಷರ ಭಾಷಣದ ನಂತರ ಮಿ. ಹನುಮಪ್ಪ ರಾಮಪ್ಪ ಕಾಲವಾಡ ಇವರು ಬಾದಶಹರವರ ಶ್ಲಾಘನೀಯವಾದ ಚರಿತ್ರವನ್ನೂ ಅವರು ಸಿಂದು ಸ್ತಾನದ ಸಂಬಂಧದಿಂದ ತೆಗೆದ ಉದ್ಗಾರ, ಅಭಿವಚನಗಳನ್ನೂ ಸರಸಾಗಿ ವಿವರಿಸಿ ಬಾದಶಹರವರು ಸದ್ಗುಣಗಳ ಉಜ್ವಲ ಮೂರ್ತಿಯೆಂಬುದನ್ನು ಮನಗಾಣಿಸಿ ಕೊಟ್ಟರು. ಬಳಿಕ ವಿದ್ಯಾರ್ಥಿಗಳು ಸುಸ್ವರದಿಂದ ರಾಷ್ಟ್ರಗೀ

ತವನ್ನು ಹಾಡಿದರು. ಮೆ. ರಾ. ರಾ. ಕೃಷ್ಣಾಜಿ ಉಡಪೀರಾವ ರಟ್ಟೀಹ
ಹೆ|| ಮಾಸ್ತರರವರು ಅಧ್ಯಕ್ಷರ ಹಾಗೂ ಸಭಿಕರ ಆಭಾರ ಮನ್ನಿಸಿ
ಬಳಿಕ, ಸರ್ವರನ್ನು ಪರಿಮಳ ಯುಕ್ತವಾದ ತಾಂಬೂಲದಿಂದ ಸತ್ಕರಿ
ದರು. ಕೂಡಲೆ ಬಾದಶಹರವರ ಹೆಸರಿನಿಂದ ತ್ರಿವಾರ ಜಯಘೋಷವಾ
ಸಭಾವಿಸರ್ಜನವಾಯಿತು.

ಈ ಆಶ್ಚಾನಂದದ ಪ್ರಸಂಗದಲ್ಲಿ ಶ್ರೀಮಂತ ಭಾಸ್ಕರರಾವ ರಾ
ಬಾ|| ರವರು ಕೊಟ್ಟ ೫ ರೂಪಾಯಿ, ಶ್ರೀಮಂತ ಸರದಾರ ಲಕ್ಷ್ಮಣರಾ
ಜಹಗೀರದಾರರವರು ಕೊಟ್ಟ ೫ ರೂಪಾಯಿ, ರಾ. ರಾ. ವೀರಭದ್ರಪ
ಬೇಹಟ್ಟಿ ಇವರು ಕೊಟ್ಟ ೧|| ರೂಪಾಯಿಗಳಿಂದ ಮಿಠಾಯಿ ತರಿ
ವಿದ್ಯಾರ್ಥಿಗಳಿಗೆ ಮಿಠಾಯಿ ಹಂಚಲ್ಪಟ್ಟಿತು. ರಾ. ರಾ. ಶಿವರುದ್ರಪ
ಬೇಹಟ್ಟಿ ಅ|| ಮಾಸ್ತರ ಇವರು ಬಡ ವಿದ್ಯಾರ್ಥಿಗಳಿಗೆ ಪೈಗಳನ
ಹಂಚಿದರು.

ಸಭೆಯ ಕೆಲಸವು ತೀರಿದ ಕೂಡಲೆ, (ಮೊದಲೇ ಗೊತ್ತಾಗಿ
ಕಾರ್ಯಕ್ರಮದಂತೆ, ಶ್ರೀಮಂತ ಲಕ್ಷ್ಮಣರಾವ ಜಹಗೀರದಾರರವ
ಪಲ್ಲಕ್ಕಿಯನ್ನು ಸರ್ವಸನ್ನಾಹದೊಂದಿಗೆ ಸಜ್ಜುಗೊಳಿಸಿಟ್ಟಿದ್ದರು.) ಬಾದ
ಹರವರ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿಟ್ಟು ಮೆರವಣಿಗೆಯ ಉತ್ಸವ
ನೆರವೇರಿಸಲ್ಪಟ್ಟಿತು. ಪಲ್ಲಕ್ಕಿಯೊಡನೆ, ಶ್ರೀಮಂತರು ಸಭ್ಯಗೃಹಸ್ಥರ
ಮಾಸ್ತರರು, ವಿದ್ಯಾರ್ಥಿಗಳು ವ್ಯವಸ್ಥಿತವಾಗಿ ನಡೆದಿದ್ದರು. ಮುಂಗ
ವಾದ್ಯಗಳ ಧ್ವನಿಯು ಕಿವಿಗೆ ಹರ್ಷವನ್ನು ಕೊಡುತ್ತಿತ್ತು. ಪಲ್ಲಕ್ಕಿ
ಮೇಲೆ ಛತ್ರಿಗಳು (ಅಫ್ತಾಗಿರಿ) ಹಿಡಿಯಲ್ಪಟ್ಟಿದ್ದವು. ಮುಂದೆ ಇಬ್ಬ
ಕುದುರೆಯ ಸ್ವಾರರು ನಡೆದಿದ್ದರು. ಇಬ್ಬರು ಚಾಮರಗಳನ್ನು ಬೀ
ತ್ತಿದ್ದರು. ವಿದ್ಯಾರ್ಥಿಗಳ ಜಯಘೋಷವು ಒಂದೇಸವನೆ ನಡೆದಿತ್ತ
ಈ ಮೇರೆಗೆ ವೈಭವದೊಂದಿಗೆ ಪಲ್ಲಕ್ಕಿಯನ್ನು ಮುಖ್ಯ ಮುಖ್ಯ ದೇವಸ
ನಗಳ ವರೆಗೆ ಬಯ್ದು, ದೇವಸ್ಥಾನಗಳಲ್ಲಿ ಬಾದಶಹರವರು ದೀರ್ಘಾಯು
ಷಿಗಳಾಗಿ ಬಹು ಕಾಲ ನಮ್ಮನ್ನಾಳಲೆಂದು ಪ್ರಾರ್ಥನೆಯು ಮಾಡಲ್ಪಟ್ಟಿ
ಮೆರವಣಿಗೆಯು ಮುಗಿದು ಪಲ್ಲಕ್ಕಿಯು ತಿರುಗಿ ಶಾಲೆಗೆ ಬಂದನಂತ
ಸಮಾರಂಭದ ಸಮಾಪ್ತಿಯಾಗಿ ಸಭಿಕರು ತಮ್ಮ ತಮ್ಮ ಮನೆ
ಹೋದರು.

ಈ ಪ್ರಕಾರ ಈ ಶಾಲೆಯ ಪಟ್ಟಾಭಿಷೇಕ ಮಹೋತ್ಸವವು ನಿರ್ವಿಘ್ನದಿಂದಲೂ, ವಿಭವದಿಂದಲೂ ಪರಿಸಮಾಪ್ತಿಯನ್ನು ಹೊಂದಿತೆಂದು ತಿಳಿಸಲಿಕ್ಕೆ ತುಂಬಾ ಸಂತೋಷ ಪಡುವ ತಮ್ಮ ವಿಧೇಯ ಶಿಷ್ಯ,

ಹೆಬ್ಬಳ್ಳಿ. } ಹನುಮಪ್ಪಾ ರಾಮಪ್ಪಾ ಕಾಲವಾಡ.
ತಾ॥ ೨೩-೬-೧೯೧೧ ಇಸ್ವಿ. } ಅಶಿಷ್ಟಂಟವಾಸ್ತರ ಹೆಬ್ಬಳ್ಳಿ.

ಈ ಉತ್ಸವದಲ್ಲಿ ವಿದ್ಯಾರ್ಥಿಗಳು ಹಾಡಿದ ಬಾದಶಹರವರ ಸ್ತುತಿಪರ ಪದ್ಯಗಳು.

(೧.) ಧಾಟಿ—"ನಾಚಲೆ ನೀ ಈವನ" ಎಂಬ ತ್ಯಾಗರಾಜ ಕೃತಿಯಂತೆ.

ಪಾಲಿಸು ಶ್ರೀ ಜಾರ್ಜ ಭೂ।
ಪಾಲ ಸಾರ್ವಭೌಮ ವರಸುಚರಿತೆ ॥
ಲೀಲೆಯಿಂದ ಪಟ್ಟವೇರಲು ಗುಣ।
ಶೀಲ ಹರ್ಷಜಲನಿಧಿಯೊಳು ಮುಳುಗಿರುವೆವು ॥ ಪಲ್ಲ ॥

ಧೊರೆಯೆ ನಿನ್ನ ರಾಜ್ಯದೊಳ್।
ಇರುವುದೆಮ್ಮ ಭಾಗ್ಯವೆಂದೆಣಿಪೆವು ॥
ಅರಸ ನಿನ್ನ ಸೌಖ್ಯ ದುಃಖಗಳೆ।
ಮರೆಯದೆಮ್ಮವೆಂದು ತಿಳಿದಿರುವೆವೆ ॥ ೧ ॥

ತಂದೆ ನಿಂದೂ ದೇಶದ।
ಕುಂದನೆಲ್ಲ ಕಳೆದು ಪಾಲಿಸುವುದು ॥
ಕುಂದರಾವು ಸಂಕಟಂಗೊಳಲು।
ಕುಂದದಾರ್ಗೆ ತಂದೆಯೆ ಕೇಳ್ ನಿನಗಲ್ಲವೆ ॥ ೨ ॥

ಜನನಿ ಮಗುವ ಪೊರೆಯುವ।
ಘನದಯೆದೊಳು ಪೋಷಿಸೆಮ್ಮನು ನೀ ॥
ಹನುಮದೀಶನೊಲೆವ ತೆರದೊಳು ಕೇ।
ಳನಘ ಪಾಲಿಸಿಳೆಯ ಸಂತತಮುಂ ॥ ೩ ॥

(೨.) ಧಾಟಿ—"ಏಕದಂತ ಪಾದಕಮಲ" ಎಂಬಂತೆ.

ಭಾರತಾಂಗ್ಲದೇಶದೀಶ ಜಾರ್ಜ ಸಾರ್ವಭೌಮನೇ।
ಧೀರ ನಿನ್ನ ಪೋಲುವನ್ಯ ಭಾಗ್ಯವಂತನಿರ್ಪನೇ ॥ ೧ ॥
ನಿನ್ನ ರಾಜ್ಯವನ್ನು ದಾಂಟಲಿನನ ಯತ್ನ ಸಾಗದೈ।
ನಿನ್ನ ಪ್ರಜೆಯ ನಡೆಗೆ ವಾರ್ಧಿಯಶ್ವದಂತೆ ವಾಹನಂ ॥ ೨ ॥
ರಾಜರಾಜ ನಿನ್ನ ರಾಜ್ಯವೆಮಗೆ ಸ್ವರ್ಗದಂದದಿಂ।
ಮಾಜಲೀನು! ಸುಖದಮೆಂದು ನಂಬಿ ಮುದದೊಳಿರುವೆವೈ ॥ ೩ ॥
ಚಾರುಚರಿತ ಸುಗುಣಭರಿತ ನಿನ್ನ ಚರಿತವಿಳೆಗೆ ತಾಂ।
ಸಾರದರ್ಪಣಂ ಕಣಾ! ವಿ ಚಾರ ಶೀಲ ನೃಪವರ ॥ ೪ ॥
ಜನನಿ ನೀನೆ ಜನಕ ನೀನೆಯೆಂದು ನಂಬಿಕೊಂಡಿಹ।
ಜನವನೆಮ್ಮ ನೀಗ ಪೊರೆಯೊ ಜಾರ್ಜ ಸಾರ್ವಭೌಮನೇ ॥ ೫ ॥
ಚಂದ್ರಸೂರ್ಯರಿರುವ ವರೆಗವಿರ್ಕೆ ನಿನ್ನ ರಾಜ್ಯಮೇ।
ಸಾಂದ್ರವಿಭವದಿಂದ ಬಾಳ್ಕೆ ಸರ್ವ ಜಗದೆ ಪೂಜ್ಯನೇ ॥ ೬ ॥
ದಯದೆ ದೇವನೀಗೆ ನಿಮಗೆ ಸುಖನಿರಾಮಯಾಯುವ।
ಜಯಿಸು ಜಯಿಸು ಜಯಿಸು ಜಾರ್ಜಭೌಮ ಸೋಮನೇ ॥ ೭ ॥

ಹ. ರಾ. ಕಾಲವಾಡ.

ಮ. ರಾ. ರಾ. ಕನ್ನಡ ಶಾಲಾಪತ್ರಿಕೆಯ ಎಡಿಟರ ದೊರೆಗಳವರ ಸನ್ನಿಧಿಗೆ— ಸಾ॥ ನಮಸ್ಕಾರಗಳು. ವಿನಂತಿ ವಿಶೇಷ. ಕೆಳಗಿನ ಪದ್ಯಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಸಿದ್ಧಿಸುವಿರೆಂದು ಕೋರುತ್ತೇನೆ:—

ಶ್ರೀ. ಪಂಚಮ ಜಾರ್ಜ ಚಕ್ರವರ್ತಿಗಳವರ

ರಾಜ್ಯಾರೋಹಣ ಪದ್ಯ ಪಂಚಕಂ.

ಉತ್ಪಲ ಮಾಲಾವೃತ್ತವು.

೧. ನೂತನ ಚಕ್ರವರ್ತಿ ಕಡುಪೆಂಪಿಗ ಪಂಚಮಜಾರ್ಜರಂ ಜಗನ್।
ಮಾತೆಯೊಲಿರ್ಪ ಮಾಸತಿ ಸುಶೀಲೆ ಮನೋಹರೆ ಮೇರಿರಾಜ್ಞಿಯುಂ ॥

ಸಂತತ ವೃದ್ಧಿಗೈವ ಸುಖವೈಭವದೀರ್ಘತರಾಯುಷ್ಯಂಗಳಂ ।
ಪ್ರೀತಿಯೊಳಿತ್ತು ರಕ್ಷಿಸುಗೆ ಮೋದದಿ ಶ್ರೀಪ್ರಭುವಪ್ಪ ಶಂಕರಂ ॥೧॥

೨. ಪಂಚಮಜಾರ್ಜ ಭೂಪತಿಗಳಾಳ್ಕೆ ಚಿದಂ ನೆಲಸಿರ್ಕೆ ರಾಷ್ಟ್ರದೊಳ್ ।
ಸಂಚಿತವಾಗೆ ಜ್ಞಾನ-ಕಲೆ-ಸಂಪದ-ಶಾಂತಿ-ಸುಐಕ್ಯಭಾವಗಳ್ ॥
ವಂಚನೆಯಿಲ್ಲದಿರ್ಪ ಸದುಭಾವದಿ ಪ್ರಾರ್ಥನೆ ಮಾಡಿಕೊಳ್ವೆವೈ ।
ಮಿಂಚುವ ದೇವ ಪಾಲಿಸಿದನಿಷ್ಟನನೀಂ ನೆರೆಭಕ್ತ ವತ್ಸಲಾ ॥೨॥

ವಸಂತತಿಲಕಾವೃತ್ತಂ.

೩. ಹೇಳಲ್ಕೆ ಬಾರದವೊಲಾಂಗ್ಲ ಸುರಂಜ್ಯದಿಂದಂ ।
ಮೇಳೈಸಿಕೊಂಡಿಹುದು ನಾಡೊಳೆ ತಿದ್ದು ಪಾಟಂ ॥
ಶಾಲೌಷಧಾಲಯೆಗಳಗ್ನಿರಥಂ ಸುಶಾಂತಿ ।
ಮೇಲಾದ ತೀರ್ಪು-*ಸೆಳೆ-ಬೀದಿಗಳಂಚೆಯಿರ್ಪುಂ ॥೩॥

ಮತ್ತೇಭವಿಕ್ರೀಡಿತವೃತ್ತಂ.

೪. ಮೊದಲೆಂದುಂ ಸಲೆ ಕಾಣದಿರ್ಪ ಸಮತಾ ಸ್ವಾತಂತ್ರ್ಯಸೌಖ್ಯಂಗಳಂ ।
ಮುದದಿಂದೆಲ್ಲ ಪ್ರಜಕ್ರಳುಂ ಸಲಿಸರ್ಕೆ ಯಾಂಗ್ಲೇಯಸಾಮ್ರಾಜ್ಯದೊಳ್ ॥
ಬುಧರಂಶೋಧಿಸಿ ಕೂರ್ತು ಸ್ಥಾನಿಕ ಸ್ವರಾಜ್ಯಂಗೈಸುತಿರ್ಪರ್ ಪ್ರಜಾ ।
ಸದಯಾಂತಃಕರಣರ್ †ವಿಧಾಯಕಸಭಾಕಾರ್ಯಸ್ಥರಂ
ಮಾಡಿಹರ್ ॥೪॥

ಚಂಪಕಮಾಲಾವೃತ್ತಂ

೫. ಮನದಳವೇಕದಾಪ್ತ ‡ವಚಸಂಸ್ಥೆಯೊಳಂ ಜನವೇಶಮಿರ್ಪುದೈ ।
ಇನಿತರ ಮೇಲೆ ತೀರ್ದುದೆನಲಾಗದು ರಾಜ್ಯಸುಧಾರಣಂ ಕಣಾ ॥
ಘನತರದೀರು ಮುಂದೆಸಗುತಿರ್ದುದು ಶಾಂತಿಯೆನಾಂತು ನೀಡಿರೈ ।
ವಿನಮಿತಭಾವದಿಂ ಪ್ರಜರು ಕಾಣ್ಕೆಯನಿಗ್ಗದರಾಜನಿಷ್ಠೆಯಂ ॥೫॥

ಶಾಲಾ- ವಂಟಮೂರಿ.
ತಾ॥ ೨೬-೬-೧೧.

ಬಸಪ್ಪ ಛನ್ನಪ್ಪ ಪಟ್ಟೇದ.
ಹೆಡ್-ಮಾಸ್ತರ.

---

* ತಂತಿಯ ವರ್ತಮಾನ.

† ಕಾಯ್ದೆಯ ಕೌನ್ಸಿಲಿನ ಸಭಾಸದ.

‡ ಎಗ್ಸಿಕ್ಯೂಟಿವ್ ಕೌನ್ಸಿಲು ಮತ್ತು ಇಂಡಿಯಾ ಆಫೀಸುಗಳಲ್ಲಿಯೂ.

ಸಾರ್ವಭೌಮ ಪಂಚಮಜಾರ್ಜ ಬಾದಶಹರವರ ಕಲ್ಯಾಣದ ಬಗ್ಗೆ ಧಾರವಾಡ ಟ್ರೇನಿಂಗ ಕಾಲೇಜಿನಲ್ಲಿ ಮಾಡುವ ಪ್ರೇವರ ಪ್ರಾರ್ಥನೆ.

ಪದ-ರಾಗ-ಶಂಕರಾಭರಣ. ಏಕತಾಳ.

ಚತುಶ್ರುತಿರಿಷಭ, ಚತುಶ್ರುತಿಧೈವತ.

ಅಂತರಗಾಂಧಾರ ಕಾಕಲಿನಿಷಾಧ, ಶುದ್ಧ ಮಧ್ಯಮ.

ಸಾಗಗ ಸಾಗಗ ಸಾಗಗ ಮಾಗರಿ
ದೇವನೆ। ದೇವನೆ। ರಕ್ಷಿಸು। ರಕ್ಷಿಸು
ನೀರಿರಿ ನೀರಿರಿ ನೀರಿರಿ ಗರಿಸಾ
ಭೂವರ। ನೈದನೆ। ಜೀಯಾರ್ಜ್। ಪ್ರಭುವಂ ॥೧॥

ಸಾಗಗ ಸಸಗಗ ಸಸಗಮ ಪಕಕಕ
ಈವನು। ಸುಖವನು। ಪ್ರಜೆಗಳಿ। ಗೇಕಕಕ
ಧಾಪಮ ಪಮಗಾ ಮಾರಿ ಸಾಕಕ
ಕಾವನು। ಸತತಂ। ನಿರ್ಭಯ। ದಿಂಕಕಕ

ಸಾನಿಧ ಪಾಮಮ ಗಾಮಮ ಪಪಧನಿ
ದುಷ್ಟರ। ನಿಗ್ರಹಿ। ಸುತ್ತಿರು। ವನುತಾ।

ಸಾನಿಧ ಪಾಮಗ ಧಪಮಗ ಪಮಗರಿ ಗಕರಿಗ ಸಾಕಕ
ಶಿಷ್ಟರ। ಪಾಲನೆ। ಬಿಡದಲೆ। ಮಾಳ್ಪನು। ನಕ್ಷತೆ। ಯಿಂಕಕ ॥೨॥

ಸಾನಿಧ ಪಾಗಮ ಪಕಕಕ ಮಪಧಕ ಪಧನೀ ಸರಿಸಾ
ದೇಶದೊ। ಳೆಲ್ಲೆಡೆ। ಯೊಕಕಕಳ್। ಬಹುಳಂ। ಸುಖಶಾಂ। ತಿಗಳುಕ

ಗಾರಿಸನಿಧಪಧ ಧಪಮಗಗರಿಧ ಪಮಮಗಗಗರಿ ಗ ಸಕಕಕ
ತೋಷದಿಂನಡೆದು। ಪ್ರಜೆಗಳೆಲ್ಲರುಮ। ತವನನುಸರಿಸುನೆರುಕಕಕ ॥ ೩ ॥

ನೀಕಕ। ಸಾಕಕ ಮಾಕಕ ನೀಕಕ ರಿಕಕ ಸಾಕಕ
ಆಕಕ। ಯುಕಕಕ। ರಾಕಕ। ರೋಕಕ। ಗ್ಯಕಕಕ। ವಂಕಕ

ಮಾಗರಿಸ ನಿಧಪ ಮಗರಿಗ ಸಕಕಕ ನೀರಿಕ ಗರಿಸಾ ಸಕಕಕ
ಈಯೆಲೈದೇವ। ಇವರಿಗೆ। ನಿಂಕಕ। ಸಕದಾ। ಸುಖವಂ। ಮುಡವಂ॥೪॥

ಟೀಪುಗಳು:--(೧) ಮೇಲೆ ತೋರಿಸಿದ ಸರಿಗಮಗಳಲ್ಲಿ ಸ್ವರದ ಕೆಳಗೆ ಹಾಕಿದ ಗೆರೆಯು ಮಂದರಸಪ್ತಕವನ್ನು ತೋರಿಸುವದು.

(೨) ಸ್ವರದ ತಲೆಯಮೇಲೆ ಹಾಕಿದ ೨ ಅಂಕಿಯು ತಾರಕಸಪ್ತಕವನ್ನು ತೋರಿಸುತ್ತದೆ.

(೩) ಕ ಈ ಗುರುತು ಮಾತ್ರೆಗಳ ಸಂಖ್ಯೆಯನ್ನು ತೋರಿಸುವದು.

ವಿದ್ಯಾಖಾತೆಯ ನೋಟೀಸುಗಳು.

ಪ್ಲೆನ್ಯಾಕ್ಯುಲರ್ ಫಾಯನಲ್ ಪರೀಕ್ಷೆಯು
ದಕ್ಷಿಣಭಾಗ.

ಈ ನೋಟೀಸಿನಿಂದ ತಿಳಿಸುವದೇನೆಂದರೆ:—ಸನ್ನ ೧೯೦೭ನೇ ಇಸವಿಯು ತಾ|| ೫೧ನೇ ನವಂಬರ ತಿಂಗಳ ಮುಂಬಯಿ ಗವ್ಹರ್ನಮೆಂಟ ಗ್ಯಾಝೆಟಿನ ೧೧ನೇ ಭಾಗದ ೧೪೯೪ರಿಂದ ೧೪೯೭ನೇ ಪುಟಗಳಲ್ಲಿ ಪ್ರಸಿದ್ಧ ಮಾಡಿದ ನಿಯಮಗಳಿಗನುಸಾರವಾಗಿ ಪ್ಲೆನ್ಯಾಕ್ಯುಲರ ಫಾಯನಲ್‌ಪರೀಕ್ಷೆಯು ಬುಧವಾರ ತಾರೀಖು ೫೭ನೇ ಸಪ್ಟಂಬರ ೧೯೧೧ ದಿವಸ ಹಾಗೂ ತದುತ್ತರ ದಿವಸಗಳಲ್ಲಿ ದಕ್ಷಿಣಭಾಗದ ಕೆಳಗೆ ಕಾಣಿಸಿದ ಸೆಂಟರುಗಳಲ್ಲಿ ನಡೆಯುವದು :—

ಧಾರವಾಡ.	ವಿಜಾಪುರ.
ಬೆಳಗಾವ.	ಕಾರವಾರ.

೨. ಪ್ರತಿಯೊಂದು ಸೆಂಟರಿನಲ್ಲಿ ಈ ಪರೀಕ್ಷೆಯು ಒಂದು ಕಮಿಟಿಯು ಮುಖಾಂತರವಾಗಿ ನಡೆಯುವದು; ಮತ್ತು ಧಾರವಾಡ, ಬೆಳಗಾವ, ವಿಜಾಪುರ, ಕಾರವಾರ ಹಾಯಸ್ಕೂಲುಗಳ ಹೆಡ್‌ಮಾಸ್ತರರು ಸದರೀ ಪರೀಕ್ಷಾ ಕಮಿಟಿಗಳ ಅಧ್ಯಕ್ಷರಿರುವರು.

೩. ಪರೀಕ್ಷೆಗೆ ಕೂಡ್ರುವ ಪರವಾನಗಿಯ ಬಗ್ಗೆ ಅರ್ಜಿಗಳನ್ನು ಉಮೇದವಾರನು ಯಾವ ಜಿಲ್ಲೆಯಲ್ಲಿ ಇರುವನೋ ಆ ಜಿಲ್ಲೆಯ ಪರೀಕ್ಷಾ ಕಮಿಟಿಯ ಪ್ರೆಸಿಡೆಂಟರಿಗೆ ತಾ|| ೧೫ನೇ ಅಗಸ್ಟ ೧೯೧೧ನೇ ದಿವಸ ಅಥವಾ ಅದಕ್ಕೂ ಪೂರ್ವದಲ್ಲಿ ತಲಪುವಂತೆ ಕಳಿಸತಕ್ಕದ್ದು. ಆ ತಾರೀಖಿನ ನಂತರ ಬಂದ ಅರ್ಜಿಗಳು ಹಿಡಿಯಲ್ಪಡಲಿಕ್ಕಿಲ್ಲ. ಮತ್ತು ಆ ಅರ್ಜಿಗಳನ್ನು ಈ ವಿಷಯದಲ್ಲಿ ವಿಧಿಸಲ್ಪಟ್ಟ ಅರ್ಜಿಯ ಫಾರೀನಮೂನೆಗಳ ಮೇಲೆಯೆ ಮಾಡಲಿಕ್ಕೆಬೇಕು. ಈ ನಮೂನೆಗಳ ಬಗ್ಗೆ ಪ್ರೆಸಿಡೆಂಟರ ಕಡೆಗೆ ಅರ್ಜಿಯನ್ನು ಮಾಡಿದರೆ ಅವು ಪುಕ್ಕಟೆಯಾಗಿ ಕೊಡಲ್ಪಡುವವು.

೪. ಧಾರವಾಡದ ಮಾನ್ಯವಾದ ದೇಶಭಾಷೆಯು ಕನ್ನಡ ಇರುವದು. ಬೆಳಗಾವ, ವಿಜಾಪುರ, ಕಾರವಾರ ಜಿಲ್ಲೆಗಳ ಮಾನ್ಯವಾದ ದೇಶಭಾಷೆಗಳು ಕನ್ನಡ, ಮರಾಠಿ ಇವುಗಳಿರುವವು. ಧಾರವಾಡ ಜಿಲ್ಲೆಯ ಮರಾಠಿಯ ಉಮೇದವಾರರು ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇ

೩. ಮೇಲಿನ ೨ನೇ ನಿಯಮದಲ್ಲಿ ಹೇಳಿದ ಶರ್ತುಗಳಿಗನುಸಾರವಾಗಿ ತಿಂಗಳಿಗೆ ೩ ರೂಪಾಯಿ ಬೆಲೆಯುಳ್ಳ ಎರಡು ವರ್ಷಗಳ ವರೆಗೆ ನಡೆಯುವಂಥ ಒಂದು ಸ್ಕಾಲರಶೀಪು ಕೆಳಗೆ ಬರೆದ ಶರ್ತುಗಳ ಪ್ರಕಾರ ಧಾರವಾಡ ಪ್ರ್ಯಾಕ್ಟಿಸಿಂಗ್ ಸ್ಕೂಲಿನಲ್ಲಿ ಕೊಡಲ್ಪಡುವದು.

(೧) ಉಮೇದವಾರನ ವಯಸ್ಸು ೧೫ ವರ್ಷಕ್ಕಿಂತ ಹೆಚ್ಚು ಇರಬೇಕು.

(೨) ಕನ್ನಡ ಅಥವಾ ಉರ್ದು ೫ನೇ ಇಯತ್ತೆಯ ಪ್ರಕಾರ ತೆಗೆದುಕೊಂಡ ಪರೀಕ್ಷೆಯಲ್ಲಿ ಅವನು ಎಲ್ಲರಲ್ಲಿ ಹೆಚ್ಚು ಗುಣಗಳನ್ನು ದೊರಕಿಸಬೇಕು, ಮತ್ತು ಹೆಚ್ಚು ಚುರುಕತನವನ್ನು ತೋರಿಸಬೇಕು.

(೩) ಅವನು ಪ್ರ್ಯಾಕ್ಟಿಸಿಂಗ್ ಸ್ಕೂಲಿಗೆ ತಪ್ಪಿಸದೆ ಹೋಗಬೇಕು. ಮತ್ತು ಅವನ ನಡತೆಯೂ, ಅಭ್ಯಾಸವೂ ಸಮಾಧಾನಕರವಾಗಿರಬೇಕು.

(೪) ಅವನು ವ್ಹರ್ನ್ಯಾಕ್ಯೂಲರ ಫೈನಲ್ ಪರೀಕ್ಷೆಯನ್ನು ಪಾಸಾದ ನಂತರ ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ಕಲಿತು ಟ್ರೇಂಡ ಶಿಕ್ಷಕನಾಗಲಿಕ್ಕೂ ಮತ್ತು ಆ ಪ್ರಕಾರ ಯೋಗ್ಯ ಜಾಮೀನುಗಳನ್ನು ಕೊಟ್ಟು ಕರಾರಪತ್ರ ಬರಕೊಡಲಿಕ್ಕೂ ಕಬೂಲಇರಬೇಕು.

೪. ಈ ಪರೀಕ್ಷೆಯು ಒಂದು ಕವಿಯೊಟೆಯ ಮುಖಾಂತರ ತೆಗೆದುಕೊಳ್ಳಲ್ಪಡುವದು. ಆ ಕವಿಯೊಟೆಗೆ ಧಾರವಾಡ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರು ಪ್ರೆಸಿಡೆಂಟರಿರುವರು. ಈ ಪರೀಕ್ಷೆಗೆ ಕೂಡ್ರುವದಕ್ಕೆ ಪರವಾನಗಿಯ ಬಗ್ಗೆ ಮಾಡತಕ್ಕ ಅರ್ಜಿಯನ್ನು ವ್ಹರ್ನ್ಯಾಕ್ಯೂಲರ ಫೈನಲ್ ಪರೀಕ್ಷೆಯ ಛಾಪಿಸಿದ ನಮೂನೆಯಲ್ಲಿ ತಕ್ಕ ಬದಲಾವಣೆಗಳನ್ನು ಮಾಡಿ ಅದರ ಮೇಲೆ ಮಾಡತಕ್ಕದ್ದು. ಈ ನಮೂನೆಯ ಪ್ರತಿಗಳು ಮೈ|| ಎಜ್ಯುಕೇಶನಲ್ ಇನಸ್ಪೇಕ್ಟರ ಸಾಹೇಬರವರ ಕಡೆಯಿಂದ ಅಥವಾ ಪರೀಕ್ಷಾ ಕವಿಯೊಟೆಯ ಪ್ರೆಸಿಡೆಂಟರ ಕಡೆಯಿಂದ ಕಿಮ್ಮತ್ತು ಬೀಳದೆ ದೊರೆಯುವವು. ಪರೀಕ್ಷೆಯ ಅರ್ಜಿಗಳನ್ನು ಪ್ರೆಸಿಡೆಂಟರ ಕಡೆಗೆ ೧೫ನೇ ಸಪ್ಟಂಬರ ೧೯೧೧ ನೇ ದಿವಸ ಅಥವಾ ಅದಕ್ಕೂ ಪೂರ್ವದಲ್ಲಿ ಮುಟ್ಟುವಂತೆ ಕಳಿಸಬೇಕು. ಆನಂತರ ಬಂದ ಅರ್ಜಿಗಳು ಸಿಡಿಯಲ್ಪಡಲಿಕ್ಕಿಲ್ಲ.

ಧಾರವಾಡ,
ತಾ|| ೧೫-೬-೧೯೧೧ ಇಸ್ವಿ

R. B. Karandikar.
ಎಜ್ಯುಕೇಶನಲ್ ಇನಸ್ಪೇಕ್ಟರ, ದಕ್ಷಿಣಭಾಗ.

ಮಿಡಲ್‌ಸ್ಕೂಲ ಸ್ಕಾಲರಶಿಪ್ಪು ಪರೀಕ್ಷೆಯು.

೧೭ ನೇ ಜನವರಿ ೧೯೦೭ ನೇ ಇಸವಿಯು ಮುಂಬಯಿ ಗವ್ಹರ್ನ್ಮೆಂಟ ಗ್ಯಾಝೆಟಿನ ಒಂದನೇ ಭಾಗದ ೪೫, ೪೬ ನೇ ಪಾನಿನಲ್ಲಿ ಛಾಪಿಸಿ ದಂತೆ ಪ್ರತಿ ಒಂದು ಜಿಲ್ಲೆಗೆ ಆರು ಮಿಡಲ್‌ಸ್ಕೂಲ ಸ್ಕಾಲರಶಿಪ್ಪುಗಳನ್ನು ಕೊಡುವ ಸಂಬಂಧದ ಪರೀಕ್ಷೆಯು ಬುಧವಾರ ತಾ|| ೬ ನೇ ಸಪ್ಟಂಬರ ೧೯೦೭ ನೇ ಇಸವಿಯ ದಿವಸ ಮತ್ತು ತದುತ್ತರ ದಿವಸಗಳಲ್ಲಿ ಸ್ಟಾಂಡರ್ಡ ಕಾಲಮಾನದ ೧೦ ಗಂಟೆಗೆ ಸರಿಯಾಗಿ ಕೆಳಗೆ ನಮೂದಿಸಿದ ಪ್ರತಿ ಒಂದು ಸೆಂಟರಿನಲ್ಲಿ ಪ್ರಾರಂಭವಾಗುವದು. ಸೆಂಟರುಗಳು ಯಾವವೆಂದರೆ—

೧. ಧಾರವಾಡ ಹೈಸ್ಕೂಲ, ಬೆಳಗಾವ ಹೈಸ್ಕೂಲ, ವಿಜಾಪ್ಪುರ ಹೈಸ್ಕೂಲ, ಕಾರವಾರ ಹೈಸ್ಕೂಲ, ಅಲೀಬಾಗ ಜಾನ್ ಎಲ್‌ಫಿನಸ್ಟನ್ ಹೈಸ್ಕೂಲ.

೨. ಈ ಆರು ಸ್ಕಾಲರಶಿಪ್ಪುಗಳಲ್ಲಿ ಎರಡು ಎಲ್ಲ ಉಮೇದವಾರರಲ್ಲಿ ಮೇಲಾದವರಿಗೆ ಸಿಗುವವು. ಎರಡು ಇಂಗ್ಲೀಷ ಅಭ್ಯಾಸದಲ್ಲಿ ಹಿಂದುಳಿದ ಬೀನಿ ಇಸ್ರಾಯಲ್, ಕೊಂಕಣಿ, ಕೂಲಿಕಾರ ಮುಂತಾದ ಜಾತಿಯವರಿಗಾಗಿ ಕಾದಿಟ್ಟಂಥವು ಆ ಜಾತಿಯಲ್ಲಿ ಉತ್ಕೃತರಾದ ವಿದ್ಯಾರ್ಥಿಗಳಿಗೆ ಸಿಗುವವು. ಮತ್ತು ಎರಡು ಸ್ಕಾಲರಶಿಪ್ಪುಗಳು ಮುಸಲಮಾನರಿಗಾಗಿ ಕಾದಿಡಲ್ಪಡುವವು.

೩. ಈಗ ಖಾಲೀ ಬಿದ್ದಿರುವ ಕೆಳಗೆ ಕಾಣಿಸಿದ ಮಿಡಲ್‌ಸ್ಕೂಲ ಮತ್ತು ಸ್ಪೆಶಲ್‌ಸ್ಕೂಲ ಸ್ಕಾಲರಶಿಪ್ಪುಗಳೂ ಪರೀಕ್ಷೆಯಲ್ಲಿ ಮೇಲು ಪಡೆಯುವವರಿಗೆ ದೊರೆಯುವಂತೆ ಇವೆ:—

ನಂಬರ	ಜಿಲ್ಲಾ.	ಯಾವ ಸ್ಕಾಲರಶಿಪ್ಪುಗಳು.	ಎಷ್ಟು ಕಾಲ ನಡೆಯುವದು?	
			ಯಾವ ತಾರೀಖಿನಿಂದ.	ಯಾವ ತಾರೀಖಿನ ವರೆಗೆ?
೧	ಕಾನಡಾ.	ಮುಸಲಮಾನರಿಗೋಸ್ಕರ ಕಾದಿಟ್ಟದ್ದು	೧ನೇ ಸಪ್ಟಂಬರ ೧೯೦೭	೩೧ನೇ ದಶಂಬರ ೧೯೧೭
೨	ಕುಲಾಬಾ.	ಸದರ.	ಸದರ.	ಸದರ.
೩	ಸದರ.	ಸದರ.	ಸದರ.	ಸದರ.

ಇವು ಮೇಲೆ ಹೇಳಿದ ಪೂರ್ಣ ಅವಧಿಯ ಸ್ಕಾಲರಶಿಪ್ಪುಗಳು ದೊರೆತ ಉಮೇದವಾರರಲ್ಲಿ ಕಡೆಯ ನಂಬರಿನವನ ಕೆಳಗೇ ಯಾವ ಯೋಗ್ಯರಾದ ಉಮೇದವಾರರ ನಂಬರಗಳು ಬರುವವೋ ಅವರಿಗೆ ಕೊಡ ಲ್ಪಡುವವು.

೪. ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಯು ಕನ್ನಡ ಹಾಗೂ ಮರಾಠಿ ಭಾಷೆಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಧಾರವಾಡ, ವಿಜಾಪೂರ ಮತ್ತು ಕಾರವಾರ ಸೆಂಟರುಗಳಲ್ಲಿ ಕನ್ನಡ ಭಾಷೆಯ ಮುಖಾಂತರವಾಗಿಯೂ ಅಲೀಬಾಗ ಸೆಂಟರದಲ್ಲಿ ಮರಾಠೀ ಭಾಷೆಯ ಮುಖಾಂತರವಾಗಿಯೂ ತೆಗೆದುಕೊಳ್ಳಲ್ಪಡುವದು.

೫. ಪ್ರತಿ ಒಂದು ಸೆಂಟರಿನಲ್ಲಿ ಪರೀಕ್ಷೆಯು ಒಂದು ಕವಿಾಟಿಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಅಲೀಬಾಗ ಪರೀಕ್ಷಾ ಕವಿಾಟಿಯ ಅಧ್ಯಕ್ಷರು ಅಲ್ಲಿಯ ಡೆಪ್ಯೂಟೀ ಎಜ್ಯುಕೇಶನಲ್ ಇನಸ್ಪೆಕ್ಟರರು. ಉಳಿದ ಕಡೆಯಲ್ಲೆಲ್ಲ ಅಲ್ಲಿಲ್ಲಿಯ ಹೈಸ್ಕೂಲ ಹೆಡ್‌ಮಾಸ್ತರರು ಪರೀಕ್ಷಾ ಕವಿಾಟಿಯ ಅಧ್ಯಕ್ಷರಿರುವರು. ಈ ಪರೀಕ್ಷೆಗೆ ಕೂಡ್ರಲಿಕ್ಕೆ ಪರವಾನಗಿಯನ್ನು ಕುರಿತು ಮಾಡುವ ಅರ್ಜಿಗಳನ್ನೆಲ್ಲ ಛಾಪಿಸಿದ ನಮೂನೆಗಳ ಮೇಲೆ ಮಾಡತಕ್ಕದ್ದು. ಅರ್ಜಿಯ ನಮೂನೆಗಳು ಪರೀಕ್ಷಾ ಕವಿಾಟಿಯ ಅಧ್ಯಕ್ಷರ ಕಡೆಗಾಗಲಿ ನಮ್ಮ ಕಡೆಗಾಗಲಿ ಸಿಗುವವು. ಅವಕ್ಕೆ ಕ್ರಯ ಬೀಳಲಿಕ್ಕಿಲ್ಲ. ಉಮೇದವಾರರು ಅರ್ಜಿಗಳನ್ನು ೧೫ನೇ ಅಗಷ್ಟ ೧೯೧೧ ನೇ ಇಸವಿಯ ದಿವಸ ಅಥವಾ ಅದರ ಒಳಗಾಗಿ ತಮ್ಮ ತಮ್ಮ ಜಿಲ್ಲೆಯ ಅಧ್ಯಕ್ಷರಿಗೆ ತಲಪುವಂತೆ ಕಳಿಸಿ ಕೊಡಬೇಕು. ಆ ತಾರೀಖಿನ ನಂತರ ಬಂದ ಅರ್ಜಿಯನ್ನು ಹಿಡಿಯಲಿಕ್ಕಿಲ್ಲ.

೬. ಉಮೇದವಾರರ ವಯಸ್ಸು, ಪರೀಕ್ಷಾ ವಿಷಯಗಳು, ಸ್ಕಾಲರಶಿಪ್ಪಿನ ರಕಮು, ಅವಧಿ, ಪರೀಕ್ಷೆಯ ಫೀ, ಮುಂತಾದ ಸಂಗತಿಗಳ ಸಂಬಂಧದ ಹೆಚ್ಚಿನ ಮಾಹಿತಿಯು ಸುಧಾರಿಸಿದ ನಿಯಮಗಳಲ್ಲಿ ಕಂಡು ಬರುವದು. ಈ ನಿಯಮಗಳ ಪ್ರತಿಗಳು ಕೆಳಗೆ ಸಹಿ ಮಾಡಿದವರ ಕಡೆ ಯಾಗಲಿ ಪರೀಕ್ಷಾ ಕವಿಾಟಿಯ ಅಧ್ಯಕ್ಷರ ಕಡೆಗಾಗಲಿ ಅರ್ಜಿಯನ್ನು ಮಾಡಿದರೆ ಬೆಲೆ ತಕ್ಕೊಳ್ಳದೆ ಸಿಗುವವು.

ಧಾರವಾಡ
ತಾ॥ ೨೧ನೇ ಜೂನ ೧೯೧೧

K. B. KARANDIKAR,
Educational Inspector S. D.

ಧಾರವಾಡ ಟ್ರೇನಿಂಗ ಕಾಲೇಜದ ಸರ್ಟಿಫಿಕೇಟ ಪರೀಕ್ಷೆಯು ನುಂಗಳವಾರ ತಾ॥ ೩ನೇ ಅಕ್ಟೋಬರ ೧೯೧೧ನೇ ಇಸವಿ ದಿವಸ ಪ್ರಾರಂಭವಾಗುವದು. ಈ ಪರೀಕ್ಷೆಯ ಡ್ರಾಯಿಂಗ ಪರೀಕ್ಷೆಯು ಗುರುವಾರ ತಾ॥ ೫ನೇ ಸಪ್ಟಂಬರ ದಿವಸ ಪ್ರಾರಂಭವಾಗುವದು. ಹೊರಗಿನಿಂದ ಪರೀಕ್ಷೆಗೆ ಬರುವವರು ಮೆ॥ ಎಜ್ಯುಕೇಶನಲ್ ಇನಸ್ಪೇಕ್ಟರ ಸಾ॥ ಬಾ॥ ದಕ್ಷಿಣಭಾಗ ಇವರ ಅಪ್ಪಣೆಯನ್ನು ಪಡೆದುಕೊಂಡು ಪರೀಕ್ಷೆಗೆ ಕೂಡ್ರಬಹುದು.

ಧಾರವಾಡ ಹೆಣ್ಣುಮಕ್ಕಳ ಟ್ರೇನಿಂಗಕಾಲೇಜದ ಸರ್ಟಿಫಿಕೇಟ ಪರೀಕ್ಷೆಯು ಬುಧವಾರ ತಾ॥ ೪ ಅಕ್ಟಂಬರ ೧೯೧೧ನೇ ದಿವಸ ಪ್ರಾರಂಭವಾಗುವದು.

ಕೆಳಗೆ ಕಾಣಿಸಿದ ಎರಡು ಕನ್ನಡ ಪುಸ್ತಕಗಳು ಹಿಂದಕ್ಕೆ ಲಾಯಬ್ರರಿಗಳಿಗೋಸ್ಕರ ಮತ್ತು ಇನಾಮಿನಗೋಸ್ಕರ ಮಂಜೂರಾಗಿದ್ದು ಅವುಗಳನ್ನು ಈಗಾದರೂ ಮಂಜೂರಾದ ಪುಸ್ತಕಗಳ ಯಾದಿಯಲ್ಲಿ ಇಟ್ಟಿರುತ್ತದೆ. ಅವುಗಳ ಪ್ರತಿಗಳು ಮಿ॥ ಕರ್ನನೆದಾಸ ನರಂದಾಸ, ಬುಕ್‌ಸೆಲರ್ ಸುರತ ಇವರ ಕಡೆಗೆ ದೊರೆಯುವವು. ಅವರ ಹತ್ತರ ಈ ಪುಸ್ತಕಗಳ ಪ್ರತಿಗಳು ಬಹಳ ಶಿಲಕು ಅವೆ. ತಿಳಿಯುವದು.

ಪುಸ್ತಕಗಳ ಹೆಸರುಗಳು.

೧. ಜಗತ್ತಿನ ಇತಿಹಾಸ.

೨. ಜೋಶೀಯವರು ಬರೆದ ಅರ್ಥಶಾಸ್ತ್ರ.

ಧಾರವಾಡ. } R. L. KARANI IKAR,
ತಾ॥ ೧೧।೭।೧೯೧೧ } *Educational Inspector, S. D.*

ಜಾಹೀರಾತು.

ಪ್ರಾಥಮಿಕ ಶಾಲೆಗಳಿಗೋಸ್ಕರ ಮಂಜೂರಾದ ಪುಸ್ತಕಗಳ ಈ ಪಟ್ಟಿಯು ಎಲ್ಲರ ತಿಳುವಳಿಕೆಯ ಬಗ್ಗೆ ಪ್ರಸಿದ್ಧಿಸಲ್ಪಟ್ಟಿರುತ್ತದೆ.

ಸಂಖ್ಯೆ.	ಪುಸ್ತಕದ ಹೆಸರು.	ಭಾಷೆ.	ಕ್ರಯ. ರೂ	ಆ.	ಪೈ	ಯಾತರ ಒಗ್ಗೆ ಮಂಜೂರ ಮಾಡಲ್ಪಟ್ಟಿರುತ್ತದೆ
	ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ:—					
	ಆರ್. ಎಮ್. ಮಹಿಷಿ ಬಿ. ಎ ಇವರ ಕೃಷಿಕರ್ಮಶಾಸ್ತ್ರ.	ಕನ್ನಡ	೦	೧೨	೦	ಲಾಯಬ್ರರಿಗಳ ಮತ್ತು ಇನಾಮು ಬಗ್ಗೆ.
	ಕೃಷ್ಣಾಜಿ ಗೋವಿಂದ ಗೆಜ್ಜಿ ಬಿ. ಎ, ಇವರು ಬರೆದ ಪ್ರೊಫೆಸರ್ ಜಿ. ಗೋಖಲೆ ಇವರ ಅಂಕಗಣಿತ ಭಾಗ ೩	ಸದರ	೧	೦	೦	ಸದರ ಮತ್ತು ಶಾಲೆಗಳಲ್ಲಿ ಉಪಯೋಗಿಸುವದಕ್ಕೆ.
	ಪೊಲವಿ ಹಾಫೀಜ ಜಲಾಲ ಉದ್ದೀನ ಅಹಮದ ಹೆಡ್‌ಪೂಲವಿ ಡಿಸ್ಟ್ರಿಕ್ಟ ಸ್ಕೂಲ ಕಾನಪುರಂಕೃತ:— ಮನಿನಾಶ್ತಿನ—ಇ ಉರ್ದು.	ಉರ್ದು	೦	೮	೦	ಲಾಯಬ್ರರಿಗಳ ಮತ್ತು ಇನಾಮುಗಳ ಬಗ್ಗೆ.

ಶಾಲಾಪತ್ರಿಕೆ

ಪ್ರಸ್ತಕ ೪೭ | ಅಗಷ್ಟ ೧೯೧೧. | ಸಂಚಿಕೆ ೮.

ದೇಶಭಾಷೆಯ ಗಂಡಸರ ಟ್ರೇನಿಂಗ ಕಾಲೇಜಿಗಳ ಕಾಯಿದೆ.

೧೯೧೦.

ದಕ್ಷಿಣಭಾಗ.

ಧಾರವಾಡ ಗಂಡಸರ ಟ್ರೇನಿಂಗ ಕಾಲೇಜಿನ ತಿದ್ದಿ ಶುದ್ಧ ಮಾಡಿದ ಕಾಯಿದೆಯನ್ನು ದಕ್ಷಿಣ ಭಾಗದೊಳಗಿನ ವಿದ್ಯಾಖಾತೆಯ ಅಧಿಕಾರಿಗಳು ತಿಳಿದುಕೊಂಡು ಅದರಂತೆ ನಡಿಯಬೇಕೆಂಬ ಉದ್ದೇಶದಿಂದ ಅದನ್ನು ಕೆಳಗೆ ಪ್ರಕಟಿಸಿರುತ್ತೇವೆ.

ಡಬ್ಲ್ಯೂ. ಎಚ್. ಶಾರ್ಪ.
ಡಾಯರೆಕ್ಟರ ಆಫ್ ಪಬ್ಲಿಕ್ ಇನ್ಸ್ಟ್ರಕ್ಶನ್.

ಡಾಯರೆಕ್ಟರ ಆಫ್ ಪಬ್ಲಿಕ್ ಇನ್ಸ್ಟ್ರಕ್ಶನ್‌ರ ಆಫೀಸು.
ಪುಣೆ, ೨೬ನೇ ಅಕ್ಟೋಬರ ೧೯೧೦.

೧. ಶಿಕ್ಷಣದ ಕಲೆಯನ್ನು ಕಲಿಸಿ ದೇಶಭಾಷೆಯ ಶಾಲೆಗಳ ಅಧ್ಯಾಪಕರನ್ನೂ ಸಹಾಯಾಧ್ಯಾಪಕರನ್ನೂ ತಯಾರಿಸುವದಕ್ಕಾಗಿ ಧಾರವಾಡ ಟ್ರೇನಿಂಗ ಕಾಲೇಜವು (ಶಿಕ್ಷಣಾಲಯವು) ಇಡಲ್ಪಟ್ಟಿದೆ.

೨. ಶಿಕ್ಷಣಕಲೆಯನ್ನು ಕಲಿಯುವ ಕೆಲವು ವಿದ್ಯಾರ್ಥಿಗಳಿಗೆ ಸಂಬಳ ಅಥವಾ ಉದರ ಪೋಷಣದ ಪೂರ್ತಿ ಹಣ ಕೊಡಲಾಗುವದು. ಸಂಬಳಗಳಲ್ಲಿ ಮೂರು ತರಗಳಿದ್ದು ಅವು ಒಂದೊಂದು ವರ್ಷದ ವರಗೆ ನಡೆಯುವವು.

೧ನೇ ವರ್ಷದ ವಿದ್ಯಾರ್ಥಿಗಳಿಗೆ ೭೫ ರೂ. ಸಂಬಳ.
೨ನೇ ,, ,, ೭೫ ,,
೩ನೇ ,, ,, ೮ ,,

ಯಾವ ವಿದ್ಯಾರ್ಥಿಗಳು ತಮ್ಮ ಹೆಂಡರನ್ನು ಹೆಂಗಸರ ಟ್ರೇನಿಂಗ ಕಾಲೇಜಕ್ಕೆ ಶಿಕ್ಷಣಾಭ್ಯಾಸಕ್ಕಾಗಿ ಕಳುಹಿಸುವರೋ ಅವರಿಗೆ ಮೇಲಿನ ಸಂಬಳದ ಹೊರ್ತು ತಿಂಗಳಿಗೆ ೩ ರೂಪಾಯಿ ಹೆಚ್ಚಿಗೆ ದೊರೆಯುವವು.

೩. ದಶಂಬರ ತಿಂಗಳಲ್ಲಿ ಕಾಲೇಜದ ಪ್ರವೇಶ ಪರೀಕ್ಷೆಯಾಗುವದು. ಎಜ್ಯುಕೇಶನಲ್ ಇನಸ್ಪೆಕ್ಟರ್ ಸಾಹೇಬರು ತಮ್ಮ ಭಾಗದೊಳಗ ಬೇಕಾಗುವಷ್ಟು ಅಧ್ಯಾಪಕರ ಪೂರೈಕೆಗಾಗಿ ತಮಗೆ ಅವಶ್ಯ ತೋರಿದ ಮಟ್ಟಿಗೆ ೧ನೇ ವರ್ಷದ ವರ್ಗದಲ್ಲಿ ತೆರವಿಟ್ಟ ಸಂಬಳದ ಜಾಗೆಗಳನ್ನು ಪರೀಕ್ಷೆಯಲ್ಲಿ ಗುಣಾಧಿಕ್ಯವನ್ನು ತೋರಿಸಿ ದೊರಕಿಸಲಪೇಕ್ಷಿಸುವ ಉಮೇದವಾರರನ್ನು ಈ ಪರೀಕ್ಷೆಗೆ ತೆಗೆದುಕೊಳ್ಳಲಾಗುವದು. ಉಮೇದವಾರರು ೧ನೇ ದಶಂಬರಕ್ಕೆ ೧೭ ವರ್ಷಕ್ಕಿಂತ ಹೆಚ್ಚು ೨೨ ವರ್ಷಕ್ಕಿಂತ ಕಡಿವೆ ವಯಸ್ಸಿನವರೂ ವ್ಹರ್ನ್ಯಾಕ್ಯುಲರ ಫಾಯಿನಲ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರೂ ಇರಬೇಕು. ಇದಲ್ಲದೆ ಸರಕಾರದ ಕೆಲಸ ಮಾಡಲಿಕ್ಕೆ ಯೋಗ್ಯರೆಂಬ ಬಗ್ಗೆ ಅಧಿಕಾರವುಳ್ಳ ಡಾಕ್ಟರರಿಂದ ಸರ್ಟಿಫಿಕೇಟನ್ನು ಪಡಕೊಳ್ಳಬೇಕು.

೪. ಈ ಪರೀಕ್ಷೆಯನ್ನು ಕಾಲೇಜದ ವಿದ್ಯಾಗುರುಗಳು ದೇಶ ಭಾಷೆಯ ಎಲ್ಲಕ್ಕೂ ಹೆಚ್ಚಿನ ಇಯತ್ತೆಯಂತೆ ಟ್ರೇನಿಂಗ ಕಾಲೇಜದಲ್ಲಿ ತೆಗೆದುಕೊಳ್ಳುವರು. ವಾಡಿಕೆಯಾಗಿ ಜೆಚ್ಚು ಗುಣಗಳನ್ನು ದೊರಕಿಸಿ ಉಮೇದವಾರರಿಗೆ ಸಂಬಳದ ಜಾಗೆಗಳು ಸಿಗುವವು. ಆದರೂ ಆಯ ಜಿಲ್ಹೆಗಳ ಅವಶ್ಯಕತೆಯ ಮೇರೆಗೆ ಪ್ರತಿಯೊಂದು ಜಿಲ್ಹೆಗೆ ಇಂತಿಷ್ಟು ಸಂಬಳದ ಜಾಗೆಗಳನ್ನು ನೇಮಿಸುವದಕ್ಕೆ ಮತ್ತು ವಿಶೇಷ ಉತ್ತೇಜನ ಕೊಡಬೇಕೆಂದು ತೋರುವ ಮುಸಲ್ಮಾನ, ಭಿಲ್ಲ, ಕೋಳೀ ಮುಂತಾದ ಜಾತಿಯವರಿಗಾಗಲಿ, ಅಧ್ಯಾಪಕರಾಗಿ ಕೆಲಸ ಮಾಡುವ ಅಥವಾ ಶಿಕ್ಷಣಾಭ್ಯಾಸವನ್ನು ಮಾಡುವ ಹೆಂಡರುಳ್ಳವರಿಗಾಗಲಿ ಜಾಗೆಗಳನ್ನು ಕಾಯ್ದಿಡುವ ಅಧಿಕಾರವು ಇನಸ್ಪೆಕ್ಟರ ಸಾಹೇಬರಿಗೆ ಉಂಟು. ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರು ಸಂಬಳಿಲ್ಲದ ಅಥವಾ ಹೊರಗಿನ ಸಂಬಳ ಸಿಗುವ ಕೆಲವು ವಿದ್ಯಾರ್ಥಿಗಳನ್ನು ಸಹ ಇಟ್ಟು ಕೊಳ್ಳಬಹುದು.

೫. ಕಾಲೇಜದಲ್ಲಿ ಸಂಬಳದ ವಿದ್ಯಾರ್ಥಿಗಳನ್ನು ತೆಗೆದುಕೊಂಡ ಬಳಿಕ ಅವರು ಈ ಕೋಡಿನ ಕಡೆಯ ಭಾಗದಲ್ಲಿ ತೋರಿಸಿದ ಪ್ರಮಾಣೆ ಯಂತೆ ಕರಾರ ಪತ್ರವನ್ನು ಬರಕೊಡಬೇಕು. [ಪರಿಶಿಷ್ಟ. ಅ.]

೬. ಕಾಲೇಜದಲ್ಲಿ ಮೂರು ಬೇರೆ ಬೇರೆ ವರ್ಗಗಳಿರುತ್ತವೆ. ಪ್ರತಿ ಯೊಂದು ವರ್ಗದವರಿಗೆ ಪ್ರಾಥಮಿಕ ಪರೀಕ್ಷೆಯೆಂತಲೂ, ಮಾಧ್ಯಮಿಕ ಪರೀಕ್ಷೆಯೆಂತಲೂ ಎರಡು ಪರೀಕ್ಷೆಗಳುಂಟು. [ಪರಿಶಿಷ್ಟ. ಬ.]

೭. ವರ್ಷದೊಳಗೆ ಎರಡು ಟರ್ಮುಗಳು (ಅಭ್ಯಾಸದ ಅವಧಿಗಳು) ನೋಡಲ್ಪಟ್ಟವೆ. ಮೊದಲನೆಯದು ದಶಂಬರ ೧೫ನೇ ತಾರೀಖಿಗೆ ಆರಂಭ ವಾಗಿ ಎಪ್ರೀಲ ತಿಂಗಳ ೧೫ನೇ ತಾರೀಖಿಗೆ ಮುಗಿಯುತ್ತದೆ. ಎರಡನೆ ಯದು ಜೂನ ತಿಂಗಳ ೧೫ನೇ ತಾರೀಖಿಗೆ ಆರಂಭವಾಗಿ ಅಕ್ಟೋಬರದ ೧೫ನೇ ತಾರೀಖಿಗೆ ಮುಗಿಯುತ್ತದೆ. (ಪ್ರಸಂಗ ವಿಶೇಷದಲ್ಲಿ ಈ ತಾರೀಖು ಗಳನ್ನು ಸ್ವಲ್ಪ ಹೆಚ್ಚು ಕಡಿಮೆ ಮಾಡಬಹುದು.) ಪ್ರತಿ ವರ್ಷದ ಮೊದಲ ನೆಯ ಟರ್ಮಿನಲ್ಲಿ ಒಟ್ಟಿಗೆ ಹ್ಯಾಗೆ ಅಭ್ಯಾಸವಾಗಿರುತ್ತದೆಂಬದನ್ನು ನೋಡು ವಡಕ್ಕಾಗಿ ಕಾಲೇಜದ ಗುರುಗಳು ಪ್ರಾಥಮಿಕ ಪರೀಕ್ಷೆಯನ್ನು ತೆಗೆದು ಕೊಳ್ಳುವರು. ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದ ಸಂಬಳದ ವಿದ್ಯಾ ರ್ಥಿಗಳು ತಮ್ಮ ಸಂಬಳವನ್ನು ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬ ರಿಗೆ ಯೋಗ್ಯವಾಗಿ ತೋರಿದರೆ ಕಳಕೊಳ್ಳಲಿಕ್ಕೆ ಪಾತ್ರರಾಗುವರು.

೮. ಪ್ರತಿವರ್ಷದ ಎರಡನೆಯ ಟರ್ಮಿನ ಕೊನೆಗೆ ಇನಸ್ಪೆಕ್ಟರ್ ಸಾಹೇಬರು ಪ್ರಿನ್ಸಿಪಾಲರ ಹಾಗೂ ತಾವು ನಿಯಮಿಸಿದ ವಿದ್ಯಾಖಾತೆಯ ಇತರ ಅಧಿಕಾರಿಗಳ ಸಹಾಯದಿಂದ ಸರ್ಟಿಫಿಕೇಟದ ಪರೀಕ್ಷೆಯನ್ನು ತೆಗೆ ದುಕೊಳ್ಳುವರು.

೯. ಸರ್ಟಿಫಿಕೇಟದ ಪರೀಕ್ಷೆಯ ಪರಿಣಾಮವು ಮೂರು ಬೇರೆ ಬೇರೆ ಪಟ್ಟಿಗಳಲ್ಲಿ ತೋರಿಸಲ್ಪಡುವದು. ಆ ಪಟ್ಟಿಗಳಲ್ಲಿ ವಿದ್ಯಾರ್ಥಿ ಗಳ ಹೆಸರುಗಳು ಅವರು ದೊರಕಿಸಿದ ಗುಣಗಳ ಕ್ರಮದಂತೆ ಬರೆಯಲ್ಪ ಡುವವು. ಇನೇ ವರ್ಷದ ವಿದ್ಯಾರ್ಥಿಗಳಲ್ಲಿ ಎರಡು ವರ್ಗಗಳು ಮಾಡಲ್ಪ ವವು.

ಪ್ರತಿಯೊಬ್ಬ ವಿದ್ಯಾರ್ಥಿಯು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇ ಕಾದರೆ, ಪ್ರತಿಯೊಂದು ವಿಷಯದಲ್ಲಿ ಆ ವಿಷಯದ ಗುಣಗಳ ೫ ಕ್ಕಿಂತ ಕಡಿಮೆಯಾಗದಷ್ಟು ಗುಣಗಳನ್ನೂ ಪ್ರತಿಯೊಂದು ವಿಷಯದ ವಿಭಾಗ

ಗಳಲ್ಲಿ ಆಯಾ ವಿಭಾಗಗಳ ಗುಣಗಳ ೫ಕ್ಕಿಂತ ಕಡಿಮೆಯಾಗದ ಗುಣಗಳನ್ನೂ ಪರೀಕ್ಷೆಗೆ ಇದ್ದ ಒಟ್ಟು ಗುಣಗಳಲ್ಲಿ ೧೦ಕ್ಕೆ ೪ಂಕ್ಕೆ ಕಡಿಮೆಯಾಗದಷ್ಟು ಗುಣಗಳನ್ನೂ ದೊರಕಿಸಲಿಕ್ಕೆ ಬೇಕು.

ಈ ಶರ್ತಿಗನುಸರಿಸಿ ೩ನೇ ವರ್ಷದ ವಿದ್ಯಾರ್ಥಿಗಳಲ್ಲಿ ಒಟ್ಟು ಗ ಗಳಲ್ಲಿ ೫ ಕ್ಕಿಂತ ಕಡಿಮೆಯಾಗದಷ್ಟು ಗುಣಗಳನ್ನು ದೊರಕಿಸಿದವ ೧ನೆಯ ವರ್ಗದವರೆಂದು ಎಣಿಸಲ್ಪಡುವರು.

೧೦. ವಾರ್ಷಿಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದ ೧ನೇ ವರ್ಷ ವಿದ್ಯಾರ್ಥಿಗಳನ್ನು ಸಾಮಾನ್ಯವಾಗಿ ಕಾಲೇಜದಲ್ಲಿ ಇಟ್ಟುಕೊಳ್ಳಲಿಕ್ಕೆ ೨ನೇ ೩ನೇ ವರ್ಷದ ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಯಲ್ಲಿ ತೇರ್ಗ ಹೊಂದದಿದ್ದರೆ ಅವರ ಹಕ್ಕಿನ ಪ್ರಕಾರ ೧ನೇ ಇಲ್ಲವೆ ೨ನೇ ವರ್ಷದ ಸ ಫಿಕೇಟಗಳು ಕೊಡಲ್ಪಡುವವು. ಆದರೆ ಅವರನ್ನು ಕಾಲೇಜದಲ್ಲಿ ಇ ಕೊಳ್ಳಲಾಗದು. ಯಾವದಾದರೊಂದು ಸರ್ಟಿಫಿಕೇಟದ ಪರೀಕ್ಷೆಯ ತೇರ್ಗಡೆ ಹೊಂದದ ವಿದ್ಯಾರ್ಥಿಗಳು ಎಜ್ಯುಕೇಶನಲ್ ಇನಸ್ಪೆಕ್ಟರ್ ಸಾ ಬರ ಅಪ್ಪಣೆ ಪಡಕೊಂಡು ಅದೇ ಪರೀಕ್ಷೆಗೆ ಮುಂದೆ ಮತ್ತೆಯೂ ಕೂ ಬಹುದು.

೧೧. ೧ನೇ ಇಲ್ಲವೆ ೨ನೇ ವರ್ಷಗಳ ಪರೀಕ್ಷೆಗಳಲ್ಲಿ ತೇರ್ಗ ಹೊಂದಿದ ವಿದ್ಯಾರ್ಥಿಗಳಲ್ಲಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬ ಜೇಕೆಂದು ಅರಿಸಿ ತೆಗೆದವರನ್ನು ಮಾತ್ರ ೨ನೇ ಇಲ್ಲವೆ ೩ನೇ ವರ್ಷ ಅಭ್ಯಾಸ ಮಾಡಲಿಕ್ಕೆ ಕಾಲೇಜದಲ್ಲಿ ಇಟ್ಟುಕೊಳ್ಳಲಾಗುವದು.

೧೨. ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಕಡೆಯಲ್ಲಿ ತೋರಿಸಿ ನಮೂನೆಯಂತೆ (ಪರಿಶಿಷ್ಟ ಕ.) ಇನ್‌ಸ್ಪೆಕ್ಟರ್ ಸಾಹೇಬರೂ ಪ್ರಿ ಪಾಲರೂ ತಮ್ಮ ಸಹಿ ಮಾಡಿ ಸರ್ಟಿಫಿಕೇಟಗಳನ್ನು ಕೊಡುವರ ಆ ಮೇಲೆ ಅವರು ತೆರವಿದ್ದ ಜಾಗೆಗಳನ್ನು ಗುಣಾನುಕ್ರಮದಂತೆ ಅರಿ ಕೊಳ್ಳಬಹುದು.

೧೩. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಕೆಳ ಬರೆದಂತೆ ಕಾಯಮ್ ಸಂಬಳದ ಜಾಗೆಗಳಿಗೆ ಯೋಗ್ಯರಾಗುವರು.

೧ ನೆಯ ವರ್ಷದವರು ತಿಂಗಳಿಗೆ ೧೨ ರೂಪಾಯಿ

೨ ನೆಯ ,, ,, ೧೫ ,,

೩ನೆಯ ,, { ೨ನೆಯ ವರ್ಗದಲ್ಲಿ ಬಂದರೆ ತಿಂಗಳಿಗೆ ೨೦ ರೂ.
ಗ ನೆಯ ,, ,, ,, ೨೫ ,,

೧೪. ಯಾವದೊಂದು ಸರ್ಟೀಫಿಕೇಟನ್ನು ಪಡಕೊಂಡ ವಿದ್ಯಾರ್ಥಿಗೆ ತನ್ನ ಸರ್ಟೀಫಿಕೇಟದಲ್ಲಿದ್ದಷ್ಟು ಸಂಬಳವನ್ನು ಕೂಡಲೆ ಬೇಡಲಿಕ್ಕೆ ಅಧಿಕಾರವಿಲ್ಲ. ಆದರೆ ಅಂಥ ಜಾಗೆ ತೆರವಾದಾಗ ಮಾತ್ರ ಅವನು ಅದಕ್ಕೆ ಯೋಗ್ಯನಾಗುತ್ತಾನೆ. ಆದಾಗ್ಯೂ ೧ನೇ, ೨ನೇ, ೩ನೇ ವರ್ಷದ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಕೂಡಲೆ ಅವರಿಗೆ ಆರಂಭದಲ್ಲಿ ಕನಿಷ್ಟ ಪಕ್ಷಕ್ಕೆ ಅನುಕ್ರಮವಾಗಿ ೧೧, ೧೨, ೧೫ ರೂಪಾಯಿ ಸಂಬಳ ದೊರೆಯುವದು. ಟ್ರೇಂಡಾದ ಶಿಕ್ಷಕರನ್ನು ಅವರು ಪಡಕೊಂಡ ಸರ್ಟೀಫಿಕೇಟಗಳಿಗಿಂತ ಕಡಿಮೆ ಜಾಗೆಗಳಿಗೆ ನಿಯಮಿಸಿದ್ದರೆ ಅವರಿಗೆ ಇದಷ್ಟು ತೀವ್ರವಾಗಿ ಅವರ ಸರ್ಟೀಫಿಕೇಟದಲ್ಲಿದ್ದಷ್ಟು ಸಂಬಳ ಸಿಗುವಂತೆ ಪಡತಿ ಮಾಡಲಾಗುವದು.

೧೫. ಮೇಲೆ ಹೇಳಿದ ತಮ್ಮ ತಮ್ಮ ವರ್ಗಗಳ ಸಂಬಳದ ಬೇರತು ಸರ್ಟೀಫಿಕೇಟನ್ನು ಪಡೆದ ಪ್ರತಿಯೊಬ್ಬ ಅಧ್ಯಾಪಕನು ಕೈಗಾರಿಕೆಯ ಶಿಕ್ಷಣ ಅಥವಾ ಗಾಯನಕಲೆ ಇವುಗಳಲ್ಲಿ ಅವಶ್ಯವಾದ ಸರ್ಟೀಫಿಕೇಟಗಳನ್ನು ಪಡೆದುಕೊಂಡು ವಿದ್ಯಾರ್ಥಿಗಳಿಗೆ ಆಯಾ ವಿಷಯಗಳನ್ನು ನ್ಯಾಯವಾಗಿ ಕಲಿಸಿದರೆ ಅವನು ವಿಶೇಷವಾದ ಸಹಾಯ ದ್ರವ್ಯವನ್ನು ಪಡೆಯುವದಕ್ಕೆ ಯೋಗ್ಯನಾಗುವನು.

೧೬. ಟ್ರೇನಿಂಗ ಕಾಲೇಜದಲ್ಲಿ ಇದ್ದು ೧ನೇ ಅಥವಾ ೨ನೇ ವರ್ಷದ ಸರ್ಟೀಫಿಕೇಟಿದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ (೧೧ ನೆಯ ನಿಯಮದಂತೆ) ಕಾಲೇಜದಲ್ಲಿ ಮುಂದಿನ ಅಭ್ಯಾಸಕ್ಕಾಗಿ ಆರಿಸಲ್ಪಡದಂಥ ಶಿಕ್ಷಕರು, ಕನಿಷ್ಟ ಪಕ್ಷಕ್ಕೆ ಎರಡು ವರ್ಷ ಚೆನ್ನಾಗಿ ಕೆಲಸ ಮಾಡಿದ ಮೇಲಿಕ, ಇನ್‌ಸ್ಪೆಕ್ಟರ ಸಾಹೇಬರ ಅಪ್ಪಣೆ ಪಡಕೊಂಡು ಅನುಕ್ರಮವಾಗಿ ೨ನೇ ಅಥವಾ ೩ನೇ ವರ್ಷದ ಸರ್ಟೀಫಿಕೇಟದ ಪರೀಕ್ಷೆಯನ್ನು ಕೊಡಲಿಕ್ಕೆ ಅಡ್ಡಿ ಇಲ್ಲ. ಆದರೆ ೧ನೇ ವರ್ಷದ ಶಿಕ್ಷಣದ ಬಗ್ಗೆ ಮಾತ್ರ ಕಾಲೇಜದಲ್ಲಿ ಇದ್ದವರು ೩ನೆಯ ವರ್ಷದ ಪರೀಕ್ಷೆಯನ್ನು ಕೊಡಲಿಕ್ಕೆ ಯೋಗ್ಯರಾಗರು.

೧೭. ಲೋಕಲ್‌ಬೋರ್ಡ ಇಲ್ಲವೆ ಮ್ಯುನಿಸಿಪಲ್ ಶಾಲೆಗಳ

ಅಥವಾ ಶಾಲಾಖಾತೆಯ ಅಧಿಕಾರಸ್ಥರ ವಿಚಾರಣೆಗೆ ಒಳಗಾದ ಯಾವವ
ದರೂ ಶಾಲೆಗಳ ಅಂಟ್ರೇಂಡ ಶಿಕ್ಷಕರು ಮೊದಲು ಟ್ರೇನಿಂಗ ಕಾಲೇಜದ
ಇರದೆಯೆ ಗನೇ ವರ್ಷದ ಪರೀಕ್ಷೆಗೆ ಕೂಡ್ರಬಹುದು. ಆದರೆ ಅವ
ವ್ಹರ್ನ್ಯಾಕ್ಯುಲರ ಫಾಯಿನಲ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದು
ವರ್ಷಕ್ಕಿಂತ ಕಡಿಮೆ ಇಲ್ಲದಷ್ಟು ಅವಧಿಯ ವರೆಗೆ ಚನ್ನಾಗಿ ಕೆಲಸ ಮಾ
ದವರಿರಬೇಕು. ಈ ಮೇರೆಗೆ ಪರೀಕ್ಷೆಗೆ ಕೂಡ್ರುವವರೆಲ್ಲರು ಇನ್‌ಸ್ಪೆಕ್ಟ
ಸಾಹೇಬರ ವಿಶೇಷ ಅಪ್ಪಣೆ ಪಡಕೊಳ್ಳಬೇಕಾಗುವದು. ಅವರ ವಯಸ
೩೦ ವರ್ಷಕ್ಕಿಂತ ಹೆಚ್ಚಿದ್ದರೆ ಈಸರತಿನಲ್ಲಿ ಪರೀಕ್ಷೆ ಕೊಡುವ ಕಾರಣವಿ
ಆದರೆ ಅವರು ಡ್ರಿಲ್ ಕಲಿಸಲಿಕ್ಕೆ ತಕ್ಕವರಾಗಿರಬೇಕು.

೧೮. ಈ ಮೇರೆಗೆ ಹೊರಗಿನಿಂದ ಪರೀಕ್ಷೆಗೆ ಕೂಡ್ರುವ ಅಂಟ್ರೇಂ
ಶಿಕ್ಷಕರು ಗನೇ ವರ್ಷದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಬಳಿಕ ೨
ವರ್ಷದ ಅಭ್ಯಾಸಕ್ಕಾಗಿ ಆರಿಸಲ್ಪಡದಿದ್ದರೆ, ಅವರು ಎರಡು ವರ್ಷ ಚನ್ನಾ
ಕೆಲಸ ಮಾಡಿದ ಮೇಲೆ ಇನ್‌ಸ್ಪೆಕ್ಟರ ಸಾಹೇಬರ ವಿಶೇಷ ಅಪ್ಪಣೆ ಪ
ಕೊಂಡು ೩ನೇ ವರ್ಷದ ಪರೀಕ್ಷೆಗೆ ಕೂಡ್ರಬಹುದು. ಆದರೆ ಕಾಲೇ
ದಲ್ಲಿ ಇಪ್ಪು ೩ನೇ ವರ್ಷದ ವರ್ಗದಲ್ಲಿ ೧ ವರ್ಷ ಅಭ್ಯಾಸ ಮಾಡಿ
ಹೊರತು ೩ನೇ ವರ್ಷದ ಪರೀಕ್ಷೆಗೆ ಇಂಥ ಯಾವ ಶಿಕ್ಷಕರೂ ಕೂಡ್ರ
ಗದು. ಅದರೆ ಕಾಲೇಜಿನ ಸರ್ಟಿಫಿಕೇಟನ್ನು ಪಡೆಯದೆ ಸ್ಕೂಲ
ಯನಲ್ ಅಥವಾ ವಿಶ್ವವಿದ್ಯಾಲಯದ ಯಾವದೊಂದು ಪರೀಕ್ಷೆಯನ
ಕೊಟ್ಟು ೨ ವರ್ಷ ಚನ್ನಾಗಿ ಕೆಲಸ ಮಾಡಿದ ಶಿಕ್ಷಕರು ಎಜ್ಯುಕೇಶನ
ಇನ್‌ಸ್ಪೆಕ್ಟರ ಸಾಹೇಬರ ವಿಶೇಷ ಅಪ್ಪಣೆ ಪಡೆದುಕೊಂಡು ೩ನೇ ವರ್ಷ
ಪರೀಕ್ಷೆಗೆ ಕೂಡ್ರಬಹುದು; ಮತ್ತು ಅದರಲ್ಲಿ ತೇರ್ಗಡೆ ಹೊಂದಿದ ಬಳಿ
೩ನೆಯ ವರ್ಷದ ಅಭ್ಯಾಸಕ್ಕೋಸುಗ ಕಾಲೇಜದಲ್ಲಿ ನಿಲ್ಲಬಹುದು. ಇ
ಎಲ್ಲ ಪ್ರಸಂಗಗಳಲ್ಲಿ ೩೦ ವರ್ಷಕ್ಕಿಂತ ಹೆಚ್ಚು ವಯಸ್ಸಾದವರು ಈಸರ
ನಲ್ಲಿ ಪರೀಕ್ಷೆಗೆ ಕೂಡ್ರಬೇಕೆಂಬ ನಿರ್ಬಂಧವಿಲ್ಲ; ಆದರೆ ಅವರು ಡ್ರಿ
ಕಲಿಸಲಿಕ್ಕೆ ಯೋಗ್ಯರಾಗಿರಬೇಕು.

೧೯. ೧೮೯೧ ನೇ ಇಸವಿಯ ಮೇ ತಿಂಗಳ ೨೮ ನೇ ತಾರೀಖ
೧೦೪೯ನೇ ನಂಬರದ ಸರಕಾರದ ಠರಾವಿನಂತೆ ಪೆನ್‌ಶನಿಗೆ ಯೋಗ್ಯವಾ
ಸಂಬಳವುಳ್ಳ ಶಿಕ್ಷಕರು ತಮ್ಮ ಮೇಲಧಿಕಾರಿಗಳ ಅಪ್ಪಣೆ ಪಡೆದುಕೊಂಡ

ಟ್ರೇನಿಂಗ ಕಾಲೇಜದಲ್ಲಿ ಅಭ್ಯಾಸಕ್ಕೆ ಇದ್ದರೆ ಅಲ್ಲಿ ಅವರಿಗೆ ಸಂಬಳ ಬಗಲಿ ಸಿಗದೆ ಇರಲಿ, ಅವರು ಕಾಲೇಜದಲ್ಲಿ ಇದ್ದ ಕಾಲವು ಪೆನ್‌ಶನಿಗೆ ಯೋಗ್ಯವಾದ ಕಾಲವೆಂದು ಎಣಿಸಲ್ಪಡುವದು.

ಪರಿಶಿಷ್ಟ (ಅ). [ನಿಯಮ ೫.]

ಸ್ಟ್ಯಾಂಪು.

ರೂ. ೧– ೮– ೦

ಸನ್ ೧೯ ನೇ ಇಸವಿಯ ತಿಂಗಳ ನೇ

ತಾರೀಖಿಗೆ ಮೊದಲನೇ ಭಾಗದ ಸಂಬಂಧದಿಂದ

ಈತನಿಗೂ ಎರಡನೇ ಭಾಗದ ಸಂಬಂಧದಿಂದ

ದಕ್ಷಿಣ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬರಿಗೂ ಅದ ಕರಾರು.

ನಾನು ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ನೇಮಕವಾದ ಸಂಬಳಗಳ ಇಯತ್ತೆಗಳಿಗೂ ನಿಯಮಗಳಿಗೂ ಅನುಸರಿಸಿ ನನಗೆ ಕೊಟ್ಟ ಸಂಬಳಕ್ಕೆ ಬದಲಾಗಿ ನಾನು ಧಾರವಾಡ ಗಂಡಸರ ಟ್ರೇನಿಂಗ ಕಾಲೇಜದ ನಿಯಮಗಳನ್ನು ಪಾಲಿಸುವದಕ್ಕೂ ದಕ್ಷಿಣಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬರು ಇಟ್ಟಷ್ಟು ದಿವಸಗಳ ವರೆಗೆ ಅಥವಾ ಅವಶ್ಯವಾದ ಸರ್ಟಿಫಿಕೇಟದ ಪರೀಕ್ಷೆ ಇಳಿಯುವವರೆಗೆ ಟ್ರೇನಿಂಗ ಕಾಲೇಜದಲ್ಲಿರುವದಕ್ಕೂ ಮುಂದೆ ನಾನು ಟ್ರೇನಿಂಗ ಕಾಲೇಜದಲ್ಲಿದ್ದಷ್ಟು ದಿವಸಗಳ ಇಮ್ಮಡಿಗಿಂತ ಕಡಿಮೆ ಇಲ್ಲದಷ್ಟು ದಿವಸಗಳ ವರೆಗೆ ಅಧ್ಯಾಪಕನಾಗಿ ವಿದ್ಯಾಖಾತೆಯಲ್ಲಿ ಕೆಲಸಮಾಡಲಿಕ್ಕೂ ನನಗೆ ಒಪ್ಪಿಸಿದ ಎಲ್ಲ ಕೆಲಸವನ್ನು ಸದರ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬರಿಗೆ ಸಮಾಧಾನವಾಗುವಂತೆ ಮಾಡಲಿಕ್ಕೂ ಈ ಲೇಖದಿಂದ ಒಪ್ಪಿಕೊಳ್ಳುತ್ತೇನೆ. ಈ ಕರಾರಿಗೆ ನಾನು ಯಾವದಾದರೂ ರೀತಿಯಿಂದ ಭಂಗತಂದರೆ ನನಗೆ ಒಟ್ಟಿಗೆ ಕೊಟ್ಟ ಸಂಬಳಕ್ಕೆ ಸರಿಯಾದ ರಕಮನ್ನು ನಾನು ಸರಕಾರಕ್ಕೆ ಕೊಡಲಿಕ್ಕೆ ಒಪ್ಪಿಕೊಳ್ಳುತ್ತೇನೆ. ಈ ಹಣವನ್ನು ನನ್ನ ಸಲುವಾಗಿ ಅದ ಖರ್ಚು ಹಾಗೂ ಲುಕಸಾನದ ಬಗ್ಗೆ ಎಂದು ತಿಳಿಯತಕ್ಕದ್ದೇ ಹೊರತು ದಂಡವೆಂದು ತಿಳಿಯಲಾಗದು. ಮತ್ತು ನಾವು

ಜಾವಿಾನ ಪತ್ರ ಬರಕೊಡುವದೇನಂದರೆ–ಸದರಿ
ಈತನು ಮೇಲೆ ಬರಕೊಟ್ಟ ಯಾವತ್ತು ಕರಾರುಗಳಂತೆ ನಡೆಯುವನು
ಒಂದು ವೇಳೆ ಅವನು ಆ ಕರಾರುಗಳಂತೆ ನಡಕೊಳ್ಳುವದಕ್ಕೆ ತಪ್ಪಿದ
ನಾವಿಬ್ಬರು ಕೂಡಿ ಹಾಗೂ ಬೇರೆ ಬೇರೆಯಾಗಿ ಸರಕಾರಕ್ಕೆ ಮೇಲೆ ಕಾಣ
ಸಿದ ರಕಮುಗಳನ್ನು ಕೊಡಲಿಕ್ಕೆ ಈ ಲೇಖದಿಂದ ಒಪ್ಪಿಕೊಳ್ಳುತ್ತೇವೆ.
ಮತ್ತು ದಕ್ಷಿಣಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರನಾದ
ನಾನು ಸದರೀ ಈತನು ವಿದ್ಯಾರ್ಥಿಯಾ
ಯಾಗಲಿ ಅಧ್ಯಾಪಕನಾಗಿಯಾಗಲಿ ಇರುವಾಗ ಈತನಿಗೆ ಸಲ್ಲತಕ್ಕ ಸಂಬ
ಳದ ಎಲ್ಲ ಹಣವನ್ನು ತಿಂಗತಿಂಗಳಿಗೆ ಕೊಡುವದಕ್ಕೆ ಸರಕಾರದ ತಫೆ
ನಿಂದ ಈ ಲೇಖನದ ಮೂಲಕವಾಗಿ ಒಪ್ಪಿಕೊಳ್ಳುತ್ತೇನೆ. ಆದರೆ ಗೊತ್ತು
ಪಡಿಸುವದೇನಂದರೆ–ನನಗೆ ಅವಶ್ಯತೋರಿದರೆ ಒಂದು ಅಥವಾ ಹೆಚ್ಚ
ತಿಂಗಳುಗಳಲ್ಲಿ ಸದರಿ ಈತನ ಸಂಬಳದಲ್ಲಿ ಸ್ವಲ್ಪ
ಭಾಗವನ್ನಾಗಲಿ ಎಲ್ಲ ಸಂಬಳವನ್ನಾಗಲಿ ಹಿಡಕೊಳ್ಳಲಿಕ್ಕೂ ಧಾರವಾ
ಟ್ರೇನಿಂಗಕಾಲೇಜದಿಂದ ಹೊರಗೆ ಹಾಕಲಿಕ್ಕೂ ವಿದ್ಯಾಖಾತೆಯಲ್ಲಿರು
ಕೆಲಸದಿಂದ ತೆಗೆಯಲಿಕ್ಕೂ ನನಗೆ ಇದ್ದ ಅಧಿಕಾರಕ್ಕೆ ಈ ಕರಾರಿನಿಂ
ಏನೂ ಬಾಧೆ ಬರಲಾರದು.

(ಸಹಿ) ....

ಸಾಕ್ಷಿಯವರ ಸಹಿ { ....
....

ಜಾವಿಾನದಾರರಸಹಿ { ....
....

ಸಾಕ್ಷೀದಾರರ ಸಹಿ { ....
....

(ಸಹಿ) ....

ಎಜ್ಯುಕೇಶನಲ್ ಇನ್‌ಸ್ಪೆಕ್ಟರ ದಕ್ಷಿಣಭಾಗ,

ಸಹಿ ನಜವಾದದ್ದಂಬ ಬಗ್ಗೆ ಸಾಕ್ಷಿ (ಸಹಿ) ....

ಕಾಶಿಷ್ಟ (ಬ) (ಹೊಸ ನಿಯಮ.)

ಅಭ್ಯಾಸಕ್ರಮವು.

ಮೊದಲನೇ ವರ್ಷದ ಅಭ್ಯಾಸವು

ಅವಶ್ಯವಾದ ವಿಷಯಗಳು.

೧. ಶಿಕ್ಷಣ ಪದ್ಧತಿ ಮತ್ತು ಶಾಲಾವ್ಯವಸ್ಥೆ— (ಅ) ಶಾಲಾವ್ಯವಸ್ಥೆ ಮತ್ತು ಶಿಕ್ಷಣ ಪದ್ಧತಿಯ ಸಾಮಾನ್ಯ ತತ್ವಗಳು ಹಾಗೂ ಕೂಲಂಕಷವಾಗಿ.

(ಬ) ದೇಶಭಾಷಾಶಾಲಾಧ್ಯಾಪಕರ ಕಾಯಿದೆಯೂ ಶಾಲೆಯ ಸಂಬಂಧದ ನಮೂನೆಗಳೂ ಪತ್ರಿಕೆಗಳೂ.

(ಕ) ದೇಶಭಾಷೆಯ ಶಾಲೆಯೊಳಗಿನ "ಶಿಕ್ಷಕರ ಬಗ್ಗೆ ಸೂಚನೆಗಳು."

೨. ಕನ್ನಡ— (ಅ) ಗದ್ಯ:— ಯಾವದಾದರೊಂದು ಸುಲಭವಾದ ಮಾನ್ಯಗ್ರಂಥದೊಳಗಿನ ೪೦ ಪುಟಗಳು.

(ಬ) ಪದ್ಯ:— ಮುಂಜೂರಾದ ಯಾವದಾದರೊಂದು ಅಥವಾ ಹಲವು ಗ್ರಂಥಗಳೊಳಗಿನ ೧೦೦ ಪದ್ಯಗಳು. ೩೦೦ ಸಾಲುಗಳನ್ನು ಬಾಯಿಪಾಠ ಹೇಳುವದು.

(ಕ) ವ್ಯಾಕರಣ:— ನುಡಿಗಟ್ಟು ಮತ್ತು ದರ್ಪಣದೊಳಗಿನ ೫೦ ಸೂತ್ರಗಳು. ವ್ಯಾಕರಣ ನಿಯಮದಿಂದ ಸಾಧಿತವಾದ ಕೃದಂತ ಶಬ್ದಗಳು.

(ಡ) ನಿಬಂಧ.

(ಇ) ಅಕ್ಷರ ಬರಹವೂ ಕಿತ್ತೆಯನ್ನು ಹಾಕುವನೂ.

(ಫ) ಮೊದಲನೇ ೪ ಕ್ರಮಿಕ ಪುಸ್ತಕಗಳ ವಾಚನವೂ ಕವಿತೆಗಳನ್ನು ಬಾಯಿಪಾಠ ಹೇಳುವದೂ.

ಅಥವಾ, ಉರ್ದು (ಅ) ಗದ್ಯ:— ಲಾಹೋರದ ಅಂಜುಮನೆ ಹಿಮಾಯತೆ ಇಸಲಾಮ್ ಇವರಿಂದ ಪ್ರಕಟಿಸಲ್ಪಟ್ಟ ಮೊದಲನೇ ೪ ಉರ್ದು ವಾಚನ ಪುಸ್ತಕಗಳೂ ಮತ್ತೂ ಅಹಮ್ಮದಿಯ ಪೂರ್ವಾರ್ಧವೂ.

ಪದ್ಯ:— ಮಜವುಯಿ, ಸುಖುನ್‌ದ ಗನೇಭಾಗದ ೩೦೦ ದ್ವಿಪದಿಗಳೂ ೧೦೦ ಸಾಲುಗಳನ್ನು ಬಾಯಿಪಾಠ ಹೇಳುವದೂ.

(ಬ) ವ್ಯಾಕರಣ:— ಹೋಲರಾಯಿಡ ಸಾಹೇಬರ ಕವಾಯಿದೆ ಉರ್ದು ಎಂಬ ಪುಸ್ತಕದೊಳಗಿನ ವಾಕ್ಯ ಖಂಡವನ್ನು ಬಿಟ್ಟು ಉಳಿದ ಭಾಗವು.

(ಕ) ನಿಬಂಧ.

(ಡ) ಅಕ್ಷರ ಬರಹವೂ ಕಿತ್ತೆಯನ್ನೂ ಹಾಕುವದೂ.

(ಇ) ಉರ್ದು ಹಸ್ತ ಲೇಖಗಳನ್ನು ಓದುವದು.

ಸಂಸ್ಕೃತ:— ಸಂಸ್ಕೃತ ೧ನೇ ಪುಸ್ತಕದೊಳಗಿನ ೧ರಿಂದ ೨೭ ಪಾಠಗಳು.

ಅಥವಾ, ಪಾರ್ಸಿ:—ಹೋಲರಾಯಿಡ ಸಾಹೇಬರ ಪಾರ್ಸಿ ೧ನೇ ಪುಸ್ತಕ ಅಮದನ್ ನಾಮೆಯೂ.

ಅಥವಾ, ಉರ್ದು:—(ವಿದ್ಯದಲ್ಲಿ ಸಿಂದುಳಿದ ಜಾತಿಯವರ ಬ್ಯಾಸ್)

(ಅ) ಗದ್ಯ:— ೧ನೆಯ ಹಾಗೂ ೨ನೆಯ ಉರ್ದು ವಾಚನ ಪುಸ್ತಕಗಳು.

ಪದ್ಯ:— ಮೇಲೆ ಕಾಣಿಸಿದ ಪುಸ್ತಕಗಳೊಳಗಿನ ಕವಿತಾ ಪಾಠಗಳು.

(ಬ) ವ್ಯಾಕರಣ:— ನಾಮ, ಲಿಂಗ, ವಿಭಕ್ತಿ, ಮುಖ್ಯ ಕಾಲಗಳು ಮತ್ತು ಕ್ರಿಯಾಪದ ಇವುಗಳ ಸಾಮಾನ್ಯ ಜ್ಞಾನವು.

ಪಾಠದ ಪುಸ್ತಕ:— ಹೋಲರಾಯಿಡ ಸಾಹೇಬರ ಕವಾಯಿದೆ ಉರ್ದು.

(ಕ) ನಿಬಂಧ.

(ಡ) ಅಕ್ಷರ ಬರಹವೂ ಕಿತ್ತೆಯನ್ನು ಹಾಕುವದೂ.

೪. ಗಣಿತ— (ಅ) ಅಂಕಗಣಿತ:— ಬಾಯಿಲೆಕ್ಕ ಹಾಗೂ ಹಲಿಗೆಯ ಮೇಲಿನ ಲೆಕ್ಕ, ಠೇವು, ವಿಮೆ, ಶಾತಪ್ರಕರಣ, ಮೂಲಪ್ರಕರಣ, ಸಂಖ್ಯಾ ಲೇಖನ ಪದ್ಧತಿ, ಶ್ರೇಢಿಗಳು ಇವುಗಳ ಹೊರ್ತು ಉಳಿದ ಎಲ್ಲ ವಿಷಯಗಳ ಉಪಪತ್ತಿಯು.

(ಬ) ಬೀಜಗಣಿತ:– ಪೂರ್ಣರಾಶಿಗಳ ಬೇರೀಜು, ವಜಾಬಾಕಿ, ಗುಣಾಕಾರ, ಭಾಗಾಕಾರಗಳು.

(ಕ) ಭೂಮಿತಿ–(ಬ) ಪರಿಶಿಷ್ಟದ(ಅ) ಪಟ್ಟಿಯಲ್ಲಿ ವಿವರಿಸಿದಂತೆ.

೫. ಇತಿಹಾಸವೂ, ಭೂಗೋಲವೂ

(ಅ) ಹಿಂದುಸ್ತಾನದ ಇತಿಹಾಸವು, ಮುಸಲ್ಮಾನರ ಹಾಗೂ ಮಹಾರಾಷ್ಟ್ರರ ಅಳಿಕೆಯೂ, ಕರ್ನಾಟಕದ ಇತಿಹಾಸದ ವಿಶೇಷ ಜ್ಞಾನವೂ, ಸರಕಾರದ ರಾಜ್ಯಪದ್ಧತಿಯ ಕೆಲವು ಮಾಹಿತಿಯೂ.

(ಬ) ಹಿಂದುಸ್ತಾನದ ಹಾಗು ಏಶಿಯಾ ಖಂಡದ ವಿಶೇಷ ವರ್ಣನೆಯು, ಮತ್ತು ಪ್ರಾಕೃತಿಕ ಭೂಗೋಲವು. ಪೃಥ್ವಿಯೂ ಅದರ ಆಕಾರವೂ ಪರಿಮಾಣವೂ ಗತಿಗಳೂ.

(ಕ) ಹಿಂದುಸ್ತಾನದ ನಕಾಶೆಯನ್ನು ರಾಜಕೀಯ ವಿಭಾಗಗಳ ಸಹಿತ ತೆಗೆಯುವದು.

೬. ಶಾಸ್ತ್ರೀಯ ವಿಷಯ–(ಅ) ಬಾಲ್ಫರ ಸ್ಟೂಅರ್ಟ ಸಾಹೇಬರ "ಪದಾರ್ಥ ವಿಜ್ಞಾನ ಶಾಸ್ತ್ರದ ಮೂಲತತ್ವಗಳು" ಎಂಬ ಪುಸ್ತಕದಲ್ಲಿರುವಷ್ಟು; ಅಂದರೆ ಪದಾರ್ಥದ ಸಾಮಾನ್ಯ ಧರ್ಮಗಳು, ಉಷ್ಣತೆ, ಪ್ರಕಾಶ, ವಿದ್ಯುಲ್ಲತೆ.

(ಬ) ೨–೪ ಕ್ರಮಿಕ ಪುಸ್ತಕಗಳೊಳಗಿನ ಶಾಸ್ತ್ರೀಯ ಪಾಠಗಳು.

೭. ಚಿತ್ರಕಲೆ–(೧) ಸೂಚಿತ ವಸ್ತುಪಾಠಗಳ ಯಾದಿಯಲ್ಲಿ ಹೇಳಿದ ಮಾದರಿಯ ಬಳಿಕೆಯೊಳಗಿನ ಸೃಷ್ಟಪದಾರ್ಥಗಳ ಹಾಗೂ ಕೃತ್ರಿಮ ಪದಾರ್ಥಗಳ ಚಿತ್ರಗಳನ್ನು ಕರೆಹಲಿಗೆಯ ಮೇಲೆ ತೆಗೆಯುವದು.

(೨) ಮೇಲೆ ಹೇಳಿದ ಚಿತ್ರಗಳನ್ನು ಕಾಗದದ ಮೇಲೆ ವೇನ್ಸಿಲಿನಿಂದಲೂ ಮಸಿಯಿಂದಲೂ ತೆಗೆಯುವದು.

ಸೂಚನೆ:– ಮಸಿಯಿಂದ ಚಿತ್ರಗಳನ್ನು ತೆಗೆಯುವ ಪೂರ್ವದಲ್ಲಿ ಸೀಸಪೇನಿನಿಂದ ತೆಗೆಯುವ ರೂಢಿಯನ್ನು ಇಡಬೇಕು.

(೩) ಇತಿಹಾಸ ಭೂಗೋಲ ಪಾಠಗಳನ್ನು ಸ್ಪಷ್ಟೀಕರಿಸುವದಕ್ಕಾಗಿ ನಕಾಶೆಗಳನ್ನು ತೆಗೆಯುವದು.

(೪) ರೂಲಪಟ್ಟಿ, ತ್ರಿಕೋಣಪಟ್ಟಿ, ಫೂಟಕಟ್ಟಗೆ, ಮತ್ತು ನಿಭಾಜಕ (ಕಂಪಾಸ) ಮುಂತಾದ ಚಿತ್ರ ತೆಗೆಯುವ ಸುಲಭವಾದ ಯಂತ್ರಗಳ ಉಪಯೋಗವನ್ನು ಮಾಡಲಿಕ್ಕೆ ಕಲಿಯುವದು. ಬಾಗಿಲ, ಪೆಟ್ಟಿಗೆ, ಕಿಟಕಿ, ಮೇಜು ಮುಂತಾದ ಸುಲಭ ವಸ್ತುಗಳನ್ನು ಪ್ರತ್ಯಕ್ಷವಾಗಿ ಅಳೆಯಲಿಕ್ಕೆ ಕಲಿಯುವದೂ ಬರೇ ನೋಡಿ ಅಜಮಾಸಿನಿಂದ ಅವುಗಳ ಅಳತೆಗಳನ್ನೂ ಪ್ರಮಾಣಗಳನ್ನೂ ಹೇಳಲಿಕ್ಕೆ ಕಲಿಯುವದೂ.

ಸೂಚನೆ:—೧ನೇ ೩ನೇ ೫ನೇ ಸದರಿನ ವಿಷಯಗಳ ಆಕೃತಿಗಳನ್ನು ಮೇಲಿಂದ ಮೇಲೆ ನೆನಪಿನಿಂದ ತೆಗೆಯುವ ರೂಢಿಯನ್ನು ಮಾಡಿಸಬೇಕು.

೬. ಕಸರತು. ಲೋಡು—ಮಲಕಂಬ—ದಾಂಡಗಳ ಸುಲಭ ಕೃತಿಗಳು, ಜಿಗಿಯುವದು, ಓಡುವದು, ಮತ್ತು ಶಾಲೆಯ ಕವಾಯಿತು.

೯. ಕೃಷಿಕರ್ಮ:—ಕೃಷಿಕರ್ಮದ ೧ನೇ ಪುಸ್ತಕ ಪೂರಾ, ಹಾಗೂ ೨ನೇ ಪುಸ್ತಕದ ಅರ್ಧ.

ಐಚ್ಛಿಕ ವಿಷಯವು.

[೧೨ನೇ ಮತ್ತು ೧೩ನೇ ನಿಯಮಗಳು.]

ಡಾಕ್ಟರ ಥಾಮ್ಸನ್ ಸಾಹೇಬರು ಬರೆದ "ಹಿಂದುಸ್ತಾನದ ಶಾಲೆಗಳ ಬಗ್ಗೆ ಕೈಗಾರಿಕೆಯ ಶಿಕ್ಷಣ" (ಮ್ಯಾನ್ಯುಅಲ್ ಟ್ರೇನಿಂಗ ಫಾರ ಇಂಡಿಯನ್ ಸ್ಕೂಲ್ಸ) ಎಂಬ ಪುಸ್ತಕದೊಳಗಿನ ೩—೬ ಪಾಠಗಳು.

ಎರಡನೇ ವರ್ಷದ ಅಭ್ಯಾಸವು.

೧. ಶಿಕ್ಷಣಪದ್ಧತಿ ಶಾಲಾವ್ಯವಸ್ಥೆ— (ಅ) ೧ನೇ ವರ್ಷದ ವಿಷಯಗಳ ವಿಶೇಷ ಜ್ಞಾನವು.
(ಬ) ಇಂದ್ರಿಯಗಳನ್ನೂ ಸ್ಮರಣಶಕ್ತಿಯನ್ನೂ ತಿದ್ದುವದು; ಮತ್ತು ಬಾಲಕರ ಜ್ಞಾನೇಂದ್ರಿಯಗಳ ಬೆಳವಣಿಗೆಯ ಕ್ರಮವು.

೨. ಕನ್ನಡ–(ಅ) ಗದ್ಯ:– ಮಂಜೂರಾದ ಯಾವದಾದರೊಂದು ಪುಸ್ತಕದ ೪೦ ಪುಟಗಳು.

(ಬ) ಪದ್ಯ:– ಮಂಜೂರಾದ ಯಾವದಾದರೊಂದು ಅಥವಾ ಹೆಚ್ಚು ಗ್ರಂಥಗಳೊಳಗಿನ ೧೦೦ ಪದ್ಯಗಳು.

(ಕ) ವ್ಯಾಕರಣ:–ದರ್ಪಣದ ೫೦–೧೫೦ ಸೂತ್ರಗಳ ಸಾಮಾನ್ಯ ಜ್ಞಾನವು. ವ್ಯಾಕರಣ ನಿಯಮದಿಂದ ಸಾಧಿತವಾದ ತದ್ಧಿತ ಶಬ್ದಗಳು. ಕನ್ನಡ ವಾಕ್ಯವೃತ್ತಗಳು.

(ಡ) ನಿಬಂಧ ಮತ್ತು ಅಕ್ಷರ ಬರಹ.

ಅಥವಾ ಉರ್ದು–

(ಅ) ಗದ್ಯ:– (ಪಂಜಾಬ ಟ್ರೇನಿಂಗ ಕಾಲೇಜದಲ್ಲಿ ಹಚ್ಚಿದ) "ನಿಸಾಬೆ ಉರ್ದು" ಎಂಬ ಪುಸ್ತಕದ ೧–೧೩೮ ಪುಟಗಳು.

ಪದ್ಯ:– ಮೆಜಮುಯೆ, ಸುಖುನ್‌ದ ೧ನೆಯ ಭಾಗದ ೫೦ ದ್ವಿಪದಿಗಳೂ ೧೦೦ ಸಾಲುಗಳನ್ನು ಬಾಯಿಪಾಠ ಹೇಳುವದೂ.

(ಬ) ವ್ಯಾಕರಣ:– ಹೋಲ್‌ರಾಯಿಡ ಸಾಹೇಬರ ಕವಾಯಿದೆ ಉರ್ದೂ ಪೂರಾ; ಮತ್ತು ೧ನೇ ಹಾಗು ೨ನೇ ವರ್ಷಗಳಲ್ಲಿ ಕಲಿತ ಕವಿತೆಗಳ ಛಂದಸ್ಸಿನ ಲಕ್ಷಣಗಳು.

(ಕ) ನಿಬಂಧ.

(ಡ) ಅಕ್ಷರ ಬರಹವೂ ಕಿತ್ತೆಯನ್ನು ಹಾಕುವದೂ.

೩. ಸಂಸ್ಕೃತ– ೧ನೇ ಪುಸ್ತಕ ಪೂರಾ. ೨ನೇ ಪುಸ್ತಕದ ೧–೧೨ ಪಾಠಗಳು.

೪ನೇ ತಂತ್ರ ಅಥವಾ ಅದಕ್ಕೆ ಸರಿಯಾದ ಬೇರೊಂದು ಪುಸ್ತಕದ ೨೦ ಪುಟಗಳು.

ಅಥವಾ ಪಾರ್ಸಿ:– ಬೋಸ್ತಾನದ ೧ನೇ ಅಧ್ಯಾಯದೊಳಗಿನ ೫೦ ದ್ವಿಪದಿಗಳು, ಗುಲಿಸ್ತಾನದ ೧ನೇ ಅಧ್ಯಾಯವನ್ನು, ಮತ್ತು ನಿಸಾರಲಿಯು ಕವಾಯಿದೆ ಫಾರ್ಸಿಯ ಮೊದಲಿನ ೧೮ ಪುಟಗಳು.

ಅಥವಾ ಉರ್ದು:– (ವಿದ್ಯಾರ್ಥಿಯು ಹಿಂದುಳಿದ ಜಾತಿಯವನಾಗಿದ್ದಲ್ಲಿ)

(ಅ) ಗದ್ಯ– ೩ನೇ ಹಾಗೂ ೪ನೇ ಉರ್ದು ವಾಚನ ಪುಸ್ತಕಗಳು.

ಪದ್ಯ– ೩ನೇ ವಾಚನ ಪುಸ್ತಕದೊಳಗಿನ ೧೦೦ ದ್ವಿದಿಗಳು.

(ಬ) ವ್ಯಾಕರಣ–(ಪಂಜಾಬ ಗ್ರಂಥಮಾಲೆಯ) "ಸರಫ್ ಓ ನಹವೆ ಉರ್ದು" ಎಂಬ ಪುಸ್ತಕ ಪೂರ್ವಾರ್ಧವು.

(ಕ) ನಿಬಂಧ.

(ಡ) ಅಕ್ಷರಬರಹವೂ ಕಿತ್ತೆಯನ್ನು ಹಾಕುವದೂ.

೨. **ಗಣಿತ.** (ಅ) ಅಂಕಗಣಿತ ಪೂರಾ. ಸಂಖ್ಯಾಲೇಖನಪದ್ಧತಿ ಮತ್ತ ಶ್ರೇಢಿಗಳು, ಇವುಗಳ ಹೊರ್ತು ಉಳಿದ ಎಲ್ಲ ವಿಷಯಗಳ ಉಪಪತ್ತಿಯು.

(ಬ) ಬೀಜಗಣಿತ– ಸುಲಭವಾದ ಅವಯವಗಳನ್ನು ತೆಗೆಯವದು, ಮಹತ್ತಮ ಸಾಧಾರಣ ಭಾಜಕ, ಲಘುತ್ತಮ ಸಾಧಾರಣ ಭಾಜ್ಯ, ಅಪೂರ್ಣರಾಶಿಗಳು, ಸುಲಭವಾದ ಏಕವರ್ಣ ಸಮೀಕರಣವು.

(ಕ) ಭೂಮಿತಿ– (ಬ) ಪರಿಶಿಷ್ಟದ (ಅ) ಪಟ್ಟಿಯಲ್ಲಿ ವಿವರಿಸಿದಂತೆ.

(ಡ) ರೇಖೆಗಳ ಹಾಗೂ ಕ್ಷೇತ್ರಗಳ ಮಹತ್ವಮಾಪನಪೆ.

೩. ಇತಿಹಾಸವೂ ಭೂಗೋಲವೂ } (ಅ) ಇತಿಹಾಸ—೧೯೦೦ ವರ್ಷದಲ್ಲಿ ಆದ ವಿಷಯಗಳ ಪುನರಾವೃತ್ತಿಯು ಮತ್ತು ಬ್ರಿಟಿಶರ ಆಳಿಕೆಯು.

(ಬ) ಭೂಗೋಲ:– ಯುರೋಪ ಮತ್ತು ಅಫ್ರಿಕ ಖಂಡಗಳ ವರ್ಣನೆಯು.

ಪ್ರಾಕೃತಿಕಭೂಗೋಲ:– ನೆಲ ಮತ್ತು ನೀರು ಕೃತ್ರಿಮ ಭೂಗೋಲದ ಉಪಯೋಗವು.

(ಕ) ನಕಾಶೆ ತೆಗೆಯುವದು. ೧೯೦೦ನೆಯ ವರ್ಷದ ಪುನರಾವೃತ್ತಿಯು.

೬. ಶಾಸ್ತ್ರೀಯ ವಿಷಯವು (ಅ) ರಸಾಯನಶಾಸ್ತ್ರ:–ರಾಸ್ಕೋ ಸಾಹೇಬರ ಪ್ರಥಮಪುಸ್ತಕದಲ್ಲಿ (ಪ್ರಾಯೋಗದಲ್ಲಿ) ಹೇಳಿದಷ್ಟು.

(ಬ) ಕ್ರಮಿಕ ೫ನೇ ಮತ್ತು ೬ನೇ ಪುಸ್ತಕಗಳೊಳಗಿನ ಶಾಸ್ತ್ರೀಯ ಪಾಠಗಳು.

೭. ಚಿತ್ರಕಲೆ (ಅ) ೧ನೇ ವರ್ಷದ ವಿಷಯಗಳನ್ನು ಹೆಚ್ಚು ಕಠಿಣವಾದ ಉದಾಹರಣೆಗಳನ್ನು ತೆಗೆದುಕೊಂಡು ಮುಂದೆ ಸಾಗಿಸುವದು.

(ಬ) ೧ನೇ ವರ್ಷದ ಬಗ್ಗೆ ಸೂಚಿಸಿದ ವಸ್ತುಗಳಿಗೆ ಸಮಾನವಾದ ಸೃಷ್ಟ ಹಾಗೂ ಕೃತ್ರಿಮ ವಸ್ತುಗಳ ಚಿತ್ರಗಳನ್ನು ಬಣ್ಣದ ಖಡುಗಳಿಂದಲೂ ಕುಂಚದಿಂದಲೂ ತೆಗೆಯುವದು.

(ಕ) ಸಿ. ಎಲ್. ಬನ್ಸ್ ಸಾಹೇಬರ ಪ್ರಾಥಮಿಕ ಚಿತ್ರಪಟುಗಳಲ್ಲಿರುವಂಥ ಸುಲಭ ಆಕೃತಿಗಳನ್ನು ಯಂತ್ರಗಳಿಂದ ತೆಗೆಯುವದು. (ಇದಕ್ಕೆ ಕೃತ್ಯ ಸಿದ್ಧಾಂತಗಳ ಸಹಾಯ ತೆಗೆದುಕೊಳ್ಳುವ ಕಾರಣವಿಲ್ಲ.) ಮತ್ತು ಪ್ರಮಾಣದಿಂದ ಚಿತ್ರಗಳನ್ನು ತೆಗೆಯುವದು.

ಸೂಚನೆ:– ೧ನೇ ವರ್ಷದಲ್ಲಿ ಹೇಳಿದಂತೆ ನೆನಪಿನಿಂದ ಚಿತ್ರಗಳನ್ನು ತೆಗೆಯುವದು.

೮. ಕಸರತು:– ೧ನೇ ವರ್ಷದ ಅಭ್ಯಾಸದ ಹೊರ್ತು ಪ್ಯಾರಲೆಲ್‌ಬಾರ, ಹಾರೀಝಾಂಟಲ್ ಬಾರಗಳ ಮೇಲಿನ ಕಸರತು ಮತ್ತು ಕವಾಯಿತು.

೯. ಕೃಷಿಕರ್ಮ:–೫ನೇಪುಸ್ತಕದ ಉತ್ತರಾರ್ಧವು ಹಾಗೂ ೬ನೇಪುಸ್ತಕವು

ಐಚ್ಛಿಕ ವಿಷಯವು.

[೧೨ನೇ ಮತ್ತು ೧೫ನೇ ನಿಯಮವು.]

ಡಾಕ್ಟರ ಥಾಮ್ಸನ್ ಸಾಹೇಬರು ಬರೆದ "ಹಿಂದುಸ್ತಾನದ ಶಾಲೆಗಳಲ್ಲಿ ಬಗ್ಗೆ ಕೈಗಾರಿಕೆಯ ಶಿಕ್ಷಣ" ಎಂಬ ಪುಸ್ತಕದ ೭–೧೬ ಪೃಷ್ಠಗಳು.

ಮೂರನೆಯ ವರ್ಷದ ಅಭ್ಯಾಸವು.

೧. ಶಿಕ್ಷಣಪದ್ಧತಿ ಮತ್ತು ಶಾಲಾವ್ಯವಸ್ಥೆ—(ಅ) ಶಾಲಾವ್ಯವಸ್ಥೆಯ ಮತ್ತು ಶಿಕ್ಷಣ ಪದ್ಧತಿಯ ತತ್ವಗಳ ಹಾಗೂ ರೂಢಿಯ ಪೂರ್ಣ ಜ್ಞಾನವು.

(ಬ) ಅನುಮಾನದ ಕ್ರಮವು, ಚಟಗಳ ಹಾಗೂ ನಡತೆಯ ಉತ್ಪತ್ತಿಯ ರೀತಿಯು, ನೀತಿ ಶಿಕ್ಷಣದ ತತ್ವಗಳು.

೨. ಕನ್ನಡ—(ಅ) ಗದ್ಯ:— ಮಂಜೂರಾದ ಯಾವದೊಂದು ಪುಸ್ತಕಗಳಿಂ ಪುಟಗಳು.

(ಬ) ಪದ್ಯ:— ಮಂಜೂರಾದ ಯಾವದಾದರೊಂದು ಅಥವ ಹೆಚ್ಚು ಪುಸ್ತಕಗಳೊಳಗಿನ ೧೦೦ ಪದ್ಯಗಳು ಮತ್ತು ಯಾವದಾದರೊಂದು ನಾಟಕದ ಎರಡು ಅಂಕಗಳು.

(ಕ) ವ್ಯಾಕರಣ:—ದರ್ಪಣದ ೧೫೨—೨೫೨ ಸೂತ್ರಗಳೂ, ಕನ್ನಡದಲ್ಲಿರುವ ಮುಖ್ಯ ಮಾತ್ರಾ ವೃತ್ತಗಳೂ ವರ್ಣವೃತ್ತಗಳೂ.

(ಡ) ನಿಬಂಧ ಮತ್ತು ಅಕ್ಷರ ಬರಹ.

ಅಥವಾ, ಉರ್ದು:—(ಪಂಜಾಬದಲ್ಲಿ ಪ್ರವೇಶ ಪರೀಕ್ಷೆಗೆ ಇಟ್ಟ) "ನಿಸಾಬೆ ಉರ್ದು" ಎಂಬ ಪುಸ್ತಕದ ೧೦೦ ಪುಟಗಳು.

(ಅ) ಗದ್ಯ:—

ಪದ್ಯ:— ಮುಜಮುಯೆ ಸುಖುನ್‌ದ ೨ನೇ ಭಾಗದ ೩೦೦ ದ್ವಿಪದಿಗಳು, ಮತ್ತು ಮಂಜೂರಾದ ಯಾವದೊಂದು ಪುಸ್ತಕದ ೨೦೦ ದ್ವಿಪದಿಗಳು. ಹಾಗೂ ಛಂದಸ್ಸು.

(ಬ) ವ್ಯಾಕರಣ:—ವಾಮುವ್ಯ ಪ್ರಾಂತದ ಗ್ರಂಥಮಾಲೆಯ ಕವಾಯಿದೆ ಉರ್ದು ವಿನ ೩ನೇ ಭಾಗವು.

(ಕ) ನಿಬಂಧ ಮತ್ತು ಅಕ್ಷರಬರಹ.

೩. ಸಂಸ್ಕೃತ:— (ಅ) ರಘುವಂಶದ ಅಥವಾ ೩ನೇ ಯಾವದಾದರೊಂದು ಶ್ರೇಷ್ಠ ಕಾವ್ಯದ ೧ ಸರ್ಗವು; ಮತ್ತು ಶಕುಂತಲಾ ನಾಟಕದ ೧ ಅಂಕವು.

(ಬ) ಸಂಸ್ಕೃತ ೨ನೇ ಪುಸ್ತಕದ ೨೧ ಪಾಠಗಳು.

ಅಥವಾ, ಪಾರ್ಸಿ:—(ಅ) ಸಿಕಂದರನಾಮೆಯ ೪೦೦ ಶ್ಲೋಕಗಳು.

(ಬ) ಅನ್ವಾರೆಸಹಿಲಿಯ ೯ನೆಯ ಅಧ್ಯಾಯವು.

(ಕ) ನಿಸ್ಸಾರ ಅಲಿಯ ಕವಾಯಿದೆ ಫಾರ್ಸಿಯ ೧ನೇ ಹಾಗೂ ೨ನೇ ಅಧ್ಯಾಯಗಳು.

(ಡ) ಸುಲಭ ವಾಕ್ಯಗಳನ್ನು ಫಾರ್ಸಿಯಲ್ಲಿ ಭಾಷಾಂತರ ಮಾಡುವದು.

ಅಥವಾ, ಉರ್ದು:— (ವಿದ್ಯಾರ್ಥಿಯಲ್ಲಿ ಹಿಂದುಳಿದ ಜಾತಿಯವರ ಬಗ್ಗೆ)

(ಅ) ಗದ್ಯ:—(ಪಂಜಾಬ ಟ್ರೇನಿಂಗ ಕಾಲೇಜದಲ್ಲಿ ಹಚ್ಚಿದ) "ನಿಸಾಬೆಉರ್ದು" ಎಂಬ ಪುಸ್ತಕದೊಳಗಿನ ೫೦ ಪುಟಗಳು.

ಪದ್ಯ:—ಮೆಜಮುಯೆ ಸುಖುನ್‌ದ ೧ನೇಭಾಗ ಗದ ೧೦೦ ದ್ವಿಪದಿಗಳು.

(ಬ) ವ್ಯಾಕರಣ:—(ಪಂಜಾಬ ಗ್ರಂಥಮಾಲೆಯ) ಸರಫ್-ವೆ-ನಹೆವೆ ಉರ್ದು ಪೂರಾ.

(ಕ) ನಿಬಂಧ ಮತ್ತು ಅಕ್ಷರ ಬರಹ.

೪. ಗಣಿತ:—(ಅ) ಅಂಕಗಣಿತ ಪೂರಾ.

(ಬ) ಬೀಜಗಣಿತ:—ವರ್ಗಸವಿಾಕರಣ ಪೂರಾ. ಏಕವರ್ಣ ಸವಿಾಕರಣದ ಸುಲಭ ಪ್ರಶ್ನೆಗಳು, ಹಾಗೂ ದ್ವಿವರ್ಣ ಸವಿಾಕರಣವು.

(ಕ) ಭೂಮಿತಿ:—(ಬ) ಪರಿಶಿಷ್ಟದ (ಅ) ಪಟ್ಟಿಯಲ್ಲಿ ಹೇಳಿದಂತೆ.

(ಡ) ಘನ ಪದಾರ್ಥಗಳ ಮಹತ್ವಮಾಪನವೂ ಸರಪಳಿಯಿಂದ ಭೂಮಿಯನ್ನು ಅಳೆಯುವದೂ.

೫. ಇತಿಹಾಸ ಮತ್ತು ಭೂಗೋಲ } (ಅ) ಹಿಂದುಸ್ತಾನದ ಇತಿಹಾಸದ ಪುನರಾವೃತ್ತಿಯೂ ಪ್ರಾಚೀನಕಾಲದ ಇತಿಹಾಸವೂ ಇಂಗ್ಲಂಡದ ಇತಿಹಾಸವೂ, ಇವೆರಡೂ ದೇಶಗಳ ಪರಸ್ಪರ ಸಂಬಂಧದ ವಿಶೇಷಮಾಹಿತಿ ಸಹಿತ.

(ಬ) ಭೂಗೋಲ:—ಪೃಥ್ವಿಯ ಭೂಗೋಲದ ಸಾಧಾರಣ ಜ್ಞಾನವೂ ಬ್ರಿಟಿಶ್ ಸಾಮ್ರಾಜ್ಯದ ವಿಶೇಷ ಜ್ಞಾನವೂ.

ಪ್ರಾಕೃತಿಕ ಭೂಗೋಲ:—ವಾತಾವರಣ.

(ಕ) ಇಂಗ್ಲಂಡನ ನಕಾಶೆಯನ್ನು ತೆಗೆಯುವದು.

೬. ಶಾಸ್ತ್ರೀಯ ವಿಷಯವು (ಅ) ಜ್ಯೋತಿಷಶಾಸ್ತ್ರವು:—ಲಾಕೆಯರ ಸಾಹೇಬರ ಪ್ರಥಮ ಪುಸ್ತಕವು (ಪ್ರಾಯವುರ).

(ಬ) ೩ನೇ ಪುಸ್ತಕದಲ್ಲಿರುವ ಶಾಸ್ತ್ರೀಯ ಪಾಠಗಳು.

೭. ಚಿತ್ರಕಲೆ ೧. ಕರೇಹಲಿಗೆಯ ಮೇಲೆ ಪೆನ್ಸಿಲ್ ಪೇನುಗಳಿಂದ ಹಾಗೂ ಬಣ್ಣಗಳಿಂದ ಹೆಚ್ಚು ಕಠಿಣವಾದ ಪದಾರ್ಥಗಳ ಚಿತ್ರಗಳನ್ನು ತೆಗೆಯುವದು.

೨. ಸಿ. ಎಲ್. ಬನ್ಸ್ ಸಾಹೇಬರ ಮಧ್ಯಮ ತರಗತಿಯ ಚಿತ್ರಪಟಗಳಲ್ಲಿ ತೋರಿಸಿದಂತೆ ಕೃತ್ಯಸಿದ್ಧಾಂತಗಳನ್ನು ಹಾಗೂ ಆ ಸಿದ್ಧಾಂತಗಳ ಸಹಾಯದಿಂದ (ಡಿಝೂಯಿನ್) ಕಲ್ಪನಿಕ ಚಿತ್ರಗಳನ್ನು ತೆಗೆಯುವದು.

೩. ನಿದರ್ಶನಾತ್ಮಕ ಚಿತ್ರಗಳು*:— ಶಾಲೆಯೊಳಗಿನ ಪಾಠಗಳಲ್ಲಿರುವ ಸುಲಭ ನೋಟಗಳ ಹಾಗೂ ಸಂಗತಿಗಳ ಚಿತ್ರಗಳನ್ನು ತೆಗೆಯುವದು.

ಸೂಚನೆ:— ಎರಡನೇ ವರ್ಷದಂತೆ ನೆನಪಿನಿಂದ ಚಿತ್ರತೆಗೆಯುವದು.

೮. ಕಸರತು:— ಡ್ರಿಲ್ ಸಹಿತ ಕಸರತು ಪೂರಾ.

೯. ಕೃಷಿಕರ್ಮ:— ೧ನೇ ೨ನೇ ೩ನೇ ಪುಸ್ತಕಗಳಲ್ಲಿ ಹೇಳಿದಂತೆ ಕೃಷಿಕರ್ಮದ ಮೂಲತತ್ವಗಳು.

ಐಚ್ಛಿಕ ವಿಷಯವು

[೧೨ನೇ ಮತ್ತು ೧೫ನೇ ನಿಯಮಗಳು]

(ಅ) ಡಾಕ್ಟರ ಥಾಮ್ಸನ್ ಸಾಹೇಬರು ಬರೆದ "ಸಿಂದುಸ್ತಾನದ ಶಾಲೆಗಳ ಬಗ್ಗೆ ಕೈಗಾರಿಕೆಯ ಶಿಕ್ಷಣ" ಎಂಬ ಪುಸ್ತಕದ ೧೭—೨೪ ಪಾಠಗಳು.

(ಬ) ಉಡ್‌ವರ್ಡ್ ಸಾಹೇಬರು ಬರೆದ "ಕೈಗಾರಿಕೆಯ ಶಿಕ್ಷಣ" ಎಂಬ ಪುಸ್ತಕದಲ್ಲಿರುವ ಕಂಬಾರಿಕೆಯ ಆಕೃತಿಗಳು ೬೯—೭೯.

---

* ಈ ಮೂರನೇ ಭಾಗದ ವಿಷಯವು ಚಿತ್ರಕಲೆಯಲ್ಲಿ ವಿಶೇಷ ಗತಿಯುಳ್ಳ ವಿದ್ಯಾರ್ಥಿಗಳ ಸಲುವಾಗಿ ಸೂಚಿಸಲ್ಪಟ್ಟಿರುವದು; ಮತ್ತು ಬಹುತರವಾಗಿ ಎಲ್ಲ ವಿದ್ಯಾರ್ಥಿಗಳು ಅದನ್ನು ಅವಶ್ಯವಾಗಿ ಕಲಿಯಬೇಕಾಗಲಿಕ್ಕಿಲ್ಲ.

ಸರ್ಟಿಫಿಕೇಟ ಪರೀಕ್ಷೆಯ ವಿವರಣೆಯು.

(೪ನೆಯ ಮತ್ತು ೯ನೆಯ ನಿಯಮಗಳು.)

ಪರೀಕ್ಷೆಯ ವಿಷಯಗಳು.	ಒಟ್ಟು ಗುಣಗಳು.		
	೧ನೇ ವರ್ಷ	೨ನೇ ವರ್ಷ	೩ನೇ ವರ್ಷ
೧. ಕಾಲಾ ವ್ಯವಸ್ಥೆಯು.			
ಅ. ಲೇಖೀ ಪರೀಕ್ಷೆ	೧೦೦	೧೦೦	೧೦೦
ಮೊದಲನೇ ವರ್ಷದವರಿಗೆ ೧ರಿಂದ ೩ ಇಯತ್ತೆಗಳು			
ಎರಡನೆಯ ,, ೧ರಿಂದ ೫ ,, ...	೧೦೦	೧೦೦	೧೦೦
ಬಿನ್ ಇಯತ್ತೆಯೂ ...			
೩ನೆಯ ,, ಬೇಕಾದವರ್ಗ... ...			
ಒಟ್ಟು ಗುಣಗಳು ...	೨೦೦	೨೦೦	೨೦೦
೨. ದೇಶಭಾಷೆ (ಕನ್ನಡ ಅಥವಾ ಉರ್ದು):—			
(ಲೇಖೀ) ಗದ್ಯಪದ್ಯಗಳ ಪುಸ್ತಕಗಳು	೩೦	೩೫	೩೫
(,,) ವ್ಯಾಕರಣ ಶಬ್ದವ್ಯುತ್ಪತ್ತಿಗಳು	೫೦	೩೫	೩೫
(,,) ನಿಬಂಧವೂ ಅಕ್ಷರವೂ	೫೦	೫೦	೫೦
ಓದುವದು ಮತ್ತು ಕವಿತೆ ಅನ್ನುವದು	೩೦	...	...
ಒಟ್ಟು ಗುಣಗಳು ...	೧೦೦	೧೦೦	೧೦೦
೩. ೨ನೆಯ ಭಾಷೆಯು.	೧೦೦	೧೦೦	೧೦೦
೪. ಗಣಿತ			
(ಕಾಗದ) ಅಂಕಗಣಿತ (ಲೇಖಿ ಮತ್ತು ತೋಂಡಿ)	೧೦೦	೫೦	೧೦೦
(,,) ಬೀಜಗಣಿತ	೫೦	೫೦	
(,,) ಭೂಮಿತಿ ಮತ್ತು ಪ್ರಹತ್ವಮಾಪನ ...	೫೦	೧೦೦	೧೦೦
ಒಟ್ಟು ಗುಣಗಳು ...	೨೦೦	೨೦೦	೨೦೦
೫. ಇತಿಹಾಸ ಭೂಗೋಲ (ಲೇಖೀ)	೧೦೦	೧೦೦	೧೦೦
೬. ಶಾಸ್ತ್ರೀಯ ವಿಷಯಗಳು	೧೦೦	೧೦೦	೧೦೦
೭ ಚಿತ್ರಕಲೆ	೧೦೦	೧೦೦	೧೦೦
೮. ಕಸರತ್ತು	೫೦	೫೦	೫೦
೯. ಕೃಷಿಕರ್ಮ	೫೦	೫೦	೫೦
ಎಲ್ಲ ಅವಶ್ಯ ವಿಷಯಗಳ ಒಟ್ಟು ಗುಣಗಳು.	೧೧೦೦	೧೧೦೦	೧೧೦೦

(ಬ) ಪರಿಶಿಷ್ಟದ (ಅ) ಪಟ್ಟಿಯು.

ಭೂಮಿತಿ.

೧ನೇ ವರ್ಷ.

ಚಿತ್ರತೆಗೆಯುವ ಯಂತ್ರಗಳ ಉಪಯೋಗವು.

(೧) ಇಂಚುಗಳು, ದಶಾಂಶ ಇಂಚುಗಳು, ಶತಾಂಶ ಮೊಟರಗಳು ಸಹಸ್ರಾಂಶ ಮೊಟರಗಳು, ಈ ವಿಭಾಗಗಳುಳ್ಳ ಅಳತೆಯ ಕಟ್ಟಗೆಯು.

೨. ಕಾಟಕೋನ ಪಟ್ಟಿಯು.

೩. ಕೋಣಮಾಪಕವು.

೪. ವಿಭಾಜಕವು (ಕಂಪಾಸು)
ರೇಖೆಗಳ, ಕೋಣಗಳ, ಹಾಗು ಕಂಸಗಳ ಅಳತೆಯು.
ಕಾಗದವನ್ನು ಮಡಿಚಿ ಸುಲಭ ಆಕೃತಿಗಳನ್ನು ಮಾಡುವದು.
ಕ್ಷೇತ್ರಾಕೃತಿಗಳ ಹೆಸರುಗಳೂ ವ್ಯಾಖ್ಯೆಗಳೂ.

ಕರ್ತವ್ಯಭಾಗ.

೧. ಕೊಟ್ಟ ಕೋಣಕ್ಕೆ ಸರಿಯಾದ ಕೋಣವನ್ನು ರಚಿಸುವದು.

೨. ಕೋಣಗಳನ್ನೂ ಕಂಸಗಳನ್ನೂ ಸರಳ ರೇಖೆಗಳನ್ನೂ ದ್ವಿಭಾಗಿಸುವದು.

೩. ಕೊಟ್ಟ ರೇಖೆಯಲ್ಲಿರುವ ಬಿಂದುವಿನಿಂದಲೂ ಅದರ ಹೊರಗಿರುವ ಬಿಂದುವಿನಿಂದಲೂ ಆ ರೇಖೆಗೆ ಲಂಬವನ್ನು ತೆಗೆಯುವದು.

೪. ಕೊಟ್ಟ ರೇಖೆಗೆ ಸಮಾಂತರವಾದ ರೇಖೆಗಳನ್ನು ತೆಗೆಯುವದು.

೫. ಕೆಳಗೆ ಹೇಳಿದ ಸಂಗತಿಗಳ ಆಧಾರದಿಂದ ತ್ರಿಕೋಣಗಳನ್ನು ರಚಿಸುವದು.

(೧) ಮೂರು ಭುಜಗಳು.

(೨) ಎರಡು ಕೋಣಗಳೂ ಅವುಗಳಿಗೆ ಹೊಂದಿದ ಭುಜವೂ.

(೩) ಎರಡು ಭುಜಗಳೂ ಅವುಗಳ ನಡುವಿನ ಕೋಣವೂ.

(೪) ಎರಡು ಕೋಣಗಳೂ ಅವುಗಳಲ್ಲಿ ಒಂದರ ಎದುರಿನ ಭುಜವೂ.

೬. ಕೊಟ್ಟ ರೇಖೆಯಲ್ಲಿ ಹಲವು ಸರಿಯಾದ ಭಾಗಗಳನ್ನು ಮಾಡುವದು.

ಔಪಪತ್ತಿಕ ಭಾಗ.

೧. ಒಂದು ಬಿಂದುವಿನ ಹತ್ತರ ಸರಳ ರೇಖೆಗಳಿಂದ ಆಗುವ ಕೋಣಗಳ ಸಂಬಂಧವು.

೨. ಸವಾಂತರ ರೇಖೆಗಳ ಧರ್ಮಗಳು.

೩. ತ್ರಿಕೋಣಗಳ ಧರ್ಮಗಳು.

೪. ಸವಾಂತರ ಭುಜ ಚತುಷ್ಕೋಣಗಳ ಧರ್ಮಗಳು.

೨ನೇ ವರ್ಷ.

ಮೊದಲನೇ ವರ್ಷದ ವಿಷಯಗಳೂ ಕೆಳಗೆ ಹೇಳಿದ ವಿಷಯಗಳೂ.

ಕರ್ತವ್ಯಭಾಗ.

೧. ಕೊಟ್ಟ ತ್ರಿಕೋಣಕ್ಕೆ ಇಲ್ಲವೆ ಸರಳ ರೇಖಾಕೃತಿಗೆ ಸರಿಯಾಗಿಯೂ ಕೊಟ್ಟ ಕೋಣಕ್ಕೆ ಸರಿಯಾದ ಕೋಣವುಳ್ಳದ್ದಾಗಿಯೂ ಇರುವ ಸವಾಂತರ ಭುಜ ಚೌಕೋಣವನ್ನು ರಚಿಸುವದು.

೨. ಕೊಟ್ಟ ವರ್ತುಲಕ್ಕೆ (ಅದರ ಪರಿಧಿದಲ್ಲಿ ಕೊಟ್ಟ ಬಿಂದುವಿನಿಂದ) ಸ್ಪರ್ಶ ರೇಖೆಯನ್ನು ತೆಗೆಯುವದು.

೩. ಕೊಟ್ಟ ತ್ರಿಕೋಣದೊಳಗೆ ಅಥವಾ ಅದರ ಸುತ್ತಲು ವರ್ತುಲವನ್ನು ತೆಗೆಯುವದು.

೪. ಕೊಟ್ಟ ವರ್ತುಲಕ್ಕೆ (ಅದರ ಪರಿಧಿದ ಹೊರಗೆ ಕೊಟ್ಟ ಬಿಂದುವಿನಿಂದ) ಸ್ಪರ್ಶ ರೇಖೆಗಳನ್ನು ತೆಗೆಯುವದು.

೫. ಕೊಟ್ಟ ತ್ರಿಕೋಣ ಅಥವಾ ಚೌರಸ ಇವುಗಳೊಳಗೆ ಇಲ್ಲವೆ ಸುತ್ತಲು ವರ್ತುಲ ತೆಗೆಯುವದು.

ಔಪಪತ್ತಿಕ ಭಾಗ.

೧. ಸವಾಂತರ ಭುಜ ಚತುಷ್ಕೋಣಗಳ ಕ್ಷೇತ್ರಗಳ ಸಮತ್ವವು.

೨. ತ್ರಿಕೋಣಗಳ ಕ್ಷೇತ್ರಗಳ ಸಮತ್ವವು.

೩. ಒಂದೇ ಬಿಂದುವಿನಿಂದ ಒಂದೇ ವರ್ತುಳಕ್ಕೆ ತೆಗೆದ ಎರಡು ಸ್ಪರ್ಶ ರೇಖೆಗಳ ಸಮತ್ವವು.

೪. ವರ್ತುಳದ ಜ್ಯಾಗಳ ಸಮತ್ವವು.

೫. ಒಂದೇ ವರ್ತುಲ ಖಂಡದೊಳಗಿನ ಕೋಣಗಳ ಸಮತ್ವವು.

೬. ಒಂದೇ ಕಂಸದ ಮೇಲಿನ ವರಿಘ ಕೋಣಗಳ ಸಮತ್ವವು.
೭. ಒಂದೇ ಕಂಸದ ಮೇಲಿನ ಮಧ್ಯಕೋಣ ವರಿಘಕೋಣಗಳ ಸ
ಸ್ಪರ ಸಂಬಂಧವು.
೮. ವರ್ತುಳದೊಳಗೆ ತೆಗೆದ ಚತುಃಷ್ಕೋಣಗಳ ಧರ್ಮಗಳು.

---

೩ ನೇ ವರ್ಗ.

ಕರ್ತವ್ಯಭಾಗ.

೧. ಕೋಣಗಳನ್ನೂ ಸರಳರೇಖೆಗಳನ್ನೂ ಕಂಸಗಳನ್ನೂ ದ್ವಿಭಾ
ಸುವದು.
೨. ಕೊಟ್ಟ ಸರಳರೇಖೆಗಳಿಗೆ ಲಂಬಗಳನ್ನು ತೆಗೆಯುವದು.
೩. ಕೊಟ್ಟ ಕೋಣಕ್ಕೆ ಸರಿಯಾದ ಕೋಣವನ್ನು ರಚಿಸುವದು.
೪. ಕೊಟ್ಟ ರೇಖೆಗೆ ಸಮಾಂತರವಾದ ರೇಖೆಗಳನ್ನು ತೆಗೆಯುವದು.
೫. ಸಾಕಷ್ಟು ಕೊಟ್ಟ ಸಂಗತಿಗಳ ಆಧಾರದಿಂದ ಹೊರಡುವ ತ್ರಿಕೊ
ಣಗಳ ರಚನೆಯ ಸರಳ ಪ್ರಕಾರಗಳು.
೬. ಕೊಟ್ಟ ರೇಖೆಯಲ್ಲಿ ಹಲವು ಸರಿಯಾದ ಭಾಗಗಳನ್ನು ಮಾಡುವದು
೭. ಕೊಟ್ಟ ವರ್ತುಲಕ್ಕೆ ಸ್ಪರ್ಶ ರೇಖೆಗಳನ್ನು ತೆಗೆಯುವದು.
೮. ಕೊಟ್ಟ ವರ್ತುಲದ ಒಳಗೆ ಇಲ್ಲವೆ ಅದರ ಸುತ್ತಲು ೩-೪-೬-೮
ಭುಜಗಳುಳ್ಳ ನಿಯಮಿತ ಸರಳರೇಖಾಕೃತಿಗಳನ್ನು ರಚಿಸುವದು.
೯. ಕೊಟ್ಟ ತ್ರಿಕೋಣ ಅಥವಾ ಚೌರಸ ಇವುಗಳೊಳಗೆ ಇಲ್ಲವೆ ಇವ
ಗಳ ಸುತ್ತಲು ವರ್ತುಲವನ್ನು ತೆಗೆಯುವದು.
೧೦ ಕೊಟ್ಟ ಕೋಣಕ್ಕೆ ಸರಿಯಾದ ಕೋಣವುಳ್ಳ ವರ್ತುಲಖಂಡವನ್ನು
ಕೊಟ್ಟ ಸರಳರೇಖೆಯ ಮೇಲೆ ರಚಿಸುವದು.

ಸೂಚನೆ:— ಕರ್ತವ್ಯ ಭೂಮಿತಿಯ ಪ್ರಶ್ನೆಗಳು (ಅ) ಪಟ್ಟಿಯಲ್ಲಿ ವಿವರಿಸಿದ ಕೃತಿಗಳು ಹಾಗೂ ಇಷ್ಟವಿದ್ದರೆ ಅವುಗಳಿಂದ ಸುಲಭವಾಗಿ ಹೊರಡುವ ಅಭ್ಯಸನಗಳ ಸಂಬಂಧವುಳ್ಳವು ಇರುವವು.

ಪ್ರತಿಯೊಬ್ಬ ಉಮೇದವಾರನ ಹತ್ತರ ಕೆಳಗೆ ಕಾಣಿಸಿದ ಸಾಮಾ
ನುಗಳು ಇರತಕ್ಕದ್ದು:—ಇಂಚು, ಇಂಚಿನ ಹತ್ತನೆಯ ಅಂಶಗಳನ್ನೂ, ಸೆಂಟೀ ಮಿಟರು, ಮಿಲೀ ಮಿಟರುಗಳನ್ನೂ ಗೆರೆಗಳಿಂದ ತೋರಿಸುವ ಹಂದು

ಕೂಲು ಪಟ್ಟಿ, ಒಂದು ಸೆಟಸ್ಕ್ವೇರು (ತ್ರಿಕೋಣಪಟ್ಟಿ), ಕೋಣ ಮಾಪಕ, ಕಂಪಾಸು, ಹಾಗೂ ಒಂದು ಬಿರುಸಾದ ಪೆನ್ಸಿಲು. ಎಲ್ಲ ಆಕೃತಿಗಳನ್ನು ಸರಿಯಾಗಿ ತೆಗೆಯಬೇಕು.

ಪ್ರಾಪಪತ್ತಿಕ ಭಾಗ.

ಒಂದೇ ಬಿಂದುವಿನಲ್ಲಿರುವ ಕೋಣಗಳು.

ಒಂದು ಸರಳ ರೇಖೆ ಮತ್ತೊಂದರ ಮೇಲೆ ನಿಂತುಕೊಂಡರೆ ಆಗುವ ಹಂಥ ಎರಡು ಕೋಣಗಳ ಒಟ್ಟು, ಎರಡು ಕಾಟಕೋಣಗಳ ಬೇರೀಜಿಗೆ ಸರಿ ಇರುತ್ತದೆ; ಹಾಗೂ ಇದರ ವ್ಯತ್ಯಾಸವು.

ಎರಡು ಸರಳ ರೇಖೆಗಳು ಒಂದನ್ನೊಂದು ಛೇದಿಸಿದರೆ ಆಗುವ ಶಿರಸಾವಿರುದ್ಧ ಕೋಣಗಳು ಸರಿ ಇರುತ್ತವೆ.

ಸವಾಂತರ ಸರಳ ರೇಖೆಗಳು.

ಒಂದು ಸರಳ ರೇಖೆಯು ಬೇರೆ ಎರಡು ಸರಳ ರೇಖೆಗಳನ್ನು ಛೇದಿಸಲಾಗಿ,

೧. ಒಂದು ಜೋಡು ವ್ಯುತ್ಕ್ರಮ ಕೋಣಗಳು ಸರಿಯಾದರೆ; ಇಲ್ಲವೆ

೨. ಒಂದು ಜೋಡು ಅನುರೂಪ ಕೋಣಗಳು ಸರಿಯಾದರೆ, ಇಲ್ಲವೆ

೩. ಛೇದಿಸುವ ರೇಖೆಯ ಒಂದೇ ಮಗ್ಗಲಿಗಿರುವ ಎರಡು ಒಳಕೋಣಗಳು ಕೂಡಿ ಎರಡು ಕಾಟಕೋಣಗಳಿಗೆ ಸರಿಯಾದರೆ, ಆ ಬೇರೆ ಎರಡು ಸರಳ ರೇಖೆಗಳು ಪರಸ್ಪರ ಸವಾಂತರವಾಗಿರುತ್ತವೆ; ಹಾಗೂ ಇದರ ವ್ಯತ್ಯಾಸವು.

ಒಂದು ರೇಖೆಗೆ ಸವಾಂತರವಾಗಿರುವ ಬೇರೆ ಸರಳ ರೇಖೆಗಳು ಪರಸ್ಪರ ಸವಾಂತರವಾಗಿರುವವು.

ತ್ರಿಕೋಣಗಳೂ ಸರಳ ರೇಖಾಕೃತಿಗಳೂ.

ತ್ರಿಕೋಣದ ಮೂರೂ ಕೋಣಗಳ ಬೇರೀಜು ಎರಡು ಕಾಟಕೋಣಗಳಿಗೆ ಸರಿ ಇರುತ್ತದೆ.

ಬಹಿರ್ವಕ್ರ ಬಹುಕೋಣದ ಭುಜಗಳನ್ನು ಕ್ರಮದಿಂದ ಬೆಳಿಸಿದರೆ ಆಗುವ ಹೊರ ಕೋಣಗಳ ಬೇರೀಜು ನಾಲ್ಕು ಕಾಟಕೋನಗಳಿಗೆ ಸರಿ ಇರುವದು.

ಎರಡು ತ್ರಿಕೋಣಗಳಲ್ಲಿ ಒಂದರ ಎರಡು ಭುಜಗಳು, ಹಾಗೂ ಅವುಗಳ ನಡುವಿನ ಕೋಣವು, ಮತ್ತೊಂದರ ಎರಡು ಭುಜಗಳು ಹಾಗೂ ಅವುಗಳ ನಡುವಿನ ಕೋಣಗಳಿಗೆ ಅನುಕ್ರಮವಾಗಿ ಸರಿ ಇದ್ದರೆ ಅವೆರಡ ತ್ರಿಕೋಣಗಳು ಏಕರೂಪವಾಗುವವು.

ಎರಡು ತ್ರಿಕೋಣಗಳಲ್ಲಿ ಒಂದರ ಎರಡು ಕೋಣಗಳು ಎರ ನೆಯೆದರ ಎರಡು ಕೋಣಗಳಿಗೆ ಅನುಕ್ರಮವಾಗಿ ಸರಿ ಇದ್ದು, ಒ ದರ ಒಂದು ಭುಜವು ಎರಡನೆಯದರ ಅನುರೂಪವಾದ ಭುಜಕ್ಕೆ ಸ ಇದ್ದರೆ ಆ ಎರಡು ತ್ರಿಕೋಣಗಳು ಏಕರೂಪವಾದವುಗಳಿರುವವು.

ತ್ರಿಕೋಣದ ಎರಡು ಭುಜಗಳು ಸರಿ ಇದ್ದರೆ ಆ ಭುಜಗಳ ಎದುರಿನ ಕೋಣಗಳು ಸರಿ ಇರುತ್ತವೆ. ಹಾಗೂ ಇದರ ವ್ಯತ್ಯಾಸವು

ಎರಡು ತ್ರಿಕೋಣಗಳಲ್ಲಿ ಒಂದರ ಮೂರು ಭುಜಗಳು ಅನುಕ್ರ ಮವಾಗಿ ಮತ್ತೊಂದರ ಮೂರು ಭುಜಗಳಿಗೆ ಸರಿ ಇದ್ದರೆ ಆ ಎರಡ ತ್ರಿಕೋಣಗಳು ಏಕರೂಪವಾಗಿರುತ್ತವೆ.

ಎರಡು ಕಾಟಕೋಣ ತ್ರಿಕೋಣಗಳ ಕರ್ಣಗಳು ಸರಿ ಇದ್ದು ಒಂದರ ಒಂದು ಭುಜವು ಮತ್ತೊಂದರ ಒಂದು ಭುಜಕ್ಕೆ ಸರಿ ಇದ್ದರೆ ಆ ತ್ರಿಕೋಣಗಳು ಏಕರೂಪವಾಗುವುಗಳಿರುವವು.

ಯಾವದೊಂದು ತ್ರಿಕೋಣದಲ್ಲಿ ಎರಡು ಭುಜಗಳು ಅಸಮಾನ ವಾಗಿದ್ದರೆ ದೊಡ್ಡದರ ಎದುರಿಗೆ ದೊಡ್ಡ ಕೋಣವು ಇರುವದು. ಹಾಗೂ ಇದರ ವ್ಯತ್ಯಾಸವು.

ಒಂದು ಸರಳ ರೇಖೆಗೆ ಅದರ ಹೊರಗಿನ ಒಂದು ಬಿಂದುವಿ ನಿಂದ ತೆಗೆಯಲಿಕ್ಕೆ ಬರುವಂಥ ಸರಳ ರೇಖೆಗಳಲ್ಲಿ ಲಂಬವು ಎಲ್ಲಕ್ಕೂ ಸಣ್ಣದು.

ಸಮಾಂತರಭುಜ ಚತುಷ್ಕೋಣದ ಎದುರೆದುರಿನ ಕೋಣಗಳೂ ಭುಜಗಳೂ ಸರಿ ಇರುತ್ತವೆ. ಮತ್ತು ಅದರ ಪ್ರತಿ ಒಂದು ಕರ್ಣವು ಆದನ್ನು ದ್ವಿಭಾಗಿಸುತ್ತದೆ. ಹಾಗೂ ಅದರ ಕರ್ಣಗಳು ಒಂದನ್ನೊಂದು ದ್ವಿಭಾಗಿಸುತ್ತವೆ.

ಮೂರು ಅಥವಾ ಹೆಚ್ಚು ಸಮಾಂತರ ಸರಳರೇಖೆಗಳು ತಮ್ಮನ್ನು ಛೇದಿಸುವ ಯಾವದೊಂದು ಸರಳ ರೇಖೆಯಲ್ಲಿ ಮಾಡುವ ಮಧ್ಯಗತಗಳು

ಸರಿ ಇದ್ದರೆ ಅವನ್ನು ಛೇದಿಸುವ ಬೇರೆ ಯಾವ ಸರಳ ರೇಖೆಯಲ್ಲಾದರೂ ಅವು ಮಾಡುವ ಅನುರೂಪವಾದ ಮಧ್ಯಗತಗಳು ಸರಿ ಇರುತ್ತವೆ.

ಕ್ಷೇತ್ರಗಳು.

ಒಂದೇ ತಳರೇಖೆಯ ಮೇಲೆ ಅಥವಾ ಸರಿಯಾದ ತಳರೇಖೆಗಳ ಮೇಲೆ ಇರುವ ಸಮಾನ ಎತ್ತರಗಳುಳ್ಳ ಸಮಾಂತರ ಭುಜ ಚತುಷ್ಕೋಣಗಳ ಕ್ಷೇತ್ರಗಳು ಸರಿ ಇರುವವು.

ಒಂದೇ ತಳರೇಖೆಯ ಮೇಲೆ ಅಥವಾ ಸರಿಯಾದ ತಳರೇಖೆಗಳ ಮೇಲೆ ಇರುವ ಸಮಾನ ಎತ್ತರಗಳುಳ್ಳ ತ್ರಿಕೋಣಗಳು ಕ್ಷೇತ್ರದಿಂದ ಸರಿ ಇರುವವು.

ಒಂದೇ ತಳರೇಖೆಯ ಮೇಲೆ ಅಥವಾ ಸರಿಯಾದ ತಳರೇಖೆಗಳ ಮೇಲೆ ಸರಿಯಾದ (ಕ್ಷೇತ್ರದಿಂದ) ತ್ರಿಕೋಣಗಳು ಸಮಾನ ಎತ್ತರಗಳುಳ್ಳವಿರುವವು.

ಕೆಳಗೆ ಕೊಟ್ಟಂಥ ಬೀಜಗಣಿತದ ಸವಿಾಕರಣಗಳಿಗೆ ಸರಿಯಾದ ಭೂಮಿತಿಯ ಪ್ರಮೇಯಗಳ ಉದಾಹರಣೆಗಳೂ ಸ್ಪಷ್ಟೀಕರಣವೂ:—

೧. ಖ(ಅ+ಬ+ಕ+....) = ಖಅ+ಖಬ+ಖಕ+.....

೨. $(ಅ+ಬ)^2$ = $ಅ^2+2ಅಬ+ಬ^2$

೩. $(ಅ-ಬ)^2$ = $ಅ^2-2ಅಬ+ಬ^2$

೪. $ಅ^2-ಬ^2$ = (ಅ+ಬ) (ಅ−ಬ)

ತ್ರಿಕೋಣದ ಒಂದು ಕೋಣವು ವಿಶಾಲಕೋಣ, ಕಾಟಕೋನ, ಇಲ್ಲವೆ ಲಘುಕೋಣವಿದ್ದಂತೆ ಆ ಕೋಣದ ಎದುರಿನ ಭುಜದ ಮೇಲಿನ ಚೌರಸವು ಅನುಕ್ರಮವಾಗಿ ಉಳಿದ ಎರಡು ಭುಜಗಳ ಮೇಲಿನ ಚೌರಸಗಳ ಬೇರೀಜಿಗಿಂತ ಹೆಚ್ಚು, ಆ ಬೇರೀಜಿಗೆ ಸರಿ, ಇಲ್ಲವೆ ಆ ಬೇರೀಜಿಗಿಂತ ಕಡಿಮೆ ಇರುವದು. ಹಾಗೂ ಮೇಲೆ ಹೇಳಿದ ಕ್ಷೇತ್ರಗಳ ಅಸಮಾನತ್ವದ ಪ್ರಸಂಗದಲ್ಲಿ ಅವುಗಳ ವಜಾಬಾಕಿಯು ಕೊಟ್ಟ ಕೋಣಕ್ಕೆ ಹೊಂದಿದ ಯಾವ ದೊಂದು ಭುಜದ ತುದಿ ಬಿಂದುವಿನಿಂದ ಎನೇ ಭುಜದ ಮೇಲೆ ತೆಗೆದ ಲಂಬಕ್ಕೂ ಅದೇ ಬಿಂದುವಿಗೂ ಇರುವ ಅಂತರ ಹಾಗು ಎರಡನೆ ಭುಜ ಇವುಗಳಿಂದಾದ ಕಾಟಕೋನಚೌಕೋನದ ಇವ್ಮಡಿಗೆ ಸರಿ ಇರುತ್ತದೆ.

ತ್ರಿಕೋಣದಲ್ಲಿ ಯಾವವಾದರೂ ಎರಡು ಭುಜಗಳ ಮೇಲಿನ ಚೌರಸಗಳ ಬೇರೀಜು ಆ ತ್ರಿಕೋಣದ ತಳರೇಖೆಯ ಅರ್ಧದ ಮೇಲಿನ ಚೌರ

ಸೆದ ಇವ್ಮಡಿ ಹಾಗೂ ಮೇಲೆ ಹೇಳಿದ ಎರಡು ಭುಜಗಳ ಕೋಣಬಿಂದು ವಿನಿಂದ ಎದುರಿನ ಭುಜವನ್ನು ದ್ವಿಭಾಗಿಸುವ ಬಿಂದುವಿನ ವರೆಗೆ ತೆಗೆದ ರೇಖೆಯ ಮೇಲಿನ ಚೌರಸದ ಇವ್ಮಡಿ ಇವುಗಳ ಬೇರೀಜಿಗೆ ಸರಿಇರುತ್ತದೆ.

ಲೋಕಸ್.

(ಚರಬಿಂದು ಮಾರ್ಗವು ಇಲ್ಲವೆ ಬಿಂದುಘಟಿತಮಾರ್ಗವು.)

ಎರಡು ಸ್ಥಿರಬಿಂದುಗಳಿಂದ ಯಾವಾಗಲೂ ಸಮಾನ ಅಂತರವನ್ನು ಕಾಯ್ದುಕೊಂಡು ಚಲಿಸುವ ಬಿಂದುವಿನ ಮಾರ್ಗವು (ಅಂದರೆ, ಆ ಎರಡು ಸ್ಥಿರಬಿಂದುಗಳಿಂದ ಸಮಾನಾಂತರದ ಮೇಲಿರುವ ಬಿಂದುಘಟಿತಮಾರ್ಗವು) ಆ ಎರಡೂ ಸ್ಥಿರ ಬಿಂದುಗಳನ್ನು ಕೂಡಿಸುವ ರೇಖೆಯನ್ನು ದ್ವಿಭಾಗಿಸುವ ಲಂಬವಾಗಿರುತ್ತದೆ.

ಎರಡು ಪರಸ್ಪರ ಛೇದಕ ರೇಖೆಗಳಿಂದ ಸಮಾನಾಂತರದ ಮೇಲಿರುವ ಬಿಂದುಗಳಿಂದ ಘಟಿತವಾದ ಮಾರ್ಗವು ಆ ಎರಡು ಛೇದಕ ರೇಖೆಗಳ ನಡುವಿನ ಕೋಣಗಳನ್ನು ದ್ವಿಭಾಗಿಸುವ ರೇಖಾಯುಗ್ಮವಿರುತ್ತದೆ.

ವರ್ತುಲ.

ವರ್ತುಲದ ಮಧ್ಯ ಬಿಂದುವಿನಿಂದ ಆ ವರ್ತುಲದ ವ್ಯಾಸೇತರಜ್ಯಾವನ್ನು ದ್ವಿಭಾಗಿಸುವಂತೆ ತೆಗೆದ ರೇಖೆಯು ಆ ಜ್ಯಾಕ್ಕೆ ಲಂಬವಿರುವದು. ಹಾಗೂ ಇದಕ್ಕೆ ವ್ಯತ್ಯಾಸವಾಗಿ ಜ್ಯಾದ ಮೇಲೆ ಮಧ್ಯ ಬಿಂದುವಿನಿಂದ ತೆಗೆದ ಲಂಬವು ಅದನ್ನು ದ್ವಿಭಾಗಿಸುತ್ತದೆ.

ಒಂದೇ ಸರಳರೇಖೆಯಲ್ಲಿಲ್ಲದಂಥ ಮೂರು ಬಿಂದುಗಳೊಳಗಿಂದ ಹಾಯುವ ವರ್ತುಲವು ಒಂದೇ ಇರುವದು. ಒಂದಕ್ಕಿಂತ ಹೆಚ್ಚು ಇರಲಾರವು.

ಸರಿಯಾದ ವರ್ತುಲಗಳಲ್ಲಿ ಅಥವಾ ಒಂದೇ ವರ್ತುಲದಲ್ಲಿ (೧) ಸರಿಯಾದ ಮಧ್ಯಕೋಣಗಳ ಎದುರಿಗಿರುವ ಕಂಸಗಳು ಸರಿ ಇರುತ್ತವೆ. (೨) ಇದಕ್ಕೆ ವ್ಯತ್ಯಾಸವಾಗಿ ಸರಿಯಾದ ಕಂಸಗಳ ಎದುರಿಗಿರುವ ಮಧ್ಯ ಕೋಣಗಳು ಸರಿ ಇರುತ್ತವೆ.

ಸರಿಯಾದ ವರ್ತುಲಗಳಲ್ಲಿ ಅಥವಾ ಒಂದೇ ವರ್ತುಲದಲ್ಲಿ (೧) ಎರಡು ಜ್ಯಾಗಳು ಸರಿ ಇದ್ದರೆ ಅವುಗಳಿಂದಾದ ಕಂಸಗಳು ಸರಿ ಇರುತ್ತವೆ. (೨) ಇದಕ್ಕೆ ವ್ಯತ್ಯಾಸವಾಗಿ ಎರಡು ಕಂಸಗಳು ಸರಿ ಇದ್ದರೆ ಅವುಗಳ ಜ್ಯಾಗಳು ಸರಿ ಇರುವವು.

ಯಾವದೊಂದು ವರ್ತುಲದಲ್ಲಿ ಸರಿಯಾದ ಜ್ಯಾಗಳು ಆ ವರ್ತುಲದ ಮಧ್ಯ ಬಿಂದುವಿನಿಂದ ಸಮಾನಾಂತರದಲ್ಲಿರುವವು. ಹಾಗೂ ಇದರ ವ್ಯತ್ಯಾಸವು.

ವರ್ತುಲದ ಪರಿಧಿಯ ಯಾವದೊಂದು ಬಿಂದುವಿನೊಳಗಿಂದ ಅದೇ ವರ್ತುಲಕ್ಕೆ ತೆಗೆದ ಸ್ಪರ್ಶರೇಖೆಯೂ ಅದೇ ಬಿಂದುವಿನಿಂದ ತೆಗೆದ ಆ ವರ್ತುಲದ ತ್ರಿಜ್ಯವೂ ಒಂದಕ್ಕೊಂದು ಲಂಬವಾಗಿರುತ್ತವೆ.

ಯಾವದೊಂದು ವರ್ತುಲದ ಹೊರಗೆ ಕೊಟ್ಟ ಒಂದು ಬಿಂದುವಿನಿಂದ ಆ ವರ್ತುಲಕ್ಕೆ ಎರಡು ಸ್ಪರ್ಶರೇಖೆಗಳನ್ನು ತೆಗೆದರೆ:—

(೧) ಆ ಸ್ಪರ್ಶರೇಖೆಗಳು ಸರಿ ಇರುತ್ತವೆ.

(೨) ಅವುಗಳ ಎದುರಿಗೆ ಮಧ್ಯಬಿಂದುವಿನಲ್ಲಿ ಆಗುವ ಕೋಣಗಳು ಸರಿ ಇರುವವು.

(೩) ಅವು ಕೊಟ್ಟ ಬಿಂದುವನ್ನು ವರ್ತುಲದ ಮಧ್ಯಬಿಂದುವಿಗೆ ಕೂಡಿಸುವ ರೇಖೆಯು ಕೂಡ ಸರಿಯಾದ ಕೋಣಗಳನ್ನು ಮಾಡುವವು.

ಒಂದನ್ನೊಂದು ಸ್ಪರ್ಶ ಮಾಡುವ ಎರಡು ವರ್ತುಲಗಳ ಸ್ಪರ್ಶಬಿಂದುವು ಅವುಗಳ ಮಧ್ಯಬಿಂದುಗಳನ್ನು ಕೂಡಿಸುವ ಸರಳ ರೇಖೆಯಲ್ಲಿಯೇ ಇರುತ್ತದೆ.

ವರ್ತುಲದ ಯಾವದೊಂದು ಕಂಸದ ಎದುರಿನ ಮಧ್ಯಕೋಣವು ಉಳಿದ ಪರಿಧಿಯ ಭಾಗದ ಯಾವದೊಂದು ಬಿಂದುವಿನಲ್ಲಿ ಆ ಕಂಸದ ಎದುರಿಗೆ ಆಗುವ ಕೋಣದ ಇಮ್ಮಡಿ ಇರುತ್ತದೆ.

ಒಂದೇ ವರ್ತುಲಖಂಡದೊಳಗಿನ ಕೋಣಗಳು ಸರಿ ಇರುವವು. ಹಾಗೂ ಯಾವವಾದರೂ ಎರಡು ಬಿಂದುಗಳನ್ನು ಕೂಡಿಸುವ ರೇಖೆಯ ಎದುರಿಗೆ ಆ ರೇಖೆಯ ಒಂದೇ ಮಗ್ಗಲಿನಲ್ಲಿರುವ ಬೇರೆ ಎರಡು ಬಿಂದುಗಳಲ್ಲಿ ಆಗುವ ಕೋಣಗಳು ಸರಿಯಾದವುಗಳಿದ್ದರೆ ಆ ನಾಲ್ಕು ಬಿಂದುಗಳು ಒಂದು ವರ್ತುಲದ ಪರಿಧಿದಲ್ಲಿರುವವು.

ಅರ್ಧ ವರ್ತುಲದೊಳಗಿನ ಪರಿಧಿ ಕೋಣವು ಕಾಟಕೋನವಿರುತ್ತದೆ. ಅರ್ಧ ವರ್ತುಲಕ್ಕಿಂತ ದೊಡ್ಡದಾದ ಖಂಡದೊಳಗಿನ ಕೋಣವು ಲಘುಕೋಣವಿರುತ್ತದೆ. ಹಾಗೂ ಅರ್ಧ ವರ್ತುಲಕ್ಕಿಂತ ಸಣ್ಣದಾದ ಖಂಡದೊಳಗಿನ ಕೋಣವು ವಿಶಾಲಕೋಣವಿರುತ್ತದೆ.

ವರ್ತುಲದೊಳಗೆ ರಚಿಸಿದ ಯಾವದೊಂದು ಚತುಷ್ಕೋಣಾಕೃತಿಯ ಎದುರೆದುರಿನ ಕೋಣಗಳು ಪರಿಪೂರಕವಾದವುಗಳಿರುತ್ತವೆ. ಹಾಗೂ ಇದರ ವ್ಯತ್ಯಾಸವು.

ವರ್ತುಲದ ಸ್ಪರ್ಶರೇಖೆಯ ಸ್ಪರ್ಶ ಬಿಂದುವಿನಿಂದ ಆ ವರ್ತುಲದಲ್ಲಿ ಒಂದು ಜ್ಯಾವನ್ನು ತೆಗೆಯಲಾಗಿ ಆ ಜ್ಯಾ–ಸ್ಪರ್ಶರೇಖೆಗಳಿಂದಾಗುವ ಕೋಣಗಳಲ್ಲಿ ಪ್ರತಿಯೊಂದು ತನ್ನ ವ್ಯತ್ಯಕ್ರಮಖಂಡದೊಳಗಿನ ಕೋಣಕ್ಕೆ ಸರಿ ಇರುವದು.

ವರ್ತುಲದ ಎರಡು ಜ್ಯಾಗಳು ಒಂದನ್ನೊಂದು ಆ ವರ್ತುಲದ ಒಳಗೆ ಅಥವಾ ಹೊರಗೆ ಛೇದಿಸಿದರೆ ಒಂದು ಜ್ಯಾದ ಎರಡು ಭಾಗಗಳಿಂದಾದ ಕಾಟಕೋಣ ಚೌಕೋನವು ಮತ್ತೊಂದು ಜ್ಯಾದ ಎರಡು ಭಾಗಗಳಿಂದಾಗುವ ಕಾಟಕೋನ ಚೌಕೋನಕ್ಕೆ ಸರಿ ಇರುತ್ತದೆ. ಹಾಗೂ ಇದರ ವ್ಯತ್ಯಾಸವು.

ಸೂಚನೆ:—ಔಪಪತ್ತಿಕ ಭೂಮಿತಿಯ ಪ್ರಶ್ನೆಗಳು ಕೆಳಗೆ ಕೊಟ್ಟ ವಿಷಯಗಳ ಸಂಬಂಧವುಳ್ಳವುಗಳಿರುವವು:—ಮೇಲೆ ಕಾಣಿಸಿದ ಪ್ರಮೇಯಗಳು; ಅವುಗಳಿಂದುಂಟಾಗುವ ಪ್ರಶ್ನೆಗಳೂ ಸುಲಭವಾಗಿ ಹೊರಡುವ ಅಭ್ಯಸನಗಳೂ; ಹಾಗೂ ಆ ಪ್ರಮೇಯಗಳಿಗೆ ಸರಿಯಾದ ಅಂಕಗಣಿತದ ಉದಾಹರಣೆಗಳು. ಯಾವದೊಂದು ಪ್ರಮೇಯವನ್ನು ಬೇಕಾದ ರೀತಿಯಿಂದ ಸಿದ್ಧ ಮಾಡಬಹುದು. ಆದರೆ ಆ ಸಿದ್ಧತೆಯು ಭೂಮಿತಿ ವಿಷಯದ ಯಾವದೊಂದು ಕ್ರಮವುಳ್ಳ ಪದ್ಧತಿಯಲ್ಲಿ ಸೇರಿದ ಮೆಟ್ಟು ಆಗಿರಬೇಕು; ಹಾಗೂ ಆ ಪದ್ಧತಿಯ ಕ್ರಮವು ಮೇಲೆ ಕಾಣಿಸಿದ ಪ್ರಮೇಯಗಳ ಕ್ರಮವನ್ನು ಅನುಸರಿಸಬೇಕೆಂಬ ನಿರ್ಬಂಧವೂ ಇಲ್ಲ. ಸುಲಭವಾಗಿ ತಿಳಿಯುವ ಸಂಕ್ಷೇಪಗಳನ್ನು ಉಪಯೋಗಿಸುವದು ಒಳ್ಳೇದು.

ಪರಿಶಿಷ್ಟ (ಕ)

ಸರ್ಟಿಫಿಕೇಟು.

ಮುಂಬಯಿ ವಿದ್ಯಾಖಾತೆ.

ದೇಶಭಾಷೆಯ ಟ್ರೇನಿಂಗ ಕಾಲೇಜದ ಸರ್ಟಿಫಿಕೇಟು.

ನಾವು ಸರ್ಟಿಫಿಕೇಟು ಕೊಡುವದೇನಂದರೆ—

ಈತನು ೧೯೧೧ ನೇ ವರ್ಷದ ತಿಂಗಳಲ್ಲಿ ಆದ ನೇ ವರ್ಷದ ಸರ್ಟಿಫಿಕೇಟು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಒಟ್ಟು ಗುಣಗಳಲ್ಲಿ ೧೦೦ ಕ್ಕೆ ರಂತೆ ಗುಣಗಳನ್ನು ದೊರಕಿಸಿದ್ದರಿಂದ

ಶಾಲಾಪತ್ರಕ

ಪುಸ್ತಕ ೪೭ | ಸಪಟಂಬರ [illegible] ಮಂದಿರ. ಪೊರಬ. ಫೆಸಡಾರ್ಕ್ವಾಡ.

ಪ್ರಾಚೀನ ಸ್ತ್ರೀ [illegible]

(ರಾ. ನಾ. ಗಣೇಶ ಜನಾರ್ದನ ಆಗಾಶೆ ಇವರ ವ್ಯಾಖ್ಯಾನ.)

ಕೆಲವು ವರ್ಷಗಳ ಅಚೆಯಲ್ಲಿ ದಕ್ಷಿಣಭಾಗದ ಅಕ್ಟಿಂಗ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾಗಿದ್ದು ಈಗ ಪೆನ್ಶನವನ್ನು ಪಡೆದು ಪುಣೆಯಲ್ಲಿ ವಾಸ ಮಾಡುತ್ತಿದ್ದ ರಾ॥ ನಾ॥ ಗಣೇಶ ಜನಾರ್ದನ ಆಗಾಶೆ ಎಂಬವರು ಕಳೆದ ಎಪ್ರೆಲ ತಾ॥ ೮ ನೇ ದಿವಸ ಪುಣೆಯಲ್ಲಿ "ಸೇವಾಸದನ"ವೆಂಬ ಅನಾಥರ ಸೇವೆಗಾಗಿ ಸ್ಥಾಪಿಸಲ್ಪಟ್ಟ ಸ್ತ್ರೀಸಂಘದಲ್ಲಿ, "ಪ್ರಾಚೀನ ಸ್ತ್ರೀಶಿಕ್ಷಣ"ವೆಂಬ ವಿಷಯವನ್ನು ಕುರಿತು ಸುರಸವಾದ ವ್ಯಾಖ್ಯಾನವನ್ನು ಕೊಟ್ಟರು. ಅವರ ವ್ಯಾಖ್ಯಾನವು ನಮ್ಮ ಪ್ರಾಚೀನಗ್ರಂಥಗಳೊಳಗಿನ ಮಾಹಿತಿಯಿಂದ ಸಂಪೂರ್ಣವಾಗಿ ತುಂಬಿರುವದರಿಂದ ನಮ್ಮ ವಾಚಕರಿಗೋಸ್ಕರ ಅದರ ಭಾಷಾಂತರವನ್ನು ಇದರಡಿಯಲ್ಲಿ ಕೊಡುತ್ತೇವೆ:—

"ಅನೇಕರು ಸ್ತ್ರೀಶಿಕ್ಷಣದ ವಿಷಯದಲ್ಲಿ ನಾವು ಪಾಶ್ಚಾತ್ಯರನ್ನೇ ಅನುಕರಣ ಮಾಡುತ್ತಿರುವೆವೆಂದು ಇನ್ನೂ ತಿಳಿದಿರುವರು. ಆದರೆ ನಿಜವಾದ ಸಂಗತಿಯು ತೀರ ಬೇರೆ ಇರುವದು. ಸ್ತ್ರೀಶಿಕ್ಷಣವೆಂಬ ಆಂಗ್ಲ ದೇಶದ ವೃಕ್ಷದ ಸಸಿಯನ್ನು ಭಾರತಭೂಮಿಯಲ್ಲಿ ನಾವೆ ನೂತನವಾಗಿ ಹಚ್ಚಿರುವೆವೆಂದು ತಿಳಿಯುವದು ಎಷ್ಟು ಮಾತ್ರವೂ ಸರಿಯೆಲ್ಲ. ಈ ವೃಕ್ಷವು ಈ ದೇಶದಲ್ಲಿ ಬಹಳ ಪುರಾತನ ಕಾಲದಿಂದ ಇರುವದು. ಇದರ ಉತ್ಪತ್ತಿಯು ಈ ಭರತಖಂಡದಲ್ಲಿಯೇ ಆಯಿತು; ಹಾಗೂ ಇದು ಪೂರ್ವಯುಗದಲ್ಲಿ ಭರದಿಂದ ವೃದ್ಧಿಯನ್ನು ಹೊಂದಿದ್ದರಿಂದ ಅದರ ಮಧುರವಾದ ಫಲಗಳನ್ನು ಜನರು ಅನಂದದಿಂದ ಸೇವಿಸುತ್ತಿದ್ದರು. ದೊಡ್ಡ ದೊಡ್ಡ ಯೋಗಿಗಳೂ ತಪಸ್ವಿಗಳೂ ಈ ಫಲಗಳಿಗೆ ಲುಬ್ಧರಾಗಿದ್ದರು. ಪ್ರಾಚೀನ ಪಾಶ್ಚಾತ್ಯರೆಂಬ ಸಕ್ಕರೆಯ ಪಾಕದಲ್ಲಿ ಆಗ ಹಾಕಿಟ್ಟ ಈ ಫಲಗಳ

ಮುರಂಬದ ಬರೇ ಸುವಾಸನೆಯಿಂದಲೇ ಈಗ ಸಾವಿರಾರು ವರುಷಗಳ ನಂತರ, ಆಧುನಿಕ ತತ್ವಜ್ಞಾನಿಗಳೂ, ವೇದಾಂತಿಗಳೂ ಮೋಹಗೊಂಡಿರುವರು. ಈ ವೃಕ್ಷವು ಕಾಲಚಕ್ರದ ಭಯಂಕರವಾದ ಹೊಡತಕ್ಕೆ ಸಿಕ್ಕಿ, ಅದರ ಎಷ್ಟೋ ಶಾಖೆಗಳು ಒಣಗಿ ಹೋದವು; ಹಾಗೂ ತಕ್ಕ ಪೋಷಣೆಯಾಗದ್ದರಿಂದ, ಅದರ ಬೆಳುವಣಿಗೆಯು ಕಟ್ಟಾಗಿ ಅದು ಮೋಟು ಮರವಾಗಿ ನಿಂತಿತು. ಆದರೂ ನಮ್ಮ ಸುದೈವದಿಂದ ಅದು ಇಂದಿನ ವರೆಗೆ ಹಾಗೂ ಹೀಗೂ ಜೀವ ಹಿಡಿದುಕೊಂಡು ನಿಂತಿರುವದು. ಅದರ ಬೇರುಗಳು ಕೆಳಗೆ ಬಹಳ ದೂರದ ವರೆಗೆ ಹೋಗಿರುವವು; ಮತ್ತು ಎಷ್ಟೋ ಶತಮಾನಗಳ ಕಸದಿಂದ ಮುಚ್ಚಿ ಹೋಗಿದ್ದರೂ, ಜೀವ ಹಿಡಿದುಕೊಂಡಿದ್ದಂಥ ಅದರ ಎಲೆಗಳು ಈಗ ಸತೇಜವಾಗಿ ನಮ್ಮ ಕಣ್ಣಿಗೆ ತೋರದಿದ್ದರೂ, ಅದಕ್ಕೆ ತಕ್ಕಮಟ್ಟಿಗೆ ಗೊಬ್ಬರ-ನೀರುಗಳನ್ನು ಹಾಕಿದರೆ, ಅದು ಪುನಃ ಬಿಗಿತು, ಭರದಿಂದ ಬೆಳೆದು, ದೊಡ್ಡ ವೃಕ್ಷವಾಗುವದೆಂಬದರಲ್ಲಿ ಏನೂ ಸಂದೇಹವಿಲ್ಲ. ಹಾಗೂ ಇಂಥ ಸುಚಿಹ್ನಗಳಾದರೂ ಈಗ ತೋರಲಾರಂಭಿಸಿವೆ.

ಇತಿಹಾಸವನ್ನು ಬರೆದಿಡುವ ಸಂಬಂಧದಿಂದ ಹಿಂದುಗಳಾದ ನಮ್ಮ ಅನಾಸ್ಥೆಯು ಎಲ್ಲೆಲ್ಲಿಯೂ ಪ್ರಸಿದ್ಧಿಪಡೆದದ್ದೇ ಇದೆ. ಆದಕಾರಣ, ನಮ್ಮ ಪೂರ್ವಜರ ಗುಪ್ತಧನದ ಸಂಬಂಧದಿಂದ ನಮಗೆ ಬಹಳ ಅಭಿಮಾನವಿದ್ದರೂ, ಆ ಗುಪ್ತಧನವು ಎಲ್ಲಿದೆಯೆಂಬದನ್ನು ಕೂಡಾ ತಿಳಿದುಕೊಳ್ಳುವದು ಮಹಾ ಪ್ರಯಾಸವಾಗಿದೆ. ಖನಿಗಳಲ್ಲಿ ಕೆಲಸ ಮಾಡುವವರು, ಒಂದು ಕೈಯಲ್ಲಿ ಕಂದೀಲನ್ನು ಹಿಡಿದುಕೊಂಡು, ಮತ್ತೊಂದು ಕೈಯಲ್ಲಿ ಹಗ್ಗವನ್ನು ಹಿಡಿದುಕೊಂಡು ಆ ಹಗ್ಗದ ಆಧಾರದಿಂದ ಒಂದೊಂದೇ ಹೆಜ್ಜೆಯನ್ನು ಎಚ್ಚರದಿಂದ ಇಡಬೇಕಾಗುವದು; ಮತ್ತು ದೀಪದ ಬೆಳಕು ಬಿದ್ದಷ್ಟು ಸ್ಥಳವನ್ನು ಮೊದಲು ಶೋಧಿಸಿಕೊಂಡು, ಸ್ವಲ್ಪ ಮುಂದಕ್ಕೆ ಹೋಗಿ, ಅಲ್ಲಿ ಕಂದೀಲನ್ನು ಇಟ್ಟು ಮತ್ತೆ ಅಲ್ಲಿ ಹುಡುಕಬೇಕಾಗುವದು. ಇದೇ ಅವಸ್ಥೆಯು ನಮ್ಮ ಪ್ರಾಚೀನ ಇತಿಹಾಸ ಶೋಧಕರ ವಾಲಿಗೂ ಕೆಲಮಟ್ಟಿಗೆ ಬಂದಿರುವದು. ಖನಿಯಲ್ಲಿ ಕೆಲಸ ಮಾಡುವವನು ಅಗಿಯುತ್ತಿರುವಾಗ ಅವನ ಕಣ್ಣಿಗೆ ಒಮ್ಮೊಮ್ಮೆ ಭಂಗಾರದ ಅಥವಾ ರತ್ನದ ಕಣವು ಹೊಳೆಯುವದು. ಅದರಂತೆ ಸಂಸ್ಕೃತ ಭಾಷಾಜ್ಞಾನವೆಂಬ ಕಂದೀಲಿನ ಸಹಾಯದಿಂದ ಪ್ರಾಚೀನಗ್ರಂಥಗಳನ್ನು ಶೋಧಿಸುತ್ತಿರಲಾಗಿ, ಅದರ

ಬೆಳಕಿನಲ್ಲಿ ಎಲ್ಲೆಲ್ಲಿಯೋ ಒಂದೊಂದು ಐತಿಹಾಸಿಕ ಕಣವು ತನ್ನ ಪ್ರಕಾಶ ದಿಂದ ಥಕ್ಕನೆ ಕಣ್ಣಿಗೆ ಗೋಚರವಾಗುವದು. ಇಂಥ ಕಣಗಳನು ಸಂಗ್ರಹಿಸುತ್ತ ಸಂಗ್ರಹಿಸುತ್ತ ಸಾಗಲಾಗಿ, ಐವತ್ತು ಅರವತ್ತು ವರ್ಷಗಳಲ್ಲಿ ಇತಿಹಾಸವೆಂಬ ಸರವಳಿಯ ಒಂದು ಅಥವಾ ಅರ್ಧ ಗೊಣಸಿಗೆ ಸಾಕಾಗುವಷ್ಟು ಸಾಮಗ್ರಿಯು ಸಿದ್ಧವಾಗುವದು. ಇಷ್ಟೆಲ್ಲ ರಗಳೆಯನ್ನು ಇಲ್ಲಿ ಹೇಳುವ ಕಾರಣವೇನಂದರೆ, ಯಾವದೊಂದು ಹಾದಿ ಯನ್ನು ತಿಳಿಸುವ ಕಂಬಗಳು ಅಥವಾ ಕಲ್ಲುಗಳು ಮಾತ್ರ ಉಳಿದು, ಹಾದಿ ಬೆಲ್ಲ ಮುಚ್ಚಿಹೋದರೆ ಅದನ್ನು ಗೊತ್ತು ಹಚ್ಚುವದು ಹ್ಯಾಗೆ ಬಹುಪ್ರಯಾ ಸವುಳ್ಳದ್ದಾಗುವದೋ, ಹಾಗೆಯೇ ಸ್ತ್ರೀಶಿಕ್ಷಣದಂಥ ಅನೇಕ ಮಹತ್ವದ ವಿಷಯಗಳನ್ನು ಪ್ರಾಚೀನ ಇತಿಹಾಸದಲ್ಲಿ ಶೋಧಿಸಹತ್ತಲಾಗಿ ನಡುವೆ ಒಂದೊಂದೆಡೆಯಲ್ಲಿ ಒಂದು ಮಾರ್ಗದರ್ಶಕ ಸ್ತಂಭವು ಮಾತ್ರ ಕಣ್ಣಿಗೆ ಬೀಳುವದು, ಹಾಗು ಮುಂದೆ ಎಷ್ಟೋ ದೂರದ ವರೆಗೆ ಮಾರ್ಗದ ಯಾವ ಕುರುಹುಗಳೂ ಕಣ್ಣಿಗೆ ಬೀಳುವದಿಲ್ಲ. ಅದರಿಂದ ಅಂಥಲ್ಲಿ ಅಂದಾಜಿನಿಂದ ಲೇ ಮಾರ್ಗಕ್ರಮಣ ಮಾಡಬೇಕಾಗುವದು. ಇಷ್ಟಾದರೂ ಎಲ್ಲ ಮಾರ್ಗ ದ ನಕಾಶೆಯನ್ನು ತೆಗೆಯುವದು ದುಃಸಾಧ್ಯವೇ ಸರಿ. ಅದರಿಂದ ಪ್ರಸ್ತು ತದಲ್ಲಿ, ಸ್ತ್ರೀಶಿಕ್ಷಣದ ಇತಿಹಾಸದೊಳಗಿನ ಮಾರ್ಗದರ್ಶಕ ಸ್ತಂಭಗ ಳನ್ನು ತೋರಿಸುವದಕ್ಕಿಂತಲೂ ಹೆಚ್ಚಿನ ಕೆಲಸವು ನನ್ನಿಂದಾಗುವದೆಂದು ಹೇಳಲಾರೆನು. ಇರಲಿ.

ಸಂಸ್ಕೃತವಾಙ್ಮಯದಲ್ಲಿ ವೇದಗಳೇ ಅತಿ ಪ್ರಾಚೀನಗ್ರಂಥಗಳಾಗಿ ರುವವು. ಅವುಗಳಲ್ಲಿಯೂ ಋಗ್ವೇದವು ಆದ್ಯಕಾಲದ್ದಾಗಿದೆ. ಆ ಋಗ್ವೇದ ದಲ್ಲಿ ಹೇಳಿರುವ ಋಷಿಗಳ, ಅಂದರೆ ಮಂತ್ರದ್ರಷ್ಟಾರರ (ಮಂತ್ರಗಳನ್ನು ಕಂಡುಕೊಂಡವರ) ಮಾಲಿಕೆಯಲ್ಲಿ ಎಷ್ಟೋ ಮಂದಿ ಸ್ತ್ರೀಯರ ಹೆಸರು ಗಳೂ ಹೊಳೆಯುತ್ತಿರುವವು. ಸಾಂಪ್ರತಕಾಲದಲ್ಲಿ ಸ್ತ್ರೀಯರಿಗೆ ವೇದಾಧ್ಯ ಯನಕ್ಕೆ ಅಧಿಕಾರವೇ ಇಲ್ಲವೆಂದು ಹೇಳುತ್ತಿರುವದರಿಂದ ಪ್ರಾಚೀನಕಾ ಲದ ಋಷಿಮಾಲಿಕೆಯೊಳಗಿನ ಸ್ತ್ರೀಯರ ಹೆಸರುಗಳನ್ನು ಕೇಳಿ ಆಶ್ಚರ್ಯ ಉಂಟಾಗುವದು ಸಹಜವಾಗಿದೆ. ಆದರೆ ಆಗಿನಕಾಲವೇ ಹಾಗೆ ಇತ್ತು.

ಋಗ್ವೇದದ ಪ್ರಥಮ ಮಂಡಲದೊಳಗಿನ "ಸ್ತ್ರಿಯೋ ಹ ಶಸ್ತ್ರಭೃತೋ ಬಭೂವುಃ ಶಶ್ವಮಾಣಾ ಪೋಪವ ಸ್ಸೌಕವಸೋ ಜರಂತೀ" ಎಂಬ ೧೭೯ ನೇ ಸೂಕ್ತದ ಋಷಿತ್ವವು ಲೋ

ಪಾಮುದ್ರಾ ಹಾಗೂ ಅಗಸ್ತ್ಯ ಈ ಉಭಯತರಿಗೆ ಕೂಡಿ ಸಂದದ್ದಿರುವದು. "ಏತಿ ಪ್ರಾಚೀ ವಿಶ್ವವಾರಾ ನಮೋಭಿರ್ದೇವಾ ಈಳಾನಾ ಹವಿಷಾ ಘೃತಾಚೀ" ಎಂಬ ಐದನೇ ಮಂಡಲದೊಳಗಿನ ೩೮ನೇ ಸೂಕ್ತದ ಋಷಿತ್ವವು "ವಿಶ್ವವಾರಾ" ಎಂಬ ಒಬ್ಬ ಸ್ತ್ರೀಯಳ ಕಡೆಗೇ ಇರುವದು. "ತೇವದಗ್ರಥಮಾವ್ರಹ್ಮ ಕಿಲ್ಬಿಷೇ-ಽಕ್ಷಪಾರ: ಸಲಿಲಾ ಮಾತರಿಶ್ವಾ" ಎಂಬ ಹತ್ತನೇ ಮಂಡಲದೊಳಗಿನ ೧೫೪ನೇ ಸೂಕ್ತದ ಋಷಿತ್ವವು ಜುಹೂ ಬ್ರಹ್ಮಜಾಯಾ, ಅಥವಾ ಊರ್ಧ್ವನಾಭಾ ಬ್ರಾಹ್ಮ ಇವರ ಕಡೆಗೆ ವಿಕಲ್ಪದಿಂದ ಇರುವದು. ಈ ಎಲ್ಲ ಕುರುಹುಗಳ ಮೇಲಿಂದ, ಅತಿಶಯ ಪ್ರಾಚೀನಕಾಲದಲ್ಲಿ ಈಗಿನಂತೆ ಸ್ತ್ರೀಪುರುಷರಲ್ಲಿ ವೈಷಮ್ಯಭಾವವಿದ್ದಿಲ್ಲೆಂತಲೂ, ಸ್ತ್ರೀಯರಿಗೆ ಮಂತ್ರದ್ರಷ್ಟಾರರ ದೊಡ್ಡ ಅಧಿಕಾರವೂ ಇತ್ತೆಂತಲೂ ಸ್ಪಷ್ಟವಾಗುತ್ತದೆ.

ಈ ವೇದಕಾಲದನಂತರ ಬಂದ ಉಪನಿಷತ್ಕಾಲದಲ್ಲಿಯಾದರೂ ಆಧ್ಯಾತ್ಮವಿದ್ಯೆಯಂಥ ಗಹನವಿಷಯಗಳಲ್ಲಿಯೂ ಹೆಂಗಸರು ಅತ್ಯಂತ ಪ್ರವೀಣತೆಯನ್ನು ಹೊಂದುತ್ತಿದ್ದರೆಂಬ ಬಗ್ಗೆ ಆಧಾರಗಳು ದೊರೆಯುತ್ತವೆ. ಬ್ರಹ್ಮವೇತ್ತನಾದ ಜನಕರಾಜನ ಸಭೆಯಲ್ಲಿ ಯಾಜ್ಞವಲ್ಕ್ಯನಂಥ ತತ್ವವೇತ್ತನನ್ನು ವಾದಕ್ಕೆ ಕರೆಯುವ ಸಾಮರ್ಥ್ಯವುಳ್ಳ ಗಾರ್ಗೀ ವಾಚಕ್ನವಿಯನ್ನು ನೋಡಿ ಯಾರಿಗೆ ತಾನೇ ಸಾನಂದಾಶ್ಚರ್ಯವಾಗಲಿಕ್ಕಿಲ್ಲ! ಈ ಗಾರ್ಗೀ ಹಾಗೂ ಯಾಜ್ಞವಲ್ಕ್ಯರ ವಿವಾದವು ಬಹಳ ಗಹನವಾದದ್ದಿರುವದು. ಅದನ್ನು ಇಲ್ಲಿ ಸಮಗ್ರವಾಗಿ ಹೇಳಿ ನಾನು ನಿಮ್ಮ ಕಾಲಹರಣವನ್ನು ಮಾಡಲೆಳಿಸುವದಿಲ್ಲ. ಆದರೆ ಆ ವಾದದಲ್ಲಿ ಆಕೆಯ ಪ್ರಶ್ನದ ಉಪಕ್ರಮವೇ ವಿಶೇಷ ಚಿತ್ತಾಕರ್ಷಕವಾದದ್ದಾಗಿರುವದರಿಂದ ಅದನ್ನಷ್ಟೇ ಹೇಳುತ್ತೇನೆ. ಆಕೆಯು ಮಾಡಿದ ಪ್ರಶ್ನವು ಹ್ಯಾಗಂದರೆ:—"ಸಾಹೋವಾಚಾಹಂ ವೈತ್ವಾ ಯಾಜ್ಞವಲ್ಕ್ಯ ಯಥಾ ಕಾಶ್ಯೋ ವಾ ವೈದೇಹೋ ವೋಗ್ರಪುತ್ರ ಉಜ್ಯಂ ಧನುರಧಿಜ್ಯಂ ಕೃತ್ವಾ ದ್ವೌ ಬಾಣವನ್ತೌ ಸಪತ್ನಾತಿವ್ಯಾಧಿನೌ ಹಸ್ತೇ ಕೃತ್ವೋಪೋತ್ತಿಷ್ಠೇ ದೇವಮೇವಾಹಂ ತ್ವಾದ್ವಾಭ್ಯಾಂ ಪ್ರಶ್ನಾಭ್ಯಾಮುಪೋದಸ್ಥಾಂ ತೌ ಮೇ ಬ್ರೂಹೀತಿ ಪೃಚ್ಛ ಗಾರ್ಗೀತಿ" ಅಂದರೆ, "ಎಲೈ ಯಾಜ್ಞವಲ್ಕ್ಯನೇ! ಕಾಶೀ ಅಥವಾ ವಿದೇಹದೇಶ ನಿವಾಸಿಯಾದ ಒಬ್ಬ ಕ್ಷತ್ರಿಯ ಪುತ್ರನು ಧನುವಿಗೆ ಹೆದೆಯನ್ನೇರಿಸಿ, ಶತ್ರುಶರೀರವಿದಾರಕಗಳಾದ ಎರಡು ಬಾಣಗಳನ್ನು ಹಿಡಿದುಕೊಂಡು ಯುದ್ಧಕ್ಕೆ ನಿಲ್ಲುವಂತೆ, ನಾನೂ ಎರಡು ಪ್ರಶ್ನಗಳಿಂದ ನಿನ್ನನ್ನು ಎದುರಿಸುವೆನು. ಈ ಪ್ರಶ್ನಗಳಿಗೆ ಉತ್ತರವನ್ನು ಕೊಡು."

ಈ ಬಗೆಯಾಗಿ ದೊಡ್ಡ ದೊಡ್ಡ ಪಂಡಿತರಿಂದಲೂ ತತ್ವವೇತ್ತ ರಿಂದಲೂ ತುಂಬಿದ ಸಭೆಯಲ್ಲಿ ಯಾಜ್ಞವಲ್ಕ್ಯನಂಥ ಬ್ರಹ್ಮವೇತ್ತ ಪುರುಷ ನನ್ನು, ಹೆಂಗಸಾದ ಗರ್ಗಿಯು ವೀರಪುರುಷೋಚಿತವಚನಗಳಿಂದ ವಾದಕ್ಕೆ ಕರೆದಳು. ಸರ್ವಪಂಡಿತರೂ ಅದನ್ನು ಮನ್ನಿಸಿದರು. ಹಾಗೂ ಯಾಜ್ಞವಲ್ಕ್ಯ ಋಷಿಯು ಆಕೆಯ ಪ್ರಶ್ನಗಳಿಗೆ ಸವಿಸ್ತರವಾದ ಉತ್ತರಗ ಳನ್ನು ಕೊಡಲು ಸಿದ್ಧನಾದನು. ಈ ಎಲ್ಲ ಸಂಗತಿಗಳಿಂದ ಆಗಿನ ಕಾಲ ದಲ್ಲಿ ವಿದ್ಯೆಯು ಸಂಬಂಧದಿಂದ ಸ್ತ್ರೀ ಪುರುಷರಲ್ಲಿ ಹೆಚ್ಚು ಕಡಿಮೆಯ ಭಾವ ನೆಯು ನಿಶ್ಚಯವಾಗಿ ಇರಲಿಲ್ಲವೆಂದು ತಿಳಿಯಲಿಕ್ಕೆ ಏನೂ ಅಡ್ಡಿಯಿಲ್ಲ. ಈ ಪ್ರಕಾರದ ಸ್ತ್ರೀಪುರುಷರಿಂದ ಕೂಡಿದ ಸಭೆಗಳ ವರ್ಣನೆಯು ಅನೇಕ ಕಡೆಯಲ್ಲಿ ದೊರೆಯುವದು. ಮಹಾಭಾರತದೊಳಗಿನ ಶಾಂತಿಪರ್ವದ ೩೨೦ ನೇ ಅಧ್ಯಾಯದಲ್ಲಿ ಪ್ರಧಾನನೆಂಬ ಋಷಿಯ ಮಗಳಾದ ಸುಲಭಾ ಮೈತ್ರೇಯಿಯು ಜನಕನ ಸಂಗಡ ಅಧ್ಯಾತ್ಮಿಕ ವಿಷಯವನ್ನು ಕುರಿತು ವಾದಿಸಿದ್ದರ ವರ್ಣನೆಯಿರುವದು. ಆ ವರ್ಣನೆಯು ಬಹಳ ಹೃದಯಂಗ ಮವಾಗಿರುವದು. ಆದರೆ ವಿಸ್ತಾರಭಯಕ್ಕಾಗಿ ನಾನು ಅದನ್ನು ಇಲ್ಲಿ ಅನುವಾದಿಸುವದಿಲ್ಲ. ಸ್ತ್ರೀಯರ ವಿದ್ಯಾಪ್ರಾಪ್ತಿಯ ಸಂಬಂಧದ ಆತುರ ತೆಯು ನಮ್ಮ ನಿಮ್ಮಂತೆ, ಸಹೃದಯನಾದ ಭವಭೂತಿ ಕವಿಗೂ ಪ್ರೀತ್ಯಾಸ್ಪ ದವಾಗಿತ್ತೆಂದು ತೋರುತ್ತದೆ. ಅವನು ತನ್ನ ಉತ್ತರರಾಮಚರಿತ್ರ ನಾಟ ಕದಲ್ಲಿ, ಹೆಂಗಸರು ಜ್ಞಾನಪ್ರಾಪ್ತಿಗಾಗಿ ಕಷ್ಟಕರವಾದ ದೂರದೂರದ ಪ್ರವಾಸಗಳನ್ನು ಕೈಕೊಳ್ಳುತ್ತಿದ್ದರೆಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದಾನೆ. ಶ್ರೀರಾಮನು ಲೋಕಾಪವಾದ ಭಯದಿಂದ ಸೀತಾದೇವಿಯನ್ನು ಬಿಟ್ಟುಬಿಟ್ಟ ತರುವಾಯ, ಆಕೆಯು ವಾಲ್ಮೀಕಿ ಋಷಿಯ ಆಶ್ರಮದಲ್ಲಿ ಲವಕುಶರೆಂಬ ಅವಳಿ ಮಕ್ಕಳನ್ನು ಹೆತ್ತಳು. ಆ ಕುಮಾರರಿಗೆ ವಾಲ್ಮೀಕಿ ಋಷಿಯು ಸ್ವತಃ ಪಾಠ ಹೇಳುತ್ತಿದ್ದನು. ಆ ಹುಡುಗರ ಕುಶಾಗ್ರಬುದ್ಧಿಯ ಮೂಲಕ ಆತ್ರೇಯಿಯೆಂಬ ಋಷಿಕನ್ನಿಕೆಗೆ ಅನರೊಪನೆ ಅಧ್ಯಯನವು ನಡೆಯದಂ ತಾಯಿತು. ಅದಕ್ಕಾಗಿ ಆತ್ರೇಯಿಯು ತಮಸಾ ನದೀತೀರದಲ್ಲಿದ್ದ ವಾಲ್ಮೀಕಿ ಋಷಿಯ ಆಶ್ರಮದಿಂದ ದಂಡಕಾರಣ್ಯದ ಮಾರ್ಗವನ್ನು ಹಿಡಿ ದಳು. ಆ ಕಾಲದಲ್ಲಿ ಆಕೆಯು:—

"अस्मिन्नगस्त्यप्रमुखाः प्रदेशे भूयांस उद्गीथविदो वसन्ति।
तेभ्योधिगन्तं निगमान्तविद्यां वाल्मीकिपार्श्वादिह पर्यटामि"

ಅಂದರೆ, "ವೇದಗಳನ್ನು ತಿಳಿದಂಥ ಅಗಸ್ತ್ಯ ಪ್ರಮುಖರಾದ ಅನೇಕ ಋಷಿಗಳು ಅಲ್ಲಿ ವಾಸಿಸುವರು; ಅವರಿಂದ ವೇದಾಂತ ವಿದ್ಯೆಯನ್ನು ದೊರಕಿಸುವದಕ್ಕಾಗಿ, ವಾಲ್ಮೀಕಿ ಋಷಿಯ ಆಶ್ರಮದಿಂದ ಈ ಕಡೆ ತಿರುಗಾಡುತ್ತ ಬಂದಿರುವೆನು" ಎಂದು ವನದೇವತೆಯನ್ನು ಕುರಿತು ಹೇ ರುವಳು. ಯಾವ ಕಾಲದಲ್ಲಿ ಹಾಗು ಯಾವ ಸಮಾಜದಲ್ಲಿ ಇಂಥ ಕಾರ್ಯ ಗಳು ನಡೆಯುತ್ತಿದ್ದವೋ ಆ ಕಾಲವೇ ಧನ್ಯ! ಆ ಸಮಾಜವೇ ಧನ್ಯ ನಿಜವಾಗಿಯೂ ಅದು ಕೃತಯುಗವು!!

ವೇದಕಾಲದಲ್ಲಿ ಸ್ತ್ರೀಯರಿಗೆ ಶಿಕ್ಷಣ ಕೊಡುತ್ತಿದ್ದರೆಂಬದಿಷ್ಟೇ ಅಲ್ಲ ತಾಯಿತಂದೆಗಳು ತಮ್ಮ ಕನ್ನಿಕೆಯರು ಪಂಡಿತೆಯರಾಗಬೇಕೆಂದೂ ಬಯ ಸುತ್ತಿದ್ದರು. ಬೃಹದಾರಣ್ಯಕೋಪನಿಷದದ ಒನೇ ಅಧ್ಯಾಯದ ಳನೆ ಬ್ರಾಹ್ಮಣದಲ್ಲಿ, "अथ य इच्छेद्दुहिता मे पण्डिता जायेत सर्वमायुरियात्" ಎಂದು ಒಂದು ಕಂಡಿಕೆಯಿರುವದು. ಈ ಕಂಡಿಕೆಯಿಂದ ತಾಯಿತಂದೆ ಗಳು ತಮ್ಮ ಕನ್ನಿಕೆಯರು ಪಂಡಿತೆಯರಾಗಬೇಕೆಂದು ಬಯಸುತ್ತಿದ್ದ ರೆಂಬದು ಸ್ಪಷ್ಟವಾಗುತ್ತದೆ.

ವೇದಕಾಲದಲ್ಲಿ ಬ್ರಹ್ಮವಾದಿನಿಯೆರಾದ ಅನೇಕ ಸ್ತ್ರೀಯರು ಆ ಹೋದರು. ಅವರ ಹೆಸರುಗಳು ಪ್ರಾಚೀನ ವಾಙ್ಮಯದಲ್ಲಿ ದೊರೆಯು ತ್ತವೆ: ಗಾರ್ಗೀವಾಚಕ್ನವೀ, ವಡವಾಪ್ರಾತೀಥೆಯೀ, ಸುಲಭಾ ಮೈತ್ರೇಯೀ ಇವರಿಗಂತೂ, ಋಷಿತರ್ಪಣದಲ್ಲಿಯೂ ಬ್ರಹ್ಮಯಜ್ಞದಲ್ಲಿಯೂ ಸ್ಥಾನವ ದೊರೆದಿರುತ್ತದೆ. ಇವರಲ್ಲದೆ ಘೋಷಾ, ಗೋಧಾ ಎಂಬ ಇಬ್ಬರು ಬ್ರಹ್ಮ ವಾದಿನಿಯರ ಹೆಸರುಗಳಾದರೂ ದೊರೆಯುತ್ತವೆ. ಹೆಂಗಸರ ಯೋಗ್ಯ ತೆಯ ಬಗ್ಗೆ ಇದಕ್ಕೂ ಹೆಚ್ಚು ಬಲವತ್ತರವಾದ ಪ್ರಮಾಣಗಳೇನಾದರೂ ಬೇಕಾಗಿರುವವೇ?

ಸ್ತ್ರೀ ಶಿಕ್ಷಣದ ಈ ಪರಂಪರೆಯು ರಾಮಾಯಣ ಕಾಲದ ವರೆಗೂ ನಡೆದು ಬಂದಿತ್ತೆಂದು ತೋರುತ್ತದೆ. ಕೈಕೇಯಿಯ ಆಗ್ರಹಮೂಲಕ ವಾಗಿ ರಾಮನನ್ನು ವನವಾಸಕ್ಕೆ ಕಳುಹಬೇಕೆಂದು ನಿಶ್ಚಯವಾದಾಗ, ರಾಮನು ಮಾತೆಯಾದ ಕೌಸಲ್ಯೆಯ ಅಪ್ಪಣೆಯನ್ನು ತೆಗೆದುಕೊಳ್ಳುವದ ಕ್ಕಾಗಿ ಆಕೆಯ ಮಂದಿರಕ್ಕೆ ಹೋದನು. ಆ ಕಾಲದ ಕೌಸಲ್ಯೆಯ ವರ್ಣ ನೆಯನ್ನು ವಾಲ್ಮೀಕಿ ಮಹರ್ಷಿಗಳು ಈ ಬಗೆಯಾಗಿ ಮಾಡಿರುವರು:—

सा क्षौमवसना दृष्टा नित्यव्रतपरायणा ।
अग्निं जुहोतिस्म तदा मंत्रवत्कृतमङ्गला

ಇದರಿಂದ ಕೌಸಲ್ಯೆಯು ಸಮಂತ್ರಕವಾಗಿ ಅಗ್ನಿಯನ್ನು ಹವಸ ಮಾಡುತ್ತಿದ್ದಳೆಂಬದು ಗೊತ್ತಾಗುತ್ತದೆ. ಹನುಮಂತನು ಸೀತಾದೇವಿಯನ್ನು ಹುಡುಕುವದಕ್ಕಾಗಿ ಲಂಕಾ ಪಟ್ಟಣಕ್ಕೆ ಹೋದನು. ಅಲ್ಲಿ ಅಶೋಕ ವನದಲ್ಲಿ ಅವನಿಗೆ ಸೀತೆಯು ಕಾಣಿಸಲಿಲ್ಲ. ಆದರಿಂದ ಅವನು ನದೀತೀರಕ್ಕೆ ಹೋದನು. ಯಾಕಂದರೆ,

೨. संध्याकालमनाः श्याम ध्रुवमेष्यति जानकी ।
नदीं चेमां शुभजलां सन्ध्यार्थे वरवर्णिनी ॥

ಅಂದರೆ, ಅಲ್ಲಿ ಜಾನಕಿಯು ಸಾಯಂಕಾಲದ ಸಂಧ್ಯಾವಂದನಾರ್ಥವಾಗಿ ನಿಶ್ಚಯವಾಗಿ ಬರುವಳೆಂದು ಅವನಿಗೆ ಗೊತ್ತಿತ್ತು.

ಈ ಸಂಬಂಧದಿಂದ ಪ್ರೊಫೆಸರ ವೀಬರ್ ಎಂಬವರ ಅಭಿಪ್ರಾಯವು ಹಿಂದೂ ಸ್ತ್ರೀಯರಿಗೆ ಅನುಕೂಲವಾದದ್ದಿರುವದು. ಪ್ರೊಫೆಸರ್ ವೀಬರ ಇವರು ಸಂಸ್ಕೃತವಾಙ್ಮಯದ ಸಂಬಂಧವಾಗಿ ಒಂದು ಹೆಸರಾಡ ಗ್ರಂಥವನ್ನು ಬರೆದಿರುವರು. ಆದಕಾರಣ ಈ ವಿಷಯದಲ್ಲಿ ಮತ ಕೊಡುವದಕ್ಕೆ ಅವರಿಗೆ ಅಧಿಕಾರ ಉಂಟೆಂಬದನ್ನು ಬೇರೆ ಹೇಳುವ ಅವಶ್ಯವಿಲ್ಲ. ಪ್ರೊಫೆಸರ್ ವೀಬರರವರು ಹೇಳುವದೇನೆಂದರೆ, " ಆಗಿನ ಕಾಲದ ಬ್ರಾಹ್ಮಣರ ಬೌದ್ಧಿಕ ಜೀವನವು ಬಹಳ ಸತೇಜವಾದದ್ದಿತ್ತೆಂದು ಹ್ಯಾಗಾದರೂ ಒಪ್ಪಿಕೊಳ್ಳಲೇ ಬೇಕಾಗುವದು. ಅವರ ಈ ಬೌದ್ಧಿಕ ಜೀವನ ಫ್ರನುದಲ್ಲಿ ಅವರ ಸ್ತ್ರೀಯರೂ ಕಾರ್ಯಕ್ಷಮವಾದ ಭಾಗವನ್ನು ಕೈಕೊಂಡಿ

* " We must at any rate assume among the Brahmans of this period a very stirring intellectual life in which even the women took an active part and which accounts still further for the superiority maintained and exercised by the Brahmans over the rest of the people–Brahmans who with lively emulation carry on their enquiries into the highest questions the human mind can propound–women who with enthusiastic ardour plunge into the mysteries of speculation, impressing and astonishing men by the depth and loftiness of their opinions and who solve the questions proposed to them on sacred subjects."

ದ್ದರು. ಹಿಂದೆ ಹೇಳಿದ ಕಾರಣಕ್ಕಿಂತಲೂ ಹೆಚ್ಚಾಗಿ, ಈ ಕಾರಣದಿ
ದಲೇ ಅವರು ಇತರ ವರ್ಣದವರ ಮೇಲಿನ ತಮ್ಮ ವರ್ಚಸ್ಸನ್ನು
ಕಾಯ್ದುಕೊಂಡು, ಅವರ ಮೇಲೆ ಅಧಿಕಾರ ನಡೆಯಿಸಲು ಸಮರ್ಥರಾದರು
ಬ್ರಾಹ್ಮಣರು ಮನುಷ್ಯನ ಮನಸ್ಸಿಗೆ ಸೂಚಿಸಬಹುದಾದ ಅತ್ಯಂತ ಗಹನ
ಪ್ರಶ್ನೆಗಳನ್ನು ಬಿಡಿಸುವ ಕೆಲಸದಲ್ಲಿ ಉಜ್ವಲವಾದ ಸ್ಪರ್ಧೆಯೊಡನೆ ತೊಡ
ಗಿದ್ದರು; ಮತ್ತು ಅವರ ಹೆಂಗಸರಾದರೂ ಈ ಗೂಢ ಪ್ರಮೇಯಗಳಲ್ಲಿ
ಉತ್ಸಾಹವುಳ್ಳ ಆವೇಶದೊಡನೆ ಅವಗಾಹನ ಮಾಡಿ, ತಮ್ಮ ಗಂಭೀರವಾ
ದಂಥ ಪ್ರಗಲ್ಭವಾದಂಥ ವಿಚಾರಗಳಿಂದ ಪುರುಷರ ಮನಸ್ಸಿನ ಮೇಲೆ
ಮೇಲುಕೈಯನ್ನು ಮಾಡಿ, ಅವರನ್ನು ಆಶ್ಚರ್ಯಚಕಿತರನ್ನಾಗಿ ಮಾಡುತ್ತಿ
ದ್ದರು; ಹಾಗೂ ಅವರು ತಮಗೆ ಕೇಳಿದ ಪಾರಮಾರ್ಥ ವಿಷಯಕವಾದ
ಪ್ರಶ್ನೆಗಳನ್ನು ಬಿಡಿಸುತ್ತಿದ್ದರು."

ನಮ್ಮ ಸನ್ಮಾನ್ಯ ದೇಶಬಾಂಧವರಾದ ಪರಲೋಕವಾಸೀ ರಮೇಶ
ಚಂದ್ರ ದತ್ತರವರು "ಪ್ರಾಚೀನಭರತಖಂಡದ ಸುಧಾರಣೆಯ ಇತಿಹಾಸ"
ವೆಂಬ ಒಂದು ಸುಪ್ರಸಿದ್ಧ ಗ್ರಂಥವನ್ನು ಬರೆದಿರುವರು. ಇವರಾದರೂ
ಫನ ವಿದ್ವಾಂಸರಾಗಿದ್ದರು. ಇವರು ನಮ್ಮ ರಾಷ್ಟ್ರೀಯ ಗ್ರಂಥಗಳಾದ
ರಾಮಾಯಣ–ಮಹಾಭಾರತಗಳನ್ನು ಇಂಗ್ಲಿಷಿನಲ್ಲಿ ಪದ್ಯಬದ್ಧವಾಗಿ ಬರೆದಿ
ರುವರು. ಇವರು ತಮ್ಮ ಇತಿಹಾಸ ಗ್ರಂಥದಲ್ಲಿ ಬರೆದಿರುವದೇನೆಂದರೆ:–

"ಆ ಕಾಲದ ಇತಿಹಾಸದಲ್ಲಿ ಕಂಡು ಬರುವಂಥ, ಸೂಕ್ತಗಳನ್ನು
ರಚಿಸುವಂಥ, ಯಜ್ಞಗಳನ್ನು ಮಾಡುವಂಥ, ಹಾಗೂ ಸ್ವತಃ ಋಷಿಪದ
ವನ್ನು ಹೊಂದಿದಂಥ ಸ್ತ್ರೀಯರ ಚಿತ್ರಗಳು ಹೆಚ್ಚು ಆನಂದಕರವಾಗಿವೆ.
ಆಗಿನ ಕಾಲದಲ್ಲಿ ಹೆಂಗಸರ ಸಂಬಂಧದಿಂದ ಯಾವ ತರದ ಅನಿಷ್ಟಕರ
ವಾದ ಪ್ರತಿಬಂಧಗಳೂ ಇರಲಿಲ್ಲ. ಅವರನ್ನು ಏಕಾಂತವಾಸದಲ್ಲಿ ಇಡುವ
ದಕ್ಕಾಗಲಿ, ಅಶಿಕ್ಷಿತ ಸ್ಥಿತಿಯಲ್ಲಿ ಇಡುವದಕ್ಕಾಗಲಿ, ಸಮಾಜದಲ್ಲಿ ಸ್ತ್ರೀಯ
ರಿಗಿರುವ ಯೋಗ್ಯಸ್ಥಾನದಿಂದ ಅವರನ್ನು ದೂರ ಇಡುವದಕ್ಕಾಗಲಿ ಪ್ರಯ
ತ್ನಗಳು ಮಾಡಲ್ಪಡುತ್ತಿದ್ದಿಲ್ಲ." *

[ಸಕೇಪ.]

---

*"Still more grateful to us is the picture of cultured ladies who were themselves *Rishis* and composed hymns and performed sacrifices. For there were no unhealthy restrictions against women in those days, no attempt to keep them secluded or uneducated or debarred from their legitimate place in society."

ದೇಶಭಾಷೆಯ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜುಗಳ ಕಾಯಿದೆ.

೧೯೧೦

ದಕ್ಷಿಣ ಭಾಗ.

ಧಾರವಾಡ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದ ತಿದ್ದಿ ಶುದ್ಧ ಮಾಡಿದ ಕಾಯಿದೆಯನ್ನು ದಕ್ಷಿಣ ಭಾಗದೊಳಗಿನ ವಿದ್ಯಾಖಾತೆಯ ಅಧಿಕಾರಿಗಳು ತಿಳಿದುಕೊಂಡು ಅದರಂತೆ ನಡೆಯುಬೇಕೆಂಬ ಉದ್ದೇಶದಿಂದ ಕೆಳಗೆ ಪ್ರಕಟಿಸಿರುತ್ತೇವೆ.

ಡಾಯರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಶನ್‌ರ ಆಫೀಸು.
ಪುಣೆ. ೨೬ನೇ ಅಕ್ಟೋಬರ ೧೯೧೦.

ಡಬ್ಲ್ಯೂ. ಎಚ್. ಶಾರ್ಪ್
ಡಾಯರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಶನ್.

೧. ಶಿಕ್ಷಣದ ಕಲೆಯನ್ನು ಕಲಿಸಿ ದೇಶಭಾಷೆಯ ಶಾಲೆಗಳ ಅಧ್ಯಾಪಿಕೆಯರನ್ನೂ ಸಹಾಯಾಧ್ಯಾಪಿಕೆಯರನ್ನೂ ತಯಾರಿಸುವದಕ್ಕಾಗಿ ಧಾರವಾಡದ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜವು (ಶಿಕ್ಷಣಾಲಯವು) ಇಡಲ್ಪಟ್ಟಿದೆ.

೨. ಈ ಕಾಲೇಜವು ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರ ಮೇಲ್ವಿಚಾರಣೆಗೊಳಗಾಗಿ ಲೇಡೀ ಸುಪರಿಂಟೆಂಡೆಂಟರ ಅಧಿಕಾರದಲ್ಲಿರುವದು. ಅಂತಸ್ಥ ವ್ಯವಸ್ಥೆ ಹಾಗೂ ತಿದ್ದುವಿಕೆ ಇವುಗಳ ಸಂಬಂಧದಿಂದ ನಿಯಮಗಳನ್ನು ಮಾಡುವದಕ್ಕೂ ಆ ನಿಯಮಗಳನ್ನು ಮುರಿದ ವಿದ್ಯಾರ್ಥಿನಿಯರನ್ನು ಶಿಕ್ಷಿಸುವದಕ್ಕೂ ಲೇಡೀ ಸುಪರಿಂಟೆಂಡೆಂಟರಿಗೆ ಅಧಿಕಾರವುಂಟು. ಇದಲ್ಲದೆ, ಏನೂ ಕಾರಣವನ್ನು ಹೇಳದೆ, ಯಾವಳೊಬ್ಬ ವಿದ್ಯಾರ್ಥಿನಿಯನ್ನು ಕಾಲೇಜದಿಂದ ಹೊರಗೆ ಹಾಕಲಿಕ್ಕೂ ಲೇಡೀ ಸುಪರಿಂಟೆಂಡೆಂಟರಿಗೆ ಅಧಿಕಾರವುಂಟು.

೩. ಶಿಕ್ಷಣಕಲೆಯನ್ನು ಕಲಿಯುವ ಕೆಲವು ವಿದ್ಯಾರ್ಥಿನಿಯರಿಗೆ ಸಂಬಳ ಅಥವಾ ಉದರಪೋಷಣದ ಪೂರ್ತಿ ಹಣ ಕೊಡಲಾಗುವದು. ಸಂಬಳಗಳಲ್ಲಿ ಎರಡು ತರಗಳಿದ್ದು ಅವು ಒಂದೊಂದು ವರ್ಷದ ವರೆಗೆ ನಡೆಯುವವು. ಅವು ಯಾವವೆಂದರೆ:—

೧ನೆಯ ವರ್ಷದ ವಿದ್ಯಾರ್ಥಿನಿಯರಿಗೆ ೮ ರೂಪಾಯಿ ಸಂಬಳ.

೨ನೆಯ ,, ,, ,, ,,

೪. ಕಾಲೇಜಕ್ಕೆ ಬರಲಪೇಕ್ಷಿಸುವ ಉಮೇದವಾರರು ಕಾಲೇಜದಲ್ಲಿ ದಾಖಲ ಮಾಡಿಕೊಳ್ಳುವ ಬಗ್ಗೆ ಮುಂದೆ ಕೊಟ್ಟ ನಮೂನೆ (ಪರಿಶಿಷ್ಟ ಅ.) ಯಂತೆ ಅರ್ಜಿ ಮಾಡಬೇಕು. ಈ ಅರ್ಜಿಯ ನಮೂನೆಗಳು ಬೇಕಾದವರಿಗೆ ಕಿಮ್ಮತ್ತು ಇಲ್ಲದೆ ಸಿಗುವವು. ಉಮೇದವಾರರು ತಾವು ಒಳ್ಳೇ ನಡತೆಯವರೆಂಬ ಬಗ್ಗೆ ಇಬ್ಬರು ಸಂಭಾವಿತ ಗೃಹಸ್ಥರಿಂದ ಸಹಿ ಮಾಡಲ್ಪಟ್ಟ ಸರ್ಟಿಫಿಕೇಟನ್ನು ಹಾಜರ ಮಾಡಬೇಕು.

೫. ಮದುವೆಯಾದ ಹೆಂಗಸನ್ನು ಆಕೆಯ ಗಂಡನ ಲೇಖೀ ಅನುಮತಿ ಇಲ್ಲದೆ, ಕಾಲೇಜದಲ್ಲಿ ತೆಗೆದುಕೊಳ್ಳಲಾಗದು. ಹಾಗೂ ವಿಧವೆಯಾಗಿದ್ದವಳನ್ನು ಆಕೆಯ ಕಾಯಿದೆಗೆಸರಿಯಾದ ಪಾಲಕನ ಲೇಖೀ ಅನುಮತಿ ಇಲ್ಲದೆ ಕಾಲೇಜದಲ್ಲಿ ತೆಗೆದುಕೊಳ್ಳಲಾಗದು. ಮದುವೆಯಾಗದ ಹೆಂಗಸರನ್ನು ಅವರ ಕಾಯಿದೆ ಸರಿಯಾದ ಪುರುಷಪಾಲಕರ ಲೇಖೀ ಅನುಮತಿಯಿಂದ ಕಾಲೇಜದಲ್ಲಿ ತೆಗೆದುಕೊಳ್ಳಬಹುದು. ಆದರೆ ಇಂಥ ಹಿಂದು ಧರ್ಮದ ವಿದ್ಯಾರ್ಥಿನಿಯರಿಗೆ ಸಂಬಳ ಕೊಡಲಿಕ್ಕಿಲ್ಲ.

೬. ಸಾಧಾರಣವಾಗಿ ೧೪ ವರ್ಷಕ್ಕಿಂತ ಕಡಿಮೆ ಅಥವಾ ೨೫ ವರ್ಷಕ್ಕಿಂತ ಹೆಚ್ಚು ವಯಸ್ಸಿನ ಉಮೇದವಾರರನ್ನು ಕಾಲೇಜದಲ್ಲಿ ತೆಗೆದುಕೊಳ್ಳಲಾಗದು.

೭. ಕಾಲೇಜದಲ್ಲಿ ತೆಗೆದುಕೊಳ್ಳುವ ಹಾಗೂ ಸಂಬಳಗಳನ್ನು ಕೊಡುವ ಪ್ರಸಂಗಗಳಲ್ಲಿ, ದೇಶಭಾಷೆಯ ಶಾಲಾಧ್ಯಾಪಕರ ಅಥವಾ ಗಂಡಸರ ಟ್ರೇನಿಂಗಕಾಲೇಜದ ವಿದ್ಯಾರ್ಥಿಗಳ ಹೆಂಡರನ್ನಾಗಲಿ ಅವರ ಜೇರೆ ಸ್ತ್ರೀ ಸಂಬಂಧಿಕರನ್ನಾಗಲಿ ಮೊದಲು ಆರಿಸಿ ತೆಗೆದುಕೊಳ್ಳಲಾಗುವದು. ಹಾಗೂ ಯಾವನೊಬ್ಬ ಶಿಕ್ಷಕನ ಹೆಂಡತಿಯು ಕಾಲೇಜದಿಂದ ತನ್ನ ಸರ್ಟಿಫಿಕೇಟನ್ನು ಪಡಕೊಂಡ ಮೇಲೆ, ಆಕೆಯ ಗಂಡನು ಯಾವ ಶಹರದಲ್ಲಿ ಅಥವಾ

ಹಳ್ಳಿಯಲ್ಲಿ ಕಲಸಕ್ಕೆ ನೇಮಿಸಲ್ಪಟ್ಟಿರುವನೋ ಅದೇ ಶಹರದಲ್ಲಿ ಅಥವಾ ಹಳ್ಳಿಯಲ್ಲಿ ಆಕೆಯನ್ನು ಕೆಲಸಕ್ಕೆ ನೇಮಿಸುವ ಜವಾಬುದಾರಿಯನ್ನು ವಿದ್ಯಾಖಾತೆಯವರು ವಹಿಸಿಕೊಳ್ಳುವರು.

೮. ಕಾಲೇಜದಲ್ಲಿ ವಿದ್ಯಾರ್ಥಿನಿಯರನ್ನು ತೆಗೆದುಕೊಳ್ಳುವದು. ಪ್ರವೇಶಪರೀಕ್ಷೆಯ ಪರಿಣಾಮವನ್ನವಲಂಬಿಸಿರುವದು. ಈ ಪರೀಕ್ಷೆಯನ್ನು ನವಂಬರ ತಿಂಗಳಲ್ಲಿ ಕಾಲೇಜದ ವಿದ್ಯಾಗುರುಗಳು ಹೆಣ್ಣುಮಕ್ಕಳ ದೇಶಭಾಷೆಯ ಜನೆಯ ಇಯತ್ತೆಯ ವಿಷಯಗಳಲ್ಲಿ ತೆಗೆದುಕೊಳ್ಳುವರು.

ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲಾರದ ಕೆಲವು ಉಪೇಕ್ಷಿತ ವಾರರನ್ನು ಸಹ ಕಾಲೇಜದಲ್ಲಿ ತೆಗೆದುಕೊಳ್ಳಬಹುದು.

೯. ಸಂಬಳ ಸಿಗುವ ವಿದ್ಯಾರ್ಥಿನಿಯರ ಕಾಯಿದೆಗೆ ಸರಿಯಾದ ಪುರುಷಪಾಲಕರು (ಗಂಡ, ಮಾವ, ಮೈದುನ, ತಂದೆ, ಸಹೋದರ, ಅಥವಾ ತಂದೆಯ ಇಲ್ಲವೆ ತಾಯಿಯ ಸಹೋದರ) ಈ ಕೋಡಿನ ಕಡೆಯ ಭಾಗದಲ್ಲಿ ತೋರಿಸಿದ ನಮೂನೆಯಂತೆ ಕರಾರ ಪತ್ರವನ್ನು ಬರಕೊಡಬೇಕು. (ಪರಿಶಿಷ್ಟ–ಬ). ಅನೇ ನಿಯಮದಂತೆ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದೆ ಕಾಲೇಜದಲ್ಲಿ ತೆಗೆದುಕೊಳ್ಳಲ್ಪಟ್ಟ ವಿದ್ಯಾರ್ಥಿನಿಯರಿಗೆ, ಅವರ ಪಾಲಕರು ಮೇಲೆ ನಮೂದಿಸಿರುವ ಕರಾರಪತ್ರವನ್ನು ಬರಕೊಟ್ಟ ಮೇಲೆ, ತಿಂಗಳಿಗೆ ೭ ರೂಪಾಯಿ ವರೆಗಿನ ಕಡಿಮೆ ತರದ ಸಂಬಳಗಳನ್ನು ಕೊಡಬಹುದು. ವಿಶೇಷ ತರದ ಸಂಗತಿಗಳಿದ್ದ ಪ್ರಸಂಗಗಳಲ್ಲಿ ಕರಾರಪತ್ರವಿಲ್ಲದ ವಿದ್ಯಾರ್ಥಿನಿಯರನ್ನೂ ಕೆಲವು ಮಾಫಿ ವಿದ್ಯಾರ್ಥಿನಿಯರನ್ನೂ ಕಾಲೇಜದ ವರ್ಗಗಳಲ್ಲಿ ತೆಗೆದುಕೊಳ್ಳಬಹುದು.

೧೦. ಸಂಬಳವನ್ನು ಕೊಡಜೇಕಾದರೆ ಮೊದಲು ವಿದ್ಯಾರ್ಥಿನಿಯರು ಅಧಿಕಾರವುಳ್ಳ ಡಾಕ್ಟರರಿಂದ "ಫೀಜಿಕಲ್ ಫಿಟ್‌ನೆಸ್" (ಶಾರೀರಿಕಯೋಗ್ಯತೆಯ) ಸರ್ಟಿಫಿಕೇಟನ್ನು ಹಾಜರ ಮಾಡಬೇಕು.

೧೧. ವಿದ್ಯಾರ್ಥಿನಿಯರು ಇರಲಿಕ್ಕೆ ಸ್ಥಳಾನುಕೂಲತೆ ಇದ್ದ ಮಟ್ಟಿಗೆ ಕಾಲೇಜದ ವಸತಿ ಗೃಹಗಳಲ್ಲಿ ಇರುವದಕ್ಕೆ ಅಗತ್ಯ ಪಡಿಸಲ್ಪಡುವರು. ಕಾಲೇಜದ ಹೊರಗೆ ಇರಲಿಕ್ಕೆ ಪರವಾನಗಿ ದೊರೆಯಜೇಕಾದರೆ ಅವರು ತಮ್ಮ ಇರೋಣ ಮುಂತಾದವುಗಳ ಸಂಬಂಧದಿಂದ ಯೋಗ್ಯ ವ್ಯವಸ್ಥೆ ಇದ್ದ ಬಗ್ಗೆ ಲೇಡೀ ಸುಪರಿಂಟೆಂಡೆಂಟರನ್ನು ಸಮಾಧಾನ ಪಡಿಸಬೇಕು.

೧೨. ಕಾಲೇಜದಲ್ಲಿ ಎರಡು ಬೇರೆ ಬೇರೆ ವರ್ಗಗಳಿರುತ್ತವೆ. ಪ್ರತಿಯೊಂದು ವರ್ಗದವರಿಗೆ ಷಾಣ್ಮಾಸಿಕ ಪರೀಕ್ಷೆಯೆಂತಲೂ ವಾರ್ಷಿಕ ಪರೀಕ್ಷೆಯೆಂತಲೂ ಎರಡು ಪರೀಕ್ಷೆಗಳುಂಟು. (ಪರಿಶಿಷ್ಟ ಕ.)

೧೩. ವರ್ಷದೊಳಗೆ ಎರಡು ಟರ್ಮುಗಳು (ಅಭ್ಯಾಸದ ಅವಧಿಗಳು) ಮಾಡಲ್ಪಟ್ಟವೆ. ಮೊದಲನೆಯದು ಕಾರ್ತಿಕ ವದ್ಯ ದಶಮಿಗೆ ಆರಂಭವಾಗಿ, ಎಪ್ರೆಲ್ ತಿಂಗಳ ೧೬ನೇ ತಾರೀಖಿಗೆ ಮುಗಿಯುತ್ತದೆ. ಎರಡನೆಯದು ಜೂನ ತಿಂಗಳ ೧೯ನೇ ತಾರೀಖಿಗೆ ಆರಂಭವಾಗಿ ಆಶ್ವಿನ ವದ್ಯ ನವಮಿಗೆ ಮುಗಿಯುತ್ತದೆ. (ಪ್ರಸಂಗ ವಿಶೇಷದಲ್ಲಿ ಈ ತಾರೀಖುಗಳನ್ನು ಸ್ವಲ್ಪ ಹೆಚ್ಚು ಕಡಿಮೆ ಮಾಡಬಹುದು.) ಪ್ರತಿ ವರ್ಷದ ಮೊದಲನೆಯ ಟರ್ಮಿನಲ್ಲಿ ಒಟ್ಟಿಗೆ ಹ್ಯಾಗೆ ಅಭ್ಯಾಸವಾಗಿರುತ್ತದೆಂಬದನ್ನು ನೋಡುವದಕ್ಕಾಗಿ ಕಾಲೇಜದ ಗುರುಗಳು ಷಾಣ್ಮಾಸಿಕ ಪರೀಕ್ಷೆಯನ್ನು ತೆಗೆದುಕೊಳ್ಳುವರು. ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದ ಸಂಬಳದ ವಿದ್ಯಾರ್ಥಿನಿಯರು ತಮ್ಮ ಸಂಬಳವನ್ನು ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರಿಗೆ ಯೋಗ್ಯ ತೋರಿದ ಮೇರೆಗೆ ಕಳಕೊಳ್ಳಲಿಕ್ಕಾಗಲಿ ಕಡಿಮೆ ಮಾಡಿಸಿಕೊಳ್ಳಲಿಕ್ಕಾಗಲಿ ಪಾತ್ರರಾಗುವರು.

೧೪. ಪ್ರತಿ ವರ್ಷದ ಎರಡನೆಯ ಟರ್ಮಿನ ಕೊನೆಗೆ ಇನಸ್ಪೆಕ್ಟರ ಸಾಹೇಬರು ಲೇಡೀ ಸುಪರಿಂಟೆಂಡೆಂಟರ ಹಾಗೂ ತಾವು ನಿಯಮಿಸಿದ ವಿದ್ಯಾಖಾತೆಯ ಇತರ ಅಧಿಕಾರಿಗಳ ಸಹಾಯದಿಂದ ಸರ್ಟಿಫಿಕೇಟ ಪರೀಕ್ಷೆಯನ್ನು ತೆಗೆದುಕೊಳ್ಳುವರು.

೧೫. ಸರ್ಟಿಫಿಕೇಟಪರೀಕ್ಷೆಯ ಪರಿಣಾಮವು ಎರಡು ಬೇರೆ ಬೇರೆ ಪಟ್ಟಿಗಳಲ್ಲಿ ತೋರಿಸಲ್ಪಡುವದು. ಆ ಪಟ್ಟಿಯಲ್ಲಿ ವಿದ್ಯಾರ್ಥಿನಿಯರ ಹೆಸರುಗಳು ಅವರು ದೊರಕಿಸಿದ ಗುಣಗಳ ಕ್ರಮದಂತೆ ಬರೆಯಲ್ಪಡುವವು. ೩ನೆಯ ವರ್ಷದ ವಿದ್ಯಾರ್ಥಿನಿಯರಲ್ಲಿ ಕೂಡಾ ಎರಡು ವರ್ಗಗಳು ಮಾಡಲ್ಪಡುವವು.

೧೬. ಪ್ರತಿಯೊಬ್ಬ ವಿದ್ಯಾರ್ಥಿನಿಯು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕಾದರೆ, ಪ್ರತಿಯೊಂದು ವಿಷಯದಲ್ಲಿ ಆ ವಿಷಯದ ಗುಣಗಳ ೩ ಕ್ಕಿಂತ ಕಡಿಮೆಯಾಗದಷ್ಟು ಗುಣಗಳನ್ನೂ ಪ್ರತಿಯೊಂದು ವಿಷಯದ ವಿಭಾಗಗಳಲ್ಲಿ ಆಯಾ ವಿಭಾಗಗಳ ಗುಣಗಳ ೩ ಕ್ಕಿಂತ ಕಡಿಮೆಯಾಗದಷ್ಟು ಗುಣಗಳನ್ನೂ ಪರೀಕ್ಷೆಗೆ ಇದ್ದ ಒಟ್ಟು ಗುಣಗಳಲ್ಲಿ ೧೦೦ಕ್ಕೆ ೪೦ಕ್ಕಿಂತ ಕಡಿಮೆಯಾಗದಷ್ಟು ಗುಣಗಳನ್ನೂ ದೊರಕಿಸಲಿಕ್ಕೆ ಬೇಕು.

ಈ ಶರ್ತಿಗೆ ಅನುಸರಿಸಿ ೨ನೆಯ ವರ್ಷದ ವಿದ್ಯಾರ್ಥಿನಿಯರಲ್ಲಿ ಒಟ್ಟು ಗುಣಗಳಲ್ಲಿ ¾ ಕ್ಕಿಂತ ಕಡಿಮೆಯಾಗದಷ್ಟು ಗುಣಗಳನ್ನು ದೊರಕಿಸಿದವರು ೧ನೇ ವರ್ಗದವರೆಂದು ಎಣಿಸಲ್ಪಡುವರು. ಉಳಿದವರು ಎರಡನೆಯ ವರ್ಗದವರೆಂದು ಎಣಿಸಲ್ಪಡುವರು.

೧೩. ಮೊದಲನೆಯ ವರ್ಷದ ಕೊನೆಗೆ ಆಗುವ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದ ವಿದ್ಯಾರ್ಥಿನಿಯರನ್ನು ಸಾಮಾನ್ಯವಾಗಿ ಕಾಲೇಜದಲ್ಲಿ ಇಟ್ಟುಕೊಳ್ಳಲಿಕ್ಕೆಲ್ಲ. ೨ನೆಯ ವರ್ಷದ ವಿದ್ಯಾರ್ಥಿನಿಯರು ಆ ವರ್ಷದ ಕೊನೆಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದಿದ್ದರೆ ಅವರಿಗೆ ೧ನೆಯ ವರ್ಷದ ಸರ್ಟಿಫಿಕೇಟು ಕೊಡಲ್ಪಡುವದು. ಆದರೆ, ಸಾಮಾನ್ಯವಾಗಿ ಅವರನ್ನು ಕಾಲೇಜದಲ್ಲಿ ಇಟ್ಟುಕೊಳ್ಳಲಾಗದು. ಯಾವದೊಂದು ಕೊನೆಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದ ವಿದ್ಯಾರ್ಥಿನಿಯರು ಎಜ್ಯುಕೇಶನಲ್ ಇನ್ಸ್‌ಪೇಕ್ಟರ ಸಾಹೇಬರ ಅಪ್ಪಣೆಯನ್ನು ಪಡಕೊಂಡು ಅದೇ ಪರೀಕ್ಷೆಗೆ ಮುಂದೆ ಮತ್ತೆಯೂ ಕೂಡ್ರಬಹುದು.

೧೪. ೧ನೆಯ ವರ್ಷದ ಕೊನೆಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿನಿಯರಲ್ಲಿ ಎಜ್ಯುಕೇಶನಲ್ ಇನ್ಸ್‌ಪೆಕ್ಟರ ಸಾಹೇಬರು ಬೇಕೆಂದು ಅರಿಸಿ ತೆಗೆದವರನ್ನು ಮಾತ್ರ ೨ನೆಯ ವರ್ಷದ ಅಭ್ಯಾಸ ಮಾಡಲಿಕ್ಕೆ ಕಾಲೇಜದಲ್ಲಿ ಇಟ್ಟುಕೊಳ್ಳಲಾಗುವದು.

೧೫. ತೇರ್ಗಡೆ ಹೊಂದಿದ ವಿದ್ಯಾರ್ಥಿನಿಯೆರಿಗೆ ಕಡೆಯಲ್ಲಿ ತೋರಿಸಿದ ನಮೂನೆಯಂತೆ (ಪರಿಶಿಷ್ಟ ಡ.) ಇನ್ಸ್‌ಪೇಕ್ಟರ ಸಾಹೇಬರೂ ಲೇಡೀ ಸುಪರಿಂಟೆಂಡೆಂಟರೂ ತಮ್ಮ ಸಹಿ ಮಾಡಿ ಸರ್ಟಿಫಿಕೇಟಗಳನ್ನು ಕೊಡುವರು. ಆ ಮೇಲೆ ಅವರು ತೆರವಿದ್ದ ಜಾಗೆಗಳನ್ನು ಗುಣಾನುಕ್ರಮದಂತೆ ಸಾಧಾರಣವಾಗಿ ಅರಿಸಿಕೊಳ್ಳಬಹುದು.

೧೦. ಸರ್ಟಿಫಿಕೇಟು ಪಡೆದ ವಿದ್ಯಾರ್ಥಿನಿಯರು ಕೆಳಗೆ ಬರೆದಂತೆ ಕಾಯಮ್ ಸಂಬಳದ ಜಾಗೆಗಳಿಗೆ ಯೋಗ್ಯರಾಗುವರು:—

೧ನೆಯ ವರ್ಷದವರು..... ತಿಂಗಳಿಗೆ ೧೫ ರೂ.॥

೨ನೆಯ ವರ್ಷದವರು } ೨ನೇ ವರ್ಗದಲ್ಲಿ ಬಂದರೆ ,, ೧೫ ,,
೧ನೇ ವರ್ಗದಲ್ಲಿ ಬಂದರೆ ,, ೨೦ ,,

೧೧. ಯಾವದೊಂದು ಸರ್ಟಿಫಿಕೇಟನ್ನು ಪಡೆದ ವಿದ್ಯಾರ್ಥಿನಿಗೆ ತನ್ನ ಸರ್ಟಿಫಿಕೇಟದಲ್ಲಿ ಇದ್ದಷ್ಟು ಸಂಬಳವನ್ನು ಕೂಡಲೇ ಬೇಡಲಿಕ್ಕೆ

ಅಧಿಕಾರವಿಲ್ಲ; ಆದರೆ, ಅಂಥ ಜಾಗೆ ತೆರವಾದಾಗ ಮಾತ್ರ ಅಕೆಯು ಅದಕ್ಕೆ ಯೋಗ್ಯಳಾಗುತ್ತಾಳೆ. ಆದಾಗ್ಯೂ, ೧ನೆಯ ೩ನೆಯ ವರ್ಷದ ವಿದ್ಯಾರ್ಥಿನಿಯರು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಕೂಡಲೆ ಅವರಿಗೆ ಆರಂಭದಲ್ಲಿ ಕನಿಷ್ಟ ಪಕ್ಷಕ್ಕೆ ಅನುಕ್ರಮವಾಗಿ ೧೧, ೧೩ ರೂಪಾಯಿ ಸಂಬಳ ದೊರೆಯುವದು. ಟ್ರೇಂಡರಾದ ಅಧ್ಯಾಪಿಕೆಯರನ್ನು ಅವರು ಪಡಕೊಂಡ ಸರ್ಟಿಫಿಕೇಟಗಳಿಗಿಂತ ಕಡಿಮೆ ಜಾಗೆಗಳಿಗೆ ನಿಯಮಿಸಿದ್ದರೆ ಅವರಿಗೆ ಆದಷ್ಟು ತೀವ್ರವಾಗಿ ಅವರ ಸರ್ಟಿಫಿಕೇಟದಲ್ಲಿದ್ದಷ್ಟು ಸಂಬಳ ಸಿಗುವಂತೆ ಬಡ್ತಿ ಮಾಡಲಾಗುವದು.

೨೨. ಟ್ರೈನಿಂಗ ಕಾಲೇಜದಲ್ಲಿದ್ದು ೧ನೆಯ ವರ್ಷದ ಸರ್ಟಿಫಿಕೇಟದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ (೧೮ನೇಯ ನಿಯಮದಂತೆ) ಕಾಲೇಜದಲ್ಲಿ ಮುಂದಿನ ಅಭ್ಯಾಸಕ್ಕಾಗಿ ಆರಿಸಲ್ಪಡದಂಥ ಅಧ್ಯಾಪಿಕೆಯರು ಕನಿಷ್ಟ ಪಕ್ಷಕ್ಕೆ ಎರಡು ವರ್ಷ ಚನ್ನಾಗಿ ಕೆಲಸ ಮಾಡಿದ ಬಳಿಕ ಇನಸ್ಪೆಕ್ಟರ ಸಾಹೇಬರ ವಿಶೇಷ ಅಪ್ಪಣೆ ಪಡಕೊಂಡು ೩ನೇ ವರ್ಷದ ಸರ್ಟಿಫಿಕೇಟದ ಪರೀಕ್ಷೆಯನ್ನು ಕೊಡಬಹುದು.

೨೩. ಲೋಕಲ್ ಬೋರ್ಡ ಇಲ್ಲವೆ ಮ್ಯುನಿಸಿಪಲ್ ಶಾಲೆಗಳ ಅಥವಾ ಶಾಲಾಖಾತೆಯ ಅಧಿಕಾರಸ್ಥರ ವಿಚಾರಣೆಗೆ ಒಳಗಾದ ಯಾವವಾದರೂ ಶಾಲೆಗಳ ಅಂಟ್ರೇಂಡ ಅಧ್ಯಾಪಿಕೆಯರು ಮೊದಲು ಟ್ರೈನಿಂಗ ಕಾಲೇಜದಲ್ಲಿ ಇರಲಿಯೇ ೧ನೆಯ ವರ್ಷದ ಪರೀಕ್ಷೆಗೆ ಕೂಡ್ರಬಹುದು. ಆದರೆ ಅವರು ದೇಶಭಾಷೆಯ ಶಾಲೆಗಳ ೫ನೆಯ ಇಯತ್ತೆಯಲ್ಲಿ ತೇರ್ಗಡೆ ಹೊಂದಿದ್ದು ೩ ವರ್ಷಕ್ಕೆಂತ ಕಡಿಮೆ ಇಲ್ಲದಷ್ಟು ಅವಧಿಯ ವರೆಗೆ ಚನ್ನಾಗಿ ಕೆಲಸ ಮಾಡಿದವರಿರಬೇಕು. ಈ ಮೇರೆಗೆ ಪರೀಕ್ಷೆಗೆ ಕೂಡ್ರುವವರೆಲ್ಲರೂ ಇನಸ್ಪೆಕ್ಟರಸಾಹೇಬರ ವಿಶೇಷ ಅಪ್ಪಣೆಯನ್ನು ಪಡಕೊಳ್ಳಬೇಕಾಗುವದು. ಆದರೆ, ಕಾಲೇಜದಲ್ಲಿದ್ದು 'ಇಡೀ' ವರ್ಷ ಎಲ್ಲಕ್ಕೂ ಮೇಲಿನ ವರ್ಗದಲ್ಲಿ ಅಭ್ಯಾಸ ಮಾಡಿದ. ಹೊರತು ಎಲ್ಲಕ್ಕೂ ಹೆಚ್ಚಿನ ಪರೀಕ್ಷೆಗೆ ಇಂಥ ಯಾವ ಅಧ್ಯಾಪಿಕೆಯರು ಕೂಡ್ರಲಾಗದು.

೨೪. ೧೯೧೧ನೆಯ ಇಸವಿಯ ಮೇ ತಿಂಗಳ ೨೮ನೇ ತಾರೀಖಿನ ೧೦೪೯ನೇ ನಂಬರದ ಸರಕಾರನ ತರುವಿನಂತೆ ಪೆನಶನ್ನಿಗೆ ಯೋಗ್ಯವಾದ ಸಂಬಳವುಳ್ಳ ಅಧ್ಯಾಪಿಕೆಯರು ತಮ್ಮ ಮೇಲಧಿಕಾರಿಗಳ ಅಪ್ಪಣೆ ಪಡೆದು

ಕೊಂಡು ಟ್ರೇನಿಂಗ ಕಾಲೇಜದ ಅಭ್ಯಾಸಕ್ಕೆ ಇದ್ದರೆ ಅಲ್ಲಿ ಇರುವಾಗ ಅವರಿಗೆ ಸಂಬಳವು ಸಿಗಲಿ, ಸಿಗದೆ ಇರಲಿ, ಅವರು ಕಾಲೇಜದಲ್ಲಿ ಇದ್ದ ಕಾಲವು ಪೇನಶನಿಗೆ ಯೋಗ್ಯವಾದ ಕಾಲವೆಂದು ಎಣಿಸಲ್ಪಡುವದು.

ಪರಿಶಿಷ್ಟ ಬಿ.

ಅರ್ಜಿಯ ನಮೂನೆ. (೪೯ನೆಯ ನಿಯಮ)

೧೯೧೧

ಧಾರವಾಡ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜದ ಲೇಡೀ ಸುಪರಿಂಟೆಂಡೆಂಟ ಸಾಹೇಬರ ಸನ್ನಿಧಿಗೆ—

ಡೊರೆಸಾನಿಗಳೀ,

ನಾನು ನನ್ನ.... ....ನ್ನು ಅಭ್ಯಾಸಕ್ಕಾಗಿ ಕಾಲೇಜಕ್ಕೆ ಕಳುಹಿಸಲಪೇಕ್ಷಿಸುತ್ತೇನೆ. ಕಾಲೇಜದ ನಿಯಮಗಳನ್ನೂ ಕಾಯಿದೆಗಳನ್ನೂ ನಾನು ಓದಿದ್ದೇನೆ. ಮತ್ತು ಅವುಗಳನ್ನನುಸರಿಸಿ ನಡಕೊಳ್ಳಲಿಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ಆಕೆಯ ಸಂಬಂಧದಿಂದ ಬೇಕಾಗಿರುವ ಮಾಹಿತಿಯು ಇದರ ಹಿಂಭಾಗದಲ್ಲಿ ಕೊಡಲ್ಪಟ್ಟಿರುವದು.

ತಮ್ಮ ನಂಬಿಕೆಯುಳ್ಳ.

ಅರ್ಜಿದಾರನ ಸಹಿ ಹಾಗು ಪೂರ್ಣ ವಿಳಾಸ. ....

ಪಾಲಕನು ಕೆಳಗೆ ಕೊಟ್ಟ ಮಾಹಿತಿಯನ್ನು ಕೊಡಬೇಕು :—

(ಅ) ಹೆಸರು.

(ಬ) ಹುಟ್ಟಿದ ತಾರೀಖು.

(ಕ) ಜಾತಿ ಹಾಗು ಒಳಜಾತಿ.

(ಡ) ಆಗಿರುವ ವಿದ್ಯಾಭ್ಯಾಸವು.

(ಇ) ಸ್ಥಿತಿ (ವಿವಾಹಿತಳು, ಅವಿವಾಹಿತಳು, ವಿಧವೆ.)

(ಫ) ಪಾಲಕನ ಹೆಸರು, ಉದ್ಯೋಗ, ಹಾಗು, ವಿಳಾಸ.

(ಗ) ಪಾಲಕನಿಗೂ ಪಾಲನೆಯಲ್ಲಿರುವವಳಿಗೂ ಇರುವ ಸಂಬಂಧ.

(ಹ) ಜಾಮೀನು ಆಗುವವರ ಹೆಸರುಗಳು ಹಾಗು ವಿಳಾಸಗಳು.

(ಯ) ಕರಾರಪತ್ರವನ್ನು ಬರಕೊಡಲಿಕ್ಕೆ ಒಪ್ಪಿಗೆ ಉಂಟೋ ಇಲ್ಲವೋ
ಪಾಲಕನ ಸಹಿ.

ಪರಿಶಿಷ್ಟ ಬ.

ಕರಾರಪತ್ರದ ನಮೂನೆ (೯ನೆಯ ನಿಯಮ)

ಸ್ಟ್ಯಾಂಪು

ರೂ. ೧-೮-೦

ಸನ್ ೧೯೧೧ . ನೇ ಇಸವಿಯ ತಿಂಗಳ ನೆಯ
ತಾರೀಖಿಗೆ ಮೊದಲನೆಯ ಭಾಗದ ಸಂಬಂಧದಿಂದ ....
ಈಕೆಯ ಕಾಯಿದೆಗೆ ಸರಿಯಾದ ಪುರಷಪಾಲಕನಾದ.... ....
ಈತನಿಗೂ ಎರಡನೆಯ ಭಾಗದ ಸಂಬಂಧದಿಂದ.... ....
ದಕ್ಷಿಣ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರಿಗೂ ಅದ
ಕರಾರು. .... ಈಕೆಗೆ ಕಾಯಿದೆಗೆ ಸರಿಯಾದ
ಪಾಲಕನಾದ ನಾನು .... ಈ ಲೇಖದಿಂದ ಧಾರವಾಡ ಹೆಣ್ಣು
ಮಕ್ಕಳ ಟ್ರೇನಿಂಗ ಕಾಲೇಜದಲ್ಲಿ ನೇಮಕವಾದ ಸಂಬಳಗಳ ಇಯತ್ತೆಗಳಿ
ಗೂ ನಿಯಮಗಳಿಗೂ ಅನುಸರಿಸಿ .... ಈಕೆಗೆ ಕೊಟ್ಟ
ಸಂಬಳಕ್ಕೆ ಬದಲಾಗಿ ಒಪ್ಪಿಕೊಳ್ಳುವದೇನೆಂದರೆ— ....
ಇವಳು ಟ್ರೇನಿಂಗ ಕಾಲೇಜದ ನಿಯಮಗಳನ್ನು ಪಾಲಿಸುವಳು. ಹಾಗು
ದಕ್ಷಿಣ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರು ಇಟ್ಟಷ್ಟು
ದಿವಸಗಳ ವರೆಗೆ, ಅಥವಾ ಈಕೆಯು ಅವಶ್ಯವಾದ ಸರ್ಟಿಫಿಕೇಟದ ಪರೀಕ್ಷೆ
ಯಲ್ಲಿ ತೇರ್ಗಡೆಯಾಗುವವರೆಗೆ ಟ್ರೇನಿಂಗ ಕಾಲೇಜದಲ್ಲಿರುವಳು. ಇದಲ್ಲದೆ
ಮುಂದೆ ಈಕೆಯು ಟ್ರೇನಿಂಗ ಕಾಲೇಜದಲ್ಲಿದ್ದಷ್ಟು ದಿವಸಗಳಿಗಿಂತ ಕಡಿಮೆ
ಯಲ್ಲದಷ್ಟು ದಿವಸಗಳ ವರೆಗೆ ಅಧ್ಯಾಪಿಕೆಯಾಗಿ ವಿದ್ಯಾಖಾತೆಯಲ್ಲಿ ಕೆಲಸ
ಮಾಡುವಳು. ಹಾಗು, ಈಕೆಗೆ ಒಪ್ಪಿಸಿದ ಎಲ್ಲ ಕೆಲಸವನ್ನು ಈಕೆಯು
ಸದರಿ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರಿಗೆ ಸಮಾಧಾನಕರವಾಗು
ವಂತೆ ಮಾಡುವಳು. ಈ ಕರಾರಿಗೆ ನಾನಾಗಲಿ ಈಕೆಯಾಗಲಿ ಯಾವದಾ
ಪರೂ ರೀತಿಯಿಂದ ಭಂಗತಂದರೆ.... ....ಈಕೆಗೆ ಕೊಟ್ಟ
ಸಂಬಳಕ್ಕೆ ಸರಿಯಾದ ರಕಮನ್ನು ನಾನು ಸರಕಾರಕ್ಕೆ ಕೊಡಲಿಕ್ಕೆ ಒಪ್ಪಿ

ಕೊಳ್ಳುತ್ತೇನೆ. ಈ ಹಣವನ್ನು ಈ ಸಂಬಂಧದಿಂದ ಸರಕಾರಕ್ಕೆ ಆದ ಖರ್ಚು ಹಾಗು ಲುಕಸಾನದ ಬಗ್ಗೆ ಎಂದು ತಿಳಿಯತಕ್ಕದ್ದೇ ಹೊರತು, ದಂಡವೆಂದು ತಿಳಿಯಲಾಗದು.

ಮತ್ತು ನಾವು .... ಜಾಮೀನಪತ್ರ ಬರಕೊಡುವದೇನೆಂದರೆ— ಸದರಿ .... ಈತನು ಮತ್ತು .... ಈಕೆಯು ಮೇಲೆ ಬರಕೊಟ್ಟ ಯಾವತ್ತು ಕರಾರುಗಳಂತೆ ನಡಕೊಳ್ಳುವದಕ್ಕೆ ತಪ್ಪಿದರೆ, ನಾವಿಬ್ಬರೂ ಕೂಡಿ, ಹಾಗು ಬೇರೆ ಬೇರೆಯಾಗಿ, ಮೇಲೆ ಕಾಣಿಸಿದ ರಕಮನ್ನು ಸರಕಾರಕ್ಕೆ ಕೊಡಲಿಕ್ಕೆ ಈ ಲೇಖದಿಂದ ಒಪ್ಪಿಕೊಳ್ಳುತ್ತೇವೆ.

ಮತ್ತು ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರನಾದ .... ನಾನು ಸದರಿ.... .... ಈಕೆಗೆ ವಿದ್ಯಾರ್ಥಿನಿಯಾಗಿ ಆಗಲಿ ಅಧ್ಯಾಪಿಕೆಯಾಗಿ ಆಗಲಿ ಇರುವಾಗ, ಸಲ್ಲತಕ್ಕ ಸಂಬಳದ ಎಲ್ಲ ಹಣವನ್ನು ತಿಂಗತಿಂಗಳಿಗೆ ಕೊಡುವದಕ್ಕೆ ಸರಕಾರದ ತರ್ಫಿನಿಂದ ಈ ಲೇಖನದ ಮೂಲಕವಾಗಿ ಒಪ್ಪಿಕೊಳ್ಳುತ್ತೇನೆ. ಆದರೆ, ಗೊತ್ತುಪಡಿಸುವದೇನೆಂದರೆ—ನನಗೆ ಅವಶ್ಯತೋರಿದರೆ ಒಂದು ಅಥವಾ ಹೆಚ್ಚು ತಿಂಗಳುಗಳಲ್ಲಿ ಸದರಿ.... ....ಈಕೆಯ ಸಂಬಳದಲ್ಲಿ ಸ್ವಲ್ಪ ಭಾಗವನ್ನಾಗಲಿ ಎಲ್ಲ ಸಂಬಳವನ್ನಾಗಲಿ ಹಿಡುಕೊಳ್ಳಲಿಕ್ಕೂ ಟ್ರೇನಿಂಗಕಾಲೇಜದಿಂದ ಹೊರಗೆಹಾಕಲಿಕ್ಕೂ ವಿದ್ಯಾಖಾತೆಯಲ್ಲಿರುವ ಕೆಲಸದಿಂದ ತೆಗೆಯಲಿಕ್ಕೂ ನನಗೆ ಇದ್ದ ಅಧಿಕಾರಕ್ಕೆ ಈ ಕರಾರಿನಿಂದ ಏನೂ ಬಾಧೆ ಬರಲಾರದು.

ಸಹಿ.
ಸಾಕ್ಷಿಯವರು.
ಜಾಮೀನದಾರರ ಸಹಿಗಳು.
ಜಾಮೀನದಾರರ ಸಹಿಗಳ
ಬಗ್ಗೆ ಸಾಕ್ಷಿಯವರು.

ಸಹಿ.
ಎಜ್ಯುಕೇಶನಲ್ ಇನ್ಸ್‌ಪೆಕ್ಟರ,
ದಕ್ಷಿಣಭಾಗ.

ಎಜ್ಯುಕೇಶನಲ್ ಇನ್ಸ್‌ಪೆಕ್ಟರರ
ಸಹಿಯ ಬಗ್ಗೆ ಸಾಕ್ಷಿಯವರು.

ಸರ್ಟಿಫಿಕೇಟ ಪರೀಕ್ಷೆಯ ಕ್ರಮ.

ಅಭ್ಯಾಸಕ್ರಮ.

ಪರಿಶಿಷ್ಟ ಅ.

ಧಾರವಾಡ ಹೆಣ್ಣುಮಕ್ಕಳ ಟ್ರೇನಿಂಗಕಾಲೇಜಿನ ಅಭ್ಯಾಸಕ್ರಮ.

ಮೊದಲನೆಯ ವರ್ಷದ ವರ್ಗ.

೧. ಗಣಿತ:— ಗುಣಗಳು—೧೦೦

(ಅ) ಅವರ್ತದಶಾಂಶ ಬಿಟ್ಟು ದಶಾಂಶ ಅಪೂರ್ಣಾಂಕಗಳು, ಚಕ್ರಬಡ್ಡಿ, ಲಾಭಹಾನಿಯ ಸುಲಭವಾದ ಲೆಕ್ಕಗಳು, ತೀರ ಸಾದಾ ಜವಾಖರ್ಚು. ೧—೩ ಇಯತ್ತೆಗಳಿಗೆ ಇಟ್ಟ ಗಣಿತ ವಿಷಯದ ಉಪಪತ್ತಿಯು.

ಗುಣಗಳು—೨೫

(ಬ) ಬಾಯಿಲೆಕ್ಕ. ಗುಣಗಳು—೨೫

೨. ಭಾಷಾವಿಷಯ:— ಗುಣಗಳು—೧೦೦

(ಅ) ೬ನೇ ಪುಸ್ತಕದ ೧ನೇ ಭಾಗದೊಳಗಿನ ಗದ್ಯಪಾಠಗಳ ವಾಚನ, ಹಾಗು ಓದಿದ ಭಾಗದ ವಿಷಯಜ್ಞಾನವು, ಶಬ್ದಗಳ ಹಾಗೂ ಭಾಷಾಸಾಂಪ್ರದಾಯಗಳ ಅರ್ಥ ಸಹಿತವಾಗಿ.

(ಬ) ೬ನೇ ಪುಸ್ತಕದ ೧ನೇ ಭಾಗದ ಕವಿತಾಪಾಠಗಳನ್ನು ಪಾಠ ಅನ್ನುವದೂ ಅವುಗಳ ವಿವರಣೆ ಹಾಗು ಭಾವಾರ್ಥವನ್ನು ಹೇಳುವದೂ.

(ಕ) ವ್ಯಾಕರಣ—ಲಘುವ್ಯಾಕರಣಪುಸ್ತಕ ಪೂರಾ, ಹಾಗು ಸುಲಭವಾದ ವ್ಯಾಕರಣ ಹೇಳುವದೂ ವಾಕ್ಯವಿಭಜನೆ ಮಾಡುವದೂ.

ಲೇಖೀಪರೀಕ್ಷೆ ಗುಣಗಳು—೨೫

ಬಾಯಿಪರೀಕ್ಷೆ ,, ೨೫

೩. ಕೈಬರಹದ ಕಾಗದಗಳನ್ನು ಓದುವದು; ನಿಬಂಧವೂ ಅಕ್ಷರ ಬರಹವೂ:—ಗುಣಗಳು—೧೦೦

(ಅ) ಕೈಬರಹದ ಕಾಗದಗಳನ್ನು ಓದುವದು. ಗುಣಗಳು—೭೦

(ಬ) ಓದಿದಪುಸ್ತಕದೊಳಗಿನ ೫ ಸಾಲುಗಳ ಉಕ್ತಲೇಖನವು. ಗುಣಗಳು—೩೦

(ಕ) ಪೂರ್ಣ ಬರೆದ ಕಾಪೀಪುಸ್ತಕವನ್ನೂ ಎಕ್ಸರಸಾಯಿಜ್ ಪುಸ್ತಕಗಳನ್ನೂ ತೋರಿಸುವದು.

ಗುಣಗಳು—೨೦.

(ಡ) ಒಂದು ಸಾದಾ ಪತ್ರವನ್ನಾಗಲಿ ನಿಬಂಧವನ್ನಾಗಲಿ ಬರೆಯುವದು. ಐಸಗಿ ಪತ್ರವ್ಯವಹಾರದ ನಮೂನೆಗಳ ಜ್ಞಾನ.

ಗುಣಗಳು—೪೦

೪. ಇತಿಹಾಸವೂ ಭೂಗೋಲವೂ :— ಗುಣಗಳು—೧೦೦.

(ಅ) ಕರ್ನಾಟಕದ ಇತಿಹಾಸದ ಪುನರಾವೃತ್ತಿಯು, ಹಾಗು, ಹಿಂದುಸ್ತಾನದ ಸಂಕ್ಷಿಪ್ತ ಇತಿಹಾಸವೂ ಬ್ರಿಟಿಶರ ಆಳಿಕೆಯ ವಿಶೇಷ ಜ್ಞಾನವೂ ಆಳಿಕೆಯ ಕ್ರಮದ ಸಾಮಾನ್ಯಜ್ಞಾನವೂ.

ಗುಣಗಳು—೫೦.

(ಬ) ಏಶಿಯಾ ಮತ್ತು ಯುರೋಪಖಂಡಗಳ ಭೂಗೋಲದ ಸಾಧಾರಣ ಜ್ಞಾನವು. ಗ್ರೇಟಬ್ರಿಟನ್ನಕ್ಕೂ ಹಿಂದುಸ್ತಾನಕ್ಕೂ ಇರುವ ವ್ಯಾಪಾರದ ಹಾಗು ರಾಜಕೀಯ ಸಂಬಂಧಗಳು, ವ್ಯಾಪಾರದ ಮಾರ್ಗಗಳು ಸಹಿತವಾಗಿ.

(ಕ) ಹಿಂದುಸ್ತಾನದ (ಪ್ರಾಕೃತಿಕ) ನಕಾಶವನ್ನು ತೆಗೆಯುವದು. (ವರ್ಷದಲ್ಲಿ ತೆಗೆದ ಆಕೃತಿಗಳನ್ನೂ ನಕಾಶಗಳನ್ನೂ ತೋರಿಸುವದು.)

ಗುಣಗಳು—೫೦.

೫. ಶಾಸ್ತ್ರೀಯವಿಷಯದ ಮೂಲತತ್ವಗಳು:— ಗುಣಗಳು:—೧೦೦.

ಸಸ್ಯಾದಿಗಳ ಹಾಗು ಪ್ರಾಣಿಗಳ ಸಂಬಂಧದ ಸಾಮಾನ್ಯಜ್ಞಾನವು. ಗೃಹ್ಯಶಾಸ್ತ್ರವು. ಉದಾ:—ಆರೋಗ್ಯಮಾರ್ಗ.

ಗುಣಗಳು—೧೦೦.

೬. ಶಿಕ್ಷಣದ ಔಪಪತ್ತಿಕ ಜ್ಞಾನವೂ ರೂಢಿಯೂ:— ಗುಣಗಳು—೨೦೦

(ಅ) ಫೌಲರಸಾಹೇಬರ "ತಿದ್ದುವಿಕೆಯೂ ಶಿಕ್ಷಣವೂ" ಎಂಬ ಪುಸ್ತಕದೊಳಗಿನ ೮–೧೫ ಅಧ್ಯಾಯಗಳು, ಹಾಗು "ಶಿಕ್ಷರಿಗೋಸ್ಕರ ಸೂಚನೆಗಳು" ಎಂಬ ಪುಸ್ತಕದೊಳಗಿನ ೧–೩ ಇಯತ್ತೆಗಳ ಸಂಬಂಧದ ಸೂಚನೆಗಳು. ಬಾಲಕರ ಇಯತ್ತೆಯಿಂದ ೩ನೇ

ಇಯತ್ತೆಯವರೆಗಿನ ಅಭ್ಯಾಸಕ್ರಮಕ್ಕಾಗಿ ಆರಿಸಿದ ವಿಷಯಗಳನ್ನು ಕಲಿಸುವ ಪದ್ಧತಿಗಳು, ಹಾಗು ಶಿಕ್ಷಣದ ದೃಷ್ಟಿಯಿಂದ ಕಥೆಗಳು, ಆಟಗಳು, ಕೈಕೆಲಸ ಇವುಗಳ ಮಹತ್ವವು.

ಗುಣಗಳು—೧೦೦

(ಬ) (ಬಾಲಕರ ಇಯತ್ತೆಯಿಂದ ೩ ನೆ ಇಯತ್ತೆಯವರೆಗಿನ) ಯಾವದೊಂದು ವರ್ಗಕ್ಕೆ ಯಾವದೊಂದು ವಿಷಯವನ್ನು ಪರೀಕ್ಷಕ ಮುಂದೆ ಕಲಿಸುವದು. ಇಡಿ ವರ್ಷದಲ್ಲಿ ಮಾಡಿದ ಕೆಲಸವನ್ನ ಎಣಿಸಲಾಗುವದು.

ಗುಣಗಳು—೧೦೦

೭. ಕೈಕೆಲಸ:— ಗುಣಗಳು—೧೦೦

(ಅ) ಕುಂಚದ ಕೆಲಸದ ೧೦ ಉದಾಹರಣೆಗಳನ್ನು ತೋರಿಸುವದು. ಇವುಗಳಲ್ಲಿ ೫ ಚಿತ್ರಗಳು ೬–೭ ವರ್ಷದ ಹುಡುಗರಿಗೆ ತಕ್ಕವ ದವುಗಳಿರಬೇಕು. ಹಾಗು ೫ ಚಿತ್ರಗಳು ಕೆಳಗಿನ ಇಯತ್ತೆಗಳಲ್ಲಿ ತೇರ್ಗಡೆಹೊಂದಿದ ೧೨ ವರ್ಷ ವಯಸ್ಸಿನ ಹುಡುಗರಿಂದ ಎಷ್ಟು ಆಗಬಹುದೆಂಬದನ್ನು ತೋರಿಸುವಂಥವು ಇರಬೇಕು.

ಗುಣಗಳು—೭೫

(ಬ) ಸಾದಾ ವಸ್ತುಗಳ ಚಿತ್ರಗಳನ್ನು ತೆಗೆಯುವದು.

ಗುಣಗಳು—೭೫

೮. ಹೊಲಿಗೆಯ ಕೆಲಸ:— ಗುಣಗಳು—೧೦೦

(ಅ) ಸಾದಾ ಹೊಲಿಗೆ, ಹಾಗು, ಅರಿವೆಯನ್ನು ಕತ್ತರಿಸಿ ಚಿಕ್ಕ ಹುಡುಗರ ಜ್ಯಾಕೆಟನ್ನು ಹೊಲಿಯುವದು.

ಗುಣಗಳು—೬೦

(ಬ) ಚಂದ ಕಾಣಿಸುವ ಕಾಲ್ಪನಿಕ ಕೆಲಸ (ಫ್ಯಾನ್ಸಿವರ್ಕ), ಕಾಲಚೀಲ, ಟೊಪ್ಪಿಗೆ ಮುಂತಾದವುಗಳನ್ನು ಹೆಣಿಯುವದು, ಅಥವಾ ಜಾಕೇಟನ್ನು ಕ್ರೋಶೇದಾರದಿಂದ ಹೆಣಿಯುವದು.

ಗುಣಗಳು—೫೦

೯. ಶಾರೀರಿಕ ವ್ಯಾಯಾಮ:— ಗುಣಗಳು—೫೦

ನಡೆಯುವದು (ಮಾರ್ಚಿಂಗ), ಕ್ರಮದಿಂದ ಕಾಲು ಬಡಿಯುವದು (ಮಾರ್ಕಿಂಗ ಟಾಯಿಮ್), ಸಾಲುಗಳನ್ನು ಒಡಿಯುವದೂ ಕೂಡಿಸು

ವದೂ (ಓಪನಿಂಗ ಆಂಡ್ ಕ್ಲೋಜಿಂಗ್ ರ್ಯಾಂಕ್ಸ), ನಿಂತಲ್ಲಿ ಮಾಡುವ ಸಾದಾ ಚಲನೆಗಳು.

೩. ಗಾಯನ:— ಗುಣಗಳು—೫೦

ಸಪ್ತಸ್ವರಗಳು, ಹಾಗು ೨ನೇ ೩ನೇ ಪುಸ್ತಕಗಳೊಳಗಿನ ಪದ್ಯಗಳು.

ಗುಣಗಳು—೫೦

೨ನೆಯ ವರ್ಷದ ವರ್ಗ.

೧. ಗಣಿತ:— ಗುಣಗಳು—೧೦೦

(ಅ) ಹಿಂದಿನ ವರ್ಷದಲ್ಲಿ ಆದ ವಿಷಯದ ಪುನರಾವೃತ್ತಿಯು, ಹಾಗು ಲಾಭ ಹಾನಿಯ ಹೆಚ್ಚು ಬಿಗಿಯಾದ ಲೆಕ್ಕಗಳೂ, ಈಗಿನ ಜೆಲೆ ಮತ್ತು ಮುರಕೊಳ್ಳುವಬಡ್ಡಿಯ ಲೆಕ್ಕಗಳೂ, ಕಾಲ ಮತ್ತು ಶಕ್ತಿಯ ಸುಲಭವಾದ ಉದಾಹರಣೆಗಳೂ.

೪—೫ನೇ ಇಯತ್ತೆಗಳಿಗೆ ಇಟ್ಟ ಗಣಿತವಿಷಯದ ಉಪಪತ್ತಿಯು.

ಗುಣಗಳು—೭೫

(ಬ) ಮನೆಯೆ ಜವಾಬ್ದಾರಿ.

ಗುಣಗಳು—೭೫

೨. ಭಾಷಾ ವಿಷಯ:— ಗುಣಗಳು—೧೦೦

(ಅ) ೭ನೇ ಪುಸ್ತಕದ ೧ನೇ ಭಾಗದೊಳಗಿನ ಗದ್ಯ ಪಾಠಗಳ ವಾಚನ ಹಾಗು ಓದಿದ ಭಾಗದ ವಿಷಯಜ್ಞಾನವು. ಶಬ್ದಗಳ ಹಾಗು ಭಾಷಾಸಾಂಪ್ರದಾಯಗಳ ಅರ್ಥವನ್ನು ಹೇಳುವದು.

(ಬ) ೭ನೇ ಪುಸ್ತಕದ ೧ನೇ ಭಾಗದೊಳಗಿನ ಕವಿತಾ ಪಾಠಗಳನ್ನು ಪಾಠ ಅನ್ನುವದೂ ಅವುಗಳ ವಿವರಣೆ ಹಾಗು ಭಾವಾರ್ಥವನ್ನು ಹೇಳುವದೂ.

(ಕ) ವ್ಯಾಕರಣ—ದೊಡ್ಡ ವ್ಯಾಕರಣ, ಉದಾ:—ನುಡಿಗಟ್ಟಿನ ೨ನೇ ಭಾಗ. ೯೪—೧೦೯ ಪುಟಗಳನ್ನು ಬಿಟ್ಟು ಉಳಿದದ್ದು ಪೂರಾ. ಸಂಯೋಜಿತವಾಕ್ಯನಿಭಜನೆ.

ಲೇಖೀ ಪರೀಕ್ಷೆ.

ಗುಣಗಳು—೭೫

ಬಾಯಿ ಪರೀಕ್ಷೆ.

ಗುಣಗಳು—೭೫

೩. ಕೈಬರಹದ ಕಾಗದಗಳನ್ನು ಓದುವದು; ನಿಬಂಧವೂ ಅಕ್ಷರಬರಹವೂ:— ಗುಣಗಳು–೧೦೦

(ಅ) ಕೈಬರಹದ ಕಾಗದಗಳನ್ನು ಚನ್ನಾಗಿ ಓದುವದು. ಗುಣಗಳು–೨೦

(ಬ) ೧–೫ ಇಯತ್ತೆಗಳಿಗೆ ಕೆತ್ತೆಹಾಕುವದು. ಗುಣಗಳು–೨೦

(ಕ) ಯಾವದೊಂದು ಸಾಮಾನ್ಯ ವಿಷಯವನ್ನು ಕುರಿತು ನಿಬಂಧವನ್ನು ಬರೆಯುವದು. ಗುಣಗಳು–೬೦

೪. ಇತಿಹಾಸವೂ ಭೂಗೋಲವೂ:— ಗುಣಗಳು–೧೮೦

(ಅ) ಹಿಂದುಸ್ತಾನದ ಇತಿಹಾಸವು. ಗುಣಗಳು–೫೦

(ಬ) ಪೃಥ್ವಿಯ ಭೂಗೋಲದ ಸಾಧಾರಣ ಜ್ಞಾನವೂ, ಬ್ರಿಟಿಶರ ಸ್ವಾಸ್ತಿಗಳ ವಿಶೇಷ ಜ್ಞಾನವೂ. ಪ್ರಾಕೃತಿಕ ಭೂಗೋಲದ ಮೂಲತತ್ವಗಳು, ಋತುಗಳು, ರಾತ್ರಿ ಮತ್ತು ದಿವಸ, ಗ್ರಹಣಗಳು, ಭರತ ಇಳಿತಗಳು ಹವೆ, ಮಳೆ, ಮಂಜು ಮುಂತಾದ ಸೃಷ್ಟಿವ್ಯಾಪಾರಗಳ ಪಾರಿಭಾಷಿಕ ಶಬ್ದಗಳು ಸಹಿತ.

(ಕ) ಹಿಂದುಸ್ತಾನದ (ರಾಜಕೀಯ) ನಕಾಶವನ್ನು ತೆಗೆಯುವದು. (ವರ್ಷದಲ್ಲಿ ತೆಗೆದ ಆಕೃತಿಗಳನ್ನೂ ನಕಾಶಗಳನ್ನೂ ತೋರಿಸುವದು.) ಗುಣಗಳು–೫೦

೫. ಶಾಸ್ತ್ರೀಯ ವಿಷಯದ ಮೂಲತತ್ವಗಳು:— ಗುಣಗಳು–೧೦೦

(ಅ) ಶರೀರಧರ್ಮಶಾಸ್ತ್ರ ಹಾಗು ಆರೋಗ್ಯಶಾಸ್ತ್ರ. ಮಾನವ ಶರೀರದ ಅವಯವಗಳ ರಚನೆಯು, ಹಾಗು ಅವುಗಳ ಮುಖ್ಯ ಕಾರ್ಯಗಳು ಇವುಗಳ ಸಂಬಂಧದ ಸಾಮಾನ್ಯ ಜ್ಞಾನವು. ಶರೀರದ ಆರೋಗ್ಯತೆಗೆ ಅವಶ್ಯವಾದ ಸಂಗತಿಗಳ ಸಾಮಾನ್ಯಜ್ಞಾನವು, ಹಾಗು, ಶಿಶುಸಂಗೋಪನದ ಬಗ್ಗೆ ವಿಶೇಷ ಮಾಹಿತಿಯು. ಗುಣಗಳು–೫೦

(ಬ) ಹವೆ, ನೀರು, ಉಷ್ಣತೆ, ಆಹಾರ ಇವುಗಳ ವಿಷಯದ ಕೆಲವೆ ಸಾಮಾನ್ಯ ಸಂಗತಿಗಳು. ಗುಣಗಳು–೫೦

ಶಿಕ್ಷಣದ ಔಪವತ್ತಿಕಜ್ಞಾನವೂ ರೂಢಿಯೂ:— ಗುಣಗಳು–೨೦೦.

(ಅ) ಘೌಲರ ಸಾಹೇಬರ "ತಿದ್ದುವಿಕೆಯೂ ಶಿಕ್ಷಣವೂ" ಎಂಬ ಪುಸ್ತಕದೊಳಗಿನ ೧–೩೪ ಅಧ್ಯಾಯಗಳು. ಪ್ರಾಥಮಿಕ ಶಾಲೆಗಳಲ್ಲಿ ಕಲಿಸಲ್ಪಡುವ ಎಲ್ಲ ವಿಷಯಗಳನ್ನು ಕಲಿಸುವ ಪದ್ಧತಿಗಳು. ಶಿಕ್ಷಕರ ಕಾಯಿದೆ ಹಾಗು ಶಾಲಾ ನಮೂನೆಗಳ ಜ್ಞಾನವು.

ಗುಣಗಳು–೧೦೦.

(ಬ) ಪ್ರಾಥಮಿಕ ಶಾಲೆಯ ಯಾವದೊಂದು ವರ್ಗಕ್ಕೆ ಯಾವದೊಂದು ವಿಷಯವನ್ನು ಪರೀಕ್ಷಕರ ಮುಂದೆ ಕಲಿಸುವದು. ಇಡಿ ವರ್ಷದಲ್ಲಿ ಮಾಡಿದ ಕೆಲಸವನ್ನು ಎಣಿಸಲಾಗುವದು.

ಗುಣಗಳು–೧೦೦

ಕೈಕೆಲಸ:— ಗುಣಗಳು–೧೦೦

(ಅ) ೮–೧೨ ವರ್ಷದ ವಯಸ್ಸಿನ ಹುಡುಗರಿಗಾಗಿ ಮಣ್ಣಿನ ಆಟಿಕೆಗಳ ೧೦ ಮಾದರಿಗಳನ್ನು ತೋರಿಸುವದು.

ಗುಣಗಳು–೨೫

(ಬ) ಹೂವು, ಎಲೆ, ಕಾಯಿಗಳ ಚಿತ್ರಗಳನ್ನು ಸೃಷ್ಟಿಯ ಪ್ರತ್ಯಕ್ಷ ವಸ್ತುಗಳನ್ನು ನೋಡಿ ತೆಗೆಯುವದು.

ಗುಣಗಳು–೨೫

ಹೊಲಿಗೆಯ ಕೆಲಸ:— ಗುಣಗಳು–೧೦೦

(ಅ) ಸಾದಾಹೊಲಿಗೆ, ಹಾಗು ಅರಿವೆಯನ್ನು ಕತ್ತರಿಸಿ ಚಿಕ್ಕ ಹುಡುಗರ ಕವನಿ (ಫ್ರೊಕ್) ಯನ್ನು ಹೊಲಿಯುವದು.

ಗುಣಗಳು–೬೦

(ಬ) ಚಂದಕಾಣಿಸುವ ಕಾಲ್ಪನಿಕ ಕೆಲಸ (ಫ್ಯಾನ್ಸಿ ವರ್ಕ), ದೇಶೀ ಕಸೂತಿಯ ಯಾವದೊಂದು ನಮೂನೆಯು.

ಗುಣಗಳು–೪೦

ಶಾರೀರಿಕ ವ್ಯಾಯಾಮ:— ಗುಣಗಳು–೫೦

ಮೊದಲನೆಯ ವರ್ಷದಲ್ಲಿ ಕಲಿತ ಚಲನೆಗಳನ್ನು ಒಂದರ ಕೂಡ ಒಂದು ಕೂಡಿಸುವದರಿಂದ ಉಂಟಾಗುವ ಮಿಶ್ರಚಲನೆಗಳು. ಯಾವದೊಂದು ವರ್ಗಕ್ಕೆ ಈ ವಿಷಯವನ್ನು ಪರೀಕ್ಷಕರ ಮುಂದೆ ಕಲಿಸುವದು.

ಗುಣಗಳು–೫೦

೧೦. ಗಾಯನ:— ಗುಣಗಳು—೫

ಸಪ್ತಸ್ವರಗಳು, ಮತ್ತು ೪ನೇ, ೫ನೇ ಪುಸ್ತಕಗಳೊಳಗಿನ ಪದ್ಯ
ಗಳು, ಹಾಗು ೬ ಕಿಂಡರ್‌ಗಾರ್ಟನ್ ಸಾಭಿನಯ ಗೀತೆಗಳು.
ಗುಣಗಳು—೫

ವಿಶೇಷ ಸೂಚನೆ:—ಕೈಕೆಲಸದ (ಅ) ವಿಭಾಗದಲ್ಲಿ ಲೇಡೀಸುವರಿಂ
ಟೆಂಡೆಂಟರು, ಯುಕ್ತ ಕಂಡರೆ ಹೆಚ್ಚು ಕಡಿಮೆ ಮಾಡಬಹುದು. ಈ
ಹೆಚ್ಚು ಕಡಿಮೆಯನ್ನು ಕಾಲೇಜದ ವರ್ಷದ ಆರಂಭದಲ್ಲಿ ಜಾಹೀರು
ಮಾಡಲಾಗುವದು

(ನಾಲ್ಕೂ ಕಾಲೇಜಗಳ ಪರಿಸ್ಥಿತಿಯು ಭಿನ್ನಭಿನ್ನವಿರುವದರಿಂದ
ಪ್ರತಿಯೊಂದು ಕಾಲೇಜದವರು ತಮ್ಮ ತಮ್ಮ ಅಭ್ಯಾಸ ಕ್ರಮವನ್ನು ಅನು
ಸರಿಸುವರು.)

ಪರಿಶಿಷ್ಟ ಡ.

ಸರ್ಟಿಫಿಕೇಟು.

ಮುಂಬಯಿ ಇಲಾಖೆಯ ವಿದ್ಯಾಕಾಲಾಖಾತೆ.

ನಾವು ಸರ್ಟಿಫಿಕೇಟು ಕೊಡುವದೇನೆಂದರೆ—

..... ಈಕೆಯು ೧೯೧೧ ನೆ ಇಸವಿಯ .....
ತಿಂಗಳಲ್ಲಿ ಅದ ವರ್ಷದ ಸರ್ಟಿಫಿಕೇಟ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ
ಒಟ್ಟು ಗುಣಗಳಲ್ಲಿ ೧೦೦ ಕ್ಕೆ ..... ರಂತೆ ಗುಣಗಳನ್ನು ದೊರಕಿಸಿ
ದ್ದರಿಂದ ..... ನೇ ವರ್ಗದಲ್ಲಿ ಹಾಕಲ್ಪಟ್ಟ ಕಾರಣ ..... ರೂಪಾಯಿ ಕಾಯಮ್ ಪಗಾರಕ್ಕೆ ಯೋಗ್ಯಳಿದ್ದಾಳೆ.

ಲೇಡೀಸುವರಿಂಟೆಂಡೆಂಟ,
ಧಾರವಾಡ ಟ್ರೇನಿಂಗ ಕಾಲೇಜ.
ತಾ||.

ಎಜ್ಯುಕೇಶನಲ್ ಇನ್ಸ್‌ಪೆಕ್ಟರ್,
ದಕ್ಷಿಣಭಾಗ.

ಪತ್ರವ್ಯವಹಾರ

ರಾವಸಾಹೇಬ ಕನ್ನಡ ಶಾಳಾಪತ್ರಿಕದ ಎಡಿಟರ ಫೊರೆಗಳವರ ಸನ್ನಿಧಿಗೆ—

ವಿಧೇಯ ಶಿಷ್ಯನ ಶ|| ಸಾ|| ನ|| ವಿ|| ಕೆಳಗೆ ಬರೆದ ಎರಡು ಗಣಿತದ ಉದಾಹರಣೆಗಳಿಗೆ ಶಾಲಾಪತ್ರಿಕೆಯಲ್ಲಿ ಇಂಬುಕೊಡುವಿರೆಂದು ನಂಬಿದ್ದೇನೆ:—

(೧) ಅ, ಬ, ಕ ಎಂಬ ಮೂವರು ಅಣ್ಣತಮ್ಮಂದಿರು ತಮ್ಮೊಳಗೆ ಬಡಿದಾಡಿ ನ್ಯಾಯಕೋರ್ಟಿಗೆ ಹೋದರು. ಆಗ ಅ, ನು ಒಬ್ಬ ವಕೀಲನ ಬಳಿಗೆ ಹೋಗಿ ನೀವು ಬೇಡಿದಷ್ಟು ಹಣಕೊಡುವೆನು, ನನ್ನಂತೆ ನ್ಯಾಯ ತೀರ್ಪಾಗಬೇಕೆಂದನ್ನು. ಆಗ ವಕೀಲನು ನಿನ್ನಂತೆ ತೀರ್ಪಾಗದಿದ್ದರೆ ನೀನು ಕೊಟ್ಟ ರೂಪಾಯಿಗಳಿಗೆ ೪ ಬಟ್ಟಾ ಹಾಕಿ ಕೊಡುವೆನೆಂದನು. ಬ, ಕ ಇವರೂ ಒಬ್ಬರಿಗೊಬ್ಬರು ಅರಿಯದಂತೆ ಮೇಲೆ ಹೇಳಿದ ವಕೀಲನ ಬಳಿಗೆ ಹೋಗಿ ಬೇಡಿದಷ್ಟು ಹಣಾ ಕೊಟ್ಟು ಕ್ರಮವಾಗಿ ೩, ೭ ಬಟ್ಟಾ ಗೊತ್ತು ಮಾಡಿಕೊಂಡರು. ಆದರೆ ವಕೀಲನಿಗೆ ಈ ಮೂವರಲ್ಲಿ ಬೇಕಾದವನಂತೆ ತೀರ್ಪಾದರೂ ತನಗೆ ೬೦ ರೂಪಾಯಿ ಉಳಿಯುವವೆಂದು ಕಂಡು ಬಂತು. ಆದರೆ ಪ್ರತಿ ಒಬ್ಬರು ಕೊಟ್ಟ ಹಣವೆಷ್ಟೆಷ್ಟು?

(೨) ಒಬ್ಬ ರಾಜನಿಗೆ ಐದು ಮಂದಿ ಹೆಂಡರಿದ್ದರು. ಅವರಿಗೆ ಅನು ಕ್ರಮವಾಗಿ ೧, ೨, ೩, ೪, ೫ ಈ ಪ್ರಕಾರ ಮಕ್ಕಳಿದ್ದವು. ರಾಜನು ತೋಟದಿಂದ ಕೆಲವು ಮಾವಿನೆ ಹಣ್ಣುಗಳನ್ನು ತರಿಸಿ ಅವುಗಳಲ್ಲಿ ಐದು ಹಣ್ಣು ತನ್ನ ಹತ್ತಿರ ಇಟ್ಟುಕೊಂಡು ಉಳಿದ ಎಲ್ಲಾ ಹಣ್ಣು ಮೊದಲನೆಯವಳ ಮನೆಗೆ ಕಳಿಸಿದನು. ಅವಳು ಒಂದು ಹಣ್ಣನ್ನು ತನ್ನ ಕೂಸಿನ ಕೈಯಲ್ಲಿ ಕೊಟ್ಟು ಉಳಿದ ಹಣ್ಣುಗಳನ್ನು ಐದು ಪಾಲು ಮಾಡಿ ಒಂದು ಪಾಲು ತೆಗೆದುಕೊಂಡು ನಾಲ್ಕು ಪಾಲು ಎರಡನೆಯವಳ ಕಡೆಗೆ ಕಳುಹಿಸಿದಳು. ಅವಳು ತನ್ನ ಎರಡೂ ಮಕ್ಕಳ ಕೈಯಲ್ಲಿ ಒಂದೊಂದು ಹಣ್ಣು ಕೊಟ್ಟು ಉಳಿದ ಹಣ್ಣು ಐದು ಪಾಲು ಮಾಡಿ ಒಂದು ಪಾಲು ತೆಗೆದುಕೊಂಡು ಮೂರನೆಯವಳಿಗೆ ಕಳಿಸಿದಳು. ಇದೇ ಪ್ರಕಾರ ಐದು ಮಂದಿ ಹೆಂಡರು ಒಂದೊಂದು ತಮ್ಮ ತಮ್ಮ ಮಕ್ಕಳಿಗೆ ಕೊಡುತ್ತಾ ತಮ್ಮ ಪಾಲು

ತೆಗೆದುಕೊಂಡನಂತರ ಐದನೆಯವಳು ಉಳಿದ ಹಣ್ಣು ರಾಜನಿಗೆ ಕಳಿಸಿದಳು. ತನ್ನ ಐದು ಹಣ್ಣು ರಾಜನು ಅವುಗಳಲ್ಲಿ ಕೂಡಿಸಿ ಐದು ಮಂದಿ ಹೆಂಡರಿಗೆ ಸರಿಯಾಗಿ ಹಂಚಿ ಕೊಟ್ಟನು. ಅದರೆ ತೋಟದಿಂದ ತರಿಸಿದ ಒಟ್ಟು ಹಣ್ಣುಗಳೆಷ್ಟು? ಶ್ರುತವಿರಬೇಕು.

ತಾಳೂಕ ಬಾಗೇವಾಡಿ
ಜಿಲ್ಲಾ ವಿಜಾಪುರ
ತಾ|| ೮ ೯-೧೧ ೧೯೨೨.

ಎಲಗುರ್ದಿ ಭೀಮಾಜಿ ಕುಲಕರ್ಣಿ
ಸ್ಕೂಲ ಮಾಸ್ತರ ಗಣಿ.

ಪತ್ರಗಳ ಸಾರಾಂಶ ಮತ್ತು ಪತ್ರಗಳಿಗೆ ಉತ್ತರ.

ರಾ. ರಾ. ಬ. ಭೀ. ತಳವಾರ ಮಾಸ್ತರ ಶಾಳಾ ಹಿರೇಬೆಂಡಿಗೇರಿ ತಾ|| ಬಂಕಾಪುರ— ಇವರು ವ್ಯವಹಾರಿ ಅಪೂರ್ಣಾಂಕದ ವಿಭಾಗಗಳ ಬಗ್ಗೆ ಬರೆದಿರುವರು. ಅವರು ಉಲ್ಲೇಖಿಸಿದ ಗಣಿತ ಪುಸ್ತಕಗಳಲ್ಲಿ ವಿಭಾಗಗಳನ್ನು ತರ್ಕಶಾಸ್ತ್ರದ ಪದ್ಧತಿಗನುಸರಿಸಿ ಒಂದರೊಳಗೊಂದು ಸೇರದಂತೆ ಮಾಡಿರುವದಿಲ್ಲ. ಸಾಮಾನ್ಯವಾಗಿ ಅಪೂರ್ಣಾಂಕಗಳ ಕೆಲವು ಪ್ರಕಾರಗಳನ್ನು ಸೂಚಿಸುವದಕ್ಕೆ ಮಾಡಿದ್ದಾಗಿರುತ್ತದೆ. ಈಗಿದ್ದ ಗಣಿತ ಪುಸ್ತಕಗಳೊಳಗಿನ ವಿಭಾಗಗಳಿಗೆ ಅವರು ತೆಗೆದುಕೊಳ್ಳುವ ಆಕ್ಷೇಪಗಳನ್ನೇ ಅವರು ಸೂಚಿಸಿದ ಕೆಳಗೆ ಬರೆದ ವಿಭಾಗಗಳಿಗೂ ತಕ್ಕೊಳ್ಳಬಹುದು. ಆ ವಿಭಾಗಗಳು ಯಾವವೆಂದರೆ:— ೧. ಭಾಗಾನುಬಂಧ ಪೂರ್ಣಾಂಕ, ೨. ಭಾಗ ಜಾತಿಯ ಅಪೂರ್ಣಾಂಕ, ೩. ಮಿಶ್ರ ಅಪೂರ್ಣಾಂಕ, ೪. ಪ್ರಭಾಗಜಾತಿಯ ಅಪೂರ್ಣಾಂಕ.

ವಿದ್ಯಾರ್ಥಿ ವೀರಭದ್ರಗೌಡಾ ದೊಡ್ಡಗೌಡ್ರ ಶಾಳಾ ಹಿರೇಬೆಂಡಿಗೇರಿ:— ಕುಲಕರ್ಣಿಯವರ ಗಣಿತ ಉಪಪತ್ತಿಯ ೨೦೫ನೇ ಪುಟವನ್ನು ಚನ್ನಾಗಿ ಓದಿ ನೋಡಿದರೆ ನಿಮ್ಮ ಸಂಶಯ ಪರಿಹಾರವಾಗುವದು.

ಕೆಳಗೆ ಕಾಣಿಸಿದ ಪತ್ರಗಳನ್ನು ಮುದ್ರಿಸಲು ಸ್ಥಳವಿಲ್ಲ.—

ರಾ|| ರಾ|| ಬಾಳಾಜೀ ವಿಶ್ವನಾಥ ದೀಕ್ಷಿತ ಮಾಸ್ತರ ಹಂಗರಗಿ ತಾ|| ಬಾಗೇವಾಡಿ ಜಿ|| ವಿಜಾಪುರ ಇವರು ಬರೆದ " ಬುದ್ಧಿಯ ಬೆಳವಣಿ

ಗೆಗೆ ಗ್ರಂಥಾವಲೋಕನದ ಆವಶ್ಯಕತೆ," "ಒಬ್ಬ ಅಡ್ಡಹೆಸರಿನ ಶಾಸ್ತ್ರಿಯ ವಿಕಟೋ ಪರ್ಯಂತ ಅಧ್ಯಯನ," "ಶ್ರೀ ಭುಜಂಗ ಸ್ವಾಮಿಗಳ ಚರಿತ್ರೆ."

ರಾ॥ ರಾ॥ ಫ. ಬ. ತಲವಾಯಿ ಇವರು ಬರೆದ ಗದಗ ತಾಲೂಕ ಬೆಟಗೇರಿ ಮುನಸಿಪಾಲಿಟಿಯ ಗನೇ ನಂಬರ ಶಾಲೆಯಲ್ಲಿ ನಡೆದ ರಾಜ್ಯಾರೋಹಣ ಸಮಾರಂಭದ ವರ್ಣನೆ.

ಅಗ್ಗರಗೋಣ್ಣಪಾಟೀಲ ರಾ॥ ರಾ॥ ರಾಮಾ ಜಟ್ಟಿ ನಾಯಕ ಇವರು ಕಳುಹಿಸಿದ ರಾಜ್ಯಾರೋಹಣ ಗೀತ.

ದೇಶನೂರ ಶಾಲೆಯಲ್ಲಿ ನಡೆದ ರಾಜ್ಯಾರೋಹಣ ಸಮಾರಂಭದ ವೃತ್ತಾಂತ:— ಹೊಳೆಪ್ಪಾ ಚನ್ನಬಸವಪ್ಪಾ ಸಂಗೊಳ್ಳಿ ಅ॥ ಮಾಸ್ತರ ಇವರು ಬರೆದು ಕಳುಹಿಸಿದ್ದು.

ರಾ॥ ರಾ॥ ವೈಕುಂಠ ಶ್ರೀನಿವಾಸ ಪ್ರಭು ಇವರು ಬರೆದ ಪಟ್ಟಾಭಿಷೇಕ ನಿಮಿತ್ತವಾದ ಸಂಸ್ಕೃತ ಭಾಷಾತ್ಮಕವಾದ ಮಂಗಲಾಷ್ಟಕ.

ಯಾರೋ ಒಬ್ಬರು ಕಳುಹಿಸಿದ ಐಹಿಕಪಾರಮಾರ್ಥಿಕ ವೇದಾಂತ ನುಂತಾದ ವಿಷಯಗಳಿಗೆ ಸಂಬಂಧಿಸಿದ ಒಂದಕ್ಕೊಂದು ವಿಶೇಷ ಸಂಬಂಧವಿಲ್ಲದ ೬ಳ ಕಲಮುಗಳುಳ್ಳ ಲೇಖ. ಇದನ್ನು ಬರೆದವರ ಹೆಸರು ಲೇಖದ ಪ್ರಾರಂಭದಲ್ಲಿಯಾಗಲಿ ಕೊನೆಯಲ್ಲಾಗಲಿ ಕೊಟ್ಟಿಲ್ಲ. ಲೇಖವು ಮುದ್ರಿಸುವದಕ್ಕೆ ತಕ್ಕವ್ದಾಗಿಯೂ ಇಲ್ಲ.

ರಾ॥ ರಾ॥ ವೆಂಕಟೇಶ ರಾ. ಪ್ರಭು ಹೆಡ್‌ಮಾಸ್ತರ ಶಾಲಾ ಸುಂಕೇರಿ ಯವರು ಬರೆದ ಮೋಹಮುದ್ಗರ (ಮರುಕಮೆದ್ದು) ಎಂಬ ಲೇಖ. ಶ್ರೀ ಶಂಕರಾಚಾರ್ಯರು ಬರೆದ ಮೂಲ ಲೇಖಕ್ಕೂ ಅದರ ಈ ಕನ್ನಡ ಪರಿವರ್ತನೆಗೂ ಬಹಳ ಬಿಡುವದರಿಂದಲೂ ಈಗಿನ ಲೇಖದಲ್ಲಿ ತಿದ್ದಲಿಕ್ಕೆ ಬರುವಂಥ ಸ್ಥಳಗಳು ಇನ್ನೂ ಅನೇಕ ಇರುವದರಿಂದಲೂ ಸದರೀ ಲೇಖವನ್ನು ಈಗಿನ ಅಪೂರ್ಣ ಸ್ಥಿತಿಯಲ್ಲಿ ಮುದ್ರಿಸುವದಕ್ಕಿಂತ ಅದನ್ನು ಲೇಖಕರು ಸುಧಾರಿಸಿದ ನಂತರ ಮುದ್ರಿಸುವದು ಒಳ್ಳೇದೆಂದು ತೋರುತ್ತದೆ.

ರಾ॥ ರಾ॥ ಅಣ್ಣಪ್ಪಾ ಅಪ್ಪಯ್ಯಾ ಕರ್ಜಗಿ, ಸ್ಕೂಲಮಾಸ್ತರ ಪ್ರೊಜೆಕರಜಗಿ ತಾ॥ ಹುಕ್ಕೇರಿ ಇವರು ಬರೆದು ಕಳುಹಿಸಿದ ಬೆಳಗಾವೀ ಜಿಲ್ಲೆಯ ವರ್ಣನೆ:— ಆ ಆ ಜಿಲ್ಲೆಯ ಹಲವು ಮಾಸ್ತರರಿಂದ ಬರೆದುಬಂದ ಲೇಖಗಳ

28 ಸಹಾಯದಿಂದ ಬೆಳಗಾವಿ, ವಿಜಾಪುರ, ಕಾನಡಾ ಜಿಲ್ಲೆಗಳ ವರ್ಣನೆಯನ್ನು ಸ್ವತಂತ್ರವಾಗಿ ಬರೆಯಿಸಿ ಮುದ್ರಿಸತಕ್ಕದ್ದಿರುವದರಿಂದ ಈ ಲೇಖನವನ್ನು ಮುದ್ರಿಸುವದು ಅವಶ್ಯವಿಲ್ಲ.

ವಿದ್ಯಾಖಾತೆಯ ನೋಟೀಸುಗಳು.

ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸುವ ಬಗ್ಗೆ ಸರಕಾರದವರು ಮಂಜೂರು ಮಾಡಿದ ಪುಸ್ತಕಗಳ ಪಟ್ಟಿ:—

(ಮೆ॥ ಎ॥ ಇನಸ್ಪೆಕ್ಟರ ಸಾಹೇಬ ಬಹಾದ್ದೂರ ದಕ್ಷಿಣ ಭಾಗ ಇವರ ಅಪ್ಪಣೆಯ ಮೇರೆಗೆ ಪ್ರಸಿದ್ಧ ಮಾಡಿದ್ದು.)

ಅಂಕಲಿಪಿ (ಹೊಸ ಆವೃತ್ತಿ.)
ಪದಾರ್ಥ ವಿಜ್ಞಾನಶಾಸ್ತ್ರ
(ಅಂಕಲೆಕೃತ).
ಬಸವಪುರಾಣ.
ಶಬ್ದವ್ಯುತ್ಪತ್ತಿ.
(ಚಿಂತಾಮಣಿಪೇಟಕರಕೃತ.)
ಹಿಂದುಸ್ತಾನ ನಿವಾಸಿ.
ವಾಚನ ಪುಸ್ತಕಗಳು:—
(ಹುಡುಗರಿಗೋಸ್ಕರ)
ಬಾಲಬೋಧಿನಿ.
೧ನೇ ಪುಸ್ತಕ.
೨ನೇ ,,
೩ನೇ ,,
೪ನೇ ,,
೫ನೇ ,,
೬ನೇ ,,
೭ನೇ ,,

ಮಹಾಭಾರತ.
ಮುದ್ರಾಮಂಜುಷ.
ಛಂದಸ್ಸಾರ
(ಮುಳಬಾಗಲಕೃತ.)
ನುಡಿಗಟ್ಟು (ಮುಳಬಾಗಲಕೃತ.)
ಛಂದಸ್ಸು (ನಾಗವರ್ಮಕೃತ.)
ರಾಮಾಯಣ.
ಶಬ್ದಮಣಿದರ್ಪಣ.
ಶಾಲಾವ್ಯಾಕರಣ.
ಆರೋಗ್ಯವಿದ್ಯೆ.
ನನ್ನತಾಯಿ.
(ಸಿ. ಸೋ. ಕುಲಕರ್ಣಿ.)
ಅಂಕಗಣಿತ.
(ಚನಬಸಪ್ಪಕೃತ.)
ಭಾಗ ೧.
ಭಾಗ ೨.
ಮಹತ್ವಮಾಪನ. (ಕುಕ್ ಕೃತ)

ರಸಾಯನಶಾಸ್ತ್ರದ ಮೂಲತತ್ವಗಳು
(ಭಟ್ಟರೇಕೃತ ಪುಸ್ತಕದ ಭಾಷಾಂತರ)
ಜೈಮಿನಿಭಾರತ.
ಕನ್ನಡಲಘುವ್ಯಾಕರಣ (ಕಟ್ಟೆಕೃತ.)
ಉತ್ತರಹರಿಶ್ಚಂದ್ರ ಚರಿತ್ರವು.
(ಎ. ಕೃಷ್ಣಾಚಾರಕೃತ)
ಭೂಮಿತಿ ಗನೇಪುಸ್ತಕ
(ಹಳಕಟ್ಟಿಕೃತ.)
ಸಮಾಖರ್ಚಿನ ಪದ್ಧತಿ
(ಹೂಲಿಕೃತ.)
ಸಾಯಿಲೆಖ್ಖ.
(ಯಾತಗಿರಿಕೃತ.)
ಸೋಖಲೆ ಅಂಕಗಣಿತ
(ಗೆಜ್ಜಿಕೃತ)
ಭಾಗ ೧.
,, ೨.
,, ೩.
ಪ್ರಾಕೃತಿಕ ಭೂಗೋಲ.
ಇಂಗ್ಲಂಡದ ಇತಿಹಾಸ.
(ಹಳಕಟ್ಟಿಕೃತ.)
ಇಂದುಸ್ತಾನದ ಸಂಕ್ಷಿಪ್ತಇತಿಹಾಸ.
(ಹಂಟರಕೃತ.)
ಹಿಂದುಸ್ತಾನದ ಇತಿಹಾಸ.
(ಮಾರ್ಸಡೆನ್‌ಕೃತ)
ಭೂಗೋಲ ವಿದ್ಯದ ಮೂಲತತ್ವಗಳು
(ಕಟ್ಟಿಕೃತ.)
ಭಾಗ ೧.
,, ೨.

ಬೀಜಗಣಿತ. (ದಲಾಲಕೃತ)
ಭೂಮಿತಿ ಗನೇ ಪುಸ್ತಕ.
ಮನೆಯಲ್ಲಿ ಉಪಯೋಗಿಸುವಹಿಂ
ದುಸ್ತಾನದ ನಕಾಶೆ. (ದಾತಾರಕೃತ.)
ಮನೆಯಲ್ಲಿ ಉಪಯೋಗಿಸುವ
ಧಾರವಾಡ ಜಿಲ್ಹೆಯ ನಕಾಶೆ.
(ದಾತಾರಕೃತ.)
ಮನೆಯಲ್ಲಿ ಉಪಯೋಗಿಸುವ
ವಿಜಾಪುರ ಜಿಲ್ಹೆಯ ನಕಾಶೆ.
(ದಾತಾರಕೃತ.)
ಮನೆಯಲ್ಲಿ ಉಪಯೋಗಿಸುವ
ಕಾನಡಾ ಜಿಲ್ಹೆಯ ನಕಾಶೆ.
ಮನೆಯಲ್ಲಿ ಉಪಯೋಗಿಸುವ ಬೆಳ
ಗಾವಿ ಜಿಲ್ಹೆಯ ನಕಾಶೆ.
(ದಾತಾರಕೃತ.)
ಕುಮಟಾ ತಾಲೂಕಿನ ನಕಾಶೆ.
(ಧಾರೇಶ್ವರಕೃತ)
ಮುಂಬಯಿ ಕರ್ನಾಟಕದ ನಕಾಶೆ.
(ಹೂಲಿಕೃತ.)
ವಿದ್ಯಾಖಾತೆಯ ನಕಾಶೆಗಳು:—
ಹಿಂದುಸ್ತಾನ.
ಯುರೋಪಖಂಡ.
ಅಮೇರಿಕಾಖಂಡ.
ಆಫ್ರಿಕಾಖಂಡ.
ಏಶಿಯಾಖಂಡ.

ಮುಂಬಯಿಇಲಾಖೆಯ ಮನೆಯಲ್ಲಿ ಪೃಥ್ವಿಯ ನಕಾಶೆ.
ಉಪಯೋಗಿಸುವ ನಕಾಶೆ.
(ದಾತಾರಕೃತ.)

ನೋಟೀಸು.

ಈ ನೋಟೀಸಿನಿಂದ ಎಲ್ಲ ಜನರಿಗೂ ತಿಳಿಸುವದೇನೆಂದರೆ, ಸರ
ವದ ಅವ್ವಣೆಯ ಮೇರೆಗೆ, ಎಲ್ಲ ದೇಶಭಾಷೆಗಳ ಬಾಲಬೋಧಿನಿಯ ಈ
ರುವ ಪ್ರತಿಗಳು ಖರ್ಚಾದ ಮೇಲೆ ಮುಂದೆ ಛಾಪಿಸುವ ಪ್ರತಿಗಳ
ಬಣ್ಣದ ಚಿತ್ರಗಳನ್ನು ತೆಗೆದು ಹಾಕಿ, ಅವುಗಳ ಬದಲಾಗಿ ಕಪ್ಪುವ
ಯಿಂದ ಛಾಪಿಸಿದ ಚಿತ್ರಗಳು ಹಾಕಲ್ಪಡುವವು. ಹಾಗು ಅದರ ಸದ್ಯ
ಕ್ರಯವು ೩೬ ಆಣೆಯಿದ್ದು, ಹೊಸ ಆವೃತ್ತಿಯ ಪ್ರತಿಗೆ ೧೬ ಬೀಳುವದ

Offie of the Director of Public Instruction Poona.
31st August 1911.

(Sd) P.Wren,
For Director of Public Instructio

ಧಾರವಾಡ ಹೆಣ್ಣುಮಕ್ಕಳ ಟ್ರೇನಿಂಗಕಾಲೇಜದ ಪ್ರವೇಶಪರೀ
ಯು ತಾ|| ೨೦ನೇ ನವಂಬರ ೧೯೧೧ ಸೋಮವಾರ ದಿವಸ ಪ್ರಾರಂ
ವಾಗುವದು.

೧. ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು ಬರ
ದಶಂಬರ ತಿಂಗಳ ೪ನೇ ತಾ|| ಸೋಮವಾರ ೧೧–೩೦ ಘಂಟೆಗೆ ಸರಿಯ
ಪ್ರಾರಂಭವಾಗುವದು. ಎಲ್ಲ ಉಮೇದವಾರರು ಆ ದಿವಸ ಟ್ರೇನಿಂ
ಕಾಲೇಜದಲ್ಲಿ ಪರೀಕ್ಷೆಗೆ ಹಾಜರ ಆಗಬೇಕು. ಉಮೇದವಾರರ ಹೆಸ
ಹಚ್ಚಿಕೊಳ್ಳುವ ಕೆಲಸವು ದಶಂಬರ ೩ನೇ ತಾರೀಖಿನ ದಿವಸ ೧೧–೩
ಘಂಟೆಗೆ ಪ್ರಾರಂಭವಾಗುವದು. ಆ ಸಮಯಕ್ಕೆ ಉಮೇದವಾರರು ಕೆಳ
ಕಾಣಿಸಿದ ಎರಡು ಕಾಗದಗಳನ್ನು ಹೆಸರು ಹಚ್ಚಿಕೊಳ್ಳುವವರ ಕಡೆ
ಕೊಡಲಿಕ್ಕೆ ಬೇಕು:—

(೧) ಮುಲ್ಕೀ ಅಥವಾ ಫೈನಲ್ ಪರೀಕ್ಷೆಯ ಸರಟೀಫಿಕೀಟು. ೩,

(೨) ಜಾಮೀನಪತ್ರ:—ಈ ನೋಟೀಸಿನಲ್ಲಿ ಕಡೆಗೆ ಕೊಟ್ಟ ನಮೂನೆಯಂತೆ ಸಾದಾಕಾಗದದ ಮೇಲೆ ಬರಿಸಿ, ಜಾಮೀನದಾರರ ಸಹಿಮಾಡಿಸಿ ಅದರ ಕಡೆಯಲ್ಲಿ ಕೊಟ್ಟಿರುವ ಗ್ರಾಮಸ್ಥರ ದಾಖಲೆಸಹಿತ ತಯಾರ ಮಾಡಿದ್ದು. ಈ ಎರಡು ದಾಖಲೆಗಳನ್ನು ಹಾಜರ ಮಾಡಿದ ಹೊರ್ತು ಹೆಸರು ಹಚ್ಚಿಕೊಳ್ಳಲಿಕ್ಕಿಲ್ಲ.

ವಿಶೇಷಸೂಚನೆಗಳು:—(೧) ಕೆಟ್ಟ ಅಕ್ಷರ, ಅಶುದ್ಧ ಬರಹ, ವಿರಾಮಚಿಹ್ನೆಗಳ ಉಪಯೋಗವನ್ನು ಸರಿಯಾಗಿ ಮಾಡದೆ ಇರೋಣ, ಅಚ್ಚುಕಟ್ಟುತನವಿಲ್ಲದೆ ಇರೋಣ, ಈ ಕುಂದುಗಳು ಕಂಡು ಬರುವ ಉಮೇದವಾರರನ್ನು ಕಾಲೇಜದಲ್ಲಿ ತೆಗೆದುಕೊಳ್ಳಲಿಕ್ಕಿಲ್ಲ.

(೨) ಕಾಲೇಜದಲ್ಲಿ ಅಥವಾ ಊರಲ್ಲಿ ಪ್ಲೇಗದ ಸಂಸರ್ಗದ ಲಕ್ಷಣಗಳು ತೋರಲಾಗಿ ಕಾಲೇಜದ ವಿದ್ಯಾರ್ಥಿಗಳು ಪ್ಲೇಗದ ಮೈಲಿಯನ್ನು ಚುಚ್ಚಿಸಿಕೊಳ್ಳಬೇಕೆಂದು ಕಾಲೇಜದ ಡಾಕ್ಟರರಾದ ಸಿವ್ಹಿಲ್ ಸರ್ಜನ್ ಸಾಹೇಬರು ಅಭಿಪ್ರಾಯಪಟ್ಟರೆ ಅದರಂತೆ ಮೈಲಿಯನ್ನು ಚುಚ್ಚಿಸಿಕೊಳ್ಳಲಿಕ್ಕೆಬೇಕು. ಇದಕ್ಕೆ ಒಪ್ಪಿಗೆ ಇಲ್ಲದ ಉಮೇದವಾರರನ್ನು ಕಾಲೇಜದಲ್ಲಿ ತೆಗದುಕೊಳ್ಳಲಿಕ್ಕಿಲ್ಲ.

೩. ಉಮೇದವಾರರು ೧೭ ವರ್ಷ ಮೀರಿದವರೂ ೨೨ಕ್ಕಿಂತ ಕಡಿಮೆ ವಯಸ್ಸಿನವರೂ ಇರಲಿಕ್ಕೆ ಬೇಕು.

೪. ಯಾವ ಉಮೇದವಾರರ ಹೆಸರು ಜಿಲ್ಹೆಯ ಡಿಪೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು ಕಳುಹಿಸಿದ ಲಿಸ್ಟಿನಲ್ಲಿ ನಮೂದ ಆಗಿರುವದಿಲ್ಲವೋ ಅವರು ತಾವು ಒಳ್ಳೇ ನಡತೆಯವರೆಂಬ ಬಗ್ಗೆ ತಾವು ಕಲಿಯುತ್ತಿದ್ದ ಅಥವಾ ಕಲಿತ ಶಾಲೆಯ ಮಾಸ್ತರರ ಸರಟಫಿಕೀಟನ್ನು ತರಲಿಕ್ಕೆ ಬೇಕು.

೫. ಉಮೇದವಾರರು ವ್ಯಂಗವುಳ್ಳವರು ಇರಕೂಡದು. ೫ ಫೂಟಿಗಿಂತ ಕಡಿಮೆ ಎತ್ತರವಿದ್ದವರು, ತೊದಲುವವರು, ಕಿವುಡರು, ಮೆಳ್ಳಗಣ್ಣಿನವರು, ಕುಂಟರು ಇಂಥವರನ್ನು ಪರೀಕ್ಷೆಗೆ ಕೂಡ್ರಗೊಡಲಿಕ್ಕಿಲ್ಲ.

೬. ಸಂಸ್ಥಾನದ ಹದ್ದಿನೊಳಗಿನ ಉಮೇದವಾರರು ತಮ್ಮ ಸಂಸ್ಥಾನದ ಡಿ. ಎ. ಇನ್‌ಸ್ಪೆಕ್ಟರರವರ ಮಾರಿಫತು ದಕ್ಷಿಣ ಭಾಗದ ಇನ್‌ಸ್ಪೆಕ್ಟರ ಸಾಹೇಬರ ಪರವಾನಗಿಯನ್ನು ತಂದ ಹೊರ್ತು, ಅವರ ಹೆಸರು ಹಚ್ಚಿಕೊ

ಳ್ಳಲಿಕ್ಕಿಲ್ಲ. ಇಂಥವರು ಮೆ॥ ಎ॥ ಇನ್‌ಸ್ಪೆಕ್ಟರ ಸಾಹೇಬರವರೆ ಪರವಾನಗಿಯ ಹೊರ್ತು ಪರೀಕ್ಷೆಗೆ ಕೂಡ್ರಲಾಗದು.

೭. ಪ್ರತಿಯೊಬ್ಬ ಉಮೇದವಾರನು ತನ್ನ ಸಂಗಡ ತಕ್ಕಷ್ಟು ಅರಿವೆ ಅಂಚಡಿಗಳನ್ನೂ ಹಾಸಿಗೆ–ಹುಪ್ಪಡಿಗಳನ್ನೂ ತರಲಿಕ್ಕೆ ಬೇಕು. ಪ್ರತಿ ಒಬ್ಬನಿಗೆ ಮೇಲಿನ ಅಂಗಿಗಳು, ಅಂದರೆ ಕೋಟುಗಳು ೨, ಒಳಗಿನ ಪೈರಣಗಳು ಅಥವಾ ಬಗಲಬಂಡಿಗಳು ೩, ೧ ಹೆಚ್ಚಡ, ೧ ಕಂಬಳಿ, ಉಣ್ಣೆಯ ಅರಿವೆಯ ೧ ಬಗಲಬಂಡಿ, ಅಥವಾ ಪೈರಣು ಇಷ್ಟು ಇರಲಿಕ್ಕೇ ಬೇಕು.

೮. ಪ್ರತಿ ಒಬ್ಬ ಉಮೇದವಾರನ ಬಳಿಯಲ್ಲಿ ಬಿನ್ ಇಯತ್ತೈಯಿಂದ ೭ನೇ ಇಯತ್ತೈಯ ವರೆಗೆ ಬೇಕಾಗುವ ಎಲ್ಲ ಹೊಸ ಕ್ರಮಿಕಪುಸ್ತಕಗಳೂ, ೭ನೇ ಇಯತ್ತೈಯ ಇತರ ಎಲ್ಲ ಪುಸ್ತಕಗಳೂ ಇರಲಿಕ್ಕೇಬೇಕು.

೯. ಮೇಲೆ ಬರೆದ ಪುಸ್ತಕಗಳಲ್ಲದೆ ಬೇರೆ ಅವಶ್ಯಕ ಪುಸ್ತಕಗಳನ್ನೂ ಚಿತ್ರಕಲೆಯ ಸಾಮಾನುಗಳನ್ನೂ ಕೊಂಡುಕೊಳ್ಳಲಿಕ್ಕೆ ಸುಮಾರು ೧೦ ರೂಪಾಯಿಗಳು ಬೇಕಾಗುವವು; ಮತ್ತು ಬೋರ್ಡಿಂಗಿನ ಅಡ್ಮಿಷ್ಟನ್ನದ ಸಂಬಂಧದಿಂದ ೧೦ ರೂಪಾಯಿಗಳು ಬೇಕಾಗುವವು. ಆದ ಕಾರಣ ಕಾಲೇಜಕ್ಕೆ ಆರಿಸಲ್ಪಟ್ಟ ಪ್ರತಿ ಒಬ್ಬ ಉಮೇದವಾರನು ೨೦ ರೂಪಾಯಿಗಳನ್ನು ಅವಾನತ ಇಡಬೇಕಾಗುವದು.

V. B. Joshi.
ಪ್ರೀನ್ಸಿಪಾಲ, ಟ್ರೇನಿಂಗ ಕಾಲೇಜ, ಧಾರವಾಡ.

ಪ್ರವೇಶ ಪರೀಕ್ಷೆಯ ಉಮೇದವಾರರು ಸಂಗಡ ತುಂಬಿ ತರತಕ್ಕ ಜಾವಿನ ಪತ್ರದ ನಮೂನೆಯು.

ನಾವು ೧. ....
೨. ....
೩. ....
ಈ ಬರಹದ ಮೂಲಕವಾಗಿ ....
ಎಂಬವನಿಗೆ ಜಾವಿನಾನ ಆಗಿ, ...
ಬರಕೊಡುವದೇನೆಂದರೆ:—ಸದರೀ ....
ಇವನು ಧಾರವಾಡ ಟ್ರೇನಿಂಗ ಕಾಲೇಜದ ಕೋಡಿನ

ಶಾಲಾಪತ್ರಿಕ

ಪುಸ್ತಕ ೪೭ | ಆಕ್ಟೋಬರ ೧೯೧೧. | ಸಂಚಿಕೆ ೧೦.

ಪ್ರಾಚೀನ ಸ್ತ್ರೀ ಶಿಕ್ಷಣವು.

(ಕಳೆದತಿಂಗಳ ಸಂಚಿಕೆಯಿಂದ ಮುಂದೆನಾಗಿದ್ದು.)

——:(೦):——

ಡಾಕ್ಟರ ಓಲ್ಡೆನ್‌ಬರ್ಗ ಎಂಬವರು "ಬುದ್ಧ" ಎಂಬ ತಮ್ಮ ಗ್ರಂಥದಲ್ಲಿ ಬರೆದದ್ದೇನಂದರೆ:—

"ಜನರ ಬೌದ್ಧಿಕಜೀವನದಲ್ಲಿ ಹೆಂಗಸರು ಯೋಗ್ಯವಾದ ಕಾರ್ಯಭಾಗವನ್ನು ವಹಿಸುತ್ತಿದ್ದರು; ಮತ್ತು ಹಿಂದುಸ್ತಾನದ ನಿವಾಸಿಗಳ ರಾಷ್ಟ್ರೀಯ ಮಹಾಕಾವ್ಯಗಳೊಳಗಿನ ಅತ್ಯಂತ ಕೋಮಲವಾದಂಥ ಕರುಣಪರವಾದಂಥ ಕಾವ್ಯಗಳಿಂದ, ಸ್ತ್ರೀಯರಿಗೆ ತಮ್ಮ ನಿಜವಾದ ಸ್ತ್ರೀಪದದ ತಿಳುವಳಿಕೆಯು ಸಂಪೂರ್ಣವಾಗಿ ಇತ್ತೆಂತಲೂ ಆ ಪದವನ್ನು ಅವರು ಆದರಿಸುತ್ತಿದ್ದರೆಂತಲೂ ಕಂಡುಬರುತ್ತದೆ.*"

ಈ ಬಗೆಯಾಗಿ ಅತಿ ಪ್ರಾಚೀನಕಾಲದಲ್ಲಿ ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಏನೊಂದು ಪ್ರತ್ಯವಾಯವಂತೂ ಇರಲೇ ಇಲ್ಲ; ಇಷ್ಟೇ ಅಲ್ಲ. "ಅಧ್ಯಾಪನ" ಅಂದರೆ ಎರಡನೆಯವರಿಗೆ ಕಲಿಸುವ ಅಧಿಕಾರವಾದರೂ ಅವರಿಗೆ ಇತ್ತೆಂಬ ಬಗ್ಗೆ ವ್ಯಾಕರಣ ಶಾಸ್ತ್ರದಲ್ಲಿ ಪ್ರಮಾಣಗಳು ದೊರೆಯುತ್ತವೆ. "ಆಚಾರ್ಯ" ಶಬ್ದದಿಂದ "ಆಚಾರ್ಯಾನೀ" ಮತ್ತು "ಆಚಾರ್ಯಾ" ಎಂಬ ಎರಡು ಸ್ತ್ರೀಲಿಂಗದ ಶಬ್ದಗಳು ಹುಟ್ಟುತ್ತವೆ. ಅವುಗಳಲ್ಲಿ "ಆಚಾರ್ಯಾನೀ" ಎಂಬ ಶಬ್ದವು, "ಆಚಾರ್ಯಪತ್ನೀ" ಎಂಬ ಅರ್ಥವಿದ್ದಿರುವದು, ಮತ್ತು "ಆಚಾರ್ಯಾ" ಎಂಬ ರೂಪವು "ಸ್ವಯಂ ಅಧ್ಯಾ

* "Women took their share in the intellectual life of the people and the most delicate and tenderest of the Epic poems of the Indians shows us how well they could understand and appreciate true womanhood."

ಪಿಕಾ," ಅಂದರೆ ಸ್ವತಃ ಕಲಿಸುವವಳು ಎಂಬ ಅರ್ಥವಿದ್ದಿರುವದು; ಮತ್ತು ಈ ರೂಪಗಳ ಸ್ಪಷ್ಟೀಕರಣದಲ್ಲಿ,

"पुरा कल्पे कुमारीणां मौञ्जीबन्धनमिष्यते।
अध्यापनं च वेदानां सावित्रीवचनं तथा ॥"

ಅಂದರೆ, "ಪೂರ್ವಕಾಲದ ಕಲ್ಪದಲ್ಲಿ ಸ್ತ್ರೀಯರ ಉಪನಯನವಾಗುತ್ತಿತ್ತು; ಅವರಿಗೆ ವೇದಾಧ್ಯಯನಮಾಡುವ ಹಾಗೂ ಗಾಯತ್ರೀಮಂತ್ರ ಪಠನದ ಅಧಿಕಾರಗಳಾದರೂ ಇದ್ದವು," ಎಂಬ ಯಮಸ್ಮೃತಿಯೊಳಗಿನ ವಚನವು ಕೊಡಲ್ಪಟ್ಟಿರುವದು. ಈ ವಚನದ ಗ್ರಾಹ್ಯಾಗ್ರಾಹ್ಯತೆಯ ವಿಷಯದಲ್ಲಿ ಪರಾಶರಸಂಹಿತೆಯ ವ್ಯಾಖ್ಯೆಯಲ್ಲಿ ಮಾಧವಾಚಾರ್ಯರು ಬಹಳ ಊಹಾಪೋಹವನ್ನು ಮಾಡಿರುವರು; ಮತ್ತು ಆ ವ್ಯಾಖ್ಯೆಯ ಮೇಲೆ ವೇ॥ ಶಾ॥ ಪಂಡಿತ ವಾಮನಶಾಸ್ತ್ರೀ ಇಸ್ಲಾಮಪುರಕರ ಇವರೂ ಕೆಲವು ಸಂಶಯಗಳನ್ನು ತೆಗೆದಿರುವರು. ಆ ವಾದದಲ್ಲಿ ಸೇರುವದು ನಮ್ಮ ಸದ್ಯದ ಕೆಲಸವಲ್ಲ. ನಮಗೆ ಸದ್ಯಕ್ಕೆ, ಆಗಿನ ಕಾಲದಲ್ಲಿ ಸ್ತ್ರೀಯರಿಗೆ ಪುರುಷರಂತೆ ಉಪನಯನದ ಮತ್ತು ಅಧ್ಯಾಪನದ ಅಧಿಕಾರಗಳು ಇದ್ದವು, ಇಷ್ಟೇ ಮುದ್ದೆಯ ಮಾತುಗಳು ಬೇಕಾಗಿರುವವು. ಹಾರೀತ ಋಷಿಯ ಅಭಿಪ್ರಾಯದಂತೆ ಹೆಂಗಸರಲ್ಲಿ "ಬ್ರಹ್ಮವಾದಿನೀ" ಮತ್ತು "ಸದ್ಯೋವಧೂ" ಎಂಬ ಎರಡು ಭೇದಗಳು ಇರುವವು. ಬ್ರಹ್ಮವಾದಿನಿಯರಿಗೆ ಉಪನಯನ, ಅಗ್ನೀಂಧನ, ವೇದಾಧ್ಯಯನ ಮತ್ತು ಸ್ವಗೃಹಗಳಲ್ಲಿ ಭಿಕ್ಷಾಚರ್ಯೆ ಇಷ್ಟು ಅಧಿಕಾರಗಳು ಇದ್ದವು. ಸದ್ಯೋವಧುಗಳಿಗೆ ವಿವಾಹ ಕಾಲದಲ್ಲಿ ಹ್ಯಾಗಾದರೂ ಉಪನಯನ ಮಾಡಿಕೊಳ್ಳುವ ಅಧಿಕಾರವಿತ್ತು. "ಹ್ಯಾಗಾದರೂ" ಇದರ ಅರ್ಥವನ್ನು "ಮಂತ್ರರಹಿತವಾದ ಸಂಸ್ಕಾರವನ್ನು ಮಾಡಿಕೊಳ್ಳುವ" ಎಂದು ಹೇಳುವದುಂಟು; ಮತ್ತು ಸಂಸ್ಕಾರಲೋಪಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡುವ ರೂಢಿಯು ಈಗಲೂ ಇರುವದು.

ಸ್ತ್ರೀಯರಿಗೆ ಉಪನಯನ ಸಂಸ್ಕಾರದ ಲೋಪವಾದದ್ದರಿಂದ ವಿವಾಹ ಸಂಸ್ಕಾರವೊಂದೇ ಉಳಿಯಿತೆಂತಲೂ ಬಂದು ಮತವಿರುವದು. ಮಹಾಭಾರತದೊಳಗಿನ ಶಲ್ಯಪರ್ವದ ೫೨ನೇ ಅಧ್ಯಾಯದಲ್ಲಿ ಕುಣಿರ್ಗರ್ಗನ ಮಗಳ ಕಥೆಯು ಹೇಳಲ್ಪಟ್ಟಿರುವದು. ಆಕೆಯು ಹೆಸರಾದರೂ ಸುಲಭಾ

ಪ್ಪೈತ್ಯೇಯಿಯೆಂದೇ ಇತ್ತು. ಆಕೆಯು ಚನ್ನಾಗಿ ವೈದ್ಯಳಾಗುವೆ ತನಕ ಅವಿವಾಹಿತಳಾಗಿಯೇ ಇದ್ದಳು. ಮುಂದೆ ಆಕೆಗೆ ತನ್ನ ತಪೋಬಲದಿಂದ ಸ್ವರ್ಗಕ್ಕೆ ಹೋಗಬೇಕೆಂದು ಇಚ್ಛೆಯುಂಟಾಯಿತು. ಆದರೆ ಆಕೆಯು ಅವಿವಾಹಿತಳಾಗಿದ್ದದರಿಂದ ಸಂಸ್ಕಾರಹೀನಳೂ ಆಗಿದ್ದ ಕಾರಣ ಆಕೆಗೆ ಸ್ವರ್ಗವು ಸಿಗಲಾರದೆಂದು ನಾರದರು ಹೇಳಿದರು. ಆದ್ದರಿಂದ ಆಕೆಯು ವಿವಾಹವನ್ನು ಮಾಡಿಕೊಂಡಳು; ಹಾಗು, ಮರುದಿವಸವೇ ಸ್ವರ್ಗಾರೋಹಣವನ್ನು ಮಾಡಿದಳೆಂದು ಕಥೆಯಿರುವದು. ಸ್ತ್ರೀಯರ ಉಪನಯನ ಸಂಸ್ಕಾರದ ಮತ್ತು ಅದರಿಂದ ಪ್ರಾಪ್ತವಾಗುವೆ ಅಧ್ಯಯನ, ಅಧ್ಯಾಪನ, ಅಗ್ನೀಂಧನ ಇತ್ಯಾದಿ ಅಧಿಕಾರಗಳ ಲೋಪವು ಈ ಸುಮಾರಕ್ಕೆ ಅಗಿರಬಹುದೆಂದು ತೋರುತ್ತದೆ.

ಈ ಬಗೆಯಾಗಿ ಹೆಂಗಸರಿಗೆ ಸಂಸ್ಕಾರಹೀನತ್ವವು ಪ್ರಾಪ್ತವಾದ್ದರಿಂದ, ಅಂದರೆ ಹೆಂಗಸರೂ ಶೂದ್ರರೂ ಒಂದೇ ಯೋಗ್ಯತೆಗೆ ಬಂದದ್ದರಿಂದ, ಅವರಿಗೆ ಅಧ್ಯಾತ್ಮಜ್ಞಾನ ಸಂಪಾದನೆಯ ಮತ್ತು ಅದರ ಸಹಾಯದಿಂದ ಭವಸಾಗರವನ್ನು ದಾಟುವೆ ಮಾರ್ಗವು ಕಟ್ಟಿ ಹೋದಂತಾಯಿತು. ಈ ಸಂಗತಿಯು ಮರ್ಮಜ್ಞರಾದಂಥ, ಸಹೃದಯರಾದಂಥ ಋಷಿಗಳ ಮನಸ್ಸನ್ನು ನೋಯಿಸಿರಬಹುದೆಂದು ತೋರುತ್ತದೆ. ಯಾಕಂದರೆ, ಈ ಕಾಲದ ನಂತರ ಸ್ವಲ್ಪ ದಿವಸಗಳಲ್ಲಿಯೇ ಪುರಾಣಗಳ ಉತ್ಪತ್ತಿಯಾಯಿತೆಂದು ಗೊತ್ತಾಗುತ್ತದೆ. ಶ್ರೀಮನ್ಮಾಧವಾಚಾರ್ಯರು ವೇದಾರ್ಥ ಪ್ರಕಾಶ ಗ್ರಂಥದಲ್ಲಿ ಈ ಶಂಕೆಯನ್ನು ತೆಗೆದುಕೊಂಡು ಪುರಾಣೋತ್ಪತ್ತಿಗೂ ಸಂಸ್ಕಾರಹೀನತ್ವಕ್ಕೂ ತಳಕು ಹಾಕಿದ್ದಾರೆ. ಅವರು ಹೇಳುವದೇನಂದರೆ–

स एव उपायो वेदस्य विषयः। तद्बोध एव प्रयोजनम्। तद्बोधार्थी चाधिकारी। तेन सह उपकार्योपकारकभावसंबंधः। ननु एवं सति स्त्रीशूद्रसहिताः के वेदाधिकारिणः स्युः। इष्टं मेस्यादनिष्टं माभूदित्याशिवः सार्वजनीनत्वात्। नम्। स्त्रीशूद्रयोः सत्युपाये बोधार्थित्वे हेत्वन्तरेण वेदाधिकारस्य प्रतिबद्धत्वात्। पनीतस्यैव वेदाधिकारं ब्रुवच्छास्त्रमनुपनीतयो स्त्रीशूद्रयोर्वेदाध्ययनमनिष्टप्राहेतुरिति बोधयति। कथं तर्हि तयोस्तदुपायावगमः। पुराणादिभिरिति ब्रूमः। त एवोक्तम्। स्त्रीशूद्रद्विजबंधूनां त्रयीनश्रुति गोचरा। कर्मश्रेयसि मूढानां य एव भवेदिह। इतिभारतमाख्यानं कृपया मुनिना कृतम्।

(ಭಾಗವತ ಪ್ರಥಮಸ್ಕಂಧ ಚತುರ್ಥಾಧ್ಯಾಯ)

ಇದರ ಅರ್ಥವೇನೆಂದರೆ:— " ವೇದದ ವಿಷಯವಾದರೂ ಆ ಉಪಾಯಕ್ಕೋಸ್ಕರವೇ ಇರುವದು; ಮತ್ತು ಆ ಉಪಾಯದ ಜ್ಞಾನವೇ ವೇದದ ಪ್ರಯೋಜನವು; ಹಾಗು ಈ ಜ್ಞಾನವನ್ನು ಯಾರು ಬಯಸುವರೋ ಅವರೇ ಅದರ ಅಧಿಕಾರಿಗಳು. ಮನುಷ್ಯ ಮತ್ತು ವೇದ ಇವುಗಳಲ್ಲಿ ಉಪಕಾರ್ಯ(ಉಪಕಾರ ಮಾಡಿಸಿಕೊಳ್ಳುವವ) ಉಪಕಾರಿ (ಉಪಕಾರಮಾಡುವವ) ಈ ಸಂಬಂಧವಿರುವದು. ಹೀಗಿದ್ದ ಪಕ್ಷಕ್ಕೆ ಸ್ತ್ರೀ ಶೂದ್ರ ಮುಂತಾದ ಎಲ್ಲವರೂ ಅದಕ್ಕೆ ಅಧಿಕಾರಿಗಳಾಗಬಹುದು. ಯಾಕಂದರೆ, ಸರ್ವರೂ ತಮ್ಮ ಬಿಳಿತನ್ನೇ ಬಯಸುವರಲ್ಲದೆ ಕೇಡನ್ನು ಯಾರೂ ಬಯಸುವದಿಲ್ಲ. ಆದರೆ ಹೀಗೆ ಹೇಳುವದು ಸರಿಯಲ್ಲ. ಸ್ತ್ರೀಯರೂ ಶೂದ್ರರೂ ಜ್ಞಾನವನ್ನು ಬಯಸುತ್ತಿದ್ದರೆ ಅವರಿಗೆ ಬೇರೆ ಉಪಾಯವಿರುವದು; ಮತ್ತು ಇತರ ಕೆಲವು ಕಾರಣಗಳಿಂದ ಅವರಿಗೆ ವೇದಾಧಿಕಾರಕ್ಕೆ ಪ್ರತಿಬಂಧವಿರುವದು. ಉಪನಯನವಾದವರಿಗೇ ಅದರ ಅಧಿಕಾರವಿರುವದು, ಮತ್ತು ಉಪನಯನವಾಗದೆ ಇದ್ದ ಸ್ತ್ರೀ ಶೂದ್ರರಿಗೆ ಅದರಿಂದ ಅನಿಷ್ಟ ಪ್ರಾಪ್ತಿಯಾಗುವದು, ಎಂದು ಶಾಸ್ತ್ರವು ಹೇಳುವದು. ಹೀಗಾದ ಮೇಲೆ ಸ್ತ್ರೀ ಶೂದ್ರರಿಗೆ ಆ ಉಪಾಯದ ಜ್ಞಾನವು ಹ್ಯಾಗಾಗಬೇಕು? ಎಂದು ಕೇಳಿದರೆ, ಪುರಾಣಾದಿಗಳಿಂದ ಆಗಬೇಕೆಂದು ನಾವು ಹೇಳುತ್ತೇವೆ; ಮತ್ತು ಅದರಿಂದಲೇ ಭಾಗವತದಲ್ಲಿ " ಸ್ತ್ರೀಯರಿಗೂ ಶೂದ್ರರಿಗೂ ಪತಿತ (ಕರ್ಮ ಭ್ರಷ್ಟ) ರಾದ ಬ್ರಾಹ್ಮಣರಿಗೂ ವೇದಶ್ರವಣವು ನಿಷಿದ್ಧವಾಗಿರುವದು. ಆದರೆ ಅವರು ತಮ್ಮ ಕಲ್ಯಾಣವಾಗಬೇಕೆಂದು ಹಾರೈಸುವದರಿಂದ ಮುನಿಗಳು ಭಾರತವನ್ನು ರಚಿಸಿದರು."

ಸಾರಾಂಶವೇನೆಂದರೆ, ಸ್ತ್ರೀಯರಿಗೆ ಶ್ರುತ್ಯಧ್ಯಯನವು ನಿಷೇಧಿಸಲ್ಪಟ್ಟ ಕಾಲದಲ್ಲಿಯೇ, ಅಥವಾ ಆ ಸುಮಾರಕ್ಕೇ ಪುರಾಣಗಳು ಹುಟ್ಟಿದವು; ಮತ್ತು ಸ್ತ್ರೀ ಶೂದ್ರರು ಅವುಗಳಿಂದಲೇ ತಮ್ಮ ಸಮಾಧಾನವನ್ನು ಮಾಡಿಕೊಳ್ಳಬೇಕೆಂದು ಗೊತ್ತಾಯಿತು. ಆ ಸ್ಥಿತಿಯು ಇಂದಿನ ವರೆಗೂ ನಡೆದು ಬಂದಿರುವದು.

ಇಲ್ಲಿಯ ವರೆಗೆ ಸ್ತ್ರೀ ಶಿಕ್ಷಣದ ಉದಯಕಾಲ ಮತ್ತು ಅದರ ಅವನತಿ ಇವುಗಳ ದಿಗ್ದರ್ಶನವನ್ನು ಮಾಡಿಸಂತಾಯಿತು. ಇನ್ನು ಸ್ತ್ರೀ

ಶಿಕ್ಷಣದ ವಿಷಯಗಳೊಳಗಿಂದ ಮೇಲೆ ಹೇಳಿದ ಪ್ರಕಾರ ವೇದವನ್ನು ತೆಗೆದು ಹಾಕಿದನಂತರ ಉಳಿದ ವಿಷಯಗಳಲ್ಲಿಯಾದರೂ ಅವರ ಪ್ರಗತಿಯು ಎಷ್ಟರಮಟ್ಟಿಗೆ ಆಗುತ್ತಿತ್ತೆಂಬುದನ್ನು ವಿಚಾರಿಸೋಣ.

ಸ್ತ್ರೀಯರಿಗೆ ಸಂಸ್ಕೃತಭಾಷೆ, ಇತಿಹಾಸ, ಆಖ್ಯಾಯಿಕೆಗಳು, ಕಾವ್ಯ ಪ್ರಬಂಧ, ಚಿತ್ರಕಲೆ, ಸಂಗೀತ, ನೃತ್ಯ, ವಾದನ ಇತ್ಯಾದಿ ವಿಷಯಗಳನ್ನು ಕಲಿಸುತ್ತಿದ್ದರೆಂಬ ಬಗ್ಗೆ ಕಾವ್ಯಗ್ರಂಥಗಳಲ್ಲಿ ಆಧಾರಗಳು ದೊರೆಯುತ್ತವೆ. ಕಥಾಸರಿತ್ಸಾಗರದ ದ್ವಿತೀಯ ಲಂಬಕದೊಳಗಿನ ಮೃಗಾವತಿಯ ವರ್ಣನೆಯಲ್ಲಿ ಆಕೆಯ ವಿವಾಹದ ಪೂರ್ವದಲ್ಲಿ ಆಕೆಯ ತಂದೆಯು ಆಕೆಗೆ ಕೊಟ್ಟ ಶಿಕ್ಷಣದ ವರ್ಣನೆಯು ಈ ಬಗೆಯಾಗಿರುವದು:—

ದದೌ ತಾಂ ಚ ಸ ಕಾನ್ತಾನಾಂ ಕಲಾನಾಮೇಕಪ್ರಾಸ್ಪದಮ್। ಕೃತವರ್ಮಾ ಸುತಾಂ ತಸ್ಮೈ ರಾಜ್ಞೇ ಮೂರ್ತಿಮಿವೈನ್ದವೀಮ್ ॥ (ಸಹಸ್ರಾನೀಕಾಯ)

ಅಂದರೆ, "ಆ ಕೃತವರ್ಮನು ಸ್ತ್ರೀರೂಪವನ್ನು ಧರಿಸಿದ ಚಂದ್ರನಂತಿರುವಂಥ, ರಮಣೀಯ ಕಲೆಗಳಿಗೆ ನಿವಾಸಸ್ಥಾನವೆನಿಸಿದಂಥ ತನ್ನ ಮಗಳಾದ ಮೃಗಾವತಿಯನ್ನು ಅವನಿಗೆ ಕೊಟ್ಟನು."

ಕಾದಂಬರೀಕಾರರಾದ ಬಾಣಭಟ್ಟರು ಚಂದ್ರಾಪೀಡನ ತಾಯಿಯನ್ನು ಈ ರೀತಿಯಾಗಿ ವರ್ಣಿಸಿರುವರು:—

विदितानेककथावृत्तान्ताभिर्भूतपूर्वाः कथाः कथयन्तीभिरितिहासान्वाचयन्तीभिः पुस्तकान्दधतीभिर्धर्मोपदेशान्निवेदयन्तीभिर्जरत्प्रव्राजिताभिर्विनोद्यमानाम् ।

ಅಂದರೆ, "ಅನೇಕ ಕಥೆಗಳೂ ವೃತ್ತಾಂತಗಳೂ ಗೊತ್ತಿದ್ದಂಥ, ಪೂರ್ವದಲ್ಲಿ ವರ್ತಿಸಿರುವ ಕಥೆಗಳನ್ನು ನಿರೂಪಿಸುವಂಥ, ಇತಿಹಾಸಗಳನ್ನು ಓದುತ್ತಿರುವಂಥ, ಕೈಯಲ್ಲಿ ಪುಸ್ತಕವನ್ನು ಹಿಡಿದಂಥ, ಧರ್ಮೋಪದೇಶಕರಾದಂಥ ವೃದ್ಧ ಪರಿವ್ರಾಜಿಕೆಯರಿಂದ ವಿನೋದ ಪಡಿಸಲ್ಪಡುತ್ತಿದ್ದಂಥ ಆಕೆಯನ್ನು"

ಆ ಬಾಣಭಟ್ಟರೇ ಹರ್ಷಚರಿತೆಯಲ್ಲಿ ಶ್ರೀಹರ್ಷನ ತಂಗಿಯಾದ ರಾಜ್ಯಶ್ರೀಯನ್ನು ವರ್ಣಿಸುವಾಗ:—

"अथ राज्यश्रीरपि नृत्यगीतादिषु विदग्धासु सखीषु सकलासु कलासु च प्रतिदिनमुपचीयमानपरिचया शनैः शनैरवर्द्धत ।"

ಅಂದರೆ, ರಾಜ್ಯಶ್ರೀಯು ನೃತ್ಯಗಾಯನ ಮುಂತಾದ ಕಲೆಗಳಲ್ಲಿ ನಿಪುಣರಾದ ಸಖಿಯರ ಮಧ್ಯದಲ್ಲಿ ಸರ್ವಕಲೆಗಳಲ್ಲಿಯೂ ದಿನದಿನಕ್ಕೆ ಹೆಚ್ಚು ಹೆಚ್ಚು ಪರಿಚಯವನ್ನು ಹೊಂದುತ್ತ ಸಾವಕಾಶವಾಗಿ ಬೆಳೆದಳು" ಎಂದು ಹೇಳಿರುವರು.

ಪಶ್ಚಿಮವಾರ ಚರಿತ್ರಕಾರನಾದ ದಂಡಿಯು, ಒಬ್ಬ ವೇಶ್ಯಾಸ್ತ್ರೀಯನ್ನು ವರ್ಣಿಸುವಾಗ ಆಕೆಯು ಶಿಕ್ಷಣದ ವಿಷಯಗಳಲ್ಲಿ ಈ ಕೆಳಗಿನ ವಿಷಯಗಳನ್ನು ಪರಿಗಣನೆಮಾಡಿರುವನು:—

ನೃತ್ಯಗೀತವಾದ್ಯನಾಟ್ಯಚಿತ್ರಾಸ್ತಾದ್ಯಗಂಧಪುಷ್ಪಕಲಾಸು ಲಿಪಿಜ್ಞಾನವಚನಕೌಶಲಾದಿಷು ಚ ಸಮ್ಯಗ್ವಿನಯನಂ । ಶಬ್ದಹೇತುಸಮಯವಿದ್ಯಾಸು ಆಜೀವಜ್ಞಾನೇ ಅಭ್ಯನ್ತರೀಕರಣಂ ।"

ಅಂದರೆ, ನೃತ್ಯ, ಗಾಯನೆ, ವಾದ್ಯಗಳನ್ನು ಬಾರಿಸೋಣ, ನಾಟಕ, ಚಿತ್ರಕಲೆ, ಸುಗಂಧದ್ರವ್ಯಗಳು, ಪುಷ್ಪರಚನೆ, ಲಿಪಿ, ಸುಭಾಷಿತ ಇವುಗಳ ಚಲೋ ಜ್ಞಾನ; ಮತ್ತು ವ್ಯಾಕರಣ, ನ್ಯಾಯ, ಸಿದ್ಧಾಂತ, ಈ ವಿದ್ಯೆಗಳು; ಉದರ ಪೋಷಣೋದ್ಯೋಗಗಳ ಜ್ಞಾನ ಮುಂತಾದವುಗಳು.

ವೃಚ್ಛಕಟಿಕದಲ್ಲಿ, ಸ್ತ್ರಿಯಾ ಸಂಸ್ಕೃತಪಠಿತಾ ಮನುಷ್ಯೇಣ ಚ ಕಾಕಲೀ ಗಾಯತ" ಅಂದರೆ, "ಸ್ತ್ರೀಯರು ಸಂಸ್ಕೃತ ಕಲಿಯುವದು, ಗಂಡಸರು ಕೋಗಿಲೆಯಂತೆ ಹಾಡುವದು" ಎಂದು ವಿದೂಷಕನು ಹಾಸ್ಯಮಾಡಿರುತ್ತಾನೆ.

ನಾಗಾನಂದ ನಾಟಕದಲ್ಲಿ ನಾಯಿಕೆಯಾದ ಮಲಯವತಿಯು ದೇವಾಲಯದಲ್ಲಿ ವೀಣೆಯನ್ನು ಬಾರಿಸುತ್ತ ಗಾಯನ ಮಾಡುತ್ತಿದ್ದಳೆಂದು ವರ್ಣನೆ ಇದೆ.

ರತ್ನಾವಲೀ ನಾಟಕದಲ್ಲಿ ಸಾಗರಿಕೆಯು ರಾಜನ ಚಿತ್ರವನ್ನು ತೆಗೆದಳೆಂದೂ, ಆಕೆಯ ಸಖಿಯು ರಾಜನ ಚಿತ್ರದ ಹತ್ತಿರ ಸಾಗರಿಕೆಯ ಚಿತ್ರವನ್ನು ಚಿತ್ರಿಸಿದಳೆಂದೂ ವರ್ಣನೆ ಇರುವದು.

ತ್ರಿವಿಕ್ರಮ ಭಟ್ಟನ ನಲಚಂಪುವಿನಲ್ಲಿ ಈ ವಿಷಯದಲ್ಲಿ ಹೆಚ್ಚು ವಿಸ್ತಾರವಾದ ವರ್ಣನೆ ಇರುವದು. ಹಂಸವು ನಳನ ಮುಂದೆ ದಮಯಂತಿಯ ಗುಣಗಳನ್ನು ಈ ರೀತಿಯಾಗಿ ವರ್ಣಿಸಿರುವದು:—

"पितुर्नियोगाद्गुरूपदेशात्साधुवृद्धसंवासाद् बुद्धिविकासाच्च नातिचिरेण ज्ञाता नैपुण्यं पुण्यकर्मारम्भेषु, जाता प्रवीणा वीणासु, निराकुला कुलाचारेषु,

कुशला शलाकालेख्येषु विशारदा शारिदायेषु प्रबुद्धा प्रबन्धालोचनेषु चतुरा चातुरानाथजनचिकित्सासु"

ಅಂದರೆ, "ತಂದೆಯ ಅಪ್ಪಣೆಯ ಮೇರೆಗೆ ಗುರುಗಳ ಶಿಕ್ಷಣದಿಂದಲೂ, ಪ್ರೌಢ ಮನುಷ್ಯರ ಸಹವಾಸದಿಂದಲೂ, ಆತ್ಮೀಯ ಬುದ್ಧಿ ವಿಕಾಸದಿಂದಲೂ, ಆಕೆಯು ಸ್ವಲ್ಪ ದಿವಸಗಳಲ್ಲಿಯೇ ಪುಣ್ಯಕವರ್ಮಾಜರ ಣೆಯಲ್ಲಿ ನಿಪುಣೆಯೂ, ವೀಣಾವಾದನದಲ್ಲಿ ಪ್ರವೀಣೆಯೂ, ಕುಲಾಚಾರ ದಲ್ಲಿ ದಕ್ಷಳೂ, ಕುಂಚದಿಂದ ಚಿತ್ರವನ್ನು ತೆಗೆಯುವದರಲ್ಲಿ ಕುಶಲಳೂ, ಚದುರಂಗ ಆಡುವದರಲ್ಲಿ ವಿಶಾರದಳೂ, ರೋಗಿಗಳನ್ನೂ ಅನಾಥರನ್ನೂ ಶುಶ್ರೂಷೆ ಮಾಡುವದರಲ್ಲಿ ಚತುರಳೂ ಆದಳು." ಈ ವರ್ಣನೆಯಲ್ಲಿ "आतुरानाथजनचिकित्सा" ಎಂಬ ಪದವು ಲಕ್ಷ್ಯದಲ್ಲಿಡತಕ್ಕಂಥಾದ್ದು. ಈ ಸೇವಾಸದನದ ಸಂಘಟಿಸಿದವರು ಈಗ ಮಾಡುವ ರೋಗಿಗಳ ಮತ್ತು ಅನಾಥರ ಶುಶ್ರೂಷೆಯ ಕೆಲಸವನ್ನು ನಾನೂರು ವರ್ಷದ ಅಚೆಯಲ್ಲಿ ತ್ರಿವಿಕ್ರಮಭಟ್ಟನು ಕನಸಿನಲ್ಲಿ ಕಂಡನೋ? ಅಥವಾ, ಅರ್ವಾಚೀನ ಕಾಲದ ಸುಧಾರಣೆಯು ಜನಿಸುವದಕ್ಕಿಂತ ಮೊದಲೇ, ಅರ್ವಾಚೀನ ಕಾಲದ ಸುಧಾರಿಸಿದ ರಾಷ್ಟ್ರಗಳ ಸುಶಿಕ್ಷಿತಸ್ತ್ರೀಯರು ತಮಗೆ ಭೂಷಣವೆಂದು ಆಚರಿಸುವ ಪರೋಪಕಾರವ್ರತದ ಮೊದಲನೆಯ ಪಾಠವನ್ನು ತ್ರೇತಾಯುಗದಲ್ಲಿ ದಮಯಂತಿಯೇ ಮೊದಲು ಹಾಕಿಕೊಟ್ಟಳೋ? ಆ ಹಂಸವು ಮತ್ತೂ ಹೇಳಿದ್ದೇನೆಂದರೆ:—

न तत्काव्यं न तन्नाट्यं न सा विद्या न सा कला ॥
यत्र तस्याः प्रबुद्धाया बुद्धिर्नैव व्यजृम्भत ॥

ಅಂದರೆ, ಆಕೆಯ ಬುದ್ಧಿಯು ಪ್ರವೇಶಿಸದೆ ಇದ್ದ ಯಾವ ಕಾವ್ಯವೂ, ಯಾವ ನಾಟಕವೂ, ಯಾವ ವಿದ್ಯೆಯೂ, ಯಾವ ಕಲೆಯೂ ಇರಲಿಲ್ಲ.

ಸ್ತ್ರೀಯರಿಗೆ ಸಂಸ್ಕೃತ ಭಾಷೆಯ ಹಾಗು ನಾಟ್ಯ ಕಲೆಯ ಉತ್ತಮ ಜ್ಞಾನವಿರುತ್ತಿತ್ತೆಂಬ ಬಗ್ಗೆ ಬಿಲ್ಹಣ ಕವಿಯ ವಿಕ್ರಮಾಂಕದೇವ ಚರಿತದಲ್ಲಿಯಾದರೂ ಕೆಲವು ಉಲ್ಲೇಖಗಳು ದೊರೆಯುತ್ತವೆ. ಅವನು ೧೮ ನೇ ಸರ್ಗದಲ್ಲಿ ಕಾಶ್ಮೀರ ದೇಶವನ್ನು ಈ ಬಗೆಯಾಗಿ ವರ್ಣಿಸಿರುವನು:—

"यत्र स्त्रीणामपिकिमपरं जन्मभाषावदेव ॥
प्रत्यावासं विलसति वचः संस्कृतं प्राकृतंच ॥"

ಅಂದರೆ, "ಇದಕ್ಕೂ ಮತ್ತೇನು ಹೆಚ್ಚು ಹೇಳಬೇಕು? ಯಾವ ದೇಶದಲ್ಲಿ ಮನೆಮನೆಗಳಲ್ಲಿಯೂ ಹೆಂಗಸರ ಬಾಯಿಯಲ್ಲಿ ಸಂಸ್ಕೃತ ಪ್ರಾಕೃತಗಳು ಜನ್ಮಭಾಷೆಯಂತೆ ಶೋಭಿಸುತ್ತಿದ್ದವು."

ಹೆಂಗಸರ ನಾಟ್ಯಕೌಶಲ್ಯದ ಸಂಬಂಧದಿಂದ ಈ ಮುಂದಿನ ಉದ್ಗಾರಗಳಂತೂ ಬಹಳೇ ವಿಸ್ಮಯವನ್ನುಂಟುಮಾಡುವವು:—

रामा रामानुकरणविधौ यत्र नाट्यप्रसंगे ।
योगस्थानामपि सपुलकं गात्रमासूत्रयन्ति ॥ २३ ॥
रम्भा स्तम्भं भजति लभते चित्रलेखा न रेखां ।
नूनं नाट्ये भवति च चिरं नोर्वशी गर्वशीला ॥ २९ ॥

"ಎಲ್ಲಿ, ನಾಟಕದಲ್ಲಿ ಹೆಂಗಸರು ರಾಮನ ಅಭಿನಯ ಮಾಡುವಾಗ ಯೋಗಿಗಳ ಮೈಮೇಲೆಯೂ ರೋಮಾಂಚಗಳೇಳುತ್ತಿದ್ದವೋ; ರಂಭೆಯು ಸ್ತಬ್ಧಳಾಗುತ್ತಿದ್ದಳೋ; ಚಿತ್ರಲೇಖೆಯು ಅಗಣ್ಯಳಾಗುತ್ತಿದ್ದಳೋ ಊರ್ವಶಿಯ ಗರ್ವವೂ ಪರಿಹಾರವಾಗುತ್ತಿತ್ತೋ;"

ವಿದ್ಯೆಯ ವಿಷಯದಲ್ಲಿ ಹೆಂಗಸರ ಅಭಿರುಚಿ, ವಿದ್ವಾಂಸರ ಪರಾಮರ್ಶ ತೆಗೆದುಕೊಳ್ಳುವದಗಲ್ಲಿ ಅವರ ಉತ್ಸಾಹ ಇವುಗಳ ಸಂಬಂಧದಿಂದ ಕೆಳಗಿನ ಉದಾಹರಣೆಯು ಸಾಕಾಗಿರುವದು:—

कीर्तिज्योत्स्नास्नपितभुवनश्रीरधिष्ठानमध्ये । शोभा ज्येष्ठं मठमकुरुत स्वीयनामांकितं सा । यस्मिन्विद्यारसिकमनसामास्पदे देशिकानां । ना नामाक्षणोर्व्रजति न सुधावर्तितां नार्तितश्रीः ॥ ४४ ॥

ಅಂದರೆ, "ತನ್ನ ಕೀರ್ತಿರೂಪಜ್ಯೋತ್ಸ್ನೆಯ ಪ್ರಕಾಶದಿಂದ ಸಮಸ್ತ ಭುವನವನ್ನೂ ಪ್ರಕಾಶಮಯವಾಗಿ ಮಾಡುತ್ತಿದ್ದ ಆ ರಾಣಿಯು, ಒಂದು ಸುಶೋಭಿತವಾದ ಮಠವನ್ನು ಸ್ಥಾಪಿಸಿ, ಅದಕ್ಕೆ ತನ್ನ ಹೆಸರನ್ನು ಇಟ್ಟಳು. ಆ ಮಠದಲ್ಲಿ ವಿದ್ಯಾಭ್ಯಾಸದಲ್ಲಿ ನಿಮಗ್ನರಾದ ಅನೇಕ ಗುರುಗಳು ವಾಸಿಸುತ್ತಿದ್ದರು. ಈ ಬಗೆಯ ಆ ವಿದ್ಯಾಪೀಠದ ಶೋಭೆಯನ್ನು ನೋಡಿ ಯಾರ ಕಣ್ಣಿಗೆ ಅಮೃತಾಂಜನವನ್ನು ಹಚ್ಚಿದಂತೆ ಸುಖವಾಗಲಿಕ್ಕಿಲ್ಲ!"

भाण्डागाराण्यकृत विदुषां सा स्वयं भोगभाग्भिः स्वातंत्र्येण ग्रहणमवनेर्ब्राह्मणानामवादीत् ॥ ४९ ॥

ಅಂದರೆ, "ಆಕೆಯು ವಿದ್ಯಾರ್ಥಿಗಳಿಗಾಗಿ ಅನ್ನಸತ್ರಗಳನ್ನು ಸ್ಥಾಪಿಸಿದಳು; ಹಾಗೂ ಬ್ರಾಹ್ಮಣರಿಗೆ ಅವರವರ ಬಯಕೆಯಂತೆ ಭೂಮಿಗಳನ್ನು ಹಾಕಿಕೊಟ್ಟಳು."

ಇಲ್ಲಿಯವರೆಗೆ ಗೆಂಡಸರು ಬರೆದ ಗ್ರಂಥಗಳೊಳಗಿನ ವಿಚಿತ್ರಗಳನ್ನು ನಿರ್ದೇಶಮಾಡಿದೆನು. ಆದರೆ "ಕೈಯೊಳಗಿನ ಕಂಕಣಕೆ ಕನ್ನಡಿ ಯಾಕ್ಕೆ?" ಎಂಬ ನಾಣ್ನುಡಿಯಂತೆ ಇನ್ನು ಮುಂದೆ ಸ್ತ್ರೀಯರು ಸಂಸ್ಕೃತದಲ್ಲಿ ರಚಿಸಿರುವ ಕಾವ್ಯಗಳ ಮಾದರಿಗಳನ್ನು ತಮ್ಮ ಮುಂದೆ ಇಡುವೆನು; ಅಂದರೆ, ಅವರ ಯೋಗ್ಯತೆಯು ತಾನೇ ಗೊತ್ತಾಗುವದು; ಅದಕ್ಕೆ ಬೇರೆ ಸಾಕ್ಷಿಯೇ ಬೇಡ.

ಧನದದೇವ ಕವಿಯು ನಾಲ್ಕುಮಂದಿ ಕವಯಿತ್ರಿಗಳ ಹೆಸರುಗಳನ್ನು ಒಂದೇ ಶ್ಲೋಕದಲ್ಲಿ ಹೇಳಿರುವನು. ಆ ಕವಯಿತ್ರಿಯರ ಚರಿತ್ರೆಗಳು ಉಪಲಬ್ಧವಿಲ್ಲ. ಆದರೆ ಸುಭಾಷಿತಾವಲಿಯಲ್ಲಿ ಅವರು ರಚಿಸಿದಂಥ ಕೆಲವು ಸ್ಫುಟಪದ್ಯಗಳು ಕೊಡಲ್ಪಟ್ಟಿರುವವು. ಅವುಗಳಲ್ಲಿ ಕೆಲವನ್ನು ಮಾದರಿಗಾಗಿ ತಮಗೆ ವಿಜ್ಞಾಪಿಸುವೆನು:—

ಮೋರಿಕಾ:—

ಲಿಖತಿ ನ ಗಣಯತಿ ರೇಖಾ ನಿರ್ಭರಬಾಷ್ಪಾಮ್ಬುಧೌತಗಣ್ಡತಲಾ ॥ ಅವಧಿ-ದಿವಸಾವಸಾನಂ ಮಾ ಭೂದಿತಿ ಶಂಕಿತಾ ಬಾಲಾ ॥ ಅಂದರೆ, "ಕಣ್ಣೀರು ಧಾರಾಕಾರವಾಗಿ ಸುರಿದು ಗಲ್ಲದ ಮೇಲಿನಿಂದ ಹರಿಯುತ್ತಿರುವಂಥ ಬಿರ್ವ ಕನ್ನಿಕೆಯು ಗೆರೆಗಳನ್ನು ಕೊರೆಯುತ್ತಾಳೆ; ಆದರೆ ಅವಧಿಯ ದಿವಸಗಳು ಮುಗಿಯುವ ಕಾಲವು ಬಂದಿತಲಿಕ್ಕಿಲ್ಲವೆಂದು ಹೆದರಿ ಅವುಗಳನ್ನು ಎಣಿಸುವದಿಲ್ಲ."

ವಿಜ್ಜಾ:—ವಿರಮ ವಿಫಲಾಯಾಸಾದಸ್ಮಾದ್ದುರಧ್ಯವಸಾಯತೋ । ವಿಪದ್ ಮಹತಾ ಧೈರ್ಯಭ್ರಂಶೇ ಯದೀಕ್ಷಿತುಮೀಹಸೇ । ಅಯಿ ಜಡವಿಧೇ ಕಲ್ಪಾಪಾಯವ್ಯಪೇನ ನಿಜಕ್ರಮಾ: । ಕುಲ ಶಿಖರಿಣ: ಕ್ಷುದ್ರಾ ನೈತೇ ನದಾ ಜಲರಾಶಯ: ॥ ಅಂದರೆ, "ಎಲೈ ಮೂರ್ಖನಾದ ವಿಧಿಯೇ! ಮಹಾತ್ಮರು ಧೈರ್ಯಗುಂದುವರೋ ಹ್ಯಾಗೆ ಎಂಬದನ್ನು ಪರೀಕ್ಷಿಸಲು ನೀನು ಯತ್ನಿಸುತ್ತಿರುವಿ. ಆದರೆ ನೀನು, ಕಡೆಗಾಣದ ಈ ಹಟವನ್ನೂ ವ್ಯರ್ಥವಾದ ಸಾಹಸವನ್ನೂ ಬಿಟ್ಟು ಬಿಡು; ವ್ಯರ್ಥವಾಗಿ ಆಯಾಸ ಪಡಬೇಡ. ಯಾಕಂದರೆ, ಕಲ್ಪಾಂತದಲ್ಲಿಯಾದರೂ ತಮ್ಮ

ನಿತ್ಯಕ್ರಮವನ್ನು ಬಿಡುವಂಥ ಕುಲಪರ್ವತಗಳಂತೆಯೂ ಸಮುದ್ರಗಳಂತೆಯೂ ಅವರು ಅಲ್ಲ.

ಈ ಕವಯಿತ್ರಿಯ ಸೌಂದರ್ಯನಿರೀಕ್ಷಣ ದೃಷ್ಟಿಯು ಈ ಮುಂದಿನ ಪದ್ಯಗಳಿಂದ ಗೊತ್ತಾಗುವದು:—

विलासमसृणोल्लसन्मुसललोलदोः कन्दली । परस्परपरिस्खलल्लुलयनि
स्वनोद्धन्धुराः । लसन्ति कलहंकृतिप्रसभकम्पितोरःस्थलत्रुटद्धमकसंकुल
कलमकण्ठनीगीतयः ॥

ಇದರ ಅರ್ಥವೇನೆಂದರೆ, "ಲೀಲೆಯಿಂದ ಮೇಲಕ್ಕೆ ಎತ್ತಿದ ಒನಿಕೆಗಳನ್ನು ಈ ಕೈಯಿಂದ ಆ ಕೈಗೆ ಕೊಡುವಾಗ ಬಾಳೆಯಂತಿರುವ ಅವರ ತೋಳುಗಳು ನಲಿದಾಡುವದರಿಂದಲೂ, ಆ ಚಲನೆಯಿಂದ ಕಂಕಣಗಳು ಒಂದಕ್ಕೊಂದು ತಾಕಲಾಡಲು ಅದರಿಂದುಂಟಾಗುವ ಸಪ್ಪಳದಿಂದಲೂ, ಇಂಪಾದ ಹೂಂ ಹೂಂ ಕಾರಗಳಿಂದ ಕೂಡಿದ ಮಧುರಸ್ವರಗಳ ಯೋಗದಿಂದಲೂ, ಹೃದಯವು ಕಂಪಿಸುವದರಿಂದ ನಡನಡುವೆ ವಿಚ್ಛಿನ್ನವಾಗುತ್ತಿರುವ ಅವರ ತಾನುಗಳಿಂದಲೂ ಭರ್ತೃವನ್ನು ಕುಟ್ಟುವ ಹೆಂಗಸರ ಹಾಡುಗಳು ಶೋಭಿಸಿದವು." ಇದೇ ಕವಯಿತ್ರಿಯ ಪರಿಹಾಸಕುಶಲತೆಯ ಮಾದರಿಯನ್ನು ನೋಡಿರಿ:—

नीलोत्पलदलश्यामां विज्जकां मामजानता ।
वृथैव दण्डिना प्रोक्तं सर्वशुक्ला सरस्वती ॥

ಅಂದರೆ, "ನೀಲಕಮಲದಲದಂತೆ ಕೃಷ್ಣವರ್ಣಾಂಗಿಯಾದ ನನ್ನನ್ನು ನೋಡದೆಯೇ ದಂಡಿಯು, ಸರಸ್ವತಿಯು ನಖಶಿಖಾಂತವಾಗಿ ಗೌರಾಂಗಿಯಾಗಿದ್ದಾಳೆಂದು ವ್ಯರ್ಥವಾಗಿ ಹೇಳಿದನು." ನಾಲ್ಕನೆಯ ಕವಯಿತ್ರಿಯು ಶೀಲಾಭಟ್ಟಾರಿಕಾ ಎಂಬವಳು. ಆಕೆಯ ಪ್ರಶಂಸೆಯನ್ನು ಈ ಪ್ರಕಾರ ಮಾಡಿರುವನು:—

शब्दार्थयोः समोगुम्फा पांचालीरीतिरुच्यते ।
शीलाभट्टारिकावाचि बाणोक्तिषुच सा यदि ॥

ಅಂದರೆ, "ಶಬ್ದ, ಅರ್ಥ ಇವೆರಡೂ ಸರಿಯಾಗಿದ್ದರೆ ಅದಕ್ಕೆ ಪಾಂಚಾಲೀ ರೀತಿ"ಯೆಂದು ಹೇಳುವರು. ಈ ಪಾಂಚಾಲೀ ರೀತಿಯು ಬಾಣಕವಿಯ ನಚನದಲ್ಲಿದ್ದರೆ ಶೀಲೆಯ ಕಾವ್ಯಗಳಲ್ಲಿಯೂ ಇರುವದು.

ಸ್ತ್ರೀಯರಿಗೆ ಗಾಯನ-ವಾದ್ಯನ-ವಿದ್ಯೆಗಳನ್ನು ಕಲಿಸುತ್ತಿದ್ದರೆಂಬ ಬಗ್ಗೆ ಸಂಸ್ಕೃತ ವಾಙ್ಮಯದೊಳಗಿನ ಅನೇಕ ಉದಾಹರಣೆಗಳನ್ನು ನಿರ್ದೇಶಮಾಡಿಯೇ ಇದ್ದೇನೆ. ಈ ಸಂಬಂಧದಿಂದ ಇನ್ನೊಂದು ಅನ ಪೇಕ್ಷಿತವಾದ ಆಧಾರವು ದೊರೆತಿರುವದು. ಮಹಾರಾಷ್ಟ್ರಲಲಾಮಭೂತರಾದ ವಿದ್ವಚ್ಛಿರೋಮಣಿಗಳಾದ ಡಾಕ್ಟರ್ ಭಾಂಡಾರಕರರವರ ಪ್ರಾಚೀನವಸ್ತು ಸಂಶೋಧನ ಕಾರ್ಯವು ಅವರ ಇಡೀ ಆಯುಷ್ಯದಲ್ಲಿ ಒಂದೇಸವನೆ ನಡೆದಿರುವದೆಂಬದು ತಮ್ಮೆಲ್ಲರಿಗೂ ಗೊತ್ತಿದ್ದ ಸಂಗತಿಯೇ ಸರಿ. ಅವರು ಧಾರ್ವಾ, ನವಸರೀ, ಬೆಳಗಾವ ಈ ಜಿಲ್ಲೆಗಳಲ್ಲಿ ದೊರೆತಿರುವ ತಾಮ್ರ ಪಟಗಳ ಆಧಾರದಿಂದ ಇ. ಸ. ೧೯೮೭ನೇ ವರುಷ ಒಂದು ಲೇಖವನ್ನು ಬರೆದಿರುವರು. ಅದರಲ್ಲಿ ಅವರು ಹೇಳಿರುವದೇನೆಂದರೆ:—

"ಸಾವಳದೇವಿಯು ಸೋಮರಾಜನ ವಿವಾಹಿತ ರಾಣಿಯಾಗಿದ್ದಳೆಂಬದರಲ್ಲಿ ಸಂಶಯವಿಲ್ಲ. ಹೀಗಿದ್ದರೆ ೧೨ನೇ ಶತಮಾನದ ಕೊನೆಯ ಇಪ್ಪತ್ತೈದು ವರುಷಗಳಲ್ಲಿ ಕ್ಷತ್ರಿಯ ಪುತ್ರಿಯರ ಶಿಕ್ಷಣದಲ್ಲಿ ಗಾಯನವೂ ನೃತ್ಯವೂ ಸಮಾವೇಶವಾಗುತ್ತಿದ್ದವೆಂಬ ಬಗ್ಗೆ ಆಧಾರಗಳು ನನಗೆ ಈ ತಾಮ್ರಪಟಗಳಲ್ಲಿ ದೊರೆಯುತ್ತವೆ. ಅದರಂತೆ ವಿವಾಹಿತ ಕ್ಷತ್ರಿಯ ಸ್ತ್ರೀಯರು ದೊಡ್ಡ ದೊಡ್ಡ ಮನುಷ್ಯರ ಸಭೆಗಳಲ್ಲಿ ಕುಳಿತು ಅಲ್ಲಿ ಗಾಯನ ಮಾಡುತ್ತಿದ್ದರು. ಇದರಲ್ಲಿ ಜನರಿಗೆ ಯಾವ ಬಗೆಯ ಅಸಂಗತವೂ ತೋರುತ್ತಿದ್ದಿಲ್ಲ.*"

ಹೆಂಗಸರ ಲಲಿತಕಲಾಶಿಕ್ಷಣವು ವಿವಾಹವಾದನಂತರವೂ ನಡೆಯುತ್ತಿತ್ತೆಂಬ ಬಗ್ಗೆ ಒಂದು ವಿಶೇಷ ಹೃದಯಂಗಮವಾದ ಆಧಾರ ಕಂಡು ಬರುವದು. ಇಕ್ಷ್ವಾಕುವಂಶದ ಅಜರಾಜನ ಹೆಂಡತಿಯಾದ ಇಂದುಮತಿಯು ಮರಣ ಹೊಂದಿದಳು. ಅದರಿಂದ ಅವನಿಗಾದ ದುಃಖದ ವರ್ಣನೆಯನ್ನು ಕವಿಕುಲಗುರುವಾದ ಕಾಲಿದಾಸನು ರಘುವಂಶದ ಎನೇ ಸರ್ಗದಲ್ಲಿ ಮಾಡಿರುವನು. ಅದರಲ್ಲಿ:—

---

*"There is, therefore, no doubt that Savaldevi was a married queen of Soma; and if so, we have evidence here that in the last quarter of the 12th century of the Christian era, music and dancing formed a part of the education of Kshatriya girls and that a married Kshatriya woman could be present at an assembly of eminent men and sing before them without impropriety."

गृहिणी सचिवःसखी मिथःप्रियशिष्या ललिते कलाविधौ ।

ಎಂದು ಒಂದು ಅಧರ ಶ್ಲೋಕವಿರುವದು. "ಇಂದುಮತಿಯು ಗೃಹಸ್ವಾಮಿನಿಯಾಗಿದ್ದಳು, ಮತ್ತು ತನ್ನ ಪತಿಯ ಮಂತ್ರಿಯೂ ಸಖಿಯೂ ಆಗಿದ್ದಳಲ್ಲದೆ, ಲಲಿತಕಲಾವಿದ್ಯೆಯಲ್ಲಿ ಆಕೆಯು ಪತಿಯ ಪ್ರಿಯಶಿಷ್ಯಳಾಗಿದ್ದಳು" ಎಂಬುದು ಅದರ ತಾತ್ಪರ್ಯವು. ಇಷ್ಟರ ಮೇಲಿಂದ ವಿವಾಹಾನಂತರದಲ್ಲಿಯೂ ಸ್ತ್ರೀಯರ ಶಿಕ್ಷಣವು ನಡದೇ ಇರುತ್ತಿತ್ತೆಂಬದು ಗೊತ್ತಾಗುತ್ತದೆ. ಈ ಶಿಕ್ಷಣವು ಗುರುಶಿಷ್ಯಿಣಿಯನ್ನು ಅವಲಂಬಿಸಿರದ ಕಾರಣದಿಂದಲೂ, ಅದು ಕೇವಲ ಪ್ರೀತಿಯಿಂದಲೇ ಕೂಡಲ್ಪಡುತ್ತಿದ್ದದರಿಂದಲೂ, ಆ ಪತಿಪತ್ನೀರೂಪರಾದ ಗುರುಶಿಷ್ಯರ ಐಕಾತ್ಮ್ಯವು ದಿನದಿನಕ್ಕೂ ಹೆಚ್ಚು ಹೆಚ್ಚಾಗಿ ದೃಢವಾದ್ದರಿಂದ ಆ ಉಭಯತರಿಗಾದಂಥ ಅಪರಿಮೇಯವಾದ ಆನಂದವು ವರ್ಣನಾತೀತವಾದದ್ದೇ ಸರಿ.

ಇಲ್ಲಿಯವರೆಗೆ ಋಗ್ವೇದ ಕಾಲದಿಂದ ಇ. ಸ. ಗಿಂತೀ ಶತಮಾನದವರೆಗಿನ ಪ್ರಸಿದ್ಧ ಗ್ರಂಥಗಳೊಳಗಿನ ಸೂಚಕ ವಾಕ್ಯಗಳನ್ನು ಸಂಗ್ರಹಿಸಿ, ಅವುಗಳ ಆಧಾರದಿಂದ ಪ್ರಾಚೀನಕಾಲದಲ್ಲಿ ಸ್ತ್ರೀಶಿಕ್ಷಣವು ಪ್ರಚಲಿತವಾಗಿತ್ತೆಂಬ ಬಗ್ಗೆ ಕೆಲವು ಮುಖ್ಯ ಪ್ರಮಾಣಗಳನ್ನು ತಮಗೆ ನಿವೇದಿಸಿದಂತಾಯಿತು. ಇದೇ ರೀತಿಯಾಗಿ ಸ್ತ್ರೀಯರ ಪಾಂಡಿತ್ಯವನ್ನು ತೋರಿಸುವ ಆಖ್ಯಾಯಿಕೆಗಳಾದರೂ ಕೆಲವು ದೊರೆಯುತ್ತವೆ. ಅವುಗಳಲ್ಲಿ ಸ್ವಲ್ಪ ವಿನೋದಾತ್ಮಕವಾದ ಒಂದು ಆಖ್ಯಾಯಿಕೆಯನ್ನು ತಮಗೆ ಹೇಳಿ ಈ ನನ್ನ ನೀರಸವಾದ ಭಾಷಣವನ್ನು ಮುಗಿಸುವೆನು. ಒಬ್ಬ ರಾಜನು ತನ್ನ ರಾಣಿಯನ್ನು ಕೂಡಿಕೊಂಡು ಜಲಕ್ರೀಡೆಯನ್ನು ಆಡುತ್ತಿದ್ದನು. ಆಗ ಅವನು ವಿನೋದಕ್ಕಾಗಿ ಆಕೆಯ ಮೈಮೇಲೆ ನೀರನ್ನು ಉಗ್ಗಲಾರಂಭಿಸಿದನು. ಆಗ ರಾಣಿಯು "मां मोदकैस्ताडय" ಎಂದು ಹೇಳಿದಳು. ಅದನ್ನು ಕೇಳಿ ರಾಜನು ವ್ಯವಹಾರ ಶೂನ್ಯತೆಯಿಂದಲೋ, ಅಥವಾ ಹೆಚ್ಚು ವಿನೋದ ಮಾಡಬೇಕೆಂತಲೋ, ಗುಪ್ತವಾಗಿ ಕೆಲವು ಮೋದಕಗಳನ್ನು ತರಿಸಿ, ಆ ಮೋದಕಗಳಿಂದ ಹೊಡೆಯ ಹತ್ತಿದನು. ಅದನ್ನು ನೋಡಿ ರಾಣಿಯು ಸ್ವಲ್ಪ ಸಿಟ್ಟಿಗೆದ್ದಳು, ಮತ್ತು "मां मा तदकैस्ताडय" ಎಂದು ನಾನು ಹೇಳಿದೆನು, ಅದು ತಮಗೆ ತಿಳಿಯಲಿಲ್ಲವೆಂದು ತೋರುತ್ತದೆ, ಎಂದು ಹೇಳಿದಳು. ಈ ಬಗೆಯ ಆಖ್ಯಾಯಿಕೆಗಳು ಉಂಟಾಗುತ್ತಿದ್ದವೆಂಬದರಿಂದ ಪೂರ್ವದಲ್ಲಿ

್ತೀಯರಿಗೆ ವಿದ್ಯಾಸಂಸ್ಕಾರವಾಗುತ್ತಿತ್ತೆಂದು ಊಹಿಸುವದಕ್ಕೆ ಅಡ್ಡಿ ಬೇರುವದಿಲ್ಲ.

ಇರಲಿ. ಈ ವಿಷಯವನ್ನು ಹೆಚ್ಚು ಹೆಚ್ಚಾಗಿ ಪರಿಶೋಧಿಸಿದ ಹಾಗೆ ಇದಕ್ಕೂ ಬಲವತ್ತರವಾದ ಅನೇಕ ಪ್ರಮಾಣಗಳು ದೊರೆಯುವ ಸಂಭವ ಇದೆ. ಆದರೆ ಅರ್ಧ ತಾಸಿಗಿಂತಲೂ ಹೆಚ್ಚಾಗಿ ತಮ್ಮ ವೇಳೆಯನ್ನು ಹರಣ ಮಾಡುವದು ನನಗೆ ಪ್ರಶಸ್ತವಾಗಿ ತೋರದ ಕಾರಣ, ಈ ವಿಷಯದ ಕೇವಲ ದಿಗ್ದರ್ಶನವನ್ನು ನಾನು ಇವತ್ತು ಮಾಡಿದ್ದೇನೆ. ನಾನು ಮಾಡಿದ ಈ ಅಲ್ಪ ಪ್ರಯತ್ನವು ತಮ್ಮೆಲ್ಲರಿಗೂ ಮಾನ್ಯವಾದರೆ, ತುಸುವೇ ಆಗಲಿ, ಬಹಳವೇ ಆಗಲಿ, ನಾನು ಮಾಡಿದ ಪರಿಶ್ರಮವು ಸಾರ್ಥಕವಾಗುವದೆಂದು ನಂಬಿಸುತ್ತೇನೆ.

ಪ್ರಕೃತಿವಿಮರ್ಶೆ.

೧ನೆಯ ಭಾಗದ ಪ್ರಸ್ತಾವನೆ.

ಇಷ್ಟು ದಿವಸಗಳ ವರೆಗೆ ಪ್ರಚಾರದಲ್ಲಿದ್ದ ಹಳೆ ಪದ್ಧತಿಯ ಶಿಕ್ಷಣ ಕ್ರಮದ ಮುಖ್ಯ ಉದ್ದೇಶವು, ಬಹುಶಃ ಶಿಕ್ಷಕರು ವಿದ್ಯಾರ್ಥಿಗಳಿಗೆ ಗಣಿತ, ಇತಿಹಾಸ, ಭೂಗೋಲ ಮೊದಲಾದ ವಿಷಯಗಳನ್ನು ಕಲಿಸಿ, ಅವರ ತಲೆಯಲ್ಲಿ ಆ ವಿಷಯಗಳ ಸಂಬಂಧದ ವಿಚಾರಗಳನ್ನು ತುಂಬಿಬಿಡಬೇಕೆಂಬ ವಿಷ್ಟೇ ಇರುತ್ತಿತ್ತು. ಇದರಿಂದ ಆ ಶಿಕ್ಷಣಕ್ರಮದಲ್ಲಿ ವಿದ್ಯಾರ್ಥಿಗಳು ಮಾಡತಕ್ಕ ಕೆಲಸಗಳಿಗಿಂತ ಶಿಕ್ಷಕರು ಮಾಡತಕ್ಕ ಕೆಲಸಗಳೇ ಹೆಚ್ಚಾಗಿರುತ್ತಿದ್ದವು. ಹುಡುಗರು ತಮ್ಮಲ್ಲಿ ಸ್ವಾಭಾವಿಕವಾಗಿರುವ ಬುದ್ಧಿಯನ್ನು ತಕ್ಕಮಟ್ಟಿಗೆ ಉಪಯೋಗಿಸಿಕೊಳ್ಳಲಿಕ್ಕೆ ಯತ್ನಿಸುತ್ತಿದ್ದಿಲ್ಲ.

ಮಾನಸಶಾಸ್ತ್ರವು ಅಸ್ತಿತ್ವಕ್ಕೆ ಬಂದಮೇಲೆ ಆ ಶಾಸ್ತ್ರವು ಪ್ರತಿಪಾದಿಸುವ ತತ್ವಗಳು ಬಾಲಕರ ಶಿಕ್ಷಣಕ್ರಮದಲ್ಲಿ ಉತ್ಕ್ರಾಂತಿಯನ್ನುಂಟು ಮಾಡಿದವೆಂದು ಧಾರಾಳವಾಗಿ ಹೇಳಬಹುದು. ಇನ್ನುವರೆಗೆ ಕಣ್ಣು ಮುಚ್ಚಿಕೊಂಡು ಕೆಲಸಮಾಡುತ್ತಿರುವ ಶಿಕ್ಷಕರ ಕಣ್ಣುಗಳು ತೆರೆಯಹತ್ತಿದವು, ಹಾಗೂ ಶಿಕ್ಷಣದ ಕೆಲಸದಲ್ಲಿ ವಿದ್ಯಾರ್ಥಿಗಳ ಕರ್ತವ್ಯಭಾಗವೇ ಹೆಚ್ಚಾಗಿ

ರುವದೆಂದೂ ವಿದ್ಯಾರ್ಥಿಗಳಿ ಮನೋವೃತ್ತಿಗಳಿಗೆ ತಕ್ಕ ಚಾಲನೆಯನ್ನು ಕೊಟ್ಟು, ಆ ಮನೋವೃತ್ತಿಗಳು ವಿಕಾಸಹೊಂದುತ್ತ ಹೋದಹಾಗೆ ಅವರಿಗೆ ಬೇಕಾಗುವ ಉತ್ತೇಜಕಗಳನ್ನು ಕಾಲಕಾಲಕ್ಕೆ ಒದಗಿಸಿಕೊಡುವದೇ ಶಿಕ್ಷಕರ ಕರ್ತವ್ಯವೆಂತಲೂ ಗೊತ್ತಾಯಿತು. ಈ ತತ್ವಗಳನ್ನನುಸರಿಸುವ ಶಿಕ್ಷಣಕ್ಕೆ ಹೊಸಪದ್ಧತಿಯ ಶಿಕ್ಷಣವೆನ್ನಬಹುದು.

ಹೊಸ ಪದ್ಧತಿಯ ಶಿಕ್ಷಣದ ರಹಸ್ಯವೇನೆಂದರೆ ಬಾಲಕರ ನಿರೀಕ್ಷಣಶಕ್ತಿಯನ್ನು ವೃದ್ಧಿಪಡಿಸುವದು, ಅವರ ಮಿದುಳಿನ ವ್ಯಾಪಾರಗಳು ಹೆಚ್ಚಾದಂತೆ ಅವರ ಮನಸ್ಸಿನಲ್ಲಿ ಸಾರಾಸಾರ ವಿಚಾರವು ಹುಟ್ಟುವಂತ ಮಾಡುವದು, ಅವರು ಸ್ವಾನುಭವದಿಂದ ಸೃಷ್ಟಿಯ ವ್ಯಾಪಾರಗಳ ಕಾರ್ಯಕಾರಣ ಭಾವವನ್ನು ಕಂಡು ಹಿಡಿಯುವಂತೆ ಮಾಡುವದು. ತುಸು ಹೆಚ್ಚು ವಿಚಾರಮಾಡಿನೋಡಿದರೆ ಹಳೆ ಪದ್ಧತಿಯ ಶಿಕ್ಷಣಕ್ರಮಕ್ಕಿಂತ ಹೊಸ ಪದ್ಧತಿಯ ಶಿಕ್ಷಣವು ಹೆಚ್ಚು ಕಠಿಣವಾದದ್ದೆಂದು ನಾವು ಒಪ್ಪಿಕೊಳ್ಳಬೇಕಾಗುವದು. ಶಿಕ್ಷಣಶಾಸ್ತ್ರದ ಗುಟ್ಟನ್ನು ಅರಿತಂಥ ಶಿಕ್ಷಕರೇ ಈ ಪದ್ಧತಿಯಂತೆ ಕಲಿಸಬಲ್ಲರು.

ಬಾಲಕರ ನಿರೀಕ್ಷಣಶಕ್ತಿಯನ್ನು ಬಲಪಡಿಸುವದಕ್ಕೆ ನಮ್ಮ ಸುತ್ತಮುತ್ತಲು ಎಡೆಬಿಡದೆ ನಡೆದಿರುವ ಸೃಷ್ಟಿಯ ವ್ಯಾಪಾರಗಳು ಉತ್ತಮವಾದ ಸಾಧನಗಳಾಗಿವೆ. ಆದ್ದರಿಂದ ಈ ಪುಸ್ತಕದಲ್ಲಿ ವನಸ್ಪತಿಗಳ ಜೀವನವ್ಯಾಪಾರಗಳನ್ನು ವಿಮರ್ಶಿಸಿರುವೆವು. ಮನುಷ್ಯರ ವಾಸ್ತವ್ಯವಿರುವ ಪ್ರದೇಶಗಳಲ್ಲೆಲ್ಲ ವನಸ್ಪತಿಗಳು ಇದ್ದೇ ಇರುವ ಕಾರಣ, ಬಾಲಕರು ತಮ್ಮ ಕೈಯಿಂದ ತಾವೇ ಪ್ರಯೋಗಗಳನ್ನು ಮಾಡಿ, ವನಸ್ಪತಿಗಳ ಜೀವನವ್ಯಾಪಾರಗಳನ್ನು ಕಂಡು ಹಿಡಿದು ಸೃಷ್ಟಿಯಲ್ಲಿರುವ ವ್ಯವಸ್ಥೆಯನ್ನು ಪರೀಕ್ಷಿಸಿ ಸೃಷ್ಟಿಜ್ಞಾನವನ್ನು ತಕ್ಕಮಟ್ಟಿಗೆ ದೊರಕಿಸಿಕೊಳ್ಳಲಿಕ್ಕೆ ಅನುಕೂಲವಾಗುವದು.

ಈ ಪುಸ್ತಕದಲ್ಲಿ ಕೊಟ್ಟ ಪ್ರಯೋಗಗಳು ಬಾಲಕರು ಸ್ವತಃ ಮಾಡಲಿಕ್ಕೆ ಬರುವಂಥವೂ ಹೆಚ್ಚು ಬೆಲೆಯುಳ್ಳ ಉಪಕರಣಗಳು ಬೇಡುವಂಥವೂ ಇರುವವು. ಇವುಗಳಲ್ಲಿ ಎಷ್ಟೋ ಪ್ರಯೋಗಗಳನ್ನು ನಾವು ಸ್ವತಃ ಪ್ರಯೋಗಶಾಲೆಯಲ್ಲಿ ಮಾಡಿ ಮನಗಂಡಿರುವೆವು. ಈ ಪ್ರಯೋಗಗಳು ಕೇವಲ ಮಾರ್ಗದರ್ಶಕಗಳೆಂದು ತಿಳಿದು ಶಿಕ್ಷಕರು ತಮಗೆ ತೋಚಿದ ಬೇರೆ

ಪ್ರಯೋಗಗಳನ್ನು ಮಾಡಬೇಕೆಂದು ನಾವು ಅವರಿಗೆ ಅಗ್ರಹಪೂರ್ವಕ ವಾಗಿ ಹೇಳುವೆವು. ವನಸ್ಪತಿಶಾಸ್ತ್ರವನ್ನು ಬರೆಯುವ ಉದ್ದೇಶದಿಂದ ಈ ಪುಸ್ತಕವನ್ನು ಬರೆದಿರುವದಿಲ್ಲಾದ್ದರಿಂದ ಇದರಲ್ಲಿ ಚಿಕ್ಕ ಬಾಲಕರಿಗೆ ತಿಳಿ ಯದಂಥ ಪಾರಿಭಾಷಿಕ ಶಬ್ದಗಳನ್ನು ಉಪಯೋಗಿಸದೆ, ವಿಷಯವು ಸುಬೋಧವಾಗಬೇಕೆಂಬ ಉದ್ದೇಶದಿಂದ ಸುಲಭವಾದ ಭಾಷೆಯಲ್ಲಿ ಬರಿ ಯಲು ಯತ್ನಿಸಿರುವೆವು. ಈ ಉದ್ದೇಶವು ಎಷ್ಟು ಮಟ್ಟಿಗೆ ಸಫಲವಾಗಿರುವ ದೆಂಬದನ್ನು ವಾಚಕರೇ ಊಹಿಸಬಹುದು.

ಧಾರವಾಡ
ತಾ॥ ೪-೧೦-೧೯೧೩. } R. M. MAHISHI. B. A.

ಪ್ರಕೃತಿವಿಜ್ಞಾನ.

೨ನೇ ಭಾಗ.

ವನಸ್ಪತಿಗಳು.

ವನಸ್ಪತಿಗಳ ಅವಯವಗಳೂ ಅವುಗಳ ಕಾರ್ಯಗಳೂ.

೧ನೇ ಅಧ್ಯಾಯ.

ಉಪೋದ್ಘಾತ.

ಪರಿಪೂರ್ಣವಾಗಿರುವ ವನಸ್ಪತಿಗಳಿಗೆ ಬೇರು, ಕಾಂಡ, ಎಲೆ, ಹೂಗಳೆಂಬ ನಾಲ್ಕು ಮುಖ್ಯವಾದ ಅವಯವಗಳಿರುವವು. ಅವುಗಳಲ್ಲಿ ಬೇರು, ಕಾಂಡ, ಹಾಗು ಎಲೆಗಳು ವನಸ್ಪತಿಗಳ ಮುಖ್ಯವಾದ ಪೋಷಕಾಂಗಗಳು (Organs of nourishment). ಅವುಗಳ ಸಹಾ ಯದಿಂದ ವನಸ್ಪತಿಗಳು ತಮಗೆ ಬೇಕಾದ ಆಹಾರದ ಪದಾರ್ಥಗಳನ್ನು ಸೊರಕಿಸಿಕೊಂಡು, ಪೋಷಕ ರಸವನ್ನು (Elaborated Sap) ಸಿದ್ಧ ಪಡಿಸಿ ಅದನ್ನು ಕೆಲಸ ಮಾಡುವ ಎಲ್ಲ ಭಾಗಗಳಿಗೆ ಮುಟ್ಟಿಸುತ್ತವೆ. ಬೇರುಗಳು ಭೂಮಿಯಲ್ಲಿರುವ ಕೆಲವು ವಿವಕ್ಷಿತ ಖನಿಜದ್ರವ್ಯಗಳನ್ನು, ಅವು ನೀರಿನಲ್ಲಿ ನಿಯಮಿತ ಪ್ರಮಾಣದಿಂದ ಕರಗಿದ ಮೇಲೆ, ಎಲೆಗಳಿಗೆ ಕಳುಹಿ ಸುವದಕ್ಕಾಗಿ ಹೀರಿಕೊಳ್ಳುವವು. ಎಲೆಗಳು ಹವೆಯೊಳಗಿಂದ ಕೆಲವು

ಮೂಲತತ್ವಗಳನ್ನು ಹಿಂಡಿದಿಟ್ಟುಕೊಂಡು ಬೇರುಗಳಿಂದ ಬಂದು ಮುಟ್ಟಿದ ಖನಿಜದ್ರವ್ಯಗಳಲ್ಲಿ ಆ ಮೂಲತತ್ವಗಳನ್ನು ರಸಾಯನ ರೀತಿಯಿಂದ ಮಿಶ್ರ ಮಾಡಿ ಪೋಷಕ ರಸವನ್ನುಂಟುಮಾಡುವವು. ಈ ತರದ ಭಿನ್ನ ಕಾರ್ಯ ಗಳನ್ನು ಮಾಡುವ ಬೇರು ಎಲೆಗಳೆಂಬ ಅವಯವಗಳನ್ನು ಬಂದಕ್ಕೊಂದು ಜೋಡಿಸುವದೇ ಕಾಂಡದ ಮುಖ್ಯ ಕರ್ತವ್ಯವಾಗಿದೆ. ರಕ್ಕಸಬಾಳಿ, ನೀರುಳ್ಳಿ ಮೊದಲಾದ ವನಸ್ಪತಿಗಳ ಭೂಮಿಯ ಮೇಲೆ ಕಾಣುವ ಕಾಂಡದ ಭಾಗವು ವಿಶೇಷವಾಗಿ ಬೆಳೆದಿರುವದಿಲ್ಲ. ಮುಳಗಳ್ಳಿಯ ಕಾಂಡವು ಎಲೆ ಗಳ ಕಾರ್ಯವನ್ನೇ ಮಾಡುತ್ತಿರುವದರಿಂದ ಅದರ ಆಕಾರವು ಎಲೆಯಂತೆ ಇದ್ದು ಅದರಲ್ಲಿ ಹಸರು ಬಣ್ಣದ ಕೋಶಗಳು ತುಂಬಿರುವವು. ಈ ವನಸ್ಪತಿಯು ನಿರ್ಜಲ ಪ್ರದೇಶದಲ್ಲಿ ಸಹ ಬೆಳೆಯುತ್ತಿರುವದರಿಂದ ತನ್ನಲ್ಲಿ ರುವ ನೀರನ್ನು ಹೊರಗೆ ಹೋಗಗೊಡದಂತೆ ಅದು ತನ್ನ ಸ್ವಾಭಾವಿಕ ಎಲೆಗಳ ರೂಪಾಂತರಮಾಡಿ ಅವುಗಳಿಗೆ ಮುಳ್ಳಿನ ರೂಪಬರುವಂತೆ ಮಾಡುವದು. ಈ ತರದ ಮುಳ್ಳುಗಳಿಂದ ಆಹಾರ ಸಿದ್ಧತೆಯನ್ನು ಮಾಡು ವದು ಆಗದಿರುವದರಿಂದ ಆ ಕೆಲಸವನ್ನು ಕಾಂಡವು ಮಾಡಬೇಕಾಗು ವದು.

ವನಸ್ಪತಿಗಳ ಹೂವು, ಅವುಗಳ ಉತ್ಪಾದಕಾವಯವವು (Organ of Reproduction) ಹೂವಿನಲ್ಲಿರುವ ಪುಂಕೇಸರ (Stamens)ಹಾಗು ಸ್ತ್ರೀಕೇಸರ (Pistils)ಗಳ ಕಾರ್ಯಗಳಿಂದ ಕಾಯಿಯಾಗುವದು. ಕಾಯಿ ಯಲ್ಲಿ ಬಂದು ಇಲ್ಲವೆ ಹಲವು ಬೀಜಗಳಿರುವವು. ಪ್ರತಿಯೊಂದು ಬೀಜದಲ್ಲಿ ಸಜಾತೀಯ ಸಸಿಯನ್ನು ಹುಟ್ಟಿಸುವ ಗುಣವಿರುವದು. ಆಳಂಬಿ,ಬೂರಸು, ಅಂತರಗಂಗೆ, ಮೊದಲಾದ ನೀಚವರ್ಗಕ್ಕೆ ಸೇರಿದ ವನಸ್ಪತಿಗಳು ಹೂ ಬಿಡು ವದಿಲ್ಲ. ಈ ತರದ ವನಸ್ಪತಿಗಳ ಪುನರುತ್ಪತ್ತಿಯು ಬಂದು ತರದ ಬೀಜ ಕೋಶ (Spore)ದಿಂದ ಆಗುವದು. ಒಟ್ಟಿನಮೇಲೆ ನೋಡಲಾಗಿ ಯಾವ ದೊಂದು ವನಸ್ಪತಿಯು ಪುಷ್ಪವಂತವರ್ಗಕ್ಕೆ ಸೇರಿರಲಿ, ಅಪುಷ್ಪವಂತವರ್ಗ ಕ್ಕೆ ಸೇರಿರಲಿ, ತನ್ನ ಸಂತತಿಯು ನಷ್ಟವಾಗದಂತೆ ತಾನು ಬದುಕಿರುವದರೊ ಳಗಾಗಿ ವ್ಯವಸ್ಥೆ ಮಾಡುವದು ಅದರ ಆದ್ಯಕರ್ತವ್ಯವಾಗಿರುತ್ತದೆ. ಪುನರು ತ್ಪಾದನಶಕ್ತಿಯ ಸಂಬಂಧದಿಂದ ವನಸ್ಪತಿಗಳನ್ನು ಏಕವರ್ಷಾಯು, ದ್ವಿವ ರ್ಷಾಯು, ಬಹುವರ್ಷಾಯುಗಳೆಂದು ಶಾಸ್ತ್ರಜ್ಞರು ವಿಂಗಡಿಸಿರುವರು.

ಒಂದು ವರ್ಷದ ಇಲ್ಲವೆ ಋತುವಿನ ಅವಧಿಯೆಲ್ಲಿ ಬೀಜದಿಂದ ಹುಟ್ಟಿ ಬೆಳೆದು, ಸಜಾತೀಯ ಸಸಿಯನ್ನು ಹುಟ್ಟಿಸುವ ಶಕ್ತಿಯುಳ್ಳ ಬೀಜವನ್ನು ಹುಟ್ಟಿಸಿ ಸತ್ತು ಹೋಗುವ, ಇಲ್ಲವೆ ಭೂಮಿಯ ಮೇಲೆ ಕಾಣುವ ಅದರ ಕಾಂಡವು ಒಣಗಿ ಹೋಗುವ ವನಸ್ಪತಿಯು ಏಕವರ್ಷಾಯುವೆನಿಸುವದು. ಬತ್ತ, ಗೋದಿ, ಕಡಲಿ, ಸುವರ್ಣ, ಜೋಳ ಮೊದಲಾವವು ಏಕವರ್ಷಾಯುಗಳು. ದ್ವಿವರ್ಷಾಯುಗಳು ಎರಡು ವರ್ಷ ಇಲ್ಲವೆ ಎರಡು ಋತುಗಳ ವರೆಗೆ ಬಾಳುವವು. ಈ ವನಸ್ಪತಿಗಳು ಬೀಜದಿಂದ ಹುಟ್ಟಿ ಒಂದು ವರ್ಷದ ವರೆಗೆ ಬೆಳೆಯುತ್ತ ಭೂಮಿಯಲ್ಲಿ ಅಡಗಿಕೊಂಡಿರುವ ತಮ್ಮ ಬೇರು ಇಲ್ಲವೆ ಕಾಂಡದಲ್ಲಿ ತಾವು ಹುಟ್ಟಿಸುವ ಬೀಜಗಳಲ್ಲಿ ಇಡುವದಕ್ಕಾಗಿ ಆಹಾರದ ಸಂಚಯವನ್ನು ಮಾಡಿಡುವವು. ಮರುವರ್ಷ ಹೂಬಿಟ್ಟು ಅವುಗಳಿಂದ ಹುಟ್ಟಿದ ಬೀಜಗಳಲ್ಲಿ ತಮ್ಮಲ್ಲಿರುವ ಆಹಾರದ ಸಂಚಯವನ್ನಿಟ್ಟು ಸತ್ತುಹೋಗುವವು. ಈ ಆಹಾರವೇ ತಾಯಿವನಸ್ಪತಿಯು ಕಟ್ಟಿ ಕೊಟ್ಟ ಬುತ್ತಿಯೆಂಬದು ಈ ಮೊದಲೇ ಗೊತ್ತಾಗಿದೆ. ನೀರುಳ್ಳಿ, ಕ್ಯಾಬೀಜ, ಗಜ್ಜರಿ, ಮೊದಲಾದವು ಈ ವರ್ಗಕ್ಕೆ ಸೇರಿದವುಗಳು. ಬಹುವರ್ಷಾಯುಗಳು ಬಹು ವರ್ಷ ಬಾಳುವವು. ಹುಟ್ಟಿದಮೇಲೆ ಅವು ಹಲವು ಕಾಲದ ವರೆಗೆ ಬೆಳೆದು ಆ ಮೇಲೆ ಹೂಬಿಡುವವು. ವೃಕ್ಷಜಾತಿಗೆ ಸೇರಿದ ಹಲಸು, ಮಾವು, ತೆಂಗು ಮೊದಲಾದವು ಬಹುವರ್ಷಾಯುಗಳು. ಇವುಗಳಲ್ಲಿ ಪುನರುತ್ಪಾದನಕ್ರಿಯೆಯು ಒಂದಕ್ಕಿಂತ ಹೆಚ್ಚುಸಾರೆ ನಡೆಯುವದುಂಟು. ಪ್ರತಿಸಾರೆ ಈ ಕಾರ್ಯವನ್ನು ಮಾಡಿದಾಗ ಅವುಗಳ ಶಕ್ತಿಯು ಮಾತ್ರ ತುಸು ಕುಂದುತ್ತದೆ.

ಕಾಂಡದ ರಚನೆ, ಅದರ ಬೆಳವಣಿಗೆ, ಅದಕ್ಕೆ ಆಗುವ ಶಾಖೆಗಳು ಇವೇ ಮೊದಲಾದ ಸಂಗತಿಗಳಿಂದ ವನಸ್ಪತಿಗಳಲ್ಲಿ ಗಿಡಗಳು, ಕಂಟೆಗಳು, ಸೊಪ್ಪು, ಬಳ್ಳಿ ಮೊದಲಾದ ಅನೇಕ ಭೇದಗಳುಂಟಾಗುವವು. ಕಾಂಡದಲ್ಲಿ ಕಟ್ಟಿಗೆಯ ಅಂಶವು ಹೆಚ್ಚಾಗಿದ್ದು ಅದು ಬಹು ಎತ್ತರ ಬೆಳೆದು ಅನೇಕ ಶಾಖೆಗಳನ್ನು ಬಿಡುವ ವನಸ್ಪತಿಗೆ ಸಾಮಾನ್ಯವಾಗಿ ವೃಕ್ಷ ಇಲ್ಲವೆ ಗಿಡ, ಎಂಬ ಹೆಸರು. ಕಾಂಡದಲ್ಲಿ ಕಟ್ಟಿಗೆಯ ಅಂಶವಿದ್ದು ಅದು ಸೀರಾಗಿ ನೆಲಕ್ಕೆ ಹತ್ತುವಂತೆ ಟೊಂಗೆಗಳನ್ನು ಬಿಟ್ಟು ಬಹಳ ಎತ್ತರ ಬೆಳೆಯದಿರುವ ವನಸ್ಪತಿಗೆ ಕಂಟೆ, ಎಂದು ಹೆಸರು. ಕಾಂಡದಲ್ಲಿ ಕಟ್ಟಿಗೆಯ ಅಂಶವು ಬಹು

ಕಡಿಮೆಯಾಗಿದ್ದು ಅದರಲ್ಲಿ ಬಿರುಸುತನವಿಲ್ಲದ ವನಸ್ಪತಿಯು ಸೊಪ್ಪು ಕಾಂಡವು ದುರ್ಬಲವಾಗಿ ಮಣಿಯುತ್ತ ಯಾವದೊಂದು ಆಧಾರವನ್ನು ಹಿಡಿದುಕೊಂಡು ಬೆಳೆಯುವ ವನಸ್ಪತಿಗಳು ಬಳ್ಳಿಗಳು.

ಈ ಅಧ್ಯಾಯದಲ್ಲಿ ಮಾಡಿದ ವಿವೇಚನೆಯಿಂದ ವನಸ್ಪತಿಗಳ ಅವಯವಗಳಾದ ಬೇರು, ಕಾಂಡ, ಎಲೆ, ಹೂಗಳು ಮೂಡತಕ್ಕ ಪ್ರಾಮುಖ್ಯವಾದ ಕರ್ತವ್ಯಗಳು ಗೊತ್ತಾದವು. ಆ ಕರ್ತವ್ಯಗಳಲ್ಲದೆ ಬೇರೆ ಕೆಲವು ಕಾರ್ಯಗಳನ್ನು ಆ ಅವಯವಗಳು ಮಾಡುತ್ತಿರುವದರಿಂದ ಅವುಗಳನ್ನು ಪ್ರತ್ಯೇಕವಾಗಿ ಮುಂದಿನ ಅಧ್ಯಾಯಗಳಲ್ಲಿ ವಿವರಿಸುವೆವು.

ಎನೆಯ ಅಧ್ಯಾಯ.

ವನಸ್ಪತಿಗಳ ಬೇರು.

—:(೦):—

ಬೀಜವು ಮೊಳೆಯುವದಕ್ಕೆ ಅನುಕೂಲವಾದ ಹವೆ, ಆರ್ದ್ರತೆ, ಸಮಶೀತೋಷ್ಣತೆ ಮೊದಲಾದವುಗಳು ಬೀಜಕ್ಕೆ ದೊರೆತ ಕೂಡಲೆ ಬೀಜದಳದಲ್ಲಿರುವ ಆಹಾರದ ಪದಾರ್ಥಗಳು, ಹಲವು ರಸಾಯನ ವ್ಯಾಪಾರಗಳ ಮೂಲಕ ರೂಪಾಂತರ ಹೊಂದುವದರಿಂದ ದುಗ್ಧರಸವೆಂಬ ಪೋಷಕ ಪದಾರ್ಥವು ಹುಟ್ಟುತ್ತದೆಂದೂ ಆ ರಸವು ದುಗ್ಧರಸವಾಹಿನಿಗಳಿಂದ ಅಂಕುರಕ್ಕೆ ಮುಟ್ಟಿದ ಕೂಡಲೆ ಬೀಜಾಂಕುರಕ್ಕೆ ಚೇತನವುಂಟಾಗುತ್ತದೆಂದೂ ಈ ಮೊದಲೆ ನಮಗೆ ಗೊತ್ತಾಗಿದೆ. ಅಂಕುರವು ಚೇತನ ಹೊಂದಿ ಬೀಜದಲ್ಲಿರುವ ಒಂದು ನಿಯಮಿತ ಛಿದ್ರದೊಳಗಿಂದ ತನ್ನ ಬೇರಾಗುವ ಭಾಗವನ್ನು ಹೊರಗೆಡವುವದು. ಈ ಭಾಗವು ಕ್ರಮವಾಗಿ ಬೆಳೆಯುತ್ತ ಬೆಳೆಯುತ್ತ ತನಗೆ ಸೂರ್ಯನ ಪ್ರಕಾಶವು ಸಹನವಾಗದಿದ್ದದರಿಂದ ಆದಷ್ಟು ಲಗುಬಗೆಯಿಂದ ಭೂಮಿಯ ಕಡೆಗೆ ಒಲಿದು, ಆ ಭೂಮಿಯಲ್ಲಿ ತನ್ನನ್ನು ಹೂಳಿಕೊಳ್ಳಲು ಯತ್ನಿಸುವದು. ಈ ಪ್ರಯತ್ನದಲ್ಲಿ ಅದಕ್ಕೆ ಭೂಮಿಯು ಬೇಗ ದೊರೆತರೆ ಆ ಬೇರು ಅದರಲ್ಲಿ ಸೇರಿ ಎಷ್ಟೋ ಕೇಶರೂಪವಾದ ಅಗಂತುಕ ಬೇರುಗಳನ್ನು (Adventitious Roots)ಬಿಟ್ಟು, ಸಸಿಯು ಗಾಳಿ ಇಲ್ಲವೆ ಅನ್ಯ ಕಾರಣಗಳಿಂದ ಆ ಸ್ಥಳ ಬಿಟ್ಟು ಹೋಗಗೊ

ಡದಂತೆ ಭೂಮಿಯನ್ನು ಗಟ್ಟಿಯಾಗಿ ಹಿಡಿದುಕೊಳ್ಳುವದು. ಕಾಡುಸ್ಥಿತಿಯಲ್ಲಿ ತನ್ನಷ್ಟಕ್ಕೆ ತಾನೇ ಬೆಳೆದ ಯಾವದೊಂದು ವನಸ್ಪತಿಯನ್ನು ಸಮೂಲವಾಗಿ ಕೆತ್ತಿ ತೆಗೆಯುವದು ಎಷ್ಟು ಕಷ್ಟಸಾಧ್ಯವೆಂಬದು ಎಲ್ಲರಿಗೂ ಗೊತ್ತಿದ್ದ ಸಂಗತಿಯಾಗಿದೆ. ಒಂದು ಹುಲ್ಲುಗಡಿಯನ್ನು ಹಿಡಿದು ಕೆತ್ತಲು ನಾವು ಯತ್ನಿಸಿದರೆ ಹಲವು ಸಾರೆ ಅದು ನನುಗೆ ಅಸಾಧ್ಯವಾಗಬಹುದು, ಇಲ್ಲವೆ ನಮ್ಮ ವೈಯೊಳಗಿನ ಎಲ್ಲ ಶಕ್ತಿಯನ್ನು ಉಪಯೋಗಿಸಿ ಅದನ್ನು ಹಿಡಿದು ಕೆತ್ತಿ ತೆಗೆದದ್ದಾದರೆ ಅದರ ಎಷ್ಟೋ ಬೇರುಗಳು ಹರಿದು ಹೋಗಿರುವದರಿಂದ ಆ ಹುಲ್ಲಿನಗುಂಟ ಬಂದ ಬೇರುಗಳ ಸಂಖ್ಯೆಯು ತೀರ ಕಡಿಮೆ ಇರಬಹುದು. ಈ ಉದಾಹರಣೆಯಿಂದ ಬೇರುಗಳ ಒಂದು ಕರ್ತವ್ಯವು, ಅಂದರೆ ವನಸ್ಪತಿಯನ್ನು ಗಟ್ಟಿಯಾಗಿ ನೆಲದಲ್ಲಿ ಊರಿಕೊಳ್ಳುವದು ವ್ಯಕ್ತವಾಗುವದು.

ವನಸ್ಪತಿಯನ್ನು ನೆಲದಲ್ಲಿ ಗಟ್ಟಿಯಾಗಿ ಊರುವ ಉದ್ದೇಶದಿಂದ ಬೇರುಗಳು ಅನೇಕ ರೂಪಗಳನ್ನು ಧರಿಸುವವು. ದ್ವಿದಲಬೀಜಕ (Dicotyledons) ವನಸ್ಪತಿಗಳ ಮುಖ್ಯ ಬೇರ, ಅಂದರೆ ತಾಯಿಬೇರು (Tap root) ಶಂಕ್ವಾಕೃತಿಯುಳ್ಳದ್ದಾಗಿ ನೆಲದಲ್ಲಿ ಇಳಿಯುತ್ತ ಹೋಗುವದು. ಕಡಲೆ, ತೊಗರಿ, ಗಜ್ಜರಿ, ಮೂಲಂಗಿ ಮೊದಲಾದ ವನಸ್ಪತಿಗಳನ್ನು ಬುಡಕ್ಕೆ ನೀರು ಹನಿಸಿ ಸಡಿಲಿಸಿ ಬಹು ಜಾಗರೂಕತೆಯಿಂದ ಕೆತ್ತಿ ನೋಡಿದರೆ ಅವುಗಳ ತಾಯಿಬೇರಿನ ಶಂಕ್ವಾಕೃತಿಯುಳ್ಳ ಆಕಾರವು ಕೂಡಲೆ ಕಂಡು ಬರುವದು. ಈ ಮುಖ್ಯವಾದ ಬೇರಿಗೆ ಎಷ್ಟೋ ಶಾಖೋಪಶಾಖೆಗಳು ಆಗಿ ಆಕೃತಿ (೧) ರಲ್ಲಿ ತೋರಿಸಿದಂತೆ, ಭೂಮಿಯಲ್ಲಿರುವ ಸಂದುಗಳಲ್ಲಿ ಸೇರಿ ಭೂಮಿಯನ್ನು ಗಟ್ಟಿಯಾಗಿ ಹಿಡಿದುಕೊಳ್ಳುವವು. ಏಕದಳಬೀಜಕ ವನಸ್ಪತಿ (Monocotyledons) ಗಳಾದ ಬತ್ತ, ಗೋದಿ, ಜೋಳ ಮೊದಲಾದವುಗಳಿಗೆ ಒಡೆದು ಕಾಣುವ ತಾಯಿಬೇರಿರುವದಿಲ್ಲ. ಆಕೃತಿ (೨) ರಲ್ಲಿ ತೋರಿಸಿದಂತೆ ಈ ವನಸ್ಪತಿಗಳಿಗೆ ನೂರಾರು ಆಗಂತುಕ ಬೇರುಗಳಿರುವವು. ಈ ತರದ ಬೇರುಗಳು ತಾಯಿಬೇರಿನಂತೆ ಭೂಮಿಯಲ್ಲಿ ಬಹಳ ದೂರದ ವರೆಗೆ ಇಳಿಯಲಾರದೆ ಇದ್ದದರಿಂದ ಈ ತರದ ಬೇರುಗಳುಳ್ಳ ವನಸ್ಪತಿಗಳಿಗೆ ತಾಯಿಬೇರುಗಳುಳ್ಳ ವನಸ್ಪತಿಗಳಷ್ಟು ಸ್ಥೈರ್ಯವಿರುವದಿಲ್ಲ.

ಬೇರುಗಳ ಎರಡನೇ ಕರ್ತವ್ಯವು, ವನಸ್ಪತಿಗಳಿಗೆ ಬೇಕಾಗುವ ಖನಿಜದ್ರವ್ಯಗಳನ್ನು ಹೀರಿಕೊಳ್ಳುವದು; ಪ್ರಾಣಿಗಳಿಗಿರುವಂತೆ ವನಸ್ಪತಿಗಳಿಗೆ ಜಠರವೆಂಬ ಆಹಾರ ಸಂಚಯ ಮಾಡುವ ಅವಯವವಿಲ್ಲದ್ದರಿಂದ ವನಸ್ಪತಿಗಳು ತಮ್ಮ ಆಹಾರಕ್ಕಾಗಿ ಬೇಕಾಗುವ ಖನಿಜದ್ರವ್ಯಗಳು ಘನ ರೂಪದಲ್ಲಿದ್ದಾಗ ಅವುಗಳನ್ನು ಸಂಗ್ರಹಿಸಿ ಇಟ್ಟುಕೊಂಡು ತಮಗೆ ಬೇಕಾದಾಗ ಅವುಗಳ ವಿನಿಯೋಗ ಮಾಡಿಕೊಳ್ಳಲಾರವು. ಭೂಮಿಯು ವನಸ್ಪತಿಗಳಿಗೆ ಆಹಾರದಂತೆ ಉಪಯೋಗಕ್ಕೆ ಬರುವ ಖನಿಜದ್ರವ್ಯಗಳ ಆಗರವೆಂಬ ಸಂಗತಿಯು ಈ ಮೊದಲೇ ಗೊತ್ತಾಗಿದೆ. ಈ ತರದ ಖನಿಜದ್ರವ್ಯಗಳು ತೀರ ಸ್ವಲ್ಪ ಪ್ರಮಾಣದಿಂದ ನೀರಿನಲ್ಲಿ ಬೆರೆತುಕೊಂಡವೆಂದರೆ ವನಸ್ಪತಿಗಳ ಬೇರುಗಳು ಆ ಮಿಶ್ರಣವನ್ನು ಹೀರಿಕೊಂಡು ಆಹಾರಸಿದ್ಧತೆಗಾಗಿ ಎಲೆಗಳಿಗೆ ಕಳುಹಿಸಿ ಕೊಡುವವು. ಈ ಕಾರ್ಯವನ್ನು ಮಾಡುವ ಸಾಮರ್ಥ್ಯವು ಬೇರಿನ ಎಲ್ಲ ಭಾಗಗಳಲ್ಲಿರದೆ ಬೇರುಗಳ ಕೇಶರೂಪವಾದ ಉಪಶಾಖೆಗಳ ತೀರ ಅಗ್ರ ಭಾಗವನ್ನು ಬಿಟ್ಟು ಉಳಿದ ಕಡೆಯಲ್ಲಿ ಇರುವದೆಂಬದು ಈ ಮೊದಲು ನಾವು ಮಾಡಿದ ಪ್ರಯೋಗದಿಂದ ಗೊತ್ತಾಗಿದೆ.

ಮೇಲಿನ ವಿವರಣದಿಂದ ವನಸ್ಪತಿಗಳಿಗೆ ಬೇಕಾಗುವ ಖನಿಜದ್ರವ್ಯಗಳನ್ನು ಪೂರೈಸಿ ಕೊಡುವ ಕೆಲಸವು ಬೇರುಗಳಿಗೆ ಒಪ್ಪಿಸಲ್ಪಟ್ಟಿರುವದೆಂಬದು ಸ್ಪಷ್ಟವಿದೆ. ವನಸ್ಪತಿಯು ಬೆಳೆದಿರುವ ಸ್ಥಳದಲ್ಲಿರುವ ನೀರಿನಲ್ಲಿ ವಿದ್ರವಣವಾಗುವ ಖನಿಜದ್ರವ್ಯಗಳ ಸಂಗ್ರಹವು ಕಡಿಮೆಯಾದರೆ ಬೇರುಗಳು ಆ ಖನಿಜದ್ರವ್ಯಗಳನ್ನು ದೊರಕಿಸುವದಕ್ಕಾಗಿ ಆ ದ್ರವ್ಯಗಳಿರುವ ಸ್ಥಳದ ಕಡೆಗೆ ಹಬ್ಬುತ್ತ ಹೋಗುವವು. ಈ ಪ್ರಯತ್ನದಲ್ಲಿ ಅವುಗಳಿಗೆ ಹೆಜ್ಜೆಹೆಜ್ಜೆಗೆ ಎಡರುಗಳು ಬಂದದ್ದಾದರೆ ಅವು ಯಾಂತ್ರಿಕಶಕ್ತಿಯನ್ನು ಉಪಯೋಗಿಸಿ ಆ ಎಡರುಗಳನ್ನು ದೂರ ಮಾಡತೊಡಗುವವು. ಈ ತರದ ಕೆಲಸವು ಮಿತಿಮೀರಿ ಆದರೆ ಆ ವನಸ್ಪತಿಯ ಬೆಳವಣಿಗೆಯು ಕುಗ್ಗುವದು. ಕಲ್ಲುಬಂಡೆಗಳಲ್ಲಿ ತಮ್ಮ ಬೇರುಗಳನ್ನು ಚಾಚಿ ಅವುಗಳನ್ನು ಬಿಡಿದು ಪುಡಿ ಮಾಡಲು ಯತ್ನಿಸುತ್ತಿರುವ ಎಷ್ಟೋ ವನಸ್ಪತಿಗಳನ್ನು ಬಹು ಜನರು ನೋಡಿರಬಹುದು.

ವನಸ್ಪತಿಯು ಕೇಶರೂಪವಾದ ಬೇರುಗಳ ಅಗ್ರಭಾಗದಲ್ಲಿ ಒಂದು ತರದ ಸೇಂದ್ರಿಯಆಮ್ಲ (Organic acid) ವಿರುವದು. ಖನಿಜದ್ರವಗ

ನ್ನು ದೊರಕಿಸುವದಕ್ಕೋಸುಗ ಬೇರುಗಳು ಮಾರ್ಗಕ್ರಮಣ ಮಾಡು
ತ್ತಿರುವಾಗ ಮಾರ್ಗದಲ್ಲಿ ಕಲ್ಲು ಮೊದಲಾದ ಒಡೆಯಲಸಾಧ್ಯವಾದ ಪ್ರತಿ
ಬಂಧಗಳು ಬಂದದ್ದಾದರೆ ಮೊದಲು ಆ ಬೇರುಗಳು ಯಾಂತ್ರಿಕಶಕ್ತಿಯ
ಉಪಯೋಗಿಸಿ ಅವನ್ನು ದೂರ ಮಾಡಲು ಯತ್ನಿಸುವವು. ಈ ಪ್ರಯ
ತ್ನವು ಸಫಲವಾಗದಿದ್ದರೆ ತಮ್ಮ ಅಗ್ರಭಾಗದಲ್ಲಿರುವ ಸೇಂದ್ರಿಯ ಆಮ್ಲ
ವನ್ನು ತುಸು ಆ ಕಲ್ಲುಗಳ ಮೇಲೆ ಬಿಡುವವು. ಕೂಡಲೆ ಆ ಕಲ್ಲುಗಳು
ಒಡೆದು ಹೋಗುವವು.

ವನಸ್ಪತಿಗಳ ಕೇಶರೂಪವಾದ ಬೇರುಗಳ ಅಗ್ರಭಾಗದಲ್ಲಿರುವ
ಸೇಂದ್ರಿಯ ಆಮ್ಲದ ವ್ಯಾಪಾರವನ್ನು ಪ್ರಯೋಗದಿಂದ ಮನಗಾಣಬೇಕಾ
ದರೆ ಬಹು ಬೇಗ ಮೊಳೆಯುವ ಸಾಸಿವೆಯ ಬೀಜಗಳನ್ನು ತೆಗೆದುಕೊಂಡು
ಅವುಗಳನ್ನು ನೀರಿನಲ್ಲಿ ತೋಯಿಸಿ ಬಂದು ನುಣುಪಾದ ಸಂಗಮರವರಿ
ಇಲ್ಲವೆ ಪಾಟಿಯ ಕಲ್ಲಿನ ಮೇಲೆ ಹರವಿ ಮೂರು ನಾಲ್ಕು ದಿವಸಗಳವರೆಗೆ
ಅವುಗಳ ಮೇಲೆ ಸ್ವಲ್ಪ ಸ್ವಲ್ಪ ನೀರು ಹನಿಸುತ್ತ ಸಮಶೀತೋಷ್ಣತೆಯುಳ್ಳ
ಸ್ಥಳದಲ್ಲಿ ಇಟ್ಟರೆ, ಆ ಅವಧಿಯಲ್ಲಿ ಆ ಬೀಜಗಳೆಲ್ಲ ಮೊಳೆತು ಸಸಿಗಳಾ
ಗುವವು. ಆ ಸಸಿಗಳ ಬೇರುಗಳು ಆಹಾರವನ್ನು ದೊರಕಿಸುವದಕ್ಕೋ
ಸುಗ ಕಲ್ಲಿನಲ್ಲಿ ಪ್ರವೇಶ ಮಾಡಲು ಯತ್ನಿಸುವಾಗ, ಎಲ್ಲ ಪ್ರಯತ್ನಗಳು
ನಿಷ್ಫಲವಾಗಲು, ತಮ್ಮ ಅಗ್ರಭಾಗದಲ್ಲಿರುವ ಆಮ್ಲವನ್ನು ಆ ಕಲ್ಲಿನ
ಮೇಲೆ ಬಿಡುವವು. ಅದರಿಂದ ಆ ಕಲ್ಲಿನ ಪೃಷ್ಠಭಾಗದ ಮೇಲೆಲ್ಲ ತೂತು
ತೂತುಗಳಾದದ್ದು ನಮಗೆ ಗೋಚರವಾಗುವದು.

ಮೇಲೆ ಹೇಳಿದ ಎರಡು ಮುಖ್ಯವಾದ ಕಾರ್ಯಗಳಲ್ಲದೆ ಹಲ
ವು ಬೇರುಗಳು ಬೇರೆ ಹಲವು ವ್ಯಾಪಾರಗಳನ್ನು ಜರುಗಿಸಿ ವನಸ್ಪತಿಗಳ
ಜೀವನ ವ್ಯಾಪಾರಕ್ಕೆ ತಕ್ಕ ಸಹಾಯವನ್ನು ಮಾಡುವದುಂಟು. ಗಜ್ಜರಿ,
ಮೂಲಂಗಿ, ನೋಲ್‌ಕೊಹೊಲ್, ಡೇಲಿ ಮೊದಲಾದ ವನಸ್ಪತಿಗಳ
ಬೇರುಗಳ ಕೆಲವೊಂದು ಭಾಗವು ಆಕೃತಿ (೩) ರಲ್ಲಿ ತೋರಿಸಿದಂತೆ
ಉಳಿದ ಬೇರುಗಳಿಗಿಂತ ವಿಶೇಷವಾಗಿ ಗಡುತರವಾಗುವದು. ಹೀಗಾಗುವ
ದಕ್ಕೆ ಎಲೆಗಳಲ್ಲಿ ಸಿದ್ಧವಾದ ಆಹಾರವು ಕೆಳಗಿಳಿದುಬಂದು ಆ ಭಾಗದಲ್ಲಿ
ಸಂಚಿತವಾಗುವದೇ ಮುಖ್ಯಕಾರಣವು. ಈ ಕಾರಣದಿಂದ ಈ ತರದ
ಬೇರುಗಳು ಆಯಾ ವನಸ್ಪತಿಗಳ ಸಿದ್ಧವಾದ ಆಹಾರದ ಉಗ್ರಾಣಗ

ಳೆಂದು ಶಾಸ್ತ್ರಜ್ಞರು ಹೇಳುವದುಂಟು. ಈ ತರದ ಬೇರುಗಳಲ್ಲಿ ಸಂಚಿತ ವಾದ ಆಹಾರದ ಪದಾರ್ಥಗಳನ್ನು ಆ ವನಸ್ಪತಿಗಳು ತಾವು ಹುಟ್ಟಿಸುವ ಬೀಜಗಳಲ್ಲಿಡುವದಕ್ಕೆ ಉಪಯೋಗಿಸಿಕೊಳ್ಳುವವು. ವನಸ್ಪತಿಗಳು ಬೀಜಗಳನ್ನು ಹುಟ್ಟಿಸಿದ ಮೇಲೆ ಅವುಗಳ ಬೇರಿನಭಾಗವನ್ನು ಬಿಡಿಸಿ ನೋಡಿದರೆ ಅದರಲ್ಲಿರುವ ಪದಾರ್ಥಗಳು ಹೊರಟುಹೋಗಿ ಅದು ತೀರ ಪೊಳ್ಳಾಗಿರುವದು ನಮ್ಮ ನಿದರ್ಶನಕ್ಕೆ ಬರುವದು.

ಬೇರುಗಳ ಕೆಲವೊಂದು ಭಾಗದಲ್ಲಿ ಸಿದ್ಧವಾದ ಆಹಾರದ ಸಂಚಯವು ಕ್ರಮವಾಗಿ ಹೆಚ್ಚಾಗುತ್ತ ಆ ಭಾಗದ ಆಕಾರವನ್ನು ಬೆಳೆಯುತ್ತದೆ. ಈ ಕಾರ್ಯವನ್ನು ಎಲ್ಲ ವನಸ್ಪತಿಗಳ ಬೇರುಗಳು ಮಾಡುತ್ತಿದ್ದರೂ ಈ ಸಂಗತಿಯು ಸುಲಭವಾಗಿ ಗೊತ್ತಾಗುವ ಉದ್ದೇಶದಿಂದ ಮೇಲೆ ಕಾಣಿಸಿದ ಗಜ್ಜರಿ, ಮೂಲಂಗಿ ಮೊದಲಾದ ವನಸ್ಪತಿಗಳ ಬೇರುಗಳನ್ನು ಉದಾಹರಣೆಗಾಗಿ ಆರಿಸಿಕೊಂಡಿದ್ದೇವೆ.

ಹಲವು ವನಸ್ಪತಿಗಳಿಗೆ ಮೇಲೆ ಹೇಳಿದ, ಭೂಮಿಯಲ್ಲಿ ಹರಡಿಕೊಂಡು ಕೆಲಸಮಾಡುತ್ತಿರುವ ಆಗಂತುಕ ಬೇರುಗಳ ಹೊರತು ಆಕಾಶಸ್ಥ (Aeria.) ವಾದ ಹಲವು ಆಗಂತುಕಬೇರುಗಳು ಕಾಂಡದಲ್ಲಿರುವ ಗಣ್ಣುಗಳಿಂದ ಹೊರಟು ಭೂಮಿಯ ಕಡೆಗ ಇಳಿದು ಭೂಮಿಯಲ್ಲಿ ತಮ್ಮನ್ನು ಗಟ್ಟಿಯಾಗಿ ಊರಿಕೊಳ್ಳುತ್ತವೆ. ಈ ತರದ ಆಗಂತುಕ ಬೇರುಗಳು, ಕಾಂಡದಲ್ಲಿ ಕಟ್ಟಿಗೆಯ ಅಂಶವು ತೀರಕಡಿಮೆಯಾಗಿದ್ದರಿಂದ ದುರ್ಬಲವಾಗಿರುವ ಕುಂಬಳ ಮೊದಲಾದ ಬಳ್ಳಿಗಳ ಗಣ್ಣುಗಳಿಂದಲೂ, ಸೀರಾಗಿ ಬಹು ಉದ್ದವಾಗಿ ಬೆಳೆಯುವ ಜೋಳ, ಕಬ್ಬು, ಹೂದಲಾದವುಗಳ ಕಾಂಡದಲ್ಲಿರುವ ಗಣ್ಣುಗಳಿಂದಲೂ, ಕಾಂಡವು ವಿಶೇಷವಾಗಿ ಬೆಳೆದು ಭೂಮಿಯಲ್ಲಿ ಹರಡಿಕೊಂಡಿರುವ ಬೇರುಗಳ ಆಧಾರದಿಂದ ಭೂಪೃಷ್ಠದ ಮೇಲಿರುವ ಭಾಗವು ನೆಟ್ಟನೆ ನಿಲ್ಲಿಸಲಾರದಂಥ ಆಲ, ಬಸರಿ, ಗೋಣಿ, ಮೊದಲಾದ ಮಹಾವೃಕ್ಷಗಳ ಕಾಂಡಗಳಿಂದಲೂ ಹೊರಡುವದುಂಟು; ಈ ರೀತಿಯಿಂದ ಹೊರಡುವ ಆಗಂತುಕ ಬೇರುಗಳ ಆದ್ಯ ಕರ್ತವ್ಯವು ಭೂಮಿಯ ಕಡೆಗೆ ಬಿಲಿದು ಭೂಮಿಗೆ ಬಂದು ಮುಟ್ಟಿದ ಮೇಲೆ ಅಲ್ಲಿ ತಮ್ಮನ್ನು ಗಟ್ಟಿಯಾಗಿ ಊರಿಕೊಂಡು ಆಯಾ ವನಸ್ಪತಿಗಳಿಗೆ ಸೈರ್ಯವನ್ನು ಉಂಟುಮಾಡುವದಿರುತ್ತದೆ.

ಮೇಲೆ ಹೇಳಿದ ಆಗಂತುಕಬೇರುಗಳನ್ನು ತಮ್ಮ ಕಾಂಡಗಳ ಗಣು ಗಳಿಂದ ಬಿಡುವ ಕಬ್ಬು, ಅಲ, ಗುಲಾಬಿ ಮೊದಲಾದ ವನಸ್ಪತಿಗಳ ಸಂತತಿಯ ಅಭಿವೃದ್ಧಿಯು ಆ ತರದ ಬೇರುಗಳಿಂದಲೇ ಆಗುವದು. ಒಂದು ವನಸ್ಪತಿಗೆ ಒಂದೇ ತಾಯಿಬೇರು ಇರುವದು. ಆದರೆ ಆಗಂತುಕಬೇರು ಗಳು ಇವ್ವೇ ಇರುವವೆಂಬ ನಿಯಮವಿಲ್ಲ. ಕೆಲವು ವನಸ್ಪತಿಗಳಲ್ಲಿ ಪ್ರತಿ ಯೊಂದು ಆಗಂತುಕಬೇರಿನಿಂದ ಒಂದೊಂದು ಹೊಸ ಸಸಿಯು ಹುಟ್ಟು ವದು. ಸಾಗುವಳಿಯಾದ ಭೂಮಿಯಲ್ಲಿ ಬೆಳೆಯುವ ನಟ್ಟನ್ನು ಸಹಮೂಲ ವಾಗಿ ತೆಗೆದುಹಾಕದೆ ಅದರ ಕಾಂಡಗಳು ಅಲ್ಲಲ್ಲಿಗೆ ಹರಿದುಹೋಗುವಂತೆ ಆಗಿದರೆ ನಟ್ಟು ವಿಶೇಷವಾಗಿ ಬೆಳೆಯುವದು ಬೇಸಾಯದಲ್ಲಿ ತೊಡಗಿದವರಿಗೆ ಚೆನ್ನಾಗಿ ಗೊತ್ತಿರುವದು.

ವನಸ್ಪತಿಗಳ ಬೇರೆಂಬ ಭಾಗದಲ್ಲಿ ಎಲೆಗಳು, ಇಲ್ಲವೆ ಎಲೆಯ ಕುರುಹುಗಳು ಎಷ್ಟು ಮಾತ್ರವೂ ಇರುವದಿಲ್ಲ. ಬೇರುಗಳ ಸಾಮಾನ್ಯ ವಾದ ಬಣ್ಣವು ಬೆಳ್ಳಗೆ ಇರುವದು. ಕೆಲವು ವನಸ್ಪತಿಗಳ ಬೇರುಗಳಿಗೆ ಬೇರೆ ಬಣ್ಣಗಳು ಇರಬಹುದು; ಆದರೆ ಬೇರಿಗೆ ಹಸರು ಬಣ್ಣವು ಮಾತ್ರ ಇರಲಾರದೆಂದು ಧಾರಾಳವಾಗಿ ಹೇಳಬಹುದು. ಹಸರು ಬಣ್ಣವು ಹುಟ್ಟದಿ ರುವದಕ್ಕೆ ಭೂಮಿಯಲ್ಲಿ ಸೂರ್ಯನ ಪ್ರಕಾಶವು ಸೇರಲಿಕ್ಕೆ ಅಸ್ಪದವಿಲ್ಲದಿ ರುವದೇ ಮುಖ್ಯಕಾರಣವು.

ಇದುವರೆಗೆ ವನಸ್ಪತಿಯ ಬೇರುಗಳು ಮಾಡುವ ಕಾರ್ಯಗಳ ವಿವೇಚನೆಯನ್ನು ಮಾಡಿದೆವು. ಕಾಂಡವು ಮಾಡತಕ್ಕ ಕಾರ್ಯಗಳನ್ನು ಮುಂದಿನ ಅಧ್ಯಾಯದಲ್ಲಿ ವಿಮರ್ಶಿಸುವೆವು.

ಏನೆಯ ಅಧ್ಯಾಯ.

ವನಸ್ಪತಿಗಳ ಕಾಂಡವು.

—:(೨):—

ಮೊಳೆಯುವ ಕ್ರಮವು ನಡೆದು ಬೀಜದಿಂದ ಬೇರಾಗುವ ಭಾಗವು ಹೊರಬಿದ್ದ ತುಸು ಹೊತ್ತಿನ ಮೇಲೆ ಕಾಂಡವು ಬೀಜದಿಂದ ಹೊರಗೆ ಹೊರಟು ಸೂರ್ಯನ ಪ್ರಕಾಶಕ್ಕೆ ಹೆದರದೆ ಹವೆಯಲ್ಲಿ ನೆಟ್ಟನೆ ಬೆಳೆಯುತ್ತ ತುಸು ದಿವಸಗಳಲ್ಲಿ ಆ ವನಸ್ಪತಿಗೆ ಬೇಕಾಗುವ ಆಹಾರವನ್ನು ಸಿದ್ಧಪಡಿ ಸುವದಕ್ಕೆ ಸಾಧನೀಭೂತವಾದ ಹಸರೆಲೆಗಳನ್ನು ಧರಿಸುವದು. ಸೂರ್ಯನ ಪ್ರಕಾಶದಿಂದಲೇ ಎಲೆಗಳಿಗೆ ಹಸರು ಬಣ್ಣವುಂಟಾಗುವದಿಂದ ಕಾಂಡವು

ಸೂರ್ಯನ ಪ್ರಕಾಶವಿರುವ ಸ್ಥಳದಲ್ಲಿ ಬರುವ ವರೆಗೆ ಎಲೆಗಳನ್ನು ಬಿಡದೆ ಬರಿ ಉದ್ದವಾಗುತ್ತ ಹೋಗುವದು. ಒಟ್ಟಿನ ಮೇಲೆ, ಕಾಂಡವು ಬೆಳೆಯುವ ದಿಕ್ಕು ತಾಯಿಬೇರು ಬೆಳೆಯುವ ದಿಕ್ಕಿಗೆ ತೀರ ವಿರುದ್ಧವಾಗಿರುವದು.

ವನಸ್ಪತಿಗಳಿಗೆ ಬೇಕಾಗುವ ಆಹಾರವನ್ನು ಸಿದ್ಧಪಡಿಸುವ ಮಹತ್ವವುಳ್ಳ ಕೆಲಸವು ಎಲೆಗಳದಿರುವದರಿಂದ ಎಲೆಗಳಿಗೆ ಆಧಾರವಾಗಿರುವದೂ, ಬೇರುಗಳು ಹೀರಿಕೊಂಡ ಖನಿಜದ್ರವ್ಯಗಳನ್ನು ಎಲೆಗಳಿಗೆ ಒಯ್ದು ಮುಟ್ಟಿಸುವದೂ, ಎಲೆಗಳ ಮೇಲೆ ಸೂರ್ಯನ ಪ್ರಕಾಶವು ಚೆನ್ನಾಗಿ ಬೀಳುವಂತೆಯೂ ಅವುಗಳಲ್ಲಿ ಹವೆಯು ಸುಲಭವಾಗಿ ಸೇರುವಂತೆಯೂ ಅವುಗಳನ್ನು ಸುವ್ಯವಸ್ಥಿತವಾಗಿ ಇರಿಸುವದೂ, ಎಲೆಗಳಲ್ಲಿ ಸಿದ್ಧವಾದ ಆಹಾರವನ್ನು ವನಸ್ಪತಿಯ ಎಲ್ಲ ಭಾಗಗಳಿಗೆ ಹಂಚಿಕೊಡುವದೂ ಇವೇ ಮೊದಲಾದವು ಕಾಂಡದ ಕರ್ತವ್ಯಗಳಾಗಿವೆ.

ಹಲಸು, ಮಾವು ಮೊದಲಾದವುಗಳಿಗೆ ಸಾವಿರಾರು ಎಲೆಗಳಿರುವದರಿಂದ ಅವೆಲ್ಲವುಗಳನ್ನು ಹೊತ್ತುಕೊಂಡು ಅವುಗಳ ಪೃಷ್ಠಭಾಗದ ಮೇಲೆ ಪ್ರಚಂಡವಾದ ಶಕ್ತಿಯಿಂದ ಪದೇಪದೆ ಭಾರವನ್ನು ಹಾಕಿ ಅವುಗಳನ್ನು ಅಲ್ಲಾಡಿಸುತ್ತಿರುವ ಝಂಝಾವಾತವನ್ನು ಕೂಡ ಲೆಕ್ಕಿಸದಂಥ ಬಲವುಳ್ಳ ಕಾಂಡಗಳು ಆ ಮಹಾವೃಕ್ಷಗಳಿಗಿರುವವು. ಈ ತರದ ವೃಕ್ಷಗಳು ಬೆಳೆಯುತ್ತ ಹೋದಹಾಗೆ ಅವುಗಳ ಕಾಂಡಗಳಲ್ಲಿರುವ ಕಾಷ್ಠತಂತುಗಳ ಪ್ರಮಾಣವು ಹೆಚ್ಚುತ್ತ ಹೋಗುವದರಿಂದ ಅವು ಬಿರುಸಾಗಹತ್ತುವವು. ಅದರಿಂದ ಗಾಳಿಯ ಹೊಡತವನ್ನು ಸಹಿಸಿಕೊಳ್ಳುವ ಸಾಮರ್ಥ್ಯವು ಅವುಗಳಿಗುಂಟಾಗುವದು. ಗಾಳಿಯ ದುಷ್ಪರಿಣಾಮವು ತಮ್ಮ ಮೇಲೆ ಆಗಬಾರದೆಂಬ ಉದ್ದೇಶದಿಂದ ಆ ಕಾಂಡಗಳು ಟಿಸಿಲು ಟಿಸಿಲಾಗಿ ಸಹಜವಾಗಿ ಬಾಗುವ ಸೀರಾವ ಅನೇಕ ಶಾಖೋಪಶಾಖೆಗಳನ್ನು ಧರಿಸುವವು.

ಗಾಳಿಯ ಹೊಡತವನ್ನು ತಾಳಲಾರದ ಕರಿಕಿ, ಒಂದೆಲಗುಬಳ್ಳಿ ಮೊದಲಾದ ವನಸ್ಪತಿಗಳ ಕಾಂಡಗಳು ಬಹು ಎತ್ತರವಾಗಿ ಬೆಳೆಯದೆ ಅದಷ್ಟು ಮಟ್ಟಿಗೆ ಭೂಮಿಯ ಇಲ್ಲವೆ ಬೇರೆ ಸ್ಥೈರ್ಯವುಳ್ಳ ಪದಾರ್ಥಗಳ ಆಶ್ರಯವನ್ನು ಸಂಪಾದಿಸಿಕೊಳ್ಳಲು ಯತ್ನಿಸುವವು. ಗುಪ್ತಕಾಂಡಗಳುಳ್ಳ ನೀರುಳ್ಳಿ ಮೊದಲಾದವು ತಮ್ಮ ಗಡ್ಡೆಗಟ್ಟಿದ ಕಾಂಡಗಳನ್ನು ಭೂಮಿಯಲ್ಲಿಯೇ ಹೂಳಿಬಿಡುವವು.

R. M. Mahishi.

ಹಿಂದುಸ್ತಾನದ ಬೇಸಗೆಕಾಲವು.

ಸೂರ್ಯನ ಕಿರಣಗಳು ಲಂಬವಾಗಿ ಪೃಥ್ವಿಯಮೇಲೆ ಬಿದ್ದಾಗ ಅವು ಅತಿ ತೀಕ್ಷ್ಣವಾಗಿರುತ್ತವೆ; ಅವು ವಕ್ರವಾಗುತ್ತ ಹೋದಂತೆ ಸೌಮ್ಯವಾಗುತ್ತವೆ. ಆದದರಿಂದ ಮಧ್ಯಾಹ್ನದಲ್ಲಿ ಬಿಸಿಲು ಪ್ರಖರವಾಗಿಯೂ, ಮುಂಜಾವಿನೆಲ್ಲಿ ಸೌಮ್ಯವಾಗಿಯೂ ಇರುತ್ತದೆ. ಸಮಶೀತೋಷ್ಣ ಕಟಿಬಂಧಗಳಿಗಿಂತ ಉಷ್ಣ ಕಟಿಬಂಧದಲ್ಲಿ ಸೂರ್ಯನು ಆಕಾಶದಲ್ಲಿ ಹೆಚ್ಚು ಉನ್ನತನಾಗಿರುವದರಿಂದ, ಅಲ್ಲಿ ಸೂರ್ಯನ ಕಿರಣಗಳು ಹೆಚ್ಚು ಲಂಬವಾಗಿರುತ್ತವೆ. ಆದದರಿಂದ ಉಷ್ಣ ಕಟಿಬಂಧದ ಹವೆಯು ಸಮಶೀತೋಷ್ಣ ಕಟಿಬಂಧದ ಹವೆಗಿಂತ ಹೆಚ್ಚು ಉಷ್ಣವಾಗಿರುತ್ತದೆ; ಮತ್ತು ಉತ್ತರದಕ್ಷಿಣ ದಿಕ್ಕುಗಳಿಂದ ಭೂಮಧ್ಯರೇಷೆಗೆ ಸಮೀಪಿಸುತ್ತ ಹೋದಂತೆ ಹವೆಯೊಳಗಿನ ಉಷ್ಣತೆಯು ಹೆಚ್ಚಾಗುತ್ತ ಹೋಗುತ್ತದೆ. ಬಂದು ದೇಶದ ಹವೆಯಲ್ಲಿ ಉಷ್ಣತೆಯು ಎಷ್ಟು ಇರುತ್ತದೆಂಬದನ್ನು ಭೂಮಧ್ಯರೇಷೆಯಿಂದ ಅದರ ಅಂತರವನ್ನು ನೋಡಿ ಸರಾಸರಿ ಮಾನದಿಂದ ಹೇಳಬಹುದು. ಆದರೆ ಹವೆಯೊಳಗಿನ ಉಷ್ಣತೆಯನ್ನು ಹೆಚ್ಚು ಕಡಿಮೆ ಮಾಡುವ ಅನ್ಯ ಕಾರಣಗಳೂ ಇದ್ದಮೂಲಕ, ಅವನ್ನೂ ವಿಚಾರಿಸದಿದ್ದರೆ ತಪ್ಪು ಆಗುವ ಸಂಭವವಿರುತ್ತದೆ. ಈ ಅನ್ಯ ಕಾರಣಗಳು ಬಲವತ್ತರವಾಗಿದ್ದಂತೆ ಸಾಮಾನ್ಯನಿಯಮಕ್ಕೆ ಬಾಧ ಬರುತ್ತದೆ. ಸಮುದ್ರದ ಸಮೀಪತೆಯಿಂದ ಹೆಚ್ಚು ಎತ್ತರ ಹೋದ ಹಾಗೆ ಉಷ್ಣತೆಯು ಮಾನವು ಕಡಿಮೆಯಾಗುತ್ತ ಹೋಗುತ್ತದೆ. ೧೫೦೦೦ ಫೂಟು ಎತ್ತರವಾದ ಪರ್ವತವು ಭೂಮಧ್ಯರೇಷೆಯ ಹತ್ತರ ಇದ್ದರೂ ಅದರ ಮೇಲೆ ಬರ್ಫವು ಬೀಳುತ್ತದೆ. ಭೂಮಧ್ಯರೇಷೆಯಿಂದ ದಕ್ಷಿಣಕ್ಕೂ ಉತ್ತರಕ್ಕೂ ಹೋದಹಾಗೆ ಹಿಮರೇಖೆಯ ಎತ್ತರವು ಕಡಿಮೆಯಾಗುತ್ತ ಹೋಗುವದು. ಹವೆಯೊಳಗಿನ ಉಷ್ಣತೆಯು ಕಡಿಮೆಯಾಗುವದಕ್ಕೆ ಇನ್ನೊಂದು ಕಾರಣವು ಸಮುದ್ರದ ಸಾನ್ನಿಧ್ಯವು. ನೆಲಕ್ಕಿಂತ ನೀರು ಕಾಯಲಿಕ್ಕೆ ಹೆಚ್ಚು ವೇಳೆಯು ಹತ್ತುವದರಿಂದ ಸಮುದ್ರದ ನೀರನ್ನು ಕಾಯಿಸುವದರಲ್ಲಿ ಸೂರ್ಯನ ಉಷ್ಣತೆಯು ಹೆಚ್ಚು ವೆಚ್ಚವಾಗುವದರಿಂದಲೂ, ನೀರಿನ ಉಗಿಯಿಂದ ಹವೆಯಲ್ಲಿ ಆರ್ದ್ರತ್ವವು ಕೂಡಿಕೊಳ್ಳುವದರಿಂದಲೂ ಸಮು

ಪ್ರದ ನಂಡೆಯವೇಲಿರುವ ಊರುಗಳಲ್ಲಿ ಸೂರ್ಯನ ಬಿಸಲಿನ ಪ್ರಖರತ್ವವು ಕೆಲವು ಅಂಶದಿಂದ ಕಡಿಮೆಯಾಗುತ್ತದೆ.

ಇವೆಲ್ಲ ಕಾರಣಗಳ ಪರಿಣಾಮವು ಹಿಂದುಸ್ತಾನದ ಹವೆಯ ಮೇಲೆ ಎಷ್ಟರಮಟ್ಟಿಗೆ ಆಗುತ್ತದೆಂಬದನ್ನು ನೋಡುವ. ಉತ್ತರ ಹಿಂದುಸ್ತಾನವು ಸಮಶೀತೋಷ್ಣಕಟಿಬಂಧದಲ್ಲಿಯೂ, ದಕ್ಷಿಣ ಹಿಂದುಸ್ತಾನವು ಉಷ್ಣಕಟಿಬಂಧದಲ್ಲಿಯೂ ಇರುವದರಿಂದ, ಸಾಮಾನ್ಯನಿಯಮಕ್ಕನುಸರಿಸಿ ಉತ್ತರದೇಶಕ್ಕಿಂತ ದಕ್ಷಿಣದಲ್ಲಿ ಬೇಸಿಗೆಯು ಹೆಚ್ಚು ಇರಬೇಕು. ಆದರೆ ದಕ್ಷಿಣದ ತಪ್ಪಲ ಸೀಮೆಯು ೩೦೦೦ ಫೂಟಿನಿಂದ ೬೫೦೦ ಫೂಟಿನವರೆಗೆ ಸಮುದ್ರದ ಸಮಾಟಿಗಿಂತ ಎತ್ತರವಿರುವದರಿಂದಲೂ, ಅರಬೀಸಮುದ್ರವೂ ಬಂಗಾಳದ ಸಮುದ್ರವೂ ಸುತ್ತಲು ಇರುವದರಿಂದಲೂ ಉತ್ತರ ಹಿಂದುಸ್ತಾನದೊಳಗಿನ ಬೇಸಿಗೆಯು ಉಷ್ಣತೆಯು ದಕ್ಷಿಣದೇಶದ ಬೇಸಿಗೆಯ ಉಷ್ಣತೆಗಿಂತ ಹೆಚ್ಚು ಇರುತ್ತದೆ.

ಬೇಸಿಗೆಯು ಪ್ರಾರಂಭವಾದಂದಿನಿಂದ ಮುಗಿಯುವವರೆಗೆ ಹಿಂದುಸ್ತಾನದ ಕೆಲವು ಮುಖ್ಯಸ್ಥಳಗಳಲ್ಲಿ ಉಷ್ಣತೆಯು ಎಷ್ಟು ಇರುತ್ತದೆಂಬದನ್ನು ನೋಡುವಾ:—

ಮಾರ್ಚ ತಿಂಗಳಲ್ಲಿ ಸೂರ್ಯನು ಭೂಮಧ್ಯರೇಖೆಯಿಂದ ಉತ್ತರಕ್ಕೆ ಸಾಗುವದರಿಂದ ಆ ತಿಂಗಳದಿಂದ ಹಿಂದುಸ್ತಾನದಲ್ಲಿ ಬೇಸಿಗೆಯು ಪ್ರಾರಂಭವಾಗುತ್ತದೆ. ಆಗ ಸಿಂಹಲದ್ವೀಪ ಮತ್ತು ಮದ್ರಾಸ ಇಲಾಖೆಯಲ್ಲಿ ಸೂರ್ಯನ ಕಿರಣಗಳು ಲಂಬರೂಪವಾಗಿ ಬೀಳುವದರಿಂದ ಉಷ್ಣತೆಯ ಮಾನವು ಕ್ರಮೇಣ ಹೆಚ್ಚಾಗುತ್ತ ಹೋಗುತ್ತದೆ. ಬಳ್ಳಾರಿ, ಕಡಪಾ ಕರ್ನೂಲ ಜಿಲ್ಲೆಗಳಲ್ಲಿ ಉಷ್ಣತೆಯು ೧೦೦°, ೧೦೬°, ೧೦೭°, ಅಂಕಗಳವರೆಗೆ ಏರುತ್ತದೆ. ಎಪ್ರೀಲ ತಿಂಗಳಲ್ಲಿ ಸೂರ್ಯನ ಉಷ್ಣತೆಯು ಉತ್ತರಕ್ಕೆ ೨೦°, ೨೩° ಅಕ್ಷಾಂಕಗಳವರೆಗೆ ಹಬ್ಬುತ್ತದೆ. ಪುಣೆ, ಸೊಲ್ಲಾಪುರ, ವಿಜಾಪುರ ಜಿಲ್ಲೆಗಳಲ್ಲಿ ಉಷ್ಣತೆಯು ೧೦೩ ಅಂಕವಿರುತ್ತದೆ. ಸೊಲ್ಲಾಪುರದ ಅಕ್ಷಾಂಕದಲ್ಲಿಯೇ ಇರುವ ರತ್ನಾಗಿರಿ ಜಿಲ್ಲೆಯಲ್ಲಿ ಉಷ್ಣತೆಯು, ಸಮುದ್ರನೆ ಸವಿಾಪವಿದ್ದದರಿಂದ ೯೪°, ೯೫° ಅಂಕಗಳಿಗಿಂತ ಹೆಚ್ಚು ಇರುವದಿಲ್ಲ. ಇದೇ ತಿಂಗಳಲ್ಲಿ ಮಧ್ಯಪ್ರಾಂತದಲ್ಲಿಯ ಕೆಲವು ಊರುಗಳಲ್ಲಿ ಉಷ್ಣತೆಯು ೧೧೩°

ಅಂಶದ ವರೆಗೆ ಇರುತ್ತದೆ. ಮೇ ತಿಂಗಳಲ್ಲಿ ಇವಕ್ಕೂ ಉತ್ತರಕ್ಕಿರುವ ಪ್ರದೇಶಗಳಲ್ಲಿ ಉಷ್ಣತೆಯು ಹೆಚ್ಚಾಗುತ್ತದೆ. ಆಗ ಗ್ವಾಲೇರ, ಝಾನ್ಸಿ, ರಜಪುತಸ್ಥಾನ ಸಿಂಧ ಮತ್ತು ದಕ್ಷಿಣ ಪಂಜಾಬಗಳಲ್ಲಿ ಉಷ್ಣತೆಯು ಮಿತಿಮೀರಿ ಬೆಳೆಯ ಹತ್ತುತ್ತದೆ, ಉದಾಹರಣಾರ್ಥವಾಗಿ ದಿಲ್ಲೀ, ಆಗ್ರಾ, ಮುಲ್ತಾನ, ಜಾಕೋಬಾಬಾದ ಎಂಬ ಊರುಗಳಲ್ಲಿ ಉಷ್ಣತೆಯು ೧೦೦° ಅಂಶಗಳವರೆಗೆ ಏರಿರುತ್ತದೆ. ಕರ್ನಾಟಕದಲ್ಲಿ ಉಷ್ಣತೆಯು ೧೦೦° ಅಂಶಗಳವರೆಗೆ ಉಂಟಾದ ಕೂಡಲೆ ಬೇಸಿಗೆಯ ತಾಪವನ್ನು ಸಹಿಸಲಾರೆವೆಂದು ಅನ್ನುವ ಜನರು ಉತ್ತರಹಿಂದುಸ್ತಾನದ ಜನರು ಬೇಸಿಗೆಯಲ್ಲಿ ಎಷ್ಟು ಗೋಳಾಡುತ್ತಿರಬಹುದೆಂಬದನ್ನು ಸಹಜವಾಗಿ ಊಹಿಸಬಹುದು. ಆಗ ಅಲ್ಲಿ ಹಗಲಿನ ಬಿಸಿಲಿನ ತಾಪವನ್ನು ಹ್ಯಾಗಾದರೂ ಸಹಿಸಬಹುದು; ಆದರೆ ಗಾಳಿಯ ಸುಳಿವು ಸಹ ಇಲ್ಲದಂಥ ರಾತ್ರಿಯನ್ನು ಕಳೆಯುವದು ಮಾತ್ರ ತೀರ ಕಷ್ಟಕರವಾಗಿರುತ್ತದೆ.

ಜುಲೈ ತಿಂಗಳಲ್ಲಿ ಪಶ್ಚಿಮದಿಕ್ಕಿನಿಂದ ಸಮುದ್ರದ ಮೇಲಿನ ಗಾಳಿಯು ಬೀಸಹತ್ತುತ್ತದೆ. ಆಕಾಶದಲ್ಲಿ ಮೇಘಗಳು ಸಂಚರಿಸ ಹತ್ತುತ್ತವೆ. ಹಾಗೂ ದೇಶದಲ್ಲಿ ವೃಷ್ಟಿಯಾಗಹತ್ತುವದರಿಂದ ಬಿಸಲಿನ ಪ್ರಖರತ್ವವು ಕಡಿಮೆಯಾಗಿ, ಜನರ ಹೃದಯಗಳು ಉಲ್ಲಸಿತವಾಗುತ್ತವೆ.

G. V. GOKHALE B. A.

ಪತ್ರವ್ಯವಹಾರ ಮತ್ತು ಪತ್ರಗಳ ಸಾರಾಂಶ.

ಮಹಾರಾಜಶ್ರೀ ಕನ್ನಡ ಶಾಲಾಪತ್ರಿಕಾಕರ್ತರ ಸನ್ನಿಧಿಗೆ.

ಅಂಕೋಲಾ ಸೆಂಟ್ರಲ್ ಕ್ಲಾಸ ಟೀಚರ ಮಾಸ್ತೇರಿ ಕೃತಾನೇಕ ನಮಸ್ಕಾರಗಳು.

ಕೆಳಗಿನ ಲೇಖನಕ್ಕೆ ತಮ್ಮ ಮಾಸಪತ್ರಿಕೆಯಲ್ಲಿ ಸ್ಥಳದೊರೆಯಬೇಕಾಗಿ ದೈನ್ಯಗೊಂಡು ಬೇಡಿಕೊಳ್ಳುತ್ತೇನೆ:—

ಉಪೋದ್ಘಾತ.

ಸದ್ಯದ ಸುಧಾರಣಾಕಾಲದಲ್ಲಿ ಶಿಕ್ಷಣ ವಿಷಯಕವಾದ ಅನೇಕ ಪುಸ್ತಕಾದಿಗಳು ದಿನೇ ದಿನೇ ಪ್ರಚುರಗೊಳ್ಳುತ್ತಿರುವದರಿಂದ, ಬಾಲಕರ

ಯೋಗ್ಯತೆಯನ್ನರಿಯದೆ, ವಿಷಯಗಳನ್ನು ಬೇಕುಬೇಕಾದಂತ ಅವರ ತಲೆಯಲ್ಲಿ ತುಂಬಿಬಿಡುವ ಘಾತಕಪದ್ಧತಿಗಳೆಲ್ಲ ಲೋಪಹೊಂದಹತ್ತಿವೆ. ವಿಷಯಗಳೂ, ವಿಷಯವಿವರಣೆಗಳೂ, ಬಾಲಕರ ಮಾನಸಿಕಶಕ್ತಿಗಳಿಗನುರೂಪವಾಗಿ, ಅಂದರೆ, ಆ ಶಕ್ತಿಗಳು ಕ್ರಮದಿಂದ ಬೆಳೆಯಲಿಕ್ಕನುಕೂಲವಾಗಿ ನಡಿಯುವದವಶ್ಯವೆಂದು ಪಂಡಿತಮಾನ್ಯರಿಂದ ನಿಶ್ಚಯಿಸಲ್ಪಟ್ಟಿರುವದು. ಅಂದಬಳಿಕ, ಶಿಕ್ಷಕರಿಗೆ ತಮ್ಮ ಕರ್ತವ್ಯವನ್ನು ಉತ್ತಮರೀತಿಯಿಂದ ಸಾಗಿಸಲಿಕ್ಕೆ, ಬಾಲಕರ ಮಾನಸಿಕ ಶಕ್ತಿಗಳ, ಮತ್ತು ಅವುಗಳ ಬೆಳೆವಣಿಗೆಯ ಕ್ರಮದ ಜ್ಞಾನವು ಅತ್ಯವಶ್ಯವೆಂಬದು ಸಹಜವು. ಆದರೆ, ಈ ವಿಷಯವನ್ನು ವಿವರಿಸುವ ಗ್ರಂಥಗಳು ಆಂಗ್ಲಭಾಷೆಯಲ್ಲಿಯೂ ಮಹಾರಾಷ್ಟ್ರಭಾಷೆಯಲ್ಲಿಯೂ ಅನೇಕವಾಗಿರುವಂತೆ, ನಮ್ಮ ಕನ್ನಡದಲ್ಲಿ ಇಲ್ಲೆಂಬಂತೆ ನನಗೆ ತೋರಿದ್ದರಿಂದ, ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ನನಗೆ ದೊರೆದ ಈ ವಿಷಯದ ಶಿಕ್ಷಣದಿಂದಲೂ, ಈ ಪರಿಗಿನ ನನ್ನ ಅನುಭವದಿಂದಲೂ, ನಾನು ಓದಿದ ಏತದ್ವಿಷಯಕ ಗ್ರಂಥಗಳಿಂದಲೂ, ನನಗಾದ ಜ್ಞಾನಲೇಶವನ್ನು ಕೆಲವು ಲೇಖಗಳದ್ವಾರಾ ನನ್ನ ವ್ಯವಸಾಯ ಬಂಧುಗಳ ಮುಂದಿಡಲು ನಾನು ಉಪಕ್ರಮಿಸಿರುತ್ತೇನೆ.

ವಿಷಯವು ಅತಿ ಗಹನವಾದದ್ದಿಂತಲೂ, ನನ್ನ ಯೋಗ್ಯತೆಯು ಅತ್ಯಲ್ಪವಾದದ್ದಿಂತಲೂ, ನನಗೆ ಪೂರ್ಣನಂಬಿಗೆಯಿದ್ದರೂ, ಕೈಲಾದಮಟ್ಟಗೆ ಪ್ರಯತ್ನಮಾಡಿ, ಈ ವಿಷಯದಲ್ಲಿ ನನ್ನಲ್ಲಿರುವ ಜ್ಞಾನಾಂಕುರವನ್ನು ನನ್ನ ವ್ಯವಸಾಯಬಂಧುಗಳ ಮಾನಸದೃಷ್ಟಿಮರ್ಯಾದೆಯೊಳಗಿಟ್ಟೆನೆ, ಅವರ ವಿಚಾರಜಲಸೇಚನೆಯಿಂದ ವೃದ್ಧಿಯನ್ನೂ ಪೂರ್ಣತೆಯನ್ನೂ ನಿಶ್ಚಿತತೆಯನ್ನೂ ಹೊಂದಿ, ಫಲಫಲಿತವಾಗಲು, ಆ ಮಧುರತರ ಫಲಗಳನ್ನು ಆಸ್ವಾದಿಸುವ ಸುಯೋಗವು ನನಗೂ ನನ್ನಂತೆ ಅನಭಿಜ್ಞರಾದ ಮತ್ತೂ ಕೆಲವು ಶಿಕ್ಷಕರಿಗೂ ದೊರೆಯಬೇಕೆಂಬ ಮುಖ್ಯ ಉದ್ದೇಶವನ್ನು ಮನಸಿನಲ್ಲಿಟ್ಟು ನಾನು ಈ ಕೆಲಸಕ್ಕೆ ಪ್ರಾರಂಭಮಾಡಿರುತ್ತೇನೆ. ನನ್ನ ಈ ಉದ್ದೇಶವನ್ನು ವ್ಯವಸಾಯಬಂಧುಗಳೂ ವಿದ್ವನ್ಮಣಿಗಳೂ ಮನಸಿನಲ್ಲಿ ತಂದು ಮುಂದಿನ ಕಾರ್ಯಭಾಗವನ್ನು ನಿರ್ವಹಿಸಬೇಕಾಗಿ ನನ್ನ ಪ್ರಾರ್ಥನೆಯದೆ.

ನಂಬರ ೧.

ಶೈಶವಾದಿ ಅವಸ್ಥೆಗಳೂ, ಆಯಾ ಅವಸ್ಥೆಗಳಲ್ಲಿ ಬೆಳಿಗೆಹೊಂದುವ

ಮಾನಸಿಕ ಶಕ್ತಿಗಳೂ, ಆ ಶಕ್ತಿಗಳು ಕ್ರಮದಿಂದ ಬೆಳಿಗೆಹೊಂದಲಿಕ್ಕೆ ಶಿಕ್ಷಕರು ಮಾಡುವ ಕರ್ತವ್ಯಗಳೂ:—

ಮಾನಸಿಕ ಶಕ್ತಿಗಳ ಬೆಳಿಗೆಯ ಸಂಬಂಧದಿಂದ ಶಿಕ್ಷಣದ ಅವಧಿಯು ವಾಡಿಕೆಯಾಗಿ, ಹುಡುಗನು ಹುಟ್ಟಿದಾರಭ್ಯ ೨೫ ವರ್ಷಗಳ ವರೆಗೆಂತ ಹೇಳಬಹುದು. ಮನಸ್ಸು ವಿಕಾಸಹೊಂದಿ, ಸ್ವತಂತ್ರ ಕಾರ್ಯನಿರ್ವಾಹಕಶಕ್ತಿಯು ಅದರಲ್ಲುಂಟಾಗಬೇಕಾದರೆ, ಮೇಲಿಕ್ಕೇಳಿದ ಅವಧಿಯು ಬಹುಶಃ ಬೇಕು. ಆ ಅವಧಿಯಲ್ಲಿ ಮಾನಸಶಾಸ್ತ್ರಜ್ಞರು, ಶಕ್ತಿಗಳ ಬೆಳಿಗೆಯ ಕ್ರಮವನ್ನನುಲಕ್ಷಿಸಿ, ೫ ಭಾಗಗಳನ್ನು ಅಥವಾ ಅವಸ್ಥೆಗಳನ್ನು ಗೊತ್ತುಪಡಿಸಿರುತ್ತಾರೆ. ಆ ಅವಸ್ಥೆಗಳೂ ಅವುಗಳ ಕಾಲಾವಧಿಗಳೂ ಕ್ರಮದಿಂದ ಹೇಗಂದರೆ:—

೧	ನೇದು	ಶೈಶವ	೪ ವರ್ಷ ತುಂಬುವ ತನಕ.
೨	,,	ಬಾಲ್ಯ	೪–೭ ವರ್ಷಗಳ ವರೆಗೆ.
೩	,,	ಕೌಮಾರ	೭–೧೦ ,,
೪	,,	ಪೌಗಂಡ	೧೦–೧೪ ,,
೫	,,	ಯೌವನ	೧೪–೨೫ ,,

೧. ಶೈಶವ–ಈ ಅವಧಿಯಲ್ಲಿ ಬಾಲಕರು ಶಾಲೆಗೆ ಬರುವ ಪರಿಪಾಠವಿಲ್ಲ. ಕಾರಣ, ಆಗ ಮನೆಯೇ ಅವರ ಶಾಲೆಯಾಗಿಯೂ, ತಾಯಿತಂದೆಗಳೇ ಶಿಕ್ಷಕರಾಗಿಯೂ ಇದ್ದು ಕಾರ್ಯಭಾಗವು ನಡಿಯತಕ್ಕದ್ದು.

ಈ ಅವಸ್ಥೆಯಲ್ಲಿ ಚಾಂಚಲ್ಯವು ಪ್ರಬಲವಾಗಿಯೂ, ಚಟುವಟಿಕೆಯು ಪ್ರಚುರವಾಗಿಯೂ, ಅನೈಚ್ಛಿಕ ಕುತೂಹಲವು ಅಧಿಕವಾಗಿಯೂ ಅನುಕರಣವು ಸಹಜಗುಣವಾಗಿಯೂ ಇರುವ ಕಾರಣ, ಇಂದ್ರಿಯಗಳನ್ನು ತಕ್ಕ ರೀತಿಯಿಂದ ಕೆಲಸಕ್ಕೆ ಹಚ್ಚಿ ಜ್ಞಾನಸಂಪಾದನೆಯ ಮಾರ್ಗವನ್ನು ಕಂಡು ಹಿಡಿಯಲಿಕ್ಕೆ ಈ ಕಾಲವು ತಕ್ಕದ್ದು. ಇದರ ಕೊನೆಯಲ್ಲಿ ನಿರೀಕ್ಷಣ ಶಕ್ತಿಯು ಬಲಪಡುತ್ತದೆ. ಕಟ್ಟಕಡೆಯಲ್ಲಿ ಸಂಗ್ರಹಣ ಸಾಮರ್ಥ್ಯವೂ ಒಡನುಡಿಯುವ ಶಕ್ತಿಯೂ ತಲೆದೋರುತ್ತವೆ. ಈ ಅವಸ್ಥೆಯಲ್ಲಿ ನಿದುಳು ಅಪಕ್ವವಾಗಿರುವದರಿಂದ, ಶಿಕ್ಷಕರು ಈ ಸಂಗತಿಗಳನ್ನು ಲಕ್ಷದಲ್ಲಿ ತಂದು ಶಿಕ್ಷಣವನ್ನು ಸಾಗಿಸಬೇಕು. ಅಂದರೆ, ಬುದ್ಧಿಸಾಮರ್ಥ್ಯಗಳು ಸ್ವಾಭಾವಿಕವಾಗಿ ಬೆಳೆಯುವಂತೆ ಅವನ್ನು ಬೆಳೆಸುತ್ತ ಹೋಗಬೇ

ಕ್ಕೇ ಹೊರತು, ಒತ್ತಾಯದಿಂದ ಬೆಳೆಸುವ ಗೋಜಿಗೆ ಹೋಗಬಾರದು. ಈ ಅವಧಿಯಲ್ಲಿ ಕೆಲವು ಮಾತುಗಳನ್ನೂ ಆಟಗಳನ್ನೂ ಹಾಡುಗಳನ್ನೂ ಒಡವೆಯ ಹೆಸರುಗಳನ್ನೂ (ಪ್ರತ್ಯಕ್ಷ ಒಡವೆಗಳಿಗೆ ಸಂಬಂಧಿಸಿದ ಹೆಸರುಗಳು ಮಾತ್ರ) ಕಲಿಸಬಹುದು. ಇದಕ್ಕಾಗಿ ಬಾಲೋದ್ಯಾನ ಶಿಕ್ಷಣವು ಅತ್ಯುಪಯುಕ್ತವಾದದ್ದೆಂದು ನಿರ್ಣಯಿಸಲ್ಪಟ್ಟಿದೆ.

೨. ಬಾಲ್ಯ—ಈ ಅವಧಿಯಲ್ಲಿ ಸಂಗ್ರಹಣಶಕ್ತಿಯೂ ಒಡನುಡಿಯುವ ಸಾಮರ್ಥ್ಯವೂ ಪ್ರಚುರಗೊಂಡು, ಸ್ಮರಣವು ತಲೆದೋರುತ್ತದೆ. ವಿಚಾರವಾದರೂ ಅಂಕುರಿಸುತ್ತದೆ. ಸುತ್ತಲಿನ ಒಡವೆಗಳ ಸಂಬಂಧದಿಂದಾದ ಜ್ಞಾನವು ಸ್ಥಿರವೂ ಯಥಾರ್ಥವೂ ಆಗುತ್ತದೆ. ಇಂದ್ರಿಯಜನ್ಯ ಜ್ಞಾನವು ಭರದಿಂದ ಸಾಗುತ್ತದೆ. ಮೋಹಕ ಪದಾರ್ಥಗಳ ಸಂಬಂಧದಿಂದುಂಟಾದ ಚಂಚಲವಾದ ಲಕ್ಷವು, ಶಿಕ್ಷಣವು ಮನೋರಂಜನೆಯಾಗುವಂತೆ ಸಾಗುವದರಿಂದ, ಕ್ರಮದಿಂದ ಇಚ್ಛೆಯ ವಶಕ್ಕೆ ಬರಹತ್ತುತ್ತದೆ. ಪಾರಿಭಾಷಿಕ ಶಬ್ದಗಳ ಅಭ್ಯಾಸವು ಈ ಅವಸ್ಥೆಗೆ ತಕ್ಕದ್ದಲ್ಲ. ವಿಷಯಗಳು ಮನಸ್ಸನ್ನು ಎಳೆಯುವಂಥವುಗಳಿರಬೇಕು. ಈ ಅವಸ್ಥೆಯಲ್ಲಿ ಮನಸ್ಸು, ಮುಂದಿನ ಅವಸ್ಥೆಗಳಲ್ಲಿ ನಡಿಸಲ್ಪಡುವ ಅಭ್ಯಾಸಗಳನ್ನು ಹೊಂದುವದಕ್ಕಾಗಿ ಪಾತ್ರತೆಯನ್ನು ಪಡೆದಿರಬೇಕು. ಶಿಕ್ಷಣದ ವಿಷಯವು ವ್ಯಾಪಕವಾದರೂ ಕೇವಲ ಶಾಸ್ತ್ರೀಯವಾಗಿರದೆ, ಸಾಮರ್ಥ್ಯಗಳ ಬೆಳಿಗೆಗೆ ಅನುಕೂಲವಾಗಿರಬೇಕು. ಬಾಲೋದ್ಯಾನದ ಪಾಠಗಳು, ಹಾಡುಗಳು, ಮಾತಾಡುವದು, ಒಡವೆಯ ಪಾಠಗಳು, ಸುತ್ತಲೆ ವರ್ತಿಸುವ ಸೃಷ್ಟಿಜೀವಮಾತ್ರಾರಗಳ ಸಂಬಂಧದ ಪಾಠಗಳು, ಚಿತ್ರಕಲೆ, ಬರಹ, ಪ್ರತ್ಯಕ್ಷ ನಿರೀಕ್ಷಣದಿಂದಾಗುವ ಭೂಗೋಲಜ್ಞಾನ, ವಾಚನ ಮುಂತಾದ ವಿಷಯಗಳನ್ನು ಕ್ರಮವಾಗಿಯೂ ತಾಂತ್ರಿಕವಾಗಿಯೂ ಕಲಿಸತಕ್ಕದ್ದು.

೩. ಕೌಮಾರ—ಈ ಅವಸ್ಥೆಯಲ್ಲಿ ಸ್ಮರಣಕಲ್ಪನಾಶಕ್ತಿಗಳು ತಲೆದೋರಿರುತ್ತವೆ. ತಿಳುವಳಿಕೆಯು ಬಲಪಡಹತ್ತುತ್ತದೆ. ಈ ಕಾಲಕ್ಕೆ ಹಿಂದೆ ಹೇಳಿದ ವಿಷಯಗಳನ್ನು ಹೆಚ್ಚು ವಿಸ್ತಾರವಾಗಿ ಕಲಿಸಬಹುದು. ಪಾರಿಭಾಷಿಕ ಶಬ್ದಗಳು, ಗಣಿತ, ಭೂಮಿತಿ, ಪದಾರ್ಥವಿಜ್ಞಾನಶಾಸ್ತ್ರ, ವ್ಯಾಕರಣ, ಕಥೆಗಳು, ಇತಿಹಾಸದ ಸಂಗತಿಗಳು, ಸೃಷ್ಟಿಸೌಂದರ್ಯದ ವರ್ಣನೆಗಳು ಈ ವಿಷಯಗಳನ್ನು ಮೂರ್ತ ಪದಾರ್ಥಗಳಿಗೆ ಸಂಬಂಧಿಸಿ ಕಲಿಸಬಹುದು.

೪. ಪೌಗಂಡ—ಈ ಅವಸ್ಥೆಯಲ್ಲಿ ನಿರೀಕ್ಷಣ ಸಂಗ್ರಹಣಶಕ್ತಿಗಳೇ ಜ್ಞಾನಸಂಗ್ರಹವಾರ್ಗದಲ್ಲಿ ಪ್ರಾಧಾನ್ಯಗಳಾದರೂ, ವಿಚಾರ, ಅನುಮಾನ, ನಿರ್ಣಯಸಾಮರ್ಥ್ಯಗಳು ತಕ್ಕಮಟ್ಟಿಗೆ ಬಲಹೊಂದುತ್ತವೆ. ಸ್ಮರಣಶಕ್ತಿಯು ವಿಶೇಷವಾಗಿ ಪ್ರಚುರಗೊಳ್ಳುತ್ತದೆ. ಲಕ್ಷವು ಪೂರ್ಣತ್ವವನ್ನೈದುವದರಿಂದ ಏಕಾಗ್ರತೆಯ ಚಟವನ್ನು ಹಚ್ಚಲಿಕ್ಕೆ ಇದು ಅನುಕೂಲವಾದ ಕಾಲವು. ಹಿಂದಿನ ಅವಸ್ಥೆಯಲ್ಲಿ ಕಲಿಸಲುಪಕ್ರಮಿಸಿದ ವಿಷಯಗಳನ್ನು ಈ ಅವಸ್ಥೆಯಲ್ಲಿ ಇನ್ನೂ ವಿಸ್ತಾರವಾಗಿ ಸಾಗಿಸಬಹುದು. ಆದರೆ, ಮಿದುಳು ಇನ್ನೂ ಪೂರ್ಣಪಕ್ವಸ್ಥಿತಿಯನ್ನು ಹೊಂದಿಲ್ಲೆಂಬದನ್ನು ಶಿಕ್ಷಕರು ಮರೆಯಬಾರದು. ಈ ಅವಧಿಯಲ್ಲಿ ಭಾಷಾ, ಗಣಿತ, ಶಾಸ್ತ್ರೀಯ ವಿಷಯಗಳು, ಭೂಮಿತಿ ಈ ವಿಷಯಗಳ ಅಭ್ಯಾಸವನ್ನು ಮಾಡುವದರಿಂದಲೂ ಉಪಯುಕ್ತ ವಿಷಯಗಳು ಅಂದರೆ, ಕರ್ಮಾರಿಕೆ, ಬಡಿಗತನ ಮುಂತಾದ ಕೈಕೆಲಸದಿಂದಲೂ, ಜ್ಞಾನಸಂಪಾದನೆಯನ್ನು ಮಾಡಬಹುದು. ಈ ಕಾಲದ ಶಿಕ್ಷಣದಿಂದ ಕೇವಲ ಮನಸ್ಸುಧಾರಣೆಯಾಗಬೇಕೆಂಬದಿಷ್ಟೇ ಅಲ್ಲ, ವ್ಯವಹಾರಪ್ರಯೋಜನವೂ ಆಗಬೇಕು.

೫. ಯೌವನ—ಈ ಅವಸ್ಥೆಯಲ್ಲಿ ಬುದ್ಧಿಸಾಮರ್ಥ್ಯಗಳೆಲ್ಲ ಪೂರ್ಣವಾಗಿ ಬಲಹೊಂದುತ್ತವೆ. ಎಲ್ಲ ವಿಷಯಗಳನ್ನು ಶಾಸ್ತ್ರೀಯ ರೀತಿಯಿಂದ ಕಲಿಸಬಹುದು. ಶಿಕ್ಷಣವು ಔತ್ಸುಕ್ಯದಿಂದಲೂ, ನಿಗ್ರಹದಿಂದಲೂ ನಡೆಯಬೇಕು. ಈ ಅವಧಿಯಲ್ಲಿ ಕಲಿಸಲ್ಪಡುವ ವಿಷಯಗಳಿಂದ ಮನಸ್ಸುಧಾರಣೆಯೂ, ವ್ಯವಹಾರಜ್ಞಾನವೂ ಆಗತಕ್ಕದ್ದೆಂಬದನ್ನು ಶಿಕ್ಷಕರು ಲಕ್ಷದಲ್ಲಿಡಬೇಕು.

ಪತ್ರಗಳ ಸಾರಾಂಶ.

ರಾ॥ ರಾ॥ ವೈಕುಂಠ ಶ್ರೀನಿವಾಸ ಪ್ರಭು ಎನೇ ಅ॥ ಮಾಸ್ತರ ಅಂಕೋಲಾ ಇವರು, ಮರಾಠಿಯಲ್ಲಿ ಕಲಿಸಿದಂತೆ ಕನ್ನಡದಲ್ಲಿಯೂ ಮೋಡೀ ಲಿಪಿಯನ್ನು ಕಲಿಸುವ ಕುರಿತು ಕೆಳಗೆ ಬರೆದ ಏರ್ಪಾಡುಗಳನ್ನು ಸೂಚಿಸುತ್ತಾರೆ:—

೧. ಮರಾಠಿಸಾಲೆಗಳಲ್ಲಿದ್ದಂತೆ ಕನ್ನಡಸಾಲೆಗಳಲ್ಲಾದರೂ ಮೂಲಾಕ್ಷರಗಳನ್ನು ಕಲಿಸಿದ ಬಳಿಕ ಕನ್ನಡ ಮೋಡೀ ಅಕ್ಷರಗಳನ್ನು ಕಲಿಸು

ಲ್ಲಿ ಕ್ರಮವಾಗಿ ಹೆಚ್ಚು ಹೆಚ್ಚಾಗುವಂತೆ ನಿರ್ಬಂಧವಾಡುವದು.

೨. ಉತ್ತಮವೂ ಬಹುಮಾನ್ಯವೂ ಆದ ಕನ್ನಡ ವೋಡೀ ಹ
ಕ್ಷರವುಳ್ಳ ಪುಸ್ತಕಗಳನ್ನು ಸಾಲೆಯಲ್ಲಿ ಓದುವಂತೆ ವ್ಯವಸ್ಥೆ ಮಾಡುವ
ಮತ್ತು ಈ ಪುಸ್ತಕಗಳನ್ನಾದರೂ ಒಂದಕ್ಕಿಂತ ಒಂದು ಕ್ರಮವಾಗಿ ಕ
ನವಿರುವಂತೆ ರಚಿಸುವದು.

೩. ಶುದ್ಧಲೇಖನವನ್ನೂ ಕಾಪಿಪುಸ್ತಕಗಳನ್ನೂ ಕನ್ನಡ ಬಾಲಬೋಧ
ಲಿಪಿಯಲ್ಲಿಯೂ, ಕನ್ನಡ ವೋಡೀ ಲಿಪಿಯಲ್ಲಿಯೂ ಬರೆಯುವಂ
ನಿಯಮಿಸುವದು.

೪. ಕನ್ನಡ ಬಾಲಬೋಧ ಹಾಗು ವೋಡೀ ಲಿಪಿಯ ಕತ್ತಿಗಳನ್ನೂ
ಕಾಪಿಬುಕ್ಕುಗಳನ್ನೂ ಪ್ರಸಿದ್ಧಪಡಿಸಿದವರಿಗೆ ಅವುಗಳ ಯೋಗ್ಯತೆಯ
ತೆ ಉತ್ತೇಜನಕೊಡುವದು.

೫. ಉತ್ತಮ ಹನ್ನೆರಡಕ್ಷರವುಳ್ಳ ವಿದ್ಯಾರ್ಥಿಗಳಿಗೆ ಕೆಲವುಕಾಲದ ಪ
ಗೆ, ಅಂದರೆ ಕೈಬರಹದ ಸಾಮಾನ್ಯ ಸುಧಾರಣೆಯಾಗುವ ವರೆಗಾದರೂ
ಇನಾಮು ಕೊಡುವಂತೆ ವ್ಯವಸ್ಥೆಯಾಗುವದು.

ವಿದ್ಯಾಖಾತೆಯ ನೋಟೀಸುಗಳು.

ನಕಾಶಗಳನ್ನು ಪ್ರಸಿದ್ಧಪಡಿಸುವ ವಿ|| ಜನಾರ್ದನ ವಾಸುದೇ
ಗೋಡಬೋಲೆ ಇವರಿಂದ ಪ್ರಸಿದ್ಧಿಸಲ್ಪಟ್ಟ ಮರಾಠೀ ಪೃಥ್ವಿಯ ನಕಾ
(ಕಿಮ್ಮತ್ತು ೪ ರೂಪಾಯಿ)ಯನ್ನು ಈ ಇಲಾಖೆಯ ಮರಾಠಿ ಪ್ರಾಥಮಿಕಶಾ
ಗಳಲ್ಲಿ ಉಪಯೋಗಿಸುವದಕ್ಕೆ ಮಂಜೂರುಮಾಡಿದ ಪುಸ್ತಕಗಳು, ನ
ಶಗಳು ಮುಂತಾದವುಗಳ ಪಟ್ಟಿಯೊಳಗಿಂದ ತೆಗೆದುಹಾಕಲ್ಪಟ್ಟಿರುತ್ತದೆ.

ಡಿರೆಕ್ಟರ್ ಆಫ್ ಪಬ್ಲಿಕ
ಇನ್ಸ್ಟ್ರಕ್ಷನ್ ಇವರ ಆಫೀಸು
ಪೂನೇ ಅಕ್ಟೋಬರ ೧೯೧೮.

P. WREN.
ನಿ|| ಡಿರೆಕ್ಟರ ಆಫ್ ಪಬ್ಲಿಕ
ಇನಸ್ಟ್ರಕ್ಷನ್.

ಶಾಲಾಪತ್ರಿಕೆ

ಪುಸ್ತಕ ೬೭ | ನವಂಬರ ೧೯೧೧. | ಸಂಚಿಕೆ ೧೧

ಬಾದಶಹರವರ ಸ್ವಾಗತವು.

(೦)

ಚಕ್ರವರ್ತಿಗಳಾದ ೫ನೇ ಜಾರ್ಜ ಮಹಾರಾಣಿ ಯವರಾದ ಮೇರಿ ಇವರ ಸ್ವಾಗತ.

ನಮ್ಮ ಪರಮ ಪೂಜ್ಯರೂ ವೈಭವಶಾಲಿಗಳೂ ಆದ ೫ನೇ ಜಾರ್ಜ ಚಕ್ರವರ್ತಿಗಳವರು, ತಮ್ಮ ಧರ್ಮಪತ್ನಿಗಳಾದ ಮಹಾರಾಣಿ ಮೇರಿಯವ ರೊಂದಿಗೆ ಈ ದೇಶಕ್ಕೆ ಬಂದು, ಬರುವ ದಶಂಬರ ತಿಂಗಳ ೧೨ನೇ ತಾರೀ ಖಿನ ದಿವಸ ಇತಿಹಾಸಪ್ರಸಿದ್ಧವಾದ ದಿಲ್ಲೀ ಪಟ್ಟಣದಲ್ಲಿ ದೊಡ್ಡ ದರಬಾರ ವನ್ನು ನೆರೆಯಿಸಿ, ತಾವು ಹಿಂದುಸ್ತಾನದ ಚಕ್ರವರ್ತಿಗಳೆಂದು ಸಿಂಹಾಸನಾ ರೂಢರಾದ ವಾರ್ತೆಯನ್ನು ಹಿಂದುಸ್ತಾನದ ಪ್ರಜೆಗಳಿಗೆ ತಾವೇ ಜಾಹೀರು ಪಡಿಸುವರೆಂಬ ಮಾತು ಸದ್ಯಕ್ಕೆ ಕೇವಲ ಹಿಂದುಸ್ತಾನದ ಜನ ರಿಗಷ್ಟೇ ಯಾಕೆ? ಇಡೀ ಜಗತ್ತಿಗೇ ವಿದಿತವಾಗಿರುವದು. ಭರತಖಂಡ ದಲ್ಲಿ ಬ್ರಿಟಿಶ ಸಾಮ್ರಾಜ್ಯವು ಸ್ಥಾಪನೆಯಾಪಂದಿನಿಂದ ಭಾರತೇಯರಿಗೆ ಇಂಥ ಆನಂದದಾಯಕವಾದ ಸುಯೋಗವು ಎಂದೂ ಪ್ರಾಪ್ತವಾಗಿದ್ದಿಲ್ಲ. ಅದರಿಂದ ಈ ರಾಜವೈಭವಸಂಪನ್ನರಾದ ದಂಪತಿಗಳು ಯಾವ ಯಾವ ಪಟ್ಟಣಗಳಿಗೆ ತಮ್ಮ ಚರಣಸ್ಪರ್ಶವನ್ನು ಮಾಡುವರೆಂದು ಗೊತ್ತಾಗಿರು ವದೋ ಅಲ್ಲಲ್ಲಿಯ ನಾಗರಿಕರು ಅವರ ಸ್ವಾಗತದ ಸಲುವಾಗಿ ಒಳ್ಳೇ ಈರ್ಷೆಯಿಂದಲೂ, ಉತ್ಸಾಹದಿಂದಲೂ, ಒಬ್ಬರಿಗಿಂತಲೂ ಒಬ್ಬರು ಮಿಗಿ ಲಾದ ಸಿದ್ಧತೆಯನ್ನು ಮಾಡತೊಡಗಿರುವರು. ಈ ಸಂಬಂಧದ ವರ್ತಮಾ ನಗಳು ಪ್ರತಿನಿತ್ಯ ಇಂಗ್ಲಿಷದೈನಿಕ ಪತ್ರಿಗಳಲ್ಲಿ ಪ್ರಸಿದ್ಧವಾಗುತ್ತಲಿರುವವು. ಹಿಂದುಸ್ತಾನದ ಬಾದಶಹರು ವಿಲಾಯತಿಯಿಂದ ಹೊರಟು, ಎಲ್ಲಕ್ಕೂ

ಮೊದಲು ಮುಂಬಯಿ ಪಟ್ಟಣದಲ್ಲಿ ತಮ್ಮ ಪಾದಧೂಳಿಯೆನ್ನು ಕೆಡವು
ರಾದ ಕಾರಣ, ಮುಂಬಯಿಯ ನಾಗರಿಕರು ಅವರ ಸ್ವಾಗತಕಾಯ
ವನ್ನು ಬಳ್ಳೀ ವಿಜೃಂಭಣೆಯಿಂದ ನೆರವೇರಿಸತಕ್ಕವರಿರುವರು. ಎಲ್ಲಕ
ಮೊದಲು ಅಪೊಲೋ ಬಂದರದ ಮೇಲೆ ಮುಂಬಯಿಯ ಎಲ್ಲ ನಾಗರಿಕ
ವತಿಯಿಂದ ಬಾದಶಹರವರ ಸ್ವಾಗತವಾಗುವದು. ಇದಕ್ಕಾಗಿ ಬಂದರ
ಮೇಲೆ ಅತ್ಯಂತ ಶೋಭಾಯಮಾನವಾದ ಒಂದು ನೂತನ ಭವನವು ಕ
ಲ್ಪಿಟ್ಟಿರುವದು. ಅದರಲ್ಲಿ ಚಕ್ರವರ್ತಿಗಳವರು ಕೂಡ್ರತಕ್ಕ ಮಂಟಪ
ಎದುರಿಗೆ ಭವ್ಯವಾದಂಥ ಅರ್ಧವರ್ತುಲಾಕೃತಿಯುಳ್ಳ ಒಂದು ಸಭಾ
ಹವು ನಿರ್ಮಿಸಲ್ಪಟ್ಟಿರುವದು. ಈ ಸಭಾಗೃಹದಲ್ಲಿ ಸಾವಿರಾರು ಜನ
ಕೂಡ್ರುವಷ್ಟು ಸ್ಥಳವು ಇರುವದು; ಅಲ್ಲಿ ಮುಂಬಯಿ ಪಟ್ಟಣದೊ
ಗಿನ ಸನ್ಮಾನಿತರಾದ ಸಭ್ಯಗೃಹಸ್ಥರಿಗೂ, ಈ ಇಲಾಖೆಯೊಳಗಿನ ಸಂಸ
ನಿಕರಿಗೂ, ಸರದಾರರಿಗೂ, ಸ್ಥಳವು ದೊರೆಯತಕ್ಕದ್ದಿರುವದು. ಈ
ಸಭಾಗೃಹವು ಸಮುದ್ರಾಭಿಮುಖವಾಗಿರುವದರಿಂದ ಬಾದಶಹರು ಹ
ಗದಿಂದ ಇಳಿದು, ಸಭಾಗೃಹದಲ್ಲಿ ಪ್ರವೇಶ ಮಾಡುವವರೆಗೆ ಅ
ಕುಳಿತ ಎಲ್ಲ ಜನರಿಗೂ ಅವರ ದರ್ಶನಲಾಭವಾಗುವಂತೆ ವ್ಯವಸ್ಥೆ
ಮಾಡಲ್ಪಟ್ಟಿರುವದು. ಈ ಮೇರೆಗೆ ಬಂದರದ ಮೇಲೆ ಸ್ವಾಗತವಾ
ಆಗುವಾಯ ಬಾದಶಹರು ಪಟ್ಟಣದ ಕೆಲವು ರಾಜಮಾರ್ಗಗಳಲ್ಲಿ ತಿರುಗಾ
ಡತಕ್ಕವರಿರುವರು. ಆ ಮಾರ್ಗಗಳನ್ನು ಎರಡೂ ಮಗ್ಗಲಿಗೆ ಚಂದವಾ
ಕಳಸಗಳುಳ್ಳ ಕಂಬಗಳಿಂದಲೂ ಚಿತ್ರವಿಚಿತ್ರವಾದ ಬಣ್ಣದ ಪತಾಕೆಗಳಿ
ದಲೂ, ಕಾಗದಗಳಿಂದಲೂ ಶೃಂಗರಿಸಿದ್ದಾರೆ; ಮತ್ತು ಅಲ್ಲಲ್ಲಿಗೆ ಬಹು
ಸುಂದರವಾದ ಕಮಾನುಗಳನ್ನು ಕಟ್ಟಿರುತ್ತಾರೆ. ಬಾದಶಹರು ರಾ
ಮಾರ್ಗಗಳಿಂದ ಹೋಗುವಾಗ ಚಿಕ್ಕಮಕ್ಕಳಿಗೆ ಅವರ ದರ್ಶ
ನಾಗಿ ಅವರ ಕೋಮಲವೂ ನಿಷ್ಕಲಂಕವೂ ಆದ ಮನಸಿನಲ್ಲಿ ರಾಜಭ್ರಿ
ತಿಯ ಅಂಕುರವು ಉತ್ಪನ್ನವಾಗಬೇಕೆಂದು ಆ ಮಾರ್ಗಗಳ ಎಡಬಲ ಬೀ
ಗಳಲ್ಲಿ ೮ ರಿಂದ ೧೫ ವರ್ಷ ವಯಸ್ಸಿನ ಹುಡುಗರಿಗೆ ಕೂಡ್ರುವ ವ್ಯವ
ಸ್ಥೆಯು ಮಾಡಲ್ಪಟ್ಟಿರುವದು. ರಾತ್ರಿಯಲ್ಲಿಯೂ, ಪಟ್ಟಣಕ್ಕೆ ವಿಲಕ್ಷಣ
ಸೌಂದರ್ಯವುಂಟಾಗುವಂತೆ ದೀಪೋತ್ಸವದ ವ್ಯವಸ್ಥೆಯು ಮಾಡಲ್ಪಟ್ಟಿರ
ವದು. ಎಷ್ಟೋ ಸರಕಾರಿ ಹಾಗು ಖಾಸಗಿ ಇಮಾರತುಗಳಲ್ಲಿ ವಿದ್ಯುದ್ದೀಪ
ಗಳನ್ನು ಹಚ್ಚತಕ್ಕವರಿರುವರು. ಮತ್ತು ಬೇರೆ ಬೇರೆ ಇಮಾರತುಗಳಲ್ಲಿ

ಬೇರೆ ಬೇರೆ ಬಣ್ಣದ ದೀಪಗಳನ್ನು ಹಚ್ಚುವ ವ್ಯವಸ್ಥೆಯನ್ನು ಮಾಡಿದ್ದಾರೆ. ಹ್ಯಾಗಂದರೆ, ಸೆಕ್ರೇಟರಿಪಿಟ ಎಂಬ ಇಮಾರತಿನಲ್ಲಿ ಎಲ್ಲ ದೀಪಗಳು ಕೆಂಪು; 'ಯುನಿವ್ಹರ್ಸಿಟಿಹಾಲ' ಎಂಬ ಇಮಾರತಿನಲ್ಲಿ ಎಲ್ಲ ದೀಪಗಳು ಹಸರು; ಇತ್ಯಾದಿ. ಇದರಿಂದಂತೂ ಪಟ್ಟಣಕ್ಕೆ ಅವರ್ಣನೀಯವಾದ ಶೋಭೆಯುಂಟಾಗಿರುವದು. ಸಾರಾಂಶವೇನಂದರೆ, ದಶಂಬರ ತಿಂಗಳ ಮೊದಲಿನ ೧೫ ದಿವಸಗಳಲ್ಲಿ ಮುಂಬಾನಗರವು ಕೇವಲ ಇಂದ್ರಭವನದ ಶೋಭೆಯನ್ನು ಹೊಂದತಕ್ಕದ್ದಿರುವದು.

ಈ ಮೇರೆಗೆ ಮುಂಬಯಿಯ ನಾಗರಿಕರು ತಮ್ಮ ನಗರವನ್ನು ಚಿತ್ರವಿಚಿತ್ರವಾದ ಪತಾಕೆಗಳಿಂದಲೂ, ಬೇರೆಬೇರೆ ಬಣ್ಣದ ವಿದ್ಯುದ್ದೀಪಗಳಿಂದಲೂ ಶೃಂಗರಿಸಿ ಅಷ್ಟರಿಂದಲೇ ಪ್ರೇಕ್ಷಕ ಸಮುದಾಯವನ್ನು ಆಶ್ಚರ್ಯಗೊಳಿಸಿ ಸುಮ್ಮನೆ ಕುಳಿತಿಲ್ಲ; ಆದರೆ ಅವರು ಈ ಶುಭಪ್ರಸಂಗದಲ್ಲಿ ಬಂದು ದೊಡ್ಡ ಪ್ರದರ್ಶನವನ್ನು ನೆರಿಸಿ, ಅದರಿಂದ ಬಾದಶಹರಿಗೆ ಹಿಂದುಸ್ತಾನದ ಬಗ್ಗೆ ಅಧಿಷ್ಟ ಹೆಚ್ಚು ಮಾಹಿತಿಯನ್ನು ಮಾಡಿಕೊಡಲು ಯತ್ನಿಸಿರುತ್ತಾರೆ. ಈ ಪ್ರದರ್ಶನವು ಎಲ್ಫಿನ್ಸ್ಟನ್ ಹಾಯಸ್ಕೂಲಿನ ಎದುರಿಗೆ ಇರುವ ವಿಸ್ತಾರವಾದ ಬೈಲಿನಲ್ಲಿ ಆಗತಕ್ಕದ್ದಿರುವದು. ಇದಕ್ಕೆ ಹಳೇ ಮುಂಬಯಿಯ ಪ್ರದರ್ಶನವೆಂಬ ಹೆಸರು ಕೊಟ್ಟಿರುವರು. ಈ ಪ್ರದರ್ಶನದಿಂದ ಹಿಂದುಸ್ತಾನದ, ವಿಶೇಷವಾಗಿ ಮುಂಬಯಿ ಪಟ್ಟಣದ ಹಾಗು ಮುಂಬಯಿ ಇಲಾಖೆಯ ಪ್ರಾಚೀನ ಕಲಾಕೌಶಲ್ಯವು ಯಾವ ಪ್ರಕಾರದ್ದಿತ್ತೆಂಬದು ಗೊತ್ತಾಗುವದು. ಪೂರ್ವಕಾಲದಲ್ಲಿ ಈ ಇಲಾಖೆಯೊಳಗೆ ಧಾತುಗಳ ಪಾತ್ರೆಗಳ ಮೇಲೆ ಯಾವ ಪ್ರಕಾರದ ಕೈಕೆಲಸವಾಗುತ್ತಿತ್ತು, ಕಲ್ಲುಕಟ್ಟಿಗೆಗಳ ಮೇಲಿನ ಕೆತ್ತಿಗೆಯ ಕೆಲಸವು ಎಷ್ಟು ಉಚ್ಚಸ್ಥಿತಿಯನ್ನು ಹೊಂದಿತ್ತು, ಅರಿವೆಯನ್ನು ನೆಯ್ಯುವ ಕೆಲಸದಲ್ಲಿ ಇಲ್ಲಿಯ ನೆಯ್ಕಾರರು ಎಷ್ಟು ಪ್ರವೀಣರಾಗಿದ್ದರು, ಇತ್ಯಾದಿ ಸಂಗತಿಗಳನ್ನು ಬಾದಶಹರ ಲಕ್ಷಕ್ಕೆ ತಂದುಕೊಡುವದಕ್ಕಾಗಿ ಅಕಾಲದ ಹಲವು ಬಗೆಯ ನಮೂನೆಗಳು ಆ ಪ್ರದರ್ಶನದಲ್ಲಿ ಇಡಲ್ಪಟ್ಟಿರುವವು. ಮತ್ತು ಆ ಕಾಲದಲ್ಲಿ ಅರಿವೆಗಳನ್ನು ಹ್ಯಾಗೆ ನೆಯ್ಯುತ್ತಿದ್ದರು, ಹತ್ತಿಯನ್ನು ಹ್ಯಾಗೆ ಅರಿಯುತ್ತಿದ್ದರು, ಅರಿವೆಗಳಿಗೆ ಬಣ್ಣ ಎದ್ದುವ ಕ್ರಮವು ಹ್ಯಾಗಿತ್ತು, ಇವೇ ಮೊದಲಾದ ಸಂಗತಿಗಳನ್ನು ಪ್ರತ್ಯಕ್ಷವಾಗಿ ಮಾಡಿ ತೋರಿಸತಕ್ಕವರಿರುವರು. ಇದಲ್ಲದೆ

ಬೇರೆಬೇರೆ ಪ್ರಕಾರದ ಹತ್ತಿ, ಉಣ್ಣೆ, ರೇಶಿಮೆ, ಜಮಖಾನೆ, ಬ್ಲಾಂ ಕೇಟು, ಶಿಲ್ಪಕಾರ್ಯಗಳು, ಚಿತ್ರಗಳು, ಕೆತ್ತಿಗೆಯ ಕೆಲಸಗಳು, ಕೋಡು, ಅನೇಹಲ್ಲಿನ ಮೇಲಿನ ಕೆಲಸಗಳು, ಇತ್ಯಾದಿ ನಾನಾಪ್ರಕಾರದ ವಸ್ತುಗ ಳನ್ನು ಅಲ್ಲಿ ಇಡತಕ್ಕವರಿರುವರು. ಈ ಪ್ರದರ್ಶನಕ್ಕೆ ಪ್ರೇಕ್ಷಣೀಯ ವಾದ ಇನ್ನೊಂದು ಮಹತ್ವದ ಅಂಗವಿರುವದು. ಅದು ಯಾವದೆಂದರೆ, ಅಲ್ಲಿ ಮಾಡಿರುವ ಹಿಮಾಲಯ ಪರ್ವತದ ಒಂದು ಭಾಗವನ್ನೂ ಅದ ರೊಳಗಿಂದ ಹಾಯ್ದು ಹೋಗುವ ಒಂದು ಉಗಿಬಂಡಿಯ ಮಾರ್ಗವನ್ನೂ ತೋರಿಸುವ ಮಾದರಿಯು. ಇದು ಸುಮಾರು ಒಂದು ಮೈಲು ಉದ್ದ ವಾಗಿರುವದು. ಇದನ್ನು ಸಿದ್ಧಮಾಡಲಿಕ್ಕೆ ಒಂದು ಲಕ್ಷ ರೂಪಾಯಿಗಳು ವೆಚ್ಚವಾಗಿರುವವು.

ಈ ಮೇರೆಗೆ ಬಡವರ ಮನೆಗೆ ಭಾಗೀರಥಿ ಬಂದಂತೆ ಅಪರೂಪ ವಾಗಿ ಈ ದೇಶಕ್ಕೆ ಬಂದ ನಮ್ಮ ಬಾದಶಹರವರ ಸ್ವಾಗತದ ಸಲು ವಾಗಿ ಮುಂಬಯಿಯ ನಿವಾಸಿಗಳು ಮಿಗಿಲಾದ ಸಿದ್ಧತೆಯನ್ನು ಮಾಡಿರು ವರು. ಇದರಂತೆಯೇ ಹಿಂದುಸ್ತಾನದ ಯಾವ ಯಾವ ಸ್ಥಳಗಳ ನಾಗ ರಿಕರಿಗೆ ಚಕ್ರವರ್ತಿಗಳ ದರ್ಶನದ ಅಪೂರ್ವ ಲಾಭವಾಗತಕ್ಕದ್ದಿರುವ ದೋ ಅವರೆಲ್ಲರೂ ತಮ್ಮ ತಮ್ಮ ನಗರಗಳು ಅತ್ಯಂತ ಶೋಭಾಯ ಮಾನವಾಗಿ ಕಂಗೊಳಿಸುವಂತೆ ಯತ್ನಿಸುತ್ತಿರುವರು. ಇಷ್ಟೇ ಅಲ್ಲ ಸಿಂದುಸ್ತಾನದ ಸಾರ್ವಭೌಮರಾದ ಇಂಗ್ಲಂಡದ ಅರಸರು ಹಿಂದು ಸ್ತಾನದಲ್ಲಿಯೇ ಸಿಂಹಾಸನಾರೂಢರಾಗುವ ಈ ಅಪೂರ್ವವಾದಂಥ, ಅಥ ಪೂರ್ವವಾದಂಥ ಸಮಾರಂಭದ ದಿವಸವನ್ನು ನಗರವಾಸಿಗಳಂತೂ ಇರಲಿ, ಪ್ರತಿ ಒಂದು ಗ್ರಾಮದ ನಿವಾಸಿಗಳೂ ಉತ್ಸಾಹದಿಂದ ಸಾಂಗಗೊಳಿಸುವಲ್ಲಿ ತತ್ಪರರಾಗಿರುವರು. ಈ ಶುಭ ದಿವಸವು ಹಿಂದುಸ್ತಾನಕ್ಕೆ ಅತ್ಯಂತ ಶುಭಪ್ರದವಾಗಿ ಹಿಂದುಸ್ತಾನದ ಇತಿಹಾಸದಲ್ಲಿ ಚಿರಸ್ಮರಣೀಯವಾಗುವ ದೆಂಬದಕ್ಕೆ ಸಂದೇಹವಿಲ್ಲ.

ದೇವರು ನಮ್ಮ ಚಕ್ರವರ್ತಿಗಳನ್ನು ರಕ್ಷಿಸಲಿ.

ವದ-ರಾಗ-ಶಂಕರಾಭರಣ-ತಾಳರೂಪಕ.

ಗಾಡ್ ಸೇವ್ಹ ದೀ ಕಿಂಗ್ (GOD SAVE THE KING) ಎಂಬ ಇಂಗ್ಲೀಷ ರಾಷ್ಟ್ರೀಯ ಗೀತದ ಅರ್ಥವುಳ್ಳದ್ದು. ದಾಟಿಯಾದರೂ ಅದೇ ಗೀತದಂತೆ. ಪ್ರತಿಅರು ಮಾತ್ರೆಗಳ ಗಣದಲ್ಲಿ ೧,೩,೫, ನೇ ಮಾತ್ರೆಗಳಿಗೆತಾಳ ಹೊಡೆಯತಕ್ಕದ್ದು.

I ಸ್ಸ ಸ್ಸ ರಿ ನಿ ಸ್ಸ ರಿ ಗ ಗ್ಸ ಮ್ಮ ಗ್ಸ ರಿ ಸ್ಸ
ದೇ ವ ರು ನ ಮ್ಮ ಈ ಧೀ ರೋ ದಾ ತ್ತ ವ ರ

II ರಿ ಸ್ಸ ನೀ ನ್ಸ ಪ್ಸ ಪ್ಸ ಪ್ಸ ಮ್ಮ ಮ ಗ್ಸ
ಭೂ ವ ರ ನಂ ರ ಕ್ಷಿ ಸ ಲಿ ಸ ದಾ

III ಮ್ಮ ಮ್ಮ ಮ್ಮ ಮ್ಮ ಗ ರಿ ಗ್ಸ ಮಗ ರಿ ಸ ಗ್ಸ ಮ ಸ್ಸ
ಈ ವ ಸು ಧೀ ಶ ನು ಆ ವ ಗಂ ಬಾ ಳ ಲಿ

ಧ್ಸ ಮ ಗ್ಸ ರಿ ನ್ಸ
ಐ ದ ನೇ ಜಾರ್ಜ್

॥೧॥

I ಜ ಯ ಮ್ಮ ಳ್ವ ನು ವೈ ಭ ವ ಶಾ ಲಿ ಯು
II ಅ ತ ನಾ ಗಿ ಆ ವ ಗಂ ನ ಮ್ಮ ನು
II ಆ ಳು ವ ಹಾ ಗೆ ನೀ ಮಾ ಳ್ಪು ದು ತ ಪ್ಪ ದೆ

ಐ ದ ನೇ ಜಾರ್ಜ್ ॥೨॥

ಆ ತ ಗೆ ನಿ ನ್ನ ಯ ವ ರ ಗ ಳ್ಳಿ ಯ
I ಅ ತ್ಯು ತ್ತ ಮ ವ ರ ಗ ಳ ನ್ನು ನೀ
II ದ ಯ ದಿ ಪಾ ಲಿ ಸು ಆ ವ ಗಂ ಆ ಳ ಲಿ

ಐ ದ ನೇ ಜಾರ್ಜ್ ॥೩॥

ಶಾಲಾಪತ್ರಕ.

I ಅ ವ ನು ನ ಮ್ಮ ಯ ಕಾ ಯಿ ದೆ ಗ ಳ ನು
II ಕಾ ಪಾ ಡ ಲಿ ದೇ ವ ರು ಅ ತ ನ
III ಕಾ ಯ್ದ ಲಿ ಯ ನ್ನು ತ ಪ್ರಾ ರ್ಥ ನೆ ಮಾ ಡು ವಾ
ಇ ದ ನೇ ಜೊರ್ಜ್ ॥೪॥

1 ಮಾ ನ ಸ ದಿಂ ದ ಲೂ ಉ ಚ್ಚ ಸ್ವ ರ ದಿ ಯೂ
II ನಾ ವೆ ಲ್ಲ ರು ಪೊ ಗ ಳ್ವಂ ತಾ ತ ನಿಂ
III ಕಾ ರ್ಯ ಗ ಳಾ ಗ ಲಿ ರಾ ಜ ನಿಂ ದೇ ವ ರು
ರ ಕ್ಷಿ ಸ ಲಿ ॥೫॥

ಸೂಚನೆಗಳು:—

(೧) ಪದ್ಯದಲ್ಲಿ ತೋರಿಸಿದ ಈ ಕಂಸವು ಎರಡು ಸ್ವರಗಳನ್ನು ಕೂ ಡಿಸಿದ ಚಿನ್ಹವಿರುತ್ತದೆ.

(೨) ೧ನೇ ನುಡಿಯಲ್ಲಿ ಸ್ವರಗಳ ಬಲಕ್ಕೆ ಕೆಳಬದಿಗೆ ಬರೆದ ಅಂಕಿಯು ಆ ಸ್ವರವನ್ನು ಅಷ್ಟು ಮಾತ್ರೆಗಳ ತನಕ ಎಳೆಯಬೇಕೆಂಬದನ್ನು ಸೂಚಿಸುತ್ತದೆ.

(ಅ) ಈ ಗುರ್ತು ಕೋಮಲ ಸ್ವರವನ್ನು ಸೂಚಿಸುವದು.

(ಕ) ಸ್ವರದ ಕೆಳಗೆ ಇದ್ದ – ಈ ಗುರುತು ಮಂದರಸ ಸಪ್ತಕದ ಸ್ವರವನ್ನು ಸೂಚಿಸುವದು.

(೩) ಮೊದಲನೇ ನುಡಿಯೊಳಗಿನ ಪ್ರತಿಯೊಂದು ಚರಣದಮೇಲೆ ಹಾಕಿದ ಸ್ವರಗಳೇ ಉಳಿದ ನಾಲ್ಕೂ ನುಡಿಗಳ ಪ್ರತಿಯೊಂದು ಚರಣದ ಮೇಲೆ ಅಷ್ಟೇ ಮಾತ್ರೆಗಳಿಂದ ಕೂಡಿಕೊಂಡು ಇರುವವು.

ಧಾರವಾಡ ಟ್ರೇನಿಂಗ್ ಕಾಲೇಜ
ಫಾರ್ ಮೆನ್
ತಾ. ೧೨/೯/೧೧

B. P. Sawakar.
ಗಾಯನಮಾಸ್ತರ.

ಹಿಂದುಸ್ತಾನದ ಪ್ರಾಚೀನ ಗ್ರಂಥಸಂಗ್ರಹಾಲಯಗಳೂ ವಿದ್ಯಾಪೀಠಗಳೂ.

——:(೦):——

ಬ್ರಿಟಿಶರು ನಮ್ಮ ದೇಶವನ್ನು ಆಳಹತ್ತಿದಂದಿನಿಂದ ಇಲ್ಲಿ ಅನೇಕ ಸುಧಾರಣೆಗಳಾಗಿರುತ್ತವೆ. ನಮ್ಮ ದೇಶದಲ್ಲಿ ಆಗುವ ಪ್ರತಿಯೊಂದು ಸುಧಾರಣೆಯು ಮಾಡಿಕೆಯಾಗಿ ಪಾಶ್ಚಿಮಾತ್ಯರ ಅನುಕರಣವೆಂದು ತಿಳಿಯಲ್ಪಡುತ್ತದೆ. ಆದರೆ ಗ್ರಂಥಸಂಗ್ರಹಾಲಯಗಳ ವಿಷಯದಲ್ಲಿಯೂ ವಿದ್ಯಾಪೀಠಗಳ ವಿಷಯದಲ್ಲಿಯೂ ಮಾತ್ರ ಸರ್ವಾಂಶದಲ್ಲಿ ಹಾಗೆ ಅನ್ನಲಿಕ್ಕೂಡದು. ಪ್ರಾಚೀನಕಾಲದಲ್ಲಿ ನಮ್ಮ ದೇಶದಲ್ಲಿಯೂ, ಗ್ರಂಥಸಂಗ್ರಹಾಲಯಗಳೂ ವಿದ್ಯಾಪೀಠಗಳೂ ಇದ್ದವು. ಗ್ರೀಕ, ರೋಮ ಮೊದಲಾದ ಪ್ರಾಚೀನ ಪಾಶ್ಚಾತ್ಯ ರಾಷ್ಟ್ರಗಳು ಇನ್ನೂ ಉದಯ ಹೊಂದದೆ ಇದ್ದ ಕಾಲದಲ್ಲಿ ಆರ್ಯಾವರ್ತವು ವಿದ್ಯಾಸುಧಾರಣೆಯ ಶಿಖರದಲ್ಲಿ ವಿಹರಿಸುತ್ತಿತ್ತು. ನಮ್ಮ ಪ್ರಾಚೀನ ಪೂರ್ವಜರು ಜ್ಞಾನದ ಮಹಿಮೆಯನ್ನು ಚನ್ನಾಗಿ ಅರಿತಿದ್ದರು; "ಕ್ಷಯಂ ಹಿ ವಾಗ್ದೇವೀ ಪರಮೇಷ್ಠಿನಃ" ಈ ಅರ್ಥದ ವಾಕ್ಯಗಳು ಋಗ್ವೇದಂಥ ಪ್ರಾಚೀನ ಗ್ರಂಥಗಳಲ್ಲಿ ಅಲ್ಲಲ್ಲಿಗೆ ಇರುತ್ತವೆ. ಋಗ್ವೇದದ ಕಾಲವು ಕ್ರಿ. ಶ. ಪೂರ್ವದಲ್ಲಿ ಆರು ಸಾವಿರ ವರ್ಷಗಳ ಅಚೆಗೆ ಇರಬಹುದೆಂದು ವಿದ್ವಾಂಸರು ತರ್ಕಿಸುತ್ತಾರೆ. ಆಕಾಲದ ಗ್ರಂಥಗಳಲ್ಲಿ ಪರಾಪಶ್ಯಂತಿ, ಮಧ್ಯಮಾ, ವೈಖರೀ ಇತ್ಯಾದಿ ಬೇರೆಬೇರೆ ಪ್ರಕಾರದ ವಾಣಿಯ ಮಹತ್ವವು ವರ್ಣಿಸಲ್ಪಟ್ಟಿರುವದು.

ಈಗಿನಂತೆ ಪ್ರಾಚೀನ ಕಾಲದಲ್ಲಿ ಮುದ್ರಣ ಕಲೆಯಂಥ ಸಾಧನೆಗಳು ಉಪಲಬ್ಧವಿಲ್ಲದಿದ್ದರೂ ಆ ಕಾಲದವರು ಅತ್ಯಂತ ಪರಿಶ್ರಮವನ್ನು ಮಾಡಿ, ಕೈಯಿಂದ ಗ್ರಂಥಗಳನ್ನು ಬರೆದು ದೇಶದಲ್ಲಿ ಅಲ್ಲಲ್ಲಿಗೆ ಎಸ್ಟೊ ದೊಡ್ಡ ದೊಡ್ಡ ಗ್ರಂಥಸಂಗ್ರಹಾಲಯಗಳನ್ನು ಸ್ಥಾಪಿಸಿದ್ದರೆಂಬದನ್ನೂ ವಿದ್ಯಾಪೀಠಗಳನ್ನು ಸ್ಥಾಪಿಸಿ ರಾಷ್ಟ್ರದಲ್ಲಿ ಎಸ್ಟು ದೊಡ್ಡ ಜ್ಞಾನಸತ್ರವನ್ನು ಅಖಂಡವಾಗಿ ನಡಿಸಿದ್ದರೆಂಬದನ್ನೂ ಓದಿದರೆ ಆಶ್ಚರ್ಯವಾಗುತ್ತದೆ; ಮತ್ತು ಇಂದು ತರದ ಅಭಿಮಾನವೂ ಜಾಗೃತವಾಗುತ್ತದೆ. ಪ್ರಾಚೀನಕಾಲದ ಕೆಲವು ವಿದ್ಯಾಪೀಠಗಳ ನಾಮನಿರ್ದೇಶನವನ್ನು ಮಾತ್ರ ಇಲ್ಲಿ ಮಾಡುವೆವು:—

೧. ತಕ್ಷಶಿಲಾ ವಿದ್ಯಾಪೀಠವು:—ಬುದ್ಧನು ಹುಟ್ಟುವದಕ್ಕಿಂತ ೫೦೦. ೬೦೦ ವರ್ಷಗಳ ಪೂರ್ವದಲ್ಲಿ ಈ ವಿದ್ಯಾಪೀಠವು ಇತ್ತು. ಪಾಣಿನೀ, ಚಾಣಕ್ಯ, ಅತ್ರೇಯ, ಜೀವಕ ಈ ಮೊದಲಾದ ಮಹಾ ಪುರುಷರು ಇದೇ ವಿದ್ಯಾಪೀಠದಲ್ಲಿ ಕಲಿತರು. ಇಲ್ಲಿ ಹದಿನೆಂಟು ವಿದ್ಯೆಗಳು ಕಲಿಸಲ್ಪಡುತ್ತಿದ್ದವು.

೨. ಉದಂಡಪುರೀ ವಿದ್ಯಾಪೀಠವು:—ಇದನ್ನು ಮುಸಲ್ಮಾನರು ಇ. ಸ. ೧೨೦೨ನೇ ವರ್ಷ ಹಾಳು ಮಾಡಿದರು. ಈ ಪೀಠಕ್ಕೆ ಆರು ಪಾಠಶಾಲೆಗಳು ಜೋಡಿಸಲ್ಪಟ್ಟಿದ್ದು ಆರು ಸಾವಿರ ವಿದ್ಯಾರ್ಥಿಗಳು ಕಲಿಯುತ್ತಿದ್ದರು. ಅಲ್ಲಿ ವಿದ್ಯಾರ್ಥಿಗಳ ಸಲುವಾಗಿ ಆರು ಅನ್ನಛತ್ರಗಳು ಇದ್ದವು. ೧೦೦ ಮಂದಿ ಶಿಕ್ಷಕರು, ವೇದಾಂತ, ತತ್ವಜ್ಞಾನ, ವೈದ್ಯಕ, ಗಣಿತ, ಇತ್ಯಾದಿ ವಿಷಯಗಳನ್ನು ಕಲಿಸುತ್ತಿದ್ದರು.

೩. ನಾಲಂದದ ವಿದ್ಯಾಪೀಠವು (ಬಹಾರದಲ್ಲಿ):—ಈ ಪೀಠದಲ್ಲಿ ಹತ್ತು ಸಾವಿರ ವಿದ್ಯಾರ್ಥಿಗಳೂ, ೧೫೦೦ ಮಂದಿ ಶಿಕ್ಷಕರೂ ಇದ್ದರು. 'ರತ್ನೋದಧಿ' ಎಂಬ ಹೆಸರಿನದೊಂದು ಗ್ರಂಥಸಂಗ್ರಹಾಲಯವು ಈ ಪೀಠಕ್ಕೆ ಹೊಂದಿಕೊಂಡಿತ್ತು. ಇದಕ್ಕೆ ಒಂಭತ್ತು ಅಂತಸ್ತುಗಳು ಇದ್ದವೆಂತಲೂ, ಇದರಲ್ಲಿ ಅಪಾರವಾದ ಗ್ರಂಥಸಂಪತ್ತಿಯು ಇತ್ತೆಂತಲೂ, ಆಖ್ಯಾಯಿಕೆಗಳುಂಟು.

ಈ ಮೇರೆಗೆ ಪ್ರಾಚೀನಕಾಲದಲ್ಲಿ ಎಷ್ಟೋ ಹೆಸರಾದ ವಿದ್ಯಾಪೀಠಗಳು ಇದ್ದವು. ಕಾಶ್ಮೀರ, ನೇಪಾಳ, ವಿದರ್ಭ ಜಯಪುರ, ಜೋಧಪುರ, ಅಲವಾರ, ಅಮದಾಬಾದ, ವಢವಾಣ, ಸಿದ್ಧಪೂರ, ಕಾಂಚೀ, ಮೈಸೂರ, ತಂಜಾವರ ಮುಂತಾದ ಸ್ಥಳಗಳಲ್ಲಿರುವ ಪ್ರಾಚೀನ ಗ್ರಂಥಸಂಗ್ರಹಾಲಯಗಳು ಸಹ ಬಹಳ ಪ್ರಸಿದ್ಧವಾಗಿದ್ದವು.

ಈ ಸ್ಥಳವು ಪ್ರಾಚೀನ ಕಾಲದಲ್ಲಿ ಈಗಿನ ರಾಜಗಿರಿಯ ವಾಯವ್ಯಕ್ಕೆ ಇತ್ತು. ಈಗ ಅಲ್ಲಿ ಕೆಲವು ಹಾಳಾದ ಇಮಾರತುಗಳು ಮಾತ್ರ, ಎಷ್ಟೋ ಮೈಲುಗಳನವರೆಗೆ ಇರುತ್ತವೆ.

ಗಣಿತಶಾಸ್ತ್ರದ ಪ್ರಾಚೀನ ಇತಿಹಾಸ.

—(೦)—

(೧೯೦೭ನೇ ಇಸವಿಯ ಜೂನ ತಿಂಗಳ ಸಂಚಿಕೆಯಿಂದ ಮುಂದೆ ನಾಗಿದ್ದು.)

ಆದ್ದರಿಂದ ಈ ಪದ್ಧತಿಯಲ್ಲಿ ಅಂಕೆಗಳ ಸ್ಥಾನಗತ ಬೆಲೆ ಮತ್ತು ಮೂಲ ಬೆಲೆ ಎಂಬ ಎರಡು ಭಾಗಗಳಾದವು. ಇವರು ಮೇಲೆ ಹೇಳಿದಂತೆ ಕವಿತೆಯಲ್ಲಿ ಛಂದಸ್ಸಿಗೆ ಅನುಕೂಲವಾಗಬೇಕೆಂದು ಸಂಖ್ಯೆಗಳಿಗೆ ಬೇರ ಬೇರೆ ಪರ್ಯಾಯನಾಮಗಳನ್ನು ಕಲ್ಪಿಸಿದ್ದು ಹ್ಯಾಗಂದರೆ:— ೧ಕ್ಕೆ ತತ್ವ, ಬ್ರಹ್ಮ, ಚಂದ್ರ. ೪ಕ್ಕೆ ವೇದ, ಸಮುದ್ರ. ೭ಕ್ಕೆ ಕುಲಪರ್ವತ, ೮ಕ್ಕೆ ವಸು. ೯ಕ್ಕೆ ಅಂಕೆಗಳು. ೧೫ಕ್ಕೆ ಪಕ್ಷ. ಇತ್ಯಾದಿ.

ಇವರು ಬೇರೀಜನ್ನು ಎಡದಿಂದ ಬಲಕ್ಕೆ ಮಾಡುತ್ತಿದ್ದದು. ಉದಾ:—

೨೫೪
೬೭೩
೯೨೭=೯೨೭.

ವಜಾಬಾಕಿಯನ್ನು ಸಹ ಹೀಗೆಯೇ ಮಾಡುತ್ತಿದ್ದರು. ಉದಾ:—

೬೫೩
೭೪೮
೩೦೫=೩೦೫

ಇವರು ಗುಣಾಕಾರವನ್ನು ಎರಡು ಪ್ರಕಾರಗಳಿಂದ ಮಾಡುತ್ತಿದ್ದರು. ಉದಾ:—

ಗುಣೇದಕ್ಕೆ:—

	೬	೫	೩	
೩	೧ / ೮	೧ / ೫	೦ / ೯	೩
೪	೨ / ೪	೨ / ೦	೧ / ೨	೪
೮	೪ / ೮	೪ / ೦	೨ / ೪	೮

೨ ೩ ೨ ೩ ೪ ೪ = ೨೩೨೩೪೪

ಅನೇದಕ್ಕೆ $-೩೪೫ \times ೫೪ = \frac{೧೭೩೫೫}{೧೩೮೦}$ ಇದು ಈಗಿನ ಗುಣಾಕಾರದ ಪದ್ಧತಿಯಂತೆ ಇರುತ್ತದೆ.

ಇವರ ಬೇರಿಜು, ವಜಾಬಾಕಿಗಳ ಪದ್ಧತಿಯಲ್ಲಿ ಎಡದಿಂದ ಬಲಕ್ಕೆ ಹೋಗುವದಿದ್ದದರಿಂದ ಒಮ್ಮೆ ಬರೆದ ಅಂಕೆಗಳನ್ನು ಹೊಡೆದು ಪುನಃ ಬೇರೆ ಅಂಕೆಗಳನ್ನು ಬರೆಯ ಬೇಕಾಗುತ್ತಿತ್ತು. ಇವರು ಕಲ್ಲಿನ ಹಲಿಗೆಯಲ್ಲಿ ಕೆಂಪು ದೂಳು ಹಾಸಿ ಅದರ ಮೇಲೆ ಕಡ್ಡಿಯಂಥ ಮುಳ್ಳಿನಿಂದ ಗಣಿತ ಮಾಡುತ್ತಿದ್ದರು. ಇಲ್ಲವೆ ಕರೇ ಹಲಿಗೆಯಲ್ಲಿ ಜಳೀರಸ ಮತ್ತು ಲೆಕ್ಕಣಿಕೆಯಿಂದ ಬರೆಯುತ್ತಿದ್ದರು. ಆ ರಸವು ಕೈಯಿಂದಲೇ ಬರಿಸಲಿಕ್ಕೆ ಬರುವಂಥದಿತ್ತು. ಈ ರೀತಿ ಆಯಾಸಗೊಂಡು ಗಣಿತ ಮಾಡುವ ಕಾಲಕ್ಕಿಂತ ಬೇಕಾದಷ್ಟು ಕಾಗದ, ಸ್ಲೇಟು, ಲೆಕ್ಕಣಿಕೆ, ಪೆನ್ಸಿಲ್‌ಗಳುಳ್ಳ ಈಗಿನ ಕಾಲವೇ ನಮಗೆ ಆನಂದಕರವೆಂಬದರಲ್ಲಿ ಸಂಶಯವೇನು? ಬೇರೀಜು ಮೊದಲಾದ ಕೃತಿಗಳಲ್ಲಿ ೯ರ ತಾಳೆಯಿಂದ ಉತ್ತರವನ್ನು ಪರೀಕ್ಷಿಸುವ ಯುಕ್ತಿಯನ್ನು ಇವರೇ ಹುಡುಕಿ ತೆಗೆದರು. ಆದರೆ ಅದು ಕಟ್ಟು ಕಡೆಯ ತಾಳೆಯಲ್ಲ. ಇವರಿಗೆ ವಿರುದ್ಧ ಗತಿಯಿಂದ ಬರುವ ಗಣಿತಗಳು ಹಚ್ಚು ಸೇರುತ್ತಿದ್ದವು. ಉದಾ:—

(೧) ಒಂದು ಹಂಸ ಪಕ್ಷಿಯ ಸಮೂಹದಿಂದ ಅದರ ವರ್ಗ ಮೂಲದ ಹತ್ತುಮಡಿ ಪಕ್ಷಿಗಳು ಮಾನಸ ಸರೋವರವನ್ನು ಕುರಿತು ಹೋದವು. ಅದರ $\frac{೩}{೪}$ ದಷ್ಟು ಪಕ್ಷಿಗಳು ಮತ್ತೊಂದು ಕಡೆ ವಿಹಾರಾರ್ಥವಾಗಿ ಹೋದವು. ಉಳಿದ ೨ ಪಕ್ಷಿಗಳು ಅಲ್ಲಿಯೇ ಆಡುತ್ತಿದ್ದವು. ಆದರೆ ಆ ಸಮೂಹದಲ್ಲಿದ್ದ ಹಂಸಗಳೆಷ್ಟು?

(೨) ಒಂದು ಕಮಲದ ಬುಟ್ಟಿಯೊಳಗಿಂದ ಅವುಗಳ $\frac{೧}{೩}$ ವನ್ನು ಶಿವಲಯಕ್ಕೆ $\frac{೧}{೫}$ ವನ್ನು ವಿಷ್ಣುಮಂದಿರಕ್ಕೆ $\frac{೧}{೬}$ ವನ್ನು ಸೂರ್ಯಾರಾಧನೆಗೆ $\frac{೧}{೧೦}$ ವನ್ನು ವಾಗ್ದೇವತಾರ್ಚನೆಗೆ ಕೊಡಲು ಅದರಲ್ಲಿ ೬ ಕಮಲಗಳು ಉಳಿದವು. ಅದರ ಮೊದಲು ಅದರಲ್ಲಿ ಎಷ್ಟು ಕಮಲಗಳಿದ್ದವು? ಇತ್ಯಾದಿ.

ಇವರು ಅಂಕಗಣಿತದಲ್ಲಿ ಬಡ್ಡಿ, ಮುರಕೊಳ್ಳುವ ಬಡ್ಡಿ, ಪಾಲು ಹಂಚುವದು, ಗಣಿತಶ್ರೇಢಿ, ಭೂಮಿತಿಶ್ರೇಢಿ ಪದಗಳ ಬೇರಿಜು ಮಾಡುವದು, ಗಣಿತಪಾಶ, ಅಂಕಪಾಶ (ಇದು ಛಂದಸ್ಸಿನಲ್ಲಿ ಬಹಳ ಉಪಯುಕ್ತವಾದದ್ದು) ಒಂದು ಚೌಕಸದಲ್ಲಿ ನಾಲ್ಕು ಕಡೆಯಿಂದ ಸರಿಯಾದ ಸಂಖ್ಯೆ

ಚೌರಸಗಳನ್ನು ಮಾಡಿ ಅವುಗಳಲ್ಲಿ ಬೇರೆ ಬೇರೆ ಸಂಖ್ಯೆಗಳನ್ನು ಬರೆದು ಎಲ್ಲಾ ಕಡೆಯಿಂದ ಜೋಡಿಸು ಸರಿಯಾಗುವಂತೆ ಮಾಡುವದು, (ಉದಾ :—

೪	೯	೨	೧೫
೩	೫	೭	೧೫
೮	೧	೬	೧೫
೧೫	೧೫	೧೫	೧೫

ಇದನ್ನು ಪ್ರತಿಯೊಂದು ಸಾಲಿನಲ್ಲಿಯೂ, ಕರ್ಣರೇಖೆಯಲ್ಲಿಯೂ ನೋಡಿದರೆ ಜೋಡಿಸು ಸರಿಯಾಗಿದ್ದದ್ದು ಕಂಡುಬರುತ್ತದೆ.) ಋಣಪದಗಳ ಕಲ್ಪನೆ, ವರ್ಗ ಸವಿಾಕರಣದಲ್ಲಿ ಋಣಪದಗಳನ್ನು ಸಹ ಸ್ವೀಕರಿಸಿದ್ದು, ವರ್ಗಮೂಲ–ಘನಮೂಲಗಳ ಬೀಜಗಣಿತದೊಳಗಿನ ರಚನೆಯಂತೆ ಉಪಪತ್ತಿ (ಸ್ಪಷ್ಟೀಕರಣ), ಅನಿಯಮಿತ ಉತ್ತರಗಳ ಸವಿಾಕರಣ ಇವುಗಳನ್ನೆಲ್ಲ ಶೋಧಮಾಡಿ ಇವುಗಳ ನೇಮುಗಳನ್ನು ಬರೆದಿಟ್ಟರು. ಇದರಲ್ಲಿ ಕಡೆಯದಾದ ಅನಿಯಮಿತ ಸವಿಾಕರಣದ ಶೋಧವನ್ನು ಭಾಸ್ಕರಾಚಾರ್ಯನ ತರುವಾಯ ನೂರು ವರ್ಷದ ಮೇಲೆ ಸ್ವಿತ್ಸರ್ಲಂಡದಲ್ಲಿ ಹುಟ್ಟಿದ ಗಣಿತಜ್ಞನಾದ ಆಯ್ಲೆರನೆಂಬವನು ಸ್ವತಂತ್ರವಾಗಿ ಹುಡುಕಿ ತೆಗೆದನು. ಅವನ ರೀತಿಯು ಹಿಂದೂ ಜನರ ರೀತಿಯಂತೆಯೇ ಇತ್ತು. ಇವರ ಕಾಲಕ್ಕೆ ಘಿಮಿತಿಯು ಮಾತ್ರ ಬಡಸ್ತಿಕೆಯಲ್ಲಿತ್ತು. ಇವರು ಯುಕ್ಲಿಡಿನ ಭೂಮಿತಿಯ ೧೪ನೇ ಪುಸ್ತಕದೊಳಗಿನ ೪೭ನೇ ಸಿದ್ಧಾಂತವನ್ನು ಪ್ರಮಾಣಗಣಿತದ ಸಹಾಯದಿಂದಲೂ, ಆಕೃತಿವಿನ್ಯಾಸದಿಂದಲೂ ಸ್ಪಷ್ಟವಾಡಿ ತೋರಿಸಿದರು. ಆಕೃತಿಯಿಂದ ಸ್ಪಷ್ಟೀಕರಿಸಿದ್ದು ಹ್ಯಾಗೆಂದರೆ:—



ಇವರಿಗೆ ಜ್ಯೋತಿಷ ವಿಷಯವು ಹೆಚ್ಚು ಪ್ರಿಯವಾಗಿದ್ದರಿಂದ ಕ್ರಮೇಣ ತ್ರಿಕೋಣಮಿತಿ ಬೇಕಾಯಿತು. ಅದರಲ್ಲಿ ಇವರು ಎಷ್ಟೋ ಶೋಧಗಳನ್ನು ಮಾಡಿದ್ದಾರೆ. ಬ್ರಹ್ಮಗುಪ್ತನು ಕ್ಷೇತ್ರಫಲ ಸಂಬಂಧದಿಂದ ಗೊತ್ತು ಮಾಡಿದ ಎರಡು ನೇಮಗಳು ಚನ್ನಾಗಿ ಉಂಟು.

೧. ತ್ರಿಕೋಣದ ಕ್ಷೇತ್ರಫಲದ ನಿಯಮವು:—



$$\sqrt{\frac{\text{ಅ}+\text{ಬ}+\text{ಕ}}{೨}\times\frac{\text{ಅ}+\text{ಬ}-\text{ಅ}}{೨}\times\frac{\text{ಅ}+\text{ಕ}-\text{ಬ}}{೨}\times\frac{\text{ಅ}+\text{ಬ}-\text{ಕ}}{೨}} = \text{ತ್ರಿ}$$

ಕೋಣಕ್ಷೇತ್ರ. ಇದರಂತೆ



ಚತುಷ್ಕೋಣದಲ್ಲಿ ಯಾದರು ಇದೇ ಪ್ರಕಾರ ಕ್ಷೇತ್ರಫಲ ತೆಗೆಯುವ ನೇಮವನ್ನು ಹೇಳಿದ್ದಾನೆ.

ಅರಬರು:—ರೋಮನ್ ಜನರು ರಾಜಕೀಯ ಮುಂತಾದ ಐಹಿಕ ವಿಷಯಗಳ ಕಡೆಗೆ ಹೆಚ್ಚಿಗೆ ಲಕ್ಷ್ಯಪೂರೈಸಿದರಿಂದ ವಿದ್ಯಾದೇವಿಗೆ ಅವರು ದೂರಾದರು. ಅವರು ಕಲಿಯತಕ್ಕ ವಿಷಯಗಳ ಪ್ರಯೋಜನದ ಕಡೆಗೇ ನೋಡಿದರು. ಆದ್ದರಿಂದ ಅವರು ಯಾವ ವಿದ್ಯೆಯ ಅಭಿವೃದ್ಧಿಗೂ ಕಾರಣವಾಗಲಿಲ್ಲ. ಕ್ರಿ. ಶ. ದ ೬೨೨ ರ ಮುಂದೆ, ಅಂದರೆ ನಿಜವಾದ ತರುವಾಯ ಮುಸಲ್ಮಾನರು ಪೂರ್ವ ಪಶ್ಚಿಮದ ಕಡೆಗೆ ಹರಿಬಿದ್ದು ಎಲ್ಲಾ ದೇಶಗಳನ್ನು ಗೆಲ್ಲುತ್ತಾ ಹೋಗುವಾಗ ಪೂರ್ವಕ್ಕೆ ಹಿಂದುಸ್ತಾನದ ತನಕ ಪಶ್ಚಿಮಕ್ಕೆ ಸ್ಪೇನವ ತನಕ ರಾಜ್ಯವನ್ನು ಆಕ್ರಮಿಸಿದರು. ಅಲ್ಲಿಂದ ಕೆಲವು ವರ್ಷಗಳನಂತರ ಅವರಲ್ಲಿ ಖಲೀಫರ ಗಾದಿಯ ಸಲುವಾಗಿ ಜಗಳ ಹುಟ್ಟಿ ಎರಡು ಪಕ್ಷಗಳಾದವು. ಒಂದು ಪಕ್ಷದವರು ಸ್ಪೇನದಲ್ಲಿಯೂ ಇನ್ನೊಂದು ಪಕ್ಷದವರು ಬಗದಾದದಲ್ಲಿಯೂ ಖಲೀಫರ ಗಾದಿಯನ್ನು ಸ್ಥಾಪಿಸಿದರು. ಬಗದಾದದಲ್ಲಿ ಆಳಿದ ಅಬ್ಬಾಸಿದಾಸ, ಅಲರ್‌ಶೀದ, ಅಲ್‌ಮಾನ್ಸುರ ಮುಂತಾದವರು ವಿದ್ಯಾಪಕ್ಷಪಾತಿಗಳಾಗಿದ್ದು ನಾನಾವಿಷಯಗಳ ಪಂಡಿತರನ್ನು ಬೇರೆ ಬೇರೆ ದೇಶಗಳಿಂದ ತರಿಸಿ ಅವರವರ ಭಾಷೆಯೊಳಗಿನ ಗ್ರಂಥಗಳನ್ನು ಭಾಷಾಂತರಮಾಡಿಸಿದರು. ಹೊರತು ಮುಸಲ್ಮಾನರು ಸ್ವಂತವಾಗಿ ಏನೂ ಶೋಧಮಾಡಿಲ್ಲ. ಆದರೂ ಇವರು ಜ್ಯೋತಿಷದಲ್ಲಿ ಎಷ್ಟೋ ಪರಿಶ್ರಮ

ನಾಗಿರುವರು. ಯಾಕಂದರೆ ಇವರಿಗೆ ಕಾಲಕಾಲಕ್ಕೆ ಮಾಡುವ ದೇವರ ಸ್ಪರ್ಧನೆ ಮುಂತಾದ ಕೆಲಸಗಳಿಗೆ ವೇಳೆಯನು ನಿರ್ಣಯಿಸುವದು ಅವ ಶ್ಯವಾಗಿತ್ತು. ಇವರು ಆರ್ಯರು ಮಾಡಿದ ಶೋಧಗಳನ್ನು ಬರೆಯಿಸಿ ಕಾದಿಟ್ಟರು ಎಂಬ ಶ್ರೇಯಕ್ಕೆ ಪಾತ್ರ ಪಾತ್ರರು.

ಸದ್ಯದ ಪೂರ್ಣದಶೆಯಲ್ಲಿದ್ದ ಗಣಿತದ ಸ್ಥಿತಿ:—ಸುಮಾರು ಕ್ರಿ. ಶ. ಪೂರ್ವ ೩೦೦ ವರ್ಷಗಳಲ್ಲಿ ಯುರೋಪಾದ ಉತ್ತರದಿಕ್ಕಿನ ಗೋಥ ಎಂಬ ಕಾಡು ಜನರು ರೋಮ್ ತಾಜ್ಯದ ಮೇಲೆ ಬಿದ್ದು ಅದನ್ನೂ ಇಡೀ ಯುರೋಪ ವನ್ನೂ ಆಕ್ರಮಿಸಿದರು. ಕೆಲವು ಕಾಲದ ನಂತರ ಕ್ರಿಸ್ತೋಧರ್ಮವು ಎಲ್ಲಾ ಕಡೆಯಲ್ಲಿ ಪ್ರಸಾರವಾಯ್ತು. ಮತ್ತು ಆ ಧರ್ಮದ "ಮಂಕ" ಎಂಬ ಸನ್ಯಾಸಿಗಳು (ಇವರಿಗೆ ಸಂಸಾರದ ಯಾವ ತೊಂದರೆಗಳು ಇಲ್ಲದರಿಂದ) ತಮ್ಮ ಆಯುಷ್ಯವನ್ನು ವಿದ್ಯಾವ್ಯಾಸಂಗದಲ್ಲಿಯೇ ಕಳೆದರು. ಇವರಿಂದ ಗಣಿತವಾದರು ಅಭಿವೃದ್ಧಿ ಹೊಂದಿತು. ಇವರು ಅರಬೀ ಗ್ರಂಥಗಳನ್ನು ಭಾಷಾಂತರಮಾಡಿ ಗ್ರೀಕಭಾಷೆ ಕಲಿತು ಪ್ರಾಚೀನ ಕಾಲದ ಇಡೀ ಸಂಚ ಯದ ಸಂಗ್ರಹಮಾಡಿದರು. ಆ ಬಳಿಕ ಈ ವಿದ್ಯೆಯ ಬೆಳವಣಿಗೆಗೆ ಭರ ದಿಂದ ಆರಂಭವಾಯಿತು. ಈ ಪ್ರಕಾರ ಗಣಿತ ಶಾಸ್ತ್ರವನ್ನು ಈಗಿನ ಶ್ರೇಷ್ಠ ಪದಕ್ಕೆ ತಂದಿಟ್ಟವರು ಯುರೋಪದವರೇ. ಅವರಲ್ಲಿ ಪ್ರಮುಖರು ಯಾರೆಂದರೆ:—ವಿಯೆಟ್ಟಾ, ಡೆಕಾರ್ಟೆ, ನ್ಯೂಟನ್, ಅಯ್ಲರ, ಲೆಗ್ರೆಂಜ, ಲಾಪ್ಲಾಸ್ ಇತ್ಯಾದಿ ಅಸಾಮಾನ್ಯವ್ಯಕ್ತಿಗಳು. ಆದ್ದರಿಂದ ಈಗಿನ ಪೂರ್ಣದಶೆ ಯಲ್ಲಿದ್ದ ಗಣಿತಶಾಸ್ತ್ರವು ಈ ಮಹಾಪುರುಷರಿಗೆ ಋಣಿಯಾಗಿರುವದು. ಅದಕ್ಕೇ ಇವರ ಅಭಿಧಾನಗಳು ಲೋಕದಲ್ಲಿ ಶಾಶ್ವತವೂ ಅಜರಾಮರವೂ ಆಗಿರುವವು.

ಸುಂಕೇರಿ
ತಾ॥ ಬಿಲ್ಲಗಿರಿ

ವೆಂಕಟೇಶ ರಾ. ಪ್ರಭು,
ಹೆಡ್‌ಮಾಸ್ತರ ಸುಂಕೇರಿಶಾಲೆ.
ಮ. ರಾ. ಸುಬಟಣಕರ ಇವರ ಬಗ್ಗೆ

ಹಿಂದುಸ್ತಾನದ ಮಳೆಗಾಲವೂ ಚಳಿಗಾಲವೂ

ಕಳೆದ ತಿಂಗಳ ಸಂಚಿಕೆಯಲ್ಲಿ ಮುದ್ರಿಸಿದ "ಹಿಂದುಸ್ತಾನದ ಬೇಸಿಗೆಕಾಲ" ಎಂಬ ಲೇಖನದಲ್ಲಿ ಹೇಳಿದಂತೆ ಮಾರ್ಚ್ ತಿಂಗಳಿನಿಂದ ಜೂನ್ ವರೆಗೆ ಸೂರ್ಯನ ಪ್ರಖರವಾದ ಕಿರಣಗಳು ಜನರನ್ನು ಸಂತಾಪಗೊಳಿಸುತ್ತಿರುವಾಗಲೇ ಜನರಿಗೆ ಹಿತವನ್ನುಂಟು ಮಾಡುವ ಕಾರ್ಯದಲ್ಲಿಯೂ ತೊಡಗಿರುತ್ತವೆ. ಅದು ಹ್ಯಾಗಂದರೆ, ಬೇಸಿಗೆಯ ಸೆಕೆಯಿಂದ ಹಿಂದಿ ಮಹಾಸಾಗರದ ನೀರು ಉಗಿಯಾಗಿ ಹವೆಯಲ್ಲಿ ಒಟ್ಟು ಗೂಡಿ ಮೇಘಗಳ ತಯಾರಾಗುತ್ತಿರುತ್ತವೆ. ಅವು ಗಾಳಿಗಳಿಂದ ಮುಂದೆ ಒಯ್ಯಲ್ಪಡುವಾಗ ತಣ್ಣಗಿನ ಹವೆಯ ಸ್ಪರ್ಶದಿಂದ ನೀರಾಗಿ ಮಳೆಯ ರೂಪದಿಂದ ಪೃಥ್ವಿಯ ಮೇಲೆ ಬೀಳುತ್ತವೆ. ಭೂಮಿಯ ಮೇಲಿನ ಹವೆಯು ಮಹಾಸಾಗರದ ಮೇಲಿನ ಹವೆಗಿಂತ ಹೆಚ್ಚು ಬೇಗ ಕಾಯುವದರಿಂದ, ಹಿಂದುಸ್ತಾನದ ಭೂಮಿಯ ಮೇಲಿನ ವಾತಾವರಣದ ಭಾರವು ಕಡಿಮೆಯಾಗಿ ಹಿಂದೀಮಹಾಸಾಗರದ ಕಡೆಯಿಂದ ಹಿಂದುಸ್ತಾನದ ಭೂಮಿಯ ಮೇಲೆ ಗಾಳಿಯು ಬೀಸಹತ್ತುತ್ತದೆ ಈ ಗಾಳಿಯು ಮೇ ತಿಂಗಳಿನಿಂದ ಅಕ್ಟೋಬರದ ವರೆಗೆ, ಅಂದರೆ ಸೂರ್ಯನು ವಿಷುವ ವೃತ್ತವನ್ನು ದಾಟಿ ೨೩ ಅಂಶ ದಕ್ಷಿಣಕ್ಕೆ ಹೋಗುವವರೆಗೆ ಬೀಸುತ್ತದೆ. ಇದಕ್ಕೆ ನೈಋತ್ಯದ ಮಳೆಗಾಲದ ಗಾಳಿಯೆಂದೆನ್ನುತ್ತಾರೆ. ಭೂಮಿಯ ಮೇಲೆ ಇದು ಬೀಸುವಾಗ ಹಲವು ಬೇರೆ ಕಾರಣಗಳಿಂದ ಇದರ ಒಕ್ಕಿನಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗುತ್ತದೆ. ಅದರಿಂದಲೇ ಈ ಗಾಳಿಯು ನಮಗೆ ನೈಋತ್ಯದ ಗಾಳಿಯೆಂದು ತೋರದೆ ಪಡುವಲಗಾಳಿಯಾಗಿ ತೋರುತ್ತದೆ. ಇದು ಸಮುದ್ರದ ಮೇಲಿಂದ ಬರುವದರಿಂದ ಆರ್ದ್ರತ್ವದಿಂದ ಕೂಡಿಕೊಂಡಿರುತ್ತದೆ. ಇದು ಮಳೆ ತರುವ ಗಾಳಿಯಾಗಿರುವದರಿಂದಲೂ, ನಮ್ಮ ಜೀವನವು ಇದನ್ನು ಅವಲಂಬಿಸಿರುವದರಿಂದಲೂ, ನಮಗೆ ಇದರ ಮಹತ್ವವು ಬಹಳವಾಗಿರುತ್ತದೆ.

ಹವೆಯೊಳಗಿನ ಉಗಿಯು ಮೋಡಗಳು ಪರ್ವತಗಳೂ ವೃಕ್ಷಗಳೂ ಇದ್ದಲ್ಲಿಯ ತಂಪಾದ ಹವೆಯ ಪ್ರದೇಶಕ್ಕೆ ಬಂದವೆಂದರೆ, ಉಗಿಯು ನೀರಿನ ರೂಪಹೊಂದಿ, ಆಯಾ ಪ್ರದೇಶಗಳಲ್ಲಿ ಮಳೆಗರೆಯುತ್ತದೆ. ನೈಋತ್ಯದಿಕ್ಕಿನಿಂದ ಅಂದರೆ ಅರಬೀ ಸಮುದ್ರದ ಮೇಲಿಂದ ಬರುವ ಮೇಘಗಳಿಗೆ

ಸಹ್ಯಾದ್ರಿಯ ಬೆಟ್ಟಗಳು ಅಡ್ಡ ಬರುವದರಿಂದ, ಆ ಪರ್ವತದ ಮೇಲೆ ಮಳೆ ಭರಿಸಿ ದಾಟಿ ಹೋಗುವ ಮೇಘಗಳಷ್ಟೇ ದೇಶದ ಮೇಲೆ ಮಳೆಗರೆಯುವವು. ಆದ್ದರಿಂದ ಸಹ್ಯಾದ್ರಿಯ ಮೇಲೆ ಅದಷ್ಟು ಮಳೆಯು ಅದರ ಪೂರ್ವಕ್ಕಿರುವ "ದೇಶ" ವೆಂಬ ಪ್ರದೇಶದಲ್ಲಿ ಆಗುವದಿಲ್ಲ. ಕರ್ನಾಟಕ, ನಿಜಾಮನ ಇಲಾಖೆ, ಮತ್ತು ಮಧ್ಯ ಹಿಂದುಸ್ತಾನದ ಭೂಮಿಯು ಫಲವತ್ತಾದಕಾರಣ ಅಲ್ಲಿಯ ಪೈರುಗಳಿಗೆ ಸ್ವಲ್ಪೇ ಮಳೆ ಸಾಕಾಗುತ್ತದೆ. ಆದರೆ ಈ ಪ್ರದೇಶಗಳಲ್ಲಿ ಮಳೆಯು ಬಹಳ ಅನಿಶ್ಚಿತವಾಗಿರುವದರಿಂದ ದುಷ್ಕಾಳದ ಭಯವಾದರೂ ವಿಶೇಷವಾಗಿರುತ್ತದೆ. ಇದರಂತೆಯೇ ಬಂಗಾಲದ ಉಪಸಾಗರದ ಮೇಲಿನ ಮೇಘಗಳು ಹಿಮಾಲಯದ ದಕ್ಷಿಣದ ಇಳುಕಲಿನ ಪ್ರದೇಶದ ಮೇಲೆ ಮಳೆಯನ್ನು ಸುರಿಸುತ್ತವೆ. ಆಸಾಮು ಪ್ರಾಂತದಲ್ಲಿ ಅದಷ್ಟು ಮಳೆಯು ಬೇರೆ ಯಾವ ದೇಶದಲ್ಲಿಯೂ ಆಗುವದಿಲ್ಲ.

ಸಪ್ಟಂಬರ ತಿಂಗಳೆಯ ತಾರೀಖಿನಿಂದ ಸೂರ್ಯನು ವಿಷುವ ವೃತ್ತದ ದಕ್ಷಿಣಕ್ಕೆ ಸಾಗಲಾಗಿ ದಕ್ಷಿಣ ಗೋಲಾರ್ಧವು ಹೆಚ್ಚು ಕಾಯ್ದು ಅಲ್ಲಿಯ ಹವೆಯು ವಿರಳವಾಗಿ ಹಗುರಾಗುತ್ತದೆ. ಅದೇ ಕಾಲಕ್ಕೆ ಉತ್ತರ ಗೋಲಾರ್ಧದಲ್ಲಿ ದಿನವಮಾನವು ಕಡಿಮೆಯಾಗಿ ರಾತ್ರಿಗಳು ದೊಡ್ಡವಾಗುವದರಿಂದಲೂ ಸೂರ್ಯನ ಕಿರಣಗಳು ವಕ್ರವಾಗುವದರಿಂದಲೂ ಹವೆಯೊಳಗಿನ ಉಷ್ಣತೆಯು ಕಡಿಮೆಯಾಗುತ್ತದೆ. ಅದರಿಂದ ಅಲ್ಲಿಯ ಹವೆಯು ಭಾರವುಳ್ಳದ್ದಾಗಿ ದಕ್ಷಿಣ ಗೋಲಾರ್ಧದ ಹಗುರಾದ ಹವೆಯುಳ್ಳ ಪ್ರದೇಶದ ಕಡೆಗೆ ಬೀಸಲಾರಂಭಿಸುತ್ತದೆ. ಈ ಗಾಳಿಯು ಬಹಳ ತಂಪಾಗಿರುವದು; ಮತ್ತು ಅದು ಭೂಮಿಯ ಕಡೆಯಿಂದ ಸಮುದ್ರದ ಕಡೆಗೆ ಬೀಸುವದರಿಂದ ಅದರಲ್ಲಿ ಆರ್ದ್ರತ್ವವೇನೂ ಇರುವದಿಲ್ಲ. ಈ ಗಾಳಿಯು ಈಶಾನ್ಯದಿಕ್ಕಿನಿಂದ ಬೀಸುವದು. ಇದಕ್ಕೆ ಮೂಡಣಗಾಳಿಯೆನ್ನುವರು. ದಕ್ಷಿಣ ಹಿಂದುಸ್ತಾನಕ್ಕಿಂತ ಉತ್ತರ ಹಿಂದುಸ್ತಾನವು ಭೂಮಧ್ಯ ರೇಷೆಯಿಂದ ದೂರವಿರುವದರಿಂದ ಅಲ್ಲಿ ಸೂರ್ಯನ ಕಿರಣಗಳು ಹೆಚ್ಚು ವಕ್ರವಾಗಿ ಬೀಳುವವು. ಮತ್ತು ದಿನರಾತ್ರಿಗಳ ವ್ಯತ್ಯಾಸವೂ ಹೆಚ್ಚು ಇರುವದು. ಆದ ಕಾರಣ ಅಲ್ಲಿ ದಕ್ಷಿಣ ಹಿಂದುಸ್ತಾನದಲ್ಲಿದ್ದದ್ದಕ್ಕಿಂತ ಚಳಿಗಾಲವು ಹೆಚ್ಚು ತೀವ್ರವಾಗಿರುವದು. ಅದರಿಂದ ಅಲ್ಲಿಯ ಜನರಿಗೆ ಬೇಸಿಗೆಯ ಸೆಕೆಯಂತೆಯೇ ಚಳಿಗಾಲವಾದರೂ ಬಹಳ ಕಷ್ಟವಾದವಾಗಿರುತ್ತದೆ. ಆಗ ಹಿಮಾಲಯದ ಉನ್ನತವಾದ ಪ್ರದೇ

ಕಗಳ ಮೇಲೆ ಬರ್ಫವು ಬೀಳಹತ್ತುವದು. ಮೂಡಲಗಾಳಿಯು ಆಕ್ಟೋಬರ
ತಿಂಗಳಲ್ಲಿ ಆರಂಭವಾಗಿ ಸುಮಾರು ಆರು ತಿಂಗಳ ವರೆಗೆ ಬೀಸುತ್ತದೆ
ಈ ಗಾಳಿಯಲ್ಲಿ ಆರ್ದ್ರತ್ವವೇನೂ ಇರುವದಿಲ್ಲವಾದ್ದರಿಂದ ಇದು ಹೊ
ನಲ್ಲಿ ಬೆಳೆದು ನಿಂತ ಬೈರನ್ನು ಒಣಗಿಸುವದಕ್ಕೆ ಉಪಯೋಗಿಸುತ್ತದೆ
ಈ ಗಾಳಿಯಿಂದ ಸಸ್ಯಾದಿಗಳು ಒಣಗಿ ಹೋಗುವವು; ಗಿಡಗಳ ಎಲೆಗಳ
ಉದುರುವವು; ಉದ್ಭಿಜ್ಜ ಸೃಷ್ಟಿಯೆಲ್ಲ ಕಷ್ಟಮಯವಾದ ಸ್ಥಿತಿಯಲ್ಲಿ
ದ್ದಂತೆ ಕಂಡು ಬರುವದು. ಈ ಹೀನಾವಸ್ಥೆಯು ನಾಲ್ಕು ತಿಂಗಳ
ನುಗಿದು ವಸಂತ ಋತುವು ಪ್ರಾದುರ್ಭವಿಸಲಾಗಿ ಗಿಡಗಂಟಿಗಳು ಚಿಗಿ
ಹತ್ತುತ್ತವೆ; ಪಕ್ಷಿಗಳು ಇಂಪಾದ ಗಾಯನ ಮಾಡಹತ್ತುತ್ತವೆ. ಆದ
ಕೆಲವು ದಿನಸಗಳಲ್ಲಿಯೇ ವಸಂತ ಋತುವಿನ ಕಾಲವು ತೀರಲಾಗಿ ಬೇ
ಗೆಯ ಸೆಕೆಯು ಕ್ರಮೇಣ ಹೆಚ್ಚಾಗಿ ಜನರು ಬೇಸತ್ತು ಮತ್ತೆ ಮಳೆಗಾ
ವನ್ನು ನಿರೀಕ್ಷಿಸಹತ್ತುತ್ತಾರೆ.

G. V. GOKHALE.

ನೊಣಗಳ ಪಿಡುಗು.

——(೦)——

"ಇಂಡಿಯನ್ ಎಜ್ಯುಕೇಶನ್" ಎಂಬ ಇಂಗ್ಲೀಷ ಮಾಸಿಕ ಪುಸ್ತಕ
ಕಳಿನ ಮೇ ತಿಂಗಳ ಸಂಚಿಕೆಯಲ್ಲಿ ಮದ್ರಾಸದ ಆರೋಗ್ಯ ರಕ್ಷಣೆಯ
(Health Officer) ಅಧಿಕಾರಿಗಳಾಗಿದ್ದ ಮಿ. ಮ್ಯಾಕಡೋನಾಲ್ಡ ಎಂಬ
ವರು ನೊಣಗಳಿಂದುಂಟಾಗುವ ಭಯಂಕರವಾದ ರೋಗಗಳ ವಿಷಯದಲ್ಲಿ
ಜನರಿಗೆ ತಿಳುವಳಿಕೆಯುಂಟಾಗ ಬೇಕೆಂದು ಪ್ರಸಿದ್ಧ ಪಡಿಸಿದ ಸರಕ್ಯೂಲ
ರವು ಮುದ್ರಿಸಲ್ಪಟ್ಟಿದೆ. ಈ ಸರಕ್ಯೂಲರವು ಬಹಳ ಉಪಯುಕ್ತವಾ
ಗಿರುವದರಿಂದಲೂ ಮುಖ್ಯವಾಗಿ ಅದರೊಳಗಿನ ಸಂಗತಿಗಳು ಸಣ್ಣ ಬಾಲಕ
ರಿಗೂ ವಿದ್ಯಾರ್ಥಿಗಳಿಗೂ ತಿಳಿಯುವದು ಅತ್ಯವಶ್ಯವಿರುವದರಿಂದಲೂ
ಅದನ್ನು ಕನ್ನಡಿಸಿ ಪ್ರಸಿದ್ಧಪಡಿಸುವದಕ್ಕೋಸ್ಕರ ವಿಜಾಪೂರ ಜಿಲ್ಲೆಯ
ಡಿ॥ ಎ॥ ಇನಸ್ಪೆಕ್ಟರ ಸಾಹೇಬರು ಕಳಿಸಿರುವರು. ಅದನ್ನು ಇದರಲ್ಲಿ
ಬರಲ್ಲಿ ಕೊಟ್ಟಿದ್ದೇವೆ. ಅದನ್ನು ಶಾಲಾಭ್ಯಾಸಕರು ಚನ್ನಾಗಿ ಓದಿ ಅದರ
ತಿಳುವಳಿಕೆಯನ್ನು ತಮ್ಮ ಶಾಲೆಯ ವಿದ್ಯಾರ್ಥಿಗಳಲ್ಲಿ ಉಂಟು ಮಾಡುವ
ರೆಂದು ನಾವು ತುಂಬಾ ನಂಬಿದ್ದೇವೆ. ಎ. ಕಾ. ಪತ್ರಕ.

ಮನುಷ್ಯನಿಗೆ ಗೊತ್ತಿದ್ದ ಅತ್ಯಂತ ಅಪಾಯಕರವಾದ ಕ್ರಿಮಿಗಳಲ್ಲಿ ನೊಣವು ಬರುತ್ತವೆ. ಎಲ್ಲ ಜಂತುಗಳಲ್ಲಿ ನೊಣಗಳು ಬಹಳೇ ಹೇಸಿ ಇದ್ದು ಅತಿ ಹೊಲಸು ಜೀನಸುಗಳನ್ನು ತಿನ್ನುವವು. ಅದ್ದರಿಂದ ಅವು ಮುಟ್ಟಿದ ಪದಾರ್ಥಗಳೆಲ್ಲ ಹೊಲಸಾಗುವವು. ಅವು ಕೂತಲ್ಲೆಲ್ಲ ತಮ್ಮ ಕಾಲುಗಳಿಂದ ಹೊಲಸನ್ನು ಬಯ್ಯುವವು. ನೊಣಗಳಾಗುವದಕ್ಕೆ ಮೊದಲು ಅವು ಹುಳಗಳಿರುತ್ತವೆ. ಈ ಹುಳಗಳೂ ಮೊದಲು ಹೇಳ ಲಾರದಷ್ಟು ಅಸಹ್ಯವಾದ ಹೇಸಿಕೆಯಲ್ಲಿ ಮನೆಮಾಡಿಕೊಂಡು ಇದ್ದು ತಾವು ಹೋದಲ್ಲೆಲ್ಲ ಮರಣವನ್ನು ತರುವಂಥ ರೋಗದ ಲಕ್ಷಾಗಟ್ಟಲೆ ಬೀಜ ಗಳನ್ನು ಬಯ್ಯುತ್ತವೆಂದು ಪ್ರಸಿದ್ಧಿಯುಂಟು. ನೊಣವು ಕೂತಕೂತ ಲ್ಲೆಲ್ಲ ಈ ರೋಗದ ಕೆಲವು ಬೀಜಗಳನ್ನು ಬಿಟ್ಟು ಹೋಗುವದು. ಬೂ ದಿಯ ಕುಣಿಯಿಂದಾಗಲಿ, ಗೊಬ್ಬರದ ಗುಂಪುಗಳಿಂದಾಗಲಿ, ಕೊಳತ ಪ್ರಾಣಿ ಇಲ್ಲವೆ ಕಸಕಡ್ಡಿಯಿಂದಾಗಲಿ, ಸಂಪರ್ಕಜನ್ಯ ರೋಗದಿಂದ ಪೀ ಡಿತನಾದ ರೋಗಿಯ ಕೋಣೆಯಿಂದಾಗಲಿ, ಅದೇ ಬಂದಂಥ ನೊಣಗ ಳಿಂದ ನೀವು ಉಣ್ಣುವ ಆಹಾರವು ದೂಷಿತವಾಗಬಹುದು. ಇವು ಹೇಸಿ ಕೆಯಲ್ಲಿಯೇ ಯಾವಾಗಲೂ ಇರುವಂಥಾವಿದ್ದು ಹೋದಲ್ಲೆಲ್ಲ ಹೊಲಸು ಬಯ್ದು ಅದನ್ನು ಉಣ್ಣುವ ಅನ್ನದ ಮೇಲೆ ಇಡುವವು. ಅಂದಮೇಲೆ ಈ ಪ್ರಕಾರ ನೀವು ನಿರಂತರವಾಗಿ ಹೇಸಿಕೆಯನ್ನು ತಿನ್ನುತ್ತಿರಬಹು ದಲ್ಲಾ! ಈ ವಿಚಾರವು ಅಸಹ್ಯವಾಗದ್ದಲ್ಲವೊ?

ನಿಜವಾಗಿ ನೊಣಗಳಿಂದ ಮನುಷ್ಯರಿಗೆ ಎಷ್ಟು ದುಃಖವೂ ಕಷ್ಟವೂ ಆಗುತ್ತಿರಬಹುದೆಂಬದು ನಮ್ಮ ಲಕ್ಷ್ಯಕ್ಕೆ ಬರುದಿಲ್ಲ. ಸುಖದಿಂದಿದ್ದಂಥ ಎಷ್ಟೋ ಕುಟುಂಬಗಳ ಜನರನ್ನು ವಿಕರ್ತವಾಗಿ ಕೂಡಿಸಿದಂಥ ಪ್ರೇಮಬಂಧನಗಳನ್ನು ನೊಣಗಳು ಅವರ ಮನೆಯಲ್ಲಿ ಅತ್ತಿತ್ತ ನಿರ್ದ ಯದಿಂದ ಕಡಿದುಹಾಕಿ ಅವರಲ್ಲಿ ಸಂಕಟವನ್ನೂ ಎದೆಯೊಡಿಕೆಯನ್ನೂ ಹುಟ್ಟಿಸುವವು. ಈಗಿನ ಕಾಲದ ಯುದ್ಧಗಳಲ್ಲಿ ಎಷ್ಟು ಜನರು ಸಾಯು ವರೋ ಅದಕ್ಕಿಂತ ಹೆಚ್ಚು ಜನರು ಯಾರಿಗೂ ಏನೂ ಸಂಶಯಬಾರದಂಥ ಶತ್ರುಗಳಾದ ನೊಣಗಳಿಂದ ಹುಟ್ಟಿಸಲ್ಪಡುವ ಜೀನೆಗಳಿಂದ ಸಾಯುವರು.

ನೊಣಗಳಿಂದ ಕ್ಷಯರೋಗ, ವಿಷಮಜ್ವರ, ನೂರಿಕಾ, ಅಮಾಂಶ, ಹಾಗೂ ಎರಡನೆ ಎಷ್ಟೋ ರೋಗಗಳು ಉಂಟಾಗಬಹುದು. ಕ್ಷಯರೋ

ಗಿಗಳ ಉಗುರೂ ಮೊರಿಕಾ ವಿಷಮಜ್ವರ ಇಲ್ಲವೆ ಅಮೊಂಕ ಇವುಗಳಿಂದ ಪೀಡಿತರಾದ ರೋಗಿಗಳ ಮಲವೂ ನೊಣಕ್ಕೆ ಒಳ್ಳೇ ಮೇಜವಾನಿಯ ಊಟವಾಗಿರುವದು. ಅಲ್ಲಿಂದ ಅವು ಹಾರಿ ನೆಟ್ಟಗೆ ನೀವು ಉಣ್ಣುವ ಆಹಾರ, ಕುಡಿಯುವ ನೀರುಗಳ ಮೇಲಾಗಲಿ, ನಿದ್ದೆ ಹತ್ತಿ ಮಲಗಿರುವ ಕೂಸಿನ ತುಟಿಗಳ ಮೇಲಾಗಲಿ ಬಂದು ಕೂಡ್ರಬಹುದು. ಆದ್ದರಿಂದ ನಾವು ಬದುಕಿದ್ದರೂ ಈ ನೊಣಗಳ ಮೂಲಕವಾಗಿ ಯಾವಾಗಲೂ ಮೃತ್ಯುವಿನ ಬಾಯಲ್ಲಿ ಇದ್ದಂತೆ ಇರುವೆವು. ಆದಕಾರಣ ಇಂಥ ಭಯಂಕರವಾದ ಪ್ರಾಣಿಗಳಿಂದಾಗುವ ಅಪಾಯವನ್ನು ತಪ್ಪಿಸುವದಕ್ಕೆ ಇದರಡಿಯಲ್ಲಿ ಕೆಲವು ಸುಲಭವಾದ ಸೂಚನೆಗಳನ್ನು ಕೊಟ್ಟಿರುವೆವು. ಅವುಗಳನ್ನು ನೀವು ಚನ್ನಾಗಿ ವಿಚಾರಮಾಡಿ ಅದರಂತೆ ಮಾಡಿದರೆ ನಿಮಗೆ ಹಿತವಾಗುವದು.

೧. ನಿಮ್ಮ ಮನೆಗಳಲ್ಲಿ ನೊಣಗಳನ್ನು ಬರಗೊಡಬೇಡಿರಿ. ಅವು ಜೀನೆಯ ಹಾಗು ಮೃತ್ಯುವಿನ ದೂತರಾಗಿರುವವು.

೨. ನಿಮ್ಮ ಆಹಾರದ ಹತ್ತರ ನೊಣಗಳನ್ನು ಬರಗೊಡಬೇಡಿರಿ. ವಿಶೇಷವಾಗಿ ಹಾಲನ್ನು ಮುಚ್ಚಳಿರುವ ಪಾತ್ರೆಯಲ್ಲಿಯೇ ಇಡಿರಿ. ಯಾಕೆಂದರೆ ಅದು ನೊಣಗಳಿಂದ ತೀವ್ರ ದೂಷಿತವಾಗುವದು. ನೊಣಗಳು ಹಾಲಿನ ಮೇಲೆ ಇಟ್ಟಂಥ ಸೂಕ್ಷ್ಮ ಜಂತುಗಳು ತೀವ್ರವಾಗಿ ಬೆಳೆಯುವವು. ಆ ಜಂತುಗಳು ಮನುಷ್ಯನ ಶರೀರಕ್ಕೆ ಸಂಸರ್ಗವಾಗುವಂಥವಿದ್ದರೆ ಅವುಗಳಿಂದ ಬಹಳ ಕೆಟ್ಟ ಪರಿಣಾಮಗಳಾಗುವವು. ದೂಷಿತವಾದ ಹಾಲಿನಿಂದ ಏನೂ ಅಪಾಯವಾಗದಂತೆ ಇವ್ಮಡಿಯಾಗಿ ಸಂರಕ್ಷಿಸಿಕೊಳ್ಳುವದಕ್ಕೆ ಹಾಲನ್ನು ಚನ್ನಾಗಿ ಕಾಸಬೇಕು. ಅಂದರೆ, ಅದರಲ್ಲಿಯ ಜಂತುಗಳು ನಾಶಹೊಂದಿ ರೋಗೋತ್ಪತ್ತಿಯಾಗಲಾರದು. ನೊಣಗಳು ಹಾರಿ ಕೂಡ್ರದಂತೆ ಊಟದ ಎಲ್ಲ ಪದಾರ್ಥಗಳನ್ನು ಮುಚ್ಚಿಡಬೇಕು. ಈ "ವಿಷವಾಹಕಗಳಿಂದ" ದೂಷಿತವಾದದ್ದೆಂದು ಗೊತ್ತಾದ ಯಾವ ತಿನ್ನುವ ಪದಾರ್ಥವನ್ನೂ ಯಾವ ಕಾರಣದಿಂದಲೂ ತಿನ್ನಬೇಡಿರಿ.

೩. ನೊಣಗಳು ಹಾರಿ ಕೂಡ್ರದಂತೆ ತಂತಿಯ ಜಾಳಿಗೆಯಿಂದಾಗಲಿ ಕಾಜಿನ ಮುಚ್ಚಳಿಕೆಗಳಿಂದಾಗಲಿ, ಪಿಂಜಾಳಿ ಅರಿವೆಯಿಂದಾಗಲಿ ಮುಚ್ಚಬೇಕು. ಹಾಗೇ ಮಾರಾಟಕ್ಕೆ ತೆರೆದಿದ್ದ ತಿಂಬುವ ಜೀನಸುಗಳನ್ನು ಕೊಳ್ಳಬೇಡಿರಿ. ನೊಣಗಳು ಮುಕರಿರುವ ಅಂಗಡಿಗಳಿಗೆ ಎಂದೂ ಹೋಗಬೇಡಿರಿ. ಆಹಾ

ರದ ಮೇಲೆ ಬಂದು ಕೂಡ್ರಲಿಕ್ಕೆ ನೊಣಗಳಿಗೆ ಆಸ್ಪದವಿರುವಂಥ ಸ್ಥಳಗಳಲ್ಲಿ ಏನೂ ತಿನ್ನಬೇಡಿರಿ.

೪. ಮಲಗಿದ ಕೂಸಿನ ಮೋರೆಯ ಮೇಲೆ ನೊಣಗಳು ಕೂಡ್ರದ ಹಾಗೆ ಪಿಂಜಾಳಿಯ ಅರಿವೆಯ ಮುಸುಕು ಹಾಕಿರಿ.

ನೊಣಗಳಿಂದ ರಕ್ಷಣೋಪಾಯಗಳು.

೧. ಮನೆಯೊಳಗೆ ನೊಣಗಳು ಆದ ಕೂಡಲೆ ನೊಣದ ವಿಷದಿಂದಾಗಲಿ, ಬಲಿಗಳಿಂದಾಗಲಿ, ಅವುಗಳನ್ನು ಕೊಲ್ಲಿರಿ. ಮನೆಯ ಯಾವತ್ತು ಭಾಗಗಳಲ್ಲಿ ವಿಶೇಷವಾಗಿ, ಅಡಿಗೆ ಮನೆಗಳಲ್ಲಿಯೂ ಊಟದ ಮನೆಗಳಲ್ಲಿಯೂ ಊಟದ ಪದಾರ್ಥಗಳನ್ನು ಇಟ್ಟಿರುವ ಸ್ಥಳಗಳಲ್ಲಿಯೂ ನೊಣದ ವಿಷವನ್ನು ಹರವಾದ ಪರಿವಾಣಗಳಲ್ಲಿ ಹಾಕಿ ಇಡಬೇಕು. ಎರಡು ಚಮಚೆ ತುಂಬಾ "ಫಾರ್ಮಲ್ಡಿಹಾಯಿಡ" ಎಂಬ ಪದಾರ್ಥವನ್ನು ಒಂದು ಪಾಯಿಂಟ ನೀರೊಳಗೆ ಕೂಡಿಸಿ, ಇಲ್ಲವೆ ಒಂದು ಡ್ರಾಮು "ಬಾಯಿಕ್ರೊಮೆಟ ಆಫ ಪೋಟ್ಯಾಶ್" ಎಂಬ ಪದಾರ್ಥವನ್ನು ಎರಡು ಔನ್ಸು ನೀರಿನಲ್ಲಿ ವಿಶ್ರವಾಡಿ ಸ್ವಲ್ಪ ಸಕ್ಕರೆಯನ್ನು ಕೂಡಿಸಿದರೆ ಚಲೋ ನೊಣದ ವಿಷವು ಸಿದ್ಧವಾಗುವದು. ಇದು ಮತ್ತು ಜಿಗಟು ಕಾಗದಗಳು ಪಟ್ಟಣದಲ್ಲಿ ಬೇಕಾದ ರಸಾಯನ ಕಾರರ ಅಂಗಡಿಯಲ್ಲಿ ದೊರೆಯುವವು.

೨. ಮನೆಯಲ್ಲಿ ಬಾಗಿಲುಗಳ ಸಿಂದಿಯಾಗಲಿ, ಮೂಲೆಯಲ್ಲಾಗಲಿ ಹೊಲಸು ಕಸವನ್ನು ಕೂಡಿಸಿಡಬಾರದು. ಮನೆಯ ಅಂಗಳದಲ್ಲಿ ಕಸಕಡ್ಡಿ, ಬೂದಿ ಮುಂತಾದ ಹೊಲಸು ಚೆಲ್ಲವ ಕುಣಿಗಳ ಅಥವಾ ಡಬ್ಬಿಗಳ ಮೇಲೆ ಮುಚ್ಚಳಿಕೆ ಇಡಬೇಕು. ಮತ್ತು ಆದಷ್ಟು ತೀವ್ರವಾಗಿ ಆ ಕಸಕಡ್ಡಿಯನ್ನೆಲ್ಲ ತೆಗೆದು, ಕುಣಿಗಳನ್ನೂ ಸುತ್ತಮುತ್ತಲಿನ ಸ್ಥಳವನ್ನೂ, ತೆಗ್ಗುಗಳನ್ನೂ ಚನ್ನಾಗಿ ರೋಗದ ಸೊಂಕು ಇಲ್ಲದಂತೆ ಮಾಡಬೇಕು. ಮನೆಯೊಳಗಿನ ಬಚ್ಚಲ ಹರಿಗಳನ್ನು ನಿತ್ಯದಲ್ಲಿ ತೊಳೆದು ನಿರ್ಮಲ ಮಾಡಬೇಕು. ಮನೆಯ ಒಳಗಾಗಲಿ, ಹೊರಗಾಗಲಿ ಇದ್ದ ಪಾಯಖಾನೆಗಳನ್ನೂ ಮಲದ ಪಾತ್ರೆಗಳನ್ನೂ ರೋಗ ನಾಶ ಮಾಡುವ ಪುಡಿ ಅಥವಾ ಔಷಧ ಹಾಕಿ ತೊಳೆಯಬೇಕು. ಹಾಗೂ ಮಲದ ಮೇಲೆ ಉಸುಕನ್ನಾಗಲಿ, ಹೊಸ ಮಣ್ಣನ್ನಾಗಲಿ ಹಾಕಬೇಕು. ಯಾಕಂದರೆ, ನೊಣಗಳು ವಿಶೇಷವಾಗಿ ಮನುಷ್ಯನ ಮಲಕ್ಕೆ ಮುಕುರುತ್ತವೆ.

೩. ನೀವು ಇರುವ ಮನೆಯ ಸುತ್ತಲಿನ ನೆಲವನ್ನು ಹೆಚ್ಚಾಗಿ ಲಕ್ಷಿಸಬೇಕು. ಕೊಳೆಯುವ ಪ್ರಾಣಿಯನ್ನಾಗಲಿ, ಕಸಕಡ್ಡಿಯನ್ನಾಗಲಿ ಆಗಲೇ ತೆಗೆದು ಬಿಗೆಯಬೇಕು. ಎರಡು ಮೂರು ದಿವಸಕ್ಕಿಂತ ಹೆಚ್ಚು ಯಾವ ತರದ ಗೊಬ್ಬರವನ್ನು ಮನೆಯ ಹತ್ತಿರ ಕೂಡಿಸಿ ಇಡಬಾರದು. ಒಂದು ವಾರಕ್ಕಿಂತ ಹೆಚ್ಚು ಅದನ್ನು ಅಲ್ಲಿಯೇ ಬಿಟ್ಟರೆ ನೊಣದ ಪಿಡುಗು ಸಂಶಯವಿಲ್ಲದೆ ಉದ್ಭವಿಸುವದು. ಯಾಕಂದರೆ ಗೊಬ್ಬರವು ನೊಣಗಳಿಗೆ ತಿನ್ನೀ ಹಾಕಿ ಮರಿ ಮಾಡಲಿಕ್ಕೆ ಬಹಳ ಅನುಕೂಲವಾದ ಸ್ಥಳವಿರುವದು. ಆದ್ದರಿಂದ ಗೊಬ್ಬರದ ಗುಂಡಿಗಳ ಮೇಲೆ ನೊಣಗಳು ಕೂತು, ತಿನ್ನೀ ಹಾಕದ ಹಾಗೆ ತಂತಿಯ ಜಾಳಿಗೆಯ ಮುಚ್ಚಳವನ್ನು ಹಾಕಬೇಕು. ಮತ್ತು ಅವುಗಳನ್ನು ತೆರವು ಮಾಡಿದ ಕೂಡಲೆ ಅವುಗಳಲ್ಲಿ ರೋಗನಾಶಕ ಔಷಧ ಹಾಕಬೇಕು.

Sd/. A. R. Jalihal.
Deputy Educational Inspector,
Bijapur.

ರಾವಸಾಹೇಬ ಕನ್ನಡ ಶಾಲಾಪತ್ರಿಕದ ಎಡಿಟರ ಧೊರೆಗಳವರ ಸನ್ನಿಧಿಗೆ—

ತಮ್ಮ ವಿಧೇಯ ಶಿಷ್ಯನ ವಿ॥ ವಿ॥ ಗಣಿತನೇ ಸಪಟಂಬರ ತಿಂಗಳ ಸಂಚಿಕೆಯಲ್ಲಿ ಎ. ಬೀ. ಕುಲಕರ್ಣಿಯವರು ಬರೆದ ಉದಾಹರಣೆಗಳನ್ನು ಅಲ್ಪಮತಿಗೆ ತೋರಿದ ರೀತಿಯಿಂದ ಬಿಡಿಸಿರುವೆನು. ಅವುಗಳನ್ನು ಮುದ್ರಿಸಲಿಕ್ಕೆ ಸ್ಥಳ ಕೊಡುವಿರೆಂದು ಆಶಿಸುತ್ತೇನೆ.

ಗಣೇ ಉದಾಹರಣೆ— ಅ, ಬ, ಕ, ಇವರಲ್ಲಿ ಯಾವನೆಂತೆಯೋಗುವದೋ ಅವನ ಕಡೆಯಿಂದ ಹಣ ತಕ್ಕೊಂಡು ಉಳಿದವರಿಗೆ ಅವರವರ ಕರಾರಿನಂತೆ ಬಟ್ಟಾ ಕೊಡಲು ೬೦ ರೂಪಾಯಿ ಉಳಿಯುತ್ತವೆ.

(೧) ಅ–(೨ಬ+೨ಕ) = ೬೦ರೂಪಾಯಿ.

(೨) ಬ–(೩ಅ+೩ಕ) = ೬೦ ರೂಪಾಯಿ.

(೩) ಕ–(೩ಅ+೨ಬ) = ೬೦ ರೂಪಾಯಿ.

ಇನ್ನು ಗಣೇ ವದ–೩ನೇಪದ = ೪ಅ–೩ಬ = ೦

∴ ೫ಅ = ೬ಬ ಇದರಂತೆ

೨ನೇಪದ − ೩ನೇಪದ = ೫ಬ − ೪ಕ = ೦

∴ ೫ಅ = ೬ಬ = ೭ಕ

ಅ − (೫ಬ + ೪ಕ) = ೬೦ ಇದರಿಂದ

∴ ೫ ಅ : ಅ : : ೬ ಬ : ೫ ಬ

೬೦ ಬ − ೪ಕ = ೬೦ ರೂಪಾಯಿ.

೬ ಬ : ೬೦ ಬ : : ೭ ಕ : ೭೦ ಕ

∴ ೭೦ ಕ − ೪ಕ = ೬೩ ಕ = ೬೦ ರೂಪಾಯಿ.

೬೩ ಕ : : ೬೦ ರೂ : ೯೦೦ ರೂ ಕನು ಗೊತ್ತು ಮಾಡಿದ್ದನು.

ಮೇಲಿನ ಪ್ರಮಾಣದಂತೆ ತೆಗೆಯಲು ೧೦೫೦ ರೂ. ಬನ ಹಣ.

೧೪೬೦ ರೂ. ಅನ ಹಣ.

ಅನು ೧೪೬೦ ರೂ.
ಬನು ೧೦೫೦ ರೂ.
ಕನು ೯೦೦ ರೂಪಾಯಿಗಳನ್ನು ಗೊತ್ತು ಮಾಡಿದ್ದರು.

೩ನೆಯ ಉದಾಹರಣೆಯು.

ರಾಜನ ಹತ್ತಿರ ಬಂದ ಹಣ್ಣುಗಳು ಪ್ಪ ಎಂದು ತಿಳಿಯುವಾ. ಇವು ೩ನೆಯವಳು ಹಂಚಿಕೊಂಡ ಹಣ್ಣಿನ $\frac{೧}{೪}$ ಇರುತ್ತದೆ. ಮತ್ತು ಹಂಚಿಕೊಳ್ಳುವದಕ್ಕಿಂತ ಮೊದಲು ೫ ಹಣ್ಣು ಹುಡುಗರ ಕೈಯಲ್ಲಿ ಕೊಟ್ಟಿರುತ್ತಾಳೆ.

∴ ೩ನೆಯವಳ ಹತ್ತಿರ ಬಂದ ಹಣ್ಣು. $\frac{೧}{೪}$ ಪ್ಪ + ೫.

೪ನೇ ,, $\frac{೧}{೧೬}$ಪ್ಪ + $\frac{೫}{೪}$ + ೪ = $\frac{೧}{೧೬}$ಪ್ಪ + $\frac{೨೧}{೪}$ ಇದರಂತೆ.

೩ನೇ ,, $\frac{೧}{೬೪}$ಪ್ಪ + $\frac{೨೧}{೧೬}$.

೨ನೇ ,, $\frac{೧}{೨೫೬}$ ಪ್ಪ + $\frac{೮೫}{೬೪}$.

೧ನೇ ,, $\frac{೧}{೧೦೨೪}$ ಪ್ಪ + $\frac{೩೪೧}{೨೫೬}$ ರಾಜನ ಕಡೆಯಿಂದ ಬಂದಿದ್ದವು.

ಅಂದರೆ ೩$\frac{೧}{೧೦೨೪}$ ಪ್ಪ + ೩೪೧$\frac{೧}{೨೫೬}$ = ಪೂರ್ಣ ಸಂಖ್ಯೆ.

∴ $\frac{೧}{೧೦೨೪}$ ಪ್ಪ + $\frac{೧}{೨೫೬}$ = ಪೂರ್ಣ ಸಂಖ್ಯೆಯಾಯಿತು.

ಪ್ಪವು $\frac{೧}{೪}$ ಇದ್ದು ೫ ರಿಂದ ಭಾಗ ಹೋಗುವ ಕಾರಣ ೫೦ ರ ಪಟ್ಟು ಇರತಕ್ಕದ್ದು.

∴ ಕ್ಷ = ೨೦ ಪ ಎಂದು ತಿಳಿ.

$\frac{೧೦೦ ಪ + ೨೧೨}{೧೦೨೪}$ = ಪೂರ್ಣ ಸಂಖ್ಯೆ.

∴ $\frac{೯ ಪ + ೫೩}{೨೫೬}$ = ಪೂರ್ಣ ಸಂಖ್ಯೆ = ಮ ಎಂದು ತಿಳಿ.

∴ ೯ ಪ + ೫೩ = ೨೫೬ ಮ.

∴ ಪ + ೫/೯ = ೨೮೪/೯ ಮ. ಪ್ರತಿಯೊಂದು ರಾಶಿಯೊಳಗಿಂದ ಪೂರ್ಣ ಸಂಖ್ಯೆಗಳನ್ನು ಕಳೆಯಲು ೫/೯ ಮ. ೫/೯ = ಪೂರ್ಣ ಸಂಖ್ಯೆ = ನ ಎಂದು ತಿಳಿ.

∴ ೪ ಮ = ೯ ನ + ೫.

∴ ಮ = ೨೪ ನ+೨. ಪೂರ್ಣ ಸಂಖ್ಯೆಗಳನ್ನು ಕಳೆಯಲು.

∴ ೫ನ = ಪೂರ್ಣಸಂಖ್ಯೆ = ರ ಎಂದು ತಿಳಿ.

∴ ನ = ೪ ರ ಎಂದು ಗೊತ್ತಾಯಿತು. ಇವುಗಳ ಮೇಲೆ (ಕ್ಷ)ಕ್ಕೂ (ರ)ಕ್ಕೂ ಇರುವ ಸಂಬಂಧವನ್ನು ತೆಗೆಯುತಕ್ಕದ್ದು.

ಮ = ೨೪ನ+೨. ಇರುವದು. ∴ ಮ = ೯ರ+೨.

೯ಪ+೫೩ = ೨೫೬ ಮ. ಇರುವದು.

∴ ಪ = ೨೫೬ರ+೫೧.

∴ ಕ್ಷ = ೫೧೨೦ರ+೧೦೨೦.

೧ನೆಯವಳ ಹತ್ತರ ಬಂದಾಗ್ಗೆ $\frac{೧೦೨೦}{೧೦೨೪}$ ಕ್ಷ + ೨೮೪/೯ ಹಣ್ಣು ಇದ್ದವು

= $\frac{೫೧೨೫(೫೨೦ರ+೧೦೨೦)}{೧೦೨೪}$ + ೨೮೪/೯ ಹಣ್ಣುಗಳು.

= ೧೫೬೨೫ರ+೫೧೧೨$\frac{೨೦೨೫}{೧೦೨೪}$ + ೨೮೪/೯

= ೧೫೬೨೫ರ + ೫೧೪೨ ಹ. ಗಳು ರಾಜನಕಡೆಯಿಂದ ಬಂದಿದ್ದವು

ರ = ಬೇಕಾದದ್ದೊಂದು ಪೂರ್ಣ ಸಂಖ್ಯೆ ಕೊಡಿಯಬಹು. ಆದ್ದರಿಂದ ರಾಜನ ಹತ್ತರ ಬಂದ ಹಣ್ಣುಗಳು = ೧೫೬೨೫ರ ೫೧೪೨

ರ = ೦ ಎಂದು ತಿಳಿದರೆ ೫೧೪೨ ಹಣ್ಣು ಎಲ್ಲಕ್ಕೂ ಸಣ್ಣ ಉತ್ತರವು

(೫೦೦೩೧) ಇತ್ಯಾದಿ ಅನೇಕ ಉತ್ತರಗಳು

(೧೧೫೫೩೧) ಬರುತ್ತವೆ.

ತಮ್ಮ ವಿಧೇಯ ಶಿಷ್ಯ.

ತಾ. ೧೬-೧೦-೧೯೧೧ } ಎಮ್. ಎಸ್. ಮಾಧವಪತಿ ತೆಲಸಂಗ.

ಸೇವಾಸದನ ವಿದ್ಯಾರ್ಥಿ ಟ್ರೇನಿಂಗ ಕಾಲೇಜ ಧಾರವಾಡ.

(ಅಕ್ಟೋಬರ ತಿಂಗಳಿಂದ ಮುಂದೆಸಾಗಿದ್ದು.)

ಕಾಂಡವು ವನಸ್ಪತಿಗಳ ಬೇರು ಎಲೆಗಳನ್ನು ಕೂಡಿಸುವ ಸೆಂದು ಎಂದು ಸಾಮಾನ್ಯವಾಗಿ ಹೇಳಬಹುದು. ಕಾಂಡದಲ್ಲಿ ಕಾಷ್ಟತಂತುಗಳಿಂದುಂಟಾದ ನಲಿಕೆಗಳಿರುವವು. ಆ ನಲಿಕೆಗಳ ದ್ವಾರದಿಂದ ಬೇರುಗಳು ಹೀರಿಕೊಂಡ ಖನಿಜದ್ರವ್ಯಗಳು ಬೇರುಗಳ ಒತ್ತುವಿಕೆ (Root pressure) ಹಾಗು ಜಲವಿಮೋಚನೆ (Transpiration) ಎಂಬೆರಡು ಕಾರ್ಯಗಳ ಮೂಲಕ ಕಾಂಡದಲ್ಲಿ ಏರುತ್ತೇರುತ್ತ ಕಡೆಗೆ ಎಲೆಗಳ ವಿಸ್ತಾರವಾದ ಸ್ಥಳಕ್ಕೆ ಹೋಗಿ ಮುಟ್ಟುವವು. ಈ ರೀತಿಯಿಂದ ಎಲೆಗಳಿಗೆ ಬಂದು ಮುಟ್ಟಿದ ಪದಾರ್ಥಗಳು ವನಸ್ಪತಿಗಳ ಆಹಾರಸಿದ್ಧತೆಯ ಕಾರಣ ಸಾಮಗ್ರಿಗಳಾಗಿವೆ. ಈ ಸಾಮಗ್ರಿಗಳನ್ನು ಬೇರಿನಿಂದ ಎಲೆಗಳಿಗೆ ಒಯಿದು ಮುಟ್ಟಿಸುವ ನಲಿಕೆಗಳು ಕಾಂಡದ ಮಧ್ಯಭಾಗದಲ್ಲಿರುವವೆಂಬದು ಯಾವದೊಂದು ಮಹಾವೃಕ್ಷದ ಕಾಂಡವನ್ನು ಅಡ್ಡ ಕೊಯಿದು ನೋಡಿದರೆ ಅದರ ಮಧ್ಯದಲ್ಲಿರುವ ಕೆಚ್ಚಿನ ಸುತ್ತಲು ಉಸುಬು ಮಣ್ಣು ಮೊದಲಾದವುಗಳ ತರಗಳು ಕೂತಿರುವದರಿಂದ ಸ್ಪಷ್ಟವಾಗುವದು.

ಮೇಲೆ ಹೇಳಿದ ನಲಿಕೆಗಳಲ್ಲದೆ, ಎಲೆಗಳಲ್ಲಿ ಸಿದ್ಧವಾದ ರಸರೂಪವುಳ್ಳ ಆಹಾರವನ್ನು ಕೆಲಸ ಮಾಡುವ ಹಾಗು ಬೆಳವಣಿಗೆಯುಳ್ಳ ವನಸ್ಪತಿಗಳ ಎಲ್ಲ ಭಾಗಗಳಿಗೆ ಅವುಗಳ ಪೋಷಣೆಗಾಗಿ ಒಯಿದು ಮುಟ್ಟಿಸುವ ಬೇರೆ ನಲಿಕೆಗಳು ಕಾಂಡದಲ್ಲಿರುವವು. ಈ ತರದ ನಲಿಕೆಗಳು ಕಾಂಡದ ಮಧ್ಯಭಾಗದಲ್ಲಿರದೆ ತೊಗಟೆಯಿಂದ ಆವರಿಸಲ್ಪಟ್ಟ ಭಾಗದ ತುಸು ಕೆಳಗಡಿಗೆ ಮಾತ್ರ ಇರುವವೆಂಬದನ್ನು ಕೆಳಗೆ ಕೊಟ್ಟ ಪ್ರಯೋಗದಿಂದ ಸುಲಭವಾಗಿ ಮನಗಾಣಬಹುದು.

ನೆಟ್ಟನೆ ಬೆಳೆದು, ನೀರಾಡ ಕಾಂಡವುಳ್ಳ ಮಾವಿನ ಇಲ್ಲವೆ ಬೇವಿನ ಗಿಡವನ್ನು ಆರಿಸಿ ಅದರ ಕಾಂಡದ ಸುತ್ತಲು ಕಾಡಣಿಯ ಹಗ್ಗವನ್ನು ಆಕೃತಿ ೪ರಲ್ಲಿ ತೋರಿಸಿದಂತೆ ಬಹು ಗಟ್ಟಿಯಾಗಿ ಬಿಗಿದು ಒಂದು ವಾರದ ವರೆಗೆ ಹಾಗೇ ಬಿಟ್ಟರೆ, ಹಗ್ಗದ ಸುತ್ತುಗಳ ಮೇಲ್ಬದಿಗೆ ಆಕೃತಿಯಲ್ಲಿ ತೋರಿಸಿದಂತೆ ಗಂಟಾಗುವದು. ಹೀಗಾಗುವ ಕಾರಣವೇನಂದರೆ, ಎಲೆಗಳಲ್ಲಿ ಸಿದ್ಧವಾದ ಆಹಾರವು ರಸವಾಹಿನಿಗಳಲ್ಲಿ ಹರಿಯುತ್ತ ಹರಿಯುತ್ತ

ಬೇರುಗಳಿಗೆ ಪೋಷಕದ್ರವ್ಯಗಳನ್ನು ಮುಟ್ಟಿಸುವ ಉದ್ದೇಶದಿಂದ ಬಹು ತ್ತಿರಲು ಕಾಂಡದ ಸತ್ತಲು ಬಿಗಿಯಾಗಿ ಬಿಗಿದಿರುವ ಹಗ್ಗದ ಸುತ್ತುಗಳಿಂದ ಆ ರಸವಾಹಿನಿಗಳು ಹಿಂಬಿಕೆ ಹೋಗಿರುವದರಿಂದ ಪೋಷಕರಸವು ಮುಂದೆ ಹರಿದು ಹೋಗಲಾರದೆ ದುರ್ಮಾಂಸದಂತೆ ಅಲ್ಲಿಯೇ ಉಳಿದು ಗಂಟು ಕಟ್ಟುವದು. ಎಲೆಗಳನ್ನೂ ಹೂವುಗಳನ್ನೂ ಧರಿಸುವದು ಕಾಂಡದ ಮತ್ತೊಂದು ಮಹತ್ವವುಳ್ಳ ಕರ್ತವ್ಯವಾಗಿದೆ. ಕಾಂಡವು ಧರಿಸಿರುವ ಎಲ್ಲ ಎಲೆಗಳಿಗೆ ಸಾಕಷ್ಟು ಸೂರ್ಯನ ಪ್ರಕಾಶವು ದೊರಕಬೇಕೆಂಬ ಉದ್ದೇಶದಿಂದ ವನಸ್ಪತಿಗಳು ಸಾವಕಾಶವಾಗಿ ಕಾಂಡದಲ್ಲಿರುವ ಗಣ್ಣುಗಳಿಂದ ಬಂದು, ಎರಡು ಇಲ್ಲವೆ ಹೆಚ್ಚು ಎಲೆಗಳನ್ನು ಬಿಡುವದುಂಟು. ಎರಡು ಗಣ್ಣುಗಳ ಮಧ್ಯದಲ್ಲಿರುವ ಅಂತರವು ಹೆಚ್ಚಾದಂತೆ ಎಲೆಗಳು ಹೆಚ್ಚು ವಿರಲವಾಗಿರುವವು. ಕಾಂಡದ ಮೇಲಿರುವ ಎಲೆಗಳ ಸಂವಿಧಾನವು ಆ ಎಲೆಗಳಿಗೆ ಸೂರ್ಯನ ಪ್ರಕಾಶವು ದೊರಕುವದಕ್ಕೆ ಬಹು ಅನುಕೂಲವಾಗಿರುವದು. ಇದರ ಬಗ್ಗೆ ಹೆಚ್ಚಿನ ವಿವೇಚನವನ್ನು ಯೋಗ್ಯ ಸ್ಥಳದಲ್ಲಿ ಮಾಡುವೆವು.

ಮೇಲೆ ವಿವರಿಸಿದ ಎರಡು ಪ್ರಾಮುಖ್ಯವಾದ ಕರ್ತವ್ಯಗಳಲ್ಲದೆ ಹಲವು ವನಸ್ಪತಿಗಳ ಕಾಂಡಗಳು ಇನ್ನೂ ಬೇರೆ ವಿಧದ ಕಾರ್ಯಗಳನ್ನು ಜರುಗಿಸುತ್ತಿರುವವು. ನೆಲಗುಂಟ ಹಬ್ಬುತ್ತ ಹೋಗುವ ಕರಿಕೆ, ಬಂದಲಗು ಮೊದಲಾದವು ತಮ್ಮ ಕಾಂಡಗಳಲ್ಲಿರುವ ಗಣ್ಣುಗಳ ಕೆಳಗಡೆಯಿಂದ ಆಗಂತುಕ ಬೇರುಗಳನ್ನು ಬಿಟ್ಟು ನೆಲದಲ್ಲಿ ತಮ್ಮನ್ನು ಗಟ್ಟಿಯಾಗಿ ಊರಿಕೊಳ್ಳುವವು. ಕೆಲವೊಂದು ಕಾರಣದಿಂದ ಈ ತರದ ಕಾಂಡಗಳಿಗಿರುವ ಮುಖ್ಯ ಬೇರಿನ ಸಂಬಂಧವು ಕಡಿದು ಹೋದರೆ ಒಂದೊಂದು ಗಣ್ಣಿಗೆ ಒಂದೊಂದು ಸಸಿಯಂತೆ ಎಷ್ಟೋ ಮರಿಸಸಿಗಳು ಹುಟ್ಟಿ ಸಂತತಿಯ ಅಭಿವೃದ್ಧಿಯನ್ನು ಮಾಡುವವು. ಕಬ್ಬಿನಗಣಿಕೆಗಳನ್ನು ಬಿತ್ತಿದರೆ ಕಬ್ಬಿನ ಸಸಿಗಳು ಹುಟ್ಟುವದು ಎಲ್ಲರಿಗೂ ಗೊತ್ತಿದ್ದ ಸಂಗತಿಯು.

ಕೆಲವು ವನಸ್ಪತಿಕಾಂಡದ ಗಣ್ಣುಗಳ ಮಧ್ಯದಲ್ಲಿರುವ ಅಂತರವು ತೀರನೆಷ್ಟವಾಗುವದರಿಂದ ಆ ಗಣ್ಣುಗಳಿಂದ ಹೊರಟ ಎಲೆಗಳು ಬಂದು ಕ್ಕೊಂದು ತೀರ ಅಂಟಿಕೊಂಡಂತೆ ಆಗಿ ಗಡ್ಡೆಯಂತೆ ತೋರುವ ಬಂದು ಗುಚ್ಛವಾಗುವದು. ನೀರುಳ್ಳಿಯ ಗುಪ್ತಕಾಂಡವು ಇದಕ್ಕೆ ಉತ್ತಮವಾದ

ಪತ್ರವ್ಯವಹಾರ:

ಮೋಹಮುದ್ಗರ (ಮರುಳಮುದ್ದು)

ವೃತ್ತ:—ಮಾತ್ರಾಸಮಕಂ ॥

ಸೆ ರಾಮನ ನೀಂ ನೆನೆ ರಾಮನ ನೀಂ । ನೆನೆ ಕೃಷ್ಣನ ನೀಂ
ಮಂದಮತಿ! ॥

ನಿಹಕೆ ಬಂದೊದಗಲು ಸಾವದು ನಿ । ನ್ನನು ಕಾಯದು "ಬೀ ಪಿ"
ಹೊಂಗಡಗಂ ॥ ಪಲ್ಲ ॥

ಾವಿಲ ಬಿಡು ಬದುಕಿನದಾಸಕವಂ । ನೋವುತಲಿರು ಗಟ್ಟಗ ! ನಿಸ್ಪೃ
ಹೆಯಂ ॥

ಆವುದು ನಿನ್ನಯ ದುಡತದಿ ದೊರೆಯುವ । ದಾ ವಿತ್ತದೆ ರಮಿಸುವದೈ
ಮನವಂ ॥ ಗ ॥ ನೆನೆ॥

ಹೆಣ ಮಾರಣವೆಂದರಿ ಯಿಲ್ಲದರಿಂ । ದಣುವಾದರು ಸುಖವಿದು ದಿಟು
ವಚನಂ ॥

ಧನಮುಳ್ಳರಿಗಳ್ವುದು ಭೀತಿಯು ನಿಜ । ತನಯುನಿನೀ ಕ್ರಮವೆತ್ತಲು
ತೋರ್ಕುಂ ॥ ೨ ॥ ನೆನೆ ॥

ಆಕ್ಕೆ ರಮಣಿ ಮಗನು ನಿನೆಗಾರ್ ಸಂ । ಸಾರದಿರವಿದತಿಶಯ ಚಿತ್ರತರಂ ॥
ಆರವನೈ ನೀನೆತ್ತಣೆನೈದಿದೆ । ಸಾರವ ಚಿಂತಿಸಣುಗ ! ನೀಂ ರಯದಿಂ
॥ ೩ ॥ ನೆನೆ ॥

ಧನಜನಯೌವನಗರ್ವವ ಬಿಡು ನೀಂ । ಕ್ಷಣಮಾತ್ರದೆ ಕೊಂಡೊಯ್ವಂ
ಕಾಲಂ ॥

ತೊನೆ ಮಾಯಾಮಯವಿದು ಸಕಲವ ಬೊ । ಮ್ಮನೆ ಪದವಂ ಹೊಗು
ತಿಳಿಯುತೆ ಜವದಿಂ ॥ ೪ ॥ ನೆನೆ ॥

ನಲಿನೀದಲಗತಜಲಮತಿ ತರಲಂ । ಸಲೆ ಚಂಚಲಮಂತೀ ಬಾಳಿಕೆಯುಂ ॥
ತಿಳಿ ಲೋಕಂ ಕೋಟಲೆ ಪಾವಿನ ಬಾ । ಯಲಿ ಸಿಲುಕಿದೆ ಅಂತುಟು
ಶೋಕಹತಂ ॥ ೫ ॥ ನೆನೆ ॥

ತತ್ವವೆ ಚಿಂತಿಸು ಚಿತ್ತದೆ ಸತತಂ । ಸುತ್ತಿಡು ಕೆಡು ಬದುಕಿನ ಚಿಂತೆ
ಯುಮಂ ॥

ಪತ್ತಿದ ಸಜ್ಜನಸಂಗತಿಯೊಂದೇ । ಉತ್ತರಿಸಲು ನಾವೆಯು ಭವಜಲವಂ
॥ ೬ ॥ ನೆನೆ ॥
ವಿತ್ತಗಳಿಸಲಾರ್ಪವರಂ ಬಳಗಂ । ಸುತ್ತಿಬರುತ ನಲಿಯುವದನ್ನೆವರಂ ॥
ಉತ್ತರವಯದೊಳ್ ಮಾರ್ಪಡೆ ದೇಹಂ । ವಾರ್ತೆಯನೆಸಗರದಾರುಂ
ಮನೆಯೊಳ್ ॥ ೭ ॥ ನೆನೆ ॥
ತನ್ನನೆ ನೋಡಾರಾನೆನ್ನುತ ತೊರೆ । ಮುನ್ನಿನ ನಾಲ್ಕರಿ ಷಟ್ಸಮುದಯ
ದೊಳ್ ॥
ತನ್ನಯ ತಿಳಿವಿಲ್ಲದ ಮೂಢರು ಕುದಿ । ವನ್ನದ ವೊಲ್ ಬೇಯ್ವರು
ನರಕದೊಳುಂ ॥ ೮ ॥ ನೆನೆ ॥

ಸುರಮಂದಿರ ತರುಮೂಲನಿವಾಸಂ । ಧರಣೀತಲ ಹಾಸಜಿನವದು
ಡೆಯುಂ ॥
ಎರವು ಭೋಗಗಳ ಮನದಿಂ ತ್ಯಾಗಂ । ವಿರತಿಯೆಸಗದಾರಿಗೆ ಬಹು
ಸುಖವಂ ॥ ೯ ॥ ನೆನೆ ॥
ಎಳವೆಯೊಳಾಟಗಳಾಡುತ್ತಿರುವಂ । ಬಳವಿಯೊಳಾಗಳೆ ಲಲನಾಸಕ್ತಂ ॥
ಪಳಿಯುಂ ಚಿಂತಾಸಾಗರಮಗ್ನಂ । ಸಿಲುಕನಹಾ ! ಪರಬೊಮ್ಮನೊ
ಳಾವಂ ॥ ೧೦ ॥ ನೆನೆ ॥
ಹಗೆ ಗೆಳೆಯುಂ ನಂಟರು ಮಕ್ಕಳೊಳಂ । ತಗಹೊಡಕಿನೊಳೊಡರಿಸ
ಬೇಡೆಂದುಂ ॥
ನಿಗೆ ವರ್ತಿಸು ಸಮಚಿತ್ತದೊಳೆತ್ತಲ್ । ಲಘುಕಾಲದೆ ವಿಷ್ಣುತ್ವವ
ತಳೆಯಲ್ ॥ ೧೧ ॥ ನೆನೆ ॥
ಪುಟ್ಟೆಲ್ಲಿದೆ ಸಾವಲ್ಲಿದೆ ಜನನದ । ಮಟ್ಟಗೆ ಯಿರವಪ್ಪುದು ತಾಯೊಡ
ಲೊಳ್ ॥
ಕಟ್ಟಿದ ದೋಷಗಳಿಹ ಸಂಸೃತಿಯೊಳ್ । ಮುಟ್ಟೆಂತಿಹೆ ಮಾನವ !
ನೆವ್ಮುದಿಯಂ ॥ ೧೨ ॥ ನೆನೆ ॥
ಹಗಲಿರುಳುಂ ಹೊತ್ತಾರೆ ಬೈಗಿನಂ । ತೊಗುವವು ಶಿಶಿರವಸಂತಂ
ಮಗುಳ್ದುಂ ॥
ತಗುವುದು ಕಾಲಂ ನಡೆವುದು ಬಾಳುಂ । ತೆಗೆದೇಳದು ತಾನಾಶಾಪಥನಂ
॥ ೧೩ ॥ ನೆನೆ ॥

ಸೊರಗುತ ಬೆಂಡಾದವು ಮೈಕೈಗಳ್ । ಸರಿದವು ದಶನಗಳುಂ ಬಾಯಿಂದಂ ॥
ಕರಕಂಪನದಿಂದೆಸೆವುದು ಕೋಲೀ । ಪರಿಯಾದರು ಬಿಡನಾಸೆಯ
ತುತ್ತಂ ॥ ೧೪ ॥ ನೆನೆ ॥

ಹರಿಯೊರ್ವನೆ ನೀನಾನನ್ಯನೊಳುಂ । ಬರಿದೆನ್ನೊಳ್ ಕೆರಳುವೆ ಮತ್ಸ
ರದಿಂ ॥
ನಿರುಕಿಸು ಪೂರ್ಣನ ನಿನ್ನಂ ನಿನ್ನೊಳ್ । ಹರಿಭೇದಜ್ಞಾನವನಿತ್ತತ್ತಲ್
॥ ೧೫ ॥ ನೆನೆ ॥

ಸುಂಕೇರಿ
ತಾ. ೬।೮।೧೯೧೧ }

ವೆಂಕಟೇಶ ರಾ. ಪ್ರಭು.
ಹೆಡ್‌ಪೂಸ್ತರ ಕನ್ನಡ ಶಾಲೆ ಸುಂಕೇರಿ.

॥ನವಾನಂದರಸತರಂಗ॥

ಪುತ್ರವತ್ಪ್ರಜಾಪಾಲಕ ಸಾರ್ವಭೌಮ ಪ್ರಭುತ್ವಕ್ಕೆ
ಚಿನ್ಮಯಮು ಚಿರತ್ವವನ್ನೀಯಲಿ!

॥ವೃತ್ತ॥ ಕರಜಾತಪ್ರಸರಕ್ಕೆ ಸೊರನುದಯಂ ನೈದಿಲ್ಗೆ ಚಂದ್ರೋದಯಂ।
ಪರಪುಷ್ಟಕ್ಕೆ ಮಧೂದಯಂ ಘನತರಾಂಭೋದೋದಯಂ
ಚಾತಕ ॥
ಕ್ಕುರೆಯಾದಂತಿರೆ ದಿಲ್ಲಿ ಪಟ್ಟದಭಿಷೇಕಕ್ಕೆವ್ಮ
ಶ್ರೀ ಸಾರ್ವಭೌ ।
ಮರ ಪುಣ್ಯಾಗಮದಿಂದೆ ಭಾರತರಮಾಸಂತೋಷ
ಸಾರೋದಯಂ ॥೧॥

॥ವಾ. ಷೆ.॥ ಘನತರದ ವೈಭವಕಲಾಬಲಂಗಳ ತವರ್।
ಮನೆಯಾಗಿ, ಧರ್ಮದೇವತೆಗೆ ಬೀಡೆನಿಸುತ್ತ।
ಮನಿಶಮಾದಿತ್ಯ ಕಿರಣಂಗಳಿಂ ಬೆಳಗುವ ವಿಶಾಲತೆಯೊಳೀ
ಧರೆಯೊಳು ॥
ಮಿನುಗುವೆವ್ಮಾಂಗ್ಲ ಸಾಮ್ರಾಜ್ಯ ಕೌಟುಂಬಿಕದ।
ಜನಕಜನನಿಯರಪ್ಪ ಭಾಗ್ಯಶಾಲಿಗಳ ನೈ।
ದನೆಯ ಜಾರ್ಜಪ್ರಭುಗಳಂ ಮೇರಿರಾಜ್ಞಿಯರನುರೆ
ಪೊರಗೆ ಜಗದೀಕನು ॥೨॥

॥ವೃತ್ತ॥ ಶ್ರೀಮದ್ರಾಜಾಧಿರಾಜಂ ವಿಬುಧಸುರಕುಜಂ ಸ್ವಪ್ರಜಾಸ್ಯೈಕ
ಬೀಜಂ।
ರಾಮಂ ಕಾರುಣ್ಯಧಾಮಂ ಮಹಿತಗುಣಯುತೈಶ್ವರ್ಯವಂತಂ
ಬ್ಧಿಸೋಮಂ॥
ಸೀಮಾತೀತಪ್ರಶಾಂತಂ ಪ್ರಬಲತರಯಶೋವಂತನಾದಿತ್ಯ
ಕಾಂತಂ।
ಪ್ರೇಮಂ ಬೆತ್ತಾಳ್ಕಜೇಯಂ ನತರಿಪುನಿಚಯಂ ಭಾರತೀ-
ಭಾಗಧೇಯಂ ॥೩॥

॥ಕಂದ॥ ಪಂಚಶರ ಪಂಚಬಾಣಂ।
ಪ್ರಾಂಚತ್ ಸಾಮ್ರಾಜ್ಯ ನಾಕಲಾಸುಧುರೀಣಂ॥
ಪಂಚಾಸ್ಯಬಲಂ ವಿಮಲಂ।
ಪಂಚಮಜಾರ್ಜಕ್ಷಿತೀಂದ್ರ ಚಂದ್ರಮನೆ ಬಲಂ॥೪॥

॥ವೃತ್ತ॥ ಗಿರಿಯಂತುನ್ನತನೆಬ್ಬದಂತೆ ಸಗುಣಂ ರತ್ನಾಕರಂ ನಿಮ್ಮಗೇ।
ಶ್ವರನಂತಂಬುಜನಾಭನಂತಿ ರನಿಶಂ ಗೋಪಾಲನಾ
ಲೋಚನಾ॥
ಪರನಂಭೋಜತನೂಜನಂತೆಸತತಂ ಸದ್ಭಾರತೀಸಂಯುತಂ।
ಹರನಂತೆಮ್ಮಯ ಪೂಜ್ಯನೈಪನೆಯ ಜಾರ್ಜಂ ರಾಜಮೌಳೀ
ಶ್ವರಂ ॥೫॥

॥ವಾ. ಪ॥ ಪರನು ಕರುಣಾಳುತನದಮಿತಜಲ ಸಂಪದದ।
ಪರತರಸುಕೃತದಗಾಧತೆಯ, ಸುವಿಚಾರಗಳ।
ತೆರೆಗಳೋಳಿಗಳ, ಪುಣ್ಯಪ್ರತಾಪದ ಬಾಡಬುದ ಸಮತ್ವಪ
ಸೀಮೆಯ॥
ಗುರುಕಾಂತಿದಾಂತಿಕ್ಷಮಾದಿಗಳ ರತ್ನಂಗ।
ಳುರುಭಾಗ್ಯಶಾಲಿ ಪಂಚಮಜಾರ್ಜವರ ಮಹಾ।
ಕಠಧಿತ್ಯ ಸಾಮ್ರಾಜ್ಯಲಕ್ಷ್ಮೀನದೀದೇವಿ ನಿನ್ನಂ ಮೆಚ್ಚಿ
ಸೆವೆವುದರಿದೇ ॥೬॥

॥ವಾ. ಷ॥ ಆರತುಲಪುಣ್ಯಪ್ರತಾಪಶಾಲಿಗಳಿವರ್।
ಧಾರನೀ ಭರತಭೂದೇವಿ ಕೈವಿಡಿದಿರ್ವರ್।

ಳಾರಿಂದಲೆಮ್ಮುನ್ನತಿಕೆಯಾಗುತಿರ್ಪುದಾರಡಿಗಳಾರ್ಗೆ
ರಣದೆ॥

ಮಾರಾಂಪರಿಲ್ಲಮಧಿಕೋನ್ನತಮದಾಗಿಪ್ಪ।
ಪಾರಕೀರ್ತಿಧ್ವಜಂ ಧರ್ಮಮಾಶ್ರಯಿಸಿಪ್ಪ।
ಪಾರೊಳಾನವಮ್ಮಾಂಗ್ಲಚಕ್ರವರ್ತಿಗಳಾಳ್ಕೆ ಚಿರಮಿರ್ಕೆ
ಯೆಮ್ಮಮೇಲೆ ॥೭॥

॥ವೃತ್ತ॥ ವಿಧುಮಂಜುಪ್ರಭೆ ಸರ್ವಭೂವಲಯಮಾದಂತ್ಯದ್ಯಶ
ಶ್ಚಂದ್ರಿಕಾಂ।
ಬುಧಯೊಳ್ ಮಗ್ನಮದಕ್ಕೆ! ಶಾಂತಿಸುಖಗಳ್ ನಿನ್ಮಾಳ್ಕೆ
ಯೊಳ್ನರ್ತಿಕೆ॥
ಬುಧರಾಜೋನ್ನತ ಜಾರ್ಜಭೂಮಿಪಮಣೀ, ದೀರ್ಘಾ
ಯುರಾರೋಗ್ಯಸಂ।
ಪದಭೀಷ್ಟಂಗಳನಿತ್ತು ಪಾಲಿಸುಗೆ! ನಿನ್ನಂ ನಾಡೆ ಗೌರೀ
ಶ್ವರಂ॥೮॥

॥ವೃತ್ತ॥ ಜಯೆಜಯೆ! ಶಿಷ್ಟಲೋಕ ಪರಿಪಾಲನಶೀಲ, ಕಲಾಪ್ರ
ಲೋಲ, ನಿರ್।
ಭಯ, ಜಯ! ದುಷ್ಟಗರ್ವಹರ, ಆಂಗ್ಲಧರಾ ರಮಣೀ
ಮನೋಹರ॥
ಜಯ ಜಯ! ದಿವ್ಯಮೂರ್ತಿ, ವಿಲಸನ್ನೀತಿ, ಭಾರತ
ಚಕ್ರವರ್ತಿ, ದುರ್।
ಜಯ, ಜಯ! ಧನ್ಯ ಧನ್ಯ ಘನಪಂಚಮಜಾರ್ಜನರೇಂದ್ರ
ಚಂದ್ರಮ ॥೯॥

॥ ಮಂಗಲಂ ॥

ಗೌರೀಶ.

ದಿಲ್ಲೀ ನಗರದಲ್ಲಿಗುನ ರಾಜ್ಯಾರೋಹಣ ಸಮಾರಂಭವು.

(ತ್ರಿಪುಡೆ)

ವೀರಧೀರರು ಜಾರ್ಜ ಪಂಚಮ ಸಾರ್ವಭೌಮರು ಧನ್ಯರು ॥
ಮೇರಿರಾಣಿಯು ಸಹಿತ ದಿಲ್ಲಿಗೆ ಭೂರಿ ಭಾಗ್ಯದಿ ಬರುವರು ॥ ೧ ॥
ಮುಂಬಪ್ಪುರದಿಂ ಮೆರೆವ ದಿಲ್ಲಿಗೆ ಇಂಬುಗೊಡದಲಿ ಸಂಭ್ರಮ ॥
ಜಂಬು ದ್ವೀಪದೊಳಧಿಕ ಪ್ರೊಸಲೆದು ಕುಂಭಿನಿಯೊಳಿದು ಉತ್ತಮ ॥ ೨ ॥
ಯಾರ ಮುಖದೊಳು ಇದರ ವಿಸ್ತರ ಸಾರಿ ಹೇಳಲು ತೀರದು ॥
ಮೂರು ಲೋಕದಿ ಕಾಣದೀಪರಿ ಭೂರಿ ಸೋಜಿಗ ತೋರ್ಪುದು ॥ ೩ ॥
ಧೊರೆಗಳಾಗಮ ನೋಳ್ಪೆವೆನ್ನುತ ಭರತಖಂಡದಿ ಸರ್ವರು ॥
ಪರಿಪರಿಯ ವಿವಿಧೋಪಚಾರಕೆ ಭರದಿ ಸಿದ್ಧತೆ ಗೈವರು ॥ ೪ ॥
ಸರಸಕೋವಿದ ಸುಗುಣವಂತರು ಬರಲು ಅವರಂ ಕಾಣುತ ॥
ಭರತಭೂಮಿಯು ಭಾಗ್ಯದಿಂದಲಿ ಮೆರಕವಪ್ಪುದು ಸಂತತ ॥ ೫ ॥
ಬರುವ ಸಮಯದಿ ಲೇಸು ಕೀರ್ತಿಯು ಮೆರೆವತೆರದಲಿ ಪೂಜ್ಯರು ॥
ಕರುಣದೋರುತ ಬಾಲವರ್ಗಕೆ ಮೆರೆವ ಪದಕವನೀವರು ॥ ೬ ॥
ಪಾಡಿನಿಂದಲಿ ಪ್ರಜೆಯ ರಕ್ಷಿಪ ರೂಢಿ ಪಾಲಿಗೆ ಸಂತತ ॥
ಹಾಡಿ ಹರಸುತ ನಿತ್ಯ ಸೌಖ್ಯವ ಬೇಡಿರಾಮನ ಸ್ತುತಿಸುತ ॥ ೭ ॥

ಅಗ್ಗರಗೋಣ ಗ್ರಾಮ, ಅಂಕೋಲಾ ತಾಲೂಕ, ಜಿಲ್ಲಾ ಕಾನಡಾ
ತಾ. ೧೫-೧೨-೧೯೧೧ನೇ

ರಾಮಾ ಜಟ್ಟು ನಾಯಕ
ಅಗ್ಗರಗೋಣ ಪಾಟೀಲ.

ಕಳೆದ ಜುಲೈ ತಿಂಗಳ ಶಾಲಾಪತ್ರಕದ ಕವ್ಹರದ ೩ನೇ ಪುಟದಲ್ಲಿ ಜಾಹೀರು ಪಡಿಸಿದ "ತಹಜಿಬುಲ್ ಅತಫಾಲ" ಎಂಬ ಉರ್ದು ಪುಸ್ತಕದ ಬೆಲೆಯು ನಾಲ್ಕು ಆಣೆ ಎಂದು ಪ್ರಸಿದ್ಧ ಮಾಡಲ್ಪಟ್ಟಿದೆ. ಆದರೆ ಅದರ ಬೆಲೆಯು ನಾಲ್ಕು ಆಣೆ ಆರು ಪೈ ಅದೆ ಎಂದು ತಿಳಕೊಳ್ಳಬೇಕು.

ಪುಣೆ.
೨೬-೧೦-೧೧

(*Sd*) P. WREN.
Asstt. Director of Public Instruction
Bombay

ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು ದಶಂಬರಳನೇ ತಾರೀಖಿಗೂ ವರ್ಷಾಯಿರ್ದು ಪರೀಕ್ಷೆಯು ದಶಂಬರ ೧೧ ತಾರೀಖಿಗೂ ಈ ಮೊದಲು ನಿಯಮಿಸಲ್ಪಟ್ಟಿದ್ದವಷ್ಟೆ. ಇವೆರಡೂ ತಾರೀಖುಗಳು ಸಾರ್ವಭೌಮರ ರಾಜ್ಯಾರೋಹಣ ದರ್ಬಾರ ನಿಮಿತ್ತವಾಗಿ ರಜೆಯ ದಿವಸಗಳಾಗಿರುವದರಿಂದ ಪ್ರವೇಶ ಪರೀಕ್ಷೆಯು ದಶಂಬರ ೧೫ ನೆಯ ತಾರೀಖಿಗೂ ವರ್ಷಾಯಿರ್ದು ಪರೀಕ್ಷೆಯು ದಶಂಬರ ೧೪ ನೆಯ ತಾರೀಖಿಗೂ ನಡೆಯುವವು. ಪ್ರವೇಶ ಪರೀಕ್ಷೆಯ ಉಮೇದವಾರರ ಹೆಸರುಗಳು ದಶಂಬರ ೧೪ ನೆಯ ತಾರೀಖಿನ ದಿವಸ ಹಚ್ಚಿಕೊಳ್ಳಲ್ಪಡುವವು.

ಧಾರವಾಡ ಟ್ರೇನಿಂಗಕಾಲೇಜ
ತಾ||೧೫-೧೧-೧೧

V. B. Joshi.
ಪ್ರಿನ್ಸಪಾಲ.

ಪುಸ್ತಕಗಳ ಮೇಲೆ ಅಭಿಪ್ರಾಯ.

ರಾ|| ರಾ|| ವೆ. ತಿ. ಗಳಗನಾಥ ಅಸಿಸ್ಟಂಟ ಮಾಸ್ತರ ಟ್ರೇನಿಂಗ ಕಾಲೇಜ ಧಾರವಾಡ ಇವರು ಬರೆದ "ರಾಜನಿಷ್ಠೆಯೂ ನಮ್ಮ ಪುಣ್ಯಶಾಲಿಗಳಾದ ಸಾರ್ವಭೌಮರೂ" ಎಂಬ ಪುಸ್ತಕ:—೩೬ ಪುಟಗಳುಳ್ಳ ಈ ಚಿಕ್ಕ ಪುಸ್ತಕದ ಬರವಣಿಗೆಯು ಚನ್ನಾಗಿದ್ದು, ಪುಸ್ತಕವು ಬಾಲಕರ ಕೈಯಲ್ಲಿ ಕೊಡಲಿಕ್ಕೆ ಯೋಗ್ಯವಾಗಿದೆ.

ಎ. ಶಾ. ಪ.

"ರಾಜಭಕ್ತಿ" ರಾ|| ರಾ|| ಎಚ್. ಚಿದಂಬರಯ್ಯ ಹೆಡ್ಡ ಮಾಸ್ತರ ಅ. ವ್ಹ. ಸ್ಕೂಲ ದಾವಣಗೆರೆ, ಇವರು ಬರೆದದ್ದು:—ಪುಸ್ತಕದ ಹೆಸರಿಗೆ ಒಪ್ಪುವಂತೆ ರಾಜಭಕ್ತಿ ಪರಿಪೂರ್ಣವಾಗಿದೆ. ಭಾಷೆಯು ಪ್ರೌಢವಾದದ್ದೂ ವಿಷಯವು ಬೋಧಪ್ರದವಾದದ್ದೂ ಉಂಟು. ಈ ಪುಸ್ತಕವು ಈಗಿನ ರಾಜ್ಯಾರೋಹಣ ಸಮಾರಂಭಕ್ಕೆ ಉಚಿತವಾದದ್ದೂ ಹುಡುಗರಿಗೆ ಓದಲಿಕ್ಕೆ ತಕ್ಕದ್ದೂ ಇರುತ್ತದೆಂದು ನಿಃಸಂದೇಹವಾಗಿ ಹೇಳಬಹುದು.

ಎ. ಶಾ. ಪ.

ಜಾಹೀರಾತು.

ಪ್ರಾಥಮಿಕ ಶಾಲೆಗಳ ಉಪಯೋಗಕ್ಕೋಸ್ಕರ ಮಂಜೂರಾದ ಪುಸ್ತಕಗಳ ಯಾದಿಯನ್ನು ಎಲ್ಲರ ಮಾಹಿತಿಗೋಸ್ಕರ ಕೆಳಗೆ ಕೊಟ್ಟದ್ದೀವೆ.

ನಂಬರು	ಪುಸ್ತಕದ ಹೆಸರು.	ಪುಸ್ತಕವು ಯಾವ ಭಾಷೆಯಲ್ಲಿ ಮುದ್ರಿಸಲ್ಪಟ್ಟಿದೆ.	ಯಾತಕ್ಕೋಸ್ಕರ ಮಂಜೂರು ಆಗಿದೆ	ಬೆಲೆ. ರು. ಅ. ಪೈ.	ಶರಾ.
	ಮು. ನೆ. ಕಾಳಿ, ಅಸಿಸ್ಟಂಟ ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೇಕ್ಟರ ರತ್ನಾಗಿರಿ ಕೃತ:—				
೧	ಎಡ್ವರ್ಡ ಕಾರ್ಡುಗಳು.	ಮರಾಠೀ, ಗುಜರಾಥೀ, ಹಾಗು ಉರ್ದು	ಇನಾಮಿಗೆ, ಪುಸ್ತಕಾಲಯಗಳಿಗೆ ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸಲಿಕ್ಕೆ.	೦—೮—೦	
	ವಿದ್ಯಾಖಾತೆ, ಪಂಜಾಬ:—				
೨	ಹಿಂದುಸ್ತಾನದ ಇತಿಹಾಸ.	ಉರ್ದು.	ಉರ್ದು ಶಾಲೆಗಳಲ್ಲಿ ಉಪಯೋಗಿಸಲಿಕ್ಕೆ.	೦—೩—೬	
೩	ಹಿಂದುಸ್ತಾನದ ಭೂಗೋಲ.	ಉರ್ದು.	ಸದರ.	೦—೨—೩	
೪	ಏಷ್ಯಾಖಂಡದ ಭೂಗೋಲ.	ಸದರ.	ಸದರ.	೦—೧—೯	
೫	ಪೃಥ್ವಿಯ ಭೂಗೋಲ.	ಸದರ.	ಸದರ	೦—೨—೧೦	
೬	ಆರೋಗ್ಯ ಮಾರ್ಗ.	ಸದರ.	ಸದರ.	೦—೧—೧೦	
೭	ರಸಾಯನಶಾಸ್ತ್ರ.	ಸದರ.	ಸದರ.	೦—೪—೧೦	

ಶಾಲಾಪತ್ರಿಕೆ

ಪದ್ಯ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಯಣೋತ್ಕರ್ಷಮಂ
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀ ಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆ ಸುಗುಣಂದೋರಲ್ಕೆ ಕೈಕೊಂಬುದೈ
ದಯೆಯಿಂ ದೋಷವತಿವ್ಯವೇಳ್ವುದು ಬುಧರ್ ಜ್ಞಾನಾಭಿವೃದ್ಧಿಪ್ರಿಯರ್

ಪುಸ್ತಕ ೪೩ | ದಿಸಂಬರ ೧೯೧೧. | ಸಂಚಿಕೆ ೧೦.

ಭರತಖಂಡಕ್ಕೆ ಬಿಜಯಂಗೆಯಿಸಿದ ಮೊದಲನೆಯ ಇಂಗ್ಲಿಷ ಚಕ್ರವರ್ತಿಗಳು.

ಹಿಂದುಸ್ತಾನವು ಇಂಗ್ಲಿಷರ ಅಮಲಿನಲ್ಲಿ ಬಂದಂದಿನಿಂದ ಇದುವರೆಗೆ ಹಿಂದುಸ್ತಾನಕ್ಕೆ ಮೊದಲನೆಯ ಸಾರೆಯೇ ಬಿಜಯ ಮಾಡಿದ ನಮ್ಮ ಪರಮಪೂಜ್ಯರಾದ ಸಾರ್ವಭೌಮದಂಪತಿಗಳ ಸ್ವಾಗತಮಹೋತ್ಸವದ ವೃತ್ತಾಂತವನ್ನು ನಮ್ಮ ಇಲಾಖೆಯ ರಾಜಧಾನಿಯಾದ ಮುಂಬಯಿ ಪಟ್ಟಣದ ಪೌರಿಕರು ಯಾವ ರೀತಿಯಿಂದ ಮಾಡಿದ್ದರೆಂಬುದನ್ನು ಕಳೆದ ಸಂಚಿಕೆಯಲ್ಲಿ ನಮ್ಮ ವಾಚಕರಿಗೆ ಅರುಹಿದೆವು. ಈ ಸಂಚಿಕೆಯಲ್ಲಿ ಸಾರ್ವಭೌಮದಂಪತಿಗಳು ಮೊದಲೇ ಗೊತ್ತಾದ ಮೇರೆಗೆ ಮುಂಬಯಿ ಪಟ್ಟಣಕ್ಕೆ ಬರುಮಾಡಿಸಿದ ನಂತರ ಅಲ್ಲಿ ನಡೆದ ಅಗಮನೋತ್ಸವ ಮುಂತಾದ ಪ್ರಗತಿಗಳನ್ನೂ, ತರುವಾಯ ಇತಿಹಾಸಪ್ರಸಿದ್ಧವಾದ ದಿಲ್ಲೀ ಪಟ್ಟಣದಲ್ಲಿ ನೆರೆಯಿಸಿದ ಬಾದಶಾಹೀ ದರಬಾರದ ವಿವರವನ್ನೂ, ಅಲ್ಲಿ ಬಾದಶಹರು ಕೃಪಾಳುಗಳಾಗಿ ಹಿಂದೀ ಪ್ರಜೆಗಳಿಗೆ ಜಯಪಾಲಿಸಿದ ವರಪ್ರದಾನಗಳ ವೃತ್ತಾಂತವನ್ನೂ ಸಂಕ್ಷಿಪ್ತವಾಗಿ ಶ್ರುತಪಡಿಸುತ್ತೇವೆ.

ಮೊದಲೇ ಗೊತ್ತಾದ ಮೇರೆಗೆ ನಮ್ಮ ಸಾರ್ವಭೌಮದಂಪತಿಗಳು ಪಯಿತು ಬಂದ "ಮದೀನಾ" ಎಂಬ ಉಗೆ ಹಡಗವು ಇದೇ ತಿಂಗಳ ೨೨ನೇ ರೀಖಿನ ಪ್ರಾತಃಕಾಲದ ೧೦ ಗಂಟೆಗೆ ಮುಂಬಯಿಯ ಅಪೊಲೋ ಬಂದ

ರದಲ್ಲಿ ಬಂದು ತಲಪಿದ ಸಂಗತಿಯು ನಾಗರಿಕರಿಗೆ ೧೦೧ ತೋಪುಗಳ ಬಾದ
ಶಾಹೀ ಸಲಾಮಿಯಿರದ ವಿದಿತವಾಯಿತು. ಕೂಡಲೆ ಎಲ್ಲಕ್ಕೂ ಮೊದಲು ಹಿಂದು
ಸ್ತಾನದ ವ್ಹಾಯಿಸರಾಯರಾದ ಲಾರ್ಡ ಹಾರ್ಡಿಂಜ ಧೊರೆಗಳು ಬಾದಶಹರ
ದರ್ಶನದ ಸಲುವಾಗಿ ಅಪೊಲೋ ಬಂದರದಿಂದ 'ಮದೀನಾ' ಉಗೆ ಹಡ
ಗಕ್ಕೆ ಹೋದರು; ಅವರು ಅಲ್ಲಿರುವಾಗಲೇ ನಾ. ಗವ್ಹರ್ನರ ಸಾಹೇ
ಬರವರು ತಮ್ಮ ಇಲಾಖೆಯ ಹಾಯಕೋರ್ಟಿನ ಮುಖ್ಯ ನ್ಯಾಯಾಧೀಶ
ರನ್ನೂ ಲಾರ್ಡ ಬಿಶಪ್ಪರೆಂಬ ಧರ್ಮಾಧಿಕಾರಿಗಳನ್ನೂ ಕೌನ್ಸಿಲಿನ
ಸಭಾಸದರನ್ನೂ ಕರಕೊಂಡು 'ಮದೀನಾ' ಉಗೆ ಹಡಗಕ್ಕೆ ಹೋಗಿ
ಬಾದಶಹರವರ ದರ್ಶನ ತಕ್ಕೊಂಡು ತಿರುಗಿ ಬಂದರು. ಗವ್ಹರ್ನರ
ಜನರಲ್ ಸಾಹೇಬರು ಮಾತ್ರ ಬಾದಶಹರ ಪಂಕ್ತಿಗೆ ಅಲ್ಲಿಯೇ
ಉಳಿದರು.

ಮಧ್ಯಾಹ್ನದ ನಾಲ್ಕು ಗಂಟೆಗೆ ಬಾದಶಹರವರು ಅಪೊಲೋ ಬಂದ
ರದ ಮೇಲೆ ಇಳಿಯುವರೆಂತಲೂ, ಆ ಬಳಿಕ ಸ್ವಾಗತಸಮಾರಂಭವು
ಆಗಿ, ಪಟ್ಟಣದ ರಾಜವೀಥಿಗಳಲ್ಲಿ ಸಾರ್ವಭೌಮ ದಂಪತಿಗಳ ಮೆರವಣಿ
ಗೆಯು ಹೊರಡುವದೆಂತಲೂ ಮೊದಲೇ ಗೊತ್ತಾಗಿತ್ತು. ತಡವಾಗಿ
ಹೋದರೆ ಸ್ಥಳವು ದೊರೆಯಲಿಕ್ಕಿಲ್ಲೆಂತಲೂ, ಲಷ್ಕರೀ ಸಿಪಾಯಿಗಳಿಂದ
ಮಾರ್ಗಗಳು ಕಟ್ಟಾಗಬಹುದೆಂತಲೂ, ಮುಂಬಯಿಯ ನಾಗರಿಕರೂ, ಬೇರೆ
ಬೇರೆ ಪ್ರಾಂತಗಳಿಂದ ಬಂದ ಪ್ರೇಕ್ಷಕರ ಸಮುದಾಯವೂ ಮೂರುನಾಲ್ಕು
ತಾಸು ಮುಂಚಿತವಾಗಿಯೇ, ಅಂದರೆ ೧೧ ಗಂಟೆಯಿಂದಲೇ ಅನುಕೂಲ
ತೆಯ ಮೇರೆಗೆ ಸ್ಥಳಗಳನ್ನು ಹುಡುಕಿಕೊಂಡು ಕುಳಿತುಕೊಂಡರು.
೨೦-೩೫ ಸಾವಿರ ಹುಡುಗರು ತಮ್ಮ ಸಲುವಾಗಿ ಮೊದಲೇ ಸಿದ್ಧ ಮಾಡಿಟ್ಟ
ಸ್ಥಳಗಳಲ್ಲಿ ಬಂದು ಕುಳಿತುಕೊಂಡರು. ಸ್ವಾಗತಸಮಾರಂಭಕ್ಕೆ ನಿಮಂತ್ರಿ
ತರಾದ ಜನರು ಸಹ ಸುಮಾರು ಒಂದು ತಾಸು ಮೊದಲೇ ಬರಬೇಕೆಂದ
ನಿಮಂತ್ರಣಪತ್ರಿಕೆಯಲ್ಲಿ ಬರೆದಿತ್ತು. ಆ ಪ್ರಕಾರ ಅವರು ಅಪೊಲೊ
ಬಂದರದ ಮೇಲೆ ಕಟ್ಟಲ್ಪಟ್ಟ ಸೋಪಾನಪಂಙ್ತಿಗಳುಳ್ಳ ವಿಶಾಲವಾ
ಸಭಾಗೃಹದಲ್ಲಿ ಕುಳಿತು ಮಹಾರಾಜರನ್ನೂ ಮಹಾರಾಣಿಯವರನ್ನೂ
ಕಣ್ಣುತುಂಬ ನೋಡುವ ಅಪೇಕ್ಷೆಯಿಂದ ಆ ಸಭಾಗೃಹದ ಟಿಕೀಟನ್ನು
ಸಂಪಾದಿಸಿದ ಎಷ್ಟೋ ಸ್ತ್ರೀಪುರುಷರೂ, ಸ್ವಾಗತಸಮಾರಂಭಕ್ಕಾಗಿ

ನಿಮಂತ್ರಿತರಾದ ಸಂಸ್ಥಾನಿಕರೂ, ದೊಡ್ಡ ದೊಡ್ಡ ಸರದಾರರೂ, ಮುಂಬಯಿಯ ಮ್ಯುನಿಸಿಪಲ್ ಕಾರ್ಪೋರೇಶನ್ ಸಂಸ್ಥೆಯ ಸಭಾಸದರೂ ಸಹ ಎರಡೆರಡು ತಾಸು ಮೊದಲೇ ಬಂದು ತಮ್ಮ ತಮ್ಮ ಸ್ಥಳದಲ್ಲಿ ಕುಳಿತುಕೊಂಡಿದ್ದರು. ಆ ವಾರದ ಆರಂಭದ ದಿವಸಗಳಲ್ಲಿ ಆಕಾಶವು ಅಭ್ರಾಚ್ಛಾದಿತವಾಗುತ್ತಿದ್ದರೂ ೨ನೇ ತಾರೀಖಿನ ದಿವಸ ಆಕಾಶವು ನಿರಭ್ರವಾಗಿದ್ದು ಸೂರ್ಯಪ್ರಕಾಶವು ಸ್ವಚ್ಛವಾಗಿ ಬಿದ್ದಿತ್ತು. ಸಭಾಗೃಹದಲ್ಲಿಯೂ ಮಾರ್ಗಗಳ ಎಡಬಲಗಳಲ್ಲಿಯೂ ಕುಳಿತ ಜನರು ಮಾತ್ರ ಬಿಸಲಿನ ತಾಪದಿಂದ ಗೋಳಾಡಿದರು. ಮಧ್ಯಾಹ್ನದ ಎರಡು ಗಂಟೆಗೆ ಟ್ರಾಮು ಮುಂತಾದ ಗಾಡಿಗಳ ಓಡಾಟವು ಕಟ್ಟಾಯಿತು. ಮಾರ್ಗಗಳ ಎರಡೂ ಮಗ್ಗಲು, ಲಷ್ಕರೀ ಸಿಪಾಯಿಗಳು ಸಾಲಾಗಿ ನಿಂತುಕೊಂಡು ಜನರು ಓಡಾಡದಂತೆ ಕಟ್ಟು ಮಾಡಿದರು. ಮುಂಬಯಿ ಪಟ್ಟಣದ ಎಲ್ಲ ನಿವಾಸಿಗಳು ಅನ್ನೋಲೋ ಬಂದರದ ಮೇಲೆಯೂ, ಮೆರವಣಿಗೆಯು ಹೊರಡತಕ್ಕ ರಾಜಮಾರ್ಗಗಳಲ್ಲಿಯೂ ನೆರೆದದ್ದರಿಂದ ನೋಡುವವರಿಗೆ ಮುಂಬಯಿಪಟ್ಟಣವು ಬಿಮ್ಮಗ್ಗಲಾದಂತೆ ಭಾಸವಾಗುತ್ತಿತ್ತು.

ಮಧ್ಯಾಹ್ನದ ಮೂರುವರೆ ಗಂಟೆಗೆ ಸರಿಯಾಗಿ ಮಹಾರಾಜರನ್ನೂ ಮಹಾರಾಣಿಯವರನ್ನೂ ಕರಕೊಂಡು ಬರುವದಕ್ಕಾಗಿ ನಾ. ಗವರ್ನರ ಜನರಲ್ ಸಾಹೇಬರೂ, ನಾ. ಗವರ್ನರ ಸಾಹೇಬರೂ, ಅನ್ನೋಲೋ ಬಂದರದ ಮೇಲೆ ಹಾಜರಾದರು. ನಾಲ್ಕು ಬಡಿಯುವದಕ್ಕೆ ಹತ್ತು ಮಿನಿಟುಗಳು ಕಡಿಮೆ ಇರುವಾಗ ಸಾರ್ವಭೌಮ ದಂಪತಿಗಳು 'ಮದೀನಾ' ಉಗೆ ಹಡಗದಿಂದ 'ಸ್ಟೀವ್-ಲಾಂಚ' ವೆಂಬ ಉಗಿಯ ಡೋಣಿಯಲ್ಲಿ ಕಾಲಿಟ್ಟರು. ಕೂಡಲೆ ಅಲ್ಲಿದ್ದ ಯುದ್ಧದ ಹಡಗಗಳೊಳಗಿನ ತೋಪುಗಳು ಧಡಂ ಧಡಂ ಎಂದು ಹಾರಹತ್ತಿದವು. ಒಂದುನೂರಾ ಒಂದು ತೋಪುಗಳು ಹಾರುವಷ್ಟರಲ್ಲಿ ಬಾದಶಹರವರು ದಂಡೆಗೆ ಬಂದು ತಲಪಿದರು. ದಂಡೆಯ ಮೇಲೆ ಅವರು ಕಾಲಿಡುವ ಸ್ಥಳದಲ್ಲಿ ಸುವರ್ಣದ ಕಳಸವುಳ್ಳ ಒಂದು ಸುಂದರವಾದ ಮಂಟಪವು ಕಟ್ಟಲ್ಪಟ್ಟಿತ್ತು. ಬಾದಶಹರೂ ಮಹಾರಾಣಿಯವರೂ ಸ್ಟೀವ್-ಲಾಂಚದಿಂದ ಆ ಮಂಟಪದಲ್ಲಿ ಕಾಲಿಟ್ಟ ಕೂಡಲೆ ನಾ. ಗವರ್ನರ ಜನರಲ್‌ರೇ ಮೊದಲಾದ ಅಧಿಕಾರಿಗಳು ಮುಂದಾಗಿ ಆ ಉಭಯತರಿಗೆ ಸ್ವಾಗತವನ್ನು ಮಾಡಿದರು. ತರುವಾಯ ಹಿಂದುಸ್ತಾನದ

ಸ್ಟೇಟ್ ಸೆಕ್ರೆಟರಿಗಳಾದ ಲಾರ್ಡ್ ಕ್ರೂಯ್ ಧೊರೆಗಳೂ ಬಾದಶಹರವರ
ಸಂಗಡ ಬಂದಿದ್ದ ಬೇರೆ ಕೆಲವು ಅಧಿಕಾರಸ್ಥರೂ ಮಂಟಪದಲ್ಲಿ ಇಳಿದರು.
ಈ ಮಂಟಪದಿಂದ ಮಾನಪತ್ರವನ್ನು ಸ್ವೀಕರಿಸುವದಕ್ಕಾಗಿ ಕಟ್ಟಿಸಿದ
ಸ್ವಾಗತಮಂದಿರದೊಳಗಿನ ಉಚ್ಚಾಸನದ ವರೆಗೆ ದಾರಿಯಲ್ಲಿ ಕೆಂಪು
ಬನಾತನ್ನು ಹಾಸಿದ್ದರು. ಮಹಾರಾಜರೂ, ಮಹಾರಾಣಿಯವರೂ, ಸ್ಟೇಟ್
ಸೆಕ್ರೆಟರಿಗಳೂ, ಗವ್ಹರ್ನರ ಜನರಲ್ ಸಾಹೇಬರೂ, ಗವ್ಹರ್ನರ ಸಾಹೇ
ಬರೂ ಆ ಬನಾತಿನ ಮೇಲೆ ಸಾವಕಾಶವಾಗಿ ನಡೆದು ಬರುತ್ತಿದ್ದರು. ಆ
ಕಾಲಕ್ಕೆ ಸಾರ್ವಭೌಮ ದಂಪತಿಗಳ ಮೇಲೆ ಛತ್ರ ಚಾಮರಗಳು ಹಿಡಿಯ
ಲ್ಪಟ್ಟಿದ್ದವು. ಅವರು ಹಾಗೆಯೇ ಅರ್ಧಚಂದ್ರಾಕೃತಿಯುಳ್ಳ ಸಭಾಗೃಹದ
ಎದುರಿಗೆ ಅವರ ಸಲುವಾಗಿ ಕಟ್ಟಲ್ಪಟ್ಟ ಉಚ್ಚಾಸನದ ವರೆಗೆ ಬಂದರು. ಈ
ಉಚ್ಚಾಸನದ ಮೇಲೆ ಬಂದು ಗುಮ್ಮಟವನ್ನು ಕಟ್ಟಿ ಅದರ ಮೇಲೆ ಕಳಸ
ವನ್ನು ಇಡುವದಕ್ಕೆ ಬದಲಾಗಿ ರಾಜಮುಕುಟವನ್ನೇ ಕೂಡ್ರಿಸಿದ್ದರು. ಈ
ಉಚ್ಚಾಸನದ ಮೇಲೆ ರಾಜದಂಪತಿಗಳ ಸಲುವಾಗಿ ಕೆಂಪು ಕಿನಖಾಪಿನ
ಗಾದಿಗಳುಳ್ಳ ಸುವರ್ಣ ವರ್ಣದ ಖುರ್ಚಿಗಳನ್ನು ಮಂಡಿಸಿದ್ದರು. ಹಾಗು
ಕಾಲಕೆಳಗೆ ಸುಂದರವಾದ ಚೌರಂಗಗಳನ್ನು ಇಟ್ಟು ಅವುಗಳ ಮೇಲೆ
ಕೆಂಪು ಬನಾತನ್ನು ಹಾಸಿದ್ದರು. ಸಾರ್ವಭೌಮ ದಂಪತಿಗಳು ತಮ್ಮ
ಉಚಿತವಾದ ಆಸನಗಳಲ್ಲಿ ವಿಶ್ರಮಿಸಿಕೊಂಡರು. ಮಹಾರಾಜರವರ ಬಲ
ಗಡೆಗೆ ಸ್ಟೇಟ್ ಸೆಕ್ರೇಟರಿಗಳೂ ನಾ. ಗವ್ಹರ್ನರ ಜನರಲ್ ಸಾಹೇಬರೂ
ನಿಂತು ಕೊಂಡಿದ್ದರು. ಎಡಗಡೆಗೆ ಮಹಾರಾಣಿಯವರ ಖುರ್ಚಿಯ ಈ
ಚೆಗೆ ನಾ. ಗವ್ಹರ್ನರ ಸಾಹೇಬರೂ ಬೇರೆ ದೊಡ್ಡ ದೊಡ್ಡ ಅಧಿಕಾರಸ್ಥರೂ
ನಿಂತಿದ್ದರು. ಮತ್ತು ಬಾದಶಹರವರ ಎದುರಿಗೆ ಅರ್ಧವರ್ತುಲಾಕೃತಿ
ಯಾದ ಸಭಾಗೃಹದಲ್ಲಿ ಸಂಸ್ಥಾನಿಕರೂ, ಸರದಾರರೂ, ಮಾನಕರಿ
ಗಳೂ, ವ್ಯಾಪಾರಿಗಳೂ, ಸಾವಕಾರರೂ, ಸಭ್ಯಗೃಹಸ್ಥರೂ ಬಾದಶಹ
ರನ್ನು ನೋಡುತ್ತ ನಿಂತುಕೊಂಡಿದ್ದರು.

ಈ ಸಮಯದಲ್ಲಿ ಮುಂಬಯಿ ಮುನಿಸಿಪಲ್ ಕಾರ್ಪೊರೇಶನ್‌ಸಭೆಯ
ಅಧ್ಯಕ್ಷರಾದ ನಾ. ಸರ್ ಫೇರೋಜಶಹಾ ಮೇಥಾ ಇವರು ತಾವು ನಿಂತ ಸ್ಥಳ
ದಿಂದ ಬಾದಶಹರವರ ಎದುರಿಗೆ ಬಂದು ಮುಂಬಯಿಯ ನಾಗರಿಕರ ಪರ
ಯಿಂದ ಸಾರ್ವಭೌಮ ದಂಪತಿಗಳಿಗೆ ಅರ್ಪಿಸತಕ್ಕ ಮಾನಪತ್ರವನ್ನು ಅವ
ರಿಗೆ ಸ್ವಾಭಾವಿಕವಾದ ಗರ್ಜನೆಯಿಂದ ಓದಿ ಹೇಳಿದರು.

ಮುಂಬಯಿಯ ನಾಗರಿಕರು ಕೊಟ್ಟ ಮಾನಪತ್ರದ ಸಾರಾಂಶ.

"ಮಹಾಮಹಿಮರಾದ ಸಾರ್ವಭೌಮ ದಂಪತಿಗಳಿಗೆ:—

ಮುಂಬಯಿನಗರದ್ದಮ್ಯುನಿಸಿಪಲ್ ಕಾರ್ಪೊರೇಶನದ್ದಪ್ರೆಸಿಡೆಂಟರೂ ಸಭಾಸದರೂ ಆದ ನಾವು, ಸಾರ್ವಭೌಮ ದಂಪತಿಗಳಾದಂಥ ತಾವು ಹಿಂದುಸ್ತಾನದ ದಂಡೆಯ ಮೇಲೆ ಕಾಲಿಟ್ಟ ಸಮಯದಲ್ಲಿ ಮುಂಬಯಿಯ ಎಲ್ಲ ನಾಗರಿಕರ ವತಿಯಿಂದ ತಮ್ಮ ಉಭಯತರ ಸ್ವಾಗತವನ್ನು ಮನಃಪೂರ್ವಕವಾಗಿ ಮಾಡಿ, ನಮ್ಮ ಮನಸ್ಸಿನಲ್ಲಿ ನೆಲೆಗೊಂಡಿದ್ದ ರಾಜನಿಷ್ಠೆಯನ್ನೂ ನಮಗುಂಟಾದ ಗೌರವವನ್ನೂ ನಮಗಾದ ಆನಂದವನ್ನೂ ಈ ಮಹತ್ತಮವಾದ ಮಂಗಲ ಪ್ರಸಂಗದಲ್ಲಿ ವ್ಯಕ್ತಪಡಿಸುವದಕ್ಕಾಗಿ ತಮ್ಮ ಅಪ್ಪಣೆಯನ್ನು ಬೇಡಿಕೊಳ್ಳುತ್ತೇವೆ. ಇವತ್ತಿನ ಆನಂದದ ಪ್ರಸಂಗವು ಕೇವಲ ಹಿಂದುಸ್ತಾನದ ಇತಿಹಾಸದಲ್ಲಿಯಷ್ಟೇ ಅಲ್ಲ; ಮಹಾಮಹಿಮರಾದಂಥ ತಮ್ಮ ಸಾರ್ವಭೌಮತ್ವಕ್ಕೆ ಒಳಪಟ್ಟ ಜಗತ್ತಿನ ಬೇರೆ ಬೇರೆ ಭಾಗಗಳ ಇತಿಹಾಸದಲ್ಲಿಯೂ ಅಪೂರ್ವವಾದದ್ದಿರುವದು. ಸಾಮ್ರಾಜ್ಯದ ಮುಖ್ಯ ಸ್ಥಳವನ್ನು ಬಿಟ್ಟು, ಸಮುದ್ರದ ಆಚೆಯಲ್ಲಿರುವ ಪ್ರದೇಶಗಳನ್ನು ಕಣ್ಣಾರೆ ನೋಡುವದಕ್ಕೆ ಇದುವರೆಗೆ ಯಾವ ಅರಸರೂ ಬರಲಿಲ್ಲ. ಆದ ಕಾರಣ ತಮ್ಮ ಆಗಮನದ ಮಹತ್ವವನ್ನು ನಾವು ಚನ್ನಾಗಿ ಅರಿತವರಾಗಿದ್ದೇವೆ. ತಾವು ಸಾಮ್ರಾಜ್ಯಾರೋಹಣ ಮಾಡಿದ ವಾರ್ತೆಯನ್ನು ತಮ್ಮ ಪ್ರಜೆಗಳಾದ ಹಿಂದುಸ್ತಾನದ ಜನರಿಗೆ ತಾವೇ ಬಂದು ಅರುಹಬೇಕೆಂದು ಮಾಡಿದ ತಮ್ಮ ನಿಶ್ಚಯದಿಂದ, ಬ್ರಿಟಿಷ್ ಸಾಮ್ರಾಜ್ಯದಲ್ಲಿ ಹಿಂದುಸ್ತಾನಕ್ಕೆ ಇರುವ ಗೌರವವನ್ನು, ಪದವಿಯೂ, ಇಂಗ್ಲಂಡದ ಅರಸುಮನೆತನದಲ್ಲಿ ಹಿಂದುಸ್ತಾನದ ವಿಷಯದಲ್ಲಿ ಇದ್ದ ಸಹಾನುಭೂತಿಯೂ, ಹಿಂದುಸ್ತಾನದ ಬಾದಶಹರು ಧರಿಸಿದ ರಾಜಮುಕುಟವು ನ್ಯಾಯ—ನೀತಿ—ಪ್ರಗತಿಗಳ ಚಿಹ್ನವಾದ ಬ್ರಿಟಿಶರ ನಿಶಾನಿಯ ಕೆಳಗೆ ಇರುವಂಥ ನಾನಾ ದೇಶಗಳ ನಾನಾ ಜಾತಿಗಳ ಜನರ ಏಕೀಕರಣ್ಣವಾಡುವಂಥ ಪ್ರತ್ಯಕ್ಷ ಬಂಧನವಾಗಿರುವ [illegible] ಸಂಗತಿಯೂ ವ್ಯಕ್ತವಾಗುತ್ತವೆ.

"ತಾವು ಈ ದೇಶಕ್ಕೆ ಬಂದು ಎಲ್ಲಕ್ಕೂ ಮೊದಲು ತಮ್ಮ ಅಡಿದಾವರೆಗಳನ್ನು ಮುಂಬಯಿ ಪಟ್ಟಣದಲ್ಲಿಟ್ಟದ್ದರಿಂದ ಮುಂಬಯಿಗೆ ಶ್ರೇಷ್ಠತ್ವವನ್ನು

ಕೊಟ್ಟಂತಾಯಿತು. ಈ ಮುಂಬಯಿ ನಡುಗಡ್ಡೆಯು ಹ್ಞುಲ್ಲಕ ಸಂಸ್ಥಾನಿಕ
ರಿಂದ ಕೊಂಡುಕೊಂಡಂಥ ಸ್ಥಳವಾಗಲಿ, ಬೇರೆ ಕಡೆಯಿಂದ ಓಡಿ ಬಂದ
ವ್ಯಾಪಾರಸ್ಥರು ಹುಡುಕಿಕೊಂಡ ಸ್ಥಳವಾಗಲಿ ಇರುವದಿಲ್ಲ. ಇದು ಇಂಗ್ಲಂ
ಡದ ಒಬ್ಬ ಅರಸರಿಗೆ ವಿವಾಹಪ್ರಸಂಗದಲ್ಲಿ ವರದಕ್ಷಿಣೆಯಾಗಿ ದೊರಕಿದ
ಸ್ಥಳವಾಗಿರುತ್ತದೆ. ಇಲ್ಲಿ ಈ ಪಟ್ಟಣವನ್ನು ನೆಲಿಸಿದ ಪ್ರಾಚೀನ ಮುತ್ಸದ್ದಿ
ಗಳು ಈ ನಗರದ ಭಾವೀ ವೈಭವವನ್ನು ಅರಿತಿದ್ದರೆಂಬಂತೆ ತೋರುತ್ತದೆ.
ಅವರು ಅಕಾಲಕ್ಕೆ ಈ ನಗರದ ವಿಷಯವಾಗಿ ಅಪೇಕ್ಷಿಸಿದ ಸಂಗತಿಗಳ
ಈಗ ಪೂರ್ಣತೆಯನ್ನು ಹೊಂದಿರುವವೆಂದು ಹೇಳಬಹುದು. ಪಾಶ್ಚಾ
ಮಾತ್ಯ ದೇಶಗಳ ತಿದ್ದುಪಾಟಿನ ಹಾಗೂ ಪೂರ್ವದ ಕಡೆಯ ಸುಧಾರ
ಣೆಯ ಏಕೀಕರಣವಾಗಬೇಕೆಂಬ ಬ್ರಿಟಿಶ್ ಸತ್ತಾಧಾರಿಗಳ ಸದಿಚ್ಛೆಯು ಈ
ನಮ್ಮ ಮುಂಬಯಿ ಪಟ್ಟಣದಲ್ಲಿ ಫಲದ್ರೂಪಕ್ಕೆ ಬರಹತ್ತಿರುವದು. ತವ
ದರ್ಶನಲಾಭವು ನಮಗೆ ಹೊಸದೇನೂ ಅಲ್ಲ. ಈಗ ಆರು ವರ್ಷದ ಕೆಳಗೆ
ತಾವು ಉಭಯತರು ಈ ದೇಶಕ್ಕೆ ಬಂದಾಗ ಈ ದೇಶದ ಎಲ್ಲ ಬಗೆಯ ಸ್ಥಿ
ಯನ್ನು ಸೂಕ್ಷ್ಮ ದೃಷ್ಟಿಯಿಂದ ಅವಲೋಕನ ಮಾಡಿರುವಿರಿ. ಈ ಆರು
ವರ್ಷಗಳ ಅವಧಿಯಲ್ಲಿ ನಾವಾದರೂ ಮೆಲ್ಲ ಮೆಲ್ಲನೆ ಸುಧಾರಣೆಯ ಮಾರ್ಗ
ಕ್ರಮಣವನ್ನು ಮಾಡುತ್ತಲಿರುವೆವು. ಮಹಾರಾಣಿಯವರು ಈ ದೇಶದಲ್ಲಿ
ಪುನಃ ಆಗಮನ ಮಾಡಿದ್ದಕ್ಕಾಗಿ ನಮಗೆ ಅತ್ಯಂತ ಆನಂದವಾಗಿರುತ್ತದೆ.
ತಾವು ಉಭಯತರು ಹಿಂದುಸ್ತಾನದ ಸಾರ್ವಭೌಮ ಬಾದಶಹರೂ ಮಹ
ರಾಣಿಯವರೂ ಎಂಬ ಸಂಬಂಧದಿಂದ ಈ ದೇಶಕ್ಕೆ ಬಂದ ಸಂಗತಿಯು
ನಮ್ಮ ಹೃತ್ಪಟಲದಲ್ಲಿ ಎಂದೂ ಮಾಜಿ ಹೋಗದಂತೆ ಮೂಡಿರುತ್ತದೆ.
ತಾವು ಹಿಂದುಸ್ತಾನದ ವಾಸಿಗಳಾದ ನಮ್ಮ ವಿಷಯವಾಗಿ ನಿಜವಾದ ಸಂ
ತಿಗಳನ್ನು ಅರಿತುಕೊಂಡವರಾಗಿಯೂ, ನಮ್ಮ ಸುಖದುಃಖಗಳ ವಿಷಯ
ವಾಗಿ ಸಹಾನುಭೂತಿಯುಳ್ಳವರಾಗಿಯೂ, ಪರಲೋಕವಾಸಿಗಳಾ
ಪೂಜ್ಯರೂ ಆದ ವಿಕ್ಟೋರಿಯಾ ಮಹಾರಾಣಿಯವರೂ, ಏನೇ ಎಪ್ಪಡ
ಬಾದಶಹರವರೂ ನಮ್ಮ ವಿಷಯವಾಗಿ ವ್ಯಕ್ತಪಡಿಸಿದ ಪ್ರೇಮದಿಂದ ಭರಿ
ರಾಗಿಯೂ, ನಮ್ಮನ್ನು ಆಳಬೇಕೆಂದು ಪ್ರಾರ್ಥಿಸುತ್ತೇವೆ."

ಈ ಅರ್ಥದ ಮಾನಪತ್ರವನ್ನು ಸರ್ ಫೆರೋಜಶಹಾ ಮೇಥಾರವರು
ಓದಿ ಹೇಳಿದ ತರುವಾಯ ಅದು ಬಾದಶಹರವರಿಗೆ ಸಮರ್ಪಿಸಲ್ಪಟ್ಟಿತ

ಈ ಮಾನಪತ್ರವನ್ನು ಹಾಕುವದಕ್ಕಾಗಿ ಚಿನ್ನ ಬೆಳ್ಳಿಗಳಿಂದ ಮಾಡಿದ ದೇವಾಲಯದ ಆಕಾರದ ಒಂದು ಕರಡಿಗೆಯು ಬಳ್ಳೇ ಕೌಶಲ್ಯದಿಂದ ಮಾಡಿ ಸಲ್ಪಟ್ಟಿತ್ತು. ಇದರ ಮೇಲೆ ಮುಂಬಯಿ ಪಟ್ಟಣದಲ್ಲಿ ವಾಸಿಸುವ ಬೇರೆ ಬೇರೆ ಹನ್ನೆರಡು ಜಾತಿಗಳ ಜನರ ಚಿತ್ರಗಳೂ ಹಿಂದು ಪಾರ್ಸಿ ಮೊದಲಾದ ಧರ್ಮದವರ ದೇವತೆಗಳ ಚಿತ್ರಗಳೂ ಇರುವವು. ಇದಲ್ಲದೆ, ಮುಂಬಯಿ ಪಟ್ಟಣದ ಕೆಲ ಕೆಲವು ಭಾಗಗಳೂ ಈ ಕರಡಿಗೆಯಮೇಲೆ ಕೊರೆಯಲ್ಪಟ್ಟಿರುವದರಿಂದ ಇದನ್ನು ನೋಡುವವರಿಗೆ ಮುಂಬಯಿ ನಗರದ ಸಾಧಾರಣ ಕಲ್ಪನೆಯಾಗುವಂತೆ ಇದೆ. ಈ ಕರಡಿಗೆಯಲ್ಲಿ ಒಂದೊಂದು ಮೂಲೆಯಲ್ಲಿ ಒಂದೊಂದು ಗಣಪತಿಯ ಮೂರ್ತಿಯು ಕೂಡ್ರಿಸಲ್ಪಟ್ಟಿರುತ್ತದೆ. ಈ ಪ್ರಕಾರ ಬಹುಕೌಶಲ್ಯದಿಂದ ರಚಿಸಿದಂಥ ಬೆಲೆಯುಳ್ಳ ಕರಡಿಗೆಯನ್ನು ಬಾದಶಹರವರಿಗೆ ಸಮರ್ಪಣ ಮಾಡಿದ ತರುವಾಯ ಬಾದಶಹರವರು ಮಾನಪತ್ರಕ್ಕೆ ಉತ್ತರಕೊಟ್ಟರು.

ಬಾದಶಹರವರ ಉತ್ತರದ ಸಾರಾಂಶವು.

"ನಾನು ನಿಮ್ಮೆಲ್ಲರ ಸನ್ನಿಧಿಗೆ ಈಗ ಹೊಸಬನಾಗಿ ಬಂದಿರುವದಿಲ್ಲ. ಇಂದಿಗೆ ಆರು ವರ್ಷದ ಕೆಳಗೆ ಮಾತ್ರ ಹೊಸಬನಿದ್ದೆನು. ಆ ಕಾಲಕ್ಕೆ ತಾವೆಲ್ಲರೂ ನನಗೆ ಮಾಡಿದ ಸತ್ಕಾರವು ನನ್ನ ಹೃತ್ಪಟಲದಿಂದ ಮಾಜಿ ಹೋಗಿಲ್ಲ. ಹಿಂದಕ್ಕೆ ಈ ದೇಶಕ್ಕೆ ಬಂದಾಗ ಮುಂಬಯಿ ಬಂದರದ ಸಮೀಪಕ್ಕೆ ಬಂದಂತೆ ದಂಡೆಯ ಮೇಲಿನ ಒಳ್ಳೇ ಎತ್ತರವಾದ ತೆಂಗಿನ ಮರಗಳು ಸಮುದ್ರದ ಹೊಟ್ಟೆಯೊಳಗಿಂದ ಒಮ್ಮೆಲೆ ಹೊರಬಿದ್ದು ಎದ್ದು ನಿಂತಂತೆ ನನಗೆ ಭಾಸವಾಯಿತು. ಆ ಪ್ರಸಂಗವನ್ನು ನಾನು ಇನ್ನೂ ಮರೆತಿಲ್ಲ. ಆ ಕಾಲಕ್ಕೆ ತಾವು ಮುಂಬಯಿ ಪಟ್ಟಣದಲ್ಲಿ ಮಾಡಿದ ಸತ್ಕಾರದಿಂದ ಪ್ರೇರಿತನಾಗಿ ಈ ವಿಸ್ತಾರವಾದ ದೇಶದಲ್ಲೆಲ್ಲ ತಿರುಗಾಡಿದೆನು; ಮತ್ತು ಈ ದೇಶದ ನಿವಾಸಿಗಳ ಸಂಬಂಧದಿಂದ ಸೂಕ್ಷ್ಮಜ್ಞಾನವನ್ನು ಸಂಪಾದಿಸಲು ಯತ್ನ ಮಾಡಿದೆನು. ಆ ಜ್ಞಾನದಿಂದ ಈ ದೇಶದ ಬೇರೆ ಬೇರೆ ನಿವಾಸಿಗಳ ವಿಷಯವಾಗಿ ನನ್ನ ಸಹಾನುಭೂತಿಯು ದೃಢವಾಯಿತು. ನನ್ನ ಪೂಜ್ಯರಾದ ಹಿರಿಯರು ಪರಲೋಕವಾಸಿಗಳಾಗಲು, ಪರಂಪರಾಗತವಾದ ಪದ್ಧತಿಯಂತೆ ಬ್ರಿಟಿಶರಾಜ್ಯಸೂತ್ರಗಳು ನನ್ನ ಕೈಯಲ್ಲಿ ಬರಲಾಗಿ, ಎಲ್ಲಕ್ಕೂ ಮೊದಲು ನನ್ನ ಮನಸಿನಲ್ಲಿ ಇನ್ನೊಮ್ಮೆ

ಹಿಂದುಸ್ತಾನಕ್ಕೆ ಹೋಗಿ ಅಲ್ಲಿಯ ನನ್ನ ಪ್ರಜೆಗಳನ್ನು ನೋಡಬೇಕೆಂಬ ಉತ್ಕಟೇಚ್ಛೆಯು ಉತ್ಪನ್ನವಾಯಿತು. ಆ ಇಚ್ಛೆಯು ಇಂದಿಗೆ ಸಫಲವಾಯಿತು. ಈ ದೇಶದಲ್ಲಿ ಸಕಾಲಕ್ಕೆ ಮಳೆಯಾಗದ್ದರಿಂದ ಕೆಲಕೆಲವು ಪ್ರಾಂತಗಳಲ್ಲಿ ಕಾಣುತ್ತಿದ್ದ ಭರಗಾಲದ ಲಕ್ಷಣಗಳು ನಷ್ಟವಾಗಿ ನಾಲ್ಕೂ ಕಡೆಗೆ ಸುಖಸಮೃದ್ಧಿಗಳಾಗುವ ಚಿಹ್ನಗಳು ತೋರುತ್ತಿರುವವು. ಈ ಸಂಗತಿಯಿಂದ ನನ್ನ ಮನಸಿಗೆ ಬಹಳ ಸಮಾಧಾನವಾಗುತ್ತದೆ.

"ನೀವು ನನಗೆ ಅರ್ಪಿಸಿದ ಮಾನಪತ್ರದಿಂದ ಮುಂಬಯಿ ನಡುಗಟ್ಟಿಯು ಇಂಗ್ಲಂಡಿನ ಅರಸನ ವಿವಾಹ ಸಮಯದಲ್ಲಿ ವರದಕ್ಷಿಣೆಯಾಗಿ ಸಿಕ್ಕಿದ್ದೆಂಬ ಪ್ರಾಚೀನ ಸಂಗತಿಯ ಸ್ಮರಣವಾಯಿತು. ಹಂಫ್ರೆ ಕುಕ್ ಎಂಬವನ ಅಭಿಪ್ರಾಯದಂತೆ ಮುಂಬಯಿ ಪಟ್ಟಣವು ಇಂದಿಗೆ ಎರಡೂವರೆ ನೂರು ವರ್ಷಗಳ ಪೂರ್ವದಲ್ಲಿ ವಿಾನು ಹಿಡಿಯುವವರು ವಾಸಿಸಿದ ಒಂದು ಸಣ್ಣ ಹಳ್ಳಿಯಾಗಿತ್ತು. ನಿಮ್ಮ ಪೂರ್ವಜರ ಶ್ರಮದಿಂದ ಇಂದಿಗೆ ಅದು ಬ್ರಿಟಿಶ್ ರಾಜಮುಕುಟದೊಳಗಿನ ಒಂದು ರತ್ನವಾಗಿರುವದು. ಈ ಪಟ್ಟಣದೊಳಗಿನ ಭವ್ಯವೂ ಸುಂದರವೂ ಆದ ಮಂದಿರಗಳನ್ನು ನೋಡಿ ನನ್ನ ಮನಸಿಗೆ ಬಹಳ ಸಂತೋಷವಾಗುತ್ತದೆ. ಈ ಪಟ್ಟಣದಲ್ಲಿ ಅಲ್ಲಲ್ಲಿಗೆ ಹೆಚ್ಚು ಉಪಯುಕ್ತವಾದ ಸುಧಾರಣೆಗಳು ನಿಮ್ಮ ದೃಷ್ಟಿಗೋಚರವಾಗುತ್ತಲಿರುವವು; ಮತ್ತು ಈ ನಗರದಲ್ಲಿ ವಾಸಿಸುವ ಎಲ್ಲ ವರ್ಗದ ನಾಗರಿಕರ ಹಿತದ ಸಲುವಾಗಿಯೂ, ಸುಖಶಾಂತಿಗಳ ಸಲುವಾಗಿಯೂ ಉತ್ಕರ್ಷದ ಸಲುವಾಗಿಯೂ, ನೀವೆಲ್ಲರು ಮಾಡುವ ಪ್ರಯತ್ನಗಳನ್ನು ಕಂಡು ನನಗೆ ಅತ್ಯಂತ ಸಂತೋಷವಾಗುತ್ತದೆ. ಇದರಿಂದ ಈ ನಿಮ್ಮ ಮುಂಬಯಿ ಪಟ್ಟಣವೆಂಬ ರತ್ನದ ಕಾಂತಿಯು ಜಗತ್ತಿನಲ್ಲಿ ವಿಶೇಷವಾಗಿ ಹಬ್ಬುವದೆಂಬದಕ್ಕೆ ಸಂದೇಹವಿಲ್ಲ. ಇವತ್ತು ನೀವು ಒಳ್ಳೇ ವಿಜ್ಞಾಪನೆಯಿಂದ ನನಗೂ ನನ್ನ ಪತ್ನಿಯವರಿಗೂ ಸ್ವಾಗತವನ್ನು ಮಾಡಿದ್ದಕ್ಕಾಗಿ ನಾವು ಉಭಯತರು ಅಂತಃಕರಣಪೂರ್ವಕವಾಗಿ ನಿಮ್ಮ ಅಭಾರವನ್ನಿಸುತ್ತೇವೆ. ದಯಾಳುವಾದ ಪರಮೇಶ್ವರನು ಹಿಂದುಸ್ತಾನದ ನಿವಾಸಿಗಳ ಮೇಲೆ ಸರ್ವಕಾಲವೂ ಕೃಪಾದೃಷ್ಟಿಯನ್ನು ಇಡಲೆಂತಲೂ, ಅವರಿಗೆ ಶಾಂತಿಸಮೃದ್ಧಿಗಳನ್ನು ದಯಪಾಲಿಸಲೆಂತಲೂ, ನಾವು ಪುನಃಪೂರ್ವಕವಾಗಿ ಪ್ರಾರ್ಥಿಸುತ್ತೇವೆ."

ಸಾರ್ವಭೌಮ ಪಂಚಮ ಜಾರ್ಜ ಬಾದಶಹರವರ ಆಗಮನವು.

ಈ ಮೇರೆಗೆ ಬಾದಶಹರವರ ಭಾಷಣವಾದ ಮೇಲೆ,

ಮೆರವಣಿಗೆ

ಯ ಕಾರ್ಯಕ್ಕೆ ಆರಂಭವಾಯಿತು. ಎಲ್ಲಕ್ಕೂ ಮೊದಲು ಚಕ್ರವರ್ತಿಗಳಾದ ಜನೇಜಾರ್ಜ ಸಾರ್ವಭೌಮರೂ ಮೇರಿ ಮಹಾರಾಣಿಯವರೂ ರಥಾರೂಢರಾದರು; ಅವರ ಹಿಂದಿನ ರಥದಲ್ಲಿ ಸ್ಟೇಟ ಸೆಕ್ರೇಟರಿ ಲಾರ್ಡ ಕ್ರ್ಯೂ ಧೊರೆಗಳೂ, ವ್ಹಾಯಿಸರಾಯರಾದ ಲಾರ್ಡ ಹಾರ್ಡಿಂಜ ಧೊರೆಗಳೂ ಕುಳಿತುಕೊಂಡರು. ನಾ. ಗವ್ಹರ್ನರ ಸಾಹೇಬರವರು ತಮ್ಮ ಪತ್ನಿಯವರೊಂದಿಗೆ ಕುಳಿತುಕೊಂಡಿದ್ದ ರಥವು ಮೂರನೇದಾಗಿ ಹೊರಟಿತು. ಈ ಮೂರು ರಥಗಳ ಹಿಂಭಾಗದಲ್ಲಿ ಬಾದಶಹರ ಸಂಗಡ ಇರುವ ಕೆಲವು ದೊಡ್ಡ ಅಧಿಕಾರಸ್ಥರು ಕುಳಿತ ಗಾಡಿಗಳು ನಡೆದಿದ್ದವು. ಈ ಎಲ್ಲ ರಥಗಳ ಹಿಂದಯೂ ಮುಂದೆಯೂ ರಾಹುತರು ನಡೆದಿದ್ದರು; ಎಲ್ಲಕ್ಕೂ ಮುಂದೆ ಕೆಲವು ತೋಫಿನ ಗಾಡಿಗಳು ಇದ್ದವು. ಈ ವೈಭವದಿಂದ ಮೆರವಣಿಗೆಯು ಮೊದಲೇ ಗೊತ್ತಾದ ರಾಜಮಾರ್ಗಗಳಲ್ಲಿ ಹೊರಟಿತು. ಆ ಮಾರ್ಗಗಳ ಎರಡೂ ಮಗ್ಗಲು ಅಲ್ಲಲ್ಲಿಗೆ ಕಂಬಗಳನ್ನು ನಿಲ್ಲಿಸಿದ್ದರು. ಆ ಕಂಬಗಳು ಬುಡದಲ್ಲಿ ಹಸರು ವರ್ಣದಿಂದಲೂ, ಮಧ್ಯದಲ್ಲಿ ಶುಭ್ರವರ್ಣದಿಂದಲೂ ತುದಿಯಲ್ಲಿ ಹೊಂಬಣ್ಣದ ಗುಮ್ಮಟಗಳಿಂದಲೂ ಒಪ್ಪುತ್ತಿದ್ದವು. ಇದಲ್ಲದೆ ಅಲ್ಲಲ್ಲಿಗೆ ಚಿತ್ರವಿಚಿತ್ರವಾದ ಬಣ್ಣದ ನಿಶಾನೆಗಳೂ ತೋರಣಗಳೂ ಮೆರೆಯುತ್ತಿದ್ದವು. ಪ್ರಸಿದ್ಧವಾದ ಸ್ಥಳಗಳಲ್ಲಿ ವಿಶಾಲವಾದ ಕಮಾನುಗಳನ್ನು ಕಟ್ಟಿ ಅವುಗಳ ಕೆಂಪು ಅರಿವೆಯ ಮೇಲೆ "ದೇವರು ಅರಸನನ್ನು ರಕ್ಷಿಸಲಿ" ಎಂಬ ಅರ್ಥದ ವಾಕ್ಯಗಳು ಸುವರ್ಣಾಕ್ಷರಗಳಿಂದ ಹಚ್ಚಲ್ಪಟ್ಟಿದ್ದವು. ಇವುಗಳಲ್ಲಿ ಒಂದು ಕಮಾನು ಸಾವಿರಾರು ಅರಳೆಯ ಅಂಡಿಗೆಗಳಿಂದ ಮಾಡಲ್ಪಟ್ಟಿದ್ದು ಆ ಕಮಾನಿನ ಬೆಲೆಯು ೩॥ ಲಕ್ಷ ರೂಪಾಯಿ ಇತ್ತೆಂದು ಹೇಳುತ್ತಾರೆ!! ಕೆಲವು ರಾಜಮಾರ್ಗಗಳ ಪಾರ್ಶ್ವಗಳಲ್ಲಿ ಕಟ್ಟಿದ ಕಟ್ಟೆಗಳ ಮೇಲೆ ಸಾವಿರಾರು ಹುಡುಗರು ಕೈಯಲ್ಲಿ ನಿಶಾನೆಗಳನ್ನು ಹಿಡಕೊಂಡು ರಾಜದರ್ಶನೋತ್ಸುಕರಾಗಿ ಕುಳಿತುಕೊಂಡಿದ್ದರು. ಬಾದಶಹರ ರಥವು ತಮ್ಮ ಮುಂದೆ ಬಂದ ಕೂಡಲೆ ಅವರು ಕಯ್ಯೊಳಗಿನ ನಿಶಾನೆಗಳನ್ನು ಮೇಲಕ್ಕೆತ್ತಿ ಅನಂದ ಪ್ರದರ್ಶನವನ್ನು ಮಾಡುತ್ತಿದ್ದರು. ಈ ಮೇರೆಗೆ ಬಾದಶ

ಹರವರು ಎಲ್ಲ ಬಾಲಕರಿಗೂ ನೆರೆದ ನಾಗರಿಕರ ಸಮುದಾಯಕ್ಕೂ ಅಪೂರ್ವವಾದ ದರ್ಶನಲಾಭವನ್ನು ಕೊಟ್ಟು ಐದುವರೆ ಗಂಟೆಗೆ ಪುನಃ ಅಪಾಲೋ ಬಂದರಕ್ಕೆ ಬಂದು 'ಮದೀನಾ' ಉಗೆಹಡಗಕ್ಕೆ ಪ್ರಯಾಣ ಬೆಳಿಸಿದರು. ಆ ಬಳಿಕ ಎಲ್ಲರೂ ತಮ್ಮ ತಮ್ಮ ಮನೆಗೆ ಹೊರಟು ಹೋದರು. ಬಾದಶಹರವರ ಆಗಮನಪ್ರೀತ್ಯರ್ಥವಾಗಿ ಪಟ್ಟಣದಲ್ಲಿ ೨ನೇ ೪ನೇ ೫ನೇ ತಾರೀಖುಗಳಲ್ಲಿ

ದೀಪೋತ್ಸವ

ವನ್ನು ಮಾಡಬೇಕೆಂದು ಮೊದಲೇ ಗೊತ್ತಾಗಿತ್ತು; ಆ ಮೇರೆಗೆ ೨ನೇ ತಾರೀಖಿನ ರಾತ್ರಿಯಲ್ಲಿ ಸರಕಾರಿ ಇಮಾರತುಗಳ ಮೇಲೆಯೂ, ಖಾಸಗಿ ಇಮಾರತುಗಳ ಮೇಲೆಯೂ ತರತರದ ಬಣ್ಣಗಳ ವಿದ್ಯುದ್ದೀಪಗಳನ್ನು ಮುಡಿಸಿದ್ದರು. ಸಾರ್ವಭೌಮ ದಂಪತಿಗಳು ನೀರೊಳಗಿಂದ ನೆಲದ ಮೇಲೆ ಕಾಲಿಟ್ಟ ಸ್ಥಳದಲ್ಲಿ ಕಟ್ಟಲ್ಪಟ್ಟ ಮುಸೀದೆಯ ಆಕಾರದ ಮಂಟಪದ ಮೇಲೆ ವಿದ್ಯುತ್ತಿನ ಕೆಂಪು ದೀಪಗಳು ಥಳಥಳಿಸುತ್ತಿದ್ದವು. ಎಲ್ಫಿನ್ಸ್ಟನ್ ಕಾಲೇಜದಲ್ಲಿ ಹಚ್ಚಿದ ಶುಭ್ರವರ್ಣದ ದೀವಿಗೆಗಳಿಂದ ಪ್ರೇಕ್ಷಕರ ಕಣ್ಣು ಕುಕ್ಕುತ್ತಿದ್ದವು. ಸೆಕ್ರೇಟರಿಏಟು, ಹಾಯಕೋರ್ಟ ಮೊದಲಾದ ಸರಕಾರಿ ಇಮಾರತುಗಳ ಮೇಲೆ ಹಚ್ಚಿದ ಕೆಂಪು ದೀಪಗಳು ಜನರ ಮನಸ್ಸನ್ನು ಆಕರ್ಷಿಸುತ್ತಿದ್ದವು. ಯುನಿವ್ಹರ್ಸಿಟಿಯ ಗಡಿಯಾಳದ ಗೋಪುರದ ಅಗ್ರಭಾಗದಲ್ಲಿ ಹಚ್ಚಿದ ಶುಭ್ರವರ್ಣದ ದೀವಿಗೆಗಳು ಬಹು ದೂರದಿಂದ ಜನರ ಮನಸ್ಸನ್ನು ಅಲ್ಲಾದಗೊಳಿಸುತ್ತಿದ್ದವು. ಪಬ್ಲಿಕವರ್ಕ್ಸ ಇಮಾರತಿಯ ಮೇಲಿನ ಹಸರು ನೀಲವರ್ಣದ ದೀವಿಗೆಗಳು ಬಹು ಪ್ರೇಕ್ಷಣೀಯವಾಗಿದ್ದವು. ಬೋರೀ ಬಂದರ ಸ್ಟೇಶನ್, ಹೊಸ ಪೋಸ್ಟಆಫೀಸ, ಮ್ಯುನಿಸಿಪಲ್ ಆಫೀಸ ಇವು ದೀಪಗಳಿಂದ ಮುಚ್ಚಿ ಹೋಗಿದ್ದವು. ಒಟ್ಟಿಗೆ ಈ ಬಗೆಯ ಕಾರ್ತಿಕಮಹೋತ್ಸವದಿಂದ ನಗರಕ್ಕೆ ವಿಲಕ್ಷಣ ಸೌಂದರ್ಯವುಂಟಾಗಿತ್ತು.

ಆದಿತ್ಯವಾರ, ಅಂದರೆ ತಾರೀಖು ೫ನೇ ದಿಜಂಬರ ದಿವಸ ಸಾರ್ವಭೌಮ ದಂಪತಿಗಳಿಗೆ ನಾ. ಗವ್ಹರ್ನರ ಸಾಹೇಬರವರ ಬಂಗಲೆಯಲ್ಲಿ ಮೇಜವಾನಿಯ ಸಮಾರಂಭವಾಯಿತು. ಆ ಕಾಲಕ್ಕೆ ಸರ್ ಫೇರೋಜಶಹಾ ಮೇಥಾ, ಲೇಡೀ ಮೇಥಾ, ಸರ್ ದಿನಶಾ ಪೆಟಿಟ್, ನಾ. ಜಬ್ರಾಹೀಮ

ರಹಿಮತುಲ್ಲಾ ಇವರೇ ಮೊದಲಾದ ದೇಶೀಯ ಗೃಹಸ್ಥರು ಬಾದಶಹರ ಪಂಕ್ತಿಯ ಲಾಭವನ್ನು ಪಡೆದರು.

ಮರುದಿವಸದ ಕಾರ್ಯಕ್ರಮದಲ್ಲಿ ಗೊತ್ತಾದ ಮೇರೆಗೆ ಮಹಾರಾಜರೂ ಮಹಾರಾಣಿಯವರೂ ಹಳೇ ಮುಂಬಯಿ ಪ್ರದರ್ಶನವನ್ನು ನೋಡುವದಕ್ಕಾಗಿ ಪ್ರಾತಃಕಾಲದ ೯॥ ಗಂಟೆಗೆ ಬಂದರು. ಆ ಕಾಲಕ್ಕೆ ಅಲ್ಲಿ ೧೫ ವರ್ಷಕ್ಕಿಂತ ಕಡಿಮೆ ವಯಸ್ಸಿನ ೨೫ ಸಾವಿರ ಹುಡುಗರು ಸಾರ್ವಭೌಮರ ಸ್ವಾಗತವನ್ನು ಮಾಡಿದರು. ಪ್ರತಿಯೊಬ್ಬ ಹುಡುಗನಿಗೆ ಸಾರ್ವಭೌಮರ ಚಿತ್ರಗಳುಳ್ಳ ಒಂದೊಂದು ಕಾಜಿನ ಪೇಲೆಯೂ ಒಂದೊಂದು ಮಿಠಾಯಿಯ ಪುಡಿಕೆಯೂ ಉಚಿತವಾಗಿ ಕೊಡಲ್ಪಟ್ಟವು. ಹಳೇ ಮುಂಬಯಿ ಪ್ರದರ್ಶನದ ವರ್ಣನೆಯನ್ನು ಹಿಂದಿನ ಸಂಚಿಕೆಯಲ್ಲಿ ಕೊಟ್ಟಿದ್ದೇವೆ. ಈ ದಿನ ರಾತ್ರಿ ಸಮುದ್ರ ದಂಡೆಯ ಬ್ಯಾಕ್ ಬೇ ಎಂಬ ಭಾಗದಲ್ಲಿ ಮದ್ದು ಹಾರಿಸಲ್ಪಟ್ಟಿತು.

ತಾರೀಖು ೫ನೇ ದಿವಸ ಮಹಾರಾಜರೂ ಮಹಾರಾಣಿಯವರೂ ಮುಂಬಯಿ ಹತ್ತರ ಘಾರಾಪುರಿ ಎಂಬಲ್ಲಿ ಗುಡ್ಡದೊಳಗೆ ಕೊರೆದು ಮಾಡಿದ ಗುಡಿಗಳನ್ನು ನೋಡಿಕೊಂಡು ಸಾಯಂಕಾಲದ ಆರು ಗಂಟೆಗೆ ತಿರುಗಿ ಬಂದರು; ಮತ್ತು ಅದೇ ದಿವಸ ರಾತ್ರಿ ೧೦॥ ಗಂಟೆಗೆ ಮಹಾರಾಜರವರು ತಮ್ಮ ಯಾವತ್ತು ಸರಂಜಾಮಿನಿಂದಲೂ, ಪರಿವಾರದಿಂದಲೂ ಸಹಿತರಾಗಿ ಸ್ಪೇಶಲ್ ಟ್ರೇನಿನಿಂದ ದಿಲ್ಲಿಗೆ ಪ್ರಯಾಣ ಬೆಳಿಸಿದರು.

ದಿಲ್ಲಿಯನಗರ ಪ್ರವೇಶ.

೬ನೇ ತಾರೀಖಿನ ದಿವಸ ಪ್ರಾತಃಕಾಲದ ೧೦ ಘಂಟೆಯ ಸುಮಾರಿಗೆ ಮಹಾರಾಜರವರ ಆಗಬಂಡಿಯು ದಿಲ್ಲಿಯ ಸ್ಟೇಶನಕ್ಕೆ ಬಂದು ತಲಪಿತು. ಮಹಾರಾಜರೂ ಮಹಾರಾಣಿಯವರೂ ಪ್ಲಾಟಫಾರ್ಮಿನ ಮೇಲೆ ಇಳಿದ ಕೂಡಲೆ, ಗವ್ಹರ್ನರ ಜನರಲ್‌ರಾದ ಲಾರ್ಡ ಹಾರ್ಡಿಂಜ, ಲೇಡೀಹಾರ್ಡಿಂಜ, ಮುಂಬಯಿ ಮದ್ರಾಸಗಳ ಗವ್ಹರ್ನರರು ಇವರೇ ಮೊದಲಾದ ದೊಡ್ಡ ದೊಡ್ಡ ಅಧಿಕಾರಿಗಳು ಸಾರ್ವಭೌಮದಂಪತಿಗಳಿಗೆ ಸ್ವಾಗತವನ್ನು ಮಾಡಿದರು. ಆ ಬಳಿಕ ಮಹಾರಾಜರವರು ಬಹು ಬೆಲೆಯುಳ್ಳ ನಾನಾ ಬಗೆಯ ವಸ್ತ್ರಾಲಂಕಾರಗಳನ್ನು ಧರಿಸಿದ ಹಿಂದುಸ್ತಾನದ ಎಲ್ಲ ಸಂಸ್ಥಾನಿಕರನ್ನು ಕಂಡುಕೊಂಡು ದಿಲ್ಲಿಯಲ್ಲಿ ಪ್ರವೇಶಮಾಡಲು ಸಿದ್ಧರಾದರು.

ಆಕಾಲಕ್ಕೆ ಮಹಾರಾಜರವರು ಒಂದು ಕರೇ ಕುದುರೆಯನ್ನು ಏರಿದ್ದರು; ಮಹಾರಾಣಿಯವರು ಒಂದು ಕರೇ ಕುದುರೆಗಳನ್ನು ಹೂಡಿದ ರಥದಲ್ಲಿ ವಿಶ್ರಮಿಸಿದ್ದರು. ಎಲ್ಲಕ್ಕು ಮುಂದೆ ಹಿಂದೀ "ಎಡಿಕಾಂಗರಾದ" ಗ್ವಾಲ್ಹೇರದ ಮಹಾರಾಜರೂ, ಬಿಕಾನೇರದ ಮಹಾರಾಜರೂ, ರಾಮಪುರದ ನವಾಬರೂ ನಡೆದಿದ್ದರು. ಅವರ ಹಿಂದೆ ಗವ್ಹರ್ನರ ಜನರಲ್‌ರೂ, ಲಾರ್ಡ್ ಕ್ರ್ಯಾಥೊರೆಗಳೂ ಇದ್ದರು. ನಡುವೆ ಬಾದಶಹರವರ ಕುದುರೆಯು ಒಪ್ಪುತ್ತಿತ್ತು. ಮಹಾರಾಣಿಯವರ ರಥದ ಎಡಗಡೆಗೆ ಜೋಧಪುರದ ಸರ್ ಪ್ರತಾಪಸಿಂಗ ಇವರು ಅಶ್ವಾರೂಢರಾಗಿ ನಡೆದಿದ್ದರು. ಇವರೆಲ್ಲರ ಹಿಂದೆ ಇಂಪೀರಿಯಲ್ ಕ್ಯಾಡೆಟ್‌ಕೋರ ಎಂಬ ಸೈನ್ಯದೊಳಗಿನ ಸಂಸ್ಥಾನಿಕರೂ ರಾಜಪುತ್ರರೂ ಇದ್ದರು. ಮೆರವಣಿಗೆಯು ಹೋದ ರಾಜಮಾರ್ಗಗಳಲ್ಲಿ ಎರಡೂ ಮಗ್ಗಲು ಕುದುರೆಗೆ ಕುದುರೆ ಹೊಂದುವಂತೆ ಲಷ್ಕರೀ ರಾಹುತರೂ, ಭುಜಕ್ಕೆ ಭುಜಹೊಂದುವಂತೆ ಕಾಲಾಳುಗಳೂ ಸಾಲಾಗಿ ನಿಂತುಕೊಂಡಿದ್ದರು. ಈ ಸೈನಿಕರ ಹಿಂದೆ ನಾನಾದೇಶಗಳಿಂದ ಬಂದ ವಿಧವಿಧದ ವೇಷಾಕುಗಳನ್ನು ಧರಿಸಿದ ನಾನಾಜಾತಿಯ ಪ್ರೇಕ್ಷಕರ ಸಂದಣಿಯು ಕಂಗೊಳಿಸುತ್ತಿತ್ತು. ನೆರೆದ ಜನರು ಮಹಾರಾಜರಿಗೂ ಮಹಾರಾಣಿಯವರಿಗೂ ಭಕ್ತಿಪೂರ್ವಕವಾಗಿ ತಲೆವಾಗಿ ಮುಜುರೆಮಾಡುತ್ತಿದ್ದರು. ಸಾರ್ವಭೌಮದಂಪತಿಗಳು ಅದನ್ನು ಅತ್ಯಾದರದಿಂದ ಸ್ವೀಕರಿಸುತ್ತಿದ್ದರು. ಯುರೋಪಿಯನ್ ಪ್ರೇಕ್ಷಕರ ಸಮುದಾಯವು ಚಪ್ಪಾಳಿಯ ಗರ್ಜನೆಯಿಂದ ಆನಂದಪ್ರದರ್ಶನವನ್ನು ಮಾಡುತ್ತಿತ್ತು. ಈ ಮೇರೆಗೆ ರಾಜದಂಪತಿಗಳ ಮೆರವಣಿಗೆಯು ಚಾಂದಣೀಚೌಕಿನಲ್ಲಿ ಹಾಯ್ದು ಪಟ್ಟಣದ ಹೊರಗೆ ಒಂದು ಎತ್ತರವಾದ ಸ್ಥಳದ ಮೇಲೆ ಇರುವ "ರಿಜ್" ಎಂಬ ಸ್ಥಳಕ್ಕೆ ಬಂದುತಲಪಿತು. ಅಲ್ಲಿ ನೂತನವಾಗಿ ಕಟ್ಟಿದ ಒಂದು ಸಭಾಗೃಹದಲ್ಲಿ ಹಿಂದುಸ್ತಾನದ ವರಿಷ್ಠ ಹಾಗು ಪ್ರಾಂತಿಕ ಕಾಯಿದೆ ಕೌನ್ಸಿಲುಗಳ ಸಭಾಸದರು ನೆರೆದಿದ್ದರು. ಅಲ್ಲಿ ಚಕ್ರವರ್ತಿ ೫ನೇ ಜಾರ್ಜರವರಿಗೂ ಮಹಾರಾಣಿ ಮೇರಿಯವರಿಗೂ ಹಿಂದುಸ್ತಾನದ ಪ್ರಜೆಗಳ ವತಿಯಿಂದ ಮಾನಪತ್ರವು ಅರ್ಪಿಸಲ್ಪಟ್ಟಿತು.

ಬ್ರಿಟಶ್ ಹಿಂದುಸ್ತಾನದ ಪ್ರತಿನಿಧಿಗಳ ವತಿಯಿಂದ ಅರ್ಪಿಸಿದ ಮಾನಪತ್ರದ ಸಾರಾಂಶವು.

"ನಾವು ಬ್ರಿಟಿಶ್ ಹಿಂದುಸ್ತಾನದ ಎಲ್ಲ ಪ್ರಜೆಗಳ ಪ್ರತಿನಿಧಿಗಳಾಗಿ ಸಾರ್ವಭೌಮದಂಪತಿಗಳಾದ ತಮ್ಮ ಉಭಯತರ ಸ್ವಾಗತವನ್ನು

ಅಂತಃಕರಣಪೂರ್ವಕವಾಗಿ ಮಾಡುತ್ತೇವೆ. ಇಡೀ ಹಿಂದುಸ್ತಾನದ ಏಕಚಕ್ರಾಧಿಪತ್ಯವನ್ನು ವಹಿಸಿ, ಬಹು ಪ್ರಾಚೀನಕಾಲದಿಂದ ಹಿಂದುಸ್ತಾನದ ರಾಜಧಾನಿಯೆಂದು ಹೆಸರು ಪಡೆದ ಈ ಐತಿಹಾಸಿಕ ನಗರವನ್ನು ಪ್ರವೇಶಮಾಡಿದ ಅರಸರಲ್ಲಿ ತಾವೇ ಮೊದಲನೆಯವರು. ಹಿಂದಕ್ಕೆ ಎಷ್ಟೋ ರಾಜರು ಈ ದೇಶವನ್ನು ಆಳಿಹೋಗಿರುವರು. ಆದರೆ ಬ್ರಿಟಿಶ್ ಸಾಮ್ರಾಜ್ಯದಷ್ಟು ವಿಸ್ತಾರವಾದ ಸಾಮ್ರಾಜ್ಯವನ್ನು ಏಕಚಕ್ರಾಧಿಪತ್ಯದಿಂದ ಈವರೆಗೆ ಯಾರೂ ಆಳಲಿಲ್ಲ. ಸಿಂಹಾಸನಾಧಿಷ್ಠಿತರಾದ ಮಹಾರಾಜರ ಕೂಡ ರಾಜನಿಷ್ಠೆಯಿಂದ ನಡಕೊಳ್ಳುವದು ಹಿಂದೀಜನರ ಸ್ವಭಾವ ಸಿದ್ಧವಾದ ಗುಣವಾಗಿರುವದು. ಬ್ರಿಟಿಶ್ ಹಿಂದುಸ್ತಾನದ ಪ್ರಜೆಗಳಲ್ಲಿ ತೋರುವಂಥ ರಾಜನಿಷ್ಠೆಯು ತಮ್ಮ ಸಾಮ್ರಾಜ್ಯದೊಳಗಿನ ಬೇರೆ ಯಾವ ಪ್ರಜೆಗಳಲ್ಲಿಯೂ ದೃಷ್ಟಿಗೋಚರವಾಗಲಾರದು. ಹಿಂದುಸ್ತಾನದಲ್ಲಿ ಬೇರೆ ಬೇರೆ ಜಾತಿಯು ಬೇರೆ ಬೇರೆ ಭಾಷೆಯು ಬೇರೆ ಬೇರೆ ಆಚಾರಗಳುಳ್ಳ ಜನರು ವಾಸಿಸುತ್ತಿದ್ದರೂ ತಮ್ಮ ವಿಷಯವಾಗಿಯೂ, ತಮ್ಮ ಸಿಂಹಾಸನದ ವಿಷಯವಾಗಿಯೂ ರಾಜನಿಷ್ಠೆಯನ್ನು ವ್ಯಕ್ತಪಡಿಸುವಲ್ಲಿ ಅವರೆಲ್ಲರೂ ಒಮ್ಮನಸಿನವರಾಗಿರುತ್ತಾರೆ. ತಮ್ಮ ಉಭಯತರ ಆಗಮನದಿಂದ ನಮಗೆ ಅತ್ಯಂತ ಆನಂದವೂ ಅಭಿಮಾನವೂ ಉಂಟಾಗಿರುತ್ತವೆ. ಈ ಆನಂದಪ್ರದರ್ಶನವು ಇಡೀ ಹಿಂದುಸ್ತಾನದ ಹಳ್ಳಿಪಳ್ಳಿಗಳಲ್ಲಿಯೂ ಒಳ್ಳೇ ಉತ್ಸಾಹದಿಂದ ಮಾಡಲ್ಪಡುವದು. ಮಹಾರಾಣಿಯವರು ತಮ್ಮ ಸಂಗಡ ಈ ದೇಶಕ್ಕೆ ಬಂದದರಿಂದ ಈ ಆನಂದವು ಸಹಸ್ರಮುಡಿ ಮಿಗಿಲಾಗಲಿಕ್ಕೆ ಕಾರಣವಾಯಿತು. ತಮ್ಮ ಉಭಯತರಿಗೆ ದೀರ್ಘಾಯುಷ್ಯವೂ ಆರೋಗ್ಯ ಭಾಗ್ಯಗಳೂ ಉಂಟಾಗಲೆಂತಲೂ, ತಮ್ಮ ದಯಾಪೂರ್ಣವಾದ ಆಳಿಕೆಯಲ್ಲಿ ಹಿಂದುಸ್ತಾನದ ಜನರು ಸುಖಶಾಂತಿಗಳನ್ನೂ ಎಲ್ಲ ಪ್ರಕಾರದ ಉತ್ಕರ್ಷವನ್ನೂ ಹೊಂದಲೆಂತಲೂ ನಾವು ಪ್ರಾರ್ಥಿಸುತ್ತೇವೆ." ಈ ಮಾನಪತ್ರಕ್ಕೆ

ಬಾದಶಹರವರ ಉತ್ತರವು.

"ನಿಮ್ಮ ರಾಜನಿಷ್ಠೆಯನ್ನೂ ಕರ್ತವ್ಯತತ್ಪರತೆಯನ್ನೂ ವ್ಯಕ್ತಪಡಿಸುವ ಮಾನಪತ್ರವನ್ನು ನೀವು ಕೊಟ್ಟದ್ದಕ್ಕಾಗಿ ನಾನು ನನ್ನ ಹಾಗು ಮಹಾರಾಣಿಯವರ ವತಿಯಿಂದ ಮನಃಪೂರ್ವಕವಾಗಿ ನಿಮ್ಮ ಆಭಾರವನ್ನಿಸುತ್ತೇನೆ. ಬ್ರಿಟಿಶ್ ಹಿಂದುಸ್ತಾನದ ಪ್ರಜೆಗಳು ಆರಿಸಿ ಕಳುಹಿದ ಪ್ರತಿನಿಧಿಗಳಾದ

ಕಾಯಿದೆ ಕೌನ್ಸಿಲಿನ ಸಭಾಸದರ ಬುದ್ಧಿಕೌಶಲ್ಯದಿಂದಲೂ ಅನುಭವದಿಂದಲೂ ನಮ್ಮ ಗವ್ಹರ್ನರರಿಗೆ ರಾಜ್ಯಕಾರಭಾರದಲ್ಲಿ ಎಷ್ಟು ಸಹಾಯವಾಗುತ್ತಿರುವದೆಂಬದು ಅವರ ಹೇಳಿಕೆಯಿಂದ ನನಗೆ ಗೊತ್ತಾಗಿರುತ್ತದೆ. ಬ್ರಿಟಿಶ್ ಹಿಂದುಸ್ತಾನದ ಪ್ರಜೆಗಳ ವತಿಯಿಂದ ನೀವು ಮಾಡಿದ ಸ್ವಾಗತದಿಂದ ನನಗೆ ಬಹಳ ಸಂತೋಷವಾಗಿರುವದು. ನಿಮ್ಮ ಮಾನಪತ್ರದೊಳಗಿನ ಶಬ್ದಗಳಿಂದಲೇ ಹೇಳಬೇಕಾದರೆ, ಹಿಂದುಸ್ತಾನವು ಸುಖ ಶಾಂತಿಗಳಲ್ಲಿಯೂ, ಎಲ್ಲ ಬಗೆಯ ಉತ್ಕರ್ಷಗಳಲ್ಲಿಯೂ ದಿನ ದಿನಕ್ಕೆ ಹೆಚ್ಚು ಹೆಚ್ಚು ಪ್ರಗತಿಯನ್ನು ಹೊಂದಬೇಕೆಂಬ ಉತ್ಕಟೇಚ್ಛೆಯು ನಮ್ಮ ಮನಸಿನಲ್ಲಿರುವದು."

ಮಧ್ಯಾಹ್ನದಲ್ಲಿ ಬಾದಶಹರವರು ಕೆಲವು ಸಂಸ್ಥಾನಿಕರನ್ನು ಕಂಡು ಕೊಂಡರು. ಮಹಾರಾಣಿಯವರು ಸರ್ ಜಾನ ಹ್ಯುವೆಟ್ ಎಂಬವರ ಸಂಗಡ ಕೋಟೆಯೊಳಗಿನ ಐತಿಹಾಸಿಕ ಸ್ಥಳಗಳನ್ನು ನೋಡಲು ಹೋಗಿದ್ದರು. ಮರುದಿವಸ, ಅಂದರೆ ತಾರೀಖು ೮ನೇ ದಿಜಂಬರ ದಿವಸ ಪ್ರಾತಃಕಾಲಕ್ಕೆ ಮಹಾರಾಜರವರು ಮತ್ತೆ ಕೆಲವು ಸಂಸ್ಥಾನಿಕರಿಗೆ ದರ್ಶನಲಾಭವನ್ನು ಕೊಟ್ಟರು. ಈ ಅವಧಿಯಲ್ಲಿ ಮಹಾರಾಣಿಯವರು ಕುತುಬ ಮಿನಾರ ಮೊದಲಾದ ಪ್ರಾಚೀನ ಐತಿಹಾಸಿಕ ಸ್ಥಳಗಳನ್ನು ನೋಡಿಕೊಂಡು ಬಂದರು. ಆ ದಿನ ಮಧ್ಯಾಹ್ನದಲ್ಲಿ ಮಹಾರಾಜರ ಹಸ್ತದಿಂದ

ಶಾಂತತಾಪ್ರಿಯರಾದ ಪರಮ ಪೂಜ್ಯ ಏಳನೇ ಎಡ್ವರ್ಡ

ಬಾದಶಹರ ಸ್ಮಾರಕದ

ಕಲ್ಲು ಕೂಡ್ರಿಸಲ್ಪಟ್ಟಿತು. ಇಡೀ ಹಿಂದುಸ್ತಾನದ ಜನರು ಈ ಸ್ಮಾರಕದ ಸಲುವಾಗಿ ವಂತಿಗೆಯ ಹಣವನ್ನು ಕೊಟ್ಟಿರುವರು. ಒಟ್ಟಿಗೆ ೫ ಲಕ್ಷ ರೂಪಾಯಿಗಳು ಕೂಡಿರುವವು. ಜುಮ್ಮಾ ಮಸೀದಿಗೂ ಕೋಟೆಗೂ ನಡುವೆ ಇರುವ ವಿಸ್ತಾರವಾದ ಬೈಲಿನಲ್ಲಿ ೭ನೇ ಎಡ್ವರ್ಡ ಬಾದಶಹರವರ ಅಶ್ವಾರೂಢ ಮೂರ್ತಿಯು ಸ್ಥಾಪಿಸಲ್ಪಡತಕ್ಕದ್ದಿರುವದು. ಈ ಪ್ರಸಂಗದಲ್ಲಿ ಸ್ಮಾರಕ ಕವಿಾಟಿಯ ವತಿಯಿಂದ ಗವ್ಹರ್ನರ ಜನರಲ್ ಲಾರ್ಡ ಹಾರ್ಡಿಂಜ ಸಾಹೇಬರವರು ಒಂದು ಮಾನಪತ್ರವನ್ನು ಓದಿಹೇಳಿದರು. ಅದಕ್ಕೆ ಮಹಾರಾಜರವರು ತಮ್ಮ ಪೂಜ್ಯ ಪಿತೃಗಳಾದ ಪರಲೋಕವಾಸಿಗಳಾದ ೭ನೇ ಎಡ್ವರ್ಡ ಬಾದಶಹರ ಮರಣದ ವಿಷಯವಾಗಿ ಅತ್ಯಂತ

ದುಃಖವನ್ನು ವ್ಯಕ್ತಪಡಿಸಿ, ಹಿಂದುಸ್ತಾನದ ಎಲ್ಲ ಜನರು ಈ ಸ್ಮಾರಕವನ್ನು ಮಾಡಿದ್ದಕ್ಕಾಗಿ ಸಂತೋಷ ಪ್ರದರ್ಶನವನ್ನು ಮಾಡಿದರು; ಮತ್ತು ಇದು "ಮುಂದಿನ ಸಂತತಿಯವರಿಗೆ ನಿಮ್ಮ ರಾಜನಿಷ್ಠೆಯನ್ನೂ ಪರಲೋಕವಾಸಿಗಳಾದ ಬಾದಶಹರ ಸಹಾನುಭೂತಿಯನ್ನೂ ನೆನಪು ಮಾಡಿಕೊಡುವದು" ಎಂದು ಭಾಷಣ ಮಾಡಿದರು.

ಶನಿವಾರ ತಾರೀಖು ೯ನೇ ದಿವಸ ಮಹಾರಾಜರವರು ಮತ್ತೆ ಕೆಲವು ಸಂಸ್ಥಾನಿಕರಿಗೆ ದರ್ಶನ ಲಾಭವನ್ನು ಕೊಟ್ಟರು. ಆ ದಿನ ಮಧ್ಯಾಹ್ನದಲ್ಲಿ ಬಾದಶಹರವರಿಗೆ ಸರಕಾರೀ ಕಾರ್ಯಕ್ರಮವೇನೂ ಇದ್ದಿಲ್ಲ. ಆದರೆ ಮಹಾರಾಣಿಯವರ ಕಡೆಗೆ

ಹಿಂದು ಸ್ತ್ರೀಯರ ಡೆಪ್ಯುಟೇಶನವು

ಹೋಯಿತು. ಅವರಲ್ಲಿ ಪತಿಯಾಲಾ ಸಂಸ್ಥಾನದ ಮಹಾರಾಣಿಯವರೂ ಕಪುರಥಳಾ ಮೌರಭಂಜ, ವಿಜಯನಗರ ಈ ಸಂಸ್ಥಾನಗಳ ಮಹಾರಾಣಿಯವರೂ, ಜಂಜೀರಾ ಸಂಸ್ಥಾನದ ಬೇಗಮಗಳೂ, ಲೇಡೀ ಹರನಾಮ ಸಿಂಗ, ಲೇಡೀ ಟಾಟಾ, ಲೇಡೀ ಮೇಥಾ, ಮಿಸೆಸ್ ಹೈದರೀ, ಮಿಸೆಸ್ ದಾದಾ ಭಾಯಿ, ಮಿಸೆಸ್ ಸಿಂಹ, ಮಿಸೆಸ್ ಮುಧೋಳಕರ ಮೊದಲಾದ ಸ್ತ್ರೀಯರು ಇದ್ದರು. ಈ ಪ್ರಸಂಗದಲ್ಲಿ ಮಹಾರಾಣಿಯವರಿಗೆ ಮೊಗಲರ ಕಾಲದ ಪಚ್ಚರತ್ನದಿಂದ ಖಚಿತವಾದ ಎರಡು ಆಭರಣಗಳು 'ಭರತಖಂಡದ ಸ್ತ್ರೀಯರ ವತಿಯಿಂದ' ಕಾಣಿಕೆಯಾಗಿ ಅರ್ಪಿಸಲ್ಪಟ್ಟವು. ಮೊದಲು ಲೇಡೀ ಹಾರ್ಡಿಂಜರವರು ಒಂದು ಮಾನಪತ್ರವನ್ನು ಓದಿ ಹೇಳಿದರು. ತರುವಾಯ ಪತಿಯಾಲಾ ಸಂಸ್ಥಾನದ ಮಹಾರಾಣಿಯವರು ಮೇಲೆ ಹೇಳಿದ ಆಭರಣಗಳನ್ನು ಸಾರ್ವಭೌಮ ಮಹಾರಾಣಿಯವರಿಗೆ ಸಮರ್ಪಿಸಿದರು. ಆ ಬಳಿಕ ಮಹಾರಾಣಿಯವರು ಆಭಾರಮನ್ನಿಸುವ ಭಾಷಣವನ್ನು ಮಾಡಿದರು. ಮಿಸೆಸ್ ಗ್ರ್ಯಾಂಟ್ ಎಂಬವರು ಅದನ್ನೇ ಉರ್ದು ಭಾಷೆಯಲ್ಲಿ ಹೇಳಿದ. ಮೇಲೆ ಒಬ್ಬೊಬ್ಬ ಮಹಾರಾಣಿಯು ಸಾರ್ವಭೌಮ ಮಹಾರಾಣಿಯವರ ಮುಂದೆ ಹೋಗಿ ತನ್ನ ಸಾಂಪ್ರದಾಯಾನುಸಾರವಾಗಿ ನಮಸ್ಕಾರವನ್ನು ಮಾಡಿದಳು. ಮೇರಿ ಮಹಾರಾಣಿಯವರು ಪ್ರತಿಯೊಬ್ಬರಿಗೆ ತಿರುಗಿ 'ಶೇಕ ಹ್ಯಾಂಡ' ಮಾಡಿದರು. ಕಟ್ಟಕಡೆಗೆ ಎಲ್ಲರೂ ಮತ್ತೊಮ್ಮೆ ಸಲಾಮು ಮಾಡಿ ತಮ್ಮ ತಮ್ಮ ಸಿಬಿರಗಳಿಗೆ ಹೊರಟು ಹೋದರು.

ಇಳಿಹೊತ್ತಿನ ಕಡೆಗೆ ಮಹಾರಾಜರೂ ಮಹಾರಾಣಿ ಮೇರಿಯವರೂ ಪೋಲೋ, ಫುಟ್‌ಬಾಲ ಆಟಗಳನ್ನು ನೋಡಲಿಕ್ಕೆ ಹೋಗಿದ್ದರು.

ಮರುದಿವಸ, ಅಂದರೆ ತಾರೀಖು ೧೦ನೇ ದಿವಸ ರವಿವಾರ ವಿಶ್ರಾಂತಿಯ ದಿವಸವಿದ್ದದರಿಂದ ಆ ದಿವಸ ದರ್ಬಾರೋತ್ಸವದ ಯಾವ ಕಾರ್ಯಕ್ರಮವೂ ಇದ್ದಿಲ್ಲ. ಆದರೆ ಪ್ರಾತಃಕಾಲದಲ್ಲಿ ಕ್ರಿಸ್ತೀ ಧರ್ಮಾನುಸಾರವಾಗಿ ಸಾರ್ವಭೌಮದಂಪತಿಗಳಿಂದ ಈಶ್ವರೋಪಾಸನೆಯು ಮಾತ್ರ ಮಾಡಲ್ಪಟ್ಟಿತು. ಆ ಪ್ರಸಂಗದಲ್ಲಿ ಮದ್ರಾಸದ ಬಿಕಪ್ ಸಾಹೇಬರು

ಧರ್ಮೋಪದೇಶ

ವನ್ನು ಮಾಡಿದರು. ಅದರ ಸಾರಾಂಶವು:—"ಎಲ್ಲ ಶಕ್ತಿಗಳಿಗೆ ಪರಮೇಶ್ವರನು ಆದಿಕಾರಣನಿರುತ್ತಾನೆ. ಬಾದಶಹನು ಪರಮೇಶ್ವರನ ಪ್ರತಿನಿಧಿಯಾಗಿ ರಾಜ್ಯವನ್ನಾಳುತ್ತಾನೆ. ದೇವರು ಈ ರಾಜಸಭ್ಯನನ್ನು ಬಾದಶಹರ ಆಧೀನ ಪಡಿಸಿರುವನೆಂದು ಕ್ರಿಸ್ತೀ ಧರ್ಮಾನುಯಾಯಿಗಳಾದ ನಾವು ಮಾತ್ರ ಭಾವಿಸುತ್ತೇವಂತಲ್ಲ; ಆದರೆ ಹಿಂದೀ ಜನರು—ಕ್ರಿಸ್ತೀ ಧರ್ಮದವರಲ್ಲದ ಜನರು—ಸಹ ಹೀಗೇ ತಿಳಿಯುತ್ತಾರೆ; ಮತ್ತು ಈ ತಿಳುವಳಿಕೆಯು ಅವರು ಬಾದಶಹರ ವಿಷಯವಾಗಿ ಒಳ್ಳೇ ರಾಜನಿಷ್ಠೆಯುಳ್ಳವರಾಗಲಿಕ್ಕೆ ಒಂದು ದೊಡ್ಡ ಕಾರಣವಿರುತ್ತದೆ. ಸಾಮರ್ಥ್ಯವು ಈಶ್ವರನದಿದ್ದದರಿಂದ ಅದರ ಉಪಯೋಗವು ಸಹ ಪರಮೇಶ್ವರನ ಉದ್ದೇಶವನ್ನು ಸಾಧಿಸುವದರಲ್ಲಿಯೇ ಆಗಲಿಕ್ಕೆ ಬೇಕು. ಜಗತ್ತಿನಲ್ಲಿ ಪರಮೇಶ್ವರನ ಜನಕತ್ವವೂ ಅಖಿಲ ಮಾನವರ ಬಂಧುತ್ವವೂ ಸ್ಥಾಪಿತವಾಗುವಂತೆ ಪ್ರಯತ್ನ ಮಾಡುವದು ಅತ್ಯವಶ್ಯವು. ಯಾವದೊಂದು ಸಾಮ್ರಾಜ್ಯದಲ್ಲಿ ಈ ತರದ ಬಂಧುಪ್ರೇಮದ ಬೆಳವಣಿಗೆಯು ಯಾವ ಪ್ರಮಾಣದಿಂದ ಮಾಡಲ್ಪಡುವದೋ ಆ ಮಾನದಿಂದ ಅದರ ಯೋಗ್ಯತೆಯನ್ನು ನಿರ್ಣಯಿಸಬಹುದು. ಎಲ್ಲ ಜಾತಿಯವರ ಕೂಡಲೂ, ಎಲ್ಲ ವರ್ಗದವರ ಕೂಡಲೂ, ಬಂಧುಭಾವದಿಂದ ನಡೆಯುವ ಕ್ರಮವನ್ನು ಎಲ್ಲರೂ ಅನುಸರಿಸಿ, ಕ್ರಿಸ್ತೀ ಧರ್ಮಾನುಯಾಯಿಗಳಿಗೆ ಒಪ್ಪದಂಥ ಸಂಕುಚಿತ ಮನೋವೃತ್ತಿಯನ್ನು ಬಿಟ್ಟುಬಿಡತಕ್ಕದ್ದು. ಕಾರ್ಯಕುಶಲತೆಯಲ್ಲಿಯೂ, ಕರ್ತವ್ಯತತ್ಪರತೆಯಲ್ಲಿಯೂ, ನ್ಯಾಯಪ್ರಿಯತೆಯಲ್ಲಿಯೂ ಇಂಗ್ಲಿಷರು ಈ ದೇಶದಲ್ಲಿ ಪ್ರಸಿದ್ಧರಾಗಿರುತ್ತಾರೆ. ಆದರೆ ಅವರು ಸದ್ಯಕ್ಕಿಂತ ಹೆಚ್ಚು ಬಂಧುಪ್ರೇಮ

ವನ್ನು ಅಂತಃಕರಣದಲ್ಲಿ ಧರಿಸಿ ನಡೆಯುವದು ಅವಶ್ಯವದೆ. ಈಶ್ವರನು ನಿಮ್ಮ ಕಡೆಗೆ ಒಪ್ಪಿಸಿದ ಸಾಮ್ರಾಜ್ಯವನ್ನು ಆಳುವ ಜವಾಬದಾರಿಯ ಕೆಲಸದೊಳಗಿಂದ ಪಾರಾಗಲಿಕ್ಕೆ ನಿಮ್ಮಲ್ಲಿ "ಪ್ರೀತಿಸ್ವಾರ್ಥತ್ಯಾಗಗಳ ಅವಶ್ಯಕತೆಯು ಬಹಳ ಉಂಟು."

ಸೋಮವಾರ ತಾರೀಖು ೧೧ನೇ ದಿಶಂಬರ ದಿವಸ ಪೋಲೋಆಟದ ಬೈಲಿನಲ್ಲಿ ಬ್ರಿಟಿಶ್ ಸೈನ್ಯದ ಏಳುಗುಂಪುಗಳಿಗೂ ಹಿಂದೀಸೈನ್ಯದ ಎರಡು ಗುಂಪುಗಳಿಗೂ ಮಹಾರಾಜರವರು ನಿಶಾನೆಗಳನ್ನು ಉಚಿತವಾಗಿ ಕೊಡುವ ಸಮಾರಂಭವು ನೆರವೇರಿತು.

ಮರುದಿವಸವೇ ಹಿಂದುಸ್ತಾನದ ಇತಿಹಾಸದಲ್ಲಿ ಚಿರಸ್ಮರಣೀಯವಾದ ಬಾದಶಾಹೀ ದರ್ಬಾರದ ದಿವಸವಾಗಿತ್ತು. ಈ ದರ್ಬಾರದ ಸಮಾರಂಭವು ದಿಲ್ಲೀಪಟ್ಟಣದ ಪೂರ್ವದ ಇತಿಹಾಸ, ಪ್ರಾಚೀನ ಪರಂಪರೆ, ಹಾಗು ಅದರೊಳಗಿನ ಜನಸಮುದಾಯದ ಮನಃಪ್ರವೃತ್ತಿ ಇವುಗಳಿಗೆ ಸಂಪೂರ್ಣ ಅನುರೂಪವಾದದ್ದಿದ್ದು, ಅದರ ಯಾವತ್ತು ಕಾರ್ಯಗಳು ಶಾಂತರೀತಿಯಿಂದಲೂ, ಒಳ್ಳೇ ವಿಜೃಂಭಣೆಯಿಂದಲೂ, ನಿರ್ವಿಘ್ನದಿಂದಲೂ ಸಾಂಗವಾದವು. ಈ ಅನುಪಮವಾದ ಸಮಾರಂಭದ ಯೋಗದಿಂದ ಹಿಂದುಸ್ತಾನವು ಏಕಚಕ್ರಾಧಿಪತ್ಯವುಳ್ಳ ಬ್ರಿಟಿಶ್ ಸಾಮ್ರಾಜ್ಯದ ಮಹತ್ವದ ಅಂಗವಿರುತ್ತದೆಂಬ ಸಂಗತಿಯು ಅತ್ಯಂತ ಸ್ಪಷ್ಟರೀತಿಯಿಂದ ನಿದರ್ಶನಕ್ಕೆ ಬಂದಿತು. ಈ ಪ್ರಸಂಗದ ಸ್ಮರಣೆಯು ಎಲ್ಲ ಹಿಂದೀಪ್ರಜೆಗಳ ಹೃದಯದಲ್ಲಿಯೂ ಬಹುಕಾಲದ ವರೆಗೆ ಜಾಗ್ರತವಾಗಿ ಉಳಿಯುವದೆಂಬದಕ್ಕೆ ಸಂದೇಹವಿಲ್ಲ.

ಆಹೊತ್ತು, ಅಂದರೆ ದಿಶಂಬರ ೧೨ನೆಯ ತಾರೀಖಿನ ದಿವಸ ದಿಲ್ಲೀನಗರದಲ್ಲಾದ ಸಮಾರಂಭವನ್ನು ಎಷ್ಟು ವರ್ಣಿಸಿದರೂ ತೀರದು. ಆ ದಿವಸ ದರ್ಬಾರದ ಸಭಾಗೃಹದಲ್ಲಿ ಅರುಣೋದಯವಾಗುವ ಪೂರ್ವದಲ್ಲಿಯೇ ಆಮಂತ್ರಿತ ಜನರ ಸಂದಣಿಯು ಒಂದೇಸವನೆ ಆಗಲಾರಂಭಿಸಿತು. ಸೈನ್ಯದ ಬೇರೆ ಬೇರೆ ಭಾಗಗಳು ತಮ್ಮ ತಮ್ಮ ನಿಶಾನೆಗಳನ್ನು ಹಿಡಿದುಕೊಂಡು ನಿಯಮಿತ ಸ್ಥಳದಲ್ಲಿ ಹೋಗಿ ನಿಲ್ಲುವ ಸಿದ್ಧತೆಯು ನಡೆದಿತ್ತು. ರಾಜದರ್ಶನೋತ್ಸುಕರಾದ ಜನರು ಗುಂಪುಗುಂಪಾಗಿ ಬಾದಶಹರವರ ಸ್ವಾರಿಯು ಬರುವ ರಾಜಮಾರ್ಗದ ಎಡಬಲಗಳಲ್ಲಿ ಎತ್ತರವಾದ ಸ್ಥಳಗಳನ್ನು ಸೇರಿಕೊಂಡು ಮಹಾರಾಜರವರ ಮಾರ್ಗಪ್ರತೀಕ್ಷೆಯನ್ನು

ಮಾಡಹತ್ತಿದ್ದರು. ಸುಮಾರು ಹತ್ತುಘಂಟೆಯ ಸುಮಾರಕ್ಕೆ ಭವ್ಯವಾದ ಆ ಸಭಾಗೃಹವು ರಾಜನಿಷ್ಠರಾದ ಪ್ರಜೆಗಳಿಂದ ಸಂಪೂರ್ಣವಾಗಿ ತುಂಬಿ ಹೋಯಿತು.

ದೊಡ್ಡ ದೊಡ್ಡ ಸಂಸ್ಥಾನಿಕರು ರತ್ನಖಚಿತವಾದ ಅಲಂಕಾರಗಳಿಂದಲೂ ತರತರದ ಜರದ ವಸ್ತ್ರಗಳಿಂದಲೂ ಅಲಂಕೃತರಾಗಿ ಬಂದು ಯೋಗ್ಯಸ್ಥಾನಗಳಲ್ಲಿ ಕುಳಿತುಕೊಂಡಿದ್ದರು. ರಣಶೂರರಾದ ವೃದ್ಧ ಯೋಧರು ತಮ್ಮ ತಮ್ಮ ಯೋಗ್ಯತಾವ್ಯಂಜಕಗಳಾದ ಉಡುಪುಗಳನ್ನು ಧರಿಸಿಕೊಂಡಿದ್ದರು. ಪ್ರೇಕ್ಷಕರೂ ಸರಕಾರೀ ಅಧಿಕಾರಿಗಳೂ ಬೇರೆ ಬೇರೆ ತರದ ಪ್ರಾತಃಕಾಲದ ಉಡಿಗೆತೊಡಿಗೆಗಳನ್ನು ಧರಿಸಿಕೊಂಡು ತಮ್ಮ ತಮ್ಮ ಸ್ಥಳಗಳಲ್ಲಿ ಮಿಗಿಲಾದ ಉತ್ಸುಕತೆಯಿಂದ ಕುಳಿತುಕೊಂಡಿದ್ದರು. ಮೈದಾನದ ಮಧ್ಯಭಾಗದಲ್ಲಿ ಇಪ್ಪತ್ತುಸಾವಿರ ರಾಹುತರು ಕೆಂಪು ಪೋಷಾಕುಗಳನ್ನು ಧರಿಸಿಕೊಂಡು ಸಜ್ಜಾಗಿ ನಿಂತಿದ್ದರು. ಬೇರೆ ಬೇರೆ ಸೈನ್ಯದ ಬೇರೆ ಬೇರೆ ಭಾಗಗಳು ಬಾದಶಹರವರ ತಂಬೂವಿನ ಸುತ್ತಲೂ ನಿಂತುಕೊಂಡಿದ್ದವು. ಸುತ್ತಲಿನ ಸೈನ್ಯದ ಒಂದೇ ತರದ ಕೆಂಪುಬಣ್ಣದ ಉಡಿಗೆತೊಡಿಗೆಗಳಿಂದ, ನೋಡುವವರಿಗೆ ಬಾದಶಹರವರ ತಂಬೂವಿನ ಸುವರ್ಣಮಯ ಕಲಶವನ್ನು ಕೆಂಪು ಕುಂದಣದಲ್ಲಿ ಕೂಡ್ರಿಸಿದಂತೆ ಭಾಸವಾಗುತ್ತಿತ್ತು.

ಹನ್ನೊಂದು ಹೊಡೆದ ತರುವಾಯ ಸ್ವಲ್ಪಹೊತ್ತಿನಲ್ಲಿ ಗವ್ಹರ್ನರ ಜನರಲ್‌ರ ಹಾಗು ಲೇಡೀ ಹಾರ್ಡಿಂಜರವರ ಸ್ವಾರಿಗಳು ಬಂದವು. ಅವರು ಸಭಾಗೃಹದ ಬಳಿಗೆ ಬಂದಕೂಡಲೆ ರೀತಿಯಂತೆ ಮುಜರೆಗಳು ಮಾಡಲ್ಪಟ್ಟವು.

ಸಭಾಗೃಹದೊಳಗಿನ ಪ್ರತಿಯೊಬ್ಬರ ದೃಷ್ಟಿಯೂ ಬಾದಶಹರವರ ಆಗಮನಪ್ರತೀಕ್ಷಾಕಾರ್ಯದಲ್ಲಿ ತೊಡಗಿಕೊಂಡಿತು. ಅಲ್ಲಿ ನೆರೆದಿದ್ದ ಎಂಭತ್ತುಸಾವಿರ ಜನರೂ ಬಲಗಡೆಯ ಪ್ರವೇಶದ್ವಾರದ ಕಡೆಗೆ ಅನಿಮಿಷ ದೃಷ್ಟಿಯಿಂದ ಒಂದೇಸವನೆ ನೋಡುತ್ತ ಕುಳಿತಿದ್ದರು. ಅಷ್ಟರಲ್ಲಿ ಬಾದಶಹರವರ ತಂಬೂವಿನ ಕಡೆಯಿಂದ ತೋಫಿನ "ಧಡಂ ಧಡಂ" ಎಂಬ ಸಪ್ಪಳವೂ ಚಪ್ಪಾಳೆಗಳ ಹಾಗು ಜಯಜಯಕಾರದ ಧ್ವನಿಯೂ ಅಸ್ಪಷ್ಟವಾಗಿ ಕೇಳಬರಹತ್ತಿದವು. ಅವು ಕ್ರಮಕ್ರಮವಾಗಿ ಸ್ಪಷ್ಟವಾಗುತ್ತ

ಬಂದು ಬಾದಶಹರವರು ಶಿಬಿರದಿಂದ ಹೊರಹೊರಟರೆಂಬುದನ್ನು ಸೂಚಿಸಿದವು. ಬಾದಶಹರವರ ಸ್ವಾರಿಯು ಮುಂಭಾಗದಲ್ಲಿದ್ದ ಪಲಟಣದೊಳಗಿನ ಕುದುರೆಗಳ ಹೇಷಾರವವೂ, ಖುರಪುಟದ "ಖಣಖಣೆಲ್" ಎಂಬ ಸಪ್ಪಳವೂ ಕೇಳಬರಹತ್ತಿದವು. ಮುಂದೆ ಸ್ವಲ್ಪಹೊತ್ತಿನಲ್ಲಿಯೇ ಅಶ್ವಾರೂಢರಾದ ಸಾನಿರಾರು ಸೈನಿಕರು ಸಭಾಗೃಹದೊಳಗಿನ ಜನರ ದೃಷ್ಟಿಗೆ ಬೀಳಹತ್ತಿದರು. ಅವರ ಹಿಂದಿನಿಂದ ಮಹಾರಾಜ್ಞೀಸಹೀತರಾದ ಮಹಾರಾಜರವರ ರಥವು ಪೂರ್ವಭಾಗದಲ್ಲಿದ್ದ ಜನಸಮೂಹದ ದೃಷ್ಟಿಪಥವನ್ನೈದಿತು. ಕೂಡಲೆ ಆ ಭಾಗದಲ್ಲಿದ್ದ ಪ್ರಚಂಡವಾದ ಜನಸಮೂಹವು ಕರತಲತಾಡನದಿಂದಲೂ ಪ್ರಚಂಡವಾದ ಜಯಘೋಷದ ಗರ್ಜನೆಯಿಂದಲೂ ತಮ್ಮ ಅಂತಃಕರಣಪೂರ್ವಕವಾದ ಆನಂದವನ್ನು ವ್ಯಕ್ತಪಡಿಸಿತು. ಆ ಆನಂದದ ತೆರೆಗಳು ಬಂದೇಸವನೆ ಹಬ್ಬುತ್ತಹೋಗಿ ಇಡೀ ಸಭಾಗೃಹವನ್ನೆಲ್ಲ ವ್ಯಾಪಿಸಿದವು. ಸಭಾಗೃಹದೊಳಗಿನ ಸರ್ವಜನರೂ ಎದ್ದುನಿಂತರು; ಮತ್ತು ಬೇಂಡವಾದ್ಯದೊಂದಿಗೆ ರಾಷ್ಟ್ರೀಯ ಗೀತವೂ ತೋಫಿನ ಸಲಾಮುಗಳೂ ಆರಂಭವಾದವು. ಬಾದಶಹರವರ ರಥವು ಸಭಾಗೃಹದ ಹತ್ತಿರ ಬಂದಕೂಡಲೆ ಗವ್ಹರ್ನರ್ ಜನರಲ್ಲರವರು ಅವರ ಸ್ವಾಗತವನ್ನು ಮಾಡಿದರು. ಉಚ್ಚಾಸನಗಳ ಸೋಪಾನಪರಂಪರೆಗಳಲ್ಲಿ ತರುಣರಾದ ರಾಜಕುಮಾರರು ಸಾಲಾಗಿ ನಿಂತಿದ್ದರು. ದರ್ಬಾರದ ಸಲುವಾಗಿ ಧರಿಸಲ್ಪಟ್ಟಿರುವ ಬಾದಶಹರವರ ಹಾಗು ಮೇರೀ ಮಹಾರಾಜ್ಞಿಯವರ ಮುಗಾಗಳ ತುದಿಗಳು ಎತ್ತಿಹಿಡಿಯಲ್ಪಟ್ಟಿದ್ದವು. ಆಬರ್ಕಾ, ಭರತಪುರ ಮುಂತಾದ ಸಂಸ್ಥಾನಗಳ ರಾಜಕುಮಾರರು ಸಾರ್ವಭೌಮರ ಹಾಗು ರಾಣೀ ಸಾಹೇಬರ ಸೇವಾಕಾರ್ಯದಲ್ಲಿ ನಿಯುಕ್ತರಾಗಿದ್ದರು. ಸಾರ್ವಭೌಮರ ಹಾಗು ಚಕ್ರವರ್ತಿನಿಯರ ಸ್ವಾರಿಯು ಸಾವಕಾಶವಾಗಿ ಮೆಟ್ಟಿಗೆಗಳನ್ನು ಏರುತ್ತಹೋಗಿ ಸಿಂಹಾಸನದ ಮೇಲೆ ಅಧಿರೂಢವಾಯಿತು. ತೋಫಿನ ಸಲಾಮುಗಳು ಮುಗಿಯುವಷ್ಟರಲ್ಲಿ ದರಬಾರದ ವ್ಯವಸ್ಥಾಪಕರಾದ "ಸರ್ ಹೆನರಿ ಮ್ಯಕಮೋಹನ"ರವರು ಬಾದಶಹರಿಗೆ ಮುಜರೆಯನ್ನು ಮಾಡಿ, ದರಬಾರವನ್ನು ಆರಂಭ ಮಾಡಲಿಕ್ಕೆ ಅವರ ಆಜ್ಞೆಯನ್ನು ಸ್ವೀಕರಿಸಿದರು. ಆ ಮೇಲೆ ತುತ್ತೂರಿಯು ಬಾರಿಸಲ್ಪಟ್ಟಿತು. ಸ್ವಲ್ಪ ಹೊತ್ತಿನ ಮೇಲೆ ನಾಲ್ಕೂ ಕಡೆಗೆ ಶಾಂತತೆಯುಂಟಾಗಿ ಬಾದಶಹರವರ ಭಾಷಣವಾಗುವ ಸಮಯವು ಒದಗಿತು. ಸಭಾಗೃಹದೊಳಗಿನ ಯಾವತ್ತು ಜನರು

ಈ ಸುಮುಹೂರ್ತದ ಮಾರ್ಗಪ್ರತೀಕ್ಷೆಯನ್ನು ಮಾಡುತ್ತ ಕುಳಿತು ಕೊಂಡಿದ್ದರು.

ಆಗ ಬಾದಶಹರವರು ದಯೆಪಾಲಿಸಿದ ಅಪ್ಪಣೆಯು ಸಾರಾಂಶವೇನಂದರೆ:—"ಈ ಹೊತ್ತು ನಿಮ್ಮೆದುರಿಗೆ ಮಾತಾಡುವದಕ್ಕಾಗಿ ನಿಲ್ಲಲು ನನಗೆ ಬಹಳೇ ಸಮಾಧಾನವಾಗುತ್ತಿದ್ದು, ಅದಕ್ಕಾಗಿ ನಾನು ನಿಮ್ಮೆಲ್ಲರ ಆಭಾರಿಯಾಗಿರುವೆನು. ಈ ವರುಷ, ಮಹಾರಾಣೀ ಸಾಹೇಬರ ಹಾಗು ಸನ್ಮಾ ಆಯ್ಯ ದೊಳಗಿನ ಅತಿ ಮಹತ್ವದ ಸಮಾರಂಭವು ನಡೆದಿದ್ದು, ಅದರಿಂದ ನಮಗೆ ಬಹಳೇ ಪರಿಶ್ರಮವಾದಾಗ್ಯೂ ಹೆಚ್ಚಾಗಿ ಸುಖವೇ ಆಗುತ್ತಲಿರುವದು, ನಾವು ಮೊದಲನೆಯ ಸಾರೆ ಈ ದೇಶಕ್ಕೆ ಬಂದಾಗಲೇ ಈ ದೇಶದ ಬಗ್ಗೆ ನಮ್ಮ ಮನಸ್ಸಿನಲ್ಲಿ ಒಂದು ತರದ ಪ್ರೇಮವು ಉಂಟಾಗಿರುವದು. ಆ ಪ್ರೇಮದ ಮೂಲಕವಾಗಿಯೇ ನಮ್ಮ ದೇಶದಿಂದ ಇಷ್ಟೊಂದು ದೂರವಾಗಿದ್ದ ಈ ದೇಶಕ್ಕೆ ಪುನಃ ಬಂದೆವು. ತಾ॥ ೨೨ನೇ ಜೂನದ ದಿವಸ ವೆಸ್ಟ ಮಿನಿಸ್ಟರ ಅಬೇಯಲ್ಲಿ ವಿಧಿಪೂರ್ವಕವಾಗಿಯೂ ಪರಂಪರಾಗತವಾದ ಪದ್ಧತಿಯಿಂದ ಲೂ, ನಮಗೆ ರಾಜ್ಯಾಭಿಷೇಕವಾಯಿತು. ಆ ಸಂಗತಿಯನ್ನು ನಿಮ್ಮೆಲ್ಲರಿಗೆ ನಾವೇ ಬಂದು ಜಾಹೀರು ಪಡಿಸ ಬೇಕೆಂಬ ಸಂದೇಶದಲ್ಲಿ ವ್ಯಕ್ತಪಡಿಸಿದ ನಮ್ಮ ತ ಇಚ್ಛೆಯು ಈ ದಿವಸ ಪೂರ್ಣವಾಯಿತು. ರಾಜನಿಷ್ಠರಾದ ಪಿತದ್ವೀಪೀಯ ಸಂಸ್ಥಾನಿಕರ ಹಾಗು ಸಭ್ಯಗೃಹಸ್ಥರ ಸಂಬಂಧದಿಂದ ನಮ್ಮ ಮನಸ್ಸಿನಲ್ಲಿ ಪ್ರೇಮವಿದ್ದು, ಸಾಮ್ರಾಜ್ಯದ ಹಿತದ ಸಂಬಂಧದ ಅಸ್ಥೆಯು ನಮ್ಮ ಹೃದಯದಲ್ಲಿ ಸರ್ವದಾ ವಾಸವಾಗಿದೆಯೆಂಬದನ್ನು ನಿಮ್ಮೆಲ್ಲರ ಲಕ್ಷಕ್ಕೆ ತಂದು ಕೊಡಬೇಕೆಂಬದೇ ನಮ್ಮ ಆಗಮನದ ಉದ್ದೇಶವಾಗಿರುವದು. ಲಂಡನನದಲ್ಲಾದ ರಾಜ್ಯಾರೋಹಣದ ಸಮಾರಂಭವನ್ನು ಪ್ರತ್ಯಕ್ಷವಾಗಿ ನೋಡಲಿಕ್ಕೆ ದೊರೆಯದೆ ಇದ್ದಂಥ ಜನರಿಗೆ ದಿಲ್ಲಿಯಲ್ಲಾಗುವ ಸಮಾರಂಭವನ್ನು ನೋಡಿ ಆನಂದ ಪಡಲು ಅನುಕೂಲವಾಗಬೇಕೆಂಬದೂ ನಮ್ಮ ಆಗಮನಕ್ಕೆ ಇನ್ನೊಂದು ಕಾರಣವಾಗಿರುವದು. ಈ ಹೊತ್ತಿನ ಈ ಜನಸಮೂಹ, ಹಾಗು ಅದರೊಳಗಿನ ಗವ್ಹರ್ನರ್ ಮೊದಲಾದ ಅಧಿಕಾರಿಗಳು, ಸಂಸ್ಥಾನಿಕರು, ಪ್ರಜೆಗಳ ಪ್ರತಿನಿಧಿಗಳು, ಲಷ್ಕರದೊಳಗಿನ ಪಲಟಣಗಳು ಇವರನ್ನೆಲ್ಲ ನೋಡಿ, ನನಗೂ ಮಹಾರಾಣೀ ಸಾಹೇಬರಿಗೂ ಅತ್ಯಂತ ಆನಂದವಾಗಿದೆ; ಮತ್ತು ಅವರೆಲ್ಲರು ನಮ್ಮ ಬಗ್ಗೆ ತೋರಿಸಿದ ರಾಜನಿಷ್ಠೆಯಿಂದ

ನವುಗೆ ಪರಮಾವಧಿ ಸಮಾಧಾನವಾಗಿದೆ. ಈ ಐತಿಹಾಸಿಕ ಮಹತ್ವದ ಪ್ರಸಂಗದಲ್ಲಿ ಸಹಾನುಭೂತಿ ಹಾಗು ರಾಜನಿಷ್ಠೆ ಇವೆರಡು ಗುಣಗಳಿಂದ ಸಂಸ್ಥಾನಿಕರ ಹಾಗು ಪ್ರಜೆಗಳ ವಿಶೇಷೀಕರಣವಾದದ್ದನ್ನು ನೋಡಿದ್ದರಿಂದಂತೂ ನಮ್ಮ ಮನಸ್ಸಿನಲ್ಲಿ ವಿಶೇಷ ಪರಿಣಾಮವಾಗಿದೆ. ಈ ಮಹತ್ವದ ಪ್ರಸಂಗದ ಸಂಸ್ಮರಣಾರ್ಥವಾಗಿ ನಮ್ಮ ವಿಶೇಷ ಅನುಗ್ರಹದ ಕುರುಹುಗಳೆಂದು ತಿಳಿದು ಕೊಡಲ್ಪಡುವ ಕೆಲವು ಉಚಿತಗಳನ್ನು ನಮ್ಮ ಗವರ್ನರ್ ಜನರಲ್ಲರ ಮುಖಾಂತರವಾಗಿ ಜಾಹೀರು ಪಡಿಸತಕ್ಕವರಿರುತ್ತೇವೆ. ನಿಮ್ಮ ಹಕ್ಕುಗಳ ಸಂಬಂಧದಿಂದ ನಮ್ಮ ಹಿರಿಯರು ನಿಮಗೆ ಕೊಟ್ಟಿರುವ ಆಶ್ವಾಸನಗಳನ್ನು ನಿಮಗೆ ಈಗ ಪುನಃ ಕೊಡುವ ಈ ಸಮಯವನ್ನು ನಾನು ಸ್ವೀಕರಿಸುತ್ತೇನೆ."

ಮಹಾರಾಜರವರ ಸುರಸವಾದ ಭಾಷಣವು ಮುಗಿದಮೇಲೆ ಅವರ ಆಜ್ಞಾನುಸಾರವಾಗಿ ಈಗಿನ ಗವರ್ನರ್ ಜನರಲ್ಲರಾದ ಲೊರ್ಡ್ ಹಾರ್ಡಿಂಜರವರು ಸಾರ್ವಭೌಮರವರು ದಯಪಾಲಿಸಿದ ಆಜ್ಞೆಗಳನ್ನು ಒಳಕೊಂಡ ಜಾಹೀರುನಾಮೆಯನ್ನು ಪ್ರಕಟಿಸಿದರು. ಅದರ ಸಾರಾಂಶವೇನೆಂದರೆ:—

೧. ಹಿಂದುಸ್ತಾನದ ಕಂದಾಯದ ವಸೂಲಿಯ ಮೇಲೆ ಹಿಂದುಸ್ತಾನದ ಪ್ರಜೆಗಳ ಶಿಕ್ಷಣಪ್ರಗತಿಯ ಶ್ರೇಸ್ಕರವಾದ ಹಕ್ಕು ಇರುವದೆಂಬದನ್ನು ಹಿಂದುಸ್ತಾನದ ಸರಕಾರವು ಒಪ್ಪಿಕೊಳ್ಳಬೇಕೆಂದು ಸ್ಟೇಟ ಸೆಕ್ರೆಟರಿಯವರ ಅನುಮತಿಯಿಂದ ನಿಶ್ಚಯಿಸಲ್ಪಟ್ಟಿರುವದು; ಮತ್ತು ಶಿಕ್ಷಣದ ಸಂಬಂಧದಿಂದ ಹಿಂದುಸ್ತಾನದ ಪ್ರಜೆಗಳ ಅತ್ಯಂತ ಪ್ರಶಂಸನೀಯಗಳಾದ ಬೇಡಿಕೆಗಳನ್ನು ಲಕ್ಷಕ್ಕೆತಂದು, ಜನರಿಗೆ ಶಿಕ್ಷಣದ ಲಾಭವು ಸಾಧ್ಯವಾದಷ್ಟು ದೊಡ್ಡ ಪ್ರಮಾಣದಿಂದ ದೊರೆಯುವಂತೆ ವ್ಯವಸ್ಥೆ ಮಾಡಬೇಕೆಂದು ಇಂಡಿಯಾ ಸರಕಾರವು ನಿಶ್ಚಯಿಸಿರುವದು. ಈ ಮೇಲಿನ ಉದ್ದೇಶವನ್ನು ಕೊನೆಗಾಣಿಸುವದಕ್ಕಾಗಿ ಬಹುಜನಸಮಾಜದ ನಿಜವಾದ ಶಿಕ್ಷಣದ ಸಲುವಾಗಿ ಐವತ್ತುಲಕ್ಷ ರೂಪಾಯಿಗಳು ಈಗಿಂದೀಗ ಖರ್ಚು ಮಾಡಲ್ಪಡುವವು. ಈಗ ಜಾಹೀರು ಪಡಿಸಿರುವ ಐವತ್ತುಲಕ್ಷ ರೂಪಾಯಿಗಳಲ್ಲದೆ, ಪ್ರತಿವರ್ಷ ಇನ್ನೂ ಹೆಚ್ಚಾದ ಗ್ರ್ಯಾಂಟನ್ನು ಉದಾರಹಸ್ತದಿಂದ ಕೊಡಬೇಕೆಂದು ಸರಕಾರದ ದೃಢಸಂಕಲ್ಪವಾಗಿದೆ.

೨, ನಾನ್ ಕಮೀಶನ್ಡ್ ಆಫೀಸರ ಹಾಗು ಐವತ್ತು ರೂಪಾಯಿ

ಗಳಿಗಿಂತ ಕಡಿಮೆ ಪಗಾರವುಳ್ಳ ಸೈನ್ಯದೊಳಗಿನ ಮತ್ತು ಹಡಗುಪಡೆಯೊಳಗಿನ ಪ್ರತಿಯೊಬ್ಬ ಸಿಪಾಯಿಗೆ ಅರ್ಧತಿಂಗಳದ ಪಗಾರವು ಇನಾಮಾಗಿ ಕೊಡಲ್ಪಡುವನು.

೩. ಹಿಂದೀ ಸೈನ್ಯದೊಳಗಿನ ರಾಜನಿಷ್ಠರಾದ ಅಧಿಕಾರಿಗಳು "ವ್ಹಿಕ್ಟೋರಿಯಾ ಕ್ರಾಸ" ಎಂಬ ಮರ್ಯಾದೆಗೆ ಪಾತ್ರರೆಂದು ತಿಳಿಯಲ್ಪಡುವರು; ಮತ್ತು "ಆರ್ಡರ ಆಫ್ ಬ್ರಿಟಿಶ್ ಇಂಡಿಯಾ" ಇದರಲ್ಲಿ ಮುಂದಿನ ಹತ್ತುವರ್ಷಗಳಲ್ಲಿ ೫೨ ಜಾಗೆಗಳು ಹೆಚ್ಚಿಸಲ್ಪಡುವವು. ಸರಹದ್ದಿನ ಮೇಲಿನ "ಮಿಲಿಟರಿಕೋಅರ" ದೊಳಗಿನ ಹಿಂದೀ ಅಧಿಕಾರಿಗಳು ಹಾಗು ಲಷ್ಕರೀ ಪೋಲೀಸರು ಸದರೀ ಆರ್ಡರದಲ್ಲಿ ಸಮಾವೇಶ ಮಾಡಲ್ಪಡುವರು; ಮತ್ತು ಲಷ್ಕರದೊಳಗಿನ ಕೆಲವು ಹಿಂದೀ ಅಧಿಕಾರಿಗಳಿಗೆ ಅವರ ಉತ್ಕೃಷ್ಟ ನೌಕರಿಯ ಸಲುವಾಗಿ ವತನಗಳು ಕೊಡಲ್ಪಡುವವು. "ಇಂಡಿಯನ್ ಆರ್ಡರ ಆಫ್ ಮೆರಿಟ್" ದೊಳಗಿನ ಸೈನಿಕರ ವಿಧವೆಯರಿಗೆ ಸದ್ಯಕ್ಕೆ ಮೂರು ವರುಷಗಳ ವರೆಗೆ ದೊರೆಯುತ್ತಿದ್ದ ಅಲಾವನ್ಸವು ಅವರ ಮರಣದ ವರೆಗೆ, ಇಲ್ಲವೆ ಅವರು ಎರಡನೆಯ ವಿವಾಹವಾಗುವ ವರೆಗೆ ಕೊಡಲ್ಪಡುವದು.

೪. ಪ್ರತಿತಿಂಗಳಿಗೆ ಐವತ್ತು ರೂಪಾಯಿಗಳಿಗಿಂತ ಹೆಚ್ಚಿಗೆ ಪಗಾರವಿಲ್ಲದ ಯಾವತ್ತು ಖಾತೆಯೊಳಗಿನ ನೌಕರರಿಗೆ ಅರ್ಧ ತಿಂಗಳ ಪಗಾರವು ಇನಾಮಾಗಿ ಕೊಡಲ್ಪಡುವದು. ರಾವಸಾಹೇಬರಿಂದ ದಿವಾನಬಹಾದ್ದೂರರ ವರೆಗಿನ ಯಾವತ್ತು ಪದವೀಧರರಿಗೆ ವಿಶಿಷ್ಟ ಪ್ರಕಾರದ ಬಿಲ್ಲೆಗಳು ಹಂಚಲ್ಪಡುವವು. "ಮಹಾಮಹೋಪಾಧ್ಯಾಯ" ಮತ್ತು "ಶಮುಸುಲ್ ಉಲ್ಮ" ಈ ಪದವಿಗಳುಳ್ಳ ಹಾಗು ಇನ್ನು ಮುಂದೆ ಈ ಪದವಿಗಳು ದೊರೆಯಬಹುದಾದ ಜನರಿಗೆ ಕೆಲವು ವರ್ಷಾಶನವು ಕೊಡಲ್ಪಡುವದು.

೫. ನವೀನ ವಾಗಸದಾರರು ಗಾದಿಯ ಮೇಲೆ ಕೂಡ್ರುವ ಸಮಯದಲ್ಲಿ ಏತದ್ದೇಶೀಯ ಸಂಸ್ಥಾನಿಕರ ಕಡೆಯಿಂದ ಇದುವರೆಗೆ ತೆಗೆದುಕೊಳ್ಳಲ್ಪಡುತ್ತಿದ್ದ ಕಾಣಿಕೆಗಳು ಇನ್ನು ಮುಂದೆ ತೆಗೆದುಕೊಳ್ಳಲ್ಪಡಲಿಕ್ಕಿಲ್ಲ; ಹಾಗು ಗುಜರಾಥ, ಕಾಠೇವಾಡ, ಮತ್ತು ಮೇವಾಡ ಇವುಗಳೊಳಗಿನ ಚಿಕ್ಕ ಚಿಕ್ಕ ಸಂಸ್ಥಾನಿಕರಿಗೆ ಸರಕಾರದ ಸಂಬಂಧದಿಂದಿರುವ ಅಲ್ಪಸ್ವಲ್ಪ ಸಾಲವು ಮಾಫೀ ಮಾಡಲ್ಪಡುವದು.

೬. ಗುನ್ಹೆಗಳ ಹಾಗು ದುರ್ವರ್ತನೆಯ ಸಲುವಾಗಿ ಸೆರೆಯಲ್ಲಿದ್ದ ಎಷ್ಟೋ ಜನರು ಬಂಧಮುಕ್ತರಾಗುವರು; ಮತ್ತು ಕೇವಲ ದಾರಿದ್ರ್ಯದ ಮೂಲಕವಾಗಿ ಸಾವುಕಾರರ ಸಾಲವನ್ನು ತೀರಿಸುವದಕ್ಕಾಗದೆ ಇದ್ದದ ರಿಂದ ದಿವಾಣೀ ತುರಂಗದಲ್ಲಿದ್ದ ಬಡಜನರು ಬಿಡಿಸಲ್ಪಟ್ಟು, ಅವರ ಸಾಲವು ಇನ್ನು ಮುಂದೆ ಪ್ರಸಿದ್ಧಿಸಲ್ಪಡುವ ಶರ್ತುಗಳನ್ನು ಅನುಸರಿಸಿ, ಸರಕಾರದಿಂದ ತೀರಿಸಲ್ಪಡುವದು.

ಈ ಪ್ರಕಾರವಾಗಿ ಗವ್ಹರ್ನರ ಜನರಲ್ಲರವರು ಜಾಹೀರುನಾಮೆ ಯನ್ನು ಪ್ರಸಿದ್ಧ ಪಡಿಸಿದ ತರುವಾಯ, ಮುಜರೆಯನ್ನು ಮಾಡುವ ಸಮಾ ರಂಭವು ಆರಂಭವಾಯಿತು. ಎಲ್ಲಕ್ಕೂ ಮೊದಲು ಗವ್ಹರ್ನರ್ ಜನರಲ್ಲ ರವರು ಮುಜರೆಯನ್ನು ಮಾಡಿದರು. ಆ ಮೇಲೆ ಸೇನಾಪತಿ ಮತ್ತು ಎಗ್ಸಿಕ್ಯೂಟಿವ್ಹ ಕೌನ್ಸಿಲದ ಸಭಾಸದರು ಸಲಾಮು ಮಾಡಿದರು. ಆ ಮೇಲೆ ಹೈದರಾಬಾದ, ಬಡೋದೆ, ಮೈಸೂರ, ಕಾಶ್ಮೀರ ಈ ಸಂಸ್ಥಾ ನಗಳ ಮಹಾರಾಜರೂ, ರಜಪುತಸ್ತಾನ, ಮಧ್ಯಹಿಂದುಸ್ತಾನ, ಬಲೂಚಿ ಸ್ತಾನ, ಸಿಕಿಮ, ಭೂತಾನ ಈ ಸಂಸ್ಥಾನಗಳ ಅದಿಪರೂ, ಚೀಫಜಸ್ಟೀ ಸರೂ, ಬಂಗಾಲ ಹಾಯಕೋರ್ಟಿನೊಳಗಿನ ಇತರ ನ್ಯಾಯಾಧೀಶರೂ, ವರಿಷ್ಠ ಕಾಯದೆ ಕೌನ್ಸಿಲದೊಳಗಿನ ಸಭಾಸದರೂ, ಇಲಾಖೆಗಳ ಗವ್ಹ ರ್ನರರೂ, ಬೇರೆ ಬೇರೆ ಖಾತೆಗಳ ಮುಖ್ಯ ಅಧಿಕಾರಿಗಳೂ ಇಲಾಖೆಯ ಕಾರ್ಯಕಾರೀ ಕೌನ್ಸಿಲದೊಳಗಿನ ಸಭಾಸದರೂ, ಬೇರೆ ಬೇರೆ ಪ್ರಾಂತ ಗಳೊಳಗಿನ ಚಿಕ್ಕಪುಟ್ಟ ಸಂಸ್ಥಾನಿಕರೂ ಕ್ರಮವಾಗಿ ಬಂದು ಸಲಾಮುಗ ಳನ್ನು ಮಾಡಿದರು.

ಈ ಪ್ರಕಾರ ದರಬಾರದ ಯಾವತ್ತು ಸಮಾರಂಭಗಳು ಬಂದು ತಾಸಿನವರೆಗೆ ನಡೆದ ತರುವಾಯ ಬಾದಶಹರವರ ಸ್ವಾರಿಯು ಸಿಂಹಾಸ ನದ ಮೇಲಿಂದ ಎದ್ದು ಪುನಃ ತಂಬೂವಿನ ಕಡೆಗೆ ಸಾಗಿತು, ಈ ಕಾಲದ ಮೆರುವಣಿಗೆಯಾದರೂ ಅತ್ಯಂತ ಪ್ರೇಕ್ಷಣೀಯವಾದದ್ದೇ ಇತ್ತು.

ಈ ಹೊತ್ತಿನ ದರ್ಬಾರೋತ್ಸವದ ಸಲುವಾಗಿ ಹಿಂದುಸ್ತಾನದ ರಾಜ್ಯಕಾರಭಾರದ ಸಂಬಂಧದಿಂದ ಮಾಡಲ್ಪಟ್ಟ ಎಷ್ಟೋ ಮಹತ್ವದ ಬದಲಾವಣೆಗಳನ್ನೂ ಮಹಾರಾಜರವರು ಜಾಹೀರುಪಡಿಸಿರುವರು. ಅವು ಗಳು ಯಾವವೆಂದರೆ:—

ಭರತಖಂಡದ ಪುರಾತನ ರಾಜಧಾನಿಯಾದ ದಿಲ್ಲೀ ನಗರವು ಪುನಃ ಹಿಂದುಸ್ತಾನದ ರಾಜಧಾನಿಯಾಗಿ ಮಾಡಲ್ಪಡುವದು; ಮತ್ತು ಹಿಂದುಸ್ತಾನ ಸರಕಾರದ ಯಾವತ್ತು ಆಫೀಸುಗಳು ಮುಂದಿನ ವರುಷ ಇದೇ ದಿವಸದಲ್ಲಿ ದಿಲ್ಲಿಗೆ ಕಳುಹಲ್ಪಡುವವು. ಬಂಗಾಲೀ ಭಾಷೆಯನ್ನಾಡುವ ಬರದ್ವಾನ, ಮಿದಿನಾಪುರ, ಚಿತಗಾಂಗ, ಢಾಕ್ಕಾ, ರಾಜಶಾಹೀ, ಈ ಐದು ಭಾಗಗಳು ಪುನಃ ಕೂಡಿಸಲ್ಪಡುವವು. ಈ ಸಂಯುಕ್ತ ಬಂಗಾಲ ಪ್ರಾಂತದಮೇಲೆ ಒಬ್ಬ ಗವ್ಹರ್ನರನು ನೇಮಿಸಲ್ಪಡುವನು; ಹಾಗು ಬಂಗಾಲವು ದ್ವಿಭಾಗಿಸಲ್ಪಡುವ ಪೂರ್ವದಲ್ಲಿದ್ದ ಅಸಾಮು ಪ್ರಾಂತದ ಮೇರಯು ಮೊದಲಿನಂತೆಯೇ ಇಡಲ್ಪಟ್ಟ, ಅದರ ಮೇಲೆ ಒಬ್ಬ ಹೊಸ ಚೀಫ ಕಮಿಶನರನು ನೇಮಿಸಲ್ಪಡುವನು; ಮತ್ತು ಬಹಾರ, ಛೋಟಾನಾಗಪುರ, ಒಡಿಸಾ ಈ ಮೂರು ಭಾಗಗಳು ಕೂಡಿಸಲ್ಪಟ್ಟು, ಅದರ ಮೇಲೆ ಒಬ್ಬ ಲೆಫ್ಟನೆಂಟ ಗವ್ಹರ್ನರನು ನೇಮಿಸಲ್ಪಡುವನು. ಈ ಪ್ರಕಾರದ ಬದಲಾವಣೆಯಿಂದ ಹಿಂದುಸ್ತಾನದ ರಾಜ್ಯಕಾರಭಾರದಲ್ಲಿ ಸುಧಾರಣೆಯುಂಟಾಗಿ, ನಮ್ಮ ಪ್ರೀತಿಪಾತ್ರರಾದ ಹಿಂದೀ ಪ್ರಜೆಗಳು ಅಕ್ಷಯ ಸುಖ ಶಾಂತಿಗಳನ್ನು ಹೊಂದಲಿ! "

ಈಪ್ರಕಾರ ಬಾದಶಹರವರ ಆಗವನದಿಂದ ಭಾರತೇಯರಿಗೆ ಅಲಭ್ಯವಾದ ಲಾಭವು ಲಭಿಸಿತೆಂಬದರಲ್ಲಿ ಸಂದೇಹವಿಲ್ಲ. ಬಂಗಾಲದ ವಿಭಾಗವು ವಜ್ರಲೇಪವಾದದ್ದೆಂದು ಸ್ಟೇಟ ಸೆಕ್ರೆಟರಿಗಳಂಥ ಜವಾಬುದಾರಿಯುಳ್ಳ ಅಧಿಕಾರಿಗಳು ಒಂದು ಸಾರೆಯಲ್ಲ, ಎರಡು ಸಾರೆಯಲ್ಲ, ಅನೇಕ ಸಾರೆ ಜಾಹೀರು ಪಡಿಸಿದ್ದರು. ಅಂಥ ಸಂಗತಿಯನ್ನು ರದ್ದು ಪಡಿಸುವದಕ್ಕೆ ಬಾದಶಹರವರ ಅಧಿಕಾರೋಪಯೋಗದ ಹೊರತು ಅನ್ಯತಃ ಉಪಾಯವೇ ಇದ್ದಿಲ್ಲ. ಬಂಗಾಲವು ವಿಭಾಗಿಸಲ್ಪಟ್ಟದ್ದರಿಂದ ತಮ್ಮ ಬಂಗಾಲೀ ರಾಷ್ಟ್ರವು ಎರಡು ಚೂರಾಗಿ ಹೋಯಿತೆಂದು ಅದರೊಳಗಿನ ಪ್ರಜೆಗಳು ಬಹಳ ಅಸಮಾಧಾನವನ್ನು ಹೊಂದಿದ್ದರು; ಮತ್ತು ತಮ್ಮ ದೇಶದ ಒಂದು ಭಾಗದ ಅವಸ್ಥೆಯು ಈ ರೀತಿಯಾದದ್ದನ್ನು ನೋಡಿ, ಸಮಸ್ತ ಹಿಂದೀ ಪ್ರಜೆಗಳ ಹೃದಯದಲ್ಲಿಯೂ ಒಂದು ತರದ ಅಸಮಾಧಾನವು ತಲೆದೋರಿತ್ತು. ಈ ಅಸಮಾಧಾನಾಂಕುರವು ಬಾದಶಹರವರ ಅಧಿಕಾರಪ್ರಯೋಗದಿಂದ ಕಿತ್ತು ಒಗೆಯಲ್ಪಟ್ಟಿತು! ಇದಕ್ಕೆ ಬಾದಶಹರವರ ಹೃದಯದಲ್ಲಿ ವಾಸವಾಗಿದ್ದ ಹಿಂದೀ ಪ್ರಜೆಗಳ ಸಂಬಂಧದ ಸಹಾನುಭೂತಿಯೇ ಕಾರಣವು.

ಬಹುಜನಸಮಾಜದ ಶಿಕ್ಷಣಪ್ರಗತಿಯ ಸಲುವಾಗಿ ಸದ್ಯಕ್ಕೆ ಕೊಡ ಲ್ಪಟ್ಟ ೫೦ ಲಕ್ಷ ರೂಪಾಯಿಗಳಿಂದಲೂ, ಇನ್ನು ಮುಂದೆ ಪ್ರತಿವರ್ಷ ಉದಾರಹಸ್ತದಿಂದ ಕೊಡಲ್ಪಡುವ ಗ್ರ್ಯಾಂಟಿನಿಂದಲೂ ಬಾದಶಹರವರು ತಮ್ಮ ಪ್ರಜೆಗಳ ಅಭ್ಯುದಯದ ಸ್ಥಿರವಾದ ಅಸ್ತಿವಾರವನ್ನು ಸ್ಥಾಪಿಸಿದರೆನ್ನ ಲಿಕ್ಕೆ ಅಡ್ಡಿಯಿಲ್ಲ. ರಾಷ್ಟ್ರೋನ್ನತಿಗೆ ಸಮಾಜದ ಶಿಕ್ಷಣದಂಥ ಉತ್ಕೃಷ್ಟ ವಾದ ಸಾಧನವು ಎರಡನೆಯದು ಯಾವದೂ ಇಲ್ಲೆಂತಲೂ, ಹಿಂದುಸ್ತಾನದ ಖಜಾನೆಯ ಮೇಲೆ ಅದರೊಳಗಿನ ಸಮಾಜದ ಶಿಕ್ಷಣದ ಶ್ರೇಷ್ಠವಾದ ಹಕ್ಕು ಇರುವದೆಂತಲೂ, ಆ ಶಿಕ್ಷಣವನ್ನು ಸಾಧ್ಯನಾದಷ್ಟು ಸಾರ್ವತ್ರಿಕ ವಾಗಿ ಮಾಡುವದು ಇಂಡಿಯಾ ಸರಕಾರದ ಕರ್ತವ್ಯವಾಗಿದೆಯೆಂತಲೂ ತಮ್ಮ ಗವ್ಹರ್ನರ್ ಜನರಲ್ಲರ ಮುಖಾಂತರವಾಗಿ ಜಾಹೀರು ಪಡಿಸಿರುವ ಬಾದಶಹರವರ ಔದಾರ್ಯದಿಂದ, ಭರತಖಂಡದ ಸಮಾಜಶಿಕ್ಷಣವು ಇನ್ನು ಮೇಲೆ ಭರದಿಂದ ಮುಂದರಿಯುವದೆಂಬದಕ್ಕೆ ಸಂದೇಹವಿಲ್ಲ.

ಪತ್ರವ್ಯವಹಾರ.

ಈದೇ ತಿಂಗಳ ೧೭ನೇ ತಾರೀಖಿನ ದಿವಸ ಧಾರವಾಡ, ಬೆಳಗಾವ, ವಿಜಾಪುರ, ಕಾನಡಾ ಜಿಲ್ಹೆಯ ಅನೇಕಾನೇಕ ಗ್ರಾಮಗಳಲ್ಲಿ ನಡೆದ ಸಾರ್ವ ಭೌಮರ ದರ್ಬಾರ ಮಹೋತ್ಸವವನ್ನು ವರ್ಣಿಸುವಂಥ ಎಷ್ಟೋ ಪತ್ರ ಗಳು ಶಾಲಾಪತ್ರಿಕದಲ್ಲಿ ಮುದ್ರಿಸುವದಕ್ಕೋಸ್ಕರ ಬಂದಿರುತ್ತವೆ. ಆ ಎಲ್ಲ ಪತ್ರಗಳನ್ನು ಸಾದ್ಯಂತವಾಗಿ ಮುದ್ರಿಸುವದಂತೂ ಇರಲಿ, ಅವೆಲ್ಲವುಗಳ ಸಾರಾಂಶವನ್ನು ಕೂಡಾ ಕೊಡುವದು ಅಶಕ್ಯವಾಗಿದೆ. ಆದಕಾರಣ ಅವು ಗಳಲ್ಲಿ ಮಾದರಿಗಾಗಿ ಒಂದೆರಡು ಪತ್ರಗಳನ್ನು ಮಾತ್ರ ಮುದ್ರಿಸಿ, ಸ್ಥಳದ ಅನುಕೂಲತೆಯ ಪ್ರಕಾರ ಉಳಿದ ಪತ್ರಗಳಲ್ಲಿ ಕೆಲವುಗಳ ಸಾರಾಂಶವನ್ನು ಮಾತ್ರ ಕೊಡುತ್ತೇವೆ. ಎ. ಶಾ. ಪ.

ರಾವಸಾಹೇಬ ಕನ್ನಡ ಶಾಲಾಪತ್ರಿಕ ಕರ್ತರ ಸನ್ನಿಧಿಗೆ—

ವಿ. ವಿ. ಗುತ್ತಲ ಕನ್ನಡ ಸಾಲೆಯಲ್ಲಿ ಈ ತಿಂಗಳ ೧೭ನೇ ತಾರೀ ಖಿನ ದಿವಸ ನಮ್ಮ ಸಾರ್ವಭೌಮ ಬಾದಶಹ ೫ನೇ ಜಾರ್ಜ ಹಾಗೂ ಮೇರೀ ಮಹಾರಾಜ್ಞಿಯವರ ರಾಜ್ಯಾರೋಹಣ ಸಮಾರಂಭವು ಬಹು ಸಂಭ್ರಮದಿಂದ ನೆರವೇರಿತು. ಅದರ ವಿವರವನ್ನು ಇದರಡಿಯಲ್ಲಿ ಸಂಕ್ಷೇ

ವಿವರಗಳನ್ನು ಕ್ರಮವಿಂದ ವಿವರಿಸಿದ್ದೇನೆ; ಜಯವಾಗಿ ಸರ್ವಾಂಗಸುಂದರವಾದ ತಮ್ಮ ಪತ್ರದಲ್ಲಿ ಪ್ರಸಿದ್ಧಿಸಬೇಕಾಗಿ ಪ್ರಾರ್ಥನೆಯೆದೆ:—

ಶಾಲಾಮಂದಿರದ ಮಧ್ಯಭಾಗದಲ್ಲಿ ಚಿತ್ರವಿಚಿತ್ರವಾದ ಕಾಗದ, ಕನ್ನಡಿ, ಕಾಚಗೋಲಗಳಿಂದ ನಿರ್ಮಿಸಲ್ಪಟ್ಟ ಉಚ್ಚಸಿಂಹಾಸನವು ಪ್ರೇಕ್ಷಕರ ಮನಸ್ಸನ್ನು ಆನಂದಗೊಳಿಸುತ್ತಿತ್ತು. ಶಾಲೆಯ ಮುಂಭಾಗವು ಹಂದರ, ತೋರಣ, ಇಕ್ಷುದಂಡ, ಕದಳೀಸ್ತಂಭ, ಸ್ವರ್ಣಾಕ್ಷರಯುಕ್ತವಾದ ಮಲಮಲಿಯ ಕವಾನು ಮತ್ತು ಪತಾಕೆಗಳಿಂದ ಶೃಂಗರಿಸಲ್ಪಟ್ಟಿತ್ತು.

ಎಲ್ಲ ಜಾತಿಯ ಆಮಂತ್ರಿತ ಪ್ರತಿಷ್ಠಿತ ಗೃಹಸ್ಥರೂ ಸಾಮಾನ್ಯರೂ ವಿದ್ಯಾರ್ಥಿಗಳೂ ಬೆಳಗಿನ ೭ಗಂಟೆ ಹೊಡೆಯುವದರೊಳಗೆ ಶಾಲೆಗೆ ಬಂದಿದ್ದರು. ಕೂಡಲೆ ಚಕ್ರವರ್ತಿ–ಚಕ್ರವರ್ತಿನಿಯವರ ಭಾವಪಟವನ್ನು ಸಿಂಗರಿಸಿದ ಪಲ್ಲಕ್ಕಿಯಲ್ಲಿರಿಸಿ, ಮಂಗಳವಾದ್ಯಗಳೊಡನೆ ಚಾವಡಿ, ಮಸೀದೆ ದೇವಸ್ಥಾನಗಳಿಗೆ ಹೋಗಿ, ಹಣ್ಣುಕಾಯಿಗಳನ್ನು ಸಮರ್ಪಿಸಿ, ಬಾದಶಾಹ-ಬಾದಶಾಹಿಣಿಯವರಿಗೆ ಆಯುರಾರೋಗ್ಯ ಸೌಖ್ಯಾಭಿವೃದ್ಧಿಯನ್ನು ಮಾಡೆಂದು ದೇವರನ್ನು ಕುರಿತು ಪ್ರಾರ್ಥಿಸಿದೆವು. ಅಲ್ಲಲ್ಲಿ ರಾಷ್ಟ್ರೀಯಗೀತ ಜಯಜಯಕಾರಗಳೊಡನೆ ಐದು ತಾಸು ಪಿರವಣಿಗೆಯಾಯಿತು.

ಆವೇಳೆಯಲ್ಲಿ ನಮ್ಮ ಚಕ್ರವರ್ತಿ, ಚಕ್ರವರ್ತಿನಿಯವರು ಸ್ವತಃ ಇಲ್ಲಿ ಇದ್ದಂತೆ ಯಾವತ್ತೂ ಆಬಾಲವೃದ್ಧರು ಮರ್ಯಾದೆ, ವಿನಯ, ಅಂತಃಕರಣ ರಾಜನಿಷ್ಠೆಗಳಿಂದ ಪರಿಪೂರ್ಣರಾಗಿಯೂ ಆನಂದಚಿತ್ತರಾಗಿಯೂ ರಾಜಸೇವೆಯನ್ನು ಮಾಡುತ್ತಿದ್ದರೆಂಬಂತೆ ಅವರ ಮುಖಗಳು ಹೊಳೆಯುತ್ತಿದ್ದವು.

ಮಧ್ಯಾಹ್ನ ೧ ಹೊಡೆಯುವದರೊಳಗಾಗಿ ಎಲ್ಲರೂ ಶಾಲೆಗೆ ಬಂದರು. ಕಂಪೌಂಡದಲ್ಲಿ ಸಹ ತೆರವಾದ ಸ್ಥಳವಿದ್ದಿಲ್ಲ. ೪೦೦ರಕ್ಕಿಂತ ಹೆಚ್ಚು ಜನರು ಕೂಡಿದ್ದರೆಂದು ಹೇಳಬಹುದು. ಸರ್ವಾನುಮತದಿಂದ ಮು॥ ರಾ॥ ಬೆಳಗಾವಕರ ವೆಂಕಪ್ಪನಾಯಿಕರು ಅಧ್ಯಕ್ಷರಾದ ಬಳಿಕ ಸಭೆಯ ಉದ್ದೇಶವನ್ನೂ ಬಾದಶಹ, ಬಾದಶಾಹಿನಿಯವರ ಚರಿತ್ರೆಯನ್ನೂ ಹೇಳಿದೆನು. ತರುವಾಯ "ಇಂಗ್ಲೀಷ ಸರಕಾರದಿಂದ ಆದಲಾಭಗಳು" ಎಂಬ ನಿಬಂಧವನ್ನು ಓದಿ ಹೇಳಿದನಂತರ ಬಾದಶಾಹೀ ಸಂದೇಶವನ್ನು ಓದಿ ಹೇಳಿದೆನು. ಆ ಮೇಲೆ ಸಭಿಕರಿಂದ ರಚಿಸಲ್ಪಟ್ಟ ॥ಧನ್ಯನು ಧನ್ಯನು । ಜಗದೊಳು ಮಾನ್ಯನು।

ಚನ್ನಿಗ ನೃಪವರನು । ಶ್ರೀ ಜಾರ್ಜನು ॥ ಈ ಪದ್ಯವನ್ನು ವಿದ್ಯಾರ್ಥಿಗಳು ಬಹು ಸುಸ್ವರದಿಂದ ಹಾಡಿದ ನಂತರ ವೇ॥ ರಾ॥ ರಾ॥ ಪಂಡಿತ ನಾಯಿಂ ಆಚಾರ್ಯರವರು ಗೀರ್ವಾಣ ಭಾಷೆಯಿಂದ ಆಶೀರ್ವಾದ ಮಾಡಿದರು. ಕಡೆಗೆ ಅಧ್ಯಕ್ಷರ ಭಾಷಣವಾಯಿತು.

ಈ ಪ್ರಸಂಗದಲ್ಲಿ ಬಡವಿದ್ಯಾರ್ಥಿಗಳಿಗೆ ೧೩ ಪುಸ್ತಕಗಳೂ ೧೧ ಪಾಟಿಗಳೂ ಬಕ್ಷೀಸಾಗಿ ಅಧ್ಯಕ್ಷರ ಕೈಯಿಂದ ಕೊಡಲ್ಪಟ್ಟವು. ಹಾಜರ ಇದ್ದ ೧೪೧ ಹುಡುಗರಿಗೆ ಪದಕಗಳು ಕೊಡಲ್ಪಟ್ಟವು. ತರುವಾಯ ತಾಂಬೂಲಾದಿಗಳಿಂದ ಎಲ್ಲರನ್ನು ಸತ್ಕರಿಸಿ ಎಲ್ಲರಿಗೂ ಮಿಠಾಯಿ ಹಂಚಿದೆವು. ಇಷ್ಟಾಗುವದರೊಳಗೆ ೬॥ ಗಂಟೆಯಾಯಿತು. ಶಾಲೆಯ ಒಳಗೆ, ಹೊರಗೆ ಕಂಪೌಂಡಿನ ಗೋಡೆಗಳ ಮೇಲೆ ೫೦೦ ದೀಪಗಳ ಉತ್ಸವವು ನಡೆಯಿತು. ಬಂದ ಯಾವತ್ತರು ಕಣ್ಣುಂಬ ನೋಡಿ ಸಂತೋಷ ಪಟ್ಟರು. ಕೆಲವರು ಇಂಥ ಉತ್ಸವವನ್ನು ತಾವು ಎಂದೂ ಕಂಡಿದ್ದಿಲ್ಲವೆಂತಲೂ ನೇತ್ರಗಳು ಸಫಲವಾದವೆಂತಲೂ ಇಷ್ಟು ವೈಭವಶಾಲಿಗಳೂ ಪುಣ್ಯಶಾಲಿಗಳೂ ಆದ ಚಕ್ರವರ್ತಿ ಚಕ್ರವರ್ತಿನಿಯವರಿಗೆ ಸದಾ ಸೌಖ್ಯವಿರಲೆಂತಲೂ ಬೇಡಿ ಕೊಳ್ಳುತ್ತ ತಂತಮ್ಮ ಮನೆಗೆ ಹೊರಟು ಹೋದರು.

ಅದೇ ದಿವಸ ಮೆ॥ ರಾ॥ ರಾ॥ ವೆಂಕಪ್ಪನಾಯಿಕರು ಸುಮಾರು ೨೫೦ ಬಡ ಜನರಿಗೆ ಮೃಷ್ಟಾನ್ನ ಭೋಜನ ಮಾಡಿಸಿದರು.

ಅತ್ಯಂತವಿಧೇಯನಾದ,

೨೬-೧೨-೧೯೧೧. } G. M. DESAI.
ಮಾ. ಗುತ್ತಲ.

ಗು. ಮ. ರಾ. ಶಾಲಾಪತ್ರಕರ್ತರ ಸನ್ನಿಧಿಗೆ:—

ನಾ. ನ. ವಿ. ವಿ. ನಮ್ಮ ಊರಲ್ಲಿ ತಾ॥ ೧೨-೧೨-೧೧ ದಿವಸ ನಾವೆ ಭೌಮರಾದ ೫ನೆಯ ಜಾರ್ಜ ಬಾದಶಹರ ರಾಜ್ಯಾರೋಹಣಸಮಾರಂಭವು ಒಳ್ಳೇ ವಿಜೃಂಭಣೆಯಿಂದ ನೆರವೇರಿತು. ಅದರ ಸಂಕ್ಷಿಪ್ತ ವರ್ಣನೆಯನ್ನು ತಮ್ಮೊಡೆಗೆ ಕಳಿಸಿರುವೆನು. ಇದನ್ನು ತಮ್ಮ ಅಂದವಾದ ಶಾಲಾಪತ್ರಕದಲ್ಲಿ ಪ್ರಕಟಗೊಳಿಸಬೇಕೆಂದು ಬಯಸುತ್ತೇನೆ:—

ಪರಮಪೂಜ್ಯರಾದ ಪಂಚಮ ಜಾರ್ಜರ ರಾಜ್ಯಾರೋಹಣ ಸಮಾರಂಭವನ್ನು ಯಥಾಯೋಗ್ಯವಾಗಿ ಮಾಡಬೇಕೆಂಬ ಉದ್ದೇಶದಿಂದ ಇಲ್ಲಿಯ

ಲೋಕಪ್ರಿಯ ಹೆಡ್‌ಮಾಸ್ತರ ಮಿ. ಚಿಟಿಣೀಸ ಇವರೂ ಊರಕೆಲಸ ನೋಡುತ್ತಿರುವ ಗೌಡ ಶಾನಭೋಗರೂ ಕೂಡಿ ಊರೊಳಗಿನ ಪ್ರಮುಖ ಜನರ ಅನುಮತಿಯಿಂದ "ಉತ್ಸವಕಮಿಟಿ" ಎಂಬ ಒಂದು ಕಮಿಟಿಯನ್ನು ನವಂಬರ ತಿಂಗಳ ಆರಂಭದಲ್ಲಿ ನೇಮಿಸಿದರು. ಈ ಕಮಿಟಿಯವರು, ಜನರು ಸ್ವಸಂತೋಷದಿಂದ ಕೊಟ್ಟಷ್ಟು ವರ್ಗಣಿಯನ್ನು ವಸೂಲಮಾಡಿ, ವರ್ಗಣಿ ಬಂದಷ್ಟು ಹಣದ ಬಗ್ಗೆ ವರ್ಗಣೀದಾರರಿಗೆ ಮುದ್ರಿಸಿ ಹಂದ ಸಮೂನೆಯ ಬೇಲಿ ಪಾವತಿಯನ್ನು ಕೊಟ್ಟರು. ಈ ಬಗೆಯಾಗಿ ತೊಂದರೆ ಇಲ್ಲದೆ ಕಮಿಟಿಯು ಮುಖಾಂತರ ಹಣ ವಸೂಲಾಗಿ ಯಾವತ್ತು ಸಮಾರಂಭವು ಸಾಂಗವಾಯಿತು.

(೧) ಶಾಲಾಗೃಹ, ಚಾವಡಿ, ಊರೊಳಗಿನ ಎಲ್ಲ ದೇವಾಲಯಗಳು, ಬೀದಿಗಳು ಇವೆಲ್ಲ ಸ್ಥಳಗಳು ಧ್ವಜ, ಪತಾಕೆ, ತೋರಣ, ಕೃತ್ರಿಮ ದೀಪ್ತಿಗಿಲುಗಳು, ಕಮಾನುಗಳು ಇವುಗಳಿಂದ ಅಂದವಾಗಿ ಶೃಂಗರಿಸಲ್ಪಟ್ಟವು.

(೨) ಪತಾಕೆಗಳ ಮೇಲೆಯೂ ದೀಪ್ತಿಗಿಲು ಕಮಾನುಗಳ ಮೇಲೆಯೂ "ರಾಜಾಧಿರಾಜ ಪಂಚಮ ಜಾರ್ಜ ಮಹಾರಾಜ ಮತ್ತು ರಾಜರಾಜೇಶ್ವರೀ ಮಹಾರಾಜ್ಞೀ ಮೇರಿ ಇವರ ಜಯಜಯಕಾರವು ಇರಲಿ" ಎಂಬ ಅಕ್ಷರಗಳೂ ಇದೇ ಅರ್ಥದ ಬಾಲಬೋಧ ಅಕ್ಷರಗಳೂ ಬಂಗಾರದ ಬಣ್ಣದಿಂದ ಒಪ್ಪುವಂತೆ ತೆಗೆಯಲ್ಪಟ್ಟಿದ್ದವು.

(೩) ತಾ|| ೧೦-೧೨-೧೧ ದಿವಸ ಕೆಳಗೆ ಬರೆದಂತೆ ಊರೊಳಗೆಲ್ಲ ಡಂಗುರವು ಹೊಯಿಸಲ್ಪಟ್ಟಿತು. "ತಾ|| ೧೫-೧೨-೧೧ ಮಂಗಲವಾರ ದಿವಸವನ್ನು ಸಂವತ್ಸರ ಪ್ರತಿಪದೆ, ದಸರೆ, ಮುಂತಾದ ಹಬ್ಬಗಳಂತೆ ಮಂಗಲದಿವಸವೆಂದು ಎಣಿಸಿ ಎಲ್ಲರು ಮಂಗಲಸ್ನಾನಮಾಡಿ ಮಿಷ್ಟಾನ್ನ ಭೋಜನವನ್ನು ಮಾಡತಕ್ಕದ್ದು. ಊರೊಳಗಿನ ದೇವರಿಗೆ ನೈವೇದ್ಯ ಕೊಡತಕ್ಕದ್ದು; ಮತ್ತು ಅವೊತ್ತು ಬೆಳಗಿನ ೮ ಗಂಟೆಗೆ ಸರಿಯಾಗಿ ಇಲ್ಲಿಯ ಶಾಲೆಯೊಳಗೆ ಸಮಾರಂಭಕ್ಕಾಗಿ ಎಲ್ಲ ಸದ್ಗೃಹಸ್ಥರು ಬರತಕ್ಕದ್ದು."

(೪) ತಾ|| ೧೫-೧೨-೧೧ ದಿವಸ ಶಾಲೆಯ ವಿದ್ಯಾರ್ಥಿಗಳಿಂದ ಶರೀರ ಸಾಮರ್ಥ್ಯವನ್ನು ಬೆಳಿಸುವಂಥ ಆಟಗಳು ಆಡಲ್ಪಟ್ಟವು, ಕಸರತ್ತು ನಡೆಯಲ್ಪಟ್ಟಿತು.

(*) ತಾ|| ೧೩-೧೨-೧೧ ದಿವಸ ೮ ಗಂಟೆಗೆ ಸರಿಯಾಗಿ ಶಾಲೆಯಲ್ಲಿ ಸಭೆಯಾಯಿತು. ಊರೊಳಗಿನ ಎಲ್ಲ ಪ್ರಮುಖ ಜನರೂ ಜೀರೆ ಸದ್ಗೃಹಸ್ಥರೂ ಸಭೆಗೆ ಬಂದಿದ್ದರು. ಜನರಿಂದ ಶಾಲಾಗೃಹವೂ ಹೊರಗಿನ ಪಟಾಂಗಣವೂ ತುಂಬಿ ಸ್ಥಳವು ಸಾಲದಂತೆ ಆಗಿತ್ತು.

ಆರಂಭಕ್ಕೆ ಸಭೆಯ ಉದ್ದೇಶದ ಬಗ್ಗೆ ಮಿ. ಚಿಟಣೀಸಮಾಸ್ತರರೆ ಇವರು ಪ್ರಾಸ್ತಾವಿಕ ಭಾಷಣವನ್ನು ಮಾಡಿ, ವಯೋವೃದ್ಧರೂ ಜ್ಞಾನವೃದ್ಧರೂ ವ್ಯವಹಾರ ಕುಶಲರೂ ಈಗ ಕೇವಲ ಪಾರಮಾರ್ಥಿಕತತ್ವ ವಿಚಾರದಲ್ಲಿಯೇ ಕಾಲಕಳೆಯುತ್ತಿರುವವರೂ ಆದ ಮ. ರಾ. ರಾ. ಅಪ್ಪಾ ಮಾವಾ ಕುಲಕರ್ಣಿ ಇವರು ಸಭೆಯ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಬೇಕೆಂದು ಸೂಚನೆ ಮಾಡಿದರು. ಅದಕ್ಕೆ ಮ. ರಾ. ರಘುನಾಥರಾವ ನಾಯಿಕ ಮತ್ತು ಹುಕ್ಕೇರಿ ಅನಂತರಾಯರು ಅನುಮೋದನವನ್ನು ಕೊಡಲು, ಮ. ರಾ. ರಾ. ಅಪ್ಪಾ ಮಾವಾ ಇವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಅದರಿಂದ ಎಲ್ಲರಿಗೂ ಆನಂದವಾಗಿ ಕರತಾಡನ ಧ್ವನಿಯು ದುಮುದುಮಿಸಿತು. ರಾಜದಂಪತಿಗಳ ಭಾವಚಿತ್ರದ ಪಟವು ಅಧ್ಯಕ್ಷರಿಂದ ಸಿಂಹಾಸನದ ಮೇಲೆ ಕುಳ್ಳಿಸಲ್ಪಟ್ಟು ಅದಕ್ಕೆ ಪೂಮಾಲೆಯು ಹಾಕಲ್ಪಟ್ಟತು. ಇದೇ ಕಾಲಕ್ಕೆ ಸನ್ಮಾನಾರ್ಥವಾಗಿ ೧೦೧ ಬಾರಗಳು ತೆಗೆಯಲ್ಪಟ್ಟವು. ವಿದ್ಯಾರ್ಥಿಗಳು ಬಾಡಶಹರ ಕಲ್ಯಾಣದ ಬಗ್ಗೆ ಸುಸ್ವರದಿಂದ ದೇವತಾಸ್ತೋತ್ರವನ್ನು ಮಾಡಿದರು. ರಾಷ್ಟ್ರಗೀತವು ಆನ್ನಲ್ಪಟ್ಟತು. ಆಗ ಎಲ್ಲ ಜನರು ಎದ್ದು ನಿಂತಿದ್ದರು. ಹೆಡ್‌ಮಾಸ್ತರರ ಅಪ್ಪಣೆಯ ಮೇರೆಗೆ ಅ|| ವಿ. ಶಂಕರರಾಯರು ಬ್ರಿಟಿಶ ರಾಜ್ಯದಿಂದ ಹಿಂದುಸ್ತಾನಕ್ಕೆ ಆದ ಲಾಭಗಳೂ ಬಾಡಶಹರ ಚರಿತ್ರವೂ ಎಂಬ ನಿಬಂಧವನ್ನು ಜನರ ಮನಸಿನ ಮೇಲೆ ಪರಿಣಾಮವಾಗುವಂತೆ ಓದಿದರು. ಸಮಾರಂಭದ ಸಲುವಾಗಿಯೇ ತಯಾರಿಸಿದ ಸಂಸ್ಕೃತ, ಮರಾಠಿ, ಕನ್ನಡ ಶ್ಲೋಕಗಳನ್ನೂ ಪದ್ಯಗಳನ್ನೂ ವಿ. ಗೋಪಾಳ ಅಣ್ಣಾಜಿ ಎಂಬ ಉಪಶಿಕ್ಷಕರು ಸುಸ್ವರದಿಂದ ಅಂದರು. ವೈ. ಶಾ. ಸ. ವಿಷ್ಣುಶಾಸ್ತ್ರಿ ಸಿರಗಾಂವಕರ, ಮತ್ತು ನಾನಾಶಾಸ್ತ್ರಿಗಳತಗೆ ಇವರು ಸಂಸ್ಕೃತ ನಿಬಂಧವನ್ನು ಓದಿದರು. ಊರ ಕೆಲಸನೋಡುವ ಗೌಡರು ೧೨ ಗಂಟೆಗೆ ಚಕ್ರವರ್ತಿಗಳ ಜಾಹೀರನಾಮೆಯನ್ನು ಓದಿದರು. ಈಗ್ಗೆ ಪುನಃ ೧೦೧ ಬಾರಗಳು ತೆಗೆಯಲ್ಪಟ್ಟವು, ಮಹಾ

ರಾಜ ವಂಶವೆ ಜಾರ್ಜರ ಹೆಸರಿನಿಂದಲೂ ಮಹಾರಾಜ್ಞೀ ಮೇರಿಯವರ ಹೆಸರಿನಿಂದಲೂ ತ್ರಿವಾರ ಜಯಜಯಕಾರವಾಯಿತು. ಎಲ್ಲ ಬಗೆಯ ವಾದ್ಯಗಳ ಧ್ವನಿಯು ದಿಙ್ಮಂಡಲದ ತುಂಬ ಹಬ್ಬಿತ್ತು. ಅಧ್ಯಕ್ಷರು, ಪ್ರತಿಯೊಬ್ಬ ವಿದ್ಯಾರ್ಥಿಗೆ ರಾಜದಂಪತಿಗಳ ಮುಖಮುದ್ರಾಂಕಿತವಾದ ಪದಕವನ್ನೂ, ರೇಸಿಮೆಯ ಸುಳುವುಗಳಿಂದ ಸುಶೋಭಿತವಾದ ಮುಖಮಾಲೆಯ ಒಂದೇ ಮಾದಿರಿಯ ಒಂದೊಂದು ಟೊಪ್ಪಿಗೆಯನ್ನೂ, ಅರ್ಧ ಅರ್ಧ ಸೇರಿನ ಮಿಠಾಯಿಯ ಒಂದೊಂದು ಪಟ್ಣವನ್ನೂ, ಒಂದೊಂದು ಕದಳೀ ಫಲವನ್ನೂ ಆ ದಿವಸ ಸಾಲೆಯೊಳಗೆ ಹಾಜರಿದ್ದ ೧೧೫ ಹುಡುಗರಿಗೆ ಉಚಿತವಾಗಿ ಕೊಟ್ಟರು. ನೆರೆದ ಎಲ್ಲ ಜನರಿಗೂ ಮಿಠಾಯಿಯು ಹಂಚಲ್ಪಟ್ಟಿತು. ಆ ಮೇಲೆ ಕವಿಗಾಟಿಯ ಖಜೀನದಾರರು ಸಮಾರಂಭದ ವರ್ಗಣಿಯ ಜಮಾ ಖರ್ಚಿನ ಟಪ್ಪಣಿಯನ್ನು ಓದಿದರು. ತರುವಾಯ ವೀಳೆ, ಹಾರತುರಾಯಿಗಳು, ಅತ್ತರಗುಲಾಬಿ, ಇವೇ ಮೊದಲಾದ ಸಭೆಯ ಸಿಷ್ಟಾಚಾರಗಳು ಯಥಾಪ್ರಕಾರವಾಗಿ ಆದವು. ಆಮೇಲೆ ಅಧ್ಯಕ್ಷರು, ಹೆಡ್‌ಮಾಸ್ತರರೂ ಗ್ರಾಮಸ್ತರೂ ಕವಿಗಾಟಿಯವರೂ ಶ್ರಮಪಟ್ಟು ಸಮಾರಂಭವನ್ನು ಬಹು ಉಲ್ಲಾಸದಿಂದ ಮಾಡಿದ್ದು ಅವರಿಗೆ ಬಹು ಭೂಷಣದ ಸಂಗತಿಯಾಗಿದೆ; ಪ್ರತಿಯೊಬ್ಬ ನಾಗರಿಕನು ರಾಜನಿಷ್ಠನಾಗಿರುವದು ಹಿತಕರವಾದದ್ದು; ಎಂಬ ಆಶಯದ ಭಾಷಣವನ್ನು ಮಾಡಿದರು. ತರುವಾಯ ಹೆಡ್‌ಮಾಸ್ತರ ಚಿಟಣೀಸರು ಅಧ್ಯಕ್ಷರ ಆಭಾರವನ್ನೂ ಸಭೆಗೆ ಬಂದ ಸದ್ಗೃಹಸ್ಥರ ಆಭಾರವನ್ನೂ ಮನ್ನಿಸಿ, ಈಗ ಸಭೆಗೆ ಬಂದಂತೆಯೇ ಮಧ್ಯಾಹ್ನದ ೪ ಗಂಟೆಗೆ ರಾಜಾಧಿರಾಜರ ಮೆರವಣಿಗೆಯ ಸಮಾರಂಭಕ್ಕಾಗಿ ಎಲ್ಲರೂ ಬರಬೇಕೆಂದು ಹೇಳಿದ ತರುವಾಯ ಸಭೆಯ ಕಾರ್ಯವು ಮುಗಿಯಿತು.

ಮಧ್ಯಾಹ್ನದ ೧೫ಯಿಂದ ಸಂಜೆಯ ೬ರ ವರೆಗೆ ಬಡಬಗ್ಗರಿಗಾಗಿ ಮಾಡಿಸಿದ ಹುಗ್ಗಿಯ ಊಟವು ನಡೆದಿತ್ತು. ಕುರುಬರೂ, ಒಡ್ಡರೂ ಕೊರವರೂ, ಹೊಲೆಯರೂ, ಮಾದಿಗರೂ, ಈ ಹೊತ್ತೇ ಬಂದ ಕಾಡು ಕಾಡು ತಿರುಗುವ ಕಗ್ಗರಾದ ೨೦೨೫೦೦ ಜನ ಗೊಲ್ಲರೂ ಇವರೆಲ್ಲ ಈ ಬರಗಾಲದಲ್ಲಿ ಹೊಟ್ಟೆತುಂಬ ಹುಗ್ಗಿಯನ್ನು ಉಂಡು ತೃಪ್ತರಾಗಿ ಬಾದಶಹರಿಗೆ ಹರಕೆಯನ್ನಿತ್ತು ಆನಂದದಿಂದ ಹೋಗುತ್ತಿರುವದನ್ನು ಕಂಡು ಹರ್ಷವು

ಉಕ್ಕೇರಿತು. ನಾಲ್ಕು ಗಂಟೆಗೆ ಸರಿಯಾಗಿ ಸುಗ್ರಾಸ ಭೋಜನ ಮಾಡಿ ಆನಂದದಿಂದ ಎಲ್ಲರೂ ಶಾಲೆಯ ಹತ್ತರ ಮೆರವಣಿಗೆಗಾಗಿ ನೆರೆದರು. ಕೂಡಲೆ ರಾಜದಂಪತಿಗಳ ಭಾವ ಚಿತ್ರದ ಪಟವನ್ನು ಶೃಂಗರಿಸಿದ ರಥದಲ್ಲಿಟ್ಟು ಮೆರವಣಿಗೆ ಹೊರಡಿಸಿತು. ತಾಸೆ, ಮಫೆ, ಬಜಂತ್ರಿ, ಕಹಳೆ, ನಗಾರಿ, ಕರಡಿ, ಡೊಳ್ಳು, ರಣಹಲಿಗೆ ಮುಂತಾದ ಎಲ್ಲ ಬಗೆಯ ವಾದ್ಯಗಳ ಗರ್ಜನೆಯಿಂದುಂಟಾದ ಪ್ರತಿಧ್ವನಿಯು, ದಿಕ್ಪಾಲಕರು ಮಹಾಪ್ರಭುವನ್ನು ಹೆರಸುವಂತೆ ಕಂಗೊಳಿಸಿತು. ತಮಗೆ ಮುಂಜಾನೆ ಇನಾಮು ದೊರೆತ ಬಂದೇ ವಾದಿರಿಯ ಟೊಪ್ಪಿಗೆಗಳನ್ನು ಪದಕದೊಂದಿಗೆ ಧರಿಸಿ ಮುಂದೆ ನಡೆಯುವ ವಿದ್ಯಾರ್ಥಿಗಳ ಸಾಲು ಚಿಕ್ಕ ಪಟಾಲವು ಸಾಗಿದಂತೆ ತೋರಿತು. ಶಸ್ತ್ರಪಾಣಿಗಳಾದ ಪೊಲೀಕಾರರೂ ಅವರ ಹಿಂದೆ ಗೌಡ ಶಾನಭೋಗರೂ ಪ್ರಮುಖ ನಾಗರಿಕರೂ ನಡೆದಿದ್ದರು. ಸಾವಿರಾರು ಜನರೊಂದಿಗೆ ನಡೆದ ಈ ಮೆರವಣಿಗೆಯು ಊರ ಪ್ರದಕ್ಷಿಣೆಯನ್ನು ಮುಖ್ಯ ಮಾರ್ಗದಿಂದ ಮಾಡಿ ರಾತ್ರಿಯ ೮ ಗಂಟೆಗೆ ತಿರುಗಿ ಶಾಲೆಯ ಹತ್ತರ ಬಂತು. ಸೂರ್ಯಾಸ್ತದ ನಂತರ ಮದ್ದು ಹಾರಿಸಲ್ಪಟ್ಟಿತು. ಮಹಾರಾಜರ ಭಾವಪಟವನ್ನು ಶಾಲೆಯೊಳಗಿನ ಸಿಂಹಾಸನದ ಮೇಲೆ ಇರಿಸಿ, ಅವರ ಹೆಸರಿನಿಂದ ತ್ರಿವಾರ ಜಯ ಜಯಕಾರ ಗರ್ಜನೆಯಾಗಿ ಮೆರವಣಿಗೆಯ ಸಮಾರಂಭವು ಮುಗಿಯಿತು. ಸಾಯಂಕಾಲದಲ್ಲಿ ಶಾಲಾಗೃಹ, ಚಾವಡಿ, ಎಲ್ಲ ದೇವಾಲಯಗಳು, ಮುಖ್ಯ ಮುಖ್ಯ ಬೀದಿಗಳು, ಹೆಬ್ಬಾಗಿಲುಗಳು ಈ ಎಲ್ಲ ಸ್ಥಳಗಳಲ್ಲಿ ದೀಪೋತ್ಸವವು ಮಾಡಲ್ಪಟ್ಟಿತು. ಬೆಳಗ್ಗೆ ಗ್ರಾಮದ ಮುಖ್ಯದೇವರಾದ ಶ್ರೀ ಮಾರುತಿಗೆ ರುದ್ರಾಭಿಷೇಕವು ೧೧ ಜನ ಬ್ರಾಹ್ಮಣರಿಂದ ಮಾಡಿಸಲ್ಪಟ್ಟಿತು. ಇರುಳು ಇಲ್ಲಿಯವರೇ ತಯಾರಿಸಿದ ನಾಟಕದ ಪ್ರಯೋಗವು ಆನಂದ ಪ್ರದರ್ಶನಾರ್ಥವಾಗಿ ಮಾಡಲ್ಪಟ್ಟಿತು.

ಈ ಮೇರೆಗೆ ಈಶಕೃಪೆಯಿಂದ ಪಂಚಮ ಜಾರ್ಜ ಚಕ್ರವರ್ತಿಗಳ ರಾಜ್ಯಾರೋಹಣ ಸಮಾರಂಭವು ಬಹು ಸಡಗರದಿಂದ ಸಾಂಗವಾಯಿತೆಂದು ಬಹು ಆನಂದದಿಂದ ತಿಳಿಸುತ್ತೇನೆ.

ತಮ್ಮ ವಿಧೇಯ
ಆಬಾಜೀ ನೀಲಕಂಠ ನಾಯಿಕ,
ಖಜೀನದಾರ ಉತ್ಸವ ಕಮಿಟಿ ಪ. ಜಾ.

ಮು. ಗಳತಗೆ.
ತಾ|| ಚಿಕ್ಕೋಡಿ.
೧೫ - ೧೨ - ೧೧.

ಮ. ರಾ. ರಾ. ಕನ್ನಡ ಶಾಲಾಪತ್ರಿಕೆಯ ಎಡಿಟರ ಬೊರೆಗೌಳವರ ಸನ್ನಿಧಾನಕ್ಕೆ—ಶ. ಸಾ. ನಮಸ್ಕಾರಗಳು. ವಿನಂತಿ ವಿಶೇಷ. ಕೆಳಗಿನ ರಾಜಗೀತವನ್ನು ತಮ್ಮ ಜಗನ್ಮಾನ್ಯವಾದ ಸುಂದರ ಪತ್ರಿಕೆಯಲ್ಲಿ ಮುದ್ರಿಸುವಿರೆಂದು ನೆನಿಸುತ್ತೇನೆ.

(ಧಾಟಿ-"ಸುಂದರಮುಖಿ ತುಂದಿಲತನು" ಎಂಬ ಆರತಿಯಂತೆ.)

ಜಯ ಪಂಚಮ ಜಾರ್ಜ ನೃಪತಿ ವಿಜಯಿ ನರವರಾ।
ಜಯ ಭರತಾಂಗ್ಲ ದೇಶಪತಿ, ಮದನಸುಂದರಾ ॥ಪಲ್ಲವಿ॥

ಸಿದ್ಧವಿಕ್ಕಿ ನಿನ್ನನಗಲದೆಂದಿಗಿಂದಿರಾ।
ಋದ್ಧಿ ಸಿದ್ಧಿ ಪಿಡಿದುನಿಲ್ಲಿ ಛತ್ರಚಾಮರಾ।
ಶುದ್ಧ ನ್ಯಾಯನೀತಿ ಬದ್ಧನಿರ್ಕೆ ನೃಪವರಾ।
॥ಏರು॥ ಬುದ್ಧಿ, ಪುಷ್ಟಿ, ತುಷ್ಟಿ; ಶಾಂತಿಮಯಂ, ಶತ್ರುಲಯಂ,
ನಿರ್ಭಯಮುಂ ಕೊಡಿವಗೀಶ್ವರಾ ॥ ೧ ॥

ಬಿದಿಗೆ ಚಂದ್ರನಂತೆ ಬಳಿಗೆ ನಿಮ್ಮ ವೈಭವಂ।
ಪುದಿದುನಿಲ್ಲಿ ಪೃಥ್ವಿಯೊಳಗೆ ಕೀರ್ತನಾರವಂ।
ಒದಗಲ್ಕೈಸೆ ಪ್ರಜೆಗೆ ಸತತ ಸೌಖ್ಯಾನುಭವಂ।
॥ಏರು॥ ಸದಯಾ, ಧೀರಾ, ಮೇರೀ-ರಾಜ್ಞಿಯರಂ, ಗುಣಯುತರಂ,
ಜನಹಿತರಂ, ಕಾವುದೀಶ್ವರಾ ॥ ೨ ॥

ನಿಮ್ಮ ದರ್ಪ ಮಾತ್ರದಿಂಬೆ ಶತ್ರುವರ್ಣಗಲಿ।
ಒಮ್ಮನಸ್ಸು ಶಾಂತಿಯೊಂದಿ ದೇಶಮೆರೆಯಲಿ।
ಗಮ್ಮನೆಲ್ಲ ಪ್ರಜರು ರಾಜನಿಷ್ಠರಾಗಲಿ।
॥ಏರು॥ ಸುಮತಿ, ಸ್ಫೂರ್ತಿ, ಕೀರ್ತಿ; ವಿಮಲತರಂ, ಘನಸುಖರಂ,
ಭೇದಹರಂ, ಕರುಣಿಸೇಶ್ವರಾ ॥ ೩ ॥

ವಿಜಯಶಾಲಿ ಪುತ್ರಪೌತ್ರರಿರ್ಪುದನುದಿನಂ।
ಭಜಿಪುದವರನತುಲ ಶಕ್ತಿಗೊಲಿದು ರಿಪುಗಣಂ।
ಭುಜಬಲಯುತ ಧರ್ಮನಿರತ ಸಾರ್ವಭೌಮನಂ।
॥ಏರು॥ ಭುಜಗಾ-ಭರಣಾ, ಕರುಣಾ-ಪಾಂಗದೊಳಂ, ಸಾರಂಗ
ದೊಳಂ, ನಿರುತದೊಳಂ, ಪರಸು ಶಂಕರಾ ॥೪॥